# ವೀರ ಜುಂಜಪ್ಪ
## ಸಮಗ್ರ ಕಥಾವಳಿ

ಸಂ. ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ

**ಗಡಿನಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ ಪ್ರತಿಷ್ಠಾನ**

ಎಸ್.ಕೆ. ಸಿದ್ದಣ್ಣ ಕಟ್ಟಡ, ಕಾಳಿದಾಸನಗರ,

ಸಿರಾ, ತುಮಕೂರು ಜಿಲ್ಲೆ

Veera Junjappa : Samagra Kathavali - Edited by Dr.Chikkanna Yennekatte, Professor and Ph.D Guide, GFGC, Sira, Tumkur Dits. Published by Gadinada Janapada Samparkabhivruddhi Prathistana, Kalidasanagara, Sira.

ಮೊದಲ ಮುದ್ರಣ: 2011

ಪುಟ : 243 + xxv

ಬೆಲೆ : ರೂ.150-00

ಹಕ್ಕುಗಳು : ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ

ಪ್ರಕಾಶಕರು : ದಶಮಾನೋತ್ಸವ ಸಮಿತಿ
ಗಡಿನಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ ಪ್ರತಿಷ್ಠಾನ
ಎಸ್.ಕೆ.ಸಿದ್ದಣ್ಣ ಬಿಲ್ಡಿಂಗ್, ಕಾಳಿದಾಸನಗರ
ಸಿರಾ-572137, ತುಮಕೂರು ಜಿಲ್ಲೆ
ದೂ.9945975509, 958135 276243

# ಜುಂಜಪ್ಪನ ಸೊಗಸಾದ ಕಾವ್ಯ ಕಥನ

ಪಶು ಸಂಸ್ಕೃತಿಯ ಮೂಲದಿಂದ ಬಂದ ಗೊಲ್ಲ ಸಮುದಾಯ ತಮ್ಮ ಜನಾಂಗದ ಹುಟ್ಟು, ವಿಕಾಸವನ್ನು ಹಸುವಿನೊಂದಿಗೆ ಗುರುತಿಸೊಳ್ಳಲಾಗುತ್ತಿದೆ. ಗೋಪಮ್ಮ ಎಂಬ ಹಸುವಿಗೆ ಸೂರ್ಯದೇವನ ಕಿರಣ ತಾಕಿ, ಹೊತ್ತು ಆಕಾಶದಲ್ಲಿ ಭೂಮಿಗೆ ಒಂದು ಮಾರು ಅಳತೆಯ ದೂರದಲ್ಲಿ ಇರುವಾಗ ಹುಟ್ಟಿದ ಆ ಮಗುವಿಗೆ 'ಮಾರುಮುತ್ತ' ಎಂದು ಕರೆಯಲಾಯಿತು. ಈ ಪರಂಪರೆಯಲ್ಲಿ ಬಂದವರೇ ಗೊಲ್ಲರು. ಮಾರುಮುತ್ತನ ಕುಲದವರೇ ಮಾರನೋರ ಗೊಲ್ಲರು. ನಂತರ ಇವರೇ ಕರಡಿಗೊಲ್ಲರೆಂದೂ ಕರೆದುಕೊಳ್ಳಲಾಯಿತು. ಜುಂಜಪ್ಪ ಈ ಕುಲದ ಸರ್ವಶ್ರೇಷ್ಠ ನಾಯಕ. ತನ್ನ ಅಪೂರ್ವ ಶೀಲ-ಶೌಚಗಳಿಂದ, ತ್ಯಾಗ-ವೀರತ್ವದಿಂದ ದೈವತ್ವಕ್ಕೆ ಏರಿದವನು. ಕಾಡುಗೊಲ್ಲರ ಬದುಕಿನ ಅಪ್ಪಟ ರೂಪವಾಗಿ ಬಾಳಿದವನು. ಸಾಮಾನ್ಯತ್ವದಿಂದ ಅಸಾಮಾನ್ಯತ್ವಕ್ಕೆ ಏರಿದವನು.

ಜುಂಜಪ್ಪನದು ಮೂರು ತಲೆಮಾರುಗಳ ಮೌಖಿಕ ಪರಂಪರೆಯ ಸುದೀರ್ಘ ಕಥನ. ಜುಂಜಪ್ಪನ ತಾತ, ದೇವರ ದೈಮಾರ ಕೊಂಕಿ ಜರಿಮಲೆ ಸೀಮೆಯ ಚಿಕ್ಕದೇವರಹಟ್ಟಿಯವರು. ಈ ಕೊಂಕಿ ಜರಮಲೆ ಈಗಿನ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಒಂದು ಗ್ರಾಮ. ಪಶುಪಾಲನಾ ಸಂಸ್ಕೃತಿಯ ಕಾಡುಗೊಲ್ಲರು ಕಾಲದ ಸ್ಥಿತ್ಯಂತರದಲ್ಲಿ ಭಾರತದ ಹಲವು ಭಾಗಗಳಲ್ಲಿ ಬಾಳಿದವರು. ರಾಜ್ಯಭಾರವನ್ನು ಮಾಡಿದ್ದಾರೆ. ಕರ್ನಾಟಕದ ಬಳ್ಳಾರಿ, ಚಿತ್ರದುರ್ಗ, ತುಮಕೂರು, ಮಂಡ್ಯ, ಹಾಸನ ಇಲ್ಲೆಲ್ಲಾ ದನಗಳನ್ನು ಮೇಯಿಸಿದ ಜುಂಜಪ್ಪ ಚೇಳೂರು, ಸಿರಾ, ಸೊಂಡೂರು ಪ್ರಾಂತ್ಯಗಳನ್ನು ಆಳ್ವಿಕೆ ಮಾಡಿದ ವಿವರ ಜುಂಜಪ್ಪನ ಕಥೆಯಲ್ಲಿ ಪ್ರಕಟವಾಗುತ್ತದೆ. ಇಷ್ಟಾದರೂ ತಮ್ಮದಲ್ಲದ ಸ್ವತ್ತನ್ನು ಇಷ್ಟಪಡದ ಜುಂಜಪ್ಪ ಹೆಚ್ಚು ಹೆಚ್ಚಿದವರ ಸೊಕ್ಕು ಮುರಿದು ಅವರವರ ನೆಲವನ್ನು ಅವರಿಗೆ ನೀಡಿ ಸಾತ್ವಿಕತನ ಮೆರೆದವನು. ಪರನಾರಿ ಸೋದರತ್ವ ಮಾತ್ರವಲ್ಲ, ಗಿಡ-ಮರ, ಪಕ್ಷಿ-ಪ್ರಾಣಿಗಳಿಗೂ ಕೇಡುಬಯಸದ ಜುಂಜಪ್ಪನ ಪರಂಪರೆ ಅಪ್ರತಿಮ ಮಾನವತಾವಾದಕ್ಕೆ ಹೆಸರಾದರು. ಶಿವನ ಅಪರಾವತಾರ ರೂಪವಾದ ಜುಂಜಪ್ಪ ಹಾವು, ವಿಷ ಜಂತುಗಳೊಂದಿಗೆ ಒಡನಾಟ. ನಾಗಗಳೊಂದಿಗಿನ ಅವಿನಾಭಾವ ಸಂಬಂಧ ಹೊಂದಿರುವ ಜುಂಜಪ್ಪನನ್ನು ಇಂದಿಗೂ ನಾಗರಹಾವಿನ ರೂಪದಲ್ಲಿಯೇ ಆರಾಧಿಸಲಾಗುತ್ತಿದೆ. ಹಾವು ಕಚ್ಚುವುದಿಲ್ಲ, ಕೇಡಿಗಲ್ಲದೆ ಕಚ್ಚಿದರೂ ವಿಷವಿಲ್ಲ. ಹಾಗಾಗಿ ಗೊಲ್ಲರನ್ನು ನಾಗಕುಲದವರೊಂದಿಗೂ ಹೋಲಿಸುವುದುಂಟು.

ಜುಂಜಪ್ಪನ ಕಥೆಯನ್ನು ಪದ್ಯದಲ್ಲಿ ಗಣೆಯ ಮೇಲೆ ಹಾಡುವುದು ರೂಢಿ. ಹಾಗಾಗಿಯೇ

ಇದನ್ನು ಗಣೆಯ ಕಾವ್ಯ ಎಂದೂ ಕರೆಯಲಾಗುವುದು. ಜುಂಜಪ್ಪನ ಕಾವ್ಯವನ್ನು ಕಥೆಯ ರೂಪದಲ್ಲೂ ಹೇಳುತ್ತಾರೆ. ಹಾಡುಗಾರರು, ಕಥೆ ಹೇಳುವವರು ಇದನ್ನು ಜುಂಜಪ್ಪನ ಕಥೆ ಎಂತಲೇ ಕರೆಯುತ್ತಾರೆ. ಇಂಥ ಜುಂಜಪ್ಪನ ಕಥೆಯನ್ನು ಕಥಾ ರೂಪದಲ್ಲಿಯೇ ಗದ್ಯದಲ್ಲಿ ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ ಸೆರೆಹಿಡಿದಿದ್ದಾರೆ. ಮೂಲ ಕಲಾವಿದರಿಂದಲೇ ಕಥೆಯನ್ನು ಸಂಗ್ರಹಿಸಿ, ಅದೇ ನೆಲಮೂಲ, ಕುಲಮೂಲ ಭಾಷೆಯಲ್ಲಿ ಸಂಗ್ರಹಿಸಿರುವುದರಿಂದ ಜುಂಜಪ್ಪನ ಕಥೆಗೆ ವಿಸ್ತೃತ ರೂಪ ಬಂದಿದೆ. ಜುಂಜಪ್ಪನ ಕಾರ್ಯಕ್ಷೇತ್ರ ದೊಡ್ಡದು. ಹೀಗಾಗಿ ಜುಂಜಪ್ಪನ  ಬಗೆಗೆ ಕಥೆ ಹೇಳುವ, ಕಾವ್ಯ ಹಾಡುವವರು ತಮ್ಮದೇ ಆದ ಪ್ರಾದೇಶಿಕ ವಿವರಗಳೊಂದಿಗೆ ಕಥೆ ಮಾಡುತ್ತಾರೆ. ಇದನ್ನು ಉತ್ತರದ ಸಂಪ್ರದಾಯ, ದಕ್ಷಿಣದ ಸಂಪ್ರದಾಯ ಎಂದು ವಿದ್ವಾಂಸರು ಗುರುತಿಸಿದ್ದಾರೆ. ಡಾ॥ ಚಿಕ್ಕಣ್ಣ ಈ ಎರಡೂ ಪರಂಪರೆಯವರನ್ನು ಒಟ್ಟುಗೂಡಿಸಿ, ಈ ಎರಡೂ ಭಾಗದ ಕಲಾವಿದರಿಂದ ಕಥೆ ಸಂಗ್ರಹಿ ಸಿರುವುದು ಈ ಗ್ರಂಥದ ವಿಶೇಷ. ಹಾಗಾಗಿ ಈ ಗ್ರಂಥಕ್ಕೆ ಪ್ರಾದೇಶಿಕತೆ ಮೀರಿದ ವ್ಯಾಪ್ತಿ ಪ್ರಾಪ್ತವಾಗಿದೆ. ಈ ಮೂಲಕ ಜುಂಜಪ್ಪನ ದೈವತ್ವ, ಸಾಹಸ, ಸಾತ್ವಿಕ ಪವಾಡ, ರಾಜ್ಯಭಾರ ಮತ್ತು ಆತನ ಬಸವ ಬಡಮೈಲನ ಸಾಹಸ ಈ ಎಲ್ಲವನ್ನು ಸುಂದರವಾಗಿ ವಿವರಿಸಲಾಗಿದೆ. ಈ ಮೂಲಕ ಜುಂಜಪ್ಪನ ಜಾತ್ಯಾತೀತ ಮನೋಭಾವ, ಭೂ ಕಬಳಿಕೆಯ ವಿರೋಧಿ ನೆಲೆಗಳನ್ನು ಆಕರ್ಷಕವಾಗಿ ವರ್ಣಿಸಿದೆ. ಈ ಮೂಲಕ ಬುಡಕಟ್ಟು ಕುರಿತ ಸಂಶೋಧಕರಿಗೆ ಜುಂಜಪ್ಪನ ಅಧ್ಯಯನಕಾರರಿಗೆ ಹೊಸ ಆಕರವನ್ನು ಒದಗಿಸಿದ ಶ್ರೇಯಸ್ಸು ಈ ಗ್ರಂಥಕ್ಕಿದೆ.

ಸಿರಾ ತಾಲ್ಲೂಕಿನ ಕಳುವೋರಹಳ್ಳಿ ಜುಂಜಪ್ಪನ ತಳಮನೆ. ಈತನ ಸಮಾಧಿ ಸ್ಥಳವೂ ಇಲ್ಲಿದೆ. ಆದರೂ ತರೀಕೆರೆ ತಾಲ್ಲೂಕು ಬಂಕನಕಟ್ಟೆ, ಹರಪ್ಪನಹಳ್ಳಿ, ಸತ್ತೂರು, ಕೂಡ್ಲಿಗಿಯ ಜರಿಮಲೆ, ತೋರಣಘಟ್ಟ, ಗುಬ್ಬಿ ತಾಲ್ಲೂಕಿನ ಹಾಗಲವಾಡಿ ಇಲ್ಲೆಲ್ಲಾ ವಿಶೇಷ ಅನ್ನುವಂಥ ಜುಂಜಪ್ಪನ ದೇವಾಲಯಗಳಿವೆ. ಜಾತ್ರೆ, ಉತ್ಸವಗಳು ಬೃಹತ್ ಪ್ರಮಾಣದಲ್ಲಿ ನಡೆಯುತ್ತವೆ. ಇಲ್ಲೆಲ್ಲಾ ಜುಂಜಪ್ಪನ ಕಥೆ ಹೇಳುವ ಪರಿಪಾಠ ಉಂಟು. ಇಂಥವರಿಗೆಲ್ಲಾ ಸರಳ ಗದ್ಯ ಮಾದರಿಯ ಈ ಪುಸ್ತಕ, ಪ್ರಯೋಜನವಾಗುತ್ತದೆ. ಇಂಥದೊಂದು ಅತ್ಯುತ್ತಮ ಕೆಲಸ ಮಾಡಿರುವ ಲೇಖಕ ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ ಅವರನ್ನು ಅಭಿನಂದಿಸುತ್ತೇನೆ.

03.01.2012 **ಶ್ರೀ ಶ್ರೀ ಶ್ರೀ ಕೃಷ್ಣ ಯಾದವಾನಂದ ಸ್ವಾಮಿ**
ಚಿತ್ರದುರ್ಗ ಯಾದವ ಮಹಾಸಂಸ್ಥಾನ ಮಠ, ಚಿತ್ರದುರ್ಗ

# ಸಿರಾ ಸೀಮೆಯ ಸಂಸ್ಕೃತಿಯ ದೀಪ

ಸಿರಾ ಸೀಮೆಯ ಸಾಂಸ್ಕೃತಿಕ, ಸಾಹಿತ್ಯಿಕ, ಇತಿಹಾಸ ಇವುಗಳಿಗೆ ವರ್ತಮಾನದ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿರುವ ಗಡಿನಾಡ ಜಾನಪದ ಸಂಪರ್ಕಾಧ್ಯಯನ ಕೇಂದ್ರ, ಬಹು ದೊಡ್ಡ ಸಾಂಸ್ಕೃತಿಕ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಒಂದು ಕಡೆ ಸಮೃದ್ಧವಾಗಿರುವ ಜಾನಪದ ಸಂಸ್ಕೃತಿ, ಸಾಹಿತ್ಯ ಪರಂಪರೆ, ಐತಿಹಾಸಿಕ ಹಿನ್ನೆಲೆಯ ಸ್ಥಳಪುರಾಣ ಹೀಗಾಗಿಯೇ ಸಿರಾ ಸೀಮೆಗೆ ಚಾರಿತ್ರಿಕವಾಗಿಯೂ ಮಹತ್ವವಿದೆ. ಈ ಬಗೆಯ ಮಹತ್ವದ ಸಂಗತಿಯನ್ನು ಸಮಕಾಲೀನ ಸಂದರ್ಭದ ಒಳಗೆ ಸಮುದಾಯದೊಂದಿಗೆ ಸಂವಹನಗೊಳಿಸುವ ಕ್ರಿಯೆ ಸುಲಭ ಸಾಧ್ಯವಲ್ಲ. ನಮ್ಮೊಳಗಿನ ಭವ್ಯ ಸಾಂಸ್ಕೃತಿಕ ಪರಂಪರೆಯನ್ನು ವರ್ತಮಾನದಲ್ಲಿ ನಿಂತು ಕಳೆದ ಆ ದಿನಗಳತ್ತ ಕಣ್ಣಾಡಿಸಿದರೆ ರೋಮಾಂಚನಗೊಳಿಸುತ್ತದೆ. ಆದರೆ ಆ ಸಂಗತಿಯನ್ನು, ಅದರ ಇತಿಹಾಸ, ಜಾನಪದ ಮಹತ್ವ ತಿಳಿಯಬೇಕಲ್ಲವೆ? ಈ ಬಗೆಯ ಕಳೆದ ಆ ದಿನಗಳ ಸಾಂಸ್ಕೃತಿಕ, ಸಾಹಿತ್ಯಕ, ಐತಿಹಾಸಿಕ ಈ ಮೂರೂ ನೆಲೆಯಲ್ಲಿ ಕೆಲಸ ಮಾಡುತ್ತಾ ಬರುತ್ತಿರುವ ಸಿರಾದ ಗಡಿನಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ ಪ್ರತಿಷ್ಠಾನ, ನಮ್ಮೊಳಗಣ ಮಹತ್ವದ ಸಾಂಸ್ಕೃತಿಕ ಸಂಸ್ಥೆ ಶುದ್ಧ ಸಂಸ್ಕೃತಿ ಸಂವರ್ಧನೆಯ ಈ ಕೇಂದ್ರದ ಕೆಲಸಗಳು ನಾಡು ಮೆಚ್ಚುವಂತಹವು. ಕಥೆ, ಕಾದಂಬರಿ, ನಾಟಕ ಬರೆಯುತ್ತ ವ್ಯಕ್ತಿಯೊಬ್ಬರ ಪ್ರಚಾರದ ಸರಕಾಗದೆ ಈ ನೆಲದ ಸಂಸ್ಕೃತಿಯ ದೀಪದಂತೆ ಬೆಳಗುತ್ತಿರುವುದು ಅಭಿನಂದನಾರ್ಹ ಸಂಗತಿ.

ಸಿರಾ ಸೀಮೆ ಜಾನಪದ ಸಂಸ್ಕೃತಿಯ ಕಣಜ. ಅಪೂರ್ವ ಜಾನಪದ ಮಹಾಕಾವ್ಯಗಳು ಇಲ್ಲಿನ ಮೌಖಿಕ ಪರಂಪರೆಯಲ್ಲಿ ಪ್ರಕಟವಾಗುತ್ತಿವೆ. ಈ ಎಲ್ಲವೂ ಅಭಿಜಾತ ಪರಂಪರೆಯ ವಾದವುಗಳಾಗಿರುವುದರಿಂದ, ಹಾಡುವ ಕಲೆ ಬಹುತೇಕ ಅನಕ್ಷರಸ್ಥರೇ ಆಗಿರುವುದರಿಂದ ಇವರನ್ನು ಕೇಳುವ, ಅವರ ಸಾಹಿತ್ಯ, ಸಂಸ್ಕೃತಿಯನ್ನು ದಾಖಲಿಸುವ ಕಯಾಲಿ ಯಾರಿಗಿರುತ್ತದೆ? ಇಂಥ ವಿರಳ ಸಂದರ್ಭದ ಒಳಗೆ ಗಡಿನಾಡ ಜಾನಪದ ಕೇಂದ್ರ ಹಲವಾರು ಜಾನಪದ, ಚರಿತ್ರೆ, ಸಂಸ್ಕೃತಿಯ ಗ್ರಂಥಗಳನ್ನು ಪ್ರಕಟಿಸಿದೆ. ಹಾಗಾಗಿ ಏಕಕಾಲದಲ್ಲಿ ಕಲಾ ಸಂಘಟನೆ, ಸಂಸ್ಕೃತಿ ಪ್ರಸಾರ, ಪ್ರಕಟಣೆಯ ಕಡೆಗೂ ಗಮನ ಹರಿಸಿ ಮಹತ್ವದ ಗ್ರಂಥಗಳನ್ನು ಪ್ರಕಟಿಸಿದೆ.

ಜುಂಜಪ್ಪ ನಮ್ಮ ನಡುವಣ ಮಹತ್ವದ ಸಾಂಸ್ಕೃತಿಕ ವೀರ. ಚಿಕ್ಕನಾಯಕನಹಳ್ಳಿ, ಸಿರಾ, ಮಧುಗಿರಿ, ಗುಬ್ಬಿ, ಚಿತ್ರದುರ್ಗ ಈ ಭಾಗದ ಪ್ರಮುಖ ದೈವ. ಹಾವು-ಚೇಳುಗಳ ಸ್ನೇಹಮಯಿಯಾದ ಜುಂಜಪ್ಪನನ್ನು, ಮೊರೆಹೋದರೆ ಈ ಬಗೆಯ ವಿಷ ಜಂತುಗಳಿಂದ

ರಕ್ಷಣೆ ಹೊಂದಬಹುದೆಂಬ ಭಾವನೆ, ಅಪಾರ ಭಕ್ತರಲ್ಲಿದೆ. ಹಾಗಲವಾಡಿ ಜುಂಜಪ್ಪ ಬಸವನ ಮೆರವಣಿಗೆ ಮತ್ತು ಹಾಗಲವಾಡಿಯೇ ಮೂಲ ಎಂದು ಚಿಕ್ಕನಾಯಕನಹಳ್ಳಿಯ ಕಡೆ ಇಂದೂ ನಂಬುತ್ತಾರೆ. ಜುಂಜಪ್ಪನನ್ನು ಕುರಿತು ಗಣೆ ಊದಿಕೊಂಡು ಪದ ಹೇಳಿಸುವ ವಾಡಿಕೆ ಇದೆ. ಒಂದು ಕಾಲದಲ್ಲಿ ವ್ಯಾಪಕವಾಗಿದ್ದ ಗಣೆ ಕಲೆ ಇಂದು ಹಿರಿಯ ಕಲಾವಿದರ ಕೊರತೆಯಿಂದ ಅಷ್ಟಾಗಿ ಕಂಡುಬರುವುದಿಲ್ಲ. ಆದರೂ ಒಂದು ಪುರಾಣ. ಚಾರಿತ್ರಿಕ ಸಂಗತಿಯನ್ನು ನೆನಪಿನಲ್ಲಿ ಇಟ್ಟುಕೊಂಡು ತಲೆಮಾರಿನಿಂದ ತಲೆಮಾರಿಗೆ ಮೌಖಿಕ ಪರಂಪರೆಯಲ್ಲಿ ಸಾಗಿಸುತ್ತಾ ಬರುವ ತನ ಇದೆಯಲ್ಲ, ಇದು ನಮ್ಮ ಜನಪದ ಕಲಾವಿದರ ಅದ್ಭುತ ಪ್ರತಿಭೆ, ಪಾಂಡಿತ್ಯದ ಪ್ರತೀಕವಾಗಿದೆ.

ಸಿರಾ ಸೀಮೆಯ ಸಾಂಸ್ಕೃತಿಕ ದೀಪವಾಗಿರುವ ವೀರ ಜುಂಜಪ್ಪನ ಚಿತ್ರಣವನ್ನು ಸಾಮಾನ್ಯವಾಗಿ ಪದ್ಯಮಾದರಿಯಲ್ಲಿ ಹಾಡುತ್ತಾ ಬರುತ್ತಿದ್ದರು. ಜುಂಜಪ್ಪನ ವಿವರವನ್ನು ಡಾ||ಚಿಕ್ಕಣ್ಣ ಕಥೆಯ ಮೂಲಕವೂ ಹೇಳುವ ಮೂಲಕ, ಜನಸಾಮಾನ್ಯರಿಗೆ ಜುಂಜಪ್ಪನನ್ನು ಸಮರ್ಥವಾಗಿ ಪರಿಚಯಿಸಿದ್ದಾರೆ. ಕಾವ್ಯ ಕೇಳುವ, ಹೇಳುವ ವ್ಯವಧಾನ, ಅಂಥ ಸಮರ್ಥ ಕಲಾವಿದರ ಕೊರತೆಯ ನಡುವೆಯೂ, ಜುಂಜಪ್ಪ ಕಥಾವಳಿ ಬಹು ಅಮೂಲ್ಯ ಕಥಾ ಸಂಕಲನ. ಜುಂಜಪ್ಪನ ಹಿಂದಿನ ಎರಡು ತಲೆಮಾರಿನಿಂದ ಹಿಡಿದು, ಜುಂಜಪ್ಪನ ಜನನ, ಆತನ ಬಾಳ್ವೆ, ಸೋದರ ಮಾವಂದಿರು ನೀಡಿದ ತೊಂದರೆ, ಸಿರಾ-ಚೇಳೂರು ಪಾಳೆಯರು ಮಾಡಿದ ವಂಚನೆ, ದುಷ್ಟ ನಿಗ್ರಹ - ಈ ಬಗೆಯ ಸಮಗ್ರ ಮಾಹಿತಿಯನ್ನು ಈ ಕ್ಷೇತ್ರದ ತಜ್ಞರಿಂದ, ಹಿರಿಯರಿಂದಲೇ ಸಂಗ್ರಹಿಸಿ, ನೀಡಿರುವುದು ಜುಂಜಪ್ಪನ ಸಮಗ್ರ ಪರಿಚಯಕ್ಕೆ ಸಹಾಯಕವಾಗಿದೆ. ಕನ್ನಡ ಓದು-ಬರಹದ ಸಾಮಾನ್ಯ ಜ್ಞಾನವಿರುವ, ಪ್ರತಿಯೊಬ್ಬರಿಗೂ ಪ್ರಯೋಜನವಾಗುವ ಈ ಜುಂಜಪ್ಪನ ಕಥನ, ನಮ್ಮ ಪ್ರಕಟಣೆಗಳ ಸಾಲಿನ ಎತ್ತರದ ದೀಪ ಎಂದು ಭಾವಿಸುತ್ತಾ, ಇಂಥದೊಂದು ಶ್ರಮಸಾಧ್ಯ ಕೆಲಸವನ್ನು ಸಾರ್ಥಕವಾಗಿ ಮಾಡಿ ಮುಗಿಸಿರುವ, ಹಿರಿಯ ಜಾನಪದ ವಿಜ್ಞಾನಿ, ಪ್ರಾಧ್ಯಾಪಕ ಡಾ||ಚಿಕ್ಕಣ್ಣ ಯಣ್ಣೆಕಟ್ಟೆ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

***ಟಿ.ಬಿ.ಜಯಚಂದ್ರ,***
*ಗೌ|| ಅಧ್ಯಕ್ಷರು, ದಶಮಾನೋತ್ಸವ ಆಚರಣಾ ಸಮಿತಿ, ಗಡಿನಾಡ ಜಾನಪದ ಸಂಪರ್ಕ ಅಧ್ಯಯನ ಕೇಂದ್ರ ಪ್ರತಿಷ್ಠಾನ, ಸಿರಾ*

*ಶಾಸಕರು, ಹಾಗೂ ಮಾಜಿ ಸಚಿವರು, ಸಿರಾ*

## ಜುಂಜಪ್ಪ - ಮಾತು ಮುತ್ತಿನ ಹಾರ

ನಮ್ಮ ಜನಪದ ಲೋಕದ ಸಾಂಸ್ಕೃತಿಕ ವೀರನಾದ ಜುಂಜಪ್ಪ, ವಿಶ್ವವ್ಯಾಪಿ ಗುಣ ಮತ್ತು ಮಹಿಮೆಯನ್ನುಳ್ಳವನು. ತನ್ನ ಪವಾಡಗಳ ಮೂಲಕ ಸಾಮಾನ್ಯರ ಭಾವನೆಗಳಿಗೆ ಧ್ವನಿಯಾದವನು. ಇವನನ್ನು ನಮ್ಮ ಜನಪದರು ಹಾಡಿ ಹೊಗಳುವಷ್ಟು, ಬೇರಿನ್ನಾರನ್ನೂ ಹೊಗಳುವುದಿಲ್ಲ. ಜಾತಿ, ಸಿರಿತನ, ಬಡತನಕ್ಕಿಂತ ವ್ಯಕ್ತಿತ್ವ ಮುಖ್ಯವಾಗಲೆಂದು, ಜಗತ್ತಿಗೆ ಸಾರಿದ ಕಾರಣಪುರುಷ ಇವನು. ಪ್ರಸ್ತುತ ವೀರಜುಂಜಪ್ಪ ಸಮಗ್ರ ಕಥಾವಳಿ ಎಂಬ ಕಥಾ ಸಂಗ್ರಹವು ಡಾ|| ಚಿಕ್ಕಣ್ಣ ಯಣ್ಣೆಕಟ್ಟೆಯವರು, ತಮ್ಮ ಪರಿಶ್ರಮದ ಫಲವಾಗಿ ಜುಂಜಪ್ಪನನ್ನು ಕುರಿತ ಸಾಹಿತ್ಯ ಶಿಖರಕ್ಕೆ ಕಳಸವನ್ನು ತೊಡಿಸುವ ಉತ್ತಮ ಪ್ರಯತ್ನ ಮಾಡಿರುವರು. ಈ ಸಂಗ್ರಹದ ಮೊದಲ ಮಹತ್ವವೆಂದರೆ ಕಥೆಯ ನಿರೂಪಣೆಗಾರರ ಶೈಲಿಯಲ್ಲೇ ಕಥೆಯನ್ನು ಮಂಡಿಸಿರುವುದು. ಕಥೆಯ ಉದ್ದಕ್ಕೂ ಜುಂಜಪ್ಪನನ್ನು ಸಾಮಾನ್ಯ ಮನುಷ್ಯನಾಗಿ ಹುಟ್ಟಿ, ಎಲ್ಲರ ನಡುವೆ ಬೆಳೆದು, ಬೆರೆತು, ತನ್ನ ಪವಾಡಗಳ ಮೂಲಕ ದೈವತ್ವಕ್ಕೇರಿದವನೆಂಬಂತೆ ಚಿತ್ರಿಸಲಾಗಿದೆ. ಆರಂಭದ ಮಾತು ಹೀಗಿದೆ.

'ಜುಂಜಪ್ಪ ನರಮನುಷ್ಯನೇ ಸ್ವಾಮಿ, ಗೊಲ್ಲರವನು. ಅವನೂನೆ ಬಾಳಿ ಬದುಕಿದವನು, ದನ ಕಾದವನು, ಬಂಗ ಬಡತನ ನೀಚಿದವನು. ಪರಮೇಶ್ವರನ ಒಕ್ಕಲಾದ, ಜುಂಜಪ್ಪ ಪವಾಡ ಮಾಡಿ ಪರಮೇಶ್ವರನ ಸಮಕ್ಕೇನೆ ಬೆಳೆದುಬಿಟ್ಟ. ಅದಕ್ಕೇನೇ ನಾವೆಲ್ಲಾ ಅವುನ್ನ ದೇವರು ಅಂಬ್ತಾ ಪೂಜಿಕೋತೀವಿ. ಜುಂಜಪ್ಪ ನಮ್ಮ ಕರಡೇರ ಗೊಲ್ಲರ ಗೋತ್ರಕ್ಕೆ ಸೇರಿದವನು. ಬಳ್ಳಾರಿ ಕಡೆ ಅವನೂರು. ಕೊಂಕಿ ಜರಮಲೆ ಸೀಮೆ ಅಂಮ್ತಾಲೆ ನಾವೆಲ್ಲ ಕರೆಯೋದು' ಎಂದು ಹೇಳಿ ಕಥೆಯನ್ನು ಮುಂದುವರಿಸುತ್ತಾನೆ. ಜುಂಜಪ್ಪನನ್ನು ಆಪ್ತವಾಗಿ ನಮ್ಮೋನು, ನಮ್ಮ ಕಡೆಯವನು ಎಂಬ ಮಾತು, ಜನಪದರ ಮುಗ್ಧ ಮನಸ್ಸನ್ನು ಆವರಿಸಿರುವ ಜುಂಜಪ್ಪನ ಮಹಿಮೆಯನ್ನು ಎತ್ತಿ ತೋರಿಸುತ್ತದೆ. ಇನ್ನು ಈ ಸಂಕಲನದ ಎರಡನೆಯ ಮಹತ್ವದ ಅಂಶವೆಂದರೆ, ಕಥಾ ನಿರೂಪಣೆಗಾರನು ನಿರೂಪಣೆಯ ನಡುನಡುವೆ ತೋರಿಸುವ ಮಾನವೀಯ ಜೀವನ ತತ್ವಗಳು ಹಾಗೂ ಗಾದೆಗಳು. ಉದಾಹರಣೆಗೆ ದೈಮಾರನಿಗೆ ಹೆಣ್ಣು ಕೇಳಲು ತಂಗಿಮನೆಗೆ ಬಂದು ಹೆಣ್ಣು ಕೇಳಿದಾಗ ಸಂತೋಷದಿಂದ ಒಪ್ಪಿದ ತಂಗಿಯ ಬಾಯಲ್ಲಿ 'ಆಗಲಣ್ಣ ಕುರಿ ಕೊಟ್ಟವರಿಗೆ ಮರಿ ಕೊಡಬೇಕಲ್ಲ...' ಎಂಬ ಮಾತು ಉಪಕರಿಸಿದವರಿಗೆ ಪ್ರತ್ಯುಪಕರಿಸಬೇಕೆಂಬ ಭಾರತೀಯ ಮನೋಭೂಮಿಕೆಯನ್ನು ತೋರಿಸುತ್ತದೆ. ಮದುವೆಯಾಗಿ ಬೇರೆ ಮನೆಗೆ ಹೋದರೂ, ಹೆಣ್ಣುಮಕ್ಕಳ ಕರುಳು ಸಂಬಂಧದ ಮೀಮಾಂಸೆ ಈ ಮಾತಿನಲ್ಲಿದೆ. ಗಂಡನ ಎದುರು ಮೊದಲ ಬಾರಿಗೆ

ನಿರ್ವಾಣದಲ್ಲಿ ನಿಂತ ಕಂಬಕ್ಕನನ್ನು ಕಂಡ ದೈಮಾರನಿಗೆ 'ಪಶ್ಚಾತ್ತಾಪನೂ ಆಯಿತು, ನಾಚಿಗೆನೂ ಆಯಿತು' ಎಂಬ ಮಾತು ದೈಮಾರನ ಬೇಜವಾಬ್ದಾರಿ ಕೃತ್ಯಕ್ಕೆ ಹಿಡಿದ ಕನ್ನಡಿಯಂತಿದೆ.

ನಿರೂಪಣೆಗಾರರ ಭಾಷೆ ಪೂರ್ಣ ಗ್ರಾಮ್ಯವಲ್ಲ. ಆದರೆ ತೀರ ಸರಳವಾದ ಭಾಷೆ. ನಿರೂಪಣೆಯಲ್ಲಿ ಒಂದು ಲಯವಿದೆ, ಅನುಭಾವಿ ದೃಷ್ಟಿಕೋನವಿದೆ. ಈ ಕಾರಣದಿಂದ ಇಡೀ ಕಥಾ ಸಂಗ್ರಹವು, ಮಹಾಕಾವ್ಯದ ಲಕ್ಷಣಗಳನ್ನು ಹೊಂದಿದೆ. ನಿರೂಪಣೆಯಲ್ಲಿ ಮಡುಗಟ್ಟಿ ನಿಂತಿರುವ ಜೀವನಾನುಭವವು ಇಡೀ ಕಥೆಯುದ್ದಕ್ಕೂ ಹೊಳೆಯುತ್ತಿದೆ. ನಿರೂಪಣೆಗಾರನ ಕವಿ ಹೃದಯ ಆತ್ಮೀಯವಾಗಿ ಬಿಚ್ಚಿಕೊಳ್ಳುತ್ತದೆ.

ಈ ಕೃತಿ ಸಂಗ್ರಹಕಾರರಾದ ಡಾ|| ಚಿಕ್ಕಣ್ಣ ಯಣ್ಣೆಕಟ್ಟೆಯವರ ಪರಿಶ್ರಮದ ಬಗ್ಗೆ ಇಲ್ಲಿ ಉಲ್ಲೇಖಿಸಲೇಬೇಕಾಗುತ್ತದೆ. ನಿರೂಪಣೆಗಾರರಿಂದ ಸಂಗ್ರಹಿಸಿದ ಇಲ್ಲಿನ ಜುಂಜಪ್ಪನ ಕಥೆಗೆ, ಸಾಣೆ ಹಿಡಿದು, ಸುಂದರ ಮುತ್ತಿನ ಸರದಂತೆ ಹಂತ ಹಂತವಾಗಿ ಕಥೆಯನ್ನು ಜೋಡಿಸಿ, ಒಪ್ಪಗೊಳಿಸಿ, ಶುಭ್ರಗೊಳಿಸಿ, ನಮ್ಮ ಮುಂದಿಟ್ಟಿದ್ದಾರೆ. ಕ್ಷೇತ್ರಕಾರ್ಯದ ಮೂಲಕ ಅತ್ಯಂತ ಶ್ರಮಪಟ್ಟು ಮಾಡಿರುವ, ಈ ಕೆಲಸ ಇವರೊಬ್ಬರಿಂದಲೇ ಸಾಧ್ಯ. ತುಮಕೂರು ಜಿಲ್ಲೆಯ ಸಾಂಸ್ಕೃತಿಕ ವೀರನೊಬ್ಬನ ಕಥಾನಕವನ್ನು ಅತ್ಯಂತ ಸರಳವಾಗಿ, ಗದ್ಯ ರೂಪದಲ್ಲಿ ನಮ್ಮ ಮುಂದ್ದಿಟ್ಟಿರುವುದರ ಮೂಲಕ, ಈವರೆಗಿನ ಜುಂಜಪ್ಪನನ್ನು ಕುರಿತ ಚರ್ಚೆಗಳಿಗೆ ಹೊಸ ರೂಪವನ್ನು ಕೊಡುವ ಮತ್ತು ಆ ಮೂಲಕ ಜುಂಜಪ್ಪನಿಗೆ ಹೊಸ ವ್ಯಾಖ್ಯಾನ ನೀಡಿ, ಅವನನ್ನು ಇನ್ನೂ ಸಾರ್ವಜನಿಕಗೊಳಿಸುವ ಕಾರ್ಯವನ್ನು ಮಾಡಿದ್ದಾರೆ. ಇವರಿಂದ ಇನ್ನೂ ಇಂತಹ ಅನೇಕ ಕೃತಿಗಳು ಬೆಳಕು ಕಾಣಲಿ. ಜನಪದ ಸಾಹಿತ್ಯ ಲೋಕವು ಶ್ರೀಮಂತಗೊಳ್ಳಲಿ. ಅಭಿನಂದನೆಗಳು.

**ಡಾ|| ಡಿ.ವಿ. ಪರಶಿವಮೂರ್ತಿ**
ಅಧ್ಯಕ್ಷರು
ಡಾ|| ಡಿವಿಜಿ ಕನ್ನಡ ಅಧ್ಯಯನ ಕೇಂದ್ರ
ತುಮಕೂರು ವಿಶ್ವವಿದ್ಯಾನಿಲಯ

# ಆದವರ ನೆನೆದೇನು

ಜಾನಪದ ನನ್ನ ಆಸಕ್ತಿಯ ಕ್ಷೇತ್ರ. ಈ ಕೆಲಸ ಸದಾ ಇನ್ನೊಬ್ಬರನ್ನು ಅವಲಂಬಿಸಿ ಮಾಡಬೇಕಾಗಿರುವುದು. ಪರಸ್ಥಳ, ಅಪರಿಚಿತ ವ್ಯಕ್ತಿ, ದೂರದ ಪ್ರದೇಶ, ಜಾತಿ, ವಯಸ್ಸು, ಸೌಲಭ್ಯ ಈ ಎಲ್ಲವೂ ಕಾರಣವಾಗುತ್ತವೆ. ಈ ಎಲ್ಲವುಗಳ ಒಳಗೂ ನಾನು ಜಾನಪದಕ್ಕೆ ಸಂಬಂಧಿಸಿದಂತೆ ಇಪ್ಪತ್ತೈದಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದೇನೆ. ಇದು ಸಾಧ್ಯವಾದದ್ದು ಈ ಅಪೂರ್ವ ಜನಪದ ಕಲಾಸಂಪನ್ನರ ಪ್ರೇರಣೆ, ಸಹಕಾರದಿಂದ ಎಂಬುದು ಹೆಮ್ಮೆಯ ಸಂಗತಿ.

ನನ್ನೀ ಬಗೆಯ ಹೊತ್ತುಗೊತ್ತಿಲ್ಲದ, ಕುಲಜಾತಿ ಅರಿಯದ, ಈ ಕೆಲಸಕ್ಕೆ ಹಲವರ ಸಹಕಾರ, ಮಾರ್ಗದರ್ಶನವಿದೆ. ನನಗೆ ಈ ಸಂಕಲನಕ್ಕೆ ಕಥೆ ಹೇಳಿದ ನನ್ನೂರಿನ ಹಾವಿನ ಚಿಕ್ಕಣ್ಣ, ಹೆಸರೇ ಹೇಳುವಂತೆ ಹಾವು-ಚೇಳು ಕಚ್ಚಿದ, ದನ-ಕುರಿಗಳ ರೋಗಕ್ಕೆ ಸದಾ ಔಷಧೋಪಚಾರ ಮಾಡುತ್ತಿದ್ದವರು. ಜುಂಜಪ್ಪನ ಕಥೆ ಹೇಳುವುದು ಇವರಿಗೆ ಒಂದು ತಪಸ್ಸಿನ ಕೆಲಸ ಎಂದೇ ತಿಳಿದವನು. ನನ್ನ ಜೊತೆಯಲ್ಲಿ ಸರ್ಕಾರದ ಹಲವಾರು ಕಾರ್ಯಕ್ರಮಗಳಲ್ಲಿ ಮಡಕಶಿರಾ, ಹಿಂದೂಪುರ, ಮಲೆಯ ಮಹದೇಶ್ವರ ಬೆಟ್ಟ, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರಗಳಲ್ಲಿ ಭಾಗವಹಿಸಿದ್ದರು. ಬದುಕನ್ನು ಅತ್ಯಂತ ಕೆಚ್ಚೆದೆಯಿಂದ ಎದುರಿಸಬೇಕೆಂದು ಸದಾ ನನಗೆ ಧೈರ್ಯ ತುಂಬುತ್ತಾ ಇದ್ದವರು, ಸಲ್ಲದ ಕಾರಣಕ್ಕೆ ಪ್ರಾಣ ತೆತ್ತುಕೊಂಡ. ಅವರ ಬಗ್ಗೆ ನನ್ನಲ್ಲಿ ಇನ್ನಿಲ್ಲದ ಆಲೋಚನೆ, ಬೇಸರ ತರಿಸಿದೆ. ಇಕ್ಕನೂರಿನ ನಿಂಗಣ್ಣ, ಕುಣಿಗಲ್ ನಿಂಗಣ್ಣ, ಕಳುವಾರಹಳ್ಳಿ ತಳವಾರ ತಮ್ಮಣ್ಣನವರೂ ಇತ್ತೀಚೆಗೆ ದೈವಾಧೀನರಾದರು. ತಳವಾರ ತಮ್ಮಣ್ಣ ಹಾಗೂ ಮಣೆಗಾರ ಕದರಯ್ಯ ತುಂಬಾ ಸೊಗಸಾಗಿ, ಸ್ಫುಟವಾಗಿ ಕಥೆ ಹೇಳಿದ್ದರು. ಬೇವಿನಹಳ್ಳಿಯ ಕೊರ್ಲ್ತಿಮ್ಮಣ್ಣ ತನ್ನ ಮೇಕೆ ಮೇಯಿಸುವ ಬದುಕಿನ ಒಳಗೇ ಜುಂಜಪ್ಪನ ಕಥೆ ಮಾಡುವ, ಸಿರಾ ತಾಲ್ಲೂಕಿನ ಅಪೂರ್ವ ಕತೆಗಾರ. 'ಈ ಕಥೆಯನ್ನು ಯಾರೂ ಕಲಿಯಲಿಲ್ಲ. ನಮ್ಮ ವಿದ್ಯಾವಂತರೂ ಅದನ್ನು ಉಳಿಸುವ ಕೆಲಸ ಮಾಡುತ್ತಿಲ್ಲ' ಎಂದು ತಮ್ಮ ಸಂಕಟವನ್ನು ತೋಡಿಕೊಳ್ಳುತ್ತಲೇ ಕಥೆಗೆ ಜೀವ ತುಂಬಿದ ಹಿರಿಯ ಕಲಾವಿದ. ಮದಲೂರು ದಾಸರಹಳ್ಳಿ ದಾಸಣ್ಣ ಹಿರಿಯ ಕಲಾವಿದ. ಜುಂಜಪ್ಪನ ಮೇಲೆ ಪದ ಹೇಳುತ್ತಾರೆ. ಕರ್ನಾಟಕದ ಹೊರಗೂ ನನ್ನೊಂದಿಗೆ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವ ಕಲಾವಿದರು. ಈ ಹಿರಿಯ ಜಾನಪದ ಸಂಪನ್ನರಿಗೆ ನಾನು ಸದಾ ಋಣಿ.

ಈ ಪುಸ್ತಕದ ರಚನೆಗೆ ಪ್ರೇರಣೆ, ಪ್ರೋತ್ಸಾಹ ನೀಡಿದ ಮಾರ್ಗದರ್ಶನ ಮಾಡಿದ

ಡಾ|| ಬಿ.ಎ. ವಿವೇಕ ರೈ ಅವರಿಗೆ, ಮುನ್ನುಡಿ ಬರೆದ ಹಿರಿಯ ಶಾಸನತಜ್ಞರು, ತುಮಕೂರು ವಿಶ್ವವಿದ್ಯಾನಿಲಯದ ಡಿ.ವಿ.ಜಿ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರೂ ಆದ ಡಾ|| ಡಿ.ವಿ.ಪರಮಶಿವಮೂರ್ತಿ ಅವರಿಗೆ, ಈ ಪುಸ್ತಕದ ರೂಪುರೇಖೆ ನಿರ್ಧರಿಸಿ, ಪುಸ್ತಕದ ಅಗತ್ಯತೆ ಹೇಳಿ, ಮಾರ್ಗದರ್ಶನ ಮಾಡಿದ ಚಿತ್ರದುರ್ಗದ ಶ್ರೀ ಯಾದವ ಪೀಠದ ಅಧ್ಯಕ್ಷರಾದ ಶ್ರೀ ಯಾದವಾನಂದ ಸ್ವಾಮೀಜಿ ಅವರಿಗೆ, ಕಾಡುಗೊಲ್ಲ ಸಂಸ್ಕೃತಿಯ ಬಗೆಗೆ ಅಪಾರ ಒಲವಿರಿಸಿಕೊಂಡ ಸ್ವತಃ ಜುಂಜಪ್ಪನ ಕಾವ್ಯ ಹಾಡುಗಾರರು, ಕೆ.ಇ.ಬಿ ಇಂಜಿನಿಯರ್ ಆದ ಕಾಡುಗೊಲ್ಲರ ಕ್ಷೇಮಾಭಿವೃದ್ಧಿ ಸಂಘ, ತುಮಕೂರು ಜಿಲ್ಲೆಯ ಗೌರವಾಧ್ಯಕ್ಷರೂ ಆಗಿರುವ ಚಂಗಾವರ ಕರಿಯಪ್ಪ ಅವರಿಗೆ, ಜಿ.ಪಂ ಸದಸ್ಯರಾದ ಬಿ.ಕೆ. ಬಡೀರಣ್ಣ, ಶ್ರೀ ಸುಧಾಕರರವರ ವಾತ್ಸಲ್ಯಕ್ಕೆ ಕೃತಜ್ಞತೆಗಳು. ಹೊನ್ನಗಾನಹಳ್ಳಿ ಕೆ.ಚಿಕ್ಕಣ್ಣ, ಶಿಕ್ಷಕ ನಾಗಣ್ಣ ಅವರ ಕಾಡುಗೊಲ್ಲರ ಸಂಸ್ಕೃತಿ ಬಗೆಗಿನ ಅತೀವ ಪ್ರೀತಿ-ಕಾಳಜಿಗೆ, ಸಿರಾ ತಾಲ್ಲೂಕು ಕಾಡುಗೊಲ್ಲರ ಹಿತರಕ್ಷಣಾ ಸಮಿತಿಯ ಅಧ್ಯಕ್ಷರಾದ ಶ್ರೀ ಹಾರೋಗೆರೆ ಎಂ.ಮಹೇಶ್ ಅವರಿಗೆ ನನ್ನ ನಮನಗಳು. ಈ ಪುಸ್ತಕಕ್ಕೆ ಕಾಡುಗೊಲ್ಲರ ಸಂಸ್ಕೃತಿ ಬಗೆಗೆ ಪರಿಚಯವಿರುವ ಹಲವರಿಂದ ಅಭಿಪ್ರಾಯ ಸಂಗ್ರಹಿಸಲಾಗಿದೆ. ಈ ಪುಸ್ತಕವನ್ನು ಓದಿ, ಆರಂಭಿಕ ಹಂತದಲ್ಲಿಯೇ ಉಪಯುಕ್ತ ಸಲಹೆ ನೀಡಿದ, ಜುಂಜಪ್ಪನ ನೆಲೆಯ ಸ್ಥಳೀಕರಾದ ಗೋವರ್ಧನಹಳ್ಳಿ ಮಂಜುನಾಥ್, ಸಿ.ಶಿವಮೂರ್ತಿ, ಹೊನ್ನಗಾನಹಳ್ಳಿ ಚಿಕ್ಕಣ್ಣ, ಪ್ರೊ|| ಬಿ.ಕರಿಯಣ್ಣ, ಜಿ.ಇಂದ್ರಕುಮಾರ್ ಮೊದಲಾದ ಹಿರಿಯರಿಗೆ, ಕ್ಷೇತ್ರ ಕಾರ್ಯದಲ್ಲಿ ನೆರವಾದ ಬೇವಿನಹಳ್ಳಿ ಶ್ರೀ ಯೋಗಾನಂದ, ಕೆ.ರಂಗನಹಳ್ಳಿ ಅವಿನಾಶ್, ಅಜ್ಜೇನಹಳ್ಳಿ ಮಲ್ಲೇಶಪ್ಪ, ನಲ್ಲೂರು ಹೇಮಂತ್‌ಕುಮಾರ್, ಓಜಗುಂಟೆ ಚಿತ್ತಯ್ಯ, ಸಿ.ಹರೀಶ್, ಜುಂಜಪ್ಪನ ಬಗೆಗೆ ಈ ಹಿಂದೆ ಸಾಹಿತ್ಯ ಪ್ರಕಟಿಸಿದ ನನ್ನ ಕ್ಷೇತ್ರ ಪ್ರವೇಶಕ್ಕೆ ದಾರಿ ತೋರಿದ ಡಾ|| ತೀ.ನಂ. ಶಂಕರನಾರಾಯಣ, ಡಾ|| ಜೀ.ಶಂ.ಪ, ಡಾ|| ಕಾಳೇಗೌಡ ನಾಗಾವರ, ಡಾ|| ಸಿದ್ದಗಂಗಯ್ಯ ಕಂಬಾಳ್, ಡಾ|| ಚೆಲುವರಾಜ್, ಡಾ|| ಮೀರಾಸಾಬಿಹಳ್ಳಿ ಶಿವಣ್ಣ ಈ ಮೊದಲಾದ ಹಿರಿಯ ವಿದ್ವಾಂಸರಿಗೆ ನಮ್ಮ ಕಾಲೇಜಿನ ಪ್ರಾಂಶುಪಾಲರಾದ ಪ್ರೊ|| ಶ್ಯಾಮಸುಂದರ ಕೋಚಿ ಅವರ ಅಂತಃಕರಣಪೂರ್ವಕ ಪ್ರೋತ್ಸಾಹಕ್ಕೆ, ಗೆಳೆಯರಾದ ಡಾ|| ಎ.ಬಿ. ಬಾಳಪ್ಪ, ಪ್ರೊ|| ಕೆ.ಮುನಿರಾಜ್ ಅವರಿಗೆ, ನನ್ನ ಸಾಹಿತ್ಯ ಕೆಲಸಕ್ಕೆ ಒತ್ತಾಸರೆಯಾಗಿರುವ ಪ್ರಜಾಪ್ರಗತಿ ಸಂಪಾದಕ ಶ್ರೀ ಎಸ್.ನಾಗಣ್ಣ ಅವರಿಗೆ, ಪ್ರಕಟಿಸುತ್ತಿರುವ ಗಡಿನಾಡು ಜಾನಪದ ಕೇಂದ್ರದ ಗೌರವ ಅಧ್ಯಕ್ಷರೂ, ಮಾನ್ಯ ಶಾಸಕರೂ ಆದ ಶ್ರೀ ಟಿ.ಬಿ. ಜಯಚಂದ್ರ ಅವರಿಗೆ ಕೃತಜ್ಞತಾಪೂರ್ವಕ ಧನ್ಯವಾದಗಳು. ಮಕ್ಕಳಾದ ಅಕ್ಷತ್ ಯಣ್ಣೆಕಟ್ಟೆ, ಯಶಸ್ವಿ ಯಣ್ಣೆಕಟ್ಟೆ ಅವರಿಗೆ ಸದಾ ಋಣಿ.

**- ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ**

# ಪ್ರಸ್ತಾವನೆ

ಬೆಳಗೂ, ಬೈಗು ಹಕ್ಕಿಗಳ ಇಂಚರಕ್ಕೆ ಕುರಿ-ಮೇಕೆ, ದನಗಳ ಜೊತೆ ಜೊತೆಗೆ ತಮ್ಮ ಮೈಮನವನ್ನು ಒಗ್ಗಿಸುತ್ತಾ, ಬದುಕನ್ನು ರೂಪಿಸಿಕೊಂಡವರು ಗೊಲ್ಲ ಜನಾಂಗ. ಅಪ್ಪಟ ಬುಡಕಟ್ಟು ಸಂಸ್ಕೃತಿಯ ಇವರನ್ನು ಕಾಡುಗೊಲ್ಲರು ಎಂದೇ ಕರೆಯಲಾಗುತ್ತಿದೆ. ದೇಶೀ ಸಂಸ್ಕೃತಿಯ ಕಾಡುಗೊಲ್ಲ ಹಿರಿಕರನೇಕರು ತಮ್ಮನ್ನು ಗೊಲ್ಲರು, ಗೊಲ್ಲಗೌಡರು ಎಂದೇ ಕರೆದುಕೊಳ್ಳುತ್ತಾರೆ. ಕಾಡುಗೊಲ್ಲ ಈ ಶಬ್ದ ಹಿರೀಕರಿಗೆ ಒಗ್ಗುವಂತೆ ಕಾಣುತ್ತಿಲ್ಲ. ಆದರೂ ಕಾಲಮಾನಕ್ಕೆ, ಯುವ ಪೀಳಿಗೆಯ ಮನಸ್ಥಿತಿ, ಸೇವಾ ಸೌಲಭ್ಯಕ್ಕಾಗಿ ತಮ್ಮ ಕುಲವನ್ನು ಕಾಡುಗೊಲ್ಲರು ಎಂದು ಗೊಣಗುತ್ತಲೇ ಕರೆದುಕೊಳ್ಳುತ್ತಿರುವುದು ಕಂಡುಬರುತ್ತದೆ.

ಪ್ರಕೃತಿಯಲ್ಲಿ ಪ್ರಕೃತಿಗಳಾಗಿ ಬಾಳುವ ಕಾಡುಗೊಲ್ಲರು, ಭಾರತೀಯ ಸಂಸ್ಕೃತಿಯಲ್ಲಿ ವಿಶಿಷ್ಟರಾದವರು. ಹಚ್ಚ ಹಸುರಿನ ಮರ-ಗಿಡಗಳ ಅಕ್ಕಪಕ್ಕ, ನಗರಗಳಿಂದ ದೂರದಲ್ಲಿ ನಿಂತು ಹುಲ್ಲು ಗುಡಿಸಲು ಅಥವಾ ಮರದ ಎಲೆಗಳಿಂದ ಅಂದವಾದ ಜೋಪಡಿಗಳನ್ನು ಕಟ್ಟಿಕೊಂಡು ಇವರು ವಾಸಿಸುತ್ತಾರೆ. ಈ ಜೋಪಡಿ (ಗುಬ್ಬಗಳು) ಹುಲ್ಲು ಎಲೆಗಳಿಂದ ಮಾಡಿದ ಜೋಪಡಿಗಳಾದರೂ ನೆಲಮೂಲ ಸಂಸ್ಕೃತಿಯ ಮುತ್ತು ರತ್ನಗಳಿಂದ ಕಟ್ಟಿದ ಕಣಜಗಳು. ಆಧುನಿಕ ಪರಿಸರದಲ್ಲೂ ಬುಡಕಟ್ಟು ಲಕ್ಷಣಗಳನ್ನು ಅಚ್ಚುಕಟ್ಟಾಗಿ ಕಾಪಾಡಿಕೊಂಡು ಬಂದವರು. ಮಡಿಮೈಲಿಗೆಗಳಲ್ಲಿ ಅತ್ಯಂತ ಕಟ್ಟುನಿಟ್ಟು. ಎದೆಗೆ ಕುಪ್ಪಸ ತೊಡದ ಗೊಲ್ಲ ಮಹಿಳೆಯರು, ನಿತ್ಯ ಮುತ್ತೈದೆಯರು. ಗಂಡ ಸತ್ತ ಹೆಣ್ಣಿಗೆ ಸಾಮಾಜಿಕ ವಿಧಿಯ ಕ್ರೂರ ಹಿಂಸೆಗಳಿಲ್ಲ. ಗಂಡನ ಪ್ರತಿರೂಪ ಎಂದು ನಂಬುವ ಮುಂಗೈಯ ಗೊಲ್ಲ ಕಡಗವನ್ನೇ ಗಂಡ ಎಂದು ಭಾವಿಸುವ ಈ ಜನ, ಹೆಣ್ಣು ಮಾಸಿಕ ಮುಟ್ಟಾದಾಗ, ಮೈ ನೆರೆದಾಗ, ಹೆರಿಗೆ ಮುಂತಾದ ಸಂದರ್ಭಗಳನ್ನು ಸೂತಕದ ಹೆಸರಲ್ಲಿ ಅತ್ಯಂತ ಕಟ್ಟುನಿಟ್ಟಾಗಿ ನಡೆದುಕೊಳ್ಳುತ್ತಾ, ತಮ್ಮ ವಾಸಸ್ಥಳದಿಂದ ಹೊರಗೆ ಕಳಿಸುವ ಪದ್ಧತಿ ಇಂದಿಗೂ ನಿಂತಿಲ್ಲ. ಆದರೂ ಆಧುನಿಕ ಪರಿಸರದ ಇಂದಿನ, ವಿದ್ಯಾವಂತ ಯುವತಿಯರಲ್ಲಿಯೂ ಈ ಪದ್ಧತಿ ಮುಂದುವರಿದಿದ್ದು ಹಟ್ಟಿಯ ಒಂದು ಬದಿಗೆ ದೇವಾಲಯದಿಂದ ದೂರದಲ್ಲಿ ಒಂದೊಂದು ಸೂತಕ ಗೃಹಗಳನ್ನು ರೂಪಿಸಿಕೊಂಡಿದ್ದಾರೆ.

ದಕ್ಷಿಣ ಕರ್ನಾಟಕದ ಬಯಲು ಸೀಮೆ ಜಿಲ್ಲೆಗಳಾದ ಚಿತ್ರದುರ್ಗ, ತುಮಕೂರು, ಬಳ್ಳಾರಿ ಈ ಜಿಲ್ಲೆಗಳೂ ಸೇರಿದಂತೆ ಆಂಧ್ರ ಪ್ರದೇಶದ ಗಡಿಗೆ ಆತುಕೊಂಡಿರುವ ಗಡಿ ನೆಲದ ಒಳಗೂ-ಹೊರಕ್ಕೂ ಸಾಕಷ್ಟು ಸಂಖ್ಯೆಯಲ್ಲಿ ಕಾಡುಗೊಲ್ಲರು ನೆಲೆಸಿದ್ದಾರೆ. ಕಾಡುಗೊಲ್ಲರನ್ನು ಕುರಿತು ಒಂದು ಗಾದೆಯೂ ಈ ಭಾಗದಲ್ಲಿ ಜನಜನಿತವಾಗಿದೆ. 'ಗೊಲ್ಲರು

ದೇವರು ಮಾಡಾದು ಬಲ್ಲರು, ಕುಂಚಿಟಿಗರು ಮದುವೆ ಮಾಡಾದು ಬಲ್ಲರು'. ಅಂದರೆ ಈ ಭಾಗಗಳಲ್ಲಿ ಕಾಡುಗೊಲ್ಲರ ಜೊತೆ ಜೊತೆಗೆ ಬದುಕುವ ಕುಂಚಿಟಿಗ ಒಕ್ಕಲಿಗರು ಕಾಡುಗೊಲ್ಲರು ಸಮಾನ ಸಂಸ್ಕೃತಿ ಹೊಂದಿದ್ದಾರೆ. ಆದರೂ ಇವರು ಮದುವೆಯನ್ನು ಅತ್ಯಂತ ವಿಜೃಂಭಣೆಯಿಂದ, ಆಕರ್ಷಕವಾಗಿ ಮಾಡುತ್ತಾರೆ. ದೇವರ ಉತ್ಸವಗಳನ್ನು, ಜಾತ್ರೆ ಆಚರಣೆಗಳ ವಿಷಯದಲ್ಲಿ ಕುಂಚಿಟಿಗ ಒಕ್ಕಲಿಗರು ಅಷ್ಟೇನು ವಿಶೇಷ ಗಮನ ಕೊಡುವುದಿಲ್ಲ. ಆದರೆ ಗೊಲ್ಲರು ಇದಕ್ಕೆ ವಿರುದ್ಧವಾದ ನಡಾವಳಿಯನ್ನು ರೂಪಿಸಿಕೊಂಡು, ದೇವರ ಕಾರ್ಯ, ಉತ್ಸವ, ಮೆರವಣಿಗೆಗಳನ್ನು ಅತ್ಯಂತ ವ್ಯವಸ್ಥಿತವಾಗಿ, ಕಟ್ಟು ಕರಾರಿನೊಂದಿಗೆ, ನಿಖರವಾಗಿ ಆಚರಿಸಿರುತ್ತಾರೆ. ಹಾಗಾಗಿ ಕಾಡುಗೊಲ್ಲರ ಸಂಪ್ರದಾಯ, ನಂಬಿಕೆ, ನಡಾವಳಿಯ ಭಾಗವಾಗಿಯೇ ಜಾನಪದ ವಾಙ್ಮಯ ಮಧ್ಯೆ ಕರ್ನಾಟಕದ ಬಳ್ಳಾರಿ, ಚಿತ್ರದುರ್ಗ, ತುಮಕೂರು ಈ ಗಡಿ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಲಭ್ಯವಾಗುತ್ತದೆ.

ಕಾಡುಗೊಲ್ಲರ ಸಾಹಿತ್ಯಕ್ಕೆ ಮೂಲ ಪ್ರೇರಣೆ, ಅವರ ಸಾಂಸ್ಕೃತಿಕ ವೀರರು ಇವರ ಬದುಕಿನ ಭಾಗವಾಗಿಯೇ, ಪ್ರಕಟವಾಗುವ ಈ ಸಾಂಸ್ಕೃತಿಕ ನಾಯಕರು, ತಮ್ಮ ಶೀಲ-ಶೌಚಗುಣಗಳಿಂದ, ಪರಿಶುದ್ಧತೆಯನ್ನು ಕಾಯ್ದುಕೊಂಡ ತನ ಹಾಗೂ ಅದರಂತೆ ಬಾಳಿ ಅತಿಮಾನುಷತನಕ್ಕೆ ಒಳಗಾದ ಕಾರಣದಿಂದಾಗಿಯೇ, ಅವರ ಬಗೆಗೆ ಕಾಡುಗೊಲ್ಲರಿಗೆ ಅಪಾರ ಹೆಮ್ಮೆ. ಪ್ರಾಣವನ್ನಾದರೂ ಬಿಡಲು ಸಿದ್ಧ, ಆದರೆ ತಾವು ನಂಬಿದ ಸಂಪ್ರದಾಯ-ನಡಾವಳಿಯನ್ನು ಮಾತ್ರ ಮೀರಲಾರರು. ಇದನ್ನೇ 'ಗೊಲ್ಲಪಟ್ಟು' ಎಂದು ಕರೆಯುವುದು. ಇವರ ಧಾರ್ಮಿಕ, ಲೌಕಿಕ ಕಾವ್ಯಗಳೂ ಸೇರಿದಂತೆ ಪುರಾಣಗಳೂ ಕೂಡ ಇವರ ಈ ನಿಷ್ಠಾವಂತ ಧಾರ್ಮಿಕ ಪ್ರಜ್ಞೆಯನ್ನು ಪ್ರಕಟಿಸುತ್ತವೆ.

ಕಾಡುಗೊಲ್ಲರಿಗೆ ಚಿತ್ರದೇವರು, ಕಾಟಂದೇವರು, ಕ್ಯಾತೆದೇವರು, ಪಾತೆ ದೇವರು ಪುರಾಣ ರೂಪ ಪಡೆದ ಸಾಂಸ್ಕೃತಿಕ ನಾಯಕರು. ಇವರುಗಳಲ್ಲಿ ಚಿತ್ರದೇವರು, ಕಾಟಂ ದೇವರುಗಳು ಮಾತ್ರ, ಗೊಲ್ಲಾಳಿಕೆಯ ಪ್ರಬಲ ಪುರಾಣ ಪುರುಷರ ಅವತಾರ ರೂಪ. ಹಾಗಾಗಿಯೇ ತಮ್ಮ ಮನೆಯಲ್ಲಿ ಹುಟ್ಟುವ ಒಂದು ಮಗುವಿಗಾದರೂ, ಚಿತ್ತಯ್ಯ, ಚಿತ್ತಮ್ಮ ಅಂತ ಹೆಸರಿಡಿದು ಕರೆಯುವುದು ವಾಡಿಕೆ. ಹಾಗಾಗಿಯೇ ತುಮಕೂರು, ಚಿತ್ರದುರ್ಗ ಈ ಜಿಲ್ಲಾ ವ್ಯಾಪ್ತಿಯಲ್ಲಿ ಚಿತ್ರದೇವರ ಹೆಸರಿನ ಗ್ರಾಮಗಳೇ ಇವೆ. ಪ್ರತಿ ಗೊಲ್ಲರ ಹಟ್ಟಿಯಲ್ಲಿಯೂ ಚಿತ್ರದೇವರ ಗುಡಿಗಳಿವೆ.

ಜುಂಜಪ್ಪ ಕಾಡುಗೊಲ್ಲರ ಸಾಂಸ್ಕೃತಿಕ ವೀರ. ಮನುಷ್ಯ ಮೂಲದಿಂದಲೇ ಬಾಳಿ, ಬದುಕು ಮಾಡಿದವನು. ಸಿರಾ ತಾಲ್ಲೂಕು ಕೇಂದ್ರಕ್ಕೆ ಹದಿನಾರು ಕಿ.ಮೀ. ದೂರದಲ್ಲಿರುವ, ಕಳುವರಹಳ್ಳಿ ಆತನ ನೆಲಮನೆ. ಆತನು ಬಾಳಿದ್ದು, ದನ ಮೇಯಿಸಿದ್ದು, ಸ್ನೇಹ, ಒಕ್ಕಲು

ವಿಸ್ತರಿಸಿದ್ದು ಸಿರಾ ಸೀಮೆಯಲ್ಲಿಯೇ. ಗೋವು ಸಂರಕ್ಷಕರಾದ ಜುಂಜಪ್ಪ ಹದಿನೇಳು ಲಕ್ಷದ ಮೇಲೆ ಗೋವುಗಳನ್ನು ಆಳಿದವನು. ತನ್ನ ಪರಿಸರದಲ್ಲಿ ಹುಲ್ಲು ನೀರಿಗೆ ತೊಂದರೆಯಾದರೆ ಮಾತ್ರ ದನಗಳ ಹುಲ್ಲು ನೀರಿನ ಆಸರೆಗಾಗಿ, ಕೆಲವು ದಿನಗಳ ಕಾಲ ಪರಸ್ಥಳಕ್ಕೆ ಹೋಗುವ ಪದ್ಧತಿಯನ್ನು ರೂಢಿಸಿಕೊಂಡಿದ್ದನು. ಇದು ಕಾಡುಗೊಲ್ಲರ ಅಲೆಮಾರಿತನಕ್ಕೆ ಅತ್ಯುತ್ತಮ ಮಾದರಿ. ಆದರೂ ತನ್ನ ಮನೆ, ಕುಟುಂಬ, ಬಂಧು-ಬಳಗವನ್ನು ಯಾವುದೇ ಕಾರಣದಿಂದ ಬದಲಿಸಿದವನಲ್ಲ. ಜುಂಜಪ್ಪನ ತಾಯಿ ಕಂಬೇರ ಚಿನ್ನಮ್ಮ, ಕಳುವರಹಳ್ಳಿಯನ್ನು ಬಿಟ್ಟು ಆಚೆ-ಈಚೆಗೆ ಹೋದವಳಲ್ಲ. ಮರಡಿಗುಡ್ಡ ಜುಂಜಪ್ಪನ ನಿಚ್ಚಳವಾದ ಹುಲ್ಲುಗಾವಲಿನ ಕೇಂದ್ರ ನೆಲ. ಕಾಡುಗೊಲ್ಲರ ಇನ್ನೊಬ್ಬ ಐತಿಹಾಸಿಕ ಪುರುಷ ಎತ್ತಪ್ಪ. ಈತನ ನೆಲೆ ಚಳ್ಳಕೆರೆ ಸಮೀಪದ ವೇಣುಕಲ್ಲು ಗುಡ್ಡ. ಈತನೂ ಅಸಾಧ್ಯ ವೀರ. ಎತ್ತುಕೊಂಡ ತುಪ್ಪದಿಂದ ಹುಟ್ಟಿದವನು ಎಂಬುದು ಇವರ ನಂಬಿಕೆ. ಹಾಗಾಗಿಯೇ ಎತ್ತಪ್ಪ ಎಂದು ಕರೆಯುವುದು. ಈತನೂ ಬಗೆಗೂ ಮೌಖಿಕ ವಾಙ್ಮಯವಿದೆ, ಸಂಶೋಧನೆಗಳೂ ನಡೆದಿವೆ.

ಕರ್ನಾಟಕ ಮೌಖಿಕ ಪರಂಪರೆಯಲ್ಲಿ ಅತಿ ದೀರ್ಘವೂ, ವಿಸ್ತಾರವೂ ಆದ ಕಾವ್ಯ ಕಥೆಯನ್ನು ಜುಂಜಪ್ಪನ ಕಥೆಯಲ್ಲಿ ಮಾತ್ರ ಕಾಣಬಹುದು. ಬೇರೆ ಯಾವುದೇ ಮೌಖಿಕ ಸಾಂಸ್ಕೃತಿಕ ನಾಯಕರ ಬದುಕಿನಲ್ಲಿ ಈ ವಿಚಾರವನ್ನು ಕಾಣಲಾಗುವುದಿಲ್ಲ. ಅಂಥ ನಾಯಕನ ನೆಲೆ, ಕಾರ್ಯಕ್ಷೇತ್ರ ಪ್ರಕಟವಾಗುವುದು, ಸಿರಾ ತಾಲ್ಲೂಕಿನ ಒಳಗೆ ಹಾಗೂ ಪೂರಕವಾಗಿ ಈ ಭೌಗೋಳಿಕ ವ್ಯಾಪ್ತಿಯ ಹೊರಗೂ ಕಾಣಬಹುದಾಗಿದೆ. ಕಳುವೋರಹಳ್ಳಿ, ಮರಡಿಗುಡ್ಡ, ಪರಸವ್ವನ ಕೆರೆ, ಚಂಗಾವರ, ಬೇವಿನಹಳ್ಳಿ, ಹುಲಿಕುಂಟೆ, ಸಿರಾ, ಚಿಕ್ಕಸಂದ್ರದ ಕಾವಲು, ಮೊಸರುಕುಂಟೆ, ಮದ್ದಕ್ಕನಹಳ್ಳಿ, ಗೌಡಗೆರೆ, ಗುಂಗರಮಳೆ, ಹಾಲ್ಕೂರು. ಬಿಜ್ಜಂಬೆಳ್ಳ ಈ ಮುಂತಾದ ಭೂಗೋಳಿಕ ಪ್ರದೇಶ ಜುಂಜಪ್ಪನ ಕಾವ್ಯದಲ್ಲಿ ಅನುಸಂಧಾನವಾಗಿ ಪ್ರಕಟಗೊಳ್ಳುತ್ತದೆ. ಈ ಸ್ಥಳಗಳೂ ಒಂದೊಂದು ಘಟನೆಗೆ ಪೂರಕವಾಗಿ ಮೌಖಿಕ ಇತಿಹಾಸ ಸೃಷ್ಟಿಸಿಬಿಡುತ್ತವೆ. ಮಾತ್ರವಲ್ಲ ಸಿರಾವನ್ನು ಆಳಿದ ಪಾಳೆಯಗಾರರ ಕುರಿತ ವಿವರವೂ, ಮೌಖಿಕ ಪರಂಪರೆಯಲ್ಲಿ ಲಭ್ಯವಾಗುವುದು, ಜುಂಜಪ್ಪನ ಕಥೆಯಲ್ಲಿ ಮಾತ್ರ. ಸಾಧಾರಣವಾಗಿ ಜನಪದ ಕಥೆಗಳಲ್ಲಿ, ಕೋಲುಪದಗಳಲ್ಲಿ ಸಿರ್‍ಯಾದ ರಂಗಣ್ಣನ ವಿವರ ಮೂರ್‍ನಾಲ್ಕು ತ್ರಿಪದಿಗಳಲ್ಲಿ ಬರುತ್ತದೆ. ಆ ಸಂಬಂಧಿ ಸಾಹಿತ್ಯವನ್ನು 'ಬಂಡಿ ಬಂದಾವೆ ಬಾಳೆ ವನದಾಗೆ' ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ ಅವರ ಕಥನ ಗೀತೆಗಳ ಸಂಕಲನದಲ್ಲಿ ಕೊಡಲಾಗಿದೆ. ಆದರೆ ಕಸ್ತೂರಿ ರಂಗಪ್ಪನಾಯಕನ ಚಾರಿತ್ರಿಕ ಬದುಕಿನೊಂದಿಗೆ ಮುಖಾಮುಖಿಯಾಗಿ ಒಬ್ಬ ಸಾಂಸ್ಕೃತಿಕ ನಾಯಕ ಪ್ರಕಟವಾಗುವುದು ಜುಂಜಪ್ಪನ ಕಾವ್ಯದ ವಿಶೇಷವಾಗಿದೆ.

ಜುಂಜಪ್ಪ ಒಬ್ಬ ಸಾಂಸ್ಕೃತಿಕ ನಾಯಕ ಮಾತ್ರ. ಅವನು ದನಗಾಹಿ. ತನ್ನ ಪಶುಗಳಿಗೆ ಹುಲ್ಲು ನೀರಿಗಾಗಿ ಅರಣ್ಯ ರಕ್ಷಣೆ, ಪರಿಸರದ ಅಭಿವೃದ್ಧಿಗೆ ಶ್ರಮಿಸಿದವನು. ಅದಕ್ಕೆ ವಿರೋಧ ಎದುರಿಸಿದ, ಸಿರಾದ ಪಾಳೆಯಗಾರ ರಂಗಪ್ಪನಾಯಕ, ಚೇಳೂರಿನ ರಂಗಪ್ಪನಾಯಕ ಇವರುಗಳು ಜುಂಜಪ್ಪನೊಂದಿಗೆ ಆರಂಭಕ್ಕೆ ಕದನಕ್ಕಿಳಿದರೂ, ನಂತರ ಜುಂಜಪ್ಪನ ಸಾಮರ್ಥ್ಯದ ಮುಂದೆ ಸೋಲಬೇಕಾಗುತ್ತದೆ. ಚೇಳೂರನ್ನು ರಂಗಪ್ಪನಿಂದ ಗೆದ್ದು, ಆರು ತಿಂಗಳು ಚೇಳೂರನ್ನು ಆಳಿದ ಜುಂಜಪ್ಪ, ಚೇಳೂರ ಕೆರೆಯೂ ಸೇರಿದಂತೆ ಅಲ್ಲಿನ ಮರಳು ಬಸವೇಶ್ವರ ದೇವಾಲಯ, ಚೇಳೂರ ಬಾವಿ ಮೊದಲಾದ ಜಾನಪದ ಕಾರ್ಯಗಳನ್ನು ರಂಗಣ್ಣನ ಕೆಲಸಗಾರರಿಂದಲೇ ಜುಂಜಪ್ಪ ಮಾಡಿಸಿದನೆಂಬ ದಟ್ಟ ವಿವರಣೆ ಜುಂಜಪ್ಪನ ಕಾವ್ಯದಲ್ಲಿ ಪ್ರಕಟವಾಗುತ್ತದೆ. ಮಾತ್ರವಲ್ಲ ಸಿರಾದ ರಂಗಪ್ಪ, ಜುಂಜಪ್ಪನ ದನಗಳನ್ನು ಹಿಡಿದು, ಅವುಗಳನ್ನು ಹರಾಜು ಹಾಕುವುದು ಅಥವಾ ಸಾಕುವವರು, ತಿಂಬುವವರು ಹೊಡೆದುಕೊಂಡು ಹೋಗಬಹುದೆಂಬ ಡಂಗೂರವನ್ನೂ ಪಾಳೆಯಗಾರ ಹೊಡೆಸುತ್ತಾನೆ. ಆದರೆ ಜುಂಜಪ್ಪನ ನೈತಿಕ ಸಾಮರ್ಥ್ಯದ ಮುಂದೆ ಅಪಾರ ಸಂಖ್ಯೆಯ ಬಲದ ರಂಗಪ್ಪನ ಸೇನೆ ಸೋತು, ಹಿಮ್ಮೆಟ್ಟಬೇಕಾಗುತ್ತದೆ. ಮಾತ್ರವಲ್ಲ ಸ್ವತಃ ಸಿರ‍್ಯಾದ ರಂಗಪ್ಪನಾಯಕನೂ ಜುಂಜಪ್ಪನ ಮಾಯದ ಪೆಟ್ಟು ತಿಂದು, ತತ್ತರಿಸಿ, ಜುಂಜಪ್ಪನಿಗೆ ಶರಣಾಗುವುದು ಮಾತ್ರವಲ್ಲದ ಶಾಶ್ವತವಾಗಿ ಜುಂಜಪ್ಪನ ಮೆರವಣಿಗೆಯಲ್ಲಿ ಜಾತ್ರೆ, ಉತ್ಸವಗಳಲ್ಲಿ ಕೋಲು ಹಿಡಿದು ಜನಗಳನ್ನು ಸುಧಾರಿಸುತ್ತಾ, ದೇವರ ಉತ್ಸವಕ್ಕೆ ಅಣಿಗೊಳಿಸುವ 'ಕೋಲುಕಾರ' ವೃತ್ತಿ ಸೇವೆಯನ್ನು ಮಾಡಲು ಒಂದು ಪರಂಪರೆಗೆ ಕಾರಣನಾಗುತ್ತಾನೆ.

ಇದೊಂದು ಹಲವು ಚಮತ್ಕಾರಿಕ ಮಾಹಿತಿಯಾಗಿದ್ದು ಜುಂಜಪ್ಪನ ಕಾಲ ನಿರ್ಣಯದ ಸಂದರ್ಭಕ್ಕೆ ಬಹು ಒಳ್ಳೆಯ ಆಕರವಾಗಿದೆ. ಮಾತ್ರವಲ್ಲ ಜುಂಜಪ್ಪ ಕೇವಲ ಕಾಲ್ಪನಿಕ ವ್ಯಕ್ತಿ ಮಾತ್ರವಾಗದೆ ಆತನೊಬ್ಬ ಸಿರಾ ಸೀಮೆಯಲ್ಲಿ ಬಾಳಿ ಬದುಕಿದ್ದ, ಸಾಮಾನ್ಯತ್ವದಿಂದ ಅಸಾಮಾನ್ಯದ ಕಡೆಗೆ ವಾಲಿದ, ಸಾಂಸ್ಕೃತಿಕ ವೀರ ಎಂಬುದೂ ತಿಳಿದುಬರುತ್ತದೆ. ಹಾಗಾಗಿ ಜುಂಜಪ್ಪ ಸಿರಾ ನಗರವನ್ನು ಆಳಿದ ರಂಗಪ್ಪನಾಯಕ (1580), ಇಮ್ಮಡಿ ರಂಗಪ್ಪನಾಯಕ (1612), ಮುಮ್ಮಡಿ ರಂಗಪ್ಪನಾಯಕ (1626) ಇವರ ಕಾಲ ಘಟ್ಟದಲ್ಲಿಯೇ ಬಾಳಿ ಬೆಳೆದ ವ್ಯಕ್ತಿಯಾಗಿರಬೇಕೆಂಬ, ಚಾರಿತ್ರಿಕ ಕಾಲನಿರ್ಣಯಕ್ಕೆ ಮಹತ್ವದ ದಾಖಲೆಯೂ ಲಭ್ಯವಾಗುವುದು ಜುಂಜಪ್ಪನ ಕಾವ್ಯದಲ್ಲಿಯೇ. ಕೊಂಕಿ ಚೆರಿಮಲೆ ಈಗಿನ ಕೂಡ್ಲಿಗಿ ತಾಲ್ಲೂಕಿನ ಒಂದು ಗ್ರಾಮ. ಆ ಮೂಲದವರಾದ ಜುಂಜಪ್ಪನ ಪೂರ್ವಜರು, ಪಶುಪಾಲನಾ ಕಾರಣದಿಂದಾಗಿ ಹುಲ್ಲು-ನೀರಿಗೆ ವಲಸೆ ಬಂದಿರುವ ಕಾರಣದಿಂದಾಗಿ ಜುಂಜಪ್ಪನ ಅಪ್ಪ, ಕುಂಚಿಟಿಗರ ಹೊನ್ನಟ್ಟಿ ಆಲೇಗೌಡ ಕಳುವರಹಳ್ಳಿಯಲ್ಲಿ ಬೆಳೆದು, ಕುಂಚಿಟಿಗರ ಮನೆಯ

ಹುಡುಗನಾದರೂ ಕಾಡುಗೊಲ್ಲರ ಸಂಸ್ಕಾರಗಳೊಂದಿಗೆ ಬೆಳೆದ ಈ ಮೂಲಕ ಕಾಡುಗೊಲ್ಲರಿಗೂ ಕುಂಚಿಟಿಗ ಜನಾಂಗಕ್ಕೂ ಸೋದರತ್ವ ಸಂಬಂಧ ಕಲ್ಪಿಸುವ ಮೂಲಕ, ಜುಂಜಪ್ಪ ಸಮನ್ವಯ ನಾಯಕನಾಗಿಯೂ ಬೆಳೆಯುವುದು ಸಿರಾ ಸೀಮೆಯಲ್ಲಿ ವ್ಯಾಪಕವಾಗಿರುವ ಕಾಡುಗೊಲ್ಲರು, ಕುಂಚಿಟಿಗರ ನಡುವೆ ಸಮನ್ವಯದ ರೂಪವಾಗಿಯೂ ಜುಂಜಪ್ಪನ ಗುಡ್ಡೆ ಸಾಕ್ಷಿ ರೂಪವಾಗಿದೆ. ಸಮನ್ವಯ, ಸೌಹಾರ್ದತೆಯ ಪ್ರತಿರೂಪವಾಗಿ ಇಂದಿಗೂ ಈ ಎರಡೂ ಜನಾಂಗದವರ ಆರಾಧನೆಗೆ ಒಳಗಾಗಿರುವುದು ಜುಂಜಪ್ಪನ ಚಾರಿತ್ರಿಕ ಬದುಕಿಗೆ ಖಚಿತ ಆಕರವಾಗಿದೆ.

ಜುಂಜಪ್ಪ ಕಾಡುಗೊಲ್ಲರ ಜನಪ್ರಿಯ ಸಾಂಸ್ಕೃತಿಕ ನಾಯಕ. ಈತನ ಮೇಲೆ ಆರೇಳು ರಾತ್ರಿಗಳ ಕಾಲ ಕಾವ್ಯ ಹಾಡುತ್ತಾರೆ. ಗಣೆಯನ್ನು ಊದಿಕೊಂಡು ಪದ ಹೇಳುವುದು ವಾಡಿಕೆ. ಹಾಗಾಗಿಯೇ ಕಾಡುಗೊಲ್ಲರ ಕಾವ್ಯಗಳನ್ನು ಗಣೆಕಾವ್ಯ ಎಂದೇ ಕರೆಯುತ್ತಾರೆ. ಜುಂಜಪ್ಪನ ಕಾವ್ಯ ಕನ್ನಡ ಜನಪದ ಕಾವ್ಯಗಳಲ್ಲೆಲ್ಲ ಅತ್ಯಂತ ಸುದೀರ್ಘವಾದ ಕಾವ್ಯ. ಅಚ್ಚಗನ್ನಡ ಸತ್ವದಿಂದ ಕೂಡಿದ ಕಾವ್ಯವಾಗಿದೆ. ಕಾಡುಗೊಲ್ಲರ ನಂಬಿಕೆ, ಸಂಪ್ರದಾಯ, ಆಚಾರ-ವಿಚಾರಗಳ ಮೊತ್ತವಾಗಿ ಪ್ರಕಟವಾಗುವ ಈ ಕಾವ್ಯ, ಇತರೆ ಜನವರ್ಗಗಳಿಂದ ಕಾಡುಗೊಲ್ಲರು ಪ್ರತ್ಯೇಕಗೊಂಡು ಅಡವಿ, ಅರಣ್ಯಗಳಲ್ಲಿ ದನಗಳೊಂದಿಗೆ ವಾಸಿಸುವ ಬದುಕುವ ಜನಾಂಗದ ಬದುಕಿನ ಕತೆ ಇದೆ. ಅವರ ಸಾಂಸ್ಕೃತಿಕ ಸ್ವರೂಪವನ್ನು ಈ ಕಾವ್ಯ ಅತ್ಯಂತ ಸೂಕ್ಷ್ಮವಾಗಿ ಪ್ರಕಟಪಡಿಸುತ್ತದೆ. ಗೋವುಗಳ ರಕ್ಷಣೆಗಾಗಿ ಇತರೆ ಬುಡಕಟ್ಟುಗಳೊಂದಿಗೆ ಹೋರಾಡುತ್ತಲೇ ಒಂದು ಜನಾಂಗದ ಒಳಗಡೆಯ ವ್ಯಕ್ತಿತ್ವ ವಿಕಸನ ಹಾಗೂ ಸಾಮೂಹಿಕ ಏಳಿಗೆಯನ್ನು ಸಹಿಸದೆ ದೌರ್ಜನ್ಯ ನಡೆಸುವ, ದಬ್ಬಾಳಿಕೆ ಮಾಡುವ, ಮಾತ್ರವಲ್ಲ ಸಲ್ಲದ ದಾರಿ ತುಳಿದ ಕುಲನಾಶಕದಂತೆ ಹಿಕ್ಮತ್ ಕಾರ್ಯಕ್ಕಿಳಿದ, ಅದೇ ಜನಾಂಗದ ವಿರುದ್ಧ ಸೆಟೆದು ನಿಂತ, ಬಾಲಕನೊಬ್ಬನ ಅಪೂರ್ವ ಸಾಹಸಗಾಥೆಯಾಗಿಯೂ ಜುಂಜುಪ್ಪನ ಕಥೆ ಬಿಚ್ಚಿಕೊಂಡಿದೆ.

ಜುಂಜಪ್ಪನನ್ನು ಕುರಿತ ಸಾಹಿತ್ಯವನ್ನು ಹೇಳುವಾಗ ವಕ್ತೃಗಳು ಹೇಳುವುದು ಜುಂಜಪ್ಪನ ಕಥೆ ಎಂದು. ಜುಂಜಪ್ಪನ ಕಥೆ ಹೇಳಿಸುವುದು, ಜುಂಜಪ್ಪನ ಕಥೆ ಮಾಡುತಾರೆ ಎಂದು ಕರೆಯಲಾಗುವುದು. ಹಾಡುವುದನ್ನು ಜನಪದರು ಕಥೆ ಎಂದೇ ಕರೆಯುವುದು ವಾಡಿಕೆಯಾಗಿದೆ. ಕೋಲಿನ ಮೇಲೆ, ಮಂಗಳಾರತಿ, ಸೋಬಾನೆ, ಕುಟ್ಟಿ ಬೀಸುವ ಪದಗಳಲ್ಲೂ ಜುಂಜಪ್ಪನ ಕಥೆ ವಸ್ತುವಾಗಿರುತ್ತದೆ. ಹಾಗೆಯೇ ಗಣೆ ಊದಿಕೊಂಡು, ಅದನ್ನು ಶೃತಿಯನ್ನಾಗಿ ಮಾಡಿ, ಜುಂಜಪ್ಪನ ಸಮಗ್ರ ಕಥೆಯನ್ನು ಹಾಡುವುದು ಉಂಟು. ಆದರೆ ಇತ್ತೀಚಿನ ದಿನಗಳಲ್ಲಿ ಗಣೆ ಊದುವ, ಹಾಡುವ, ಹಾಡಿದರೂ ಸಮಗ್ರವಾಗಿ ಹಾಡುವವರು ತೀರಾ

ವಿರಳರಾಗುತ್ತಿದ್ದಾರೆ. ಜುಂಜಪ್ಪನ ಕಾವ್ಯ ಹಾಡುಗಾರಿಕೆಯನ್ನು ಎರಡು ಸಂಪ್ರದಾಯವಾಗಿ ವಿಂಗಡಿಸಿಕೊಂಡು, ಅಧ್ಯಯನಕ್ಕೆ ಒಳಪಡಿಸಿಕೊಂಡಿರುವುದುಂಟು. ಸಿರಾ, ಹಿರಿಯೂರು, ಚಳ್ಳಕೆರೆ, ಹೊಳಲ್ಕೆರೆ, ಹೊಸದುರ್ಗ ಈ ಭಾಗದವರು ಹಾಡುವುದನ್ನು ಉತ್ತರ ಸಂಪ್ರದಾಯ ಎಂತಲೂ, ಹಾಗಲವಾಡಿ, ಚಿಕ್ಕನಾಯಕನಹಳ್ಳಿ, ಚೇಳೂರು, ತಿಪಟೂರು ಈ ಭಾಗದವರು ಹಾಡುವುದನ್ನು ದಕ್ಷಿಣ ಸಂಪ್ರದಾಯ ಎಂದು ಕರೆದು, ಅಧ್ಯಯನಕ್ಕೆ ಒಳಪಡಿಸಿದವರು ಪ್ರೊ|| ಜೀಶಂಪ ಅವರು. ಕರ್ನಾಟಕದ ಜಾನಪದ ಕ್ಷೇತ್ರದಲ್ಲಿ ಮೊದಲ ಡಾಕ್ಟರೇಟ್ ಪಡೆದ ಪ್ರಬಂಧ 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು'. ಇದು ಜೀಶಂಪ ಅವರ ಸಂಶೋಧನೆ. ಇದರಲ್ಲಿ ಜುಂಜಪ್ಪನ ಕಾವ್ಯವೂ ಅಧ್ಯಯನಕ್ಕೆ ಒಳಗಾಗಿದೆ. ನಂತರ ಡಾ|| ತೀ.ನಂ.ಶಂಕರನಾರಾಯಣ ಅವರು ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಸಂಶೋಧನೆ, ಕಾಡುಗೊಲ್ಲರ ಸಮಗ್ರ ಸಂಸ್ಕೃತಿ, ಸಮಾಜೋ ಆರ್ಥಿಕ, ಸಾಮಾಜಿಕ ಜನಾಂಗಿಕ ಅಧ್ಯಯನಕ್ಕೆ ಒಳಪಡಿಸಿ, ಅದರ ಭಾಗವಾಗಿ ಜುಂಜಪ್ಪನ ಕಾವ್ಯವನ್ನು ಕುರಿತು ವಿಪುಲ ಆಕರ, ಮಾದರಿ, ಕಥನ, ಹಾಡುಗಾರರ ನೆಲೆ, ಬದುಕು, ಗಣೆ ಸಂಪ್ರದಾಯ ಕುರಿತು ತಲಸ್ಪರ್ಶಿ ಅಧ್ಯಯನ ನಡೆಸಲಾಗಿದೆ. ನಂತರ ಡಾ|| ಕಾಳೇಗೌಡ ನಾಗವಾರ ಅವರು ಕಾಡುಗೊಲ್ಲರ ಹಟ್ಟಿಯನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ನಡೆಸಿದ್ದಾರೆ. ಸಿರಾ ತಾಲ್ಲೂಕಿನ ಬೇವಿನಹಳ್ಳಿ ಇವರ ಅಧ್ಯಯನದ ನೆಲೆ. ಆ ಅಂಗವಾಗಿ ಜುಂಜಪ್ಪನ ಆಚರಣೆ, ಸಂಪ್ರದಾಯಗಳ ಕುರಿತು ಅಭ್ಯಸಿಸಲಾಗಿದೆ. ನಂತರ ಡಾ|| ಮೀರಾಸಾಬಿಹಳ್ಳಿ ಶಿವಣ್ಣನವರು, ಕಾಡುಗೊಲ್ಲ ಬುಡಕಟ್ಟು ವೀರರು. (ಎತ್ತಪ್ಪ-ಜುಂಜಪ್ಪ) ಸಂಶೋಧನಾ ಮಹಾಪ್ರಬಂಧವನ್ನು ಪ್ರಕಟಿಸಿದ್ದಾರೆ. ಇದರಲ್ಲಿಯೂ ಜುಂಜಪ್ಪನನ್ನು ಕುರಿತು ವಿಸ್ತಾರವಾದ ವಿವರಣೆ, ಜನಾಂಗಿಕ ಅಧ್ಯಯನ ಸೊಗಸಾಗಿ ಬಂದಿದೆ. ಜೊತೆಗೆ ಡಾ|| ಶಿವಣ್ಣನವರು ಜುಂಜಪ್ಪನನ್ನು ಕುರಿತು ಬರೆದು ಬಿಡಿ ಬಿಡಿ ಕಥೆಗಳನ್ನು, ಮಯೂರ ಪತ್ರಿಕೆಯಲ್ಲಿ ಕಂತು ಕಂತಾಗಿ ಪ್ರಕಟಿಸಿ, ಜುಂಜಪ್ಪನ ಬಗೆಗೆ ವ್ಯಾಪಕ ಮಾಹಿತಿ ಒದಗಿಸಿದ್ದಾರೆ.

ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಡಾ|| ಚೆಲುವರಾಜು ಜುಂಜಪ್ಪನ ಕಾವ್ಯವನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಇದೊಂದು ವಿಸ್ತೃತ ಕಾವ್ಯವಾಗಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ, ಸಿದ್ಧಗಂಗಯ್ಯ ಕಂಬಾಳ್ 'ಜುಂಜಪ್ಪ' ಎಂಬ ಕಾವ್ಯ, ವಿವರಣಾ ಪುಸ್ತಕ ಪ್ರಕಟಿಸುವ ಮೂಲಕ, ಬುಡಕಟ್ಟು ಅಧ್ಯಯನಕ್ಕೆ ಆಕರ ಒದಗಿಸಿದ್ದಾರೆ.

ನಾನು ಕಳೆದ ನಾಲ್ಕು ದಶಕಗಳಿಂದಲೂ ಜುಂಜಪ್ಪನ ಕಾರ್ಯಕ್ಷೇತ್ರದಲ್ಲಿ ಬೆಳೆದವನು. ಗುಬ್ಬಿ ತಾಲ್ಲೂಕು ಚೇಳೂರಿಗೆ ಸಮೀಪದ ದಿಬ್ಬದಹಳ್ಳಿ ಗೊಲ್ಲರಹಟ್ಟಿ, ಕಾಡುಗೊಲ್ಲರ ಸಾಂಸ್ಕೃತಿಕ ಗ್ರಾಮ. ಇಲ್ಲಿನ ಜನರು, ನನ್ನೂರು ಬೇಡನಕಟ್ಟೆ, ಯಣ್ಣೆಕಟ್ಟೆಯೊಂದಿಗೆ

ಅತ್ಯಂತ ಆತ್ಮೀಯ ಸಂಬಂಧವನ್ನು ಸೌಹಾರ್ದವಾಗಿ ಬಳಸಿಕೊಂಡು ಬಂದಿದ್ದಾರೆ. ಕುರುಬರೊಂದಿಗೆ ಮಾವ, ಕಾಕ, ದೊಡ್ಡಪ್ಪ, ಅಳಿಯ ಹೀಗೆ ಸದಾ ಸಂಭಾವಿಸುತ್ತಲೇ ಸಾಂಸ್ಕೃತಿಕ ಕಾರ್ಯಗಳಲ್ಲಿ ಎರಡೂ ಜನಾಂಗದವರು ಸದಾ ಒಂದಾಗಿ ಬೆಳೆಯುತ್ತಿದ್ದಾರೆ. ಹೆಣ್ಣು ಕೊಡುವುದು, ತರುವುದು ಒಂದನ್ನು ಬಿಟ್ಟರೆ, ಉಳಿದಂತೆ ಆತ್ಮೀಯ ಸಂಬಂಧ ಈ ಭಾಗದಲ್ಲಿ ಗೊಲ್ಲರಲ್ಲಿ, ತಿಗಳರಲ್ಲಿ, ಕುರುಬರಲ್ಲಿದೆ. ಗೊಲ್ಲರಹಟ್ಟಿಯ ಜುಂಜಪ್ಪನ ಜಾತ್ರೆ, ನಾನು ಕಂಡು ಸಂಭ್ರಮಿಸಿದ ಮೊದಲ ಸಾಂಸ್ಕೃತಿಕ ಹಬ್ಬ. ಹಾಗಾಗಿ ಜುಂಜಪ್ಪನ ಪದ, ಗಣೆ ನನಗೆ ಮೊದಲಿನಿಂದಲೂ ಕುತೂಹಲದ, ಆಸಕ್ತಿಯ ಕ್ಷೇತ್ರವಾಗಿ ಬೆಳೆಯುತ್ತಾ ಬಂತು. ಜುಂಜಪ್ಪನನ್ನು ಕುರಿತು ಎತ್ತಿನಯ್ಯರ ಈರಣ್ಣ, ಹಾವಿನ ಚಿಕ್ಕಣ್ಣ, ಬುಡ್ಡರಂಗಣ್ಣ, ಕದರಯ್ಯನವರ ಚಿಕ್ಕಣ್ಣ ಮೊದಲಾದವರು ಪದ ಹೇಳುತ್ತಿದ್ದರು. ಇವರು ಸದಾ ನನಗೆ ಪ್ರೀತಿಪಾತ್ರರೂ ಆಗಿದ್ದರು.

ಕೇಂದ್ರ ಸಾಹಿತ್ಯ ಅಕಾಡೆಮಿ, ಕುವೆಂಪು ಟ್ರಸ್ಟ್, ಹಂಪಿ ಕನ್ನಡ ವಿಶ್ವವಿದ್ಯಾಲಯ ಇತ್ತೀಚೆಗೆ ಕಲ್ಕತ್ತಾದಲ್ಲಿ ಕುವೆಂಪು ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಿತ್ತು. ಯೋಗಾಯೋಗ ಅನ್ನುವಂತೆ ವಿಶ್ರಾಂತ ಕುಲಪತಿ, ಜಾನಪದ ವಿದ್ವಾಂಸರಾದ ಡಾ|| ಬಿ.ಎ. ವಿವೇಕ ರೈ ಅವರು, ನಾನು ನಾಲ್ಕು ದಿನಗಳ ಕಾಲ ಒಂದೇ ಕೊಠಡಿಯಲ್ಲಿ ತಂಗಿದ್ದೆವು. ಜುಂಜಪ್ಪನ ಬಗೆಗೆ ಅವರಿಗೆ ಒಳ್ಳೆಯ ಪರಿಜ್ಞಾನವಿದ್ದು, ನಾನು ಸಿರಾದಲ್ಲಿರುವ ವಿಷಯ ಅವರಿಗೆ ಜುಂಜಪ್ಪನ ಬಗೆಗೆ ಪ್ರಸ್ತಾಪಿಸಲು ಸಹಕಾರಿಯಾಯಿತು. ಈವರೆಗೆ ಜುಂಜಪ್ಪನ ಬಗೆಗೆ ಬಂದಿರುವ ಸಾಹಿತ್ಯವನ್ನು ವಿವರಿಸಿ, ಒಳ್ಳೆಯ ಶುದ್ಧ ಪಠ್ಯದ ಅಗತ್ಯತೆಯನ್ನು ಪ್ರಸ್ತಾಪಿಸಿದರು. ಜುಂಜಪ್ಪನ ಬಗೆಗೆ ಹಲವಾರು ಪಠ್ಯಗಳಿರುವ ಕಾರಣ, ಗದ್ಯದಲ್ಲೂ ಸಾಹಿತ್ಯ ಇರುವ ಬಗೆಗೂ ಚರ್ಚಿಸಿ, ಜಾಗತಿಕ ಕಾಲಮಾನದಲ್ಲಿ ಜುಂಜಪ್ಪನ ಕಾವ್ಯ ಪರಂಪರೆ ಇಲ್ಲವಾಗುತ್ತಿದೆ. ಮೊದಲು ಗದ್ಯ ಪ್ರಕಾರದಲ್ಲಿ ಜುಂಜಪ್ಪ ಸಾಹಿತ್ಯ ಸಂಗ್ರಹಿಸಿ ಅದೂ ಕೂಡ ಒಂದು ಮರೆಯಬಾರದ ದಾಖಲೀಕರಣವಾಗುತ್ತಿದೆ, ಎಂದು ಜುಂಜಪ್ಪನ ಕಥಾ ಸಾಹಿತ್ಯದ ಕಡೆಗೆ ನನ್ನನ್ನು ಸೆಳೆದವರು ಡಾ|| ಬಿ.ಎ. ವಿವೇಕ ರೈ ಅವರು. ಇವರ ಸಲಹೆ ಹಾಗೂ ಈ ವೇಳೆಗಾಗಲೇ ನಾನು ಚಿತ್ರದೇವರು, ಕಾಟಂಲಿಂಗ, ಕಂಬದ ರಂಗ ಹಾಗೂ ನಾನು ಸಂಗ್ರಹಿಸಿದ ಜನಪದ ಕಥನ ಗೀತೆಗಳಿಗೆ ವಕ್ತೃವಾಗಿ ಬೇವಿನಹಳ್ಳಿ, ಹಾಗಲವಾಡಿ, ಚೇಳೂರು, ತುಮಕೂರು ಈ ಭಾಗಗಳ ಕೆಲವರು ಕಾವ್ಯ ಹಾಡುಗಾರರು, ಕಥೆ ಹೇಳುವವರ ಸಂಪರ್ಕವಿತ್ತು. ಸಾವಿರದ ಒಂಭೈನೂರ ತೊಂಬತ್ತರಲ್ಲೇ ನಾನು ಸಿರಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಕ್ಯಾಂಪನ್ನು ಕಳುವಾರಹಳ್ಳಿಯಲ್ಲಿ ನಡೆಸಿದಾಗ, ಅಲ್ಲಿನ ತಳವಾರ ತಮ್ಮಣ್ಣ, ಮಣೆಗಾರ ಕದುರಪ್ಪ, ಗಣೆ ಬಿಟ್ಟು ಕಥೆಯ ರೂಪದಲ್ಲಿ ಜುಂಜಪ್ಪನ ಕಥೆಯನ್ನು ನನಗೆ ಹೇಳಿದ್ದರು. ಸಾಂಸ್ಕೃತಿಕ

ಕಾರ್ಯಕ್ರಮದಡಿಯಲ್ಲೂ ಶಿಬಿರಾರ್ಥಿಗಳಿಗೆ ಜುಂಜಪ್ಪನ ಕಥೆ ಮಾಡಿದ್ದರು. ಬೇವಿನಹಳ್ಳಿಯ ಕೊರ್‍ಲೆ ತಿಮ್ಮಣ್ಣ (ಪದ ಹೇಳೋ ತಿಮ್ಮಣ್ಣ) ವಿಭೂತಿ ತಿಮ್ಮಣ್ಣ ಆ ಮುಂಚೆಯೇ ದೇವರಹಟ್ಟಿಯ ನಂಜಪ್ಪನಿಂದಲೂ ಜುಂಜಪ್ಪನ ಪದಗಳನ್ನು, ಕತೆಯನ್ನು ನಾನು ಕೇಳಿದ್ದೆ. ಲಕ್ಕನಹಳ್ಳಿ ಗೊಲ್ಲರಹಟ್ಟಿಯ ನಿಂಗಜ್ಜ (ಜಾನಪದ ಪ್ರಶಸ್ತಿ ಪುರಸ್ಕೃತ ಕಾವ್ಯ ಹಾಡುಗಾರ) ಹಾಗೂ ಇಕ್ಕನೂರು ನಾಡಿಗರ ಬಾವಿಯ ಪೂಜಾರಿ ನಿಂಗಜ್ಜ ಅವರೂ ನನಗೆ ಜುಂಜಪ್ಪನ ಬಗೆಗೆ ಕಥೆ ಹೇಳಿದ್ದರು.

ನಾನು ಸಿರಾಕ್ಕೆ ಉಪನ್ಯಾಸಕನಾಗಿ ಬಂದ ಮೇಲೆ, ನನಗೆ ಅತ್ಯಂತ ಆತ್ಮೀಯರಾಗಿ, ಬುಡಕಟ್ಟು ಅಧ್ಯಯನ ಒಳಸುಳಿವು, ಮಾಡಬೇಕಾದ ಕೆಲಸದ ಬಗೆಗೆ ಮಾಹಿತಿ ನೀಡುತ್ತಲೇ ಬಂದವರು ಹೊನ್ನಗಾನಹಳ್ಳಿಯ ಕೆ.ಚಿಕ್ಕಣ್ಣ ಅವರು. ಎಂ.ಆರ್.ಡಿ. ಸ್ನಾತಕೋತ್ತರ ಪದವೀಧರರಾದರೂ, ಕಾಡುಗೊಲ್ಲರೂ ಸೇರಿದಂತೆ ಗ್ರಾಮೀಣ ಪ್ರಗತಿಪರ ಚಿಂತನೆ, ಅಭಿವೃದ್ಧಿಯ ಹಾದಿ ಹಿಡಿದು ಶ್ರಮಿಸುತ್ತಿರುವ ಅಪರೂಪದ ಜನಸೇವಕ. ಅವರು ಜುಂಜಪ್ಪನ ಒಕ್ಕಲು. ತಮ್ಮನ್ನು ಜುಂಜಪ್ಪನ ಅಣ್ಣ-ತಮ್ಮರು ಅಂತಲೇ ಕರೆದುಕೊಳ್ಳುತ್ತಾರೆ. ನಾನು ಕಾಡುಗೊಲ್ಲರ ಸಂಸ್ಕೃತಿಗೆ ಸಂಬಂಧಿಸಿದ ಕೃತಿ ಪ್ರಕಟಿಸಿದಾಗಲೆಲ್ಲಾ, ಈ ವರ್ಗಕ್ಕೆ ಸೇರಿದ ವಿದ್ಯಾವಂತರೂ ಮಾಡದ ಕೆಲಸ ಮಾಡುತ್ತಿದ್ದೀರಿ, ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾ ಪ್ರಜ್ಞಾವಂತರ ಗಮನಕ್ಕೆ ತರುವ ಮೂಲಕ, ನನ್ನ ಕೆಲಸಗಳಿಗೆ ಉತ್ತೇಜಿಸುತ್ತಾ ಬರುತ್ತಿದ್ದಾರೆ. ಅವರು ಜುಂಜಪ್ಪನ ಬಗೆಗೆ ಕಥಾ ಮಾದರಿಯ ಪುಸ್ತಕ ಬರಬೇಕು, ನಮ್ಮ ಕಾವ್ಯ ಹಾಡುಗಾರಿಕೆ ಬೇರೆಯವರಿಗೆ ಅರ್ಥವೂ ಆಗೋಲ್ಲ, ತಿಳಿಯುವ ಹಾಗೆ ಹೇಳೋ ಜಾಣ್ಮೆ ಕಡಿಮೆಯಾಗುತ್ತಿದೆ. ಗದ್ಯದಲ್ಲಿ ಬಂದರೆ ಉಳಿದು ಜುಂಜಪ್ಪನ ಗ್ರಹಿಕೆಗೆ ಸಹಾಯವಾಗುತ್ತದೆ ಎಂದು ವಿವರಿಸಿ ಹೇಳಿದವರು ಶ್ರೀ ಹೊನ್ನಗಾನಹಳ್ಳಿ ಕೆ.ಚಿಕ್ಕಣ್ಣ. ನಂತರ ಕಾಡುಗೊಲ್ಲರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರೂ, ಹಿರಿಯ ಕೆಇಬಿ ಅಧಿಕಾರಿಯೂ ಆಗಿರುವ ಹಾಗೂ ಜುಂಜಪ್ಪ ಕಾವ್ಯವನ್ನು ಸೊಗಸಾಗಿ ಹಾಡುವ ಚಂಗಾವರದ ಕರಿಯಪ್ಪ ಅವರು ಬೇವಿನಹಳ್ಳಿಯ ಶಿಕ್ಷಕ ನಾಗಣ್ಣನವರು ಇವರ ಪ್ರೋತ್ಸಾಹ, ಉತ್ಸಾಹವೇ ಈ ಪುಸ್ತಕದ ಈ ರೂಪಕ್ಕೆ ಬಹುತೇಕ ಕಾರಣ.

ಈ ಕೆಲಸ ನನ್ನಿಂದ ಆಗುತ್ತಿದೆ ಎಂದು ಹೇಗೋ ತಿಳಿದುಕೊಂಡು ಇದೊಂದು ಆಗಲೇಬೇಕಾದ ಕೆಲಸ. ಕೇವಲ ಕಾಡುಗೊಲ್ಲ ಜನಾಂಗಕ್ಕೆ ಮಾತ್ರವಲ್ಲದೆ ಇಂಥ ಒಬ್ಬ ಮಹಾಪುರುಷನ ಕಥೆ, ಸಮಕಾಲೀನದ ಆಚೆಗೂ ಉಳಿಯಬೇಕು ಎಂದು ಜುಂಜಪ್ಪನ ಮೂರು ತಲೆಮಾರಿನವವ ಕಥೆಯ ಹಂದರ, ಜೆರಿಮಲೆಯ ಪ್ರದೇಶ, ಸ್ಥಳ ನಿಗದಿ, ಆ ಸುತ್ತಮುತ್ತಲಿನ ಕ್ಷೇತ್ರಕಾರ್ಯಕ್ಕೆ ಹಾದಿ ತೋರಿದವರು ಚಿತ್ರದುರ್ಗದ ಶ್ರೀ ಯಾದವ

ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ಕೃಷ್ಣಯಾದವ ಸ್ವಾಮೀಜಿಯವರು. .

ಜುಂಜಪ್ಪ-ಎತ್ತಪ್ಪರೂ ಸೇರಿದಂತೆ ಕಾಡುಗೊಲ್ಲರ ಪುರಾಣ, ಸಾಂಸ್ಕೃತಿಕ ವೀರರ ನೆಲೆ, ಗೋತ್ರ, ಕಾಲಘಟ್ಟದ ಬಗೆಗೆ ಶ್ರೀ ಕೃಷ್ಣಯಾದವಾನಂದ ಶ್ರೀಗಳವರಿಗೆ ಖಚಿತ ತಿಳುವಳಿಕೆ ಇದೆ. ಇವರ ಸರಳ, ಹೃದಯವಂತ ಆದರಾನುಕರಣೆ, ವಿಷಯ ಮಂಡನೆ ನನಗೆ ಸಜ್ಜನಿಕೆಯ ಪಾಠ ಕಲಿಸಿದಂತಿದೆ. ಅವರ ಮಾರ್ಗದರ್ಶನದಿಂದ ನಾನು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಜೆರಿಮಲೆ, ಉಜ್ಜನಿ, ಅಡವೀಸೂರನಹಳ್ಳಿ, ಹಯಕಲ್ಲು, ಶೂಲದರಹಳ್ಳಿ ಈ ಗ್ರಾಮಗಳ ಪರಿಸರದಲ್ಲಿ ತಿರುಗಾಡಲು ಸಾಧ್ಯವಾಯಿತು. ಈ ಸಂದರ್ಭದಲ್ಲಿ ಹಿರೇಕುಂಬಳಗುಂಟೆಯ ಉಪನ್ಯಾಸಕ ಡಾ|| ಎಂ.ಹಾಲಪ್ಪ ಅವರು ನನಗೆ ಅಮೂಲ್ಯ ಸಲಹೆ, ಕಾಡುಗೊಲ್ಲರ ಸಾಂಸ್ಕೃತಿಕ ನೆಲೆಗಳನ್ನು ತಿಳಿಸಿಕೊಟ್ಟು ಉಪಕರಿಸಿದರು.

ಕೂಡ್ಲಿಗಿ ಬಳ್ಳಾರಿ ಜಿಲ್ಲೆಯ ತಾಲ್ಲೂಕು ಕೇಂದ್ರ. ಜೆರಿಮಲೆ ಗ್ರಾಮ ಇಲ್ಲಿಂದ 8 ಕಿ.ಮೀ. ದೂರದಲ್ಲಿದೆ. ಇದರ ಆಸುಪಾಸಿನ ಅಡವಿಸೂರನಹಳ್ಳಿ, ಹಯಕಲ್ಲು, ಸೂಲದರಹಳ್ಳಿ, ಹಿರೇಕುಂಬಳಗುಂಟೆ ಇಲ್ಲೆಲ್ಲಾ ಕಾಡುಗೊಲ್ಲರು ವ್ಯಾಪಕವಾಗಿ ನೆಲೆಸಿದ್ದಾರೆ. ಜುಂಜಪ್ಪನ ಬಗೆಗೆ ಅಪಾರ ಗೌರವ ಹೊಂದಿದ್ದಾರೆ. ಇಲ್ಲಿಯೂ ಜುಂಜಪ್ಪ, ಚಿತ್ರದೇವರ ದೇವಾಲಯಗಳಿದ್ದು ನಾವು ಜುಂಜಪ್ಪನ ಪರಂಪರೆಯವರು ಎಂದು ಹೇಳುತ್ತಾರೆ. ಮೀಸಲು ಹಾಲು, ದೀಪ ಏರಿಸುವುದು ಮೊದಲಾದ ಕಾಡುಗೊಲ್ಲರ ಸಾಂಸ್ಕೃತಿಕ ಆಚರಣೆ, ಧಾರ್ಮಿಕ ವಿಧಿ ವಿಧಾನಗಳು ಅಚ್ಚುಕಟ್ಟಾಗಿ ನಡೆಯುತ್ತವೆ. ಈ ಭೂಗೋಳಿಕ ವ್ಯಾಪ್ತಿಯೂ ಗುಡ್ಡ, ಗಿಡ, ಕುರುಚಲು ಕಾಡಿನ ಭಾಗವಾಗಿದ್ದು ಹುಲ್ಲುಗಾವಲಿನ ಪ್ರದೇಶವಾಗಿದೆ. ಜುಂಜಪ್ಪನ ಕಾವ್ಯಪರಂಪರೆಯು ಆರಂಭವಾಗುವುದೇ ಜೆರಿಮಲೆಯಿಂದ. ನಂತರ ಅಲ್ಲಿಂದ ದಕ್ಷಿಣಮುಖವಾಗಿ ಹುಲ್ಲು ನೀರಿಗಾಗಿ ಜುಂಜಪ್ಪನ ಪೂರ್ವಿಕರು ವಲಸೆ ಬಂದಿರುವುದು ತಿಳಿದುಬರುತ್ತದೆ.

ಜುಂಜಪ್ಪನ ಕಾವ್ಯದಲ್ಲಿ, ಕಥೆಯಲ್ಲಿ ಹೆಚ್ಚಾಗಿ ಪ್ರಸ್ತಾಪವಾಗುವ ಸ್ಥಳಗಳು ತುಮಕೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವಂತಹವುಗಳೇ ಹೆಚ್ಚು. ದೇವರಹಟ್ಟಿ, ಸಿರಾ ತಾಲ್ಲೂಕು ಬೇವಿನಹಳ್ಳಿ ಹೊಂದಿಕೊಂಡಂತಿರುವ ಗ್ರಾಮ. ಕಾಡುಗೊಲ್ಲರೇ ವಾಸಿಸುವ ಸ್ಥಳ. ಮರಡಿಗುಡ್ಡ, ಚಂಗಾವರ, ಗೌಡಗೆರೆ, ಮದ್ದಕ್ಕನಹಳ್ಳಿ, ಪುರಲೇಹಳ್ಳಿ, ಮೊಸರುಕುಂಟೆ, ಹುಲಿಕುಂಟೆ, ಬೇವಿನಹಳ್ಳಿ, ಸಿರಾ, ಹಾಲ್ಕೂರು, ಬಿಜ್ಜಂಬೆಳ್ಳ, ಪರಸವ್ವನ ಕೆರೆ ಈ ಗ್ರಾಮಗಳು ಸಿರಾ ತಾಲ್ಲೂಕಿನ ವ್ಯಾಪ್ತಿಗೆ ಸೇರಿದ್ದರೆ ಚೇಳೂರು, ಸಣಬನಹಳ್ಳಿ, ಮಂಚಲದೊರೆ ಇವೆಲ್ಲಾ ಗುಬ್ಬಿ ತಾಲ್ಲೂಕಿಗೆ ಸೇರಿದವುಗಳು. ವೇಣುಕಲ್ಲು, ಕರಿಯಾಲ, ಹಿರಿಯೂರು, ಜವಗೊಂಡನಹಳ್ಳಿ ಇವು ಹಿರಿಯೂರು ಪ್ರದೇಶಕ್ಕೆ ಸೇರಿವೆ. ಜುಂಜಪ್ಪನ ಕಥೆಯಲ್ಲಿ ಮೇಲಿಂದ

ಮೇಲೆ ಪ್ರಸ್ತಾಪವಾಗುವ ಗೌರಸಂದ್ರ ಹಾಗೂ ಸಾಣೆಕೆರೆ-ಚಳ್ಳಕೆರೆ ತಾಲ್ಲೂಕಿಗೆ ಸೇರಿದವುಗಳು. ಆದರೆ ತಾಳೆದುರ್ಗಿ ಕಾಡು ಯಾವ ಭಾಗದಲ್ಲಿದೆ ಎಂಬುದು ತಿಳಿಯುತ್ತಿಲ್ಲ. ಆದರೂ ಕಾಡುಗೊಲ್ಲರ ಒಂದು ಪಿರಕ ಕಂಬೇರಗೊಲ್ಲರು, ತಾಳೆದುರ್ಗಿ ಕಾಡನ್ನು ಮಲೆನಾಡಿಗೆ ಹೋಲಿಸಿ, ಎದುರೆತ್ತಿ ಆರತಿ, ಕೋಳಿ ಬಲಿಕೊಡುವ ಆಚರಣೆ ಇಂದಿಗೂ ಇದೆ. ಇನ್ನು ಪಾವಗಡ ಭಾಗದ ಮಂಗಳವಾಡದ ಮಾಟಗಾರರು ಹಾಗೂ ಸೊಂಡೂರಿನ ಬೊಮ್ಮಕ್ಕಳ ಪ್ರಸಂಗ ಕುತೂಹಲಕಾರಿ ಕಥೆಯಾಗಿದ್ದು, ಸೊಂಡೂರು, ಬಳ್ಳಾರಿ ಜಿಲ್ಲೆಯ ಸೊಂಡೂರು ತಾಲ್ಲೂಕು ಕೇಂದ್ರ ಎಂದು ತಿಳಿದುಬರುತ್ತದೆ. ಜುಂಜಪ್ಪನ ಪೂರ್ವಿಕರು ಬಳ್ಳಾರಿ ಕಡೆಯವರು ಎಂಬುದು ತಿಳಿದುಬಂದಿದ್ದು ಪೂರಕವಾಗಿ ಒಂದೇ ಒಂದು ಕತೆ ಮಾತ್ರ ಬಳ್ಳಾರಿ ಜಿಲ್ಲೆಗೆ ಸಂಬಂಧ ಕಲ್ಪಿಸುತ್ತದೆ.

ಒಬ್ಬರು ಗಣೆಯನ್ನು ಊದುವ, ಅದರ ಸೊಲ್ಲು ಹಿಡಿದು ಸೊಲ್ಲೆತ್ತಿ ಇನ್ನೊಬ್ಬರು ಹಾಡುವುದು ಗಣೆ ಕಾವ್ಯದ ಸ್ವರೂಪ. ನಾನು ಸಂಪರ್ಕಿಸಿದ ಇಲ್ಲಿನ ಕಥೆಗಾರರು ಈ ಎರಡೂ ಮಾದರಿಯವರು. ಗಣೆಯ ಮೇಲೂ ಕಾವ್ಯ ಹಾಡುತ್ತಾರೆ. ಗಣೆ ಬಿಟ್ಟು ಕಥೆಯನ್ನು ಹೇಳುತ್ತಾರೆ. ಆ ಬಗೆಯ ಕಥೆಗಾರರಾಗಿ ಈ ಸಂಗ್ರಹಕ್ಕೆ ಸಹಕರಿಸಿದವರು ದಿಬ್ಬದಹಳ್ಳಿಯ ಹಾವಿನಚಿಕ್ಕಣ್ಣ, ಬೇವಿನಹಳ್ಳಿಯ ಕೊರ್ಲೆ ತಿಮ್ಮಣ್ಣ, ಕಳುವಾರಹಳ್ಳಿಯ ತಳವಾರ ತಿಮ್ಮಣ್ಣ, ಮಣೆಗಾರ ಕದುರಯ್ಯ, ಮದಲೂರು ಗೊಲ್ಲರಹಟ್ಟಿಯ ದಾಸಪ್ಪ, ಇಕ್ಕನೂರು ನಾಡಿಗರಬಾವಿ ಪೂಜಾರಿ ನಿಂಗಣ್ಣ ಈ ಆರು ಜನರೂ ಅವರವರಿಗೆ ಗೊತ್ತಿರುವ ಕಥೆಗಳನ್ನು ಹೇಳಿದರು. ಜೊತೆಗೆ ಕುಣಿಗಲ್ ಲಿಂಗಣ್ಣ, ಗಿಡ್ಡಾರೇಗೌಡ ಮತ್ತು ಯಜಮಾನ್ ಪೂಜಾರಿ ಚಿತ್ತಯ್ಯ ಇವರುಗಳು ಜುಂಜಪ್ಪನ ಕಥೆಯ ಬಗೆಗೆ ಒಂದಿಷ್ಟು ಮಾಹಿತಿಯನ್ನು ಒದಗಿಸಿದರು. ಚೇಳೂರು-ಹಾಗಲವಾಡಿ ಈ ಭಾಗದ ಕಥೆಗಾರರು ಹಾಗಲವಾಡಿ ಜುಂಜಪ್ಪನೆಂದು ಹೇಳುತ್ತಾ, ಹುಲಿಕುಂಟೆ ತಮ್ಮಣ್ಣ, ಸಾಣೆಕೆರೆ ಪುಟ್ಟಣ್ಣ, ಸೊಂಡೂರು ಬೊಮ್ಮಕ್ಕ ಈ ಮೊದಲಾದ ಪ್ರಸಂಗಗಳು ಅರಿವಿಲ್ಲ. ಒಂದೆರಡು ಸೊಲ್ಲು ಹೇಳಿ, ನಮ್ಮ ಹಿರಿಯರು ಹೇಳುತ್ತಿದ್ದರು, ಅವೆಲ್ಲ ಈಗ್ಯಾರಿಗೆ ಬರುತ್ತೆ ಎಂದು ಸುಲಭವಾಗಿ ಜಾರಿಕೊಳ್ಳುವುದು ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಯಿತು. ಹಾಗಾಗಿ ನಾನು ಸಂದರ್ಶಿಸಿದ ಕತೆಗಾರರಲ್ಲಿ ಹಲವು ಬಗೆಯ ವೈವಿಧ್ಯತೆ, ಕಥಾ ನಿರೂಪಣಾ ಸಾಮರ್ಥ್ಯ, ಪ್ರತಿಭಾವಂತಿಕೆ ಎದ್ದು ಕಾಣುತ್ತಿತ್ತು. ಕೆಲವೊಮ್ಮೆ ಬೇರೆಯವರ ಅಭಿಪ್ರಾಯವನ್ನು ಸ್ವೀಕರಿಸಲಾರದ, ಒಪ್ಪಲಾರದ ಸಂದರ್ಭಗಳನ್ನು ನಾನು ಗಮನಿಸಿದೆ ಮತ್ತು ಪ್ರಧಾನವಾಗಿ ಆರು ಜನ ಪ್ರತ್ಯೇಕ ಪ್ರತ್ಯೇಕವಾಗಿ ಕಥೆ ಹೇಳಿದರೂ ಕೆಲವೊಮ್ಮೆ ಕಥೆಯ ಹಂದರ ಒಂದೇ ತರಹದಲ್ಲಿತ್ತು. ಹಾಗಾಗಿ ಪುನರಾವರ್ತನೆಗೆ ಅವಕಾಶವಿಲ್ಲದೆ, ಒಂದೇ ಆಶಯದ ಹಾಗೂ ಜುಂಜಪ್ಪನಿಗೆ ಸಂಬಂಧಿಸಿದ ಕಥೆಗಳನ್ನು

ಮಾತ್ರ ಸಂಗ್ರಹಿಸಿಕೊಂಡಿದ್ದೇನೆ.

ಪ್ರಸ್ತುತ ಸಂಕಲನದಲ್ಲಿ ಜುಂಜಪ್ಪನ ಪೂರ್ವಿಕರಾದ ಅಂದರೆ, ತಾತ ದೇವರ ದೈಮಾರ, ತಂದೆ ಕೆಂಗರುಮಲ್ಲೇಗೌಡ ಹಾಗೂ ಜುಂಜಪ್ಪ ಈ ಮೂರು ತಲೆಮಾರಿನವರ ಕಥಾ ಪರಂಪರೆ ಕುರಿತ ವಸ್ತುವಿಗೆ ಮಾತ್ರ ಇಲ್ಲಿನ ಸಂಗ್ರಹವನ್ನು ಮಿತಿಗೊಳಿಸಿದ್ದೇನೆ. ಕಾಡುಗೊಲ್ಲರ ಪುರಾಣದ ಒಳಗೊಂದು ಜುಂಜಪ್ಪನ ಕಥೆಯಾಗಿ ಕಥೆ ಪೇತಲಾಗಬಾರದೆಂಬ ಪ್ರೊ|| ಬಿ.ಎ.ವಿವೇಕ ರೈ ಅವರ ಸಲಹೆಯನ್ನು ಎಚ್ಚರಿಕೆಯಿಂದ ನನ್ನ ಕ್ಷೇತ್ರಕಾರ್ಯದ ಹಾದಿ ಉದ್ದಕ್ಕೂ ಪಾಲಿಸುತ್ತಾ ಬಂದಿದ್ದೇನೆ. ಓದುಗರಿಗೆ, ಮಕ್ಕಳಿಗೆ ಸುಲಭವಾಗಿ ನೆನಪಿಟ್ಟುಕೊಳ್ಳಲೆಂಬ ಆಶಯದಿಂದ ಪ್ರತಿ ಭಾಗಕ್ಕೂ ಪುಟ್ಟ ಪುಟ್ಟ ಶೀರ್ಷಿಕೆಗಳನ್ನು ನೀಡಲಾಗಿದೆ. ಇದು ಪರಮಶ್ರೇಷ್ಠವಾದ ಕೆಲಸವಲ್ಲ. ಜುಂಜಪ್ಪನ ಮೌಖಿಕ ಸಾಹಿತ್ಯ ಸಂಗ್ರಹದ ಗದ್ಯ ಪ್ರಕಾರದ ಆರಂಭಿಕ ಕೆಲಸವಾದುದರಿಂದ ಎಲ್ಲರ ಅಭಿಪ್ರಾಯಕ್ಕೆ ಸದಾ ಸ್ವಾಗತವಿದೆ.

**ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ**
ಕನ್ನಡ ಪ್ರಾಧ್ಯಾಪಕ
ಸ.ಪ್ರ.ದ ಕಾಲೇಜು, ಸಿರಾ



# ಜುಂಜಪ್ಪನ ಕಥೆ ಹೇಳಿದ

*ಶ್ರೀ ದಿ|| ದಿಬ್ಬದಹಳ್ಳಿ ಹಟ್ಟಿ ಆವಿನ ಚಿಕ್ಕಣ್ಣ*

*ಶ್ರೀ ಬೇವಿನಹಳ್ಳಿ ಕೊರ್ಲೆ ತಿಮ್ಮಣ್ಣ*

*ಶ್ರೀ ಇಕ್ಕನೂರು ಪೂ|| ನಿಂಗಣ್ಣ*

*ಶ್ರೀ ಮೊದಲೂರು ದಾಸರಹಳ್ಳಿ ದಾಸಣ್ಣ*

*ದಿ|| ನಿಂಬೆಕಟ್ಟೆ ಕುಣಿಗಲ್ ನಿಂಗಣ್ಣ*

*ದಿ|| ಶ್ರೀ ಕಳುವೋರಹಳ್ಳಿ ತಳವಾರ ಬೊಮ್ಮಣ್ಣ*

*ಶ್ರೀ ಕಳುವೋರಹಳ್ಳಿ ಮಣೆಗಾರ ಕದುರಪ್ಪ*

*ಯಜಮಾನ್ ಸಣ್ಣಚಿತ್ತಪ್ಪ ಓಜಗುಂಟೆ*

*ಶ್ರೀ ಗಿಡ್ಡಾರೇಗೌಡ, ಓಜಗುಂಟೆ*

*ಶ್ರೀ ಕೆ.ರಂಗನಹಳ್ಳಿ ಜುಂಜಣ್ಣ*

ಈ ಅಪೂರ್ವ ಜಾನಪದ

ಕಲಾಸಂಪನ್ನರಿಗೆ

ಈ ಕೃತಿಯನ್ನು ಅರ್ಪಿಸುತ್ತಿದ್ದೇನೆ.

# ಪರಿವಿಡಿ


| | | |
|---|---|---|
| 1 | ದೇವರ ದೈಮಾರ | 2 |
| 2 | ಕಂಬಕ್ಕ ಗಂಡನನ್ನ ಕೂಡಿದಳು | 7 |
| 3. | ಗುಂಗಾರಿ ಹುಳವಾದ ಕಂಬಕ್ಕ | 9 |
| 4 | ಕೆಂಗರು ಮಗುವಿನ ಜನನ | 13 |
| 5 | ಪಾರ್ವತಿ ಕಿವಿಕರಣಕ್ಕೆ ಕೆಂಗರು ಮಗುವಿನ ಅಳಲು | 15 |
| 6 | ಮಗು ಸಾಕಿದ ವೃಕ್ಷದೇವತೆ | 17 |
| 7 | ಕೊರವಂಜಿ ತೋರಿದ ಕರುಳ ಕುಡಿ | 19 |
| 8 | ಬಂಜೆಯರು ಬಸಿರಾದರು | 22 |
| 9 | ಕಾಡುಪಾಲಾದ ಕೆಂಗುರ ಮಗು | 23 |
| 10 | ಅಂಬೆರಾಯ-ತುಂಬೆರಾಯ | 25 |
| 11 | ಗೊಲ್ಲರ ಮಗು ಕುಂಚಿಟಿಗರ ಮಗನಾದ | 30 |
| 12 | ಮಾರನೋರು ಕರಡೇರ ಗೊಲ್ಲರಾದರು | 32 |
| 13 | ಎತ್ತಪ್ಪನ ಸೃಷ್ಟಿ | 36 |
| 14 | ಕೆಂಗುರ ಮಲ್ಲ ದನ ಸಾಕಬೇಕೆಂದ | 37 |
| 15 | ಕಲ್ಯಾಣಿಗೆ ಕರ ಎಸೆದ ಮಲ್ಲೇಗೌಡ | 39 |
| 16 | ಸಂಜೆ ಮನೆ ನಿದ್ದೆ ರಾತ್ರಿ ಗೂಡಿನ ನಿದ್ದೆ | 41 |
| 17 | ತಳುಕಿನ ಗುಡ್ಡದ ಬಯಲಲ್ಲಿ ದನದ ಗೂಡು | 43 |
| 18 | ದೊಡ್ಡಕ್ಕಜ್ಜಿ ಹಡೆದಳು ನಾಲ್ಕು ಮಕ್ಕಳನ್ನ | 44 |
| 19 | ದೊಡ್ಡಾಲನಿಗೆ ಮದುವೆ ಬಯಕೆ | 46 |
| 20 | ಮಲ್ಲೇಗೌಡನ ಸುಳಿವು ನೀಡಿದ ಮಾರಕ್ಕ | 47 |
| 21 | ಅಣ್ಣನ ಪಾದ ಹಿಡಿದ ತಮ್ಮಗಳು | 49 |
| 22 | ಕುಂಚಿಟಿಗ ಗೌಡ ಗೊಲ್ಲರ ಮನೆ ಹೆಣ್ಣಿಗೆ ಹೋದ | 50 |
| 23 | ಕರುಣಿಸಿದಳು ಮಾರೆಕ್ಕ ಕಂಬೇರ ಹೆಣ್ಣು | 51 |
| 24 | ಮಡದಿ ಮೋಹ ಮರೆತ ಕೆಂಗರು ಮಲ್ಲೇಗೌಡ | 53 |
| 25 | ಗಂಡನ ಮನೆ ಸೇರಿದ ಚಿನ್ನಮ್ಮ | 55 |
| 26 | ಬಂಜೆ ಕೈಯಾಗಳ ಭಿಕ್ಷೆ ಬೇಡೆಂದ ಜೋಗಿ | 56 |

| | | |
|---|---|---|
| 27 | ಬಂಜೆಂಬ ಶಬ್ದ ನೀಗಪ್ಪ | 57 |
| 28 | ಗರ್ಭದೊಳಗಣ ಶಿಶು ಮಾತಾಡಿತು | 60 |
| 29 | ಬೆನ್ನಾಗೆ ಮೂಡಿದನು ಮನೆ ಸ್ವಾಮಿ ಜುಂಜಪ್ಪ | 62 |
| 30 | ಚಿನ್ನಮ್ಮನಿಗೆ ಹಾದರದ ಪಟ್ಟ | 64 |
| 31 | ಚಿತ್ತಮ್ಮಳ ಗರ್ವ | 66 |
| 32 | ಪತಿವ್ರತೆಗೆ ಅವಮಾನ ಪಾಪದ ಬಾಯಿಗೆ ಮಣ್ಣು | 70 |
| 33 | ಜುಂಜಪ್ಪ ಅಂಬ್ತಾ ಹೆಸರಿಟ್ಟರು | 72 |
| 34 | ಮಹಿಮೆ ತೋರಿದ ಜುಂಜಪ್ಪ | 73 |
| 35 | ಒಂದಾದ ಸತಿಪತಿಯರು | 75 |
| 36 | ಮಾರಮ್ಮನ ಜಾತ್ರೆ, ಮಲ್ಲೇಗೌಡನ ಸಾವು | 76 |
| 37 | ಬಡತನಕ್ಕೆ ಹೆದರಿದ ಸಿನ್ನಮ್ಮ | 78 |
| 38 | ಮಂಡಗಳ್ಳಿ ಕಾಡಲ್ಲಿ ಚಿನ್ನಮ್ಮನ ವಾಸ | 79 |
| 39 | ಅಡವಿ ಸೊಪ್ಪು ವಿಷವಾಯಿತು | 80 |
| 40 | ಜವಗೋನಹಳ್ಳಿ ಗುಡ್ಡದಾಗೆ ಸೌದೆ ಕಡಿದಳು | 81 |
| 41 | ತವರು ಸೇರಿದ ಚಿನ್ನಮ್ಮ | 83 |
| 42 | ಕಟಕಟೆಯಲ್ಲಿ ಸಿನ್ನಮ್ಮ | 84 |
| 43 | ತಾಯಿ-ಮಕ್ಕಳ ನ್ಯಾಯ | 86 |
| 44 | ಕಳುವೊರಹಳ್ಳೀಲಿ ಜುಂಜಪ್ಪನ ಅರಮನೆ | 92 |
| 45 | ಮಾರಕ್ಕನ ಮದುವೆ | 94 |
| 46 | ಗಂಡನ ಮನೆಯಲ್ಲಿ ಮಾರಕ್ಕ | 96 |
| 47 | ಕರು ಕೊಟ್ಟ ತಮ್ಮಗಳು | 97 |
| 48 | ಹೊಟ್ಟೆಕಿಚ್ಚಾದ ಸೋದರ ಮಾವುಗಳು | 99 |
| 49 | ಶಿವನೂ ಜುಂಜಪ್ಪನಿಗೆ ಕ್ರೂರನಾದ | 100 |
| 50 | ಜುಂಜಪ್ಪನಿಗೆ ಮಾಟ | 101 |
| 51 | ಮಾಯಕಾರ ಜುಂಜಪ್ಪನಿಗೆ ಮಾಯಾದ ಸುಖನಿದ್ರೆ | 106 |
| 51 | ಗುಡ್ಡದ ರಂಗಪ್ಪನ ಉಪದೇಶ | 107 |
| 52 | ಮಾಟದ ಕರು ಮನೆಗಾತ್ರ ಬೆಳೆಯಿತು | 113 |
| 53 | ಬಡಮ್ಮೈಲನ ಸೇಡು | 116 |
| 54 | ಹುರುಳು ಹಾರಿದ ಬಡಮ್ಮೈಲ | 118 |

| | | |
|---|---|---|
| 55 | ಮೈಲಣ್ಣನ ಹುಲ್ಲು-ನೀರು ಹುಡುಕಾಟ | 120 |
| 56 | ಹುಲಿಯ ಕೊಂದ ಜುಂಜಪ್ಪ | 122 |
| 57 | ಕೊರವಂಜಿ ತೋರಿದ ಹುಲ್ಲುಗಾವಲು | 123 |
| 58 | ಚೇಳೂರು ಕಾವಲಾಗೆ ಜುಂಜಪ್ಪನ ದನ | 125 |
| 59 | ಚೇಳೂರು ರಂಗಣ್ಣ-ಜುಂಜಪ್ಪನ ಭೇಟಿ | 127 |
| 60 | ಚೇಳೂರು ಬೀದಿಗೆ ಬಡಮೈಲ | 131 |
| 61 | ಬಡಮೈಲ ಬಂಧಿಯಾದ | 135 |
| 62 | ಉರಿಗಣ್ಣಾಗೆ ಒಡಮೂಡಿದ ಓಂಕಾರ | 138 |
| 63 | ಚೇಳೂರು ಕೋಟೆ ಪುಡಿಪುಡಿ | 140 |
| 64 | ಚೇಳೂರು ಆಳಿದ ವೀರ ಜುಂಜಪ್ಪ | 142 |
| 65 | ತಲೆಮಗನಾದ ಮಾದಿಗರ ಈರೋಬ | 148 |
| 66 | ದೀಪ ಏರಿಸೋ ಹಬ್ಬ | 151 |
| 67 | ಸತ್ತು ಬದುಕಿದ ದೊಡ್ಡಕ್ಕ | 164 |
| 68 | ಹುಲ್ಲು ತೋರಿದ ಹುಲ್ಲೇಕರು | 170 |
| 69 | ಸಾಣೆಕೆರೆಯಲ್ಲಿ ಕಂಡ ಜುಂಜಪ್ಪ | 175 |
| 70 | ಬೇತಾಳಗಳು ಬೆದರ್ಯಾವು | 178 |
| 71 | ತಾಳೆದುರ್ಗಿ ಸಂಹಾರ | 188 |
| 72 | ಮುತ್ತೋಡು ಗೌಡಗಳು ಜುಂಜಪ್ಪಗೆ ಶರಣಾದ್ರು | 194 |
| 73 | ಹೋರಿಗೆ ಬೆಲೆಕಟ್ಟಿದ ಮುತ್ತಿನಶೆಟ್ಟಿ | 197 |
| 74 | ಸೊಂಡೋರ ಬಯಲಾಗೆ ದನ ಮೇಯ್ದು | 199 |
| 75 | ಅತಿರೆಂಬೆಯ ಸಾಹಸ | 204 |
| 76 | ಮಾಮಗಳು ಮದ್ದಿಕ್ಕೀರು | 209 |
| 77 | ಬಡ ಚಿತ್ತಮ್ಮನ ಭಕ್ತಿ | 213 |
| 78 | ಜುಂಜಪ್ಪನಿಗೆ ಶುದ್ಧಿ | 218 |
| 79 | ಗಿಡ್ಡಾರೇಗೌಡನ ಮಸಲತ್ತು | 222 |
| 80 | ಕುರುಬರ ಕೇರಿಯಲ್ಲಿ ಜುಂಜಪ್ಪ | 224 |
| 81 | ಜುಂಜಪ್ಪನ ನ್ಯಾಯ | 228 |
| 82 | ಮರಡಿ ರಂಗಪ್ಪನೊಂದಿಗೆ ಪಗಡೆ | 231 |
| 83. | ಅನುಬಂಧ -1 : ಸ್ಥಳ ವಿವರ | 234 |
| 84. | ಜುಂಜಪ್ಪನ ಕಥೆ, ಓದು, ಅನುಭವ, ಅನಿಸಿಕೆ | 236 |

# ವೀರ ಜುಂಜಪ್ಪ

ತಾಯಿ ಹೊಟ್ಟೆಗೆ ಹುಟ್ಟಿಲ್ಲ । ತಾಯಿ ಬೆನ್ನಾಗೆ ಹೊಡೆದವನು
ಈರೇಳು ಈರಭದ್ರನ ವರದಲ್ಲಿ ಹುಟ್ಟಿದೋನು
ಕಾಲು ಕಂದಾಲೇಕಂಬ । ತೋಳು ಬಾಳೇದಿಂಡು
ಕೆಂಗರುಗಂಣಿನವನು । ಕೆದರೀದ ಮಂಡೆಯವನು
ಬೂದಿ ಮುಚ್ಚಿದ ಕೆಂಡ । ಭೂಲೋಕದುದ್ದಂಡ
ಮೀರಿ ಮೀರಿದವರನ್ನೆಲ್ಲಾ ಮೀಸೆ ಬೋಳಿಸಿ
ಹೆಚ್ಚಿದವರನ್ನೆಲ್ಲಾ ನೆತ್ತಿ ಬೋಳಿಸಿ
ಮಾಟ ಮಾಡರಿ ಗಂಡ । ಶೂನ್ಯಕಾರರ ಮಿಂಡ
ನಾಲ್ಕು ಸೀಮೆ ನಗರದ ಬಾಗಲು
ಎಪ್ಪತ್ತೇಳು ರಾಜರುಗಳಿಗೆ ಹೆಚ್ಚುಗಾರಿಕೆ ಪಡೆದವನು
ಎತ್ತಿದ ಬಾಣ ಇಳಿಸಿದ ಮಗನಲ್ಲ
ಮುಂದಿಕ್ಕಿದ ಹೆಜ್ಜೆ ಹಿಂದೆ ತೆಗೆದವನಲ್ಲ
ನಾಗರ ಹಾವಿನ ಗಂಡ । ನಾಲ್ಕು ದಿಕ್ಕಿಗೂ ಮಿಂಡ
ವೀರಾಧಿವೀರ । ವೀರ ಜುಂಜಯ್ಯನೆಂಬ
ಈರೇಳು ರಾಜ್ಯಕ್ಕೆ ಹೆಸರು ಪಡೆದವನು.

# ದೇವರ ದೈಮಾರ

ಜುಂಜಪ್ಪ ನರಮನುಷ್ಯನೇ ಸ್ವಾಮಿ ಗೊಲ್ಲರವನು. ಅವುನೂನೆ ಬಾಳಿ ಬದುಕಿದವನು, ದನ ಕಾದವನು, ಬಂಗ ಬಡತನ ನೀಚಿದವನು. ಪರಮೇಶ್ವರನ ಒಕ್ಕಲಾದ ಜುಂಜಪ್ಪ ಪವಾಡ ಮಾಡಿ ಪರಮೇಶ್ವನ ಸಮಕ್ಕೇನೆ ಬೆಳೆದುಬಿಟ್ಟ. ಅದಕ್ಕೆ ನಾವೆಲ್ಲಾ ಅವುನ ದೇವರು ಅಂಬ್ತಾ ಪೂಜಿಕೋತೀವಿ. ಜುಂಜಪ್ಪ ನಮ್ಮ ಕರಡೇರ ಗೊಲ್ಲರ ಗೋತ್ರಕ್ಕೆ ಸೇರಿದವನು. ಬಳ್ಳಾರಿ ಕಡೆ ಅವನೂರು. ಕೊಂಕಿ ಜರಮಲೆ ಸೀಮೆ ಅಂಮ್ತಾಲೇ ನಾವೆಲ್ಲಾ ಕರೆಯೋದು.

ಅಲ್ಲೊಂದು ಗೊಲ್ಲರಹಟ್ಟಿ, ಅದಕ್ಕೆ ಚಿಕ್ಕದ್ಯಾವರ ಹಟ್ಟಿ ಅಂಬ್ತಾರೆ. ಈ ಹಟ್ಟಿಲಿ ಮಾರನೋರ ಗೊಲ್ಲರ ವಂಶಕ್ಕೆ ಸೇರಿದ್ದ ಬಕ್ಕದಲೆ ಚಿತ್ತಯ್ಯ, ಬರಿದರೆ ಚಿತ್ತಯ್ಯ, ಮಾಪಲ್ಲಿ ಚಿತ್ತಯ್ಯ, ಮೋಪಲ್ಲಿ ಚಿತ್ತಯ್ಯ, ಪೂಜಾರಿ ಚಿತ್ತಯ್ಯ, ಗನಗುಡಿ ಚಿತ್ತಯ್ಯ, ದೇವುರ ದಯಮಾರ ಅಂಬ್ತಾ ಏಳು ಜನ ಅಣ್ಣತಮ್ಮಗಳು, ಕೊನೆಯವಳೊಬ್ಬಳು ಬಡಚಿತ್ತಮ್ಮ ಎಂಬ ಒಂದು ಹೆಣ್ಣು. ಇವುರು ಆಗರ್ಭ ಸ್ಥಿತಿವಂತರು. ಬಂಗಾರದ ಮಂಚದ ಮೇಲೆ ಮಲಗೋರು. ಚಿನ್ನದ ಹರಿವಾಣದಲ್ಲಿ ಉಂಬಾರು. ಚಿನ್ನದ ಬಟ್ಟಲಲ್ಲಿ ನೀರು, ಹಾಲು ಕುಡಿಯೋರು. ಅವುರು ಏಳು ಗೂಡಿಗೆ ದನಗಳನ್ನ ಕೂಡುವರು. ಚಿಕ್ಕ ದ್ಯಾವರಹಟ್ಟಿಯ ಒಂದು ಭಾಗವೇ ಇವರದಾಗಿತ್ತು. ಮೂಡುಗಡೆ, ಪಡುಗಡೆ, ಬಡುವಲು ದಿಕ್ಕಿಗೂ ಗೂಡು ಎಳೆಸಿಕೊಂಡು ದನಗಳಿಗೆ ಕರುಗಳಿಗೆ ಬೆಳ್ಳಿ, ಬಂಗಾರದ ಗೂಟಗಳನ್ನ ಮಾಡಿ, ಅವುಗಳನ್ನ ಕಟ್ಟಿ ಹಾಕುತ್ತಿದ್ದರು. ದನಗಳ ಕೊರಳು ಕಳೆದುಬಿಟ್ರೆ ಅವು ಹಿಂಡುಹಿಂಡಾಗಿ ಹೋಗುತ್ತಿದ್ದವು. ಜರಿಮಲೆ ಸೀಮೆಯ ಕರಿತೊರೆಯಹಳ್ಳ, ಹುಲ್ಲುಮಡು, ಕಲ್ಲುಮಡು, ಕರಡಿಬಯಲು, ನರಿಹಳ್ಳ ಮುಂತಾದ ಜಾಗಗಳಲ್ಲಿ ದನಗಳು ಹಾಯಾಗಿ ಮೇಯ್ಕೊಂಡು, ನಂದಿ ಬಸವನ ತರ ಬೆಳೆಯುತ್ತಿದ್ದವು.

ದನಗಳನ್ನ ಮೇಯಿಸೋದು ಸಣ್ಣೋನು ದಯಮಾನ ಕೆಲಸ. ಅವುನೆಂದರೆ ದನಗಳಿಗೂ ಪಂಚಪ್ರಾಣ. ಅವುನಿಗೆ ಮನೆ, ಮಠಗಳಿಗಿಂತ ದನಗಳೇ ಬಂಧು-ಬಳಗವಾಗಿಬಿಟ್ಟಿದ್ದವು. ದೇವರ ಸಮಾನ ಮನುಸ. ಅದಕ್ಕೆ ಅವನ್ನ ದೇವರ ದೈಮಾರ ಅಂತಾಲೇ ಕರೆಯುತ್ತಿದ್ದರು. ಅವುನ ಹಿರೇ ಅಣ್ಣಗಳು ಆರು ಜನ ಇದ್ರಲ್ಲ, ಅವರೆಲ್ಲರಿಗೂ ಮದುವೆ ಆಗಿತ್ತು. ಭಗವಂತ ಇವರ್ಯಾರಿಗೂ ಮಕ್ಕಳ ಫಲ ಕೊಟ್ಟಿರಲಿಲ್ಲ. ಅದರ ಕೊರಗಿನಲ್ಲೇ ಕರಗುತ್ತಿದ್ದರು. ಹಿರೇ

ಮಕ್ಕಳಿಗೆ ಯಾವಾಗ ಸಂತಾನಭಾಗ್ಯ ಇಲ್ಲವಾಯ್ತೋ ಇನ್ನು ಕೊನೆ ತಮ್ಮ ದೈಮಾರನಿಗಾದರೂ ಮದುವೆ ಮಾಡುವ, ವಂಶವಾದರೂ ಬೆಳೀಲಿ ಅಂಬ್ತಾ, ಆರು ಜನ ಅಣ್ಣಗಳು ಯೋಚನೆ ಮಾಡಿರು. ಮದುವೆನೇನೋ ಮಾಡಬಹುದು. ಆದರೆ ಈ ಹುಡುಗ ಕಾಡು, ದನ ಅಂತಾಲೇ ಕಾಲ ಹಾಕುತ್ತದೆ. ಇಂತವನಿಗೆ ಏನು ಮಾಡಾದು ಅಂದೆಲ್ಲಾ ವಿಚಾರ ಮಾಡಿರು. ಆಮೇಲೆ ಯಂಗಾರ ಆಗಲಿ ಅಂಬ್ತಾ, ದೈಮಾರನಿಗೆ ಹೆಣ್ಣು ಕೊಡೋ ದಾತರು ಯಾರು ಅಂತಲೂ ಯೋಚನೆ ಮಾಡಿದರು. ಕೊನೆಗೆ ದೊಡ್ಡನು ಹಿರಿಚಿತ್ತಯ್ಯ ಒಂದು ಪ್ಲಾನ್ ಹೇಳಿದ. 'ತಮ್ಮಗಳೆ ನಾವು ದೈಮಾರನಿಗೆ ಬೇರೆ ಹೆಣ್ಣ ಎಲ್ಲಿ ಹುಡುಕಾದು? ಯಂಗೂನೂ ನಮ್ಮ ತಂಗೆಮ್ಮನ ಮಗಳು ಸಣ್ಣಕಂಬಿನೆ ಇದಾಳಲ್ಲ ಅವುಳನ್ನೆ ತಂದುಕೊಂಡರೆ ಯಂಗೆ?' ಅಂದ. ಎಲ್ಲರೂ ಒಪ್ಪಿದರು. ಅಂಗು ಹಿಂಗೂ ಮಾಡಿ ಏಳು ಜನನೂ ಕೂಡಿಕೊಂಡು ಯರಬಳ್ಳಿಗೆ ಹೋದರು. ಯರಬಳ್ಳಿ ಅಬ್ಬರಗೊಲ್ಲರ ನಾಗಣ್ಣ ಅನ್ನೋನಿಗೆ ತಮ್ಮ ತಂಗಿ ಕೊಟ್ಟಿದ್ದರು. ಅವುರಿಗೆ ಸಣ್ಣಕಂಬಕ್ಕ ಅಂಬ್ತಾ ಒಂದು ಹೆಣ್ಣಿತ್ತು. ಅದನ್ನೇ ತಂದು ದೈಮಾರನಿಗೆ ಮದುವೆ ಮಾಡಾಕೆ ಅಂಬ್ತಾ ಯರಬಳ್ಳಿಗೆ ಬಂದರು. ಬಂದಂತ ಅಣ್ಣಗಳಿಗೆ ಅಕ್ಕರೆಯಿಂದ ಕಂಡ್ಲು ತಂಗೆಮ್ಮ. ಕೈಯಿಗೆ ನೀರು ಕೊಟ್ಟು ಉಂಬಾಕಿಕ್ಕಿದಳು. ಚಿನ್ನದ ಅರಿವಾಣದಾಗೆ ಅಡಿಕೆ ಎಲೆನೂ ಕೊಟ್ಟು, ಬಂದ ಕಾರಣ ಕೇಳಿದಳು. ಅಣ್ಣಗಳು ಮಾತಿಗೆ ಮುಂದಾದರು. ಅದು ಇದು ತೆಗೆದು ದೈಮಾರನ ಕತೆನೂ ಹೇಳಿದರು. ತಮಗೆ ಮಕ್ಕಳ ಫಲ ಇಲ್ಲದಿರುವ ವಿಚಾರನೂ ಹೇಳಿ, ಆಸ್ತಿ ಅಡವು ಕಂಡಾರ ಪಾಲಾಗುತ್ತೆ ಅಂತೆಲ್ಲಾ ರಾಗ ತೆಗೆದರು. ಕೊನೆಗೆ ನಮ್ಮ ಸಂಪತ್ತು ನಮ್ಮೊಳಗೇ ಇರಲಿ. ಬೇರೆಯವರು ಯಾಕೆ ತಿನ್ನಬೇಕು? ಅದಕ್ಕೆ ನಿನ್ನ ಸಣ್ಣಕಂಬಕ್ಕನನ್ನು ತಮ್ಮ ದೈಮಾರನಿಗೆ ಕೊಡಕ್ಕ ಅಂದರು. ನಮಗಂತೂ ದೇವರ ಭಾಗ್ಯ ಕೊಡಲಿಲ್ಲ. ಅವರಿಂದಲಾದರೂ ನಮ್ಮ ಮನೆಗೆ ಆಡಾ ಮಕ್ಕಳು ಬರಲಿ ಅಂದರು.

ಅಣ್ಣಗಳ ಮಾತು ಕೇಳಿದ ತಂಗಿಗೆ ಸಂತೋಷವಾಯಿತು. ಆಗಲಣ್ಣ ಕುರಿ ಕೊಟ್ಟವರಿಗೆ ಮರಿ ಕೊಡಬೇಕಲ್ಲ. ಅಣ್ಣಗಳ ಮಾತು ಕೇಳಲಾರದಷ್ಟು ದೊಡ್ಡವಳಲ್ಲ ಈ ತಂಗಿ ಅಂದುಬಿಟ್ಟು ಮಗಳನ್ನ ಕೊಡಾಕೆ ಒಪ್ಪಿಕೊಂಡಳು. ಅಣ್ಣಗಳಿಗೂ ಸಂತೋಷ ಆಯ್ತು. ಮಾತುಕತೆ ಆಡುವ ಮೊದಲು, ದೈಮಾರನಿಗೂ ವಿಷಯ ತಿಳಿಸಿ ಮದುವೆ ಏರ್ಪಾಡು ಮಾಡುವ ಅಂದು, ಯರಬಳ್ಳಿಯಿಂದ ಹೊರಟು ಬಂದರು ಕರಡೇರು.

ದ್ಯಾವರಹಟ್ಟಿಗೆ ಬಂದ್ರು. ಮದುವೆಗೆ ಹೆಣ್ಣನ್ನು ನೋಡಿದ್ದು ಆಯ್ತು. ಆದರೆ ದೈಮಾರನೇ ಹಟ್ಟಿಗೆ ಇಲ್ಲ. ದನಗಳ ಜೊತೆಗೆ ಕಾಡಿಗೆ ಹೋದಾನು ಏಳು ವರ್ಷ ಆತು. ಮನೆ ಮುಖ ನೋಡಿಲ್ಲ. ಮೊದಲು ಅವುನ್ನ ಹುಡುಕಿಕೊಂಡು ಕರಕೊಂಡು ಬರೋನ ನಡೀರಿ ಅದು ಆರು ಜನ ಅಣ್ಣಗಳೂ, ಕೂಡಿಕೊಂಡು ರೊಟ್ಟಿ ಬುತ್ತಿ ಕಟ್ಟಿಕೊಂಡು ಕರಿತೊರೆ ಹಳ್ಳದ

ಕಡೆಗೆ ಹೊರಟರು.

ಕಾಡಿನಾಗೆಲ್ಲಾ ಹುಡುಕಿದರು. ಕೊನೆಗೂ ದೈಮಾರ ಸಿಕ್ಕಿದ. ನೋಡುತಾರೆ ಮನೆಯಿಂದ ಬರುವಾಗ ಏಳು ದನಿನ ಹೊಡೆಕೊಂಡು, ಬಂದಿದ್ದ. ಈಗ ನೋಡಿರೆ ಏಳು ಲಕ್ಷ ದನ ಮಾಡೆವನೆ. ಕಾಡಿನಾಗೆ ಏಳು ದನಗಳ ಗೂಡು ಮಾಡೆವನೆ. ಒಂದೊಂದು ಗೂಡಿಗೂ ಒಂದೊಂದು ಹೆಸರಿಡಿದು ಕರೆತಾನೆ. ಹಸುಗಳಿಗೂ ಆಟನೆ. ದೇವಕ್ಕ, ಅಕ್ಕಮಾರಿ, ಚಿಕ್ಕಮಾರಿ, ದಯಾಮಾರಿ, ಬೆಳ್ಳಿ, ಪಾಂಚಾಲಿ ಅಂತೆಲ್ಲಾ ಹೆಸರು ಕಟ್ಟೆವನೆ. ಒಂದೊಂದು ಹೆಸರಿಡಿದು ಕರೆದ ಕೂಡಲೇ ಆ ಹಸುಗಳು ಓಡೋಡಿ ಬರುತಾವೆ. ಅವುಗಳನ್ನ ಕರೆದು ಒಂದೊಂದು ಹಸುಗಳ ಮುಖ ಸವರಿದ, ಮುತ್ತಿಕ್ಕಿದ. ದೈಮಾರನ ನೋಡುತ್ತಿದ್ದಂಗೆ ಅಣ್ಣಗಳಿಗೆ ಸಂತೋಷವಾಯ್ತು. ತಮ್ಮನ ಬಗೆಗೆ ಒಳ್ಳೆ ಮಾತಾಡಿರು. ಊರಿಗೆ ಬರುವಂತೆ ಕೇಳಿಕೊಂಡರು. ದೈಮಾರ ಬಿಲ್‌ಕುಲ್ಲು ಆಗಲ್ಲ ಅಂದ. ದನಗಳು ನನ್ನ ಪ್ರಾಣ, ಅವುನ್ನ ಬಿಟ್ಟು ಬರಲ್ಲ ಅಂಬ್ತಾಲೇ ಹೇಳಿದ. ಅಣ್ಣಗಳು ಅತ್ತರು, ಕರೆದರು. ಮರಹುಟ್ಟಿ ಮರ ಬಿದ್ದು ಹೋದಂಗೆ ಆಗಿದೆ ನಮ್ಮ ಬದುಕು. ಒಂದಡಿಲಿಲ್ಲ, ವಂಶದ ಕುಡಿ ಇಲ್ಲ. ಮಕ್ಕಳಿಲ್ಲದ ಮನೆಯಲ್ಲಿ ಹೊಕ್ಕಳು ಅಕ್ಕಿ ಇದ್ದೇನು ಫಲ? ಮಕ್ಕಳಿಲ್ಲದ ಬದುಕು ಬದುಕಲ್ಲ ಅಂದರು. ಈಗ ನೀನು ಮದುವೆ ಮಾಡಿಕೊಂಡು ನಮ್ಮ ವಂಶ ಬೆಳೆಸು ಅಂದ್ರು. ಯರಬಳ್ಳಿ ತಂಗೆಮ್ಮ, ಮಗಳು ಸಣ್ಣಕಂಬಕ್ಕನ ಕೊಡುತೀನಿ ಅಂಬ್ತಾ ಒಪ್ಪಿಕೊಂಡಾಳಪ್ಪ. ಬಂದು ಮದುವೆ ಆಗಪ್ಪ ಅಂಬ್ತಾ ಒತ್ತಾಯ ಮಾಡಿದರು. ಅಣ್ಣಗಳ ಒತ್ತಾಯಕ್ಕೆ ಇಲ್ಲ ಅನ್ನಲಾರದ ದೈಮಾರ ಮದುವೆಯಾಗಲು ಒಪ್ಪಿಕೊಂಡ. ಅದರಂತೆ ದನಗಳನ್ನು ಕಾಡಲ್ಲಿ ಬಿಟ್ಟು ಚಿಕ್ಕದ್ಯಾವರ ಹಟ್ಟಿಗೆ ಬಂದ.


ಚಿಕ್ಕದೇವ್ರಹಟ್ಟಿಗೆ ದೈಮಾರ ಬರುತ್ತಲೇ ಮನೆಗೆಲ್ಲಾ ಸಂತೋಷಪಟ್ಟರು. ಅತ್ತಿಗೇಯರು ಆರತಿ ಎತ್ತಿ ಒಳಕೆ ಕರಕೊಂಡರು. ಸರಿ ಅತ್ತ ಏಳು ದಿನಕ್ಕೆ ಸರಿಯಾಗಿ ಸೋಮವಾರ, ಅದು ಚಿತ್ರದೇವರ ವಾರ, ಮದುವೆ ಅಂಬ್ತಾ ತೀರ್ಮಾನವಾಯಿತು. ಎಲ್ಲಾ ಸಿದ್ಧತೆಗಳು ನಡೆದವು. ಮದುವೆ ದಿನ ಬಂತು. ದೈಮಾರನಿಗೆ ಯಾಕೋ ಎಡಭುಜ ಅದುರಿದಂಗಾಯ್ತು. ಯಾನಾದರೂ ಆಗಲಿ, ಕಾಡಿಗೆ ಹೋಗಲೇಬೇಕು. ಕಾಡಲ್ಲಿ ದನಗಳಿಗೆ ಏನಾದರೂ ತೊಂದರೆ ತಾಪತ್ರಯ ಆಗಿರಬಹುದು ಅಂಬ್ತಾ ಯೋಚನೆ ಮಾಡಿದವನು ತಡಕಣಕೆ ಆಗಲಿಲ್ಲ. ಕಾಡಿಗೆ ಹೋಗಲೇಬೇಕೆಂದು ತೀರ್ಮಾನ ಮಾಡಿಕೊಂಡ. ಏನು ಮಾಡಾದು? ಹೆಂಗೆ ಹೋಗಾದು ಮನೆಗೆ ಮದುವೆ, ಕಾಡಿನಾಗೆ ದನಗಳ ಗ್ಯಾನ. ಒಂದು ಉಪಾಯ ಮಾಡಿಬಿಟ್ಟ. ಅದೇನಪ್ಪ ಎಂದರೆ, ಮದುವೆಗೆ ತುಂಬಾ ಜನ ಸೇರಿದ್ರು. ಮನೆಯಾದ ಮನೆಯೆಲ್ಲಾ ಗಜಿಬಿಜಿಯಾಗಿದೆ. ಗೊಲ್ಲರ ಶಾಸ್ತ್ರ ಗೊತ್ತಲ್ಲ ರಾತ್ರಿಯೆಲ್ಲಾ ಶಾಸ್ತ್ರ ಮಾಡುತಾರೆ, ಅಂತೆಬಾ

ಕಾಲಕ್ಕೆ ದೈಮಾರ ಹೊರಮನೆ (ನೀರುಮನೆ)ಗೆ ನೀರು ಹೊಯ್ಕಳನಂಗೆ ಪ್ಲಾನ್ ಮಾಡಿ ಬಚ್ಚಲು ಮನೆ ಬಗಲಿನ, ನೀರು ಮನೆಮುಂದೆ ಒಂದು ಉದ್ದಂದು ಬಾಕನ್ನು ಮಡಗಿಬಿಟ್ಟು ರಾತ್ರೋರಾತ್ರಿ ಮನೆಯಿಂದ ಹೊರಗೆ ಬಂದುಬಿಟ್ಟ. ಕಾಡಿನ ಕಡೆಗೆ, ದನಗಳ ಹತ್ತಿರ ಹೋಗಿಬಿಟ್ಟ. ಸರಿರಾತ್ರಿಯ ಅರ್ಧ ಹೊತ್ತಿನ ತನಕ ಹೆಣ್ಣಿನ ಶಾಸ್ತ್ರ ನಡೆಯಿತು. ಗಂಡು ಕರೀರಿ, ಅರಿಶಿಣದ ಶಾಸ್ತ್ರ ಮಾಡಬೇಕು, ನಾಗೋಲಿ ಶಾಸ್ತ್ರ ಮಾಡಬೇಕು ಅಂಬ್ತಾರೆ ಕಟ್ಟೇಮನೆ ಯಜಮಾನರು. ಆಗ ದೈಮಾರನ ಹುಡುಕಾರೆ. ಪತ್ತೇನೇ ಇಲ್ಲ. ಎಲ್ಲಿ ಹೋದ ದೈಮಾರ ಅಂಬಾದೆ ಎಲ್ಲರಿಗೂ ಗಾಬರಿ. ಅಷ್ಟೊತ್ತಿಗೆ ಬಾಗಿಲಾಗೆ ಉದ್ದನೆಯ ಬಾಕೊಂದು ಕಾಣಿಸುತ್ತದೆ. ಅದು ದೈಮಾರ ಯಾವಾಗಲೂ ಕೈನಲ್ಲಿ ಹಿಡಿದು ಕಾಡಿನಲ್ಲಿ ದನಗಳಿಗೆ ಎದುರಾಗುವ ಕ್ರೂರ ಪ್ರಾಣಿಗಳನ್ನು ಓಡಿಸೋ ಆಯುಧ. ಅದರಿಂದ ದೈಮಾರ ತಿರುಗಾ ದನಗಳ ಗೀಳು ಹತ್ತಿಕೊಂಡು ಕಾಡಿನ ಕಡೆಗೆ ಓಡಿಹೋಗಿರಬೇಕೆಂದು ತೀರ್ಮಾನಿಸುತ್ತಾರೆ. ಯಾವಾಗ ದೈಮಾರ ಎಲ್ಲಿ ಹುಡುಕಿದರೂ ಪತ್ತೆ ಆಗೋದಿಲ್ಲವೋ ಬಂದಂತ ಹಿರಿಯರು, ಕಟ್ಟೆಮನೆ ಗೌಡರು, ಪೂಜಾರಿಗಳು ಸೇರಿಕೊಂಡು ಕರೆಕೊಂಡು ಬಂದಂತ ಹೆಣ್ಣು ಇತ್ತಲ್ಲ ಸಣ್ಣಕಂಬಕ್ಕ, ಆ ಕಂಬಕ್ಕಗೂ ದೇವರ ದೈಮಾರ ಬಳಸುತ್ತಿದ್ದನಲ್ಲ ಬಾಕು, ಆ ಬಾಕಿಗೂ ಮದುವೆ ಮಾಡಿಬಿಡುತ್ತಾರೆ. ಅಂದರೆ ಸಣ್ಣಕಂಬಕ್ಕನನ್ನು ಬಾಕಿನ ಜೊತೆಗೆ ನಿಲ್ಲಿಸಿ ಅದರ ಜೊತೆಗೆ ಹಾಲು ಹಾಕಿ ಧಾರೆ ಮುಹೂರ್ತ ಮಾಡಿಬಿಡುತ್ತಾರೆ. ಬಂದಂತಹ ಜನಗಳೆಲ್ಲಾ ಇದೊಳ್ಳೆ ಮದುವೆ. ಬಾಕಿಗೆ ಧಾರೆ ಎರೆದರಲ್ಲಪ್ಪ ಅಂದುಬಿಟ್ಟು ಗೊಣಗಾಡಿಕೊಂಡು ಹೋದರು. ಮದುವೆ ಆತು, ಊಟ ಉಪಚಾರನೂ ಆತು. ತಾಂಬೂಲ ತಿದ್ದಿರು. ಕೊನೆಗೆ ಸಣ್ಣಕಂಬವ್ವನ ಗಂಡನ ಮನೆಗೆ ಬಿಟ್ಟು ಹೆಣ್ಣಿನ ಕಡೆಯವರೆಲ್ಲರೂ ಅವರವರ ಊರಿಗೆ ಹೊರಟರು.

ಸಣ್ಣ ಕಂಬಕ್ಕನ ತಾಯಿ ಸಮಾಧಾನಮಾಡಿಬಿಟ್ಟು ಆಕೆಗೂ ಪರಿವಾರದವರ ಸಂಗಡ ಊರಾದಿ ಹಿಡಿದಳು. ಮಗಳಿಗೆ ಎಂಥ ಗತಿ ಒದಗಿತೆಂದು ಯರಬಳ್ಳಿ ನಾಗಣ್ಣನೂ ದುಃಖ ಮಾಡಿದ. ಬೀಗರು ಊರಿಂದ ಹೊರಕ್ಕೆ ಬಂದು ಸಾಗಾಕಿದರು. ಉಕ್ಕಿ ಬರುವ ದುಃಖದಿಂದ ಮಗಳ ಮುಖ ನೋಡಿದ. ಆಗ ಸಣ್ಣಕಂಬಕ್ಕ ಹೇಳುತಾಳೆ 'ನಾನು ನಿನ್ನ ಮಗಳೇ ಆಗಿದ್ದರೆ ಗಂಡನ ಜೊತೆಗೆಸಂಸಾರ ಮಾಡಿ ಮಕ್ಕಳನ್ನೆತ್ತಿಕೊಂಡು ತೌರಿಗೆ ಬರುತೀನಿ. ಅಲ್ಲೀಗಂಟ ಯರಬಳ್ಳಿ ಹಾದಿ ನೋಡಲ್ಲ. ಹುಟ್ಟೋ ಚುಕ್ಕೆ ನೋಡಿಕೊಂಡು ನನ್ನ ಮರೆಯಮ್ಮ' ಅಂತ ಸಣ್ಣಕಂಬಕ್ಕ ಹೇಳಿದಳು. ಕೊಟ್ಟ ಹೆಣ್ಣು ಕುಲಕ್ಕೆ ಹೊರಗು ಹೋಗಮ್ಮ ಎಂದು ಬಿರಬಿರನೆ ನಡೆದು ದ್ಯಾವರಹಟ್ಟಿಗೆ ಸೇರಿಕೊಂಡಳು.

ಗಂಡನ ಮನೆಗೆ ಆರು ಜನ ಹಿರಿಯಕ್ಕಗಳು, ವಾರಗಿತ್ತಿಯರು ಮೊದಮೊದಲು

ಚೆನ್ನಾಗಿಯೇ ಕಂಡುಕೊಂಡಿದ್ದರು. ಬರುಬರುತ್ತಾ ಹಾಕು ಚಾಪೆ, ನೂಕು ಚಾಪೆ ಸುರು ಮಾಡಿದರು. ಮನೆ ಕೆಲಸನೆಲ್ಲಾ ಒಬ್ಬಳೇ ಮಾಡಬೇಕು. ಹಾಲು ಕರೆಯಬೇಕು. ಅಡಿಗೆ, ಕಸ ಮುಸುರೆ ಒಬ್ಬಳೇ ನೋಡಿಕೋಬೇಕು. ಅಂತ ಕೆಲಸನೆಲ್ಲಾ ಕಂಬಕ್ಕ ನೇರುಪವಾಗಿ ಮಾಡಿಕೋತಾ ಬಂದಳು. ತುಂಬಿದ ಮನೆಯಾಗೆ ಪರಪಂಚ ಮಾಡಬಾರದು ಅಂಬೋದು ಕಂಬಕ್ಕನ ಮನಸ್ಸು ಹೇಳ್ತಾಯಿತ್ತು. ಏಕೆಂದರೆ ಅದು ತನ್ನ ತಾಯಿ ಮನೆ. ಅಜ್ಜಿ ಮನೆಯಾದುದರಿಂದ ವಾರಗಿತ್ತಿಯರು ಏನೇ ತೊಂದರೆ ಕೊಟ್ಟರೂ, ಅದನ್ನು ಕಂಬಕ್ಕ ಸಹಿಸಿಕೊಂಡು ಜೀವನ ವರೆದಳು.



# ಕಂಬಕ್ಕ ಗಂಡನನ್ನ ಕೂಡಿದಳು

ವಾರಗಿತ್ತಿಯರು ಮಾತ್ರ ಇವಳಿಂದ ಕತ್ತೆ ದುಡಿಮೆ ಮಾಡಿಸಿಕೊಳ್ಳುತ್ತಾ ಬಂದರು. ಮಾತ್ರವಲ್ಲ ಯಾರಾದರೂ ಗಂಡಸರು ಮನೆಗೆ ಬರಲಿ, ಹೋಗಲಿ ಆವಾಗಲೆಲ್ಲಾ ಕಂಬಕ್ಕಳನ್ನು ಅನುಮಾನದಿಂದ ನೋಡುತ್ತಿದ್ದರು. ಇಲ್ಲದಸಲ್ಲದ ಮಾತನಾಡುವರು. 'ಬಂಜೆ ಬಸರಾಗುತ್ತಾಳೆ ಬಿಡು' ಅಂತ ಛೇಡಿಸುವುದಕ್ಕೆ ಶುರುಮಾಡಿದರು. ಈ ಮಾತು ಹೊನ್ನ ಶೂಲವಾಗಿ, ಕಂಬಕ್ಕಳನ್ನು ಇರಿಯತೊಡಗಿತು. ಬಂಗ ನೀಚಬಹುದು, ಬಡತನ ಅನುಭವಿಸಬಹುದು. ಹಾದರಗಿತ್ತಿ ಪಟ್ಟ ಮಾತ್ರ ಅಸಾಧ್ಯವಾಯಿತು. ಇವರ ನಡುವೆ ಯಂಗಪ್ಪ ಬದುಕಾದು ಅಂಬ್ತಾ ಕಂಬಕ್ಕ ಯೋಚನೆ ಮಾಡಿದಳು. ಇವರ ಮನೆಯಲ್ಲಿ ಹಂಗಿರಲಿ ನನ್ನ ಗಂಡ ಅಂಬ್ತಾ ಇದ್ದುದ್ರೆ ಇವರು ಹಿಂಗೆಲ್ಲಾ ಮಾತಾಡುತ್ತಿದ್ದರಾ? ಶಂಕರ ಅಂತಾ ಯೋಚನೆ ಮಾಡಿದವಳು. ಕೊನೆಗೊಂದು ದಿನ ನನ್ನ ಮಾವನಿಗೆ ನನ್ನ ಮದುವೆಯಾಗಲು ಇಷ್ಟ ಇತ್ತೋ ಇಲ್ಲವೋ, ಅಂತೂ ನನ್ನ ತಂದು, ಒಂದು ಬಾಕಿಗೆ ಮದುವೆ ಮಾಡಿರು. ಮದುವೆಯಾದರೂ ಈ ಮನೆಯವರು ನನ್ನನ್ನು ಮನುಷ್ಯಳನ್ನಾಗಿ ಕಾಣ್ತಾಯಿಲ್ಲ. ಇಂತ ಸಂಪತ್ತಿಗೆ ನಾನು ಪ್ರಾಣ ಹೊರೆಕೊಂಡು ಇರಬೇಕಾ? ಪ್ರಾಣಾನಾದರೂ ಕಳೆದುಕೊಳ್ಳಬೇಕೆಂದು, ಅಂದುಕೊಂಡ ಕಂಬಕ್ಕ ಕಾಡುಪಾಲಾಗಲು ತೀರ್ಮಾನ ಮಾಡಿದಳು.

ಒಂದು ರಾತ್ರಿ ಎಲ್ಲರೂ ಮಲಗಿದ್ದರು. ಕಂಬಕ್ಕ ಎದ್ದು ಉಚ್ಚೆ ಹುಯ್ಯೋಳತರ ಈಚೆಗೆ ಬಂದವಳು. ಕಾಡಿನ ಕಡೆಗೆ ಬಂದಳು. ತನ್ನ ಗಂಡ ಕೆರೆ ಹಳ್ಳದ ಕಡೆ ದನ ತಡೆದಿದ್ದಾನೆ ಅಂಬ್ತಾ ಕೇಳಿ ತಿಳುಕೊಂಡಿದ್ದಳಲ್ಲ, ಅತ್ತ ಕಡೆ ಬಂದಳು. ಎಲ್ಲಿ ಹುಡುಕಿದರೂ ಗಂಡನ ಸುಳಿವಿಲ್ಲ. ದಟ್ಟಾರಣ್ಯದಲ್ಲಿ ಒಂದು ದನದ ಸುಳಿವೂ ಕಾಣಲಿಲ್ಲ. ಆಗ ಕಂಬಕ್ಕ ನಾನಿನ್ನ ಕಾಡುಪಾಲಾದೆ. ಗಂಡನ ಸುಳಿವೂ ಇಲ್ಲ, ಇತ್ತ ದಾರಿನೂ ಕಾಮ್ತಾ ಇಲ್ಲ. ತಿರುಗಿ ಮನೆಗೆ ಹೋಗುವಂತೆಯೂ ಇಲ್ಲ. ಈ ಬಂಗದ ಬಾಳು ಹೊರೆಯುವುದಕ್ಕಿಂತ ಯಾವುದಾದರೂ ಹುಲಿ ಬಾಯಲ್ಲಿ ಚಿರತೆ ಬಾಯಿಗೆ ಸಿಕ್ಕಿ ಸತ್ತುಬಿಡಬೇಕು, ಅಂತಾ ಯೋಚನೆ ಮಾಡಿದಳು.

ಹಾಗಂತಾ ಯೋಚನೆ ಮಾಡಿಕೊಂಡು ಬರುತಾ ಅವುಳೆ. ಅಲ್ಲೊಂದು ಹುಲಿ, ಚಿರತೆ ಕೂಗಾಡೋದು ಕೇಳಿಸಿತು. ಅಲ್ಲಿಗೆ ಬಂದಳು. ಹುಲಿಗಳ ನಡುವೆ ನಿಂತಳು. ಆ ಹುಲಿಗಳು ಅನ್ನ ಆಹಾರಕ್ಕೆ ಕಿತ್ತಾಟ ನಡೆಸುತ್ತಿದ್ದರೂ ಕಂಬಕ್ಕನ ಕಂಡ ಕೂಡಲೇ ಅತ್ತ ಕಡೆ ಇತ್ತ ಕಡೆ ಹೋಗಿಬಿಟ್ಟವು. ಅವುನೂ ಕಂಬಕ್ಕನ ಮುಟ್ಟಲಿಲ್ಲ. ಹಿಂಗೆನೇ ಮುಂದಕ್ಕೆ ಬಂದಳು. ಒಂದು ಬಿದಿರು ಮೆಳೆ. ಆ ಬಿದಿರು ಮೆಳೆ ಪಕ್ಕದಲ್ಲೇ ಒಂದು ದೊಡ್ಡ ಹುತ್ತ. ಅದಕ್ಕೆ ಮೂರು ಕ್ವಾವೆ. ಆ ಬಿದಿರು ಮೆಳೆಯಿಂದ ಒಂದು ಕಾಳಿಂಗ ಸರ್ಪ ಬುಸ್ ಎಂದು ಬುಸುಗುಟ್ಟುತ್ತ ಆ ಹುತ್ತದ ಕ್ವಾವೆಯೊಳಕೆ ಹರಿದು ಹೋಗಿಬಿಡ್ತು. ಕಂಬಕ್ಕನಿಗೆ ಏನೋ ಒಂದು ತರ ಆದಂತಾಗಿ ಸುತ್ತಮುತ್ತ ನೋಡಿಳು. ಯಾರೂ ಕಾಮ್ತಾಯಿಲ್ಲ. ಆಗ ಸರ್ಪನಾದರೂ ನನ್ನ ಕಚ್ಚಿಬಿಡಲಿ. ಈ ಬಂಗದ ಬಾಳುವೆ ಬಾಳಲ್ಲ, ಅಂಬ್ತಾ ಮನೆದೇವರು ಚಿತ್ರದೇವರು ನೆನೆದು ಸರ್ಪ ಕಚ್ಚಲಿ ಅಂಬ್ತಾಲೇ ಆ ಹುತ್ತದ ಕ್ವಾವೆಯೊಳಕೆ ಕೈಯಿಕ್ಕಿ ಬಿಟ್ಟಳು. ಆ ಕ್ವಾವೆನೂ ಉದ್ದವಾಗಿಯೇ ಇತ್ತು. ಕೈಯನ್ನು ಕಂಕುಳ ತನಕ ಇಳೆ ಬಿಟ್ಟಳು. ಕೊನೆಗೆ ಸರ್ಪರಾಜ ಹತ್ತಿ ಸಿಕ್ಕಂಗೆ ಸಿಕ್ಕಿತು. ಆದರೆ ಅದು ಏನು ಮಾಡಿರೂ ಇವುಳನ್ನು ಕಚ್ಚಲಿಲ್ಲ.

ಕಂಬಕ್ಕ ತಾನು ಜೀವನ ಹೊತ್ತುಕೊಂಡು ಇರಬಾರದು, ಅಂಬ್ತಾ ಮಾಡಬಾರದ ಪ್ಲಾನ್ ಮಾಡಿರೂ, ಅವುಳಿಗೆ ಆಯಸ್ಸು ಗಟ್ಟಿ ಇತ್ತು. ಹಣೆಬರನೂ ಗಟ್ಟಿಗಿದ್ರೆ ತಲೆ ಮ್ಯಾಲೆ ಕಲ್ಲು ಎತ್ತಿ ಹಾಕಿರೂ ಸಾಯೋಲ್ಲ ಅಂಬ್ತಾರಲ್ಲ ಅಂಗಾಯ್ತು. ಈಗ ಏನು ಮಾಡಿಕೊಂಡ್ಲಪ್ಪ ಅಂದರೆ, ತನ್ನ ಸಂಕಟ ಮನೆದೇವರು ಚಿತ್ರದೇವರಿಗೆ ಹೇಳಿಕೊಂಡಳು. ದೇವರು ಇವಳಿಗೆ ಏನೋ ಬಂದು ಹೇಳಿದಂಗಾಯ್ತು. ಅದರಂತೆ ಇದ್ದಕ್ಕಿದ್ದಂತೆ ಗುಂಗಾರಿ ಹುಳವಾದಳು.

ಅಣ್ಣಾನ ನೆನೆದಾರೆ ಹೊನ್ನು ಮೂಗಳವಾಗಿ
ಅಣ್ಣೇದ ಕೆಲಸ ಅತಿಬೇಗ - ಕಳ್ಳೇರಹಳ್ಳಿ
ಹೊನ್ನ ಬಿಲ್ಲೋನ ನೆನೆದೇವು

# ಗುಂಗಾರಿ ಹುಳವಾದ ಕಂಬಕ್ಕ

ಕಾಡು ಮೇಡು ಅಲೆದ ಕಂಬಕ್ಕ ಗಂಡ ದೇವರ ದೈಮಾರನ ಸುಳಿವಿಲ್ಲ. ಇನ್ನು ದರ್ಶನ ಭಾಗ್ಯವೂ ಇಲ್ಲ ಅಂದವಳು ಆತ್ಮಹತ್ಯೆಗಾಗಿ ಪರದಾಡಿದಳು. ಯಾವುದರಿಂದಲೂ ಪ್ರಯೋಜನವಾಗಲಿಲ್ಲ. ಕೊನೆಗೆ ಒಂದು ಗುಂಗಾರಿ ಹುಳುವಾದಳು. ಗುಂಗಾರಿ ಹುಳುವಾಗಿ ಹಾರುತ್ತ ತನ್ನ ಹುಡುಕಾಟ ನಡೆಸಿದಳು. ಜೆರಿಮಲೆ ಕಾಡನ್ನೆಲ್ಲಾ ಸುತ್ತಿದಳು. ಕೊನೆಗೆ ಒಂದು ಕರಿಹಳ್ಳ. ಹಳ್ಳದ ಮೇಲೊಂದು ದಿಬ್ಬ. ಆ ದಿಬ್ಬದ ಬುಡದಲ್ಲಿ ಒಂದು ದೊಡ್ಡ ಆಲದ ಮರ. ಆಲದ ಮರಕ್ಕೆ ಹೊಂದಿಕೊಂಡಂತೆ ದೈಮಾರ ಏಳು ಹಾವಿನ ಗೂಡುಗಳನ್ನು ತಿರುವಿಕೊಂಡು ವಾಸವಾಗಿದ್ದಾನೆ. ಏಳು ಗೂಡಿನ ದನಗಳು ಅಡವಿ ಹುಲ್ಲು ಮೇಯ್ದು ಮಡುವಿನ ನೀರು ಕುಡಿದು, ಯಾರೊಬ್ಬರ ತಂಟೆ ಇಲ್ಲದೆ, ಕಾಕ ಪ್ರಾಣಿಗಳ ಬಂಗವೂ ಇಲ್ಲದೆ ಆನಂದವಾಗಿವೆ. ಕಂಬಕ್ಕೆ ಆಕಾಶಮಾರ್ಗದಲ್ಲಿ ಹಾರಿದಳು. ದೈಮಾರನ ಹಾವಿನ ಗೂಡನ್ನು ಮೂರು ಸುತ್ತು ಹಾಕಿದಳು. ನೋಡುತ್ತಾಳೆ ದೈಮಾರ ಸ್ವರ್ಗಸುಖ ನಿದ್ದೆ ಮಾಡುತ್ತಿದ್ದಾನೆ. ಪಕ್ಕದಲ್ಲಿ ಒಂದು ಬಿಲ್ಲು, ಕತ್ತಿ ಇದೆ. ಆದು ತಾನು ಮದುವೆಯಾದ ಬಾಕಿನಂತೆಯೇ ಆ ಕತ್ತಿ ಇದ್ದು, ಇವನೇ ದೈಮಾರ ಎಂದು ಸುಲಭವಾಗಿ ಗುರುತಿಸಿದಳು. ಯಾವಾಗ ದೈಮಾರ ಮಾಯದ ನಿದ್ದೆಗೆ ಜಾರಿದನೋ ಶಂಕರ ಏನು ಮಾಡಲೆಂದು ಕುಲದೈವ ಚಿತ್ರದೇವರನ್ನು ಸ್ಮರಣೆ ಮಾಡಿಕೊಂಡಳು.ಕೂಡಲೇ ಗುಂಗಾರಿ ಹುಳು ದೊಡ್ಡದಾಗಿ ತನ್ನೆರಡು ರೆಕ್ಕೆಗಳಿಂದ ಗುಂಯ್ ಎಂದು ವಿಪರೀತ ಶಬ್ದ ಮಾಡಿತು. ಮಾಯಾನಿದ್ದೆಯಲ್ಲಿದ್ದ ದೈಮಾರ ಗಾಬರಿಯಿಂದ ಎದ್ದನು. ತಾನು ಮಲಗಿರುವ ಆಲದ ಮರದ ಕಡೆಯಿಂದಲೇ ಶಬ್ದ ಬರುತ್ತಿರುವುದು ತಿಳಿದು, ತನ್ನ ಬಾಣ ಹೂಡಿ ಶಬ್ದ ಬಂದ ಕಡೆಗೆ ಉಕ್ಕಿನ ಬಾಣ ಹೂಡಿದನು. ದೈಮಾರ ಬಿಟ್ಟ ಉಕ್ಕಿನ ಉರಿಬಾಣದ ರಭಸಕ್ಕೆ ಹೆಬ್ಬಾಲದ ಮರ ಬೇರು ಸಮೇತ ಉರುಳಿಬಿತ್ತು. ಗಾಬರಿಯಿಂದ ಕಣ್ಣು ಬಿಡುತ್ತಾನೆ. ಯಾವ ರಾಕ್ಷಸನೂ ಇಲ್ಲ, ದೇವತೆಗಳ ಸದ್ದೂ ಇಲ್ಲ. ಒಂದು ಹೆಜ್ಜೆ ಮುಂದುವರಿದ. ಉತ್ತರ ದಿಕ್ಕಿನಲ್ಲಿ ಒಂದು ಚೆಲುವಾದ ಹೆಣ್ಣು, ತಾನು ಹುಟ್ಟು ನಿರ್ವಾಣದಲ್ಲಿ ನಿಂತು ದೈಮಾರನಿಗೆ ಶರಣು ಮಾಡಿತು. ದೈಮಾರನಿಗೆ ಗಾಬರಿ ಹೆಚ್ಚಾಯಿತು. ಇದ್ಯಾರೋ ಶತ್ರುಗಳೋ ರಾಕ್ಷಸರೇ ಮಾಡಿರುವ

ಮಾಯಾಜಾಲ. ಯಾವುದೋ ರಾಕ್ಷಸ ನನ್ನ ದನಗಳನ್ನು, ನನ್ನನ್ನು ತಿಂಬಲು ಇಂತಹ ಉಪಾಯ ಮಾಡುತಿದೆ ಅಂದು ತಿಳಿದನು. ಇನ್ನೇನು ಬಾಣ ಹೂಡಿ ಆಕೆಯನ್ನು ಸಂಹಾರ ಮಾಡಿಬಿಡಬೇಕೆಂಬುವಾಗ, ಆ ಹೆಂಗಸು ಮಾಮ ಎಂದಳು. ತಾನು ನಿನ್ನ ಹೆಂಡತಿ ಸಣ್ಣಕಂಬಿ ನನ್ನನ್ನು ಮದುವೆಗೆ ಒಪ್ಪಿಸಿ ಕರೆದುಕೊಂಡು ಬಂದರು. ಮದುವೆಯ ದಿನ ನೀನಿಲ್ಲದೆ ನನ್ನನ್ನು ನಿನ್ನ ಬಾಕಿಗೆ ಮದುವೆ ಮಾಡಿದರು. ಜನಾದಿ ಜನವೆಲ್ಲರ ಮುಂದೆ ಅವಮಾನವಾಯಿತು. ನರಮಾನವರಿಗೂ ಬಾಕಿಗೂ ಮದುವೆಯಾಗುತ್ತದೆಯೇ ಎಂದೆಲ್ಲಾ ಅಣಕಿಸಿದರು. ಆದದ್ದು ಆಗಲಿ ಒಂದು ಸಾರಿ ದೈಮಾರ ಮಾಮನೇ ಗಂಡ ಅಂಬ್ತಾ ನಿಶ್ಚಯವಾದ ಮೇಲೆ, ಬದಲಿ ಯೋಚನೆ ಮಾಡೋ ಹೆಣ್ಣಲ್ಲ ನಾನು. ನಿನ್ನ ಬಾಕನ್ನೇ ನೆಚ್ಚಿ ಗಂಡ ಎಂದು ಹಾರ ಹಾಕಿದೆ. ಕೈಹಿಡಿದು ಗಂಡ ಎಂದು ಒಪ್ಪಿಕೊಂಡೆ. ಅತ್ತ ತಾಯಿ ಮನೆಗೂ ಹೋಗದೆ, ಗಂಡನ ಬರುವಿಕೆಗಾಗಿ ಕಾದೆ. ನಿನ್ನ ಅತ್ತಿಗೆಯವರಂತೂ ನನ್ನನ್ನು ಎಂದೂ ಮನುಷ್ಯಳಂತೆ ನೋಡಿಕೊಳ್ಳಲೇ ಇಲ್ಲ. ಮನೆಕೆಲಸವನ್ನು ಆಳಿಗಿಂತಲೂ ಅತಿಶಯವಾಗಿ ಮಾಡಿಸಿಕೊಂಡರು. ಅದಕ್ಕೂ ನಾನು ಅಂಜಲಿಲ್ಲ, ಅಳುಕಲಿಲ್ಲ. ಅಲ್ಲಿಗೆ ಅವುರ ದರ್ಪ ನಿಲ್ಲಲಿಲ್ಲ. ನನ್ನನ್ನು ಹುಟ್ಟು ಬಂಜೆ ಎಂದು ಅವಮಾನ ಮಾಡಿದರು. ಹಾದರದ ಪಟ್ಟ ಕಟ್ಟಿದರು, ಅಂದರು ಹಂಗಿಸಿದರು. ಹಿಂಗೆಲ್ಲಾ ಆದ ಮೇಲೆ ನಾನು ಪ್ರಾಣ ಹೊರೆದುಕೊಂಡು ಇರಬಹುದೆ ಸ್ವಾಮಿ? ಅದಕ್ಕೆಂತಲೇ ಕಾಡಿನ ಪಾಲಾದೆ. ಹುಲಿ, ಸಿಂಹಗಳ ಗೂಡಿಗೆ ಹೋದೆ. ಅವೂ ಎರಡು ಭಾಗವಾಗಿ ನನ್ನಿಂದ ದೂರವಾದವು. ಘಟ ಸರ್ಪದ ಬಾಯಿಗೆ ಕೈಕೊಟ್ಟೆ. ಆ ಕಾಳಿಂಗ ರಾಜನೂ ನನ್ನನ್ನು ಮುಟ್ಟದೆ ಮುದುರಿಕೊಂಡಿತು. ಆಗ ಸ್ವಾಮಿ ಚಿತ್ತುರದೇವರ ಕರುಣೆಯಿಂದ ಗುಂಗೆಯ ಹುಳುವಾಗಿ ಹಾರಿ ತಮ್ಮ ದರ್ಶನ ಭಾಗ್ಯವಾಯಿತು. ತಮ್ಮನ್ನು ಮುಟ್ಟುವುದಕ್ಕೆ ಹೆದರಿ, ಗುಂಗೆಯ ಹುಳುವಾಗಿ ಶಬ್ದ ಮಾಡಿ ಎಚ್ಚರಿಸಿದೆ ಸ್ವಾಮಿ. ನನ್ನ ಅಪರಾಧವನ್ನು ಮನ್ನಿಸು ಎಂದು ಪರಿಪರಿಯಾಗಿ ಬೇಡಿಕೊಂಡಳು ಆಯಮ್ಮ.

ಯಾವಾಗ ನಾನು ಕಂಬಕ್ಕ ಅಂಬ್ತಾ ನಿಂತ ನಿರ್ವಾಣದಲ್ಲಿ ಒಂದು ನೂಲು ಎಳೆನೂ ಮೈಮೇಲೆ ಇಲ್ಲದೆ, ಯಾವ ನಾಚಿಕೆ, ಭಯನೂ ಇಲ್ಲದೆ ಕಂಬಕ್ಕ ನಿಂತುಬಿಟ್ಟಳೋ, ದೈಮಾರನಿಗೆ ಪಶ್ಚಾತ್ತಾಪನೂ ಆಯಿತು. ನಾಚಿಕೆನೂ ಆಯಿತು. ತಮ್ಮ ಅಣ್ಣಗಳು, ಅತ್ತಿಗೆಯರು ತನ್ನ ಮಡದಿಗೆ ಕೊಟ್ಟಿರುವ ಕಾಟದಿಂದ ಅವನ ಮನಸ್ಸು ಕಡಿದೋಯಿತು. ಆದರೂ ನಂಬದೆ ಇನ್ನೂ ಕಂಬಕ್ಕನ ಸತ್ವ ಪರೀಕ್ಷೆಗೆ ಇಳಿದ.

ದೈಮಾರ ಹೇಳಿದಂತೆ ಕಂಬಕ್ಕ ತಣ್ಣೀರು ಮುಳುಗಿದಳು. ಬೇವು ತಿಂದು ಹಾವಿನ ಗೂಡಿನವರೆಗೆ ದೇಕಿದಳು. ಕಲ್ಲು ಕಚ್ಚಿ ಕಲ್ಲು ತಿಂದ್ಲು. ದೈಮಾರು ಹಾವುಗಳನ್ನು ಕರೆದ.

ಬಂದಂತ ಹಾವು ಕಂಬಕ್ಕಳನ್ನು ಮುಟ್ಟುವುದಿರಲಿ, ಎಡಕ್ಕೊಂದು ಬಲಕ್ಕೊಂದು ನಿಂತು ಹೆಡೆ ಎತ್ತಿ ಶರಣು ಮಾಡಿ ಎಡಬಲವಾದವು. ದೈಮಾರನಿಗೆ ಕಂಬಕ್ಕನೇ ನನ್ನ ಹೆಂಡತಿ, ಅವುಳು ಹೇಳಾದು ಸತ್ಯ ಎಂಬೋದು ತಿಳಿದುಹೋಯಿತು. ಆದರೂ ಅನುಮಾನ ಹೋಗಲಿಲ್ಲ. ಆಗ ಆಕಾಶವಾಣಿಯೊಂದು ನುಡಿದು ಕಂಬಕ್ಕ ನಿನ್ನ ಹೆಂಡತಿ. ಅವಳನ್ನು ಸ್ವೀಕರಿಸು, ಕೈಬಿಡಬೇಡ ಅಂಬ್ತಾ ಹೇಳಿದಂಗಾಯ್ತು. ಈ ದಿವ್ಯವಾಣಿ ಕೇಳಿದ ಮೇಲೆ ದೈಮಾರ ಕಂಬಕ್ಕಳನ್ನು ಹೆಂಡತಿ ಅಂಬ್ತಾ ಒಪ್ಪಿಕೊಂಡ. ಅಂಟು ಮುಟ್ಟು ತಾಗದಿರಲಿ ಅಂದು ಮೂರು ಮಡುವಿನ ನೀರು ಮುಳುಗಿಸಿದ. ಮೂರು ಬಟ್ಟೆ ಬದಲಾಯಿಸಿದ. ಗೋವಿನ ಉಡಿಯಿಂದ ಹೊರಗೆ ದೂರದಲ್ಲಿ ಗಳ ಕಡಿದು ಸೊಪ್ಪು ಸದೆ ತಂದು ಹುಲ್ಲು ಎಲೆ ಹಾಕಿ ಒಂದು ಪಾಕಿ ಮಾಡಿಕೊಂಡು ವಾಸ ಮಾಡತೊಡಗಿದರು.

ಹಿಂಗೆನೆ ದಿನ ಕಳೆಯಿತು. ಗಂಡ ಹೆಂಡತಿ ಅನ್ಯೋನ್ಯವಾಗಿದ್ದುಕೊಂಡು ದನಕರ ಜೋಪಾನ ಮಾಡುತ್ತಿದ್ದರು. ಕಂಬಕ್ಕ ಹೊತ್ತಾರೆ ಎದ್ದು ಮನೆ ಕಸಮುಸುರೆ ಮಾಡಿಕೊಂಡು ಅಡಿಗೆ ಮಾಡಿಟ್ಟು, ಹಾಲು ಮೊಸರು ಮಾರುತ್ತಿದ್ದಳು. ಕರಿಹಳ್ಳದ ದಿಣ್ಣೆ ಮೆಲೆ ಕುರುಬರ ಪದ್ಮಣ್ಣನ ಮನೆಯಿತ್ತು. ಆ ಮನೆಯಲ್ಲಿ ಕುರುಬರು ಕಂಬಳಿ ತಯಾರಿಸುತ್ತಿದ್ದರು. ಕುರಿ ಪಾಲನೆ ಅವುರ ಕಾಯಕ. ಕಂಬಕ್ಕನೂ ಕುರುಬರ ಹೆಂಗಸರ ಪದ್ಧತಿಗೆ ಹೊಂದಿಕೊಂಡು ಕಷ್ಟ ಸುಖ ಹಂಚಿಕೊಂಡು, ಅವರಲ್ಲಿ ಅಕ್ಕ ತಂಗಿರಂತೆ ಬೆಳೆದಳು. ಮೊದಮೊದಲು ಒಣಗಿದ ಸೀಗೇಕಾಯಿನಂತಾಗಿದ್ದ ಕಂಬಕ್ಕ ಈಗ ಮೈಕೈ ತುಂಬಿಕೊಂಡು ಚಂದವಾದಳು. ಆಮೇಲೆ ಗರ್ಭಿಣಿಯೂ ಆಗಿ, ಹೊಟ್ಟೆ ತುಂಬಿಕೊಂಡು ಚೆಂದಾಕಾದಳು. ಹಿಂಗೆ ಒಂದು ರಾತ್ರಿ ಮಲಗಿದ್ದಾಗ ಕನಸಿನಲ್ಲಿ ಕಾಡಿನಲ್ಲಿ ಒಬ್ಬಂಟಿಯಾಗಿ ಬದುಕುತೀಯ, ನವಮಾಸ ತುಂಬುತಾಯಿದೆ. ಬಸಿರ ಬಯಕೆ ತೀರಿಸಬೇಕು. ತಾಯಿ ಉಡುಕೆ ಸೀರೆ ತರಬೇಕು. ಗೊಲ್ಲರ ಮುತ್ತೈದೆಯರಿಗೆ ಮಡಿಲು ತುಂಬಬೇಕು ಅಂದಂಗಾಯ್ತು. ಬೆಳಕಾಗುತ್ತಿದ್ದಂಗೆ ಗಂಡನೊಂದಿಗೆ ರಾತ್ರಿ ಕನಸು ಬಿದ್ದ ಸಂಗತಿ ಹೇಳಿದಳು. ದೈಮಾರನಿಗೂ ಕಂಬಕ್ಕ ಹೇಳಿದ್ದು ಸರಿ ಅನ್ನಿಸಿತು. ಸರಿ ಕುರುಬರ ಮನೆಗೆ ಹೋಗಿ ತಾವು ಊರಿಗೆ ಹೋಗುತ್ತಿರುವ ಸಂಗತಿ ತಿಳಿಸಿದನು. ಪದ್ಮಣ್ಣ, ಹಾಲು ಕುರುಬರು, ಹಂಡೇಕುರುಬರು ಕೂಡಿಕೊಂಡು ಗೂಡಬ್ಬ ಮಾಡಿದರು. ಗೊಲ್ಲಸಂಪ್ರದಾಯದಂತೆಯೇ ಅಂಟುಮುಟ್ಟು ಆಗದಂತೆ, ಎಂಜಲು ತಾಕದಂತೆ ಹೊಸ ಅರವೀಲಿ ನೀರು ತಂದು, ಕಂಚು ಬೆಳಗಿದ್ರು. ಹೊಸ ಒಲೆ ಹೂಡಿ ಪಾಲು ಪಂಚಾಮೃತದ ಅಡಿಗೆ ಮಾಡಿದರು. ಎರಡು ಅಗ್ರದೆಲೆ ತರಿಸಿದರು. ದೇವರ ದೈಮಾರನೂ ಸಣ್ಣ ಕಂಬಕ್ಕನೂ ಕರಿಯ ಕಂಬಳಿ ಜಾಡಿ ಹಾಸಿ ಕೂರಿಸಿದರು. ಯಂಜಲು ಮಾಡದಂತೆ ಪಾಲು ಪಂಚಾಮೃತದ ಅಡಿಗೆಯನ್ನು ಉಣಬಡಿಸಿದರು. ಆಮೇಲೆ ಕುರುಬರ ಕಂಬಳಿ

ಹೆಗಲಿಗೆ ಹಾಕಿದರು. ರುಮಾಲ ಸುತ್ತಿದರು. ಮೆಡ್ಡೆಕೋಲನ್ನು ಕೈಗೆ ಕೊಟ್ಟರು. ಚಿಪ್ಪಿನ ಕೊಡಲಿ ನೀಡಿದರು. ನಾಗವಾಳಿ ಕಳಿ ಅಡಿಕೆ, ತಾವರೆಗೆರೆ ಕೆನೆ ಸುಣ್ಣ ಕೊಟ್ಟು, ಕೈಗೆ ಕುರುಬ ದಾರ ಕಟ್ಟಿ ಒಂದು ಜನಿಗೆ ಕುರಿ ನೀಡಿ ಸಾಗಾಕಿದರು. ದೈಮಾರ ತಾನು ಸಾಕಿದ್ದ ದನಗಳನ್ನು ಕಳ್ಳೆ ಒಳಗೆ ಕೂಡಿಬಿಟ್ಟು ಹೆಂಡತಿ ತೌರಿಗೆ ಬಿಟ್ಟು ಬರುತೀನಿ. ಅಲ್ಲಿಯ ಗಂಟ ನೀವೇ ರಕ್ಷಣೆ ಮಾಡಿ ಕೊಳ್ಳಬೇಕೆಂದು ಕೇಳಿಕೊಂಡ. ಭೂಮಿ ತಾಯಿ ಆಕಾಶದ ದೇವತೆಗಳಿಗೂ ಪ್ರಾರ್ಥಿಸಿಬಿಟ್ಟು. ಅಲ್ಲಿಂದ ಹೆಂಡತಿಯನ್ನು ಕರಕೊಂಡು ಹೊರಟನು. ಆಗ ಒಂದು ಹಸಿನ ಕರು, ದೈಮಾರನ ಮೇಲಿನ ಪ್ರೀತಿಯಿಂದ ಬಿಟ್ಟು ಹೋಗಿಬಿಡುತಾನೆ ಅಂಬ್ತಾ, ಕಳ್ಳಿ ಬೇಲಿ ನೆಗೆದು ದೈಮಾರನನ್ನು ಹಿಂಬಾಲಿಸುತ್ತಾ ಬಂದುಬಿಡ್ತು. ದೈಮಾರ ಮುಂದೆ ಮುಂದೆ ಹೋದ, ಕರ ದಾರಿ ಕಾಣದೆ, ಅಲೆದು ಅಲೆದು ಕೊನೆಗೆ ಮ್ಯಾಸ ಬೇಡರ ಕರುಗಳ ಗುಂಪಿಗೆ ಸೇರಿಕೊಂಡಿತು.

ಅನ್ನದ ಮದವಿಲ್ಲ ತನ್ನದಾದ ಮರವಿಲ್ಲ
ಯೌವ್ವನದ ಬಾಧೆ ಬಲು ಬಾಧೆ ಮನೆಸ್ವಾಮಿ
ಗಂಡನ ಪಾದ ಸಿರಿಪಾದ ಕರುಣಿಸೋ



## ಕೆಂಗರು ಮಗುವಿನ ಜನನ

ಕಂಬಕ್ಕ-ದೈಮಾರ ತಮ್ಮ ಗೂಡು ಬಿಟ್ಟು ದೂರ ದೂರ ಬಂದರು. ದಟ್ಟ ಕಾಡು, ಕಾಡಿನಲ್ಲಿ ದಾರಿ ಸಾಗಲಿಲ್ಲ. ಕಲ್ಲು, ಮುಳ್ಳು, ಮರ, ಹಳ್ಳ ಇಳಿಬೇಕು, ಹಳ್ಳ ಹತ್ತಬೇಕು. ಮೂರು ಹಗಲು ಹಿಂಗೆ ನಡೆಯೋದು, ಕತ್ತಲೆ ಆಗುತಲೇ ಮರದ ಬುಡದಲ್ಲೋ, ಬಂಡೆ ಮೇಲೆಯೋ ಮಲಗಾದು ಮಾಡೀರು. ಮೂರು ದಿನದ ಹೊತ್ತಾತು. ಅನ್ನದ ರಸ ಒಳಾಕೆ ಹೋಗಲಿಲ್ಲ. ಕಂಬಕ್ಕನಿಗೆ ಒಂದು ಹೆಜ್ಜೆ ಮುಂದೆ ಇಕ್ಕಕ್ಕೂ ಆಗಲಿಲ್ಲ. ಬಲವಂತವಾಗಿ ಕೈಹಿಡಿದು, ಹಿಡಿದು ಮುಂದಮುಂದಕೆ ಕರಕೊಂಡು ಬಂದ. ಹಿಂಗೆನೆ ಬರುತ್ತಿರುವಾಗ ಕಂಬಕ್ಕಳಿಗೆ ಹೊಟ್ಟೆ ತೊಳಸಿದಂಗಾಯ್ತು. ಕಣ್ಣು ಮಂಜಾದಂಗಾಯ್ತು. ಕೈಕಾಲು ದಪ್ಪ ಆಗಿ ಮರಗಟ್ಟಿಕೊಂಡವು. ಮೈನಾಗೆ ಒಂದು ತರ ಚಳಕು ಬಂದಂಗಾಯ್ತು. ಗಂಡನಿಗೆ ಹೇಳಿದಳು. ನಾವು ಕುರುಬರ ಮನೆಗಿದ್ರೆ ಚೆನ್ನಾಗಿತ್ತು. ಈಗ ನನಗೆ ಯಂಗೆಂಗೋ ಆಗುತ್ತೆ. ದಾರಿ ತಿಳಿಯುತ್ತಿಲ್ಲ. ಉಣ್ಣಾಕೆ ಏನೂ ಇಲ್ಲ. ಎಲ್ಲಾದರೂ ನೀರಾದರೂ ಇದ್ದರೆ ತಗೊಂಡು ಬರ್‍ರಿ, ಅಂಮುತಾ ಕಂಬಕ್ಕ ದೈಮಾರನನ್ನು ಕಳುಹಿಸಿದಳು. ದೇವುರ ದೈಮಾರ ನೀರು ತರಾಕೆ ಅಮ್ತಾ ಹೋದನು. ಹೋದ ಹೋದ ದೊಡ್ಡನು ಕ್ರೂರವಾಗಿದ್ದ ಕಾಣುತ್ತದೆ. ಕಲ್ನಾರಹಳ್ಳ, ಕರಿಮಲೆ ಕಾಡು, ಹುಲಿಹಳ್ಳ, ಸುತ್ತಿ ಸುತ್ತಿರೂ ಒಂದು ಹನಿ ನೀರು ಅಂಬೋದು ಕಾಣಲಿಲ್ಲ. ಹಿಂದಿರುಗಿ ಊರಿಗೆ ಹೋಗಾನ (ಹಾವಿನ ಗೂಡಿಗೆ) ಅಂಬ್ತಾನೆ ದಾರಿನೇ ಕಾಣವಲ್ದು. ಎತ್ತ ಕಡೆಯಿಂದ ಬಂದರೂ ಅದೇ ಜಾಗಕ್ಕೆ ಬಂದು ಬಿಡುತ್ತಿದ್ದನು. ತಿರುಗಿ ತಿರುಗಿ ಸುಸ್ತಾಗಿ ಒಂದು ಮರದ ನೆರಳಿಗೆ ಬಂದ. ಮಾಯದ ನಿದ್ದೆ ಕವುಕಂಡಾಗಿ ಮಲಗಿದವನು ಮೇಲಕ್ಕೆ ಏಳಲಾಗಲಿಲ್ಲ.

ಇತ್ತ ಕಂಬಕ್ಕ ಗಂಡ ಬರುತಾನೆ, ನೀರು ತರುತಾನೆ ಅಂಬ್ತಾ ನೀರಿಗೆ ಹಂಬಲಿಸಿ ಹಂಬಲಿಸಿ ಸುಸ್ತಾದಳು. ಅಷ್ಟರೊಳಗೆ ಹೆರಿಗೆ ಬೇನೆ ಕಾಣಿಸಿಕೊಂಡಿತು. ಒದ್ದಾಡಿದಳು. ಸಕಲ ದೇವುತರನ ನೆನಪಿಸಿಕೊಂಡಳು. ನರಳಾಡಿ ನಳ್ಳಾಡಿದರೂ ನೀನೇ ಅಂಬೋರಿಲ್ಲ. ಅಲ್ಲೆಲ್ಲೋ ಒಂದು ಕಡೆ ಹುಲಿ ಹೂಲಿಕ್ಕುತ್ತೆ. ಇನ್ನೊಂದು ಕಡೆ ನರಿ ಸಿಳ್ಳಿಕ್ಕುತ್ತದೆ. ಪ್ರಾಣಿಗಳ ಸದ್ದು ಬಿಟ್ಟರೆ ಬೇರೇನಿಲ್ಲ. ಗಂಡನ ಗ್ಯಾನ ಬಂದರೂ ಅವುನಿಲ್ಲ. ನೀರು ನೀರು ಅನ್ನುತ್ತಾಳೆ. ನೀರಿಲ್ಲ. ಹಸಿವೆ, ಸಂಕಟ, ಹೆರಿಗೆ ಬೇನೆ ಜಾಸ್ತಿಯಾಯಿತು. ತಡಕಣಾಕೆ

ಆಗಲೇ ಇಲ್ಲ. ಅಂಗು ಇಂಗು ಅನ್ನೋದರ ಒಳಗೆ ಒಂದು ಮಗು ಹುಟ್ಟಿಬಿಡ್ತು. ಬರೆ ನೆಲ. ಹಾಸಲಿಕ್ಕಿಲ್ಲ, ಹೊದಿಯಾಕಿಲ್ಲ. ಎಣ್ಣೆಯಿಲ್ಲ ಹಾಲಿಲ್ಲ. ಮಗು ಕಾರ್ ಕಾರ್ ಅಂಬ್ತಾ ಒಂದೇ ಸಮನೆ ಅಳುತದೆ.

ಸಣ್ಣ ಕಂಬಕ್ಕಗೆ ನೀರು ನೀರು ಅಂತ ದಾವತ್ತಿಬಿಡ್ತು. ತಡಕಳ್ಳಾಕೆ ಆಗದಂತೆ ಸಂಕಟ. ನೀರಿಗೆ ಅಲೆಯುತಾಳೆ. ಇತ್ತ ನೀರು ತರೋಕೆ ಅಂಬ್ತಾ ಹೋಗಿದ್ದನಲ್ಲ, ಗಂಡ ದೈಮಾರ ಅವುನ ಸುಳಿವೇ ಇಲ್ಲ. ಅದರ ದಡಗು ಹತ್ತಿಕೊಂಡು ಬಿಡ್ತು. ಬಾಯಿ ಒಣಗುತ್ತಿದೆ. ಗಂಡನ ದಡಗು, ಮಗುವಿನ ಆರೈಕೆ ಒಂದೇ ಎರಡೇ ಹೇಳಲಾರದಷ್ಟು ಸಂಕಟ ಕಂಬಕ್ಕನಿಗೆ ಬಂದುಬಿಡ್ತು. ದೇವರೆ ಎಂತ ಸಂಕಟ ತಂದು ಒಡ್ಡಿದೆಯಪ್ಪ ಚಿತ್ರದೇವ ಅಂಬ್ತಾ ಗೋಳಾಡುತಾಳೆ ಕಂಬಕ್ಕ. ಹೊಂಗೆ ಹಳ್ಳಕೆ ಬಂದ್ಲು. ಅಲ್ಲೊಂದು ಚಿಲುಮೆ ತಗದ್ಲು. ಮೊದಲು ಮೂರು ಬೊಗಸೆ ನೀರು ಕುಡಿದ್ಲು. ಇನ್ನೊಂದು ಚಿಲುಮೆ ತೆಗೆದ್ಲು. ಅದರಾಗೆ ಹೆತ್ತ ಸೂತಕ ಅಂಬ್ತಾ, ಮೊದಲು ಸೂತಕ ತೆಕ್ಕೊಂಡ್ಲು. ಹೀಗೆ ಮೂರು ಚಿಲುಮೆ ತೆಗೆದುಬಿಟ್ಟು ಮೂರು ನೀರು ಹುಯ್ಕೊಂಡು ಮಗು ಮಲಗಿಸಿ ಬಂದಿದ್ಲಲ್ಲ ಕಾಡು, ಅಲ್ಲಿಗೆ ಹೋದ್ಲು. ಹೆತ್ತ ಹೊಟ್ಟೆ ಸಂಕಟ ರಕ್ತ ಮಾಂಸ ಬಸ್ತಿದ ಜೀವ. ಸಂಕಟ ಜಾಸ್ತಿಯಾಯಿತು. ಕಳವೆತ್ತಿದಂಗಾಯ್ತು. ಈಗ ಹೊಟ್ಟೆಗೆ ಏನಾದರೂ ಹಾಕಿಕೊಳ್ಳದಿದ್ದರೆ ಬದುಕಾಕಾಗದಿಲ್ಲ ಅನ್ನಿಸಿತು. ಕಾಡಿನಾಗೆ ಕಾರೆಹಣ್ಣು, ಬೋರೆಹಣ್ಣು, ಕಾಡುಬಿಕ್ಕೇಹಣ್ಣು, ತೂಬರೆ ಹಣ್ಣು ಮರಡಿ ಹಣ್ಣುಗಳಂತ ಹಣ್ಣುಗಳನ್ನು ಹುಡುಕಿಕೊಂಡು, ಅಲ್ಲೊಂದು ಇಲ್ಲೊಂದು ಹಣ್ಣು, ದ್ವಾರಗಾಯಿಗಳನ್ನು ಆಯ್ಕೊಂಡು ತಿಂತಾ ಕಂಬಕ್ಕ, ಅಲೆಯುತ್ತಾ ಹೋದಳು. ಹೋಗುತಾ ಹೋಗುತಾ ದೂರ ಹೋಗಿಬಿಟ್ಟಳು. ಹಣ್ಣು ತಿಂದ ಮೇಲೆ, ರವಾಟು ಜೀವ ಬಂದಂಗೆ ಆಯಿತು. ಹಿಂತಿರುಗಿ ಓಡೋಡಿ ತನ್ನ ಮಗನ ಹುಡುಕಿಕೊಂಡು ಬಂದ್ಲು. ಆ ಮರ, ಈ ಮರ, ಯಾವ ಮರ ಅಂಬ್ತಾ ತಿಳಿಯಲೇ ಇಲ್ಲ. ಹಸಿವಿನ ಭರದಲ್ಲಿ ಮರಕ್ಕೆ ಏನಾದರೂ ಗುರುತಾದರೂ ಮಾಡಿ, ಬಂದಿದ್ರೆ ಮಗು ಸಿಕ್ಕದು. ಅದೂ ಇಲ್ಲದಂಗಾಗಿ ಅಲೆದು ಅಲೆದು ಕಂಬಕ್ಕ ಕಂಗಾಲಾದಳು.

ಗಂಡನು ಒಂದು ಕಡೆ, ಹೆಂಡತಿ ಒಂದು ಕಡೆಯಾದರು. ಮಗುವನ್ನು ತಾನು ಉಟ್ಟು ಸೀರೆ ಅರ್ಧಕ್ಕೆ ಹರಿದು ಅದನ್ನೇ ಹಾಸಿಗೆ, ಹೊದಿಕೆ ಮಾಡಿ ಬಂದಿದ್ಲು. ಈಗ ಈ ಮಗುವೂ ಮರೆಯಾಗಿದೆ. ಕಾಡು ದಾರಿ ತಿಳಿಯುತ್ತಿಲ್ಲ. ಕಂಬಕ್ಕ ಒಂದೇ ಸಮನೆ ಅಲೆದು ಕೂಗಿ, ಕೂಗಿ ಸುಸ್ತಾಗಿ ಎಲ್ಲೋ ಒಂದು ಕಡೆ ಕಳವತ್ತಿ ಮಲಗಿದವಳು ಮೇಲೆ ಏಳಲೇ ಇಲ್ಲ. ಅತ್ತ ಹೆಂಡತಿ ಮಗುವಿನ ಆಸೆಯಿಂದ ದೈಮಾರನೂ ನೀರನ್ನು ಹುಡುಕಿ ಹುಡುಕಿ, ಅವುನೂ ಕಳವೆತ್ತಿ ನೆಲ ಹಿಡಿದೋನು ಮೇಲೇಳಲೇ ಇಲ್ಲ. ಮಗ ಕಾಡುಪಾಲಾತು, ಅನಾಥವಾಗಿಬಿಡ್ತು.


## ಪಾರ್ವತಿ ಕಿವಿಕರಣಕ್ಕೆ ಕೆಂಗರು ಮಗುವಿನ ಅಳಲು

ಇತ್ತ ಏನಾಯ್ತಪ್ಪಾಂದ್ರೆ, ಕಂಬಕ್ಕ ಮಗನ ಮಲಗಿಸಿ ಕಾರೇಹಣ್ಣು, ಬೋರೆಹಣ್ಣು, ನೀರಿಗಾಗಿ ಹೋಗಿದ್ದಳಲ್ಲ, ಆ ಮಗು ಹಸಿವಿನಿಂದ ಒಂದೇ ಸಮನೆ ಕಾರ್ ಕಾರ್ ಅಂಬ್ತಾನೇ ಹೇಳ್ತಾ ಇತ್ತು. ಅದೇ ಕಾಲಕ್ಕೆ ಪಾರ್ವತಿ ಪರಮೇಶ್ವರರು ಆಕಾಶ ಮಾರ್ಗದಲ್ಲಿ ನಂದಿ ಮೇಲೆ ಲೋಕಸಂಚಾರ ಮಾಡ್ತಾ ಇದ್ರು. ಆಗ ಈ ಮಗು ಒಂದೇ ಸಮನೆ ಅಳ್ತಾಯಿತ್ತಲ್ಲ, ಅದರ ಶಬ್ದ ಪಾರ್ವತಿ ಕಿವಿ ಕರಣಕ್ಕೆ ಬೀಳ್ತು. ಆಗ ಪಾರ್ವತಿ ಶಿವ ಪರಮಾತ್ಮನ್ನ ಕೇಳಿಕೊಂಡ್ಲು 'ಸ್ವಾಮಿ ಭೂಲೋಕದಲ್ಲಿ ಯಾವುದೋ ನರಮನುಷ್ಯರು ಅಳ್ತಾ ಇರೋದು ಕೇಳ್ತಾ ಅದೆ. ರಥ ನಿಲ್ಲಿಸಿ ಸ್ವಾಮಿ ನೋಡಾನ' ಅಂದ್ಲು. ಆಗ ಶಿವ ಹೇಳಿದ 'ನಡೆಯಲಾ ಪಾರ್ವತಿ, ದೆವ್ವನೋ ಭೂತವೋ ಗಲಾಟೆ ಮಾಡುತದೆ. ರಾಕ್ಷಸರೂ ಈಗ ವೇಷಾಂತರದಿಂದ ಮೋಸ ಮಾಡುತ್ತವೆ. ಅವುರ ತಂಟೆ ನಮಗೆ ಬ್ಯಾಡ, ನಡೆ ಮುಂದಕ್ಕೆ ಹೋಗಾನ' ಅಂದ್ನು. ಆಗ ಪಾರ್ವತಿ ಹೇಳಿದಳು 'ಸ್ವಾಮಿ ನಮ್ಮನ್ನು ದೇವಲೋಕ, ಭೂಲೋಕ, ಪಾತಾಳ ಲೋಕವೆಲ್ಲಾ ದೇವುತರು ಅಂಬ್ತಾನೇ ಕರೀತಾರೆ. ಅವುರ ಸಂಕಟ ಆಲಿಸದೆ ಹೋದರೆ ಸರಿನೆ? ನಡಿ ಯಾವುದೋ ಮಗು ಅಳುವಂಗಿದೆ. ಏನು ಅಂಬ್ತಾನೆ ತಿಳಿದು ಮುಂದಕ್ಕೆ ಹೋಗಾನ' ಅಂದ್ಲು.

ಪಾರ್ವತಿಯ ಈ ಒತ್ತಾಯವನ್ನು ಮೀರಕಾಗದೆ ಶಂಕರನು, ನಂದಿ ಮೇಲೆ ಕುಂತು ಜೆರಿಮಲೆ ಕಾಡಿಗೆ ಆ ಮಗು ಇರೋ ಜಾಗದಲ್ಲಿ ಇಳಿದರು. ಬಂದು ಮಗ ನೋಡುತಾರೆ. ಕೆಂಪುಗೆ ದೇವ್ರತರ ಅದೆ ಮಗ. ಯಾರೋ ಹೆತ್ತೋಳು ಹೆತ್ತಂಗೆ ಈ ಮಗ ಬಿಟ್ಟುಟ್ಟು ಹೋಗಿರುವುದು ತಿಳಿಯಿತು. ಪಾರ್ವತಿ ಓಡಿಬಂದಳು. ಎಳೆ ಮಗುವನ್ನು ಎತ್ತಿಕೊಂಡ್ಲು. ತನ್ನ ಬಲಗೈ ಬೆರಳಿಟ್ಟು ಚೀಪಿಸಿದಳು. ಮಗು ಅಳಾದು ನಿಂತಿತು. ಆಗ ಶಂಕರ ಯೋಚನೆ ಮಾಡಿ ಭೂಲೋಕದ ಈ ಮಗುವನ್ನು ದೇವಲೋಕಕ್ಕೆ ತಗೊಂಡು ಹೋಗೋವಂಗಿಲ್ಲ ಅಂಬ್ತಾ ಯೋಚನೆ ಮಾಡಿಬಿಟ್ಟು, ಈ ಮಗುವನ್ನು ಜೋಪಾನ ಮಾಡಬೇಕೆಂದು ಪಾರ್ವತಿ-ಪರಮೇಶ್ವರರು ಮಾತಾಡಿಕೊಂಡರು. ಮಗುವನ್ನು ಎತ್ತಿಕೊಂಡು ಮುಂದಕ್ಕೆ ಮೂರು

ಹೆಜ್ಜೆ ಬಂದರು.

ಅಲ್ಲೊಂದು ಹೆಬ್ಬಾಲದ ಮರ. ಪರಮೇಶ್ವರ ಅಲ್ಲೊಂದು ಚಿನ್ನದ ತೊಟ್ಟಿಲು ಮಾಡಿ, ಅದಕ್ಕೆ ಬೆಳ್ಳಿ ಹಗ್ಗ ಹಾಕಿ, ಹೆಬ್ಬಾಲದ ಮರದ ಕೊಂಬೆಗೆ ತೊಟ್ಟಿಲು ಕಟ್ಟಿದರು. ತೊಟ್ಟಿಲು ಕಟ್ಟಿ, ಹೀಗೆ ಹೇಳಿದರು 'ಆಲದ ಮರದವ್ವ ಹಾಲು ಕೊಡವ್ವ, ಬೇವಿನ ಮರದವ್ವ ಬೆಣ್ಣೆಯ ನೀಡವ್ವ, ಕಟ್ಬಾಣಿ ಹಸುಗಳೇ ಹಾಲು-ತುಪ್ಪ ಎರೆಯಿರವ್ವ, ಔಡಲ ಗಿಡಗಳಿರಾ ಎಣ್ಣೆ ನೀಡಿರವ್ವ, ಕೇದಿಗೆ ವನದಾಗಳ ನಾಗಸರ್ಪದೇವ ನಾಗಬೆತ್ತ ಹಿಡಿದು ರಕ್ಷಣೆಯ ನೀಡಪ್ಪ, ಗರುಡ ಬೇರುಂಡ ನೆರಳನ್ನು ನೀಡಪ್ಪ' ಎಂದು ಮಗುವಿಗೆ ಜೇನುತುಪ್ಪ ಮೇಲಿಂದ ತೊಟ್ಟಿಕ್ಕಿ ಬಾಯಿಗೆ ಬೀಳುವಂತೆ ಮಾಡಿ, ಅದರ ರಕ್ಷಣೆ ಮಾಡಿದರು. ನಂತರ ಪರಮೇಶ್ವರ ಹೇಳಿದ 'ಈ ಮಗು ಸತ್ಯವಂತ. ನನ್ನ ನಂದಿ ಪೋಷಕ. ಇವನಿಂದ ಲೋಕಕಲ್ಯಾಣ ಆಗುತ್ತದೆ. ಆದುದರಿಂದ ಈ ಮಗು ನಾಯಿಪಾಲು, ನರಿಪಾಲು, ರಾಕ್ಷಸರ ಪಾಲು ಆಗದಂತೆ ಕಾಪಾಡಬೇಕು. ಯಾರಾದರೂ ಬಂದು ಸತ್ಯವನ್ನೇ ಹೇಳಿದವರಿಗೆ ಮಾತ್ರ ಮಗು ದೊರೆಯಲಿ. ಅಲ್ಲಿಯವರೆಗೆ ಹರೆರಾಮ, ಗಿಳಿರಾಮ ಎಂಬ ಪಕ್ಷಿಗಳಿಗೆ ಹೇಳಿ ಮಗುವಿಗೆ ಮಾತು ಕಲಿಸಿ, ಜೋಗುಳ ಪಾಡುವಂತೆ' ಹೇಳಿದನು. ನಾಗೇಂದ್ರನಿಗೆ ಹೇಳಿ ಮಗು ರಕ್ಷಣೆ ಮಾಡುವಂತೆ ಹೇಳಿ, ಶಿವನೂ ಪಾರ್ವತಿಯೂ ಆಕಾಶ ಮಾರ್ಗದಲ್ಲಿ ಹಾರಿ ಕೈಲಾಸಕ್ಕೆ ಹೋದರು.




# ಮಗು ಸಾಕಿದ ವೃಕ್ಷದೇವತೆ

ಮಗು ಹೆಬ್ಬಾಲದ ಮರದ ಕೊಂಬೆ ಮೇಲೆ ಆಡಿಕೋತ ಬೆಳೆಯುತ್ತದೆ. ಆಲದ ಮರದವ್ವ ಮಗುವಿಗೆ ಹಾಲು ಕೊಡುತಾಳೆ. ಮಗು ಬಾಯಿಗೆ ಮೇಲಿಂದ ಜೇನುತುಪ್ಪದ ಹನಿ ತೊಟ್ಟಿಕ್ಕುತ್ತೆ. ಕಾಳಿಂಗಸರ್ಪ ಕಾವಲು ಕಾಯುತ್ತದೆ. ಸೂರ್ಯದೇವನ ಬಿಸಿಲು ಬೀಳದಂತೆ ಗರುಡಬೇರುಂಡ ಪಕ್ಷಿ ರೆಕ್ಕೆ ಬಿಚ್ಚಿ ನೆರಳು ಮಾಡ್ತಾ ಇವೆ. ಈಗ ಮಗುನ ರಕ್ಷಣೆ ಮಾಡಬೇಕು. ಅದನ್ನು ಭೂಲೋಕದ ಮೇಲೆ ಬಿಡಬೇಕೆಂದು ಪರಮೇಶ್ವರ ಯೋಚನೆ ಮಾಡಿದ. ಆಗ ಏನು ಮಾಡಿನಪ್ಪ ಎಂದರೆ, ಗೌರಸಂದ್ರದ ಮಾರಮ್ಮನ ಹತ್ತಿರ ಶಿವ ಹೇಳಿಬಿಟ್ಟು ಚಿಕ್ಕದೇವರಹಟ್ಟಿ ಅಂಬ್ತಾ ಒಂದು ಊರು. ಅದು ಅಲ್ಲೊಂದು ಮಾರನೂರ ಗೊಲ್ಲರ ಸಂಸಾರ. ಏಳು ಜನ ಅಣ್ಣ-ತಮ್ಮಗಳು. ಚಿಕ್ಕೋನು ದ್ಯೆಮಾರ. ಅವುನ ಹೆಂಡತಿ ಕಂಬಕ್ಕ. ಅವುರಿಗೆ ಹುಟ್ಟಿದ್ದೇ ಈ ಮಗು. ಹುಟ್ಟುಪಾಡಿಗೆ ಮಗ ಬಿಟ್ಟುಬಿಟ್ಟು ಕಂಬಕ್ಕನೂ ದ್ಯೆಮಾರನೂ ದೈವಾಧೀನರಾಗಿಬಿಟ್ಟರು. ಈಗ ಸ್ಥಳವಿದ್ದು ತಬ್ಬಲಿ ಆಗಿದೆ. ಬಂಧು ಬಳಗ ಇದ್ದೂ ಅನಾಥವಾಗಿದೆ. ಇವುರ ದೊಡ್ಡಪ್ಪಗಳೂ ದೊಡ್ಡಮ್ಮಗಳು ಬೇಕಾದಷ್ಟು ಸಂಪನ್ನರು. ಲಕ್ಷ್ಮಿ ನಾಲ್ಕು ಮೂಲೆಲೂ ನಾಟ್ಯವಾಡ್ತಾಳೆ. ಆದರೇನು ಅವುರ ಸಂಸಾರ ನಾಯಿ ಮೊಲೆ ಹಾಲಿನಂಗಾಗೆದೆ. ಕಂಬಕ್ಕನಿಗೆ ಅಂದು, ಹಂಗಿಸಿ ಕಳಿಸಿದ್ದೇ ಈವಮ್ಮಂದಿರು. ಈ ಮನೆ ಮಗ ಈಗ ಅನಾಥವಾಗುವುದು ಬೇಡ. ನಾಯಿ ಹೆತ್ತು ನಡುನೀರಿಗೆ ಹಾಕಿದಂಗೆ ಆಗೇದೆ. ಈ ಮಗುವನ್ನು ಅವುರ ವಾರಸುದಾರರಿಗೆ ತಲುಪಿಸಬೇಕೆಂದು ಶಿವನು ಹೇಳಿದಂಗಾಯ್ತು. ಆಗ ಗೌರಸಂದ್ರದ ಮಾರಕ್ಕ ಒಂದು ಉಪಾಯ ಮಾಡಿಳು. ನಾನು ಹೋಗಿ ಹೇಳಿರೂ ನಂಬ ಜನರಲ್ಲ ಇವುರು, ಅಂದುಬಿಟ್ಟು ಚಿಕ್ಕದೇವರಹಟ್ಟಿಗೆ ವಾಂತಿ ಬೇದಿ ತಂದು ಹಾಕಿಬಿಟ್ಲು. ದೇವರು ಮಹಿಮೆ ಕೇಳಬೇಕ? ಎಂತರಿಗೆ ನೋಡಲಿ ವಾಂತಿ ಬೇಧಿ! ತಿಪ್ಪೆಗೂ ಮನೆಗೂ ಪುರುಸೊತ್ತಿಲ್ಲದಂಗೆ ಸೆಡ್ಡೆಗಿಡಿದರು. ಆಗ ಹಿರೀಕ ಚಿತ್ತಯ್ಯ ಅಂಬೋನು ನಾಲ್ಕು ಜನ ಕೂರಿಸಿಕೊಂಡು, ತಮ್ಮ ಮನೆದೇವುರ ಚಿತ್ರದೇವರು, ವಾಡಿಕೆ ದೇವುರು ಗೌರಸಂದ್ರದ ಮಾರವ್ವನ ಆಕೆಯ ಒಂದು ಮಾತು ಕೇಳಬೇಕ ಎಂದೂ ವಾಂತಿ ಬೇಧಿ ತಂದಾಕೆವಳೆ. ಅವುಳದೆ ಕೈವಾಡ. ತಪ್ಪು ದಂಡ ಕೊಟ್ಟು, ವಪ್ಪ ಮಾಡಿಕೋಬೇಕು ಅಂವ್ತಾ

ಮಾತಾಡಿಕೊಂಡರು.

ಬೆಳಕು ಹರೀತು ಎಲ್ಲರೂ ಎದ್ದರು. ಮತ್ತದೇ ವಾಂತಿ ಬೇಧಿ. ಸರಿ ಹಿರಿಯರು ಮಾತಾಡಿಕೊಂಡಂತೆ ಗೌರಸಂದ್ರ ಮಾರಮ್ಮನ ಹೂ ಕೇಳಕೆ ಹೊರಟರು.



## ಕೊರವಂಜಿ ತೋರಿದ ಕರುಳ ಕುಡಿ

ಹೀಗೆ ಹೊರಟು ಹೋಗುತ್ತಿರಬೇಕಾದರೆ, ಕೈಯಲ್ಲಿ ಕವಡೆ ಸರ ಹೊದ್ದು, ನವಿಲುಗರಿ ಕಟ್ಟು, ಎಣೆಗಂಟು, ಹಣೇಲಿ ಕಾಸಿನಗಲ ಕುಂಕುಮ, ತಲೆಮ್ಯಾಲೆ ಸೆರಗಾಕಿಕೊಂಡು ಮುಂಜೆರಗು ಬಲಗೈಲಿ ಹಿಡಕೊಂಡು, ಕರೆ ಸೀರೆ ಉಟ್ಟುಕೊಂಡು ಒಂದೆಂಗಸು ಕಾಣ್ತು. ಸರಿ ದ್ಯಾವರಹಟ್ಟಿಯಿಂದ ಬಂದಿದ್ದರಲ್ಲ ದೈಮಾರನ ಅಣ್ಣಗಳು, ಕೊರವಂಜಿನ ನೋಡಿರು. ಕೊರವಂಜಿನೇ 'ಯಾವೂರ ಅಣ್ಣಯ್ಯ? ಮಾರಕ್ಕನತ್ರ ಹೊರಟಿದ್ದೀರಲ್ಲ' ಅಮ್ತಾ ಕೇಳಿತು. ಆಗ ಆರು ಜನ ಅಣ್ಣ ತಮ್ಮಗಳಿಗೆ 'ಎಲೆ ಹೆಂಗಸೆ, ನಾವು ಮಾರಮ್ಮನ ಗುಡಿಗೆ ಹೋಗಾದು ನಿಂಗೆ ಹೆಂಗೆ ತಿಳೀತು?' ಅಂದು ಆಶ್ಚರ್ಯಪಟ್ಟುಕೊಂಡು, ಮಾತುಕತೆಗಿಳಿದು ಕಣಿ ಹೇಳಬೇಕೆಂದು ಕೇಳಿಕೊಂಡರು.

ಆಗ ಕೊರವಂಜಿ ಕಣಿ ಹೇಳಬೇಕಾರೆ ಮೂಗಳ ದೂಪ, ಮೂರು ಬಂಡಿ ಸೌದೆ ಕೆಂಡ, ಕರಿಚಿಪ್ಪಿನ ಕಾಯಿ, ನಾಲ್ಕು ಮೂಲೆಗೂ ನಾಲ್ಕು ಪಾವಲಿ ಹಣ, ಮೂರು ನಿಂಬೆಹಣ್ಣು ಇವಿಷ್ಟು ತಂದರೆ ಕಣಿ ಹೇಳುತೀನಿ ಅಂದಳು. ಕಾತುರದಿಂದ ಕೂಡಿದ ಅಣ್ಣಗಳು, ಈ ಸಾಮಾನುಗಳನ್ನೆಲ್ಲಾ ಒಂದು ಅಡಿಕೆ ಕಡಿಯೋದರೊಳಗೆ ರೆಡಿ ಮಾಡಿದರು. ಆಗ ಕೊರವಂಜಿ ಮೂರು ಕವಡೆ ಒಗದು ಒಂದು ಕಣಿ ಹೇಳಿದಳು.

ದೈಮಾರನಿಗೆ ಮದುವೆ ಮಾಡಿದ್ದು, ಅವುನು ಹೆಂಡತಿ ಬಿಟ್ಟು ಹೋಗಿದ್ದು, ಆಮೇಲೆ ಸಣ್ಣಕಂಬಕ್ಕ ಗಂಡತಾವ ಸೇರಿಕೊಂಡು ಒಂದಾಗಿ ಬಾಳ್ವೆ ಮಾಡಿದಳು. ವರ್ಷ ತುಂಬೋದರೊಳಗೆ ಒಂದು ಗಂಡು ಮಗು ಹುಟ್ಟಿತು. ಕುರುಬರ ಕೇರೇಗಿಂದ ಗರ್ಭಿಣಿ ಹೆಂಗಸು ತನ್ನ ತೌರಿಗೆ ಹೋಗಬೇಕು. ಕುಲಸ್ಥರನ್ನು ಕಂಡು ಬಸಿರ ಬಯಕೆ ತೀರಿಸಿಕೋಬೇಕೆಂದು ಹೊರಟು, ಬರುವಾಗಲೇ ಆಡಂದಡವೀಲಿ ಮಗು ಹಡೆದುಬಿಟ್ಲು. ಹೆತ್ತ ಸೂತಕ ಕಳೆದುಕೊಳ್ಳಬೇಕು ಅಂಬ್ತಾ ನೀರು ಹುಡುಕಿಕೊಂಡು ಹೋದ ದೈಮಾರ. ಅನ್ನ ಆಹಾರವಿಲ್ಲದೆ ನೀರು-ನಿಡಿ ಇಲ್ಲದೆ, ಅಡವಿ ಪಾಲಾದ. ಅವುನ ದಾರಿನೇ ಹಿಡಿದಳು ಕಂಬಕ್ಕ. ಆಗ ಆ ಮಗು ಇತ್ತಲ್ಲ ಅದನ್ನು ಒಂದು ಮರಡಿಲಿ ಉಟ್ಟಸೀರೆನೆ ಅರ್ಧ ಹರಿದು ಅದರ ಮೇಲೆ ಉಳ್ಳಾಕಿ ಬಂದಿದ್ಲು. ಆ ಮಗುವನ್ನು ಪಾರ್ವತಿ ಪರಮೇಶ್ವರ ನೋಡಿ ರಕ್ಷಣೆ ಮಾಡುವಂತೆ ಮರದಮ್ಮನಿಗೆ ಹೇಳಿ ಹೋದರು. ಈಗ ಮಗು ದೊಡ್ಡದಾಗಿದೆ. ಆ

ಮಗುವನ್ನು ನಿಮಗೆ ತಲುಪಿಸಿ, ಅದರ ಆರೈಕೆ ಮಾಡೋ ಜವಾಬ್ದಾರಿ ಪರಮೇಶ್ವರಗೆ. ಆದ್ದರಿಂದ ಶಿವನು ಗೌರಸಂದ್ರದ ಮಾರವ್ವನಿಗೆ ಹೇಳಿಬಿಟ್ಟು ನಿಮ್ಮ ಹಟ್ಟಿಗೆಲ್ಲಾ ರಕ್ತಬೇಧಿ, ವಾಂತಿಮಾಡಿಸಿ ಬಿಟ್ಟವನೆ. ನಿಮ್ಮನ್ನು ಎಚ್ಚರಿಸೆವಳೆ. ನಿಮ್ಮ ಹೆಂಡತೇರು ಆರು ಜನನೂ ಸೇರಿಕೊಂಡು ಕಂಬಕ್ಕನಿಗೆ ಕಾಟ ಕೊಟ್ಟರು. ಅವುರ ಕಾಟ ತಾಳಲಾರದೆ ಕಂಬಕ್ಕ ಅಡವಿ ಪಾಲಾದಳು. ಈಗ ಅವಳೆತ್ತ ಮಗ ನಿಮ್ಮ ವಂಶದ ಕುಡಿ, ನಿಮ್ಮ ಮನೆ ಬೆಳಗೋನು. ಆ ಮಗುವನ್ನು ತಂದುಕೊಂಡು ಗೌರಸಂದ್ರದ ಮಾರಮ್ಮನ ಹಬ್ಬ ಮಾಡಬೇಕು. ಈತರ ಮಾಡುತೀವಿ ಅಂತಾ ಹರಕೆ ಕಟ್ಟಿ ಊರಿಗೆ ಹೋಗೋವೊತ್ತಿಗೆ ರಕ್ತ ಬೇದಿನೂ ವಾಂತಿನೂ ನಿಲ್ಲುತ್ತದೆ ಅಂದಳು.

ಯಾವಾಗ ಕೊರವಂಜಿ ತಮ್ಮ ಕುಲಮೂಲ, ನೆಲಮೂಲ ತಿಳಿಸಿ, ನಮ್ಮ ವಂಶೋದ್ಧಾರಕನ ಬಗ್ಗೆ ಹೇಳಿಬಿಟ್ಟಳೋ ಬಕ್ಕದೆಲೆ ಚಿತ್ತಯ್ಯನಿಗೂ ಬರಿದಲೆ ಚಿತ್ತಯ್ಯನಿಗೂ ಉಳಿಕೆ ನಾಲ್ಕು ಜನ ತಮ್ಮಗಳಿಗೂ ತುಂಬಾನೇ ಸಂತೋಷವಾಯ್ತು. ಬೇಗ ಬೇಗ ಹಿಂತಿರುಗಿ ಮನೆ ಸೇರಿಕೊಂಡರು. ಊರಿಗೆ ಬರುತ್ತಾರೆ. ಬರೋದರೊಳಗೆ ವಾಂತಿನೂ ಇಲ್ಲದೆ ಬೇದಿನೂ ಇಲ್ಲದೆ, ಎಲ್ಲರೂ ನೋರೂಪಾಗೆವರೆ. ಓಹೋ ಇದೇ ಈಯಮ್ಮನ ಕರಾಮತ್ತು ಅಂದುಬಿಟ್ಟು ಆರು ಜನ ಅಣ್ಣತಮ್ಮಗಳೂ ಒಟ್ಟಾಗಿ ಕಾಡಿನ ದಾರಿ ಹಿಡಿದರು.

ಕರಿಹಳ್ಳದ ಕಾಡು, ಕರಡಿ ಬಯಲು, ಗೂಬೆಹಳ್ಳದ ದಿಣ್ಣೆ ಎಲ್ಲಾ ಸುತ್ತಿದರು. ಒಂದು ಮಗು ಅಳುವಾಗಲಿ, ನರಮನುಷ್ಯರ ಗುರುತಾಗಲಿ ಸಿಗಲಿಲ್ಲ. ಇದೇನಪ್ಪ ಇದೆಂದು ಆರು ಜನ ಅಣ್ಣ ತಮ್ಮಗಳು ತಂದಂತ ಬುತ್ತಿಯ ಬಿಚ್ಚಿ ಉಣ್ಣಕೆ ಒಂದು ಚಿಲುಮೆ ಹಳ್ಳಕೆ ಬಂದ್ರು. ಮೊಕನೆ ತೊಳೆದರು. ಚಿತ್ರದೇವರ ಸ್ಮರಣೆನೆ ಮಾಡಿಬಿಟ್ಟರು. ಬುತ್ತಿ ಉಣ್ಣಬೇಕು ಅಂಬ್ತಾ ಕುಂತು ಮೇಲುಕೆ ನೋಡುತಾರೆ ಒಂದೊಂದು ಹೆಬ್ಬಾಲದ ಮರ. ಆ ಮರದಾಗೆ ಗಿಳಿರಾಮಗಳು ಪದ ಹೇಳುತಾವೆ. ಇದೇನಪ್ಪ ಈ ತರ ಸದ್ದು ಅಂಬ್ತಾ ಒಂದು ತುತ್ತು ಬಾಯಿಗೆ ಇಕ್ಕೊಂಡವರು ಅಂಗೆ ವಾಲಿ ನೋಡುತಾರೆ, ಅಲ್ಲೊಂದು ದೊಡ್ಡ ಆಲದ ಮರ. ಆ ಆಲದ ಮರಕ್ಕೆ ಚಿನ್ನದ ತೊಟ್ಟಿಲು. ಬೆಳ್ಳಿ ಹಗ್ಗ ಹಾಕಿ, ಅದರಾಗೆ ಚಿನ್ನದಂತ ಒಂದು ಮಗು ಮಲಗಿಸಿದ್ದಾರೆ. ಆ ತೊಟ್ಟಿಲು ಮೇಲಕ್ಕೆ ಹೋಗುತ್ತೆ, ಕೆಳಕ್ಕೆ ಬರುತ್ತೆ. ಸರಿ ಬಂದಿದ್ರಲ್ಲ ಆರು ಜನ ಅಣ್ಣತಮ್ಮಗಳಿಗೆ ಬಲು ಖುಷಿಯಾಯಿತು. ಕೊರವಂಜಿ ಹೇಳಿದ ಮಾತು ಸತ್ಯವಾಯಿತು ಅಂದುಬಿಟ್ಟು ತಾವು ಊಟ ಮಾಡುತ್ತಿದ್ದರಲ್ಲ ಬುತ್ತಿ ಅರ್ಧಕ್ಕೆ ಬಿಟ್ಟು ಎಲ್ಲರೂ ಎದ್ದರು. ಗಂಗೆಗೆ ಕೈ ತೊಳೆದರು ಬಂದುಬಿಟ್ಟರು. ಮಗ ನೋಡುತಾರೆ ತೇಟ್ ದೈಮಾರನ ತರನೇ ಅದೆ.

ಹಿರೇನು ಬಕ್ಕತಲೆ ಚಿತ್ತಯ್ಯ ಆಲದ ಮರದಮ್ಮನಿಗೆ ಶರಣು ಮಾಡಿದ. ಮರದಲ್ಲಿ ಕಟ್ಟಿದ್ರಲ್ಲ ತೊಟ್ಟಿಲು ಮೇಲಕೂ ಕೆಳಕೂ ಹೋಗಿ ಬರ್ತಾ ಇದುದು ಕೆಳಕೆ ಬಂದು ನಿಂತುಬಿಡ್ತು. ಅದನ್ನು ಜೋಪಾನ ಮಾಡಿಕೊಂಡು ಕಾಯ್ತಾ ಇತ್ತಲ್ಲ ಕಾಳಿಂಗ ಸರ್ಪರಾಜ ಅವರ ಸ್ವತ್ತು ಅವರಿಗೆ ಒಪ್ಪಿಸಿದೆನಪ್ಪ ಶಂಕರ ಅಂದುಬಿಟ್ಟು, ಕೇದಿಗೆ ವನಕ್ಕೆ ಹರಿದು ಹೋಗಿಬಿಡ್ತು. ಆಗ ಬಕ್ಕತಲೆ ಚಿತ್ತಯ್ಯ ಎರಡು ಕೈಯಿಂದಲೂ ಬಾಚಿ ಮಗ ತಬ್ಬಿಕೊಂಡ. ತಾನು ಸುತ್ತಿಕೊಂಡಿದ್ದ ತಲೆಯ ರುಮಾಲು ತಗುದು ಹೊದಿಸಿ ಮಗ ತೊಟ್ಟಿಲಿಂದ ಈಚೆಗೆ ಎತ್ತಿಕೊಂಡು ಬಂದನು.

ಆರು ಜನ ಅಣ್ಣತಮ್ಮಗಳು ಮಗು ಎತ್ತಿಕೊಂಡು ಬಿಟ್ಟು ಚಿಕ್ಕದ್ಯಾವರ ಹಟ್ಟಿ ಕಡೆಕೆ ಬಂದರು. ಮಗ ಕರಕೊಂಡು ಹಟ್ಟಿ ಒಳಾಕೆ ಹೋಗಂಗಿಲ್ಲ. ಹೆತ್ತ ಸೂತಕ, ಮುಟ್ಟು ಸೂತಕ ಗೊಲ್ಲರಿಗೆ ಸೇರಂಗಿಲ್ಲ. ಆಗ ದೊಡ್ಡನು ಮಗುವನ್ನು ಎತ್ತಿಕೊಂಡು ಬಂದು ಊರು ಇನ್ನೂ ಒಂದು ಮೈಲಿ ಅದೆ ಅನ್ನುವಾಗಲೆ ಗುಡಿಗೌಡನಿಗೆ ಹೇಳಿಕಳಿಸಿದ. ಕಟ್ಟೆಮನೆ ಯಜಮಾನನೂ ಬಂದ. ಬಂದವರು ಮಗು ನೋಡಿ ಸಂತೋಷಪಟ್ಟುಬಿಟ್ರು. ಊರ ಹುದಿಯಿಂದ ಹೊರಗೆ ತೊಟ್ಟಿಲು ಇಟ್ಟರು. ಜಿಂದಿಗೆ ಹಾಕಿ ಗೋವು ಕುಡಿಸಿದರು. ಮೂರು ಕಡೆ ತೊಟ್ಟಿಲು ಇಳಿಸಿ ಎತ್ತಿಕೊಂಡು ಊರು ಇನ್ನೊಂದು ರವಾಟು ದೂರ ಅದೆ ಅನ್ನುವಾಗಲೇ ತೊಟ್ಟಿಲು ಇಳಿಸಿದರು. ಅಲ್ಲೊಂದು ಪಾಕಿ ತರಿಸಿದರು. ಈ ವ್ಯಾಳ್ಯಕ್ಕೆ ಹಿರೇನು ಚಿತ್ತಯ್ಯನಿಗೆ ಒಬ್ಬಳು ಹಿರಿಯಕ್ಕ ಇದ್ದಳು. ಅವಳೆಸರು ಬಡಚಿತ್ತಮ್ಮ ಅಂಮ್ತಾ. ಅವುಳಿಗೆ ಹೇಳಿಕಳಿಸಿರು. ಮಗುವಿಗೆ ತಾಯಿ ಇಲ್ಲ. ಒಬ್ಬಳು ತಾಯಿ ಆಗಬೇಕು. ಮಗನ ತನ್ನಂದು ಅಮ್ತಾ ಆರೈಕೆ ಮಾಡಬೇಕು. ಅದನ್ನೆಲ್ಲಾ ಬಡಚಿತ್ತಮ್ಮನಿಗೆ ಹೇಳಿ ಮಗುವನ್ನು ಅವುಳ ಮಡಿಲಿಕೆ ಹಾಕಿದರು. ಊರ ಹೊರಗಿನ ಪಾಕೀಲಿ ಮಗನೂ, ಬಡಚಿತ್ತಮ್ಮನೂ ಬಿಟ್ಟು ಬಿಟ್ಟು, ಎಲ್ಲರೂ ಮನೆಗೆ ಸೇರಿಕೊಂಡರು.

ಹಿಂಗೆ ಮೂರು ತಿಂಗಳಾಯ್ತು. ಮಗುಗೆ ತಾಯಿಯಾಗಿ ಚಿತ್ತಮ್ಮ ಹೊಂದಿಕೊಂಡುಬಿಟ್ಟಳು. ಅವುಳಿಗೂ ಮಕ್ಕಳ ಫಲವಿರಲಿಲ್ಲ. ಯಾವಾಗ ಮಗ ಎತ್ತಿ ಇಳಿಸಿ ಆಡಿಸಾಕೆ ಸುರು ಮಾಡಿದ ಮೇಲೆ ಅವುಳ ಎದೆಗೆ ಹಾಲು ಇಳಿದುಬಿಟ್ಟು ಮಗುವಿಗೆ ಹಾಲು ಕುಡಿಸುತಾಳೆ. ಆರೈಕೆ ಮಾಡಿದಳು. ಹಿಂಗೆ ಮೂರು ತಿಂಗಳಾಯಿತು. ಗೊಲ್ಲರ ಶಾಸ್ತ್ರ ಆಯಿತಲ್ಲ ಅದರಂತೆ ಶಾಸ್ತ್ರನೂ ಮಾಡಿದರು. ಮೂವರು ಮುತ್ತೈದೆಯರು ಮಗುವನ್ನು ತಮ್ಮ ಮಡಿಲಿಗೆ ಹಾಕಿಸಿಕೊಂಡರು. ಮಗುವಿಗೆ ಹೆಸರು ಕಟ್ಟಿರು. ಅದು ಕೆಂಪಗೆ ಸೂರ್ಯದೇವ ಮೂಡುವಾಗ ಹೊಳೆಯುತ್ತಿರುತ್ತಲ್ಲ ಅಂಗೆನೇ ಹೊಳೆಯುತ್ತಿದ್ದುದರಿಂದ ಆ ಮಗುವಿಗೆ ಕೆಂಗುರ ಅಮ್ತಾ ಕರೆದರು. ನಾಮಕರಣ ಮಾಡಿ ಕುಲಸ್ಥರಿಗೆಲ್ಲಾ ಕುಲದೂಟ ಹಾಕಿಸಿಬಿಟ್ಟರು. ಮಗು ಮನೆ ಸೇರಿತು.

## ಬಂಜೆಯರು ಬಸಿರಾದರು

ಕೆಂಗುರಿ ಮನೆ ಸೇರಿದ ಮೇಲೆ ಅದೇನೋ ಚಿಕ್ಕದ್ವಾರನಹಟ್ಟಿ ಚಿತ್ತಯ್ಯನರ ಮನೆ ಒಂದು ಚಂದ ಕಾಣ್ತು. ಹೋದ ಸಂಪತ್ತು ಬಂದಂಗಾಯ್ತು. ಲಕ್ಷ್ಮಿ ನಾಲ್ಕು ಮೂಲೆಗೂ ನಾಟ್ಯವಾಡುತಾಳೆ. ದೈಮಾರನ ಮಗ ಕೆಂಗುರ ಹಾಲು ತುಪ್ಪ ಉಂಡುಕೊಂಡು ದನಗಳ ಜೊತೆಲಿ ಆನಂದವಾಗಿ ಬೆಳೆಯಿತು. ದೊಡ್ಡದೂ ಆಯಿತು. ಹಿಂಗೆ ಸ್ವಲ್ಪ ದಿನಕ್ಕೆ ದ್ಯಾವರಹಟ್ಟಿ ಚಿತ್ತಯ್ಯನ ಮನೆಗೆ ದೇವರ ದೈಮಾರ ಇದ್ದನಲ್ಲ ಅವುರ ಆರು ಜನ ಅಣ್ಣಂದಿರ ಹೆಂಡತೀರು ನೀರು ಹುಯ್ಯಿಕೊಂಡರು, ಗರ್ಭಿಣಿಯರಾದರು. ಎಲ್ಲರೂ ಒಂದೊಂದು ಗಂಡುಮಗುವನ್ನು ಹೆತ್ತರು. ಅವುರ ಮಕ್ಕಳೂ ಒಳ್ಳೆ ಬಾಲಚಂದ್ರರಂತೆ ಬೆಳೆದರು. ಯಾವಾಗ ಇವುರ ಮಕ್ಕಳು ಬೆಳೆದು ದೊಡ್ಡವಾದವೋ ಅವುರ ಜೊತೆಲಿ ಕೆಂಗುರನೂ ಬೆಳೆದು ರಾಜಕುಮಾರನ ತರ ಅದ ಈ ಹುಡುಗನ ಕಂಡು ಅವುರ ದೊಡ್ಡಮ್ಮಗಳಿಗೆ ಕೆಂಡದಂತ ಕೋಪ ಬರಾದು. ಹುಟ್ಟುತಾಲೆ ಅಪ್ಪ ಅಮ್ಮಗಳನ್ನು ತಿಂದುಕೋತು ಅನಿಷ್ಟದ್ದು, ಅಂಬ್ತಾ ಅವರವರೇ ಮಾತಾಡಿಕೊಂಡರು. ಇದು ಮನೆಗೆ ಇದ್ರೆ ಇನ್ನೂ ಯಾರು ಯಾರು ಆಹುತಿ ತೆಗೆದುಕೊಳ್ಳುತ್ತೋ ಅಂಬ್ತಾನೂ ಯೋಚನೆ ಮಾಡಿದರು. ಅಲ್ಲದೆ ತಮ್ಮ ಆಸ್ತಿಲಿ ಇದಕ್ಕೂ ಒಂದು ಭಾಗನ ಕೊಡಬೇಕಲ್ಲ ಅಂತಲೂ ಹಿಕ್ಮತು ನಡೆಸಿರು. ಆ ಹುಡುಗನ ಮೇಲೆ ಅದು ಇದು ಚಾಡಿ ಹೇಳಾಕೆ ನಿಂತರು. ಅವುರ ಗಂಡಂದಿರಿಗೂ ಅವುರಿಗೆ ಮಕ್ಕಳು ಹುಟ್ಟಿದ ಮೇಲೆ ತಮ್ಮನ ಮಗನ ಮೇಲೆ ಅಕ್ಕರೆ ಕಡಿಮೆನೆ ಆತು.

ಒಂದು ದಿನ ಏನು ಮಾಡಿರು ಅಂದ್ರೆ ಈ ಹುಡುಗ ಹುಟ್ಟುತಲೆ ಅಪ್ಪ ಅಮ್ಮನೂ, ತಿಂದುಕೊಂತು, ಒಳ್ಳೆ ಬಾಳುತಿರೋ ಹಂಗೆ ಬೆಳೀತಿದೆ. ಅದಕ್ಕೆ ಈಗಲೇ ಮೂರು ತಣಿಗೆ ಅನ್ನ ಬೇಕು, ಒಂದು ಗಡಿಗೆ ನೀರು ಬೇಕು. ಇನ್ನು ದೊಡ್ಡದಾತು ಅಂದ್ರೆ ನಮ್ಮ ಹುಡುಗರನ್ನ ಬಡಿದಾಕಿಬಿಡುತ್ತೆ. ಒಂದಲ್ಲ ಒಂದು ದಿನ ನಮ್ಮ ಅಪ್ಪ-ಅಮ್ಮನ ಕಾಡಿಗೆ ಕಳಿಸಿದೋರು ನಿಮ್ಮ ಅಪ್ಪಗಳು ಅಂಮ್ತಾ, ಅದನ್ನೇ ಮುಂದು ಮಾಡಿಕೊಂಡು, ನಮ್ಮ ಮಕ್ಕಳಿಗೆ ತೊಂದರೆ ಕೊಡುತಾನೆ. ಅದಕ್ಕೆ ಈ ಹುಡುಗ ನಮ್ಮ ಮನೆಯಾಗೆ ಇರಾದು ಬ್ಯಾಡ. ಹುಡುಗನಿದ್ದಾಗಲೇ ಯಾರಿಗೂ ತಿಳಿಯದಂಗೆ ಕಾಡಿನಾಗೆ ಬಿಟ್ಟು ಬನ್ರಿ. ಬದುಕಿದ್ರೆ ಯಾರಾದರೂ ಪಾಪಿ ಪರದೇಶಿಗಳು, ಹೊಟ್ಟೆಗೆ ಮಕ್ಕಳು ಕಟ್ಟೆಗೆ ನೀರು ಇಲ್ಲದಂತೋರು ಸಾಕೆಂತಾರೆ ಅಂದ್ರು.

## ಕಾಡುಪಾಲಾದ ಕೆಂಗುರ ಮಗು

ಈ ಆರು ಜನ ಅಣ್ಣ ತಮ್ಮಗಳು ಯಾವಾಗಲೂನ ಮುತ್ತು ರತ್ನದ ಯಾಪಾರಕ್ಕೆ ಹಿರಿಯೂರು ಪಟ್ಟಣಕೆ ಹೋಗುತ್ತಿದ್ದರು. ಆವಾಗ ಯಂಗಾದರೂ ಅಲ್ಲೊಂದು ಕಾಡು ಸಿಗುತ್ತದೆ. ಮೆಳೆಕುಂಟೆ, ಬಗ್ಗನಡು ಕಾಡು ರಂಗನಹಳ್ಳಿ, ತಾವರೆಕೆರೆ ಇಲ್ಲೆಲ್ಲಾ ದೊಡ್ಡ ಕಾಡು ಇತ್ತು. ಇವರು ವ್ಯಾಪಾರಕೆ ಹೋಗುತ್ತಿದ್ದುದು ಈ ಊರು ಮೇಲೆನೆ. ಯಂಗಾದರೂ ಆಗಲಿ ಅಮ್ತಾ ಅಣ್ಣ ತಮ್ಮಗಳು ಮಾತಾಡಿಕೊಂಡರು. ಇವರು ಬಂಗಕ್ಕೆ ಹೆದರಲಿಲ್ಲ, ಬಡತನಕೆ ಹೆದರಲಿಲ್ಲ. ಆದರೆ ಹುಟ್ಟುತಲೇ ತಮ್ಮ ದೈಮಾರನೂ, ಅವುನ ಹೆಂಡತಿ ಸಣ್ಣಕಂಬಕ್ಕನ ತಿಂದುಕೊಂಡಿರಾದು ಮುಂದೆ ನಾವೇ ಇದಕ್ಕೆ ಅಪ್ಪ ಅಮ್ಮಗಳು. ನಮಗೂ ಏನಾದರೂ ತೊಂದರೆ ತಾಪತ್ರಯವಾದರೆ ಏನು ಮಾಡಾದೋ ಅಂದು, ಆರು ಜನ ಅಣ್ಣತಮ್ಮಗಳು ಚರ್ಚೆನೆ ಮಾಡಿರು. ಚಿಂತನೆ ಮಾಡಿಬಿಟ್ಟರು.

ಆಗ ಹಿರಿಯೋನು ಬಕ್ಕಚಿತ್ತಯ್ಯ ಮಗುವಿಗೆ ಸ್ನಾನ ಮಾಡಿಸಕೆ ಹೇಳಿದ. ಮನೆಗೆ ಪಂಚಾಮೃತದ ಅಡಿಗೆ ಮಾಡಿಸಿದ. ಜೊತೆಗೆ ಕುಂಡ್ರಿಸಿಕೊಂಡು ಉಣಿಸಿದ. 'ಪಾಪ ನಾಳಿಕೆ ನಾವು ಹಿರಿಯೂರು ಪೇಟೆಗೆ ಮುತ್ತು ರತ್ನದ ವ್ಯಾಪಾರಕ್ಕೆ ಹೋಗುತೀವಿ. ಇದು ನಮ್ಮ ಕಸುಬು. ಹಿರಿಯೋನು ನೀನು ಈ ಕಸುಬು ನೋಡಿಕೋಬೇಕು. ಬರ್‍ತೀಯೇನಪ್ಪ' ಅಂಬ್ತಾ ಆ ಹುಡುಗನಿಗೆ ಪುಸಲಾಯಿಸಿದರು. ಅದಿನ್ನು ಚಿಕ್ಕ ಮಗ, ಏನೇನೂ ತಿಳಿಯದ್ದು. ಬಂಡಿ ಮ್ಯಾಲೆ ಹೋಗಾದು ಅಂದ್ರೆ ಇಷ್ಟ ಅಲ್ಲವೆ? ಹೊರಟು ನಿಂತುಬಿಡ್ತು.

ಸರಿ ಇತ್ತ ಅವುರ ಸಿಗಮ್ಮಗಳಿದ್ದರಲ್ಲ ಅವುರು ಬಲು ಕಿಲಾಡಿ ಮುಂಡೇರು. ಇಂತಾ ಕೇಡು ಬುದ್ದಿ ಕೊಟ್ಟವರೆ ಅವರು ತಾನೆ? ದಿನಾಲೂ ಈ ಹುಡುಗನ ಕಂಡರೆ ಮಾರೆ ತಿರುವಾರು, ಮೂತಿ ತಿರುವಾರು, ಹಲ್ಲು ಕಡಿಯಾರು ಆದರೆ ಈ ಹೊತ್ತು ಹಬ್ಬದ ಅಡಿಗೆ ಮಾಡಿ ತಲೆಗೆ ಎಣ್ಣೆ ಸೀಗೇಕಾಯಿ ಹಾಕಿ ಕಾಸಿದ ನೀರು ಹೊಯ್ದರು. ಬಡಚಿತ್ತಮ್ಮ ತನ್ನ ಗಂಡನ ಮನೆಗೆ ಯಾವುದೋ ಕಾರ್ಯ ಅಂದುಬಿಟ್ಟು ಮಗ ಬಿಟ್ಟು ಹೋಗಿದ್ದಳು. ಅವುಳ ಹಿಂತಿರುಗಿ ಬರೋದರ ಒಳಗೆ ಈ ಹುಡುಗನ ಅಡವಿ ಪಾಲು ಮಾಡಬೇಕೆಂಬುದು ಇವರ ಪ್ಲಾನು. ಅಂಗೆನೆ ಎಲ್ಲಾನು ಮಾಡಿಕೊಂಡರು.

ಆ ಹೊತ್ತು ಬೇಸ್ತುವಾರ. ಹಿರಿಯೂರು ಸೀಮೆಗೆ ವ್ಯಾಪಾರಕ್ಕೆ ಹೋಗಬೇಕು. ಪಲ್ಪು ಹರಿಯೋದರೊಳಗೆ ಹಿರಿಯೂರು ಪೇಟೆ ಸೇರಬೇಕು ಅಂದುಬಿಟ್ಟು ರಾತ್ರಿಕೆ ಮನೆ ಬಿಡಬೇಕೆಂದು ಮಾತಾಡಿಕೊಂಡರು. ಎಲ್ಲಾರು ರಾತ್ರಿ ಕೂಡಿ ಊಟ ಮಾಡಿದರು. ಆ ಹುಡುಗನಿಗೂ ಉಣಿಸಿರು. ಗಾಡಿಗೆ ಮುತ್ತು ರತ್ನದ ಸಾಮಾನು ತುಂಬಿಕೊಂಡು ಎತ್ತಿಗೆ ಒಂದೆರಡು ಹೊರೆ ಹುಲ್ಲು ಹಾಕಿಕೊಂಡು, ರೊಟ್ಟಿ ಬುತ್ತಿ ಕಟ್ಟಿಕೊಂಡು, ಎತ್ತು ಹೂಡಿಕೊಂಡು ಈ ಕೆಂಗರುನ್ನು ಗಾಡಿ ಒಳಕೆ ಕೂಡಿಸಿಕೊಂಡು ಹೊರಟರು.

ಸರಿ ಬಂಡಿ ಗಾಡಿ ರಾತ್ರಿಯೆಲ್ಲಾ ಬಂದವು. ರಾತ್ರಿ ಸರನ್ನ ಸರಹೊತ್ತು ಕಾರೆಂಬ ಕತ್ತಲೆ ಕಾಡು. ತಲೆ ಹೊಡೆದುಹಾಕಿರೂ ನೀನೇ ಅನ್ನೋರಿಲ್ಲ ಅಂತ ಕಡೆ, ಎತ್ತಿನ ಗಾಡಿ ಕೊಳ್ಳು ಅಳಿದರು. ಎಲ್ಲರೂ ಮೊದಲೇ ಮಾತಾಡಿಕೊಂಡಿದ್ದಂತೆ ಮಲಗಿ ಮುಂದೆ ಹೋಗೋ ಆಟ ಆಡಿರು. ಪಾಪ ಮಗ, ಏನೂ ಅರೀದ್ದು ನಿದ್ದೆ ಬಂದು ಮಲಗಿಬಿಟ್ಟೈತೆ. ಆ ಮಗುವನ್ನು ಎತ್ತಿಕೊಂಡು ಕೆಳಗೆ ಇಳಿಸಿ ಅಡಿಕ್ಕೆ ಒಂದಿಷ್ಟು ಹುಲ್ಲು ಹಾಸಿಬಿಟ್ಟು, ಬಟ್ಟೆ ಹಾಸಿ ಹೊದಿಸಿ ಬೆಚ್ಚಗೆ ಹುಡುಗನ್ನ ಮಲಗಿಸಿದರು. ಇವರು ಮಲಗಿಕೊಳ್ಳರಂಗೆ ರವಾಟು ನಾಟ್ಕ ಆಡಿರು. ಆಮೇಲೆ ಅಲ್ಲಿಂದ ಎದ್ದುಬಿಟ್ಟು ನೇರವಾಗಿ ಮುಂದಕೆ ಹೊರಟುಬಿಟ್ಟರು. ಮಗ ಅಲ್ಲೇ ಮಲಗಿದೆ. ಕಾರೆಂಬ ಕತ್ತಲೆ, ಜೀರೆಂಬ ಕಾಡು. ಆ ಮಗುವಿಗೆ ದೇವರೇ ದಿಕ್ಕು.

ಇತ್ತ ದೊಡ್ಡಪ್ಪಗಳು ಹಿರಿಯೂರು ಕಡೆಗೆ ಹೋದರು. ಮೂಡು ಮುಂದಾಗಿ ಕೆಂಪಾಯಿತು. ಪಕ್ಷಿಗಳು ಕೂಗಾಡುತವೆ. ಪ್ರಾಣಿಗಳು ಹೂಲಿಕ್ಕಿದ್ದವು. ಈ ಹುಡುಗನಿಗೆ ಹೊಸದಾಗಿ ಕಂಡಂಗಾಯ್ತು. ಬಲ ಮಗ್ಗುಲಾಗಿಂದ ಎದ್ದ ನೋಡುತದೆ ಮಗ ಜೀ ಅಂಬೋ ಕಾಡು. ನೀನೇ ಅನ್ನೋರು ಇಲ್ಲ. ಹುಡುಗನಿಗೆ ಹೆದರಿಕೆ. ಮೊದಲಿಗೆ ರವಾಟು ಕೂಗಾಡಿತು, ಅತ್ತು ಕರೀತು. ಅಂಗೆ ಕುಂತುಬಿಡ್ತು. ಏನು ಮಾಡಾಕೂ ತಿಳೀವಲ್ದು. ಒಂದೇ ಸಮಕೆ ಅಳಾಕೆ ಸುರು ಮಾಡ್ತು.

ಹತ್ತು ಅವಿನ ಗೂಡು ಐದು ಕರುವಿನ ಗೂಡು
ದೈಮಾರ ನೂರ ಮಗನ ಗೂಡು । ಮುಂದೆ
ಹೋಗಿ ನಿಂತವ್ನೆ ಬಡಮೈಲ

## ಅಂಬೆರಾಯ-ತುಂಬೆರಾಯ

ಕೆಂಗರುವಿನ ದೊಡ್ಡಪ್ಪಗಳು ನಮ್ಮ ಆಸ್ತಿಗೆ ಕೆಂಗರು ಭಾಗಕ್ಕೆ ಬರುತಾನೆ, ನಮ್ಮ ಮಕ್ಕಳಿಗೆ ಕಡಿಮೆಯಾಗುತ್ತೆ ಅಂಬ್ತಾ ಈ ಹುಡುಗನ್ನ ಕಾಡುಪಾಲು ಮಾಡಿರು. ಅದನ್ನು ಕಾಡಾಗಿನ ಹುಲಿ, ಚಿರುತೆ ತಿಂಬಲಿ ಅಂಬೋದು ಇವರ ಪ್ಲಾನು. ಇಂಥ ವ್ಯಾಳ್ಯಕ್ಕೆ ಏನಾತಪ್ಪಾಂದ್ರೆ ಜರಿಮಲೆಯಲ್ಲಿ ಅಂಬೇರಾಯ-ತುಂಬೇರಾಯ ಅಂಬ್ತಾ ಇಬ್ಬರು ಅಜ್ಜಪ್ಪಗಳಿದ್ದರು. ಅವುರ ದಿವ್ಯಜ್ಞಾನಿಗಳು. ದನ ಸಾಕಿಕೊಂಡು ಬಾಳ್ವೆ ಮಾಡುತ್ತಿದ್ದರು. ಈಗ ಅವುರಿಗೆ ವಯಸ್ಸಾತು. ಕಾಲಬೆರಸೆ ಕೈಲಾಸಕ್ಕೆ ಹೋಗಬೇಕು ಅಂಬೋದು ಅವುರ ಆಸೆ. ಆದರೆ ಏನು ಮಾಡಾದು ಏಳು ಗೂಡು ದನಗಳನ್ನು ಸಾಕೆವರೆ. ಅವುಗಳ ಪಾಲನೆ, ಪೋಷಣೆ ಮಾಡಾ ದಾತುಗಾರರು ಯಾರೂ ಇಲ್ಲ. ಯಾರೂ ಇಲ್ಲದೆ ಮುತುವರ್ಜಿಯಿಂದ ಸಾಕಿದ ದನಗಳನ್ನು ತಬ್ಬಲಿ ಮಾಡಾದು ಬ್ಯಾಡ. ತಮ್ಮ ದನಗಳ ಕಾಯೋ ಯಾರಾದರೂ ಒಂದು ಹುಡುಗ ಸಿಕ್ಕಿರೆ. ದನಗಳನ್ನು ಅವುನಿಗೆ ಒಪ್ಪಿಸಿ, ತಾವು ಕಾಲಬೆರಸೆ ಕೈಲಾಸಕ್ಕೆ ಹೋಗಾನ ಅಂಬ್ತಾ ಮೂಡು ಮುಂದಾಗಿ ಹುಡುಕಿಕೊಂಬ್ತಾ ಹುಡುಕಿಕೊಂಬ್ತಾ ಬಂದ್ರು. ಅವುರಿಗೆ ತಕ್ಕನಾದ ಹುಡುಗನಾಗಲಿ, ದನ ಸಾಕಿಕೊಳ್ಳವಂತನಾಗಲಿ ದಕ್ಕಲಿಲ್ಲ.

ಹಿಂಗೆ ಬಂದವರು ಹಿರಿಯೂರು-ಚಳ್ಳಕೆರೆ ಸೀಮೆಗೂ ಬಂದ್ರು. ವೇಣುಕಲ್ಲು ಗುಡ್ಡ ದಾಟಿ, ಬಗ್ಗನಡು ಕಾಡಾಗೆ ಬಂದ್ರು ಒಂದು ಬೆಳಗಿನ ಜಾವ. ಸೂರ್ಯದೇವ ಪ್ರಕಾಶಮಾನವಾಗಿ ಮೂಡ್ತಾ ಬಂದ. ಅಂತ ವೇಳ್ಯದಾಗೆ ದೂರದಾಗೆ ಒಂದು ಹುಡುಗ ಅಳುತ್ತಿರುವುದು ಕೇಳಿದಂಗಾಯ್ತು. ಕಿವಿಗೊಟ್ಟು ಆಲಿಸಿದರು. ಸರಿ, ಹುಡುಗನದ್ದೇ ದನಿ. ನಿದಾನವಾಗಿ ಅತ್ತ ಹೆಜ್ಜೆ ಹಾಕಿದರು. ಯಾರಾದರೂ ಮಾಟ ಶೂನ್ಯದವರು ಮೋಸ ಗೀಸ ಮಾಡಾಕೆ ಈ ತರ ಪ್ಲಾನು ಮಾಡಾದು ಉಂಟೆಂದು ಯೋಚನೆ ಮಾಡಿ ಕ್ಷಣಹೊತ್ತು ಅಂಗೆ ನಿಂತುಕೊಂಡರು. ಇನ್ನೂ ಹಂಗೇನೇ ಮಗ ಅಳುತಾ ಇದೆ. ಅಪ್ಪಾ ಅಮ್ಮಾ ಅನ್ನುತ್ತದೆ. ಯಾರೋ ಮನುಷ್ಯನೇ ಇರಬೇಕೆಂದುಕೊಂಡು ಆ ಅಳುತ್ತಿರುವ ಮಗುವಿನ ಕಡೆಗೆ ನಡೆದರು.

ಹೋಗಿ ನೋಡುತಾರೆ ಕಾಡು ರಸ್ತೆಯಿಂದ ರವಾಟು ದೂರ. ಅಲ್ಲೊಂದು ಹೆಬ್ಬಾಲದ

ಮರ. ಅದು ಪೊಟರೆ ಒಡೆದುಬಿಟ್ಟೈತೆ. ಅದರ ಒಳಾಕೆ ಸೇರಿಕೊಂಡು, ಅಲ್ಲಿಂದಲೇ ಹುಡುಗ ಅಳುತ್ತಿರುವುದು ಗೊತ್ತು ಮಾಡಿಕೊಂಡರು. ಹೆಂಗಾದರೂ ಆಗಲಿ ಅಂಬ್ತಾ ಕೈಲಿಡುಕೊಂಡ ಮೆಡ್ಡೆಕೋಲು ಎತ್ತಿಕೊಂಡು ತಲೆಗೆ ಕಂಬಳಿ ಕೊಪ್ಪೆ ಹಾಕಿಕೊಂಡು, ಆ ಪೊಟರೆ ಕಡೀಕೆ ಹೋದರು. ಇವರು ಹೋದಂಗೆಯೇ ಆ ಹುಡುಗ ಮರೆಯಾಗುತ್ತಾ ತಲೆಮರೆಸಿಕೊಳ್ಳಕೆ ನೋಡುತ್ತಿತ್ತು. ಹೆದರಿಕೊಂಡಿತ್ತು. ಅದಕ್ಕೆನೇ ಕಂಬಳಿ ಹೊದ್ದುಕೊಂಡು ಮುಸುಕಾಕಿಕೊಂಡುಬಿಡ್ತು. ಆಗ ಅಂಬೇರಾಯ ತುಂಬೇರಾಯ ಇದು ಯಾರೋ ಹುಡುಗನೇ, ಯಾರೋ ಹೊಡೆಯುತಾರೆ ಅಂಬ್ತಾ ಹೆದರಿಕೊಂಡು ಬಿಟ್ಟೈತೆ, ಅಂಬ್ತಾ ಆ ಹುಡುಗನ್ನ ಹತ್ತಿರಕ್ಕೆ ಕರೆದರು. ಆ ಹುಡುಗ ಒಂದೇ ಸಮನೆ ನೋಡ್ತು, ಯಾರೋ ಅಜ್ಜಪ್ಪಗಳು ಒಳ್ಳೆಯರು. ನನ್ನ ಕರಕೊಂಡು ಊರಾಕೆ ಬಿಡುತಾರೆ. ನಮ್ಮ ದೊಡ್ಡಪ್ಪಗಳು ಯಾಕೋ ಕಾಣೆ, ನನ್ನ ಹಿಂಗೆ ಒಂಟಿಯಾಗಿ ಕಾಡಾಗೆ ಬಿಟ್ಟು ಹೋಗಿಬಿಟ್ಟವರೆ ಅಂಬ್ತಾ, ಆ ಹುಡುಗ ಹೆದರಿಕೊಳ್ಳುತ್ತಲೇ ಒಂದೊಂದು ಹೆಜ್ಜೆ ಇಟ್ಟುಕೋತಾನೂ, ಹೆದರುಗಣ್ಣು ಬಿಟ್ಟುಕೊಂಡು ಕಂಬಳಿ ಗುಬ್ರಹಾಕಿಕೊಂಡು, ಬಂದು ಆ ಅಜ್ಜಪ್ಪಗಳ ಮುಂದೆ ನಿಂತುಕೊಂಡುಬಿಡ್ತು.

ಸಣ್ಣ ಹುಡುಗ, ಏನೂ ತಿಳಿವಲ್ದು. ಇಂಥ ಹುಡುಗನ್ನ ಯಾರು ಯಾಕೆ ಕಾಡಾಗೆ ತಂದು ಬಿಟ್ಟವರೆ ಅಂಬ್ತಾ ಈ ಅಜ್ಜಪ್ಪಗಳು ಯೋಚನೆ ಮಾಡಿರು. ಆ ಮಗುವ್ನ ತಲೆ ಸವರಿದ್ರು. ವೈನಾಗಿ ಮಾತಾಡಿಸಿದರು. ಊರು, ಕೇರಿ ಯಾವುದು ಅಂಬ್ತಾ ತಿಳಿದುಕೊಂಡರು. ಆ ಹುಡುಗ ತೊದಲುತ್ತಲೇ ಒಂದು ಸೂರು ಕತೆ ಹೇಳಿತು. ಅದಕ್ಕೆ ಅಜ್ಜಂದಿರು ಪರಮಾತ್ಮ ನೀನು ದೊಡ್ಡವನು ಕಣಪ್ಪ. ನಿನ್ನ ಕೃಪೆಯಿಂದ ಏನು ಆಗುತ್ತೋ ಹೇಳಕಾಗುತ್ತ, ಶಂಕರ, ನಿನ್ನ ನಂಬಿದವರಿಗೆ ಕೇಡಿಲ್ಲ ಅಂಬ್ತಾ, ಮಗುವನ್ನು ದೇವರು ಕೊಟ್ಟ ವರ ನಮ್ಮ ಗೋವುಗಳ ಪಾಲನೆ ಮಾಡುವ ಧೀರ ಸರಿಯಾಗೆವನೆ ಅಂದುಬಿಟ್ಟು, ಆ ಮಗುವನ್ನು ಸಮಾಧಾನ ಮಾಡಿ ನಾವೂ ನಿಮ್ಮವರೆ ತಾತುಗಳು. ನಾವು ನಿನ್ನ ದೇವ್ರುತರ ಸಾಕ್ಕೋತೀವಿ, ಬಾರಪ್ಪ ಅಂಬ್ತಾ ಹುಡುಗನ್ನ ಕೈ ಹಿಡಕೊಂಡು ಬಂದರು.

ಕಾಡುನಲ್ಲಿ ಮೂವರೂ ನಡೆಕೋತಾ ಬಂದ್ರು. ಬಂದು ಗೂಡು ಸೇರಿಕೊಂಡರು. ಆದರೆ ತಮ್ಮ ಗೂಡಾಗೆ ಒಂದು ದನಗಳೂ ಇಲ್ಲ. ಯಾವಾಗ ಅಜ್ಜಗಳು ಮೂಡು ಮುಂದಾಗಿ ಬಂದುಬಿಟ್ಟರೋ ದನಗಳು ಕಳ್ಳೆಬೇಲಿ ಹಾರಿ, ಆ ಅಜ್ಜಗಳನ್ನ ಹಿಂಬಾಲಿಸಿ ಬಂದುಬಿಟ್ಟಿದ್ದವು. ಸರಿ, ಈ ಅಜ್ಜಗಳು ಬೇಗ ಬೇಗ ಬಂದಂಗೆ ದನಗಳು ಮೇಯುಕೋತಾ ಮೇಯ್ಕೋತಾ ನಿಧಾನವಾಗಿ ಕೊನೆಗೆ, ಕಳುವಾರಹಳ್ಳಿ ಏಣಿನ ಕಡೆಗೆ ಬಂದವು. ಆ ಏಣಿನಾಗೆ ಹೊನ್ನಟ್ಟಿ ಆಲೇಗೌಡರು, ಅವರೇ ಹೊಲ ಮಾಡಿದ್ದರು. ಅವರೆಗಿಡ ಹೂವು ಕಾಯಿಂದ ಜೋಲಾಡುತ್ತಿತ್ತು. ಹೂವು ಆರತಿ ಶೃಂಗಾರ ಮಾಡಿದಂಗೆ ಇದ್ದವು. ಅವರೇಕಾಯಿ ಹಣ್ಣ

ಮೆಟ್ಟಿಗೋನೆ ಒಂದು ಮೊಳದ ಉದ್ದ ಇದ್ದವು. ದನಗಳು ಕಾಡಿನ ಕಾಡುಲ್ಲು ಮೇಯ್ದು ಮೇಯ್ದು ಬಾಯಿಕಟ್ಟಿದ್ದವು. ಯಾವಾಗ ಸೊಗಡಿನ ಹೊಲದ ವಾಸನೆ ಹಿಡಿದು ನೇರವಾಗಿ ಆಲೇಗೌಡರ ಹೊಲಕ್ಕೆ ನುಗ್ಗಿಬಿಟ್ಟವು. ನುಗ್ಗಿದ ದನಗಳು ಅವರೇ ಹೊಲದ ಒಂದೇ ಒಂದು ಗೊನೆಯನ್ನೂ ಬಿಡದೆ ನುಣ್ಣಗೆ ತಿಂದಾಕಿದವು. ದನಗಳು ತಿಂದು ಅಲ್ಲೇ ಮಂದೆ ಹಾಕಿ, ಮೆಲಕಾಕಿಕೊಂಡು ಮಲಗಿದವು.


ಬೆಳಿಗ್ಗೆ ಹೊಲದ ತಾಕೆ ಬಂದಂತ ಆಲೇಗೌಡನ ಆಳು ಮಕ್ಕಳು ಕುಳವಾಡಿಗಳು ಕೈಯಿಗೆ ಬಂದ ಅವರೇ ಫಸಲನ್ನು ಪೂರ್ತಿ ಮೇಯ್ದು ಮಲಗಿದ್ದ ದನಗಳನ್ನು ಕಂಡು ಗಾಬರಿಯಾಯಿತು. ಇವೇನು ದನಗಳೋ ರಾಕ್ಷಸವೋ ತಿಳಿಯದಾಯಿತು. ಒಂದೇ ಒಂದು ಕಾಯಿಯನ್ನೂ ಬಿಡದೆ ನುಣ್ಣಗೆ ತಿಂದು ಮುಗಿಸಿದ ಅವರೆ ಹೊಲದ ಬಗೆಗೆ ದುಃಖ ಬಂದು, ಆಲೇಗೌಡರಿಗೆ ಈ ವಿಷಯ ತಿಳಿಸಿದರೆ ಚರ್ಮ ಸುಲಿದು ಬಿಡುತ್ತಾರೆಂದು ತಿಳಿದ ಕುಳವಾಡಿಗಳು, ದನ ಮೇಯ್ದ ಅವರೆ ಹೊಲದ ದಂಡವನ್ನು ಗೌಡರು ವಸೂಲಿ ಮಾಡಿಕೊಳ್ಳಲಿ ಅಂದುಬಿಟ್ಟು, ಅಂಬೇರಾಯ-ತುಂಬೇರಾಯರ ದನಗಳನ್ನು ಹೊಡೆದುಕೊಂಡು ನೇರವಾಗಿ ಕಳುವರಹಳ್ಳಿ ಹೊನ್ನಟ್ಟಿ ಆಲೇಗೌಡರ ಹಿತ್ತಲಲ್ಲಿ ಕೂಡಿಹಾಕಿದರು. ಈ ವಿಚಾರ ತಿಳಿದ ಗೌಡರು ಈ ದನಗಳನ್ನು ಹುಡುಕಿಕೊಂಡು ಯಾರಾದರೂ ಬಂದೇ ಬರುತ್ತಾರೆ. ಬಂದವರಿಂದ ಸರಿಯಾಗಿ ದಂಡ ವಸೂಲಿ ಮಾಡಬೇಕು, ಇಲ್ಲದೇ ಹೋದರೆ ನಮ್ಮ ಹೊಲದ ಉಳುಮೆಗೂ ಇನ್ನು ಹೆಚ್ಚಿನವನ್ನು ಸಿರಾ ಪಟ್ಟಣದಲ್ಲಿ ಮಾರಾಟ ಮಾಡಬೇಕೆಂದು ಆಲೇಗೌಡರು ತೀರ್ಮಾನಿಸಿದರು.

ತಳವಾರ ಬೊಮ್ಮಣ್ಣ ದನಗಳನ್ನು ನೋಡಿಕೊಳ್ಳುತ್ತಿದ್ದನು. ಒಂದು ದಿನ ಬೆಳಿಗ್ಗೆ ಹೊತ್ತು ದನಗಳನ್ನು ಹುಡುಕಿಕೊಂಡು, ಅಲ್ಲಿ ಇಲ್ಲಿ ಕೇಳಿಕೊಂಡು ದನಗಳ ಜಾಡು ಹಿಡಕೊಂಡು ಬಂದರು ಅಂಬೇರಾಯ ತುಂಬೇರಾಯ. ಹೊತ್ತಾರೆ ಎಂಟು ಒಂಬತ್ತು ಗಂಟೆ. ಆಲೇಗೌಡರು ಅವರ ಪರಿವಾರದವರು ಗೌಡರ ಮನೆ ಅಂಗಳದಾಗೆ ಕುಂತುಕೊಂಡಿದ್ರು. ಅಲ್ಲಿಗೆ ಬಂದ ಈ ಅಜ್ಜಪ್ಪಗಳು ಆಲೇಗೌಡರಿಗೆ ಶರಣು ಮಾಡಿರು. ಪ್ರತಿಯಾಗಿ ಆಲೇಗೌಡರೂ ಶರಣು ಮಾಡಿ ತಮ್ಮದು ಯಾವೂರು? ಯಾಕೆ ಇಲ್ಲಿಗೆ ಬಂದ್ರಿ? ಅಂದನು. ಆಗ ಅಂಬೇರಾಯ ತುಂಬೇರಾಯ ಅಳುವರಂಗೆ ಮಾಡಿರು. ರವಾಟು ಗೆಲುವಾದರು. ತತ್ವ ಹೇಳಿದರು. ಪ್ರಪಂಚದ ಜ್ಞಾನವನ್ನೆಲ್ಲಾ ತಿಳಿದಂಗೆ ಹೇಳಿದರು. ಗೌಡರಿಗೆ ಕೋಪ ಬಂದುಬಿಡ್ತು. ನಿಮ್ಮ ತತ್ವ ಪುರಾಣ ನನ್ನತ್ರ ನಡೆಯೋಂಗಿಲ್ಲ. ಅದೇನು ನಿಮ್ಮ ಬಂದ ಸುದ್ದಿ ಹೇಳಿ ಅಂದನು. ಆಗ ಈ ಅಜ್ಜಪ್ಪಗಳು ತಮ್ಮ ಪೂರ್ವದ ಕತೆ ಹೇಳಿದರು.

ಸ್ವಾಮಿ ನಮ್ಮದು ಚೆರಿಮಲೆ ಸೀಮೆ. ನಮ್ಮ ಹೆಸರು ಅಂಬೇರಾಯ ತುಂಬೇರಾಯ. ದನ ಮೇಯಿಸಿಕೊಂಡು ಜೀವ್ನ ಹೊರೆಯೋರು. ನಮಗೆ ಸತ್ಯವಲ್ಲದೆ ಬೇರೇನು ತಿಳಿದಿಲ್ಲ. ನಾವು ಕಾಯಮುಂದಾಗಿ ಕೈಲಾಸಕ್ಕೆ ಹೋಗಬೇಕು (ಜೀವ ಸಮಾಧಿ) ಅಂಬೋದು ಆಸೆ. ಆದರೆ ನಾವು ಏಳು ಗೂಡಿನ ದನಗಳನ್ನು ಪೋಷಣೆ ಮಾಡಿಕೊಂಡು ಬಂದಿದ್ದೇವೆ. ಈಗ ನಾವು ಕಾಯಮುಂದಾಗಿ ಕೈಲಾಸಕ್ಕೆ ಹೋದರೆ, ನಮ್ಮ ದನಗಳ ಪಾಡೇನು? ಅವೆಲ್ಲನೂ ಕಟುಕರ ಪಾಲೋ, ತರವಲ್ಲದವರ ಕೈಗೆ ಸಿಕ್ಕಿದರೆ ಗತಿ ಏನು? ನಮ್ಮ ದನಗಳನ್ನು ರಕ್ಷಣೆ ಮಾಡೋ ಒಬ್ಬ ಬಾಲಕ ನಮಗೆ ಬೇಕಾಗಿತ್ತು. ಅವುನ ಹುಡುಕಿಕೊಂಡು ಮೂಡು ಮುಂದಾಗಿ ಬಂದ್ವಿ. ಹಾಗಂತ ಪರಮೇಶ್ವರನ ಪ್ರೇರಣೆನೂ ಆಗಿತ್ತು. ಹಿಂಗೆ ಬರುತಾ ಬರುತಾ ದೂರ ಬಂದಾಗ ಈ ಬಂಗಾರದಂತಹ ಒಂದು ಮಗು ಕಾಡಿನಲ್ಲಿ ಅನಾಥವಾಗಿತ್ತು. ಆ ಮಗುವನ್ನು ಶಿವನ ಪ್ರಸಾದ ಅಂಮುತಾ ಕರಕೊಂಡು ನಮ್ಮ ಗೂಡಿಗೆ ಹೋದರೆ, ನಮ್ಮ ದನಗಳು ನಮ್ಮ ಹಿಂದೆನೆ ಬಂದಾವು ತಪ್ಪಿಸಿಕೊಂಡು ಬಿಟ್ಟವೆ. ಅವುಗಳು ಬಂದ ಜಾಡು ಹುಡುಕಿಕೊಂಡು ಬಂದರೆ, ಅವು ಸೀದಾ ತಮ್ಮ ಹೊಲಕ್ಕೆ ಬಂದಿರುವುದು ತಿಳಿತು. ತಮ್ಮ ಅವರೇಹೊಲ ಮೇಯ್ದಿರುವುದೂ ತಿಳಿತು. ತಪ್ಪು ದಂಡ ಕಟ್ಟಿಸಿಕೊಂಡು, ನಮ್ಮ ದನ ಬಿಟ್ಟುಕೊಡಿ ಸ್ವಾಮಿ ಅಂಬ್ತಾ ಕೈಮುಗಿದರು.

ದನ ನಮ್ಮದೇ ಆಗುತಾವೆ ಅಂದುಕೊಂಡು ಇದ್ದ ಆಲೇಗೌಡರಿಗೆ ಅಂಬೇರಾಯ ತುಂಬೇರಾಯರ ಮಾತು ಕೇಳಿ ಗಾಬರಿ ಆತು. ಉದಾಸೀನವಾಗಿಯೇ ಕಂಡನು. ಅಲೇಗೌಡ ಕೂಗಾಡಿದ, ಅವರೇ ಹೊಲದ ಬಗೆಗೆ ವಿವರಿಸಿದ. ದನ ಬಿಡಲ್ಲ ಅಂದನು. ಆಗ ಅಜ್ಜಪ್ಪಗಳು ಹೇಳಿದರು ಗೌಡ್ರೆ ನೀವು ಮೋಸ ತಿಳಿದವರಲ್ಲ. ಪರಪಂಚ ಅರಿವಿಲ್ಲದವರು. ಈಗ ಈ ಲೌಕಿಕ ನಮಗೆ ಬ್ಯಾಡ. ನಾವು ಕಾಯ ಮುಂದೆ ಕೈಲಾಸಕ್ಕೆ ಹೋಗುವರು. ತಪ್ಪಾಗಿದೆ, ಶಿವನ ಕೃಪೆ. ದನ ಬಿಟ್ಟುಕೊಡಿ ಅಂದರು. ತುಂಬೇರಾಯ ಆಲೇಗೌಡನ ದೃಷ್ಟಿಸಿ ನೋಡಿದ. ಆಲೇಗೌಡರೂ ನೋಡಿದರು. ಅದೇನು ತಿಳಿದನೋ ಆಲೇಗೌಡ ಸ್ವಾಮಿ, ತಾವು ದಿವ್ಯಜ್ಞಾನಿಗಳು ಅರಿಯದೆ ಮಾತಾಡಿದೆ. ತಮ್ಮ ದನ ಹೊಡೆದುಕೊಂಡು ಹೋಗಬಹುದು ಅಂದನು. ಈ ಅಜ್ಜಂದಿರುಗಳು ಶರಣು ಮಾಡಿದರು. ಜೊತೆಗೆ ಬಂದಿದ್ದ ತಳವಾರ ಬೊಮ್ಮನಾಯಕನಿಗೆ ಹೇಳಿ, ದನ ಬಿಡುವಂತೆ ತಿಳಿಸಿದನು. ಅಂಬೇರಾಯ ತುಂಬೇರಾಯರು ಮುಂದಕ್ಕೆ ಮೂರು ಹೆಜ್ಜೆ ಇರಿಸಿದರು. ಆಗ ಆಲೇಗೌಡರು ಕೈ ಮುಗಿಯುತ್ತಾ ಬಂದು ಬೇಡಿಕೊಂಡರು. ನಾನು ಅರಿವಿಲ್ಲದವನು, ತಪ್ಪು ಕಲ್ಪನೆ ಮಾಡಿಕೊಂಡು ಏನೇನೋ ಹೇಳಿದೆ. ತಪ್ಪಾಯಿತು. ಮಹಾಸ್ವಾಮಿಗಳೇ ತಾವು ತ್ರಿಕಾಲ ಜ್ಞಾನಿಗಳು. ಕಾಯಬೆರಸೆ ಕೈಲಾಸಕ್ಕೆ ಹೋಗುತ್ತಿದ್ದೀರಿ. ತಮಗೆ ದನ ಕಾಯಕೆ ಒಂದು ಹುಡುಗ ಬೇಕಾಗಿಲ್ಲ. ಬರಿ

ಮಣ್ಣಿನಿಂದಲೇ ಮಕ್ಕಳನ್ನು ಸೃಷ್ಟಿ ಮಾಡೋರು. ಇಂಥ ನೂರು ಮಕ್ಕಳನ್ನಾದರೂ ಸೃಷ್ಟಿ ಮಾಡಿಬಿಡುವ ಶಕ್ತಿ ತಮಗಿದೆ. ನಾನೊಂದು ಬೇಡಿಕೋತೀನಿ. ನಾನು ಹುಟ್ಟು ಬಂಜೆ. ಬೇಕಾದಷ್ಟು ಭೂಮಿ, ಕಾಳು ಅದೆ. ಆದರೇನು ಮಾಡಾದು. ಮಕ್ಕಳಿಲ್ಲದ ಮನೇಲಿ ಹೊಕ್ಕಳ ಅಕ್ಕಿ ಅನ್ನ ಇದ್ದು ಫಲವೇನು ಶಿವರಾಯ ಅಂಬೊಂಗಾಗಿದೆ ನನ್ನ ಜೀವ್ನ. ಈ ಹುಡುಗ್ನ ನನಗೆ ಕೊಟ್ಟರೆ ನಿಮ್ಮ ಹೆಸರೇಳಿಕೊಂಡು ದೀಪ ಹಚ್ಚುತೀನಿ. ವಂಶ ಬೆಳಗಿಸಿಕೋತೀನಿ ಅಂದನು.



## ಗೊಲ್ಲರ ಮಗು ಕುಂಚಿಟಿಗರ ಮಗನಾದ

ಆಲೇಗೌಡರ ಪರಿಪರಿ ಬಯಕೆ ಕಂಡು, ಈ ಅಜ್ಜಪ್ಪಯ್ಯಗಳು ಹೇಳಿರು. ಅಪ್ಪ ನೀನು ಸ್ಥಿತಿವಂತನೇನೋ ಸರಿನೆ. ಆದರೆ ನೀನು ಒಕ್ಕಲು ಮಗ, ಕುಂಚಿಟಿಗರೋನು. ಈ ಮಗು ಗೊಲ್ಲರದ್ದು. ಇದರ ಸಹವಾಸ ಕಷ್ಟ ಕಣಪ್ಪ. ಗೊಲ್ಲರ ಸೂತಕ ನಿಮಗೆ ಆಗಲ್ಲ. ಹೆತ್ತವರ ಸೂತಕ, ಮೈನೆರೆದವರಿಗೂ ಸೂತಕ, ಸತ್ತರೂ ಸೂತಕ. ಬಲು ಕಷ್ಟ ಕಣಪ್ಪ. ಸೂತಕ ಅಂಬ್ತಾ ಊರಾಚೆಗೆ ಹೋಗಬೇಕು. ಕಳ್ಳೆಬೇಲಿ ಹಾಕಿಕೊಂಡು ಹುದಿಯಿಂದ ಆಚೆಗೆ ಇರಬೇಕು. ಶಾಸ್ತ್ರ ಕುಲಾಚಾರ ಜಾಸ್ತಿ. ನೀವು ಊರ ಗೌಡರು. ಅದೆಲ್ಲಾ ಮಾಡೋರಲ್ಲ. ನಿಮ್ಮ ಆಚಾರಕ್ಕೂ ಇವುರ ಆಚಾರಕ್ಕೂ ಬಿಡುತ್ತೆ ಅಂದರು. ಆಗ ಆಲೇಗೌಡರು ಹೇಳಿರು 'ಸ್ವಾಮಿ ನಾವು ಊರಾಗೆ ವಾಸ ಮಾಡೋರಿರಬಹುದು. ನಮಗೂ ಶಾಸ್ತ್ರ, ಸಂಬಂಧ ಅವೆ. ತಾವು ಉಪಕಾರ ಮಾಡಿ ಈ ಮಗ ಕೊಟ್ಟರೆ ನಾವು ಗೊಲ್ಲರ ತರನೇ ನಡೆದುಕೊಳ್ಳುತೀವಿ' ಅಂದನು.

ಆಗ ಈ ಅಜ್ಜಪ್ಪಗಳು ಯೋಚನೆ ಮಾಡಿರು. ಈಯಪ್ಪನೂ ಸತ್ಯವಂತನೆ. ನಮ್ಮ ವಡವೆ ನಮಗೆ ಹೊಡೆದುಕೊಂಡು ಹೋಗಿ ಅಂಬ್ತಾ ಹೇಳವನೆ. ಈ ಮಗುವನ್ನು ಕೈಬಿಡಲ್ಲ. ಇವನಿಗೆ ಮಗು ಕೊಟ್ಟರೆ ಸೂರ್ಯ ಚಂದ್ರರಿರುವ ತನಕ ಗೊಲ್ಲರಿಗೂ ಕುಂಚಿಟಿಗರಿಗೂ ಸಂಬಂಧ ಬೆಳೆದು, ಈ ಸಂಬಂಧ ನಮ್ಮ ಮನುಷ್ಯಜಾತಿ ಒಂದಾಗಿಸಿಬಿಡುತ್ತೆ ಅಂಬ್ತಾ ಯೋಚನೆ ಮಾಡಿಬಿಟ್ಟರು. ಆಮೇಲೆ ಹೀಗೆ ಹೇಳಿದರು 'ಗೌಡರೆ ನೀವು ಸತ್ಯವಂತರೆ. ತಿಂಬಾ ಅನ್ನದ ಬುತ್ತಿನೂ ಹುಟ್ಟಿದ ಮಕ್ಕಳು ಸಿಕ್ಕದು ಪುಣ್ಯ. ಏಳೇಳು ಜನ್ಮದ ಸುಕೃತ ಫಲ. ಈಗ ನೀವು ಸ್ನಾನ ಮಾಡಿಕೊಂಡು ನಿಮ್ಮ ಹೆಂಡತಿಗೆ ಬಿಳಿಸೀರೆ ಉಡಿಸಿಕೊಂಡು ಗೊಲ್ಲ ಕಡಗ ಮುಂಗೈಗೆ ಹಾಕಿಕೊಂಡು, ಕರೆ ಬಳೆ ತೊಟ್ಟುಕೊಂಡು ಬರಬೇಕು. ನೀನು ಹೊಸ ಅಂಗಿ ಹಾಕಿಕೊಂಡು, ಬಿಳಿ ಪಂಚೆ ಉಟ್ಟುಕೊಂಡು, ಹೆಗಲ ಮೇಲೆ ಕರಿ ಕಂಬಳಿ ಹಾಕಿಕೊಂಡು, ತಲೆ ಮ್ಯಾಲೆ ಸಣ್ಣಂಚಿನ ಕೆಂಪು ವಸ್ತ್ರ ತಲೆಗೆ ಸುತ್ತಿಕೊಂಡು, ಕ್ವಾರೆಮೆಟ್ಟು ಹಾಕಿಕೊಂಡು, ಕೊಡೆ ಹಿಡಕೊಂಡು ಬರಬೇಕು. ಆಗ ಮಗನ ನಿನ್ನ ಹೆಂಡತಿ ಮಡಿಲಿಗೆ

ಹಾಕುತೀವಿ' ಅಂದರು.

ಗೌಡನಿಗೆ ಸಂತೋಷವಾಯಿತು. 'ಆಗಬಹುದು ಸ್ವಾಮಿ, ತಮ್ಮ ಅಪ್ಪಣೆ ಪಾಲಿಸುತೀನಿ' ಅಂದನು. ಈ ಅಜ್ಜಯ್ಯಗಳು ಇನ್ನೊಂದು ಮಾತನೂ ಆಡಿರು. ಅದೇನಪ್ಪ ಅಂದ್ರೆ 'ಈ ಹುಡುಗ ದೆಸೆವಂತ. ಇವನು ನಿನ್ನ ಮನೆಗೆ ಬಂದ ಮೇಲೆ ನಿನ್ನ ಮನೆಗೆ ಮಕ್ಕಳ ಫಲನೂ ಆಗಬಹುದು. ಆಗ ಈ ಗೊಲ್ಲರ ಹುಡುಗ ನಮಗ್ಯಾಕೆ, ಅವುರ ಶಾಸ್ತ್ರನೂ ಬ್ಯಾಡ, ಕಷ್ಟನೂ ಬ್ಯಾಡ ಅಂಬ್ತಾ ಈ ಹುಡುಗನನ್ನು ನೀವು ಉದಾಸೀನವಾಗಿ ಕಾಣಬಾರದು. ಹಾಗಂತ ಮನಸ್ಸಿನಾಗೂ ಬರಬಾರದು. ಒಂದು ವೇಳೆ ಹಿಕಮತ್ತಿನ ಮಾತು ಕೇಳಿಬಿಟ್ಟು ಏನಾರ ಹೆಚ್ಚು ಕಡಿಮೆ ಆದರೆ, ಈ ಮಗನ ಉದಾಸೀನವಾಗಿ ಕಂಡರೆ ನಿನ್ನ ಮನೆ ಹಾಳಾಗುತ್ತೆ' ಅಂದರು. 'ಹಂಗಂತ ಬಲಗೈ ಭಾಷೆ ಕೊಡು' ಅಂದರು. ಆಲೇಗೌಡ ಭಾಷೆ ಕೊಟ್ಟು ಹೇಳಿದ 'ಆಗಬಹುದು ಸ್ವಾಮಿ, ಭಗವಂತ ಬೇಕಾದಷ್ಟು ಅನುಕೂಲ ಕೊಟ್ಟವನೆ. ಆದರೆ ಹನ್ನೆರಡು ಅಂಕಣದ ಮನೆಗೆ ಆಡೋ ಒಂದು ಕುಡಿನೀ ಇಲ್ಲ. ಅಂತೆಂಬ ಕಾಲಕ್ಕೆ ಈ ಮಗನ ಸ್ವಂತ ಮಗನಿಗಿಂತ ಅತಿಶಯವಾಗಿ ಕಾಯುತೀವಿ' ಅಂಬ್ತಾ ಕೈಮುಗಿದನು. ಆಗ ಆ ಅಜ್ಜಪ್ಪಯ್ಯಗಳಿಗೂ ಆನಂದವಾಯ್ತು. ಹೊನ್ನಟ್ಟಿ ಆಲೇಗೌಡನೂ, ಅವನೆಂಡತಿ ದೊಡ್ಡಕ್ಕನೂ ಶೃಂಗಾರ ಮಾಡಿಕೊಂಡು ಬಂದರು. ಅದಕ್ಕೆ ಸಾಕ್ಷಿಯೆಂಬಂತೆ ಜನಗಳೂ ಕೂಡಿಕೊಂಡರು. ಮಗನ ಸಾಕೋ ಜವಾಬ್ದಾರಿನ ಎಲ್ಲರ ಮುಂದೆ ಹೊತ್ತುಕೊಂಡ ಹೊನ್ನಟ್ಟಿ ಆಲೇಗೌಡನೂ, ಅವುನ  ಹೆಂಡತಿ ದೊಡ್ಡಕ್ಕನೂ ಜನಗಳ ಮುಂದೆ ಸೆರಗೊಡ್ಡಿಕೊಂಡು ನಿಂತರು. ಆಗ ಅಂಬೇರಾಯ ತುಂಬೇರಾಯರು ಕೆಂಗುರ ಮಗುವನ್ನು ಎರಡು ಕೈಯಾಗೂ ಎತ್ತಿ 'ಹೋಗಪ್ಪ ಅವರೇ ನಿನಗೆ ಅಪ್ಪ ಅಮ್ಮಗಳು. ಅವುರ ವಂಶ ಬೆಳಗೋ ಭಾಗ್ಯದೇವತರಾಗಿ, ಸತ್ಯವಂತನಾಗಿ ಬಾಳಪ್ಪ. ಹಸುಮಕ್ಕಳ ಮೇಲೆ, ಹೆಂಗಸರ ಮೇಲೆ, ಅಸವಲ್ಲದವರ ಮೇಲೆ ಕೈ ಎತ್ತಬೇಡಪ್ಪ' ಅಮ್ತಾ ಹೇಳಿಬಿಟ್ಟು ಆಶೀರ್ವಾದ ಮಾಡಿಬಿಟ್ಟರು.

ಹುಡುಗ ಒಂದು ಚೂರೂ ಹೆದರಿಕೆ ಇಲ್ಲದೆ, ತಮ್ಮ ಅಪ್ಪ ಅಮ್ಮನ ತರನೇ, ಆಲೇಗೌಡನ ತವ ಬಂದುಬಿಡ್ತು. ಆಗ ಅಲ್ಲಿ ಸೇರಿದ್ದರೆಲ್ಲ ಕೂಡಿ ಮಗುವಿಗೆ ಅಂದರೆ ಕೆಂಗರುವಿಗೆ 'ಕೆಂಗರು ಮಲ್ಲೇಗೌಡ' ಅಂಬ್ತಾ ಹೆಸರಿಡಿದು ಮೂರು ಸಾರಿ ಕರೆದು, ಕೂಡಿದ್ದ ಜನಾದಿ ಜನರಿಗೆಲ್ಲಾ ವೀಳ್ಯ ತಿದ್ದಿ ಆಲೇಗೌಡ ಮಗ ಕರಕೊಂಡು ಮನೆಗೆ ಬಂದರು.

## ಮಾರನೋರು ಕರಡೇರ ಗೊಲ್ಲರಾದರು

ಜುಂಜಪ್ಪನ ಕುಲದವರು ಮಾರನೂರ ಗೊಲ್ಲನೆ. ಆಮೇಲೆ ಅವರನ್ನು ಕರಡೇರ ಗೊಲ್ಲರು ಅಂತಾಲೇ ಕರಿತಾರೆ. ಕರಡೇರ ಗೊಲ್ಲರು ಜುಂಜಪ್ಪನ ವಂಶದವರೆ. ಕರಡೇರ ಗೊಲ್ಲರಿಗೆ ಹೆಣ್ಣು ಕೊಡಾದು, ತಗಾಳಾದು ನಮ್ಮ ಗೊಲ್ಲರಾಗೆ ತುಂಬಾನೆ ಇಷ್ಟಪಡುತಾರೆ. ಅದು ಸರಿ ಮಾರನೋರ ಗೊಲ್ಲರನ್ನು ಕರಡೀ ಗೊಲ್ಲರು ಅಂಬ್ತಾಲೇ ಕರೀತಾರೆ. ಇವರಿಬ್ರೂ ಅಣ್ಣ ತಮ್ಮಗಳೆ. ಹೆಣ್ಣ ಕೊಡಾದು-ತರಾದು ಈ ಎರಡು ಕುಲದಲ್ಲಿ ಇಲ್ಲ. ಇವರು ಕಂಬೇರಿಗೆ ನೆಂಟರಾಗಬೇಕು. ಇವರೇ ಜುಂಜಪ್ಪನ ಮಾವುಗಳು.

ಮಾರನೋರ ಗೊಲ್ಲರೇ ಕರಡಿಗೊಲ್ಲರು ಹೆಂಗಾದ್ರು? ಅಂದ್ರೆ ಅದಕೂ ಒಂದು ಕತೆ ಐತೆ. ಹೆಣ್ಣುಮಗಳೊಬ್ಬಳು, ಅವುಳ ಹೆಸರು ಕಾಟಮ್ಮ ಅಂಬ್ತಾ. ಆಕೆಯದು ಮೇಕೆ ಕಾಯದು, ಕುರಿ ಕಾಯದು ಕೆಲ್ಸ. ಒಂದು ಸಲ ಏನಾಯಿತಪ್ಪ ಅಂದ್ರೆ ಈಯಮ್ಮ ಮೇಕೆ ಕಾಯೋಕೆ ಹೋದಾಗ ಒಂದು ಕರಡಿ ಕೈಗೆ ಸಿಕ್ಕಿಬಿಟ್ಟಳು. ಅದೊಂದು ಗಂಡು ಕರಡಿ. ಇದರ ಜೊತೆಗೆ ಇದ್ದ ಹೆಣ್ಣು ಕರಡಿ ಎರಡು ಮರಿನ ಹಾಕಿಬಿಟ್ಟು ಸತ್ತುಹೋಗಿಬಿಟ್ಟಿತ್ತು. ಆ ಮರಿಗಳಿಗೆ ಹಲಸಿನಹಣ್ಣು, ಬಾಳೆಹಣ್ಣು, ಜೇನುಗೂಡು ತಂದಾಕ್ತಾ ಪಾಲನೆ ಪೋಷಣೆ ಮಾಡ್ತಾ ಗಂಡುಕರಡಿ ಚೆನ್ನಾಗಿಯೇ ನೋಡಿಕೊಳ್ತಾ ಇತ್ತು.

ಹಿಂಗಿರಬೇಕಾದ್ರೆ ಮ್ಯಾಕೆ ಮೇಸೋಕೆ ಅಂಬ್ತಾ ಹೋಗಿದ್ಲಳ್ಳ ಕಾಟಮ್ಮ ಅದೇನೋ ಉಗುಣಿ ಬಳ್ಳಿ ಕೀಳಾಕೆ ಅಂಬ್ತಾ ಹೋದಾಳು, ಅಲ್ಲೇ ಇದ್ದ ಆಳು ಗುದ್ದರಕೆ ಬಿದ್ದಳು. ಅದನ್ನು ಅಲ್ಲೆ ಒಂದು ಗವಿಯೊಳಗೆ ವಾಸ ಮಾಡಿಕೊಂಡಿದ್ದ ಮರಿಕರಡಿ ನೋಡಿಕೊಂಡು ಬಿಡ್ತು. ಆಮೇಲೆ ಆಯಮ್ಮನ್ನ ಎಳಕೊಂಡು ಆ ಬಂಡೆ ಸಂದಿನ ಗವಿಗೆ ಹೋಗಿಬಿಟ್ಟು ಬಾಗಿಲಿಗೆ ಒಂದು ದೊಡ್ಡದು ಬಂಡೆನ ಎಳಕೊಂಡು, ಒಳಾಕೆ ಸೇರಿಕೊಂಡುಬಿಡ್ತು. ಹಸಿದು ಬಂದ ಕಾಟಮ್ಮಗೆ ಹಲಸಿನತೊಳೆನೂ ಜೇನುತುಪ್ಪನೂ ಹಿಂಡಿಕೊಡ್ತು. ಆಮೇಲೆ ನೀನು ನನ್ನ ಹೆಂಡತಿ ಆಗು ಅಂತು. ಆಗ ಈಯಮ್ಮ ಕೇಳ್ತು 'ಕರಡಿರಾಜ, ಕರಡಿರಾಜ ನಾನು ಅನಾಥೆ. ಎಲ್ಲೋ ಬಿದ್ದವಳನ್ನು ನೀನು ಕರಕೊಂಡು ಬಂದೆ, ಹಣ್ಣು ಆಹಾರ ಕೊಟ್ಟು

ಉಪಚರಿಸಿದೆ. ಒಳ್ಳೆದೇ ಆಯಿತು. ಆದರೂನು ನನ್ನದೊಂದು ಕೋರಿಕೆ ನಿನ್ನ ಮುಂದೆ ಮಡಗುತೀನಿ. ಅದನ್ನು ಈಡೇರಿಸಿದರೆ ನೋಡಪ್ಪ ನಾನು ನಿನ್ನ ಮದುವೆ ಮಾಡಿಕೊಂಡು ಸಂಸಾರ ಮಾಡುತೀನಿ. ನಿನ್ನ ಮಕ್ಕಳನ್ನು ಸಾಕುತೀನಿ' ಅಂದ್ಲು. ಕರಡಣ್ಣನಿಗೆ ಒಂದು ಚೂರು ನಚ್ಚಗಾದಂಗಾತು. ಇವಳ್ಯಾರೋ ಗ್ಯಾನವಸ್ಥೆ. 'ಅದೇನೇಳಮ್ಮ ನಿನ್ನ ಕೋರಿಕೆ ನಡೆಸುವಂಗಿದ್ದರೆ ನಡೆಸುವಾ' ಅಂದು ಸಮಾಧಾನ ತೋರಿತು. ಆಗ ನಮ್ಮ ಕಾಟಮ್ಮ ಇದ್ದಲ್ಲ ಅವಳೇಳಿಳು 'ಅದೇನಿಲ್ಲ ಕರಡಿರಾಜ, ನಾನು ಒಂದು ಹರಕೆ ಕಟ್ಟಿಕೊಂಡು ವ್ರತ ಮಾಡ್ತಾ ಇದ್ದೀನಿ. ಅದೇನಪ್ಪ ಅದ್ರೆ ನಾನು ಇನ್ನು ತಿಂಗಳೊಪ್ಪತ್ತು ಗಂಡಸರ ದರ್ಶನ ಮಾಡಂಗಿಲ್ಲ. ನೀನು ಗಂಡಸು. ನನ್ನ ಜೊತೆಗೆ ಬಾಳ್ವೆ ಮಾಡೋನು.ಅದರಿಂದ ನೀನು ಈ ಗವಿಯೊಳಗೆ ಇರಕೂಡದು' ಅಂದಳು.

ಕರಡಿರಾಯ ಯೋಚನೆ ಮಾಡಿದ. ಹರುಷದ ಕೂಳಿಗೆ ವರ್ಷದ ಕೂಳು ಕಳಕೊಳ್ಳದು ಬ್ಯಾಡ. ಈ ಯಮ್ಮ ಹೇಳಿದಂಗೆ ಒಂದು ತಿಂಗಳೊಪ್ಪತ್ತು ಯಾವುದಾರ ಕಾಡಾಗೋ ತಪ್ಪಲಾಗೋ, ಮರದಾಗೋ, ಮಳ್ಳಾಗೋ ಇದ್ದರಾತು ಅಂದುಬಿಟ್ಟು ಆಗಬಂದರಾತು ಅಂತು. ಸರಿ, ತಿಂಗಳೊಪ್ಪತ್ತಿಗೆ ಆಗೋವಷ್ಟು ಹಲಸು, ಬಾಳೆ, ನೇರಳೆ, ಜೇನು ತಂದು ಕರಡಿ ಬೋನಾಗೆ ಒಟ್ಟಿಬಿಟ್ಟು ಹೊರಟುಬಿಡ್ತು. ಹೋಗಬೇಕಾದರೆ ಏನು ಹೇಳತಪ್ಪ ಅಂದ್ರೆ 'ನಾನು ಬರಾಗಂಟ ಯಾರಾದರೂ ಬಂದ್ರೆ ಮಾತಾಡಂಗಿಲ್ಲ. ನನ್ನ ಎರಡು ಮರಿ ಜೊತೆಗೆ ಹಂಚಿ ಉಣ್ಣಬೇಕು' ಅಂಬ್ತಾನೆ ಹೇಳಿ ಅಲ್ಲಿಂದ ಹೊರಟಿತು. ಸರಿ, ಬಾಗಿಲಿಗೆ ದೊಡ್ಡದೊಂದು ಬಂಡೆಕಲ್ಲು ಎಳೆದು ಅದರ ಮುಂದಕೆ ಕಳ್ಳೆಬೇಲಿ ಹಾಕಿದಂಗೆ ಮಾಡಿ, ಅದರ ಪಾಡಿಗದು ಹೊರಟುಹೋಯ್ತು.

ಕಾಡಿಗೆ ಮ್ಯಾಕೆ ಮೇಸಾಕೆ ಹೋದಳು ಕಾಟಮ್ಮ ಸಂಜೆ ಆದರೂ ಮನೆಗೆ ಬರಲಿಲ್ಲ. ಮ್ಯಾಕೆಲ್ಲಾ ನೆಪ್ಪಿನ ಮೇಲೆ ಮನೆಗೆ ಬಂದವು. ಅವುಳ ಅಣ್ಣಗಳು ಅವುಳನ್ನು ಹುಡುಕಿದರು, ತಿರುಗಿದರು. ಎಲ್ಲಿಗೆ ಹೋದರೂ ಆಯಮ್ಮನ ಸುಳಿವು ಮಾತ್ರ ದಕ್ಕಲಿಲ್ಲ. ಸರಿ ಯಾರಾದರೂ ಓಡಿಸಿಕೊಂಡು ಹೋಗಿರಬೇಕಾ ಅಂತಲೂ ಯೋಚನೆ ಮಾಡಿರು. ಅವರು ಇವರನ್ನು ಕೇಳಿದರು. ಪತ್ತೆ ಆಗಲೇ ಇಲ್ಲ. ಹಿಂಗೆನೆ ಒಂದೆರಡು ದಿನ ಕಳೆಯಿತು. ಪಾಪ ಕಾಟಮ್ಮ ಆ ಗವಿಯಿಂದ ಈಚೆಗೆ ಬರಾಕೆ ನಾನಾ ಕಸರತನ್ನ ಮಾಡಿಳು. ಬಂಡೆ ದಬ್ಬಾಕೆ ನೋಡಿಳು, ಅದು ಜಪ್ಪಯ್ಯ ಅನ್ನಲಿಲ್ಲ. ಮುಂದಕೆ ಕಳ್ಳೆಬೇಲಿ ಹಾಕಿರೋದರಿಂದ ಯಾರೂನೂ ಈ ಕಡೀಕೆ ಬರುತ್ತಿರಲಿಲ್ಲ.

ಒಂದು ದಿನ ಮಾರನವರ ಬುಳ್ಳಯ್ಯ ಅಂಬೋನು ಮೇಕೆ ಬಿಟ್ಟುಕೊಂಡು ಹೋಗಿದ್ದ. ಮ್ಯಾಕೆ ಮೇಯಿಸಿ ಮೇಯ್ಕೊಂಡು ಆ ಕರಡಿ ಗವಿಯ ಹತ್ರಕ್ಕೆ ಬಂದವು. ಅವುಗಳ ಸಪ್ಪಳ

ಕೇಳುತಾಲೂ ಒಳಗಿದ್ದಳಲ್ಲ ಕಾಟಮ್ಮ, ಏನು ಮಾಡಿಳು ಅಂದರೆ, ಬಂಡೆ ಸಂದಿಯಿಂದ ತಾನು ತಿಂದ ಹಲಸಿನ ಸ್ವಾಲೆ, ಹಲಸಿನ ತೊಳೆ, ಬೀಜಗಳ ನೂಕಿ, ಮೇಕೆಗೆ ವಾಸನೆ ಹಿಡಿಸಿಳು. ಮ್ಯಾಕೆ ಒಂದರಿಂದೆ ಒಂದರಂತೆ ಬಂದುಬಿಟ್ಟು ಆ ಗವಿಯತ್ರ ಗುಂಪು ಕಟ್ಟಿಕೊಂಡವು. ಮೇಕೆ ಬುಳ್ಳಯ್ಯನಿಗೆ ಇದೇನಪ್ಪ ಸೊಪ್ಪಿಲ್ಲ, ಸದೆಯಿಲ್ಲ ಈ ಮ್ಯಾಕೆ ಯಾಕೆ ಹಿಂಗೆ ಗುಂಪು ಕಟ್ಟಿಕೊಂಡವೆ ಅಂಬ್ತಾ ಯೋಚನೆಗೆ ಇಕ್ಕೊಂಡು, ಯಾವುದನ ತೋಳಗೀಳ ಮರಿ ಹಿಡಕೊಳ್ಳುತ್ತಾ ಅಂಬ್ತಾ ಓಡೋಡಿ ಬಂದ. ಬಂದು ನೋಡುತಾನೆ ಒಳ್ಳೆ ಗಂ ಅಂಬ್ತಾ ಮೂಗು ಒಡೆದು ಹೋಗಂಗೆ ವಾಸನೆ ಬರುತಾದೆ. ಆಗ ಬುಳ್ಳಯ್ಯ ಏನು ಮಾಡಿದ ಅಂದರೆ ದೂರದಿಂದಲೇ ರೋಟಿ ಗೊನೆಯನ್ನು ಆ ಗವಿಯೊಳಗೆ ತೂರಿಸಿಬಿಟ್ಟು ಹಲಸಿನ ತೊಳೆನೂ, ಸ್ವಾಲೆನೂ ಈಚೆಗೆ ಎಳೆದ. ಎಷ್ಟು ಎಳೆದರೂ ಬರುತಲೇ ಅದೆ. ಇನ್ನೂ ಹತ್ತಿರ ಬಂದ. ಒಳಗಿಂದ ಒಂದು ಹೆಣ್ಣು ಹೆಂಗಸಿನ ಕೀರಲು ಧ್ವನಿ ಕೇಳಿದಂಗಾಯ್ತು. ಇದೇನೆಂದು ರವಾಟು ಯೋಚನೆ ಮಾಡಿದ. ಇನ್ನೂ ಜೋರಾಗಿ ಅತ್ತಂಗೆ ಆಯ್ತು. ಹೊರಗಿನಿಂದಲೇ ಕಿವಿ ಇಟ್ಟು ಯಾರು ಅಂಬ್ತಾ ಕೂಗಿದ.

ಯಾವಾಗ ಯಾರು ಅಂತಾನೆ ಕೂಗಿದನೋ, ಯಾರೋ ನಮ್ಮ ಕಡೆಯರೇ ಬಂದವರೆ ಅಂತೆಂದು ಕಾಟಮ್ಮ 'ನಾನು ನಾನು ಕಾಟಮ್ಮ' ಅಂಬ್ತಾ ಹೇಳಿಳು. ಆಮೇಲೆ ಒಳಗಡೆ ಕರಡಿ ಇಲ್ಲ, ಇನ್ನೂ ತಿಂಗಳೊಪ್ಪತ್ತು ಇತ್ತಕಡೆ ಬರಂಗಿಲ್ಲ ಅಂಬ್ತಾ ಹೇಳಿದಳು. ಆಗ ಬುಳ್ಳಯ್ಯ ಸಾಹಸಪಟ್ಟು ಆ ಬಂಡೆಯನ್ನು ಸರಿಸಿಬಿಟ್ಟು ನೋಡುತಾನೆ, ಬಡಕಾಟಮ್ಮ ಒಂದು ಮೂಲೆಗೆ ಮುದುಡಿ ಕುಂತುಬಿಟ್ಟವಳೆ. ಅಲ್ಲೇ ಎರಡು ಕರಡಿ ಮರಿನೂ ಆಟವಾಡುತ್ತಿದ್ದವು. ಬುಳ್ಳಯ್ಯಗೆ ಕೋಪ ಬಂದುಬಿಡ್ತು. ಕೈಯಾಗೆ ಒಂದು ರೋಟಿ ಕುಡ್ಲು ಇತ್ತು. ತಗೊಂಡು ಒಂದೊಂದು ಕರಡಿ ಮರಿನೂ ಕೊಚ್ಚಿಬಿಟ್ಟ. ಆಮೇಲೆ ಕಾಟಮ್ಮನನ್ನು ಈಚೆಗೆ ಕರಕೊಂಡು ಮೇಕೆ ಹೊಡಕೊಂಡು ಊರಿಗೆ ಬಂದ. ಊರಾಗೆ ಇದೇ ಸುದ್ದಿಯಾಗಿಬಿಡ್ತು. ಮುಂದೆ ಬುಳ್ಳಯ್ಯನಿಗೂ, ಕಾಟಮ್ಮನಿಗೂ ಲಗ್ನನೇ ಮಾಡಿರು.

ಬುಳ್ಳಯ್ಯನಿಗೂ ಕರಡಿ ಕಾಟಮ್ಮನಿಗೂ ಮನೆ ಮಾಡಿರು. ಜನವೆಲ್ಲಾ ಈಕೆನ ಕರಡಿ ಕಾಟಮ್ಮ, ಕರಡಿ ಕಾಟಮ್ಮ ಅಂಬ್ತಾಲೇ ಕರೀತಿದ್ರು. ಇವರಿಬ್ಬರೂ ಬಾಳ್ವೆ ಮಾಡ್ತಾ ಇರಬೇಕಾದರೆ, ಈಯಮ್ಮ ನೀರು ಹಾಕೊಂತು. ಆಮೇಲೆ ಗರಬಿಣಿಯಾಗಿ ನವಮಾಸ ಕಳೆಯಿತು. ಹಟ್ಟಿಯಿಂದ ಹೊರಕೆ ಹಾಕಿರು. ಅಲ್ಲೊಂದು ಪಾಕಿ ಮಾಡಿ, ಅಲ್ಲಿಗೆ ಬಿಟ್ಟರು. ಮುಂದೆ ಒಂದು ದಿನ ಕರಡಿ ಕಾಟಮ್ಮನಿಗೆ ಹೆರಿಗೆನೂ ಆಯ್ತು. ಆದರೆ ಸಾಮಾನ್ಯ ಹೆರಿಗೆ ಅಲ್ಲ, ಕರಡಿ ಹೆರಿಗೆ. ಎಲ್ಲರಿಗೂ ಗಾಬರಿಯಾಯ್ತು. ಆಮೇಲೆ ಆ ಮಗುನೂ ಸತ್ತುಹೋಗಿಬಿಡ್ತು. ಹಂಗೇನೇ ಒಂದು ನಾಲ್ಕೈದುಬಾರಿ ಕರಡಿನೇ ಕಾಟಮ್ಮ ಹೆತ್ತಳು.

ಹುಟ್ಟಿದ ಮಕ್ಕಳೆಲ್ಲ ಒಂದೆರಡು ದಿನದಲ್ಲಿ ಸತ್ತು ಹೋಗಿಬಿಡುತಾ ಇದ್ದುದು ಪೇಚಿಗೆ ಕಾರಣವಾಗಿಬಿಡ್ತು.

ಯಾಕೆ ಹಿಂಗಾಗುತ್ತೆ ಅಂಬ್ತಾ ಯೋಚನೆ ಮಾಡಲಾಗಿ, ಹಿಂದೆ ಕರಡಿ ಮರಿ ಸಾಯಿಸಿದನಲ್ಲ ಬುಳ್ಳಯ್ಯ, ಅವನದೊಂದು ದೋಷವಾದರೆ, ಗಂಡು ಕರಡಿಗೆ ಬಲಗೈ ಭಾಷೆ ಕೊಟ್ಟು ಅಪ್ಪ ಮಕ್ಕಳನ್ನು ಅಗಲಿಸಿ, ಆ ಮರಿನೂ ಸಾಯಿಸಿ, ತಪ್ಪಿಸಿಕೊಂಡು ಬಂದಿದ್ದು ಕಾಟಮ್ಮ ಅವುಳದೂ ದೋಷ ಕೂಡಿಕೊಂಡು, ಮಹಾ ಪಾಪವಾಗಿ ಅದೇ ಶಾಪನೂ ಆಗಿ, ಬುಳ್ಳಯ್ಯ-ಕರಡಿ ಕಾಟಮ್ಮರಿಗೆ ಹುಟ್ಟಿದ ಮಕ್ಕಳೆಲ್ಲಾ ಕರಡಿ ರೂಪ ತಾಳದು, ಆಮೇಲೆ ಸತ್ತು ಹೋಗಿ ಬಿಡಾದು. ಹೀಗೆ ಮಾಡ್ತಾ ಬಂದವು ಎಂದು ತಿಳಿತು. ಆಗ ಪರಿಹಾರ ಏನು ಎಂದು ಚಿಂತಿಸಲಾಗಿ, ಕರಡಿ ಮರಿಗಳನ್ನು ಕೊಂದ ಪಾಪಕ್ಕಾಗಿ ಮಾರನೋರ ಗೊಲ್ಲರೆಲ್ಲಾ ತಮ್ಮ ಕುಲಕ್ಕೆ ಕರಡೇರ ಗೊಲ್ಲರು ಅಂಬ್ತಾ ಕರಕೊಂಡು ಬಂದರೆ, ಪಾಪ ಪರಿಹಾರವಾಗುತ್ತೆ ಅಂಬ್ತಾ ತಿಳಿಯಿತು. ಅದರಂತೆ ನಡೆದುಕೊಂಡರು. ಈಗ ಮಾರನೋರ ಗೊಲ್ಲರೆ ಕರಡೇರ ಗೊಲ್ಲರು. ಕೆಲವರು ಮಾರನೋರ ಗೊಲ್ಲರು ಅಂತಲೂ ಕರೆದುಕೊಳ್ಳುತಾರೆ. ಕರಡೇರ ಗೊಲ್ಲರು ಅಂಮ್ತಾಲೂ ಕರೀತಾರೆ. ಎರಡೂ ಒಂದೇ. ಅಣ್ಣ ತಮ್ಮಗಳು ಜುಂಜಪ್ಪ ಕರಡೇರ ಗೊಲ್ಲರ ಕುಲಕ್ಕೆ ಸೇರಿದವನು.

ಅಕ್ಕನ ಕೆರೆಯಂತೆ ತುಂಬಿ ತೇಲುತೇತೆ
ಪಕ್ಕೆ ಮೀನಂಗೆ ಹೊಳವಂತೆ । ವೀರ ಜುಂಜಯ್ಯ
ನೀನು ಹುಟ್ಟಿ ಮಾರನೋರಿಗೆ ಹೆಸರಾದ.

ತಾವರನ ಗೆರೆಯೋನು ಕಾತಿಯ ಮಣಿಯೋನು
ಎಷ್ಟೊತ್ತು ನಿಮ್ಮ ನೆನೆಯಾದು । ಮಾರನೋರ
ಮಾತಿನರಗಿಣಿಯೆ ಮಾನದಿರುಗೋ

## ಎತ್ತಪ್ಪನ ಸೃಷ್ಟಿ

ಅಂಬೇರಾಯ ತುಂಬೆರಾಯ ದನ ಹುಡುಕಾಡಿ ಆರು ತಿಂಗಳು ಆಗಿತ್ತು. ಊಟಾನೇ ಮಾಡಿರಲಿಲ್ಲ, ಸ್ನಾನವನ್ನೇ ಮಾಡಿರಲಿಲ್ಲ. ಮನೆಯಿಂದ ಬರುವಾಗ ಹಾಲು-ತುಪ್ಪದ ಬುತ್ತಿ ಕಟ್ಟಿಕೊಂಡು ಬಂದಿದ್ರು. ಅದು ಹಾಗೇ ಇತ್ತು. ಈಗ ಊಟ ಮಾಡಾನ ಅಂದು, ಕೈಕಾಲು ಮುಖ ತೊಳೆದು ಆಕಾಶ ಭೂಮಿತಾಯಿಗೆ ಶರಣು ಮಾಡಿ, ಊಟಕ್ಕೆ ಕುಂತರು. ಕಟ್ಟಿಕೊಂಡು ಬಂದಿದ್ದ ಬುತ್ತಿ ಬಿಚ್ಚುತ್ತಾರೆ. ಆರು ತಿಂಗಳ ಬುತ್ತಿ ಈಗ ಮಾಡಿದ ಬುತ್ತಿ ಇದ್ದಂಗೆ ಅದೆ. ಆ ವೇಳೆಗೆ ಕೈಲಾಸದೊಳಗೆ ಶಿವಪೂಜೆ ನಡೀತಿತ್ತು. ಪರಮೇಶ್ವರ ಶಿವಪೂಜೆ ಮಾಡಿಕೊಂಡು ವಿಭೂತಿಧಾರಣೆ ಮಾಡಿಕೊಂಡು ತೀರ್ಥ ಪ್ರಸಾದದಿಂದ ಕೈಗೆ ಒಂದು ಹನಿ ನೀರು ಬಿಟ್ಟುಕೊಂಡ. ಆ ನೀರು ಕೈಲಾಸದಿಂದ ನೇರವಾಗಿ ಅಂಬೇರಾಯ-ತುಂಬೇರಾಯನ ಹಗಲಿನ ಮೇಲೆ (ಚಟ್ಟೆ) ಬಿದ್ದುಬಿಡ್ತು. ಆಗ ಹೀಗಾ ಅನ್ನಾದರೊಳಗೆ ಒಂದು ಅವರೆಕಾಳಿನ ಗಾತ್ರದ ಹುಳವಾಗಿಬಿಡ್ತು. ಆಗ ಅಂಬೇರಾಯ ಆ ಹುಳವನ್ನು ತೆಗೆದು ನೆಲಕ್ಕೆ ಹಾಕಿ ಹಾಲು-ತುಪ್ಪದ ಊಟ ಮಾಡುವಾಗ ಆ ಹುಳ ಒಂದು ಹುಡುಗನ ರೂಪ ತಾಳಿಬಿಡ್ತು. ಇದು ಪರಮಾತ್ಮ ದನ ಕಾಯಕ್ಕೆ ಕಳಿಸಿದ ವರ ಅಂತೆಂದು ಅಂಬೇರಾಯ ತುಪ್ಪದಾಗೆ ಹುಟ್ಟಿದ ಈ ಹುಡುಗನಿಗೆ ಎತ್ತಪ್ಪ ಎಂತ ಹೆಸರಿಕ್ಕಿದನು. ಹುಡುಗ ಬೆಳೆಯುತ್ತಾ ಬಂದ. ಏಳು ಗೂಡಿನ ದನಗಳನ್ನ ಈ ಎತ್ತಪ್ಪನಿಗೆ ಒಪ್ಪಿಸಿದ ಅಂಬೇರಾಯ, ತುಂಬೇರಾಯರು ಕಾಲುಬೆರಸೆ ಕೈಲಾಸಕ್ಕೆ ಹೋಗಿಬಿಟ್ರು. ಎತ್ತಪ್ಪ ದನಗಳನ್ನು ವೇಣುಕಲ್ಲು ಗುಡ್ಡ, ತಳುಕಿನ ಗುಡ್ಡಗಳಲ್ಲಿ ಮೇಯಿಸುತ್ತಾ ಕುರುಬರ ಪದ್ಮಣ್ಣನ ಹೊಲದಾಗೆ ರೊಪ್ಪ ಹಾಕಿಕೊಂಡು ವಾಸ ಮಾಡಿಕೊಂಡಿದ್ದನು.

## ಕೆಂಗುರ ಮಲ್ಲ ದನ ಸಾಕಬೇಕೆಂದ

ಕಾಡುಗೊಲ್ಲರ ಹುಡುಗ ಕುಂಚಿಟಿಗರ ಮನೆಯಲ್ಲಿ ಬೆಳೆಯಿತು. ಏಳು ವರ್ಷ ಆಯಿತು. ಆಗ ಕೆಂಗರು ಮಲ್ಲೇಗೌಡ ಹೇಳಿದ 'ಅಪ್ಪ ನಾನು ದನ ಆಳಬೇಕು. ಬೆಳಿಗ್ಗೆ ಎದ್ದು ದನದ ಮುಖ ನೋಡಿದರೆ ಬದುಕು, ಇಲ್ಲದಿದ್ದರೆ ಸತ್ತ ಬದುಕು. ನಾವು ದನ ತರಲೇಬೇಕು' ಅಂತು. ಆಲೇಗೌಡರಿಗೆ ಗಾಬರಿ. ಬಡವರು, ದುಡ್ಡಿಲ್ಲ, ಕಾಸಿಲ್ಲ ಎಲ್ಲಿಂದ ದನ ತರೋದು ಅಂದರು. ಆದರೂ ಹುಡುಗ ಕೇಳಲಿಲ್ಲ. ಹುಡುಗನ ಮನಸ್ಸಿಗೆ ಬೇಸರ ಮಾಡಬಾರದು ಎಂದು ಯೋಚಿಸಿದ ಆಲೇಗೌಡರು 'ಎಲ್ಲಿಂದ ಹಣ ಒದಗಿಸಾದು? ಯಾರು ಸಾಲ ಕೊಟ್ಟಾರು?' ಎಂದು ಯೋಚನೆ ಮಾಡಿದರು. ಸಿರಾ ಪ್ಯಾಟೆಗೆ ಹೋಗಿ ಬಂಗಾರದ ಅಂಗಡಿ ಕ್ವಾಮಿಟಿಗಿ ಶೆಟ್ಟರ ಹತ್ರ, ನಾಲ್ಕು ವರಹ ಸಾಲ ಮಾಡಿಕೊಂಡು ಬಂದರು. 'ಸರಿ ಬಾರಪ್ಪ ಹಣ ತಂದೀನಿ, ನಿನಗೆ ಒಪ್ಪಿದ ದನ ತಂದುಕೋ' ಎಂದರು. ಕಳುವರಹಳ್ಳಿ ಆಲೇಗೌಡ, ಅವರು ಸಾಕುಮಗ ಕೆಂಗರುಮಲ್ಲೇಗೌಡ ಇಬ್ಬರೂ ದನ ಕೊಳ್ಳಾಕೆ ಹೋದರು. ಯಾವ ದನ ತೋರಿಸಿದರು ಮಲ್ಲೇಗೌಡ ಒಪ್ಪಲಿಲ್ಲ 'ನನಗೆ ಬ್ಯಾಡ' ಅಂತಾಲೇ ಹೇಳಿಬಿಟ್ಟ. ಕೊನೆಗೆ ಬಲವಂತ ಮಾಡಿದಾಗ 'ನನಗೆ ಅಂತಿಂತ ದನ ಬೇಡ, ನಮ್ಮಪ್ಪ ದೈಮಾರ ಅರಣ್ಯದಲ್ಲಿ ದನಗಳನ್ನು ಬಿಟ್ಟು ಬಂದಾಗ ನಮ್ಮ ದೊಡ್ಡಪ್ಪಗಳು ಆ ದನಗಳನ್ನು ಹೊಡಕೊಂಡು ಬಂದು ಆಳಿಕೊಂಡವರೆ. ಅವನ ತಂದ್ರೆ ನಮ್ಮ ಮನೆ ಉದ್ಧಾರ ಆಗುತ್ತೆ, ದನ ಹೆಚ್ಚಿಕೋತಾವೆ. ಬೇರೆ ದನ ಬೇಡವೇ ಬೇಡ' ಅಂತು. ಅದಕೂ ಆಲೇಗೌಡರು ಒಪ್ಪಿದರು. ಆದರೆ ಆ ದನ ತರುವುದು ಹೇಗೆಂದರು. ಆಗ ಮಲ್ಲೇಗೌಡ ಹೀಗೆ ಹೇಳಿದ 'ನಾನು ನೀನು ಇಬ್ಬರೂ ನಮ್ಮ ದೊಡ್ಡಪ್ಪಗಳ ಮನೆಗೆ ಹೋಗಾನ, ನೀನು ನನ್ನ ಹೆಸರಿಡಿದು ಕರೆಯಬಾರದು. ನಾನು ಮೂಗನ ತರ ವರ್ತಿಸುತ್ತೀನಿ. ನೀನೇನಾದರೂ ನನ್ನ ಹೆಸರಿಡಿದು ಕರೆದು ಗುರ್ತಿಸಿಕೊಟ್ಟರೆ ನಮ್ಮ ದೊಡ್ಡಪ್ಪಗಳು ನನ್ನ ಬಿಡಾದಿಲ್ಲ. ನಮ್ಮಪ್ಪಗೆ ನನಗೆ ಮೋಸ ಮಾಡಿದ್ದರಿಂದ ಅವರ ಮಕ್ಕಳೆಲ್ಲರೂ ಸತ್ತು ಹೋಗವರೆ. ಈಗ ನಾನೇನಾದರೂ ಸಿಕ್ಕಿರೆ ನಮ್ಮ ಮಗ ಅಂತ ಬಿಡಾದೇ ಇಲ್ಲ. ನೀವು ಈತನಕ ನನ್ನ ಸಾಕಿದ್ದು ವ್ಯರ್ಥವಾಗುತ್ತೆ' ಅಂದನು. 'ಮತ್ತೇನು ಮಾಡಲಿ ಮಗನೆ' ಅಂದನು ಆಲೇಗೌಡ. ಆಗ ಮಲ್ಲೇಗೌಡ ಒಂದು ಉಪಾಯ ಹೇಳಿದ. 'ನೀನು ನಮ್ಮ ದೊಡ್ಡಪ್ಪನ ಹುದಿಬಾಗಿಲಿಗೆ ಹೋಗು. ನಾನು

ಕಂಬಳಿ ಕೊಪ್ಪೆ ಹಾಕಿಕೊಂಡು ಗೊಲ್ಲ ಮೆಟ್ಟು ಹಾಕಿಕೊಂಡು, ಬ್ಯಾಟೆ ದೊಣ್ಣೆ ಹಿಡಕಂಡು ಮೂಗನ ತರ ಇರುತೀನಿ. ನಮ್ಮ ದೊಡ್ಡಪ್ಪನವರು ದುಡ್ಡಿಗೆ ಆಸೆ ಪಡುತಾರೆ. ಅವರು ಕೇಳಿದ ದುಡ್ಡು ಸುರುದು, ದನ ಹಿಡಿಯಲು ರೊಪ್ಪಕ್ಕೆ ಬಾ. ನನ್ನ ತೋರಿಸಿ ಈ ದನ ಇರಲೇನೋ ಮೂಗ ಅನ್ನು. ನಾನು ಬೇಕಾದರೆ ತಲೆ ಹಾಕುತೀನಿ, ಇಲ್ಲವಾದರೆ ತಲೆ ಅಳ್ಳಾಡಿಸುತ್ತೀನಿ. ಇದರಿಂದ ದನ ಪತ್ತೆ ಮಾಡಿ ಹಿಡುಕೊಂಡು ಬಂದರೆ, ನಮ್ಮಪ್ಪನ ದನ ಹೆಚ್ಚುತ್ತಾವೆ' ಅಂದನು.

'ಆಗಲಿ ನಡಿಯಪ್ಪ, ನಿನ್ನ ಇಚ್ಛೆಯಂತೆಯೇ ಆಗಲಿ. ನಿಮ್ಮ ದೊಡ್ಡಪ್ಪನೋರ ಊರು ತೋರು' ಅಂದರು ಹೊನ್ನಟ್ಟಿ ಆಲೇಗೌಡರು. ಆಗ ಕೆಂಗರು ಮಲ್ಲೇಗೌಡ ತನ್ನ ಸಾಕುತಂದೆ ಕರಕಂಡು ಸೀದ ಜರುಮಲೆ ಸೀಮೆಯ ಸಿತ್ತುರ ದೇವರ ಗೊಲ್ಲರಹಟ್ಟಿಗೆ ಬಂದರು. ಇದು ಕೆಂಗರು ಮಲ್ಲೇಗೌಡರ ಮೂಲಸ್ಥಾನ. ಬಂದವರೆ ಗೊಲ್ಲಗೌಡರಿಗೆ ನಮಸ್ಕರಿಸಿದರು. ಬಂದ ಕಾರಣ ಹೇಳಿ ಹಣಕ್ಕೆ ದನ ಕೊಡಬೇಕೆಂದು ಬೇಡಿಕೊಂಡರು. ಕಾಡುಗೊಲ್ಲರು ನಿಸ್ಸೀಮರು, ಮೋಸ ಮಾಡಬೇಕು. ಗಂಟು-ನಂಟು ಎರಡೂ ನಮಗೇ ಆಗಬೇಕೆಂದು ಬಯಸಿ ಒಂದು ಷರತ್ತು ಹಾಕಿದರು. 'ನಾನು ನೀನು ಹೇಳಿದಂತೆ ಏಳು ಕರ ಕೊಡಾಕೆ ಸಿದ್ದ. ಆದರೆ ಮೊದಲು ನೀವು ಇಲ್ಲಿ ಹಣ ಸುರಿದು, ನಂತರ ರೊಪ್ಪಕ್ಕೆ ಹೋಗಿ ನಿಮಗೆ ಇಷ್ಟಬಂದ ಗೋವುಗಳನ್ನು ಹಿಡಕಂಡು ಹೋಗಬಹುದು. ಬಿಟ್ಟುಹೋದರೆ ನಿಮ್ಮ ದುಡ್ಡು ವಾಪಸ್ ಕೊಡಲ್ಲಪ್ಪ' ಅಂದ್ರು. 'ನಮ್ಮ ದನಗಳು ಈ ಅಜ್ಜಿ, ಆ ಮೂಗ ಹುಡುಗನ್ನ ಹತ್ತಿರಕ್ಕೂ ಬಿಟ್ಟುಕೊಳ್ಳೋದಿಲ್ಲ. ಒದ್ದು ಓಡಿಸುತ್ತಾವೆ. ಗಂಟು-ನಂಟು ಎರಡೂ ನಮ್ಮದೇ ಆಗುತ್ತೆ' ಅಂಬೋದು ಇವರ ಮರ್ಮ. ಆಲೇಗೌಡರು 'ಆಗಲಿ ಗೌಡರೆ, ತಾವು ಹೇಳಿದಂತೆ ನಡೆದುಕೋತೀವಿ' ಅಂದುಬಿಟ್ಟು ಅವರ ಮುಂದೆ ಅವರು ತಂದಿದ್ದ ದುಡ್ಡನ್ನೆಲ್ಲಾ ಸುರಿದು, ಕರ ಹಿಡಿಯಲು ದನಿನ ರೊಪ್ಪಕ್ಕೆ ಹೋದರು. ಮೊದಲು ಮೊಣಕಗಳನ್ನು ತೋರಿಸಿದ. ಮೂಗ ತಲೆ ಅಳ್ಳಾಡಿಸಿದ. ಮುದಿ ಹಸು ತೋರಿಸಿದ, ಅವುನ್ನೂ ಬ್ಯಾಡ ಅಂದ. ಮುಂದೆ ಒಂದು ಮೂಲೆಲಿ ಏಳು ಮೊಣಕ ಬಡ ಕರುಗಳು ಕಾಲುಬಾಯಿ ರೋಗದಿಂದ ನರಳುತ್ತಾ ನೊದ್ದಲೆ ಸುರಿಸುತ್ತಾ ಮಲಗಿದ್ದವು. 'ಇದೇ ಕರುಗಳು ಬೇಕು' ಅಂತ ತಲೆಹಾಕಿದ ಹುಡುಗ. ಮಲ್ಲೇಗೌಡನ ಈ ಆಯ್ಕೆ ಅವುರಪ್ಪ ಆಲೇಗೌಡರಿಗೆ ಸರಿ ಕಾಣಲಿಲ್ಲ. ಆದರೂ ಮಾತಾಡಂಗಿಲ್ಲ. 'ಇಂಥ ರೋಗದ ಕರ ಬದುಕುತಾವ? ನಾವು ಕುಳವಂತರಾಗಬಹುದಾ? ಕೊಟ್ಟ ಸಾಲ ತೀರಿಸುತ್ತೀವಾ?' ಎಂದೆಲ್ಲಾ ಪ್ರಶ್ನೆಗಳು ಮೇಲಿಂದ ಮೇಲೆ ಎದ್ದರು. ಆದರೂ ಮಗನ ಮನಸ್ಸಿಗೆ ನೋವು ಆಗಬಾರದಲ್ಲ, ದನ ಹೊಡೆದುಕೊಂಡು ಕಳುವರ ಹಳ್ಳಿ ಬಯಲಿಗೆ ಬಂದರು.


## ಕಲ್ಯಾಣಿಗೆ ಕರ ಎಸೆದ ಮಲ್ಲೇಗೌಡ

ಚಿತ್ರದೇವರ ಹಟ್ಟಿಯಿಂದ ಏಳು ರೋಗದ ಕರುಗಳನ್ನು ಕಳುವಾರಹಳ್ಳಿ ಬಯಲಿಗೆ ತರಬೇಕಾದರೆ ಆಲೇಗೌಡರಿಗೆ ಸಾಕು ಸಾಕಾಗಿಹೋಯಿತು. ದಾರಿಲಿ ಕರು ಮಲಗಿ ಏಳಲಾರವು, ಕೆಳವತ್ತಿ ಬಿದ್ದವು. ಅವುಗಳನ್ನೆಲ್ಲಾ ಸುಧಾರಿಸಿಕೊಂಡು ತಂದೆ-ಮಗ ಬಂದರು. ಆಲೇಗೌಡರು ಒಂದು ಪ್ರಶ್ನೆ ಮಾಡಿರು 'ಮಗನೆ ಇಂಥ ಕರನೇನಪ್ಪ ನೀನು ಆರಿಸೋದು? ಇವು ಉಳಿತಾವ? ಹೆಚ್ಚಿಕಾತಾವ? ನೀವು ಕ್ವಾಮಟಿಗರಿಗೆ ಕೊಟ್ಟ ಸಾಲ ತೀರಿಸುದು ಉಂಟಾ?' ಎಂದನು. ತಂದೆ-ಮಗನಿಗೆ ಒಂದು ಸಣ್ಣ ಜಗಳವಾಯಿತು. ಆಗ ಕೆಂಗರು ಮಲ್ಲೇಗೌಡ ಕೋಪದಿಂದ 'ಇವು ಆಳು ಮನೆ ಆಸ್ತಿ. ನಮ್ಮಪ್ಪಗೆ ನಮ್ಮ ದೊಡ್ಡಪ್ಪಗಳು ಮೋಸ ಮಾಡಿದ್ದು ದನಗಳ ಆಸೆಯಿಂದಲೇ. ಅದರಿಂದ ನಮ್ಮ ಅಪ್ಪ ಯಂಗೆ ಸತ್ತೋದನೋ ಅಂಗೇನೇ ಈ ದನಗಳೂ ಸಾಯಲಿ' ಅಂದು ಆ ಏಳು ಕರು ಇದ್ದವಲ್ಲ ಅವುಗಳನ್ನು ಎತ್ತಿ ಕಲ್ಯಾಣಿಗೆ ಬಿಸಾಕಿಬಿಟ್ಟ! ತಂದೆ ಮನೆ ದನ ಕಲ್ಯಾಣಿ ತಳ ಸೇರಿಬಿಟ್ವೋ. ಆಲೇಗೌಡರಿಗೆ ಕೋಪ, ದುಃಖ ಎರಡೂ ಆಯಿತು. ಆ ವೇಳ್ಯಕ್ಕೆ ಅಲ್ಲಿಗೆ ದೊಡ್ಡಕ್ಕಜ್ಜಿನೂ ಬಂತು. ಆ ಅಜ್ಜಿ ಮಗನಿಗೆ ಸಪೋರ್ಟ್ ಮಾಡಿ ತಂದೆನೂ ಮಗನೂ ಕರೆದುಕೊಂಡು ಬಂತು.

ಹಿಂಗೆನೆ ಒಂದೆರಡು ದಿನ ಕಳೆದವು. ಕೆಂಗರು ಮಲ್ಲೇಗೌಡ ಮತ್ತೆ ಅದೇ ರಾಗ ತೆಗೆದ 'ನಾನು ದನ ಆಳಬೇಕು, ನನಗೆ ದನ ಬೇಕು' ಅಂಬ್ತಾ. ಆಗ ಆಲೇಗೌಡ ತಿರುಗಾ ಕ್ವಾಮಿಟಿಗ ಸೆಟ್ಟಿ ಹತ್ರ ಮತ್ತೆ ನಾಲ್ಕು ವರಹ ಸಾಲ ತಂದು, ಮಗನ್ನ ಕರೆಕೊಂಡು ಮತ್ತೆ ಅದೇ ಚಿತ್ರದೇವರ ಹಟ್ಟಿಗೆ ಹೋಗಿ ಏಳು ಬಡಕರ ತಂದರು. ಅದೇ ಹಣೆಬರಹ. ಕಳುವಾರ ಹಳ್ಳಿ ಕಲ್ಯಾಣಿ ಬಳಿಗೆ ಬಂದು 'ನಮ್ಮನೆ ಆಸ್ತಿ ನುಂಗಿದವರ ಸ್ವತ್ತು ನನಗೆ ಬ್ಯಾಡ' ಅಂದು ಬಿಟ್ಟು ಏಳು ಕರುಗಳನ್ನು ಎತ್ತಿ ಕಲ್ಯಾಣಿ ಒಳಗೆ ಎಸೆದುಬಿಟ್ಟ. ಪಾಪ ಮೊದಲು ಏಳು ಕರುಗಳು, ಈಗ ಏಳು ಹೀಗೆ ಹದಿನಾಲ್ಕು ಕರುಗಳು ಕಳುವಾರಹಳ್ಳಿ ಕಲ್ಯಾಣಿ ಒಳಗೆ ಸೇರಿಕೊಂಡುಬಿಟ್ಟವು.

ಹೊನ್ನಟ್ಟಿ ಆಲೇಗೌಡರಿಗೆ ತುಂಬಾನೇ ಬೇಸರ ಆತು. ಮಗನಿಗೆ ಅನ್ನಂಗಿಲ್ಲ, ಬಿಡಂಗಿಲ್ಲ.

ಮಾಡಿದ ಸಾಲ ಏರುತಾ ಇದೆ, ಏನಪ್ಪಾ ಮಾಡಾದು ಅಂಬ್ತಾ ಯೋಚ್ನೆ ಮಾಡಿಕೊಂಡು ಮೂರು ತಿಂಗಳು ಮಕಾಡೆ ಮಲಗಿದವನು ಮೇಲೇಳಲಿಲ್ಲ. ಅನ್ನಾಹಾರ ಮುಟ್ಟಲಿಲ್ಲ. ಆಗ ಕೆಂಗರು ಮಲ್ಲೇಗೌಡ ತಂದೆಯನ್ನು ನಾನಾ ವಿಧವಾಗಿ ಸಮಾಧಾನಪಡಿಸಿದನು. ಆವಜ್ಜನದ್ದು ಒಂದೇ ಚಿಂತೆ, ನಾವು ಸಾಲಗಾರರಾದೆವು ಅಂಬ್ತಾ. ಆಗ ಕೆಂಗರು ಮಲ್ಲೇಗೌಡ ನಗುತಾ ಅವುರ ಅಪ್ಪನ ಕೈ ಹಿಡಕೊಂಡು ಕಳುವಾರಹಳ್ಳಿ ದಿಣ್ಣೆಗೆ ಕರಕೊಂಡು ಬಂದು, ಒಂದು ಗಣೆ ಕೈಗೆತ್ತಿಕೊಂಡು ಹಿಂದೆ ಕಲ್ಯಾಣಿಗೆ ಎಸೆದಿದ್ದನಲ್ಲ ಆ ಹದಿನಾಲ್ಕು ಬಡ ಕರ ಅವುಗಳನ್ನು ಕರೆದ. ಸ್ವಾಮಿ ಪವಾಡ, ಆ ಹದಿನಾಲ್ಕು ರೋಗದ ಕರುಗಳು ಒಳ್ಳೆ ಆನೆಗಳ ತರಹ ಆಗಿಬಿಟ್ಟಾವೆ. ಆ ದನಗಳು ಬಂದು ಈ ಹುಡುಗನ ತವ ನಿಂತುಕೊಂಡವು. ಆಲೇಗೌಡರಿಗೆ ಗಾಬರಿ ಆತು, ಸಂತೋಸನೂ ಆತು.



## ಸಂಜೆ ಮನೆ ನಿದ್ದೆ ರಾತ್ರಿ ಗೂಡಿನ ನಿದ್ದೆ

ಕೆಂಗರು ಮಲ್ಲೇಗೌಡ ಮೊದಲು ಪವಾಡ ಮಾಡಿ ಹದಿನಾಲ್ಕು ದನ ತಂದ ಕಲ್ಯಾಣಿಯಿಂದ. ಆಗ ಹೇಳುತಾನೆ ಆಲೇಗೌಡರಿಗೆ 'ಅಪ್ಪ ನಾನಿನ್ನು ಊರಿನೊಳಕೆ ಬರಾದಿಲ್ಲ. ಊರಿಂದ ಹೊರಗೆ ಕಳ್ಳೆ ಬೇಲಿ ಹಾಕಿಕೊಂಡು ಏಳು ರೊಪ್ಪ ಹಾಕಿ ದನಗಳನ್ನು ಕಾಯಬೇಕು' ಅನ್ನುತ್ತಾನೆ. ಅದಕ್ಕೆ ಆಲೇಗೌಡರು 'ಮಗನೆ ನೀನು ನಮ್ಮ ಮನೆ ದೇವರು. ದನ ಮುಖ್ಯವಲ್ಲ, ನಿನ್ನ ಬಿಟ್ಟು ಹೆಂಗಪ್ಪ ನಾವು ಮನೆಗೆ ಇರಾದು? ಹಗಲೆಲ್ಲಾ ದನ ಮೇಯಿಸಿ, ರೊಪ್ಪಕ್ಕೆ ಕೂಡಿ, ರಾತ್ರಿಗೆ ಬಂದು ಮನೆಯಲ್ಲಿ ಮಲಗು ಕಂದ' ಅಂದ್ರು. ಅದಕ್ಕೆ ಕೆಂಗರು ಮಲ್ಲೇಗೌಡ ಬಿಲ್‌ಕುಲ್ ಒಪ್ಪಲಿಲ್ಲ. ತಾಯಿ ದೊಡ್ಡಮ್ಮನು ಬಂದು ಬೇಡಿಕೊಂತು. ಆಗ ಮಗ ಒಂದು ತೀರ್ಮಾನಕ್ಕೆ ಬಂದ. ಸಂಜೆಗೆ ಮನೆಗೆ ಬಂದು ತಿರುಗಿ ಗೂಡಿಗೆ ಹೋಗುತೀನಿ ಅದ. ತಾಯಿ ನನ್ನ ಮಗ್ಗಲಲ್ಲಿ ಮಲಗು ಕಂದ ಅಂತಾ ಬೇಡಿಕೊಂತು. ಮಲ್ಲೇಗೌಡನಿಗೆ ತುಂಬಾ ಯೋಚನೆ ಆಯಿತು. ಏನು ಮಾಡಾದು ಅಂತ. ಆಯಿತು ಅಂದು ಬಿಟ್ಟು ತಾಯಿ ಊರಿಗೆ ಕಳುಹಿಸಿದ. ಕಳುವರಹಳ್ಳಿ ಬಯಲಾಗೆ ಕಾರೆ ಕಡಿದ, ಜಾಲಿ ಕಡಿದ, ಬೇಲ ಕಡಿದು ಏಳು ಗೂಡು ತಿರುವಿದ. ದನಗಳನ್ನು ಅದಕ್ಕೆ ಕೂಡಿದ. ಸಂಜೆಗೆ ಮನೆಗೆ ಬಂದ, ಊಟದ ಶಾಸ್ತ್ರ ಮಾಡಿದ. ತಂದೆ-ತಾಯಿ ಜೊತೆ ಮಲಗನಂಗೆ ನಾಟಕ ಆಡಿದ. ಎದ್ದು ನೆಟ್ಟಗೆ ದನಿನ ರೊಪ್ಪಕ್ಕೆ ಹೋಗಿಬಿಡಾನು. ಏನು ಮಾಡಿರೂ ಇರುತ್ತಿರಲಿಲ್ಲ. ಕಾಡು, ಹುಲಿ, ಕರಡಿ, ಚಿರತೆ ಪ್ರಾಣಿ ಪಾಲಾಗುತಾನೆ ಮಗ ಅಂಬ್ತಾ ರಾತ್ರಾನುರಾತ್ರಿಗೆ ಅಜ್ಜ-ಅಜ್ಜಿ ಸುಡಿಗೆ ಹತ್ತಿಸಿಕೊಂಡು ದನಿನ ರೊಪ್ಪದ ಬಳಿಗೆ ಬಂದರು. ಮಗ ಬಂದು ಮಲಗಿದ್ದಾನೆ. ಆಗ ಪರಿಪರಿಯಾಗಿ ಪ್ರಾರ್ಥಿಸಿಕೊಂಡು ಎಬ್ಬರಿಸಿಕೊಂಡು ಊರಿಗೆ ಕರೆದುಕೊಂಡು ಬಂದ್ರು.

ಹಿಂಗೆ ಹಲವಾರು ದಿನ ನಡೆಯಿತು. ಮಗ ಮಲಗಿದವನ ಹಾಗೆ ಮಲಗಿ, ಆಲೇಗೌಡ-ದೊಡ್ಡಕ್ಕ ಮಲಗಿದ ಕೂಡಲೇ ಎದ್ದು ಬಯಲಿನ ದನಗಳ ರೊಪ್ಪಕ್ಕೆ ಹೋಗಿ ಮಲಗಿಕೊಂಡು ಬಿಡುತ್ತಿದ್ದನು. ತಂದೆ-ತಾಯಿ ಏನು ಮಾಡಿದರೂ ಬಿಡಲಿಲ್ಲ. ಹೀಗೆ ಒಂದಿಷ್ಟು ದಿನ

ಕಳೆಯಿತು. ಒಂದು ದಿನ ಕೆಂಗರು ಮಲ್ಲೇಗೌಡ ಯೋಚನೆ ಮಾಡಿದ. ನಾನು ಇಲ್ಲಿದ್ರೆ ನಮ್ಮಪ್ಪ ಅಮ್ಮ ನನ್ನ ಮೇಲಿನ ಪ್ರೀತಿಯಿಂದ ಆಚೆಗೆ ಬಿಡಾದಿಲ್ಲ. ನಾನು ಅವುರ ಕಣ್ಣಿದಿರು ಇರುವುದೇ ಬ್ಯಾಡ ಅಂಬ್ತಾ ತೀರ್ಮಾನಕ್ಕೆ ಬಂದುಬಿಟ್ಟ.



# ತಳುಕಿನ ಗುಡ್ಡದ ಬಯಲಲ್ಲಿ ದನದ ಗೂಡು

ತಂದೆ-ತಾಯಿಯರಿಂದ ತಪ್ಪಿಸಿಕೊಂಡು ಕೆಂಗರು ಮಲ್ಲೇಗೌಡ ವೇಣುಕಲ್ಲು ಗುಡ್ಡದ ಬಳಿ ತಳುಕು ಅಂಥ ಊರಿನ ಸಮೀಪಕ್ಕೆ ದನ ಹೊಡೆದುಕೊಂಡು ಬಂದನು. ತಳುಕಿನ ಗುಡ್ಡದ ಬಳಿ ಕುರುಬರ ಬೀರಪ್ಪನ ಹೊಲದಲ್ಲಿ ಏಳು ರೊಪ್ಪ ಹಾಕಿ, ದನ ಕೂಡಿ, ಕಳ್ಳಿ ಬೇಲಿ ಹಾಕಿಕೊಂಡು ಅದರಾಗೊಂದು ಮಂಚಿಗೆ ಹಾಕಿಕೊಂಡು ವಾಸ ಮಾಡತೊಡಗಿದ.

ಮಗ ದನಗಳೊಂದಿಗೆ ಊರು ಬಿಟ್ಟು ಹೋಗಿರದು ಹೊತ್ತಾರೆ ನೋಡಿದ ಆಲೇಗೌಡ, ಗಾಬರಿಯಾದ. ಸುತ್ತಮುತ್ತ ಹುಡುಕಿಸಿದ. ದೊಡ್ಡಕ್ಕನೂ ಅತ್ತು ಕರೆದು ಗೋಳಾಡಿದರು. ಇವರ ದುಕ್ಕ ತಳುಕಿನ ಗುಡ್ಡದಲ್ಲಿರುವ ಕೆಂಗರು ಮಲ್ಲೇಗೌಡನಿಗೆ ತಿಳಿಯಿತು. ಏನು ಮಾಡುವುದೆಂದು ಯೋಚಿಸಿದ. ನನ್ನ ತಬ್ಬಲಿ ಅನ್ನದೆಲೆ ಹೆತ್ತ ಮಗನಿಗಿಂತಲೂ ಚೆನ್ನಾಗಿ ಸಾಕಿಕೊಂಡವರೆ. ಅಂಥವರಿಗೆ ನಾನು ವ್ಯಥೆ ತಂದುಬಿಟ್ಟೆನಲ್ಲ ಶಂಕರ ಎಂದು ಯೋಚನೆ ಮಾಡತೊಡಗಿದ. ಏನಾದರೂ ಮಾಡಿ ನಮ್ಮಪ್ಪ ಅಮ್ಮಗೆ ಮಕ್ಕಳ ಫಲವಾದರೆ ಹುಟ್ಟಿದ ಮಕ್ಕಳ ನೋಡಿಕೊಂಡು ನಾನು ದೂರಾದ ದುಃಖ ಮರೀತಾರೆ ಅಂತ ಪ್ಲಾನು ಮಾಡಿದನು.



# ದೊಡ್ಡಕ್ಕಜ್ಜಿ ಹಡೆದಳು ನಾಲ್ಕು ಮಕ್ಕಳನ್ನ

ಕೆಂಗರು ಮಲ್ಲೇಗೌಡ ತಳುಕಿನ ಗುಡ್ಡದ ಬುಡದಲ್ಲಿ ವಾಸ ಮಾಡುತ್ತಿದ್ದ. ಅಲ್ಲೇ ಬೀರಣ್ಣನ ಹೊಲ. ಅಲ್ಲೊಂದು ಮೂಗುತ್ತ ಇತ್ತು. ಅದರ ಬುಡದಲ್ಲಿ ಕುಂತು ಮಲ್ಲೇಗೌಡ ತಪಸ್ಸು ಮಾಡಿದ. ಏಳು ದಿನ ತಪಸ್ಸು ಮಾಡಿದಾಗ ಪರಮೇಶ್ವರ ಪ್ರತ್ಯಕ್ಷನಾದ. 'ಏನು ವರ ಬೇಕಪ್ಪ ಬಾಲಕ? ಅನ್ನ ನೀರು ಬಿಟ್ಟು ಯಾಕಿಂಗೆ ತಪಸ್ಸಿಗೆ ಕುಂತೆ?' ಅಂತಾ ಕೇಳಿದರು. ಆಗ ಕೆಂಗರು ಮಲ್ಲೇಗೌಡ ಪರಮೇಶ್ವರನನ್ನು ಕುರಿತು ಹೀಗೆ ಕೇಳಿಕೊಂಡ 'ಸ್ವಾಮಿ ನಾನು ಗೊಲ್ಲರ ಹುಡುಗ. ನಮ್ಮಪ್ಪನಿಗೆ ನಮ್ಮ ದೊಡ್ಡಪ್ಪ ಮೋಸಮಾಡಿದರು. ನನ್ನನ್ನೂ ಕಾಡಿಗೆ ಹಾಕಿದರು. ಅಂಥ ತಬ್ಬಲಿಯಾದ ನನ್ನನ್ನು ಕುಂಚಿಟಿಗರು ಜಾತಿಯ ಆಲೇಗೌಡ, ಅವುನ ಹೆಂಡ್ತಿ ದೊಡ್ಡಕ್ಕ ಸ್ವತಃ ಮಗನೇ ಅನ್ನುವ ಹಾಗೆ ಸಾಕಿದರು. ಅವರಿಗೆ ನನ್ನ ಮೇಲೆ ಪ್ರೀತಿ, ನನಗೆ ದನಿನ ಮೇಲೆ ಪ್ರೇಮ. ಹಿಂಗಾಗಿ ಅವುರನ್ನು ಬಿಟ್ಟು ದನ ಹೊಡೆದುಕೊಂಡು ಕಾಡಿಗೆ ಬಂದುಬಿಟ್ಟೆ. ನನ್ನ ಅಪ್ಪ-ಅಮ್ಮ ನನ್ನ ಅಗಲುವಿಕೆಯಿಂದ ದುಕ್ಕಾನೆ ಮಾಡುತ್ತಾರೆ. ಅನ್ನ ನೀರು ಬಿಟ್ಟಾರೆ. ನನ್ನ ಧ್ಯಾನದಲ್ಲೇ ಸತ್ತರೂ ಸಾಯಬಹುದು. ಹಾಗೆ ಆಗಬಾರದು. ಈಗ ಅವರಿಗೆ ವಂಶ ಬೆಳೆಯಬೇಕು. ಬಂಜೆ ಅಂಬಾ ಶಬ್ದ ಹೋಗಬೇಕು. ಕೈಲಾಡೋ, ಮನೆಲಾಡ ಮಕ್ಕಳು ಬಂದ್ರೆ ನನ್ನ ಅಂಬಲ ಮರೆತಾರೆ ನಮ್ಮಮ್ಮ ಅಪ್ಪಗಳು. ಆದುದರಿಂದ ಮಕ್ಕಳ ಫಲ ಕೊಡು ತಂದೆ' ಎಂದು ಬೇಡಿಕೊಂಡ.

ಕೆಂಗರು ಮಲ್ಲೇಗೌಡನ ಪ್ರಾರ್ಥನೆಗೆ ಶಿವನ ಮನಸ್ಸು ಕರಗಿತು. ಆಲೇಗೌಡನ ವಂಶ ಬೆಳೆಸಬೇಕೆಂದು ಶಿವ ತೀರ್ಮಾನ ಮಾಡಿದ. ಅದರಂತೆ ಜಾನಕಲ್ಲು ದೊಡ್ಡಕ್ಕ ಗರ್ಭ ಧರಿಸಿದಳು. ಬಿಮ್ಮನಿಸಿ ಸುದ್ದಿ ಊರಿಗೆಲ್ಲ ತಮಾಸೆಯಾಯಿತು. ಅಜ್ಜಿ ಬಸಿರಾದಳು ಅಂಬ್ತಾ ನಗಾಡಿರು. ನೂರ ವರ್ಷದ ಮೇಲೆ ಮೂರು ವರ್ಷ ಆಲೇಗೌಡನಿಗೆ ನೂರು ವರ್ಷದ ಮೇಲೆ ಒಂದು ವರ್ಷ ದೊಡ್ಡಕ್ಕಜ್ಜಿಗೆ. ಹಲ್ಲು ಬಿದ್ದಾವೆ, ತಲೆ ಬೆಳ್ಳಗಾಗಿದೆ, ಕೈ ನಡುಗುತ್ತೆ. ಇಂಥ ಅಜ್ಜಿ ಹಡೆಯುವುದಾದರೂ ಹೆಂಗೆ ಅಂತಾ ಜನಾದಿ ಜನವೆಲ್ಲಾ ಸೋಜಿಗಪಟ್ಟರು. ದೇವರು ದೊಡ್ಡನನು. ಭಗವಂತನ ವರದಂತೆ ದೊಡ್ಡಕ್ಕಜ್ಜಿ ಒಂದರಿಂದ

ಒಂದರಂತೆ ನಾಲ್ಕು ಮಕ್ಕಳನ್ನು ಹೆತ್ತಳು. ಇದರಲ್ಲಿ ಎರಡು ಗಂಡು-ಎರಡು ಹೆಣ್ಣು ಹುಟ್ಟಿದ ಮಕ್ಕಳಿಗೆ ಆಲೇಗೌಡರು, ದೊಡ್ಡಾಲ, ಚಿಕ್ಕಾಲ, ದೊಡ್ಡಾಲಮ್ಮ ಚಿಕ್ಕಾಲಮ್ಮ ಎಂದು ಹೆಸರಿಟ್ಟರು.

ಆದರೂ ಹೊನ್ನಟ್ಟಿ ಆಲೇಗೌಡರಿಗೆ ಹಿರೇಮಗ ಕೆಂಗರು ಮಲ್ಲೇಗೌಡನ ಪ್ರೀತಿ, ನೋಡಬೇಕೆಂಬ ಕಾತುರ ಹೆಚ್ಚಾಯಿತು. ಮಗನ ಹುಡುಕಿ ಮನೆಗೆ ಕರಕೊಂಡು ಬಂದು ತಮ್ಮ, ತಂಗಿರ ಜೊತೆ ಬಾಳುವೆ ಮಾಡಿಸಬೇಕೆಂದು ಈ ಅಜ್ಜಿ ಯೋಚನೆ ಮಾಡಿತು. ಮಗನ ಹುಡುಕಲು ಜನ ಬಿಟ್ಟರು.



## ದೊಡ್ಡಾಲನಿಗೆ ಮದುವೆ ಬಯಕೆ

ಬಂಜೆಯಾಗಿದ್ದ ಹೊನ್ನಟ್ಟಿ ಆಲೇಗೌಡರಿಗೆ ದಿನ ಕಳೆದ ಮೇಲೆ ಮಕ್ಕಳಾದವು. ಅವರಲ್ಲಿ ಇಬ್ಬರು ಗಂಡುಮಕ್ಕಳು. ಬೆಳೆದು ದೊಡ್ಡವರಾದರು. ಆಮೇಲೆ ಅವರ ಅಪ್ಪ ಆಲೇಗೌಡರು ಯಾವಾಗಲು 'ನನ್ನ ಹಿರೇಮಗ ಕೆಂಗರು ಮಲ್ಲೇಗೌಡ, ಮಲ್ಲೇಗೌಡ' ಅಂತ ಜಪ ಮಾಡಿಕೊಂಡು ಆ ಹುಡುಗನ ಯೋಚನೆಯಲ್ಲಿಯೇ ಉಳಿದುಬಿಟ್ರು. ಮನೆ ಮಕ್ಕಳ ಬಗೆಗೆ ಯೋಚನೆಯೇ ಇಲ್ಲ. ಹೀಂಗೇ ಆಗಿಬಿಟ್ರೆ ನಮ್ಮಪ್ಪ ನಮಗೆ ಮದುವೆನೂ ಮಾಡಲ್ಲ, ಮನೆನೂ ಮಾಡಲ್ಲ. ನಮ್ಮನ್ನು ನೀನು ಮಕ್ಕಳು ತರ ನೋಡೋದೇ ಇಲ್ಲ ಅಂತ ತಕರಾರು ತೆಗೆದರು. ಆಲೇಗೌಡ-ದೊಡ್ಡಜ್ಜಿಗೆ ಸಂಕಟವಾಯಿತು. ಏನು ಮಾಡಾದು. ಹಿರೇಮಗ ಕೆಂಗರು ಮಲ್ಲೇಗೌಡ, ಅವುನ ಬಿಟ್ಟು ಅವನ ತಮ್ಮಂದಿರು ಮದುವೆಯಾಗಬೇಕೆಂದು ಕೇಳುತಾರೆ. ಇದೇನು ಸೋಜಿಗ? ಏನಪ್ಪ ಮಾಡಾದು ಅಂತ ಚಿಂತಾಕ್ರಾಂತರಾದರು. ಕೊನೆಗೂ ಹಿರಿಯ ಮಗನಿಗೆ ಮದುವೆ ಮಾಡದೆ ಕಿರಿಯರಿಗೆ ಮದುವೆ ಮಾಡಬಾರದು ಎಂಬ ನಿರ್ಧಾರ ಮಾಡಿದರು. ಹಾಗಂತ ಸುಮ್ಮೆ ಇರುವಂತೆಯೂ ಇಲ್ಲ. ಮೊದಲು ನಮ್ಮಿಂದ ದೂರವಾಗಿರುವ ಹಿರಿಯ ಮಗ ಕೆಂಗರು ಮಲ್ಲೇಗೌಡನನ್ನು ಹುಡುಕಿ ಕರೆತಂದು ಮದುವೆ ಮಾಡಬೇಕೆಂದು ಆಲೇಗೌಡರು ತೀರ್ಮಾನಿಸಿದರು.

ಅತ್ತ ಶರಣೆಂದು ಇತ್ತಲು ಶರಣೆಂದು
ಸುತ್ತಲ ದೇವರಿಗೆ ಶರಣೆಂದು । ಕಲ್ಲನಕುಂಟೆ
ಚಿತ್ತಣ್ಣಗೊಂದು ಶರಣೆಂದು

# ಮಲ್ಲೇಗೌಡನ ಸುಳಿವು ನೀಡಿದ ಮಾರಕ್ಕ

ಆಲೇಗೌಡರು ಮಕ್ಕಳ ಮದುವೆ ಬಗ್ಗೆ ಯೋಚನೆ ಮಾಡಿದರು. ಊರರೆಲ್ಲಾ ಯಾವಾಗ ಮಕ್ಕಳ ಮದುವೆ ಅಂಬ್ತಾ ಕೇಳುತಾರೆ. ಹಿರೇಮಗ ಎಲ್ಲೇ ಆದಾನೋ, ಶಿವಬಲ್ಲ, ಅವುನ ಬಿಟ್ಟು ಯಂಗಪ್ಪ ಚಿಕ್ಕಮಕ್ಕಳ ಮದುವೆ ಮಾಡಾದು ಅಂದು ಯೋಚನೆ ಮಾಡ್ತಾ ಮಲಗಿದ್ದಾಗ ಗೌರಸಂದ್ರದ ಮಾರಮ್ಮ ಕನಸಿನಾಗೆ ಬಂದು ಹೀಗೆ ಹೇಳಿದಳು 'ನಿನ್ನ ಹಿರೇಮಗ ಚೆನ್ನಾಗಿ ಅವುನೆ. ಏಳುಗೂಡಿನೇ ದನಗಳೊಂದಿಗೆ ಅದಾನೆ. ಅವನ ಸುಳಿವು ತೋರುತೀನಿ. ಹುಡುಕಾಕೆ ನಿನ್ನ ಮಕ್ಕಳ ಕಳಿಸು' ಅಂದಹಾಗೆ ಆಯಿತು. ಗೌಡ ಎದ್ದು ಕೂತ. ತಾಯಿ ಹೇಳಿದ ಮಾತು ಹುಸಿ ಇಲ್ಲ ಅಂದು ಎದ್ದು ಕೈಮುಗಿದು, ನಾಳೆಯಿಂದಲೇ ಆ ಕೆಲಸ ಮಾಡಬೇಕೆಂದು ತೀರ್ಮಾನಿಸಿದನು. ಅದರಂತೆ ಇಬ್ಬರು ಮಕ್ಕಳು ಚಿಕ್ಕಾಲಪ್ಪ, ದೊಡ್ಡಾಲಪ್ಪಗಳನ್ನು ಕರೆದು ನಿಮ್ಮ ಅಣ್ಣ ಬಡಗಲು ದೇಶದ ದಿಣ್ಣೆಗೆ ಗೌರಸಂದ್ರದ ಮೂಡ್ಲಗೆ ಅದಾನೆ. ಹೋಗಿ ಕರಕೊಂಡು ಬರಪ್ಪ. ಅವನಿಗೂ ಮದುವೆ ಮಾಡಿ, ನಿಮಗೂ ಮದುವೆ ಮಾಡುತೀನಿ ಅಂದನು.

ಹೊತ್ತಾರೆ ಎದ್ದು ಬುತ್ತಿ ಕಟ್ಟಿಕೊಂಡು ಚಿಕ್ಕಾಲ, ದೊಡ್ಡಾಲ ಗೌರಸಂದ್ರದ ಕಡೆ ಮುಖವಾಗಿ ಅಣ್ಣನ ಹುಡುಕಿಕೊಂಡು ಹೊರಟರು. ಹೋಗುತಾ ಹೋಗುತಾ ದೂರ ಹೋದರು. ಎಲ್ಲಿಯೂ ಸುಳಿವು ಕಾಣಲಿಲ್ಲ. ಅಷ್ಟೊತ್ತಿಗೆ ಗೌರಸಂದ್ರದ ಮಾರಕ್ಕ ಒಂದು ಹುಡುಗಿ ರೂಪ ತಾಳಿದಳು. ಈ ಹುಡುಗರ ಮುಂದೆ ಸುಳಿದಾಡಿದಳು. ಈ ಹುಡುಗರು ಅವುಳನ್ನ ಮಾತಾಡಿಸಲಿಲ್ಲ. ಆಗ ಆ ಹುಡುಗಿನೇ ಮಾತಾಡಿಸಿತು. 'ಯಾವೂರು ಅಣ್ಣಯ್ಯ? ಎಲ್ಲಿಗೆ ಹೋಗುತೀರ?' ಅಂತ ಕೇಳಿತು. 'ಹೋಗಮ್ಮ ನಮ್ಮ ಸಂಕಟ ನಮ್ಮದು. ಹುಡುಗಿಗ್ಯಾಕೆ ದಾರಿ ಸಂಕಟ' ಅಂದು ಮುಂದುವರಿದರು. ಹಿಂದಕೆ ನೋಡುತಾರೆ ಆ ಹುಡುಗಿ ಮಹಾರಾಣಿ ತರ, ದೇವತೆ ತರ ಆಗಿಬಿಟ್ಲು. ಈ ಹುಡುಗರಿಗೆ ಭಯವಾಗಿ ಇದೇನೋ ದೆವ್ವ, ಗಾಳಿ. ನಮ್ಮನ್ನು ತಿನ್ನಾಕೆ ಬಂದಿದೆ ಅಂತ ಓಡೋಕೆ ಸುರು ಮಾಡಿದರು. ಆಗ ಆ ಹೆಣ್ಣು ಹೇಳಿತು 'ಓಡಬೇಡಪ್ಪ, ನಾನು ನಿಮ್ಮ ಅಣ್ಣ ಇರುವ ಜಾಗ ತೋರಕೆ ಬಂದಿರೋವಳು.

ಬನ್ನಿ' ಅಂದು ದಮನಿಪುರ ಕಾಡಿಗೆ ಬಂದು, ಅಲ್ಲಿಂದ ವೇಣುಕಲ್ಲು ಗುಡ್ಡ ದಾಟಿ, ಕರಮರಹಳ್ಳಿ ಹಾದು ತಳುಕಿನ ಗುಡ್ಡದ ಕಡೆ ನಡೆದಳು. ಅಲ್ಲೊಂದು ಸಣ್ಣ ಬಯಲು. ಅದು ಕುರುಬರ ಬೀರಣ್ಣನ ಹೊಲ. ಅಲ್ಲೇ ಏಳು ದನಗಳ ಗೂಡು ಕಾಣ್ತು. 'ಅದೇ ನಿಮ್ಮಣ್ಣ ಕೆಂಗರು ಮಲ್ಲೇಗೌಡನ ತಳಮನೆ' ಅಂದು ಮಾರಕ್ಕ ಮಾಯವಾಗಿಬಿಟ್ಲು.



# ಅಣ್ಣನ ಪಾದ ಹಿಡಿದ ತಮ್ಮಗಳು

ಗೌರಸಂದ್ರದ ಮಾರಕ್ಕ ಈ ಹುಡುಗರಿಗೆ ಅವರ ಅಣ್ಣ ಇರೋ ತಾವ ತೋರಿಸಿದಳು. ಚಿತ್ತಾಲ, ದೊಡ್ಡಾಲ ಓಡೋಡಿ ಬಂದು ಅವುರ ಅಣ್ಣ ಕೆಂಗರು ಮಲ್ಲೇಗೌಡನ ಪಾದ ಹಿಡಕೊಂಡುಬಿಟ್ರು. ಇವರು ಯಾರೆಂದು ತಿಳಿದ ಮಲ್ಲೇಗೌಡ ತಬ್ಬಿಕೊಂಡು ಅತ್ತ. ನನ್ನ ಹುಡುಕಿಕೊಂಡು ಬಂದುದ ಹೆಂಗೆಂದು ವಿಚಾರಿಸಿಕೊಂಡ. ತಂದೆ-ತಾಯಿನೂ ಕೇಳಿದ. ಬಂದ ಸಂಗತಿ ತಿಳಕೊಂಡ. 'ನಾನು ಊರಿಗೆ ಬರುವುದಿಲ್ಲ, ನನಗೆ ಮದುವೆನೂ ಬ್ಯಾಡ. ನೀವು ಲಗ್ನವಾಗಿ ಸುಖವಾಗಿ ಅಪ್ಪನೂ ಅಮ್ಮನೂ ನೋಡಿಕೊಳ್ರಪ್ಪ' ಎಂದನು. ಆದರೆ ಈ ಹುಡುಗರು ಕೇಳಲಿಲ್ಲ. ನಮ್ಮ ತಂದೆ-ತಾಯಿಗೆ ವಂಶವೇ ಇರಲಿಲ್ಲ. ನಿನ್ನ ಕೃಪೆಯಿಂದ ನಾವೆಲ್ಲ ಹುಟ್ಟಿದೆವು. ಈಗ ಹಿರಿಯಾನು ನೀನು ಇರುವಾಗ ನಾವು ಲಗ್ನವಾಗೋದು ತರವಲ್ಲ. ನೀನು ಬರಲೇಬೇಕಣ್ಣ ಅಂದು, ನೀನು ಬರಲ್ಲ ಅಂದರೆ ನಾವೂ ನಿನ್ನ ಜೊತೆಗೆ ದನ ಮೇಯಿಸಿಕೊಂಡು ಇಲ್ಲೇ ಇರುತೀವಿ ಅಂದ್ರು.

ಆಗ ಕೆಂಗರು ಮಲ್ಲೇಗೌಡ 'ಅಂಗಲ್ಲ ತಮ್ಮಗಳ, ನಾನು ನಿಮ್ಮಪ್ಪನ ಸಾಕುಮಗ. ನಾನು ಗೊಲ್ಲರ ಜಾತಿಯವನು. ಈ ಕುಂಚಿಟಿಗರಿಗೆ ಗೊಲ್ಲರು ಹೆಣ್ಣು ಕೊಡಲ್ಲ. ಅದೆಲ್ಲಾ ಆಗದ ಕೆಲಸ. ಬ್ಯಾಡಿರಪ್ಪ. ನೀವು ಮದುವೆಯಾಗಿ ಸುಖವಾಗಿರಪ್ಪ' ಅಂದನು. ಹುಡುಗರು ಕೇಳಲಿಲ್ಲ. ಸರಿ ಎಂದ ಕೆಂಗರು ಮಲ್ಲೇಗೌಡ ಹೀಗೆ ಹೇಳಿದ 'ನಮ್ಮ ಕಳುವರಹಳ್ಳಿ ಮಗ್ಗುಲಾಗೆ ಕಂಬೇರ ಗೊಲ್ಲರಹಟ್ಟಿ ಅದೆ. ಆ ಹಟ್ಟಿಯೊಳಗೆ ಚಿನ್ನಮ್ಮ ಅಂತ ಒಂದು ಹೆಣ್ಣು ಅಯಿತೆ. ಋತುಮತಿಯಾಗಿ ಹನ್ನೆರಡು ವರ್ಷ ಆದರೂ ಲಗ್ನ ಒದಗಿಲ್ಲ. ಆ ಹುಡುಗಿ ತಂದು ಮದುವೆ ಮಾಡಾದಾದರೆ ನಾನು ಬರುತೀನಪ್ಪ' ಅಂದ. ಹುಡುಗರು 'ಆಗಲಣ್ಣ' ಅಂದು ಬಂದು ಅವರಪ್ಪನಿಗೆ ಎಲ್ಲಾನು ಹೇಳಿದರು.

## ಕುಂಚಿಟಿಗ ಗೌಡ ಗೊಲ್ಲರ ಮನೆ ಹೆಣ್ಣಿಗೆ ಹೋದ

ಸರಿ ಚಿಕ್ಕಾಲ, ದೊಡ್ಡಾಲ ಹುಡುಗರು ವೇಣುಕಲ್ಲು ಮಲೆಯಿಂದ ವಾಪಸ್ಸು ಬಂದರು. ತಂದೆ ಹತ್ರ ಎಲ್ಲ ಸಮಾಚಾರ ಹೇಳಿದರು. ಬಹು ಸಂತೋಷವಾಯಿತು ಆಲೇಗೌಡರಿಗೆ. ಮಗ ಹೇಳಿದಂತೆ ಮಾಡಾನ ಅಂದು ಗೊಲ್ಲರ ಮನೆಗೆ ಹೆಣ್ಣು ಕೇಳಾಕೆ ರಡಿಯಾದನು.

ಕಂಬೇರಹಟ್ಟಿ, ಕಳುವಾರಹಳ್ಳಿ ದಿಣ್ಣೆಗೆ ಅದೆ. ಅದರ ಬಡುಗಡೆಕೆ ಹೊಸಹಳ್ಳಿನೂ ಇದೆ. ಇಲ್ಲೆಲ್ಲಾ ಗೊಲ್ಲರು ಅದಾರೆ. ಆಲೇಗೌಡರು, ದೋತುರ ಉಟ್ಟುಕೊಂಡು, ಬಿಳಿ ಅಂಗಿ ಇಟ್ಟುಕೊಂಡು ಗೊಲ್ಲರ ಕೋಟು, ಮೆಟ್ಟು ಹಾಕಿಕೊಂಡು, ತಲೆಗೆ ಕೆಂಪು ವಸ್ತ್ರ ಸುತ್ತಿಕೊಂಡು ಕೈಲೊಂದು ಮೆಡ್ಡೆ ಕೋಲಿಡಕೊಂಡು ಮಗನಿಗೆ ಹೆಣ್ಣು ಕೇಳಾಕೆ ಕಂಬೇರ ಹಟ್ಟಿಗೆ ಹೊರಟರು. ಹೋದಾನು ಸೀದಾ ದೊಡ್ಡ ಸಿನ್ನೇಗೌಡನ ಮನೆಗೆ. ಗೌಡ ಬಂದದ್ದು ಸಿನ್ನೇಗೌಡರಿಗೆ ಆನಂದವಾಯಿತು. ಕಂದಾಯ, ಗೌಡಾಳಿಕೆಗೆಲ್ಲಾ ಈ ಅಜ್ಜ ಬರುತಾ ಇದ್ದು ಈಗ ಹೊಸದೇನಲ್ಲ. ಹಾಗೆಯೇ ಅಜ್ಜ ಬರುತಿದ್ದಂಗೆ ಕರಿ ಕಂಬಳಿ ಹಾಸಿ, ಕೈಗೆ ನೀರು ಕೊಟ್ಟರು. ಗೌಡ ಮಾತಿಗೆ ಸುರು ಮಾಡಿದ. ನಿನ್ನ ಸಣ್ಣ ತಂಗಿ ಸಿನ್ನಮ್ಮನ್ನು ನನ್ನ ಮಗ ಕೆಂಗರು ಮಲ್ಲೇಗೌಡನಿಗೆ ಕೊಡಬೇಕು. ಲಗ್ನಕ್ಕೆ ಹೆಣ್ಣು ಕೇಳಾಕೆ ಬಂದಿದ್ದೀನಿ ಅಂದ. ಮೊದಮೊದಲು ತಮಾಸೆ ಅಂತ ತಿಳಿದಿದ್ದ ಈ ಹಟ್ಟಿಗೌಡರು ಆಲೇಗೌಡ ಪಟ್ಟು ಸಡಿಲಿಸದಿದ್ದು ಕಂಡು ಸೋಜಿಗ ಆತು. ಬೇಡ ಅಂದರು. ಇಲ್ಲ ಕೊಡಾಕೆ ಆಗಲ್ಲ ಅಂದ್ರು. ಗೊಲ್ಲರ ಶಾಸ್ತ್ರ, ವಗೈರೆ ಮುಂದುಮಾಡಿರು. ಏನು ಮಾಡಿದರೂ ಆಲೇಗೌಡರು ಜಪ್ಪಯ್ಯ ಅನ್ನಲೇ ಇಲ್ಲ. ಕಡೆಗೆ ಜಗಳ ತೆಗೆದು ಬೈದು ಕಳಿಸಿದರು.

ಹಿಂಗೇನೇ ಆರು ತಿಂಗಳು ಸತಾಯಿಸಿರು. ಈವಜ್ಜ ಅವರ ಹಟ್ಟಿಗೆ ಹೋಗಾದು ಬಿಡಲಿಲ್ಲ. ಅವುರು ಕೊಡುತೀವಿ ಅನ್ನಲಿಲ್ಲ. ತಿರುಗಿ ತಿರುಗಿ ಏಳು ಜೊತೆ ಎಕ್ಕಡ ಸವೆದು ಹೋದವು. ಕೊಡಾದು ತಗೊಳ್ಳದು ಮಾತ್ರ ತೀರ್ಮಾನ ಆಗಲಿಲ್ಲ.

## ಕರುಣಿಸಿದಳು ಮಾರೆಕ್ಕ ಕಂಬೇರ ಹೆಣ್ಣು

ಹೊನ್ನಟ್ಟಿ ಆಲೇಗೌಡನಿಗೆ ಇದೇ ಯೋಚ್ನೆ. ಹಿರೇಮಗ ಕೆಂಗರು ಮಲ್ಲೇಗೌಡನಿಗೆ ಮದುವೆ ಮಾಡಬೇಕು ಅಂಬೋದು. ಆದರೂ ಅವುನ ಷರತ್ತು ಪೂರ್ತಿ ಆಗಂಗಿಲ್ಲ. ಈ ಗೊಲ್ಲರು ಹೆಣ್ಣು ಕೊಡಂಗಿಲ್ಲ ಯಂಗಪ್ಪ ಮಾಡಾದು ಅಂಬಾ ಚಿಂತಾಮಗ್ನನಾದನು. ಈ ಕೊರಗು ತಾಯಿ ಗೌರಸಂದ್ರದ ಮಾರೆಮ್ಮನಿಗೆ ತಿಳಿತು. ಗೌರಸಂದ್ರದ ಮಾರಮ್ಮ ಆವತ್ತು ರಾತ್ರಿಗೆ ಗೊಲ್ಲರಹಟ್ಟಿಗೆ ಬಂದು ದೊಡ್ಡಸಿನ್ನೇಗೌಡನ ಅವುನ ಹೆಂಡತಿ ಇಬ್ಬರನ್ನೂ ಬೆತ್ತದ ಕೋಲಾಗೆ ಹೊಡೆದು ಎಬ್ಬಿಸಿದಳು. ಗಾಬರಿಯಿಂದ ಎದ್ದು ಕುಂತರು. ನಿನ್ನ ತಂಗಿ ಚಿನ್ನಮ್ಮನ ಕೇಳಾಕೆ ಬಂದಿರೋ ಹೊನ್ನಟ್ಟಿ ಆಲೇಗೌಡ ಪರಮ ಸತ್ಯವಂತ. ಅವುನು ಸಾಕಿಕೊಂಡಿರುವುದು ಮಾರನವರ ಗೊಲ್ಲರ ಹುಡುಗ. ಅವುನ ಹೆಸರು ಕೆಂಗರು ಮಲ್ಲೇಗೌಡ. ಅವುನು ಕುಂಚಿಟಿಗರ ಮನೇಲಿ ಬೆಳೆದರೂ ಗೊಲ್ಲರ ಆಚಾರ ಬಿಟ್ಟಿಲ್ಲ. ನಿನ್ನ ಚಿಕ್ಕ ತಂಗಿ ಚಿನ್ನಮ್ಮನ್ನ ಅವನಿಗೆ ಕೊಟ್ಟು ಮದುವೆ ಮಾಡು. ಇಲ್ಲದಿದ್ದರೆ ನಿನ್ನ ಹಟ್ಟಿ ಹಟ್ಟಿನೇ ವಾಂತಿ-ಬೇಧಿ ಬಂದು ಕಾಲು ಕಸ ಮಾಡಿ ಸಾಯಿಸಿ ಬಿಡುತೀನಿ ಅಂದಂಗೆ ಆಯಿತು. ಇದರಿಂದ ಕಂಬೇರ ಗೊಲ್ಲರು ಹೆದರಿಕೊಂಡರು. ಏನು ಮಾಡಾದು, ವ್ರತ ಕೆಟ್ಟರೂ ಕುಲ ಕೆಡಬಾರದು. ಈಯಮ್ಮ ಹಿಂಗೆ ಹೇಳ್ತಾಳೆ, ಏನು ಮಾಡದಪ್ಪ ಅಂಬ್ತಾ ಯೋಚನೆ ಮಾಡಿದರು. ತಮ್ಮ ತಮ್ಮಂಗಳ ಕರೆದು ಗೌರಸಂದ್ರದ ಮಾರಮ್ಮ ಹೇಳಿದ ವಿಚಾರ ಹೇಳಿದ. ಅವುರ ಒಬ್ಬರಿಗೊಬ್ಬರು ಯೋಚನೆ ಮಾಡಿದರು. ವಿಧಿನೇ ಇಲ್ಲ, ತಾಯಿ ಮಾರಕ್ಕನ ಆದೇಶ, ಹೆಣ್ಣು ಕೊಡಲೇಬೇಕು. ಒಪ್ಪಿದರು. ಆದರೂ ಗೊಲ್ಲರು ಕೊಂಕುಬುದ್ದಿ ಮಾತ್ರ ಬಿಡಲಿಲ್ಲ.

ಇತ್ತ ಛಲ ಬಿಡದಂತೆ ವತ್ತಾರೆ ಗೊಲ್ಲರಹಟ್ಟಿಗೆ ಆಲೇಗೌಡ, ಅವನ ಹೆಂಡ್ತಿ ದೊಡ್ಡಕ್ಕಜ್ಜಿ ಬಂದ್ರು. ಹೆಣ್ಣು ಕೇಳಾಕೆ ಬಂದಾಗ ಅವರಿಗೆ ಮರ್ಯಾದೆ ಕೊಟ್ಟು ಒಳಿಕೆ ಕರಕೊಂಡ್ರು. ಕಾಲಿಗೆ ನೀರು ಕೊಟ್ರು, ಚಾಪೆ ಹಾಸಿ ಉಣ್ಣಾಕೆ ಕರೆದರು. ಉಂಡರಾತು ಬಿಡ್ರಿ, ಮಾವ ಅಂತಾನೇ ಆಲೇಗೌಡ. ಮಗನ ಮದುವೆ ವಿಚಾರ ಪ್ರಸ್ತಾಪಿಸಿದ. ಗೊಲ್ಲರು ಮೊದಲೇ ಯೋಚನೆ ಮಾಡಿದ್ದರು. ಇಲ್ಲ ಅನ್ನಂಗಿಲ್ಲ, ಹೂಂ ಅನ್ನಂಗಿಲ್ಲ. ಹೆಣ್ಣು ಕೇಳೋ ಮಾವ

ಬಂದೇಬಿಟ್ಟ ಅಂದು, ಆಯಿತು ಮಾವಯ್ಯ, ನಿನ್ನ ಮಗನಿಗೆ ನನ್ನ ತಂಗಿ ಕೊಡುತೀನಿ. ನೀವು ಕುಂಚಿಟಿಗರು, ನಾನು ಗೊಲ್ಲರು. ನಮ್ಮ ಕುಲದ ಪ್ರಕಾರನೇ ಮದುವೆ ನಡೆಯಬೇಕು ಅಂದ. ಆಲೇಗೌಡರು ಅದಕ್ಕೂ ಒಪ್ಪಿಕೊಂಡರು. ಆ ಒಪ್ಪಂದ ಏನಪ್ಪ ಅಂದರೆ, ಮದುವೆ ಕಾಡುಗೊಲ್ಲರ ಪ್ರಕಾರ ನಮ್ಮ ಮನೆತಾವನೆ ನಡೆಯಲಿ. ಅದಕ್ಕೆ ನಾವು ಹನ್ನೆರಡು ಪಲ್ಲ ಅಕ್ಕಿ ಹಾಕುತೀವಿ, ನೀವು ಹನ್ನೆರಡು ಪಲ್ಲ ಅಕ್ಕಿ ಹಾಕಬೇಕು. ಈ ಇಪ್ಪತ್ನಾಲ್ಕು ಪಲ್ಲ ಅಕ್ಕಿ ಅನ್ನ ಊಟ ಮಾಡೋ ಜನಗಳನ್ನು ನೀವು ಕರೆದುಕೊಂಡು, ಗಂಡು ಮಾಡಿಕೊಂಡು ಬನ್ನಿ ಎಂದನು.

ಆಲೇಗೌಡರಿಗೆ ಪರಮ ಸಂತೋಷ ಆಯಿತು. ಒಪ್ಪಿದರು. ಮನೆಗೆ ಬಂದು ಮದುವೆಗೆ ಮಗ ಕೆಂಗರು ಮಲ್ಲೇಗೌಡನನ್ನು ಒಪ್ಪಿಸಿದ. ಕಂಬೇರಗೊಲ್ಲರ ಮದುರೆ ವಿಚಾರ, ಮಾತುಕತೆ ವಿಚಾರ ಎಲ್ಲವನ್ನು ಹೇಳಿದ. ಇಪ್ಪತ್ನಾಲ್ಕು ಪಲ್ಲ ಅಕ್ಕಿ ಅನ್ನ ಊಟ ಮಾಡೋ ಜನ ಕರೆದುಕೊಂಡು ಬರಾಕೆ ಹೇಳಿದರು, ಏನು ಮಾಡುವುದೆಂದು ತಿಳಿಸಿದನು. ಕೆಂಗರು ಮಲ್ಲೇಗೌಡ ಮಹಾವಿಷ್ಣುವನ್ನು ಸ್ತೋತ್ರ ಮಾಡಿದ. ಬಂದಿರುವ ಕಷ್ಟ ಪರಿಹಾರಕ್ಕೆ ಕೋರಿಕೊಂಡ. ಆಗ ಮಹಾವಿಷ್ಣು ಕೋರೆಹಲ್ಲು, ಕೋರೆಮೀಸೆ, ಉಬ್ಬಿದ ಹೊಟ್ಟೆ ಭೂತಪ್ಪನ ಸೃಷ್ಟಿ ಮಾಡಿದ. ಮದುವೆಗೆ ಮನೆಗೆ ಬಂದ್ರು. ಎಲೆ ಹಾಕಿಸಿಕೊಂಡು ಉಣ್ಣಕೆ ಕುಂತ್ರು. ಮಾಡಿದ ಇಪ್ಪತ್ನಾಲ್ಕು ಪಲ್ಲ ಅಕ್ಕಿ ಅನ್ನವೆಲ್ಲಾ ಒಂದಗುಳೂ ಬಿಡದಂಗೆ ಮಹಾವಿಷ್ಣು ಭೂತಪ್ಪನ ವೇಷದಲ್ಲಿ ಊಟ ಮಾಡಿಬಿಟ್ಟ. ಕಂಬೇರಗೊಲ್ಲರು ಆಶ್ಚರ್ಯಪಟ್ಟರು. ಇವುನು ಸ್ವಾಮಿನೇ ಅಂದು ಕೆಂಗರು ಮಲ್ಲೇಗೌಡನಿಗೂ ಚಿನ್ನಮ್ಮನಿಗೂ ಮದುವೆ ಮಾಡಿದರು.



# ಮಡದಿ ಮೋಹ ಮರೆತ ಕೆಂಗರು ಮಲ್ಲೇಗೌಡ

ಕೆಂಗರು ಮಲ್ಲೇಗೌಡನಿಗೂ ಚಿನ್ನಮ್ಮನಿಗೂ ಮದುವೆ ಆತು. ಮದುವೆ ಆಗಿ ಹರಿಶಿಣ ದಾರ ಹರೀಲಿಲ್ಲ. ಮೈಮೇಗಳ ಹರಿಶಿಣ ಮಾಸಿಲ್ಲ. ಆಗಲೇ ಕೆಂಗರು ಮಲ್ಲೇಗೌಡ ತನ್ನ ದನಗಳ ಗೂಡಿಗೆ, ತಳಕಿನ ಗುಡ್ಡಕ್ಕೆ ಹೊರಟುಬಿಟ್ಟ. ಸಿನ್ನಮ್ಮನು ಮಾತಾಡಿಸಲಿಲ್ಲ. ಆಯಮ್ಮನಿಂದ ಒಂದು ಹನಿ ನೀರು ಕುಡಿಲಿಲ್ಲ. ತಂದೆ ಆಲೇಗೌಡ ಪರಿಪರಿಯಾಗಿ ಬೇಡಿಕೊಂಡರೂ ಮಗ ಗಮನ ಕೊಡಲಿಲ್ಲ. ಹೊರಟು ಹೋದ. ಮೂರು ತಿಂಗಳಾತು, ಸಿನ್ನಮ್ಮ ತೌರುಮನೆಗೆ ಉಳಿದಳು. ಗಂಡ ಬರುವ ಹಾದಿ ಕಾದು. ಸುಖವಾಗಿರಲಿಲ್ಲ. ಮೂರು ತಿಂಗಳು ಆದ ಮೇಲೆ, ಹೊನ್ನಟ್ಟಿ ಆಲೇಗೌಡ- ದೊಡ್ಡಕ್ಕಜ್ಜಿ ಬಂದ್ರು. ತವರು ಮನೆಯಿಂದ ಸೊಸೆಯನ್ನು ಕರಕೊಂಡು ಕಳುವರಹಳ್ಳಿಗೆ ಬಂದ್ರು. ಸೊಸೆ ಮನೆಗೆ ಬಂದದ್ದು ಅವರಿಗೆ ಸಂತೋಷ ಆದರೂ ಮಗ ಇಲ್ಲದಿರುವುದು ದುಃಖದ ಸಂಗತಿಯಾಯಿತು. ಹನ್ನೆರಡು ವರ್ಷ ಕಳೆಯಿತು. ಗಂಡ ಕೆಂಗರು ಮಲ್ಲೇಗೌಡ ಮನೆಗೂ ಬರಲಿಲ್ಲ, ಹೆಂಡತಿ ಮುಖ ನೋಡಲಿಲ್ಲ. ಜನ ಬಂಜೆ-ಬಂಜೆ, ಮಕ್ಕಳ ಫಲ ಕಾಣದವಳು ಅಂತಾ ಆಡಿಕೊಳ್ಳಾಕೆ ಸುರು ಮಾಡಿದರು. ಹೀಗೆ ಬಂಗ ನೀಗಿಸುತಾ ಸಿನ್ನಮ್ಮ ಗಂಡನ ಮನೆಯಾಗೆ ಇದ್ದಳು. ಆಗ ಅವುರ ಅಣ್ಣಗಳು ತಂಗಿಗೆ ತೌರು ಉಡುಕೆ ತಂದು ಹನ್ನೆರಡು ವರ್ಷ ಆತು, ತೌರು ಮನೆ ಋಣ ಕಾಣಲಿಲ್ಲ, ಕಳಿಸಿಕೊಡಿ ತೌರಿಗೆ ಅಂತ ಕೇಳಿಕೊಂಡರು. ಆಗ ಆಲೇಗೌಡ ಕಳಿಸಿಕೊಟ್ಟ.


ತೌರಿಗೆ ಬಂದ ತಂಗಿ ಒಂದೆರಡು ದಿನ ನಗುನಗುತಾ ಇದ್ಲು. ಮೊದಮೊದಲು ಅತ್ತಿಗೇರು ಅಕ್ಕರೆಯಿಂದಲೇ ನೋಡಿಕೊಂಡರು. ಆಮೇಲೆ ಅಸಡ್ಡೆ ತೋರಾಕೆ ಸುರು ಮಾಡಿದರು. ಹಿರಿ ಅತ್ತಿಗೆ ಅಂತೂ ಸಿನ್ನಮ್ಮಗೆ ಕೇಳಿಸುವಂಗೆಯೇ ಹಂಗಿಸಿದಳು. ಒಂದು ಬೆಳಿಗ್ಗೆ ಚಿನ್ನಮ್ಮ ಇನ್ನೂ ಎದ್ದಿರಲಿಲ್ಲ, ಮಲಗಿದ್ದಳು. ಅವರತ್ತಿಗೆ ಎದ್ದು ಕಸಮುಸುರೆ ಮಾಡುತ್ತಿದ್ದಳು. ಹಿರಿಯಾಕೆ ಅಂತಾಳೆ ಏಳಾಹೊತ್ತಿಗೆ ಆ ಬಂಜೆ ಮುಖ ನೋಡಬಾರದು, ಕೋಟಿ ಕೇಡು ಅಂಬ್ತಾ ಅಂದ್ಲು. ಇದು ಎಚ್ಚರವಾಗಿದ್ದ ಸಿನ್ನಮ್ಮನಿಗೆ ಕೇಳ್ತು. ಆದರೂ

ತೋರಿಸಿಕೊಳ್ಳಲಿಲ್ಲ. ಆ ಹೊತ್ತಿನ ಕೆಲಸವೆಲ್ಲ ಮುಗಿದ ನಂತರ ಅಣ್ಣಗಳಿಗೆ ಹೇಳುತಾಳೆ 'ನನ್ನ ಗಂಡ ಬಂದವನಂತೆ, ಹೆಂಡರು ಇಲ್ಲದೆ ಇರಲ್ಲ ಅಂಬ್ತಾ ಗಲಾಟೆ ಮಾಡವರೆ. ನಾನು ಗಂಡನ ಮನೆಗೆ ಹೋಗಬೇಕು ಅಣ್ಣಯ್ಯ' ಅಂದ್ಲು. ಅಣ್ಣಗಳು ತಂಗಿ ಮಾತು ಕೇಳಿ ಅದರಂತೆ ತೌರು ಬಣ್ಣ ತಂದು, ತೌರು ಉಡುಕೆ ಮಾಡಿ, ಮಡ್ಲಕ್ಕಿ ಕಟ್ಟಿ ಕಳಿಸಿಕೊಟ್ಟರು.



# ಗಂಡನ ಮನೆ ಸೇರಿದ ಚಿನ್ನಮ್ಮ

ಗಂಡನ ಮನೆಯಾಗೆ ಕಳುವರಹಳ್ಳಿಯಲ್ಲಿ, ಆಲೇಗೌಡನ ಸೊಸೆ ಸಿನ್ನಮ್ಮ ಕಾಪ್ರ ಮಾಡುತಾಳೆ. ಬಂಡ ಬಡತನ ಕಂಡಾಳಲ್ಲ. ಈಗ ಗಂಡ ಇಲ್ಲದಿರುವುದೇ ಎಲ್ಲರಿಂದ ಚುಚ್ಚು ಮಾತು. ಬಂಜೆ-ಬಂಜೆ ಅಂಬ್ತಾ ಬಾಯಿ ತುಂಬಾ ಕರೀತಾರೆ. ಹೀಗೆ ಕಾಲ ಹಾಕುತಿರ ಬೇಕಾದರೆ, ಒಂದು ಬೆಳಗ್ಗೆ ನಾಯಕಹಟ್ಟಿ ಕಡೆಯಿಂದ ಒಬ್ಬ ಜೋಗಪ್ಪ ಬಂದ. ಭಿಕ್ಷೆ ಬೇಡುತ್ತಾ ಪದ ಹಾಡ್ತಾ ಬಂದು. ಬಂದವನು ಕಳುವರಹಳ್ಳಿ ಆಲೇಗೌಡನ ಮನೆ ಮುಂದೆ ನಿಂತು ಕತೆ ಮಾಡಿದ 'ಮಕ್ಕಳಿಲ್ಲದ ಮನೆಗೆ ಹೊಕ್ಕಳಕ್ಕಿ ಅನ್ನವಿದ್ದೇನು ಫಲವೇ ಶಿವರಾಯ' ಎಂದ. ಸಿನ್ನಮ್ಮ ಕೇಳಿಸಿಕೊಂಡಳು. ತೋರಿಸಿಕೊಳ್ಳದೆ ಮೊರದಲ್ಲಿ ಅಕ್ಕಿ, ಬೆಲ್ಲ, ಬೇಳೆ ತಗಂಡು ಜೋಗಪ್ಪನಿಗೆ ಅಕ್ಕಿ ಪಡಿಮಾಡಕೋದಳು. ಪದ ಹೇಳುತ್ತಿದ್ದ ಜೋಗಪ್ಪ ಪದ ನಿಲ್ಲಿಸಿ ಮಾತಿಗಿಳಿದ. 'ತಾಯಿ ತಮಗೆ ಮಕ್ಕಳೆಷ್ಟು, ಅದರಲ್ಲಿ ಹೆಣ್ಣೆಷ್ಟು, ಗಂಡೆಷ್ಟು?' ಅಂದ. ಚಿನ್ನಮ್ಮನಿಗೆ ರಣಸಿಡಿಲು ಬಡಿದಂಗಾಯ್ತು. ತಲೆ ತಿರುಗಿದಂಗಾತು. ಆದರೂ ತೋರಿಸಿಕೊಳ್ಳದೆ 'ನನಗೆ ಮಕ್ಕಳಿಲ್ಲ ಕಣಣ್ಣ' ಅಂದ್ಲು. ಜೋಗಪ್ಪ 'ಹಾಗಾದರೆ ನಿನ್ನ ಭಿಕ್ಷೆ ಬೇಡ ತಾಯಿ. ಬಂಜೆ ಕೈಯಿಂದ ಭಿಕ್ಷೆ ತಗೊಳ್ಳೋದಿಲ್ಲ' ಅಂದು ಬಿರುಬಿರನೆ ಮುಂದೆ ನಡೆದುಬಿಟ್ಟ. ಸುತ್ತಲೂ ಪದ ಕೇಳಾಕೆ ನಿಂತಿದ್ದ ಮಕ್ಕಳು ಕಿಸಕ್ ಅಂತ ನಗಾಡಿದರು. ಸಿನ್ನಮ್ಮಂಗೆ ಪ್ರಾಣ ಹೋದಂಗಾತು.



# ಬಂಜೆ ಕೈಯಾಗಳ ಭಿಕ್ಷೆ ಬೇಡೆಂದ ಜೋಗಿ

ಕಾಡಿ ಬೇಡಿ ಭಿಕ್ಷೆ ಎತ್ತುತ್ತಿದ್ದ ನಾಯಕನಹಟ್ಟಿ ಜೋಗಿ ಆವತ್ತು ಬಂಜೆ ಕೈಯಾಗಿನ ಭಿಕ್ಷೆ ಬೇಡ ಅಂದ. ಇದು ಚಿನ್ನಮ್ಮನಿಗೆ ಎದೆಗಾಕಿ ತಿವಿದಂಗಾಯ್ತು. ಒಳಗೆ ಸೇರಿಕೊಂಡ್ಳು. ಅವೆತ್ತೆಲ್ಲ ಉಣ್ಣಲಿಲ್ಲ, ತಿನ್ನಲಿಲ್ಲ. ನಾನಿನ್ನು ಇರಬಾರದು, ಎಲ್ಲಾರು ಬಂಜೆ, ಹುಟ್ಟು ಬಂಜೆ ಅಂತಾರೆ. ಗಂಡ ನೋಡಿರೆ ಬಂದೇ ಇಲ್ಲ. ಅವುನ ರೂಪು ನನ್ನ ಮೈಮೇಲೆ ಬಿದ್ದಿಲ್ಲ, ಮುಟ್ಟಲಿಲ್ಲ, ಮಾಸಲಿಲ್ಲ, ಹಂಗಿಸಿಕೊಳ್ಳಲಿಲ್ಲ ಆಡಿಸಿಕೊಳ್ಳಲಿಲ್ಲ, ಬಾಯಾರಲಿಲ್ಲ ಬಳಕೆ ತಿನ್ನಲಿಲ್ಲ, ಹಡೆಯಲಿಲ್ಲ, ಹಂಗು ತೀರಿಲ್ಲ. ಇಂತಾದ್ರಾಗೆ ಯಾಕಿರಬೇಕು? ಪ್ರಾಣ ಕಳಕೊಳ್ಳೋದೇ ವಾಸಿ ಅಂಬ್ತಾ ಸಿನ್ನಮ್ಮ ತೀರ್ಮಾನಿಸಿದಳು. ಆ ಹೊತ್ತು ರಾತ್ರಿ ಮಲಗಲಿಲ್ಲ. ಎದ್ದು ಕಾಡಿನ ಕಡಿಕೆ ಹೋದಳು. ಹುಲಿ, ಕರಡಿ ತಿನ್ನಲಿಲ್ಲ. ನೀರಿನ ಮಡುವಿಗೆ ಬಿದ್ದು ಪ್ರಾಣ ಕಳೆದುಕೋಬೇಕು ಅಂತ ತೀರ್ಮಾನಿಸಿ ಮಡುವಿಗೆ ಬಿದ್ಲು. ನೀರು ಮೊಣಕಾಲಿಗೂ ಎಟುಕಲಿಲ್ಲ. ಅಂಗೇ ಬತ್ತಿಹೋದಂಗೆ ಆಯ್ತು. ಅಷ್ಟೊತ್ತಿಗೆ ಬೆಳಕು ಹರಿದಂಗಾಗಿ ತಿರುಗಿ ಮನೆಗೆ ಬಂದ್ಲು. ಮತ್ತೆ ರಾತ್ರಿಗೆ ಅದೇ ವನವಾಸ. ಪ್ರಾಣ ಕಳಕೊಳ್ಳೋ ಯೋಚನೆ. ಹಿಂಗೇನೇ ಹಲವಾರು ದಿನ ಮಾಡಿದ್ಲು. ಪ್ರಾಣ ಕಳೆದುಕೋ ರೀತಿ ಕಾಣಲಿಲ್ಲ. ಕೊನೆಗೊಂದು ಸಂಜೆ ಒಬ್ಬ ಕೊರವಂಜಿ ಕಂಡಂಗಾಯ್ತು. ಆ ಕೊರವಂಜಿ ಬೇರೆ ಯಾರೂ ಅಲ್ಲ ಗೌರಸಂದ್ರದ ಮಾರಮ್ಮ. ಗೌರಸಂದ್ರದ ಮಾರಮ್ಮನಿಗೆ ತನ್ನ ಕಷ್ಟ, ಬಂಜೆ ಬದುಕನ್ನು ವಿವರಿಸಿ ಹೇಳಿದಳು. 'ನಿನಗೆ ಮಕ್ಕಳ ಫಲ ಬ್ಯಾಡ. ಕಾಯ ಮುಂದಾನೆ ಕೈಲಾಸಕ್ಕೆ ಹೋಗುತೀಯ. ಶಿವನ ಲೋಕ ಸೇರುತೀಯ. ನಿನಗೆ ಮಕ್ಕಳಾದರೆ ಬಹಳ ಕಷ್ಟ ಅನುಭವಿಸಬೇಕು' ಅಂದೆಲ್ಲಾ ವಿವರಿಸಿದಳು. ಆದರೂ ಸಿನ್ನಮ್ಮ ಕೇಳಲಿಲ್ಲ. ಕಡೆಗೆ ಗೌರಸಂದ್ರದ ಮಾರಮ್ಮ ಪರಮೇಶ್ವರನನ್ನು ಕುರಿತು ತಪಸ್ಸು ಮಾಡು ಅಂದೇಳಿ ಮರೆಯಾದಳು.

# ಬಂಜೆಂಬ ಶಬ್ದ ನೀಗಪ್ಪ

ಗೌರಸಂದ್ರದ ಮಾರಮ್ಮನ ಮಾತಿನಂತೆ ಸಿನ್ನಮ್ಮ ಒಂದು ಮೂಗುತ್ತ, ಅಲ್ಲೊಂದು ಬ್ಯಾಟೆ ಗಿಡ, ಅದರ ಬುಡದಾಗೆ ನೆಲನ ಗೋವಿನ ಸಗಣಿಯಿಂದ ಸಾರಿಸಿ ತಪಸ್ಸಿಗೆ ಕುಂತಳು. ಶಿವ ಪ್ರತ್ಯಕ್ಷನಾದ. ಪಾರ್ವತಿನೂ ಬಂದಿದ್ದಳು. ಈಯಮ್ಮನ ಕಷ್ಟ ಏನೆಂದು ಶಿವ ಪಾರ್ವತಿನೂ ಕೇಳಿಸಿಕೊಂಡ್ರು. ಆಗ ಸಿನ್ನಮ್ಮ ತನ್ನ ಮದುವೆಯಾಗಿ ಹನ್ನೆರಡು ವರ್ಷ ಆಯಿತು. ಮಕ್ಕಳ ಫಲ ಇಲ್ಲ. ಊರಾಗೆ, ಹೊಲದಾಗೆ, ಮನೆಯಾಗೆ ಕೊಟ್ಟು ತಂದು ತಾವಲೆಲ್ಲ ನನ್ನ ಬಂಜೆ, ಹುಟ್ಟು ಬಂಜೆ ಅಂಬ್ತಾರೆ, ಹಂಗುಸ್ತಾರೆ. ನನ್ನೊಟ್ಟೆಯೊಳಗೆ ಒಂದು ಫಲ ಕೊಡಬೇಕು ಸ್ವಾಮಿ ಅಂದಳು. ಆಗ ಶಿವ 'ಅಮ್ಮ ಸಿನ್ನಮ್ಮ ನೀನಾಗೆ ನೀನು ಕಷ್ಟ ಅನುಭವಿಸಬೇಕು. ಮಕ್ಕಳಿಂದ ನಿನಗೆ ಸುಖವಿಲ್ಲ. ಪಾಡು ಪಡಬೇಕಾಗುತ್ತೆ' ಅಂದನು. ಚಿನ್ನಮ್ಮ ಒಪ್ಪಲಿಲ್ಲ. ಆಗ 'ನಿನಗೆ ಮುತ್ತಿನಂಥ ಮೂರು ಗಂಡುಮಕ್ಕಳ ಫಲ ನೀಡಿದ್ದೀನಮ್ಮ' ಅಂದರು. ಸಿನ್ನಮ್ಮನಿಗೆ ಸಂತೋಷ ಆದರೂ ಸುಮ್ಮಕಿರಲಿಲ್ಲ. 'ಸ್ವಾಮಿ ಕಷ್ಟ-ಸುಖಕ್ಕೆ ಹೆಣ್ಣು ಇರಬೇಕು. ತಲೆ ಮೇಲೆ ಎರಡು ನೀರಾಕಾದೆ ಹೆಣ್ಣು. ಅಣ್ಣಗಳ ದಿಬ್ಬದ ಕೂಡೆ ಹೊರಾಕೆ, ಕಳಸಿ ಕನ್ನಡಿ ಹಿಡಿಯಾಕೆ ಹೆಣ್ಣು ಬೇಕು. ಒಂದು ಹೆಣ್ಣು ಕರುಣಿಸು ತಂದೆ' ಅಂಬ್ತಾ ದಂಗಾಲು ಬಿದ್ಲು. ಆಗ ಶಿವ 'ಬಿಲ್‌ಕುಲ್ ಬೇಡಮ್ಮ. ಮೂರು ಗಂಡಿನಿಂದೆ ಒಂದು ಹೆಣ್ಣು ಹುಟ್ಟಿದರೆ ಹುಟ್ಟಿದ ಮನೆ ಹಾಳು, ಕೊಟ್ಟ ಮನೆ ನಾಶ. ಇಂಥ ಶಾಪದ ಮಗ ಆಗಾದು ಬೇಡವೇ ಬೇಡ' ಅಂದ. ಸಿನ್ನಮ್ಮ ಒಪ್ಪಲಿಲ್ಲ. ಹೆಣ್ಣು ಬೇಕೆಂದು ಹಟ ಹಿಡಿದಳು. ಅಮ್ಮ ಹೆಣ್ಣು ಹುಟ್ಟಿದ ಮೂರು ವರ್ಷಕ್ಕೆ ನಿನ್ನ ಗಂಡ ತೀರಿಕೋತಾನೆ, ಭಾಳ ಬಡತನ ಬರುತ್ತೆ. ಅನ್ನ ಇಲ್ಲದೆ ಅಡವಿ, ಅರಣ್ಯ ಸೇರಬೇಕಾಗುತ್ತೆ. ಮುತ್ತುಗದ ಎಲೆಯ ಸೀರೆ ಉಡಬೇಕಾಗುತ್ತೆ. ನಿನ್ನ ಗಂಡು ಮಕ್ಕಳೇ ನಿನ್ನ ಅಣಕಿಸ್ತಾರೆ. ಈ ಹೆಣ್ಣೇ ನಿನ್ನ ಕುಲಕ್ಕೂ ಮೃತ್ಯುವಾಗುತ್ತೆ. ಖಂಡಿತಾ ಬೇಡವೇ ಬೇಡ ಅಂದನು. ಸಿನ್ನಮ್ಮ ಬೇಕೇ ಬೇಕೆಂದು ಹಟ ಹಿಡಿದು ಕುಂತುಬಿಟ್ಲು. ಪರಮೇಶ್ವರ 'ಆಯಿತಮ್ಮ' ಅಂದು ಮೂರು ಗಂಡಿನ ಹಿಂದೊಂದು ಹೆಣ್ಣು ಮಕ್ಕಳ ಫಲ ಕೊಟ್ಟು ಹೊರಟುಬಿಟ್ಟ.

ಇತ್ತ ಕೈಲಾಸದೊಳಗೆ ವೀರಭದ್ರನ ಹಾವು, ಚೇಳುಗಳೊಂದಿಗೆ ಮೌರು ಮಾಡಿ ಹಗೇವಿನ ಒಳಗೆ ಹಾಕಿ ಮುಚ್ಚಿದ್ದರು. ಈಗ ಆ ಹಗೇವಿನ ಬಾಯಿ ತೆಗೆದು ವೀರಭದ್ರನ ಈಚೆಗೆ ಕರೆದ್ರು. ಅವುನ ಜೊತೆಗೆ ಹಾವು ಚೇಳುಗಳೂ ಬಂದವು. ಬಂದಂಥ ಹಾವು ಚೇಳುಗಳಿಗೆ ವಿಷವಿಲ್ಲದಂತೆ ಮಾಡಬೇಕೆಂದರು. ಹಗೇವಿನಿಂದ ಹೊರಬಂದು ವೀರಭದ್ರ ಮುಂದೆ ಕಂಬೇರ ಚಿನ್ನಮ್ಮನಿಗೆ ಜುಂಜಪ್ಪನಾಗಿ ಹುಟ್ಟಿ ಲೋಕಕಲ್ಯಾಣ ಮಾಡಬೇಕೆಂದು ಪಾರ್ವತಿ ಪರಮೇಶ್ವರರು ಆಶೀರ್ವಾದ ಮಾಡಿದರು. ಆಗ ವೀರಭದ್ರ 'ಅಮ್ಮ ಪಾರ್ವತೀ ದೇವಿ, ಅಂಥ ಆದಿಶಕ್ತಿ ಹೊಟ್ಟೇಲಿ ಹುಟ್ಟಿದ ನಾನು, ಕಾಡುಗೊಲ್ಲ ಸಿನ್ನಮ್ಮನ ಹೊಟ್ಟೆಯಲ್ಲಿ ಹುಟ್ಟುವೆನೇನಮ್ಮ? ಹೊಟ್ಟೇಲಿ ಹುಟ್ಟಿದರೆ ಸೂತಕ ತಾಕುತ್ತೆ, ಬಾಯಲ್ಲಿ ಹುಟ್ಟಿದರೆ ಎಂಜಲು ತಾಕುತ್ತೆ, ಆಗಾಕಿಲ್ಲ' ಅಂದುಬಿಟ್ಟ. ಆಗ ಶಿವನು ಹೇಳುತಾನೆ 'ಮಗಾ, ನೀನು ಚಿನ್ನಮ್ಮನ ಬಲಭುಜದ ಬಳಿ ಹಲ್ಲಿಯಾಗೆ ಹುಟ್ಟಿ ಒಂಬತ್ತು ತಿಂಗಳು ತಾಯಿ ಮೈಮೇಲಿದ್ದು ಆಮೇಲೆ ಕೆಳಕೆ ಬಿದ್ದು ಮಗುವಾಗು' ಅಂದು ಆಶೀರ್ವದಿಸಿದನು. ಪಾರ್ವತಿ ದೇವಿ ನೂರೊಂದು ಹೆಸರಿಡಿದು ಕರೆದು ನೂರೊಂದು ಆಯುಧ ನೀಡುತ್ತಾಳೆ. ಪರಮೇಶ್ವರ ಗಾಬರಿಯಾಗುತ್ತಾನೆ. ಇದ್ದ ಬದ್ದ ಆಯುಧವನ್ನೆಲ್ಲಾ ಕೊಟ್ಟುಬಿಟ್ಟೆ, ಬಿರುದಾವಳಿಗಳನ್ನೆಲ್ಲಾ ನೀಡಿಬಿಟ್ಟೆ. ನರಲೋಕ, ಸುರಲೋಕ, ದೇವಲೋಕ ಉಳೀಬೇಕಾ ಅಂದ. ಆಗ ಪಾರ್ವತಿ 'ವೀರಭದ್ರ ಜುಂಜಪ್ಪನಾದರೂ ಪ್ರಜೆ ಪಾಲಕರಿಗೆ ಕೇಡೇನಿಲ್ಲ ಸ್ವಾಮಿ' ಅಂದುಬಿಟ್ಲು. ಆಗ ಶಿವ 'ಇಷ್ಟೆಲ್ಲಾ ಆಯುಧ, ವರ ಪಡಕೊಂಡು ಭೂಮಿ ಮೇಲೆ ಮೆರೆಯಾಕೆ ನಾನು ಬಿಡೋದಿಲ್ಲ' ಅಂದು ಜುಂಜಪ್ಪನಿಗೆ ಹದಿನಾರು ವರ್ಷ ಮಾತ್ರ ಭೂಮಿ ಮೇಲೆ ಇರುವಂತ ವರ ಕೊಡುತಾನೆ.

ಈ ಹದಿನಾರು ವರ್ಷದೊಳಗೆ ಏಳು ಲಕ್ಷ ದನ ಆಳಬೇಕು, ಈ ಏಳು ಲಕ್ಷದೊಳಗೆ ಒಂದೇ ಒಂದು ಗೋವು ಸಾಯಬಾರದು. ನೀನು ಗೋವುಗಳನ್ನು ಕೊಲ್ಲಬಾರದು. ನೀನು ಏನಾದರೂ ಒಂದೇ ಒಂದು ಗೋವು ಕೊಂದರೆ ಏಳು ಜನ್ಮ ಎತ್ತಿ ನರಕ ಅನುಭವಿಸಬೇಕು. ಸ್ತ್ರೀಹತ್ಯೆ, ಶಿಶುಹತ್ಯೆ ಮಾಡಬಾರದು ಅಂಬ್ತಾ ಆದೇಶ ಮಾಡಿದರು.

ನೀನು ಹುಟ್ಟಿದ ಹದಿನಾರು ವರ್ಷಕ್ಕೆ ಹುಟ್ಟಿದ ನಿರ್ಮಾಣದಂತೆ ಕಾಲುಬೆರಸೆ ಕೈಲಾಸಕ್ಕೆ ಬಂದ್ರೆ ನರಲೋಕ ನಿನ್ನ ದೇವರು ಅಂಬ್ತಾ ಪೂಜಿಕೊಳ್ಳುತ್ತದೆ. ನಿಮ್ಮ ಮಾವಂದಿರು ಬೇರೆಯಲ್ಲ, ಅವುರು ಕ್ಷತ್ರಿಯರು, ನನ್ನರಮನೆಗೆ ದ್ವಾರಪಾಲಕರು. ಅವುರು ಮಾಡಿದ ಪಾಪದಿಂದ ನರಲೋಕದಲ್ಲಿ ಕುಬೇರ ಗೊಲ್ಲರಾಗಿ ಹುಟ್ಟಿ ಕುತಂತ್ರ ಬಾಳ್ವೆ ಮಾಡುತಾರಪ್ಪ. ನೀನು ಅವುರ ಅಳಿಯನಾಗಿ ಬಾಳಬೇಕು. ಅವರು ನಿನಗೆ ಕಷ್ಟನೇ ಕೊಡುತಾರೆ, ತೊಂದರೆ ಕೊಡುತಾರೆ. ಹಾಲಿಗೆ ವಿಷನೂ ಹಾಕುತಾರೆ. ಗೋವಿಗೆ ಕೇಡು ಬಗೆತಾರೆ. ಅದನ್ನೆಲ್ಲಾ

ಧರ್ಮ ಮಾರ್ಗದಲ್ಲಿ ಗೆದ್ದುಬರಬೇಕಪ್ಪ. ವೀರಭದ್ರ ಅಂತ ಪರಮೇಶ್ವರ ಆಶೀರ್ವಾದ ಮಾಡಿದನು.

ಸ್ವಾಮಿ ಶಂಕರ ಚಿನ್ನದ ಹಲ್ಲಿ ತರ ಗೊಂಬೆ ಮಾಡಿ ಪುಷ್ಪಕ ವಿಮಾನದ ಮಾರ್ಗದಲ್ಲಿ ಕಳುವರಹಳ್ಳಿಗೆ ಬಂದನು. ಹೊನ್ನಟ್ಟಿ ಆಲೇಗೌಡರ ಮನೆ ತಾವ ರಥ ನಿಲ್ಲಿಸಿ ಸಿನ್ನಮ್ಮನ ಬಲ ಬುಜದ ಚಿನ್ನದ ಪಲ್ಲಿನ ಇಳಿಬಿಟ್ಟು ಆಕಾಶಗುಂಟೆ ಹೊರಟುಬಿಟ್ಟನು.

ಚಿನ್ನಮ್ಮಗೆ ಹೋದ ಜೀವ ಬಂದಹಾಗೆ ಆಯಿತು. ತನಗೆ ಮಕ್ಕಳ ಫಲವೇ ಇಲ್ಲದೆ ಸಾಯುತ್ತೇನೆಂದುಕೊಂಡಿದ್ದಳು. ತೌರ ಸುಖವಿಲ್ಲ, ಹಡೆಯಲಿಲ್ಲ, ಹಂಗು ತೀರಲಿಲ್ಲ. ಇನ್ನು ಗಂಡ ಎರಿಗೊಲ್ಲ, ಮದುವೆಯಾದ ಕಾಲದಿಂದ ಹೆಂಡತಿ ಮುಖ ನೋಡಲಿಲ್ಲ ಅಂತೆಲಾ ಕಾಲಕ್ಕೆ ಮಕ್ಕಳು ಫಲ ಎಲ್ಲಿಂದ ಬಂದಾತೆಂದು ಚಿಂತಿಸಿ ಪ್ರಾಣ ಕಳೆದುಕೊಳ್ಳಕೆ ಮನಸು ಮಾಡಿದ್ದಳು. ಯಾವಾಗ ಶಿವಪರಮಾತ್ಮನು ಈ ಯಮ್ಮ ಕೇಳಿಕೇಳಿದಂಗೆಲ್ಲಾ ಮೂರು ಗಂಡು, ಮೇಲೊಂದು ಹೆಣ್ಣು ವರ ಕೊಟ್ಟನೋ ಆವಾಗ ಚಿನ್ನಮ್ಮಗೆ ಬಲು ಸಂತೋಷವಾಯಿತು. ಹಿಂಗೆ ಕಾಲ ತಳ್ಳಿಳು. ಏಳು ತಿಂಗಳು ಕಾಲ ಕಳೆಯಿತು. ಚಿನ್ನಮ್ಮ ತುಂಬಿದಂಗೆ ಗರ್ಭಿಣಿಯಾದಳು. ಸರಿಕರೆಲ್ಲ ವಯಸ್ಸು ಹೋದ ಕಾಲದಾಗೆ ಮಕ್ಕಳು ಅಂತೆಲ್ಲಾ ಆಡಿಕೊಳ್ಳುವುದಕ್ಕೂ ಹೇಸಲಿಲ್ಲ. ಗಂಡನಾದರೂ ಊರಾಗಿಲ್ಲ ಅಂದು ಜರಿಯುವುದು ತಪ್ಪಲಿಲ್ಲ. ಹಿಂಗೆ ಹಡೆದರೂ ಕಷ್ಟ, ಅಂಗೇ ಇದ್ದರೂ ಕಷ್ಟ ಅನುಭವಿಸುತ್ತಾಳೆ ಚಿನ್ನಮ್ಮ.

ಏನಿಲ್ಲ ಸ್ವಾಮಿ ನಾನು
ಹುಟ್ಟು ನಿರುಬಂಜೆಂತೆ
ಭೂಶಕ್ತಿ ಹೊರುವುದಿಲ್ಲವಂತೆ

ಭೂದೇವಿತೆ ಕಾಯುವುದಿಲ್ಲವಂತೆ ಸ್ವಾಮಿ ನನ್ನ
ಅದಕ್ಕಾಗಿ ನನಗೂ ಮಕ್ಕಳ ಸಂತಾನ ಕೊಡುಸ್ವಾಮಿ

# ಗರ್ಭದೊಳಗಣ ಶಿಶು ಮಾತಾಡಿತು

ಒಂಭತ್ತು ತಿಂಗಳು ತುಂಬಿದ ಚಿನ್ನಮ್ಮ ಗುಡ್ಡ ಬಗ್ಗಿಸಿದಂಗೆ ತುಂಬಿಕೊಂಡಳು. ಹೊಟ್ಟೆ ಒಳಗೆ ಶಿಶು ಮಾತಾಡಾಕೆ ಸುರು ಮಾಡ್ತು. ಕುಂತಾಗ, ನಿಂತಾಗ ಆಯಮ್ಮಂಗೆ ಗುದ್ದಿದಂಗಾಯ್ತು. ಏನೂ ತಿಳಿಯಲ್ದು. ತಾಯಿ ಚಿನ್ನಮ್ಮಅಪರೂಪಕ್ಕೆ ಸಂತಾನಭಾಗ್ಯ ಕೊಟ್ಟಳು ಗೌರಸಂದ್ರದ ಮಾರಕ್ಕ. ಈಗ ನೋಡಿರೆ ಹೊಟ್ಟೆ ಒಳಗೆ ಮಗಾಡಿದಂಗೆ ಆಯ್ತಾದೆ. ಏನಾರ ಪೀಡೆ ಪಿಚಾಚಿ ಹಿಡಿದಿರಬಹುದ? ಅಂಬ್ತಾ ಯೋಚ್ನೆ ಮಾಡಿದಳು. ಒಂದು ಇರುಳು ಚಿನ್ನಮ್ಮ ಅಂಗೆನೆ ಗೌರಸಂದ್ರದ ಮಾರಮ್ಮನ ಗ್ಯಾನ ಮಾಡ್ತಾ ಮಗ್ಗಲಾಗಿರಬೇಕಾದರೆ ಹೊಟ್ಟೆ ಒಳಗಿಂದ ರಪರಪ ಅಂತಾ ಕಾಲು ಬಡಿದಂಗಾಯ್ತು. ದಿಗ್ಗನೆ ಎದ್ದು ಕುಂತ್ಲು. ಆಗ ಸ್ವಾಮಿ ಹೇಳುತಾನೆ 'ನಾನು ದೆಸೆವಂತ ಜುಂಜಪ್ಪ, ನಿನ್ನ ಹೊಟ್ಟೆಯಲ್ಲಿದ್ದೇನೆ. ವೀರಭದ್ರನೇ ಜುಂಜಪ್ಪನ ಅವತಾರದಲ್ಲಿ ಹುಟ್ಟುತ್ತಿದ್ದೇನೆ. ಆದರೆ ನನಗೆ ಮುಟ್ಟು-ಅಂಟು ಆಗಾದಿಲ್ಲ. ಹಟ್ಟಿಯೊಳಗೆ ಹುಟ್ಟುವುದಿಲ್ಲ. ಈಗಲಿಂದಲೇ ಕಳುವರಹಳ್ಳಿ ಮೂಡಲ ದಿಕ್ಕಿನ ಏಣಿನಾಗೆ, ಮೂಡಲಕ್ಕೆ ಮುಖವಾಗಿಸಿ, ಒಂದು ಗುಬ್ಬ ಕಟ್ಟಿಸು. ಆ ಗುಡಿಯ ತಾವ ನರಮನುಷ್ಯರು ಸುಳಿಯಕೂಡದು. ನೀನೊಬ್ಬಳೇ ಸಕ್ಕ ಸರಿಹೊತ್ತಿನಾಗೆ ಮೂಡಲ ಮುಖ ಮಾಡಿ ಸ್ವಾಮಿ ಈಶ್ವರನ ಹೆಸರೇಳಿ ತಾಯಿ ಗೌರಸಂದ್ರದ ಮಾರಮ್ಮನನ್ನು ಸ್ಮರಣೆ ಮಾಡಿಕೊಂಡು ಗುಬ್ಬದ ಹೊಸ್ತಿಲು ತುಳಿದಂಗೆ ಒಳಗೆ ಸೇರಿಕೋಬೇಕು' ಅಂತಾ ದೊಡ್ಡ ಮನುಷ್ಯರು ಮಾತಾಡಿದಂಗೆ ಮಾತಾಡಿತು. ಸಿನ್ನಮ್ಮಗೆ ಗಾಬರಿ ಆತು. ಮಲಗಿದಳು. ಮತ್ತೆ ಅದೇ ಮಾತು, ಹೊಟ್ಟೆ ಒಳಗೆ ಜಾಲಾಡಿಸಿದಂತ ಹೇಳಿಕೆ. ಸರಿ ಬೆಳಕಾಯ್ತು. ಚಿನ್ನಮ್ಮ ತನ್ನ ಮಾವಯ್ಯ ಆಲೇಗೌಡರಿಗೆ ಶರಣರಂತ ಪಾದ ಮುಟ್ಟಿ 'ಮಾವಯ್ಯ ನಾನೊಂದು ಮಾತು ಹೇಳಬೇಕು. ಬೇಸರ ಇಲ್ಲ ತಾನೆ' ಅಂದ್ಲು. ಅಪರೂಪಕ್ಕೆ ಬಸಿರಾಗಿ ವಂಶ ಬೆಳೆಸೋ ಸೊಸೆ, ಅದೂ ಬಿಮ್ಮೆನ್ನಿ. ಕೇಳಿದರೆ ಇಲ್ಲ ಅನ್ನೋಕಾಗುತ್ತ! ಈಯಮ್ಮ ಇನ್ನೇನು ಹೇಳ್ಯಾಳು? ಬಸಿರು ಬಯಕೆ. ಕೇಳು ಮೂಗುತ್ತದ ಮಣ್ಣ? ಬೆಟ್ಟದ ನೆಲ್ಲಿ ಕಾಯೋ, ಮಾವಿನ ಮಿಡಿ ಕಾಯೋ ಕೇಳಬೇಕೆಂದು ಹೇಳಮ್ಮ. ಅದೇನು ನಡೆಸಿಕೊಡುತೀನಿ ಅಂದನು. ಆಗ ಚಿನ್ನಮ್ಮ 'ಮಾವಯ್ಯ ನನ್ನ ಹೊಟ್ಟೆಯೊಳಗೆ ಇರಾದು ಈಶ್ವರನ ರೂಪದ ಈರಭದ್ರನಂತೆ. ಅವುನ

ಹುಟ್ಟಾದು ಊರ ಹೊರಗಂತೆ. ಹಟ್ಟಿಯೊಳಗೆ ನರಮನುಷ್ಯರ ಸುಳಿವಿಲ್ಲದಂತೆ ಹುಟ್ಟುತಾನಂತೆ. ಅದಕೆ ಕಳುವರಹಳ್ಳಿ ದಿಣ್ಣೆಯಲ್ಲಿ ಮೂಡಲು ಮುಂದಾಗಿ ಬಾಗಿಲು ತೆಗೆದು ಒಂದು ವೈನಾದ ಗುಬ್ಬ ಮಾಡಿಸಿ, ಅದರಲ್ಲಿ ನನ್ನ ಬಿಡಬೇಕೆಂದು, ಅಲ್ಲಿ ನರಮನುಷ್ಯರ ಸುಳಿವು ಇರದಂತೆ ನೋಡಿಕೋಬೇಕೆಂದು ಹೊಟ್ಟೆಯೊಳಗಿನ ಶಿಶುಮಗು ಹೇಳಿತು. ಅದರಂತೆ ಮಾಡಿಸು ಮಾವಯ್ಯ' ಅಂದಳು. ಸೊಸೆ ಮಾತು ಕೇಳಿ ಆಲೇಗೌಡರಿಗೆ ತುಸು ಗಾಬರಿ ಆದರೂ, ದೇವರು ನುಡಿಸಿದ ನುಡಿ ಸುಳ್ಳಾಗಲ್ಲ ಅಂದು ತಿಳಿದು, ಅದರಂತೆ ಕಳುವರಹಳ್ಳಿ ಬಯಲಾಗೆ ಚಿನ್ನಮ್ಮನಿಗೆ ಗುಬ್ಬ ಮಾಡಿಸಿ, ಸಕಲ ಸೌಕರ್ಯ ಮಾಡಿಸಿದನು.

ಪಡುವಾಲ ಮಂಡಗಳ್ಳಿ, ಮೂಡಲ ಹೆಜ್ಜಾಲಿ, ಕಾರೆ ಬಯಲಿನ ಮಂಡಕಾರೆ ಕಡಿಸಿ, ಕಾರೆ, ಜಾಲಿ, ರೋಜನ ಬೇಲಿ ಹಾಕಿಸಿ ರೊಪ್ಪವ ತಿರುವಿಸಿದ ಒಂದು ನರಪ್ರಾಣಿ ಒಳಕೆ ಸುಳಿಯದಂಗೆ ಬೇಲಿ ಹಾಕಿ, ಒಳಗಡೆ ಬಾದೆ ಹುಲ್ಲು, ಬಸರಿ ಹುಲ್ಲು, ತರಿಸಿ ಹಂಚಿಕಡ್ಡಿ ಇಳಿಯದಂಗೆ ಸಮನಾಗಿ ಹರಡಿ, ಬಿದಿರುಗೇಣ್ಣಿನ ಕೋಲು ತರಿಸಿ, ಬಾಗಿಸಿ ಗುಬ್ಯಾನೆ ತಯಾರಿಸಿದನು. ಮೇಲೆ ಸೂಡಿನ ಅಡಕೆಪಟ್ಟೆ, ಮುತ್ತುಕದ ಎಲೆಗಳನ್ನೇ ಪೋಣಿಸಿ ಬಿದಿರು ಕೋಲಾಕಿ ಬಿಗಿಕಟ್ಟು ಮಾಡಿಸಿದನಣ್ಣ. ಮಳೇ-ಗಾಳಿ, ಸಿಡಿಲಿಗೆ ಜಗ್ಗದಂತೆ ಆಲೇಗೌಡ ಗುಬ್ಬವನ್ನು ತಯಾರುಮಾಡಿಸಿ, ಕಳವರಹಳ್ಳಿ ಬಯಲಾಗೆ ಏಳುಸುತ್ತಿನ ಮುಳ್ಳು ಬೇಲಿ ಒಳಗೆ ಇಡಿಸಿದನು.

ಒಂದು ಶನಿವಾರ ಸಿನ್ನಮ್ಮ ಮಾವಯ್ಯನ ಅಪ್ಪಣೆ ಪಡೆದು, ಬಲಗಾಲ ಹೊಸ್ತಿಲಿನ ಒಳಗೆ ಮಡಗಿ, ಬಾಗಿಲಿಗೆ ಶರಣೆಂದು ಅತ್ತೆ-ಮಾವರಿಗೆ ಶರಣೆಂದು ಗೌರಸಂದ್ರ ಮಾರಮ್ಮನ ನೆನೆದು ಹೊರಟಳು. ಊರಾದು ಊರೆಲ್ಲ ಸೋಜಿಗಪಡ್ತು. ಇದೆಲ್ಲಾ ಗೊಲ್ಲಬುದ್ದಿ ಅಂದ್ರು. ಕುಂಚಿಟಿಗರ ಕುಲದಲ್ಲಿ ಬೆರೆತರೂ ಈ ಹೆಣ್ಣು ಗೊಲ್ಲ ಬುದ್ದಿ ಬಿಡಲಿಲ್ಲ, ಅಂಬ್ತಾ ಮಾತಾಡಿಕೊಂಡ್ರು. ಸಿನ್ನಮ್ಮ ಮೂಡಲು ಮುಖವಾಗಿ ಹೆಜ್ಜೆ ಇಟ್ಟು, ಭೂಮಿಗೆ ಶರಣೆಂದು ಕಳುವರಹಳ್ಳಿ ದಿಣ್ಣೆಗೆ ಬಂದು ಗುಬ್ಬ ಸೇರಿಕೊಂಡ್ಲು.

ಆಲೇಗೌಡರು ಸೊಸೆಗೆ ಚೊಚ್ಚಿಲು ಹೆರಿಗೆ ಕಷ್ಟ-ಸುಖಕ್ಕೆ ಇರಲಿ ಎಂದು ಮಡದಿ ದೊಡ್ಡಮ್ಮನ್ನ ಸಿರಾಕ್ಕೆ ಓಡು ಕಳಿಸಿ, ಸಿರಾದ ಕೋಟೆ ಮನೆಗಾರ ತಳವಾರ ರಂಗಪ್ಪ ನಾಯಕನ ತಾಯಿ ಸೂಲಗಿತ್ತಿ ತಿಮ್ಮಾಜಮ್ಮನನ್ನ ಕರೆಸಿಕೊಂಡು ಮನೆಯಾಗೆ ಮಡಗಿಕೊಂಡ. ಗುಬ್ಬದೊಳಗೆ ನರಮನುಷ್ಯ ಬರಬಾರದೆಂದು, ಸೊಸೆ ಚಿನ್ನಮ್ಮ ದೇವರು ಹೇಳಿತೆಂದು ಹೇಳಿದ್ದಳಲ್ಲ ಅದಕ್ಕೆ ಅಂಗೆ ಮಾಡಿದನು.

# ಬೆನ್ನಾಗೆ ಮೂಡಿದನು ಮನೆ ಸ್ವಾಮಿ ಜುಂಜಪ್ಪ

ಒಂದು ಸೋಮವಾರ ಸಕ್ಕನೆ ಸರಹೊತ್ತು, ಮುಂಗಾರ ಮಳೆ ಅಬ್ಬರಿಸಿಕೊಂಡು ಬಂತು. ಮೂಡಲ ಸಿಡಿದು ದಂಗು ಬಡಿಸಿತು. ನರಮನುಷ್ಯರ ಸುಳಿವಿಲ್ಲ. ಕಾರೆಂಬ ಕತ್ತಲೆ, ಜೀಯೆಂಬೋ ಜೀರುಂಡೆ. ಚಿತ್ರಯ್ಯ- ಕಾಟಯ್ಯ ಎಂಬೋ ಸೊಲ್ಲು ಎತ್ತುವ ಕಪ್ಪೆ, ಇಂಥ ವ್ಯಾಳೆಯದಾಗೆ ಸ್ವಾಮಿನೆ ಜುಂಜಪ್ಪ ತಾಯಿ ಚಿನ್ನಮ್ಮನ ಬಲಗಡೆಯ ಬೆನ್ನಿನ ಮೇಲೆ ಬಂಗಾರದ ಹಲ್ಲಿಯಂಗೆ ಒಡಮೂಡಿ, ಪಟಪಟನೆ ಬಲಭುಜ ಸಿಡಿದು, ಪಟ್ಟನೆ ನೆಲದ ಮೇಲೆ ಶಿಶುವೊಂದು ನೆಗದೀತಪ್ಪ. ಮುಟ್ಟಿನ ಸೂತಕ, ಮೈಲಿಗೆಯ ಸೂತಕ, ಎಂಜಲು ಸೂತಕ ಇರಬಾರದೆಂದು ಸ್ವಾಮಿ, ಜುಂಜಪ್ಪ ಬಲಗಡೆ ಭುಜದೊಳಗೆ ಒಡಮೂಡಿದನು. ಸ್ವಾಮಿ ಜುಂಜಪ್ಪ ಬೆನ್ನ ಮೇಲಿಂದ ಮೂಡಿದ ಮೂರು ಗಳಿಗೆಯೊಳಗೆ ತಾಯಿ ಚಿನ್ನಮ್ಮನ ಎದೆಹಾಲು ಬಿದ್ದು ಜೋಲುತಾವೆ. ತಾಯಿ ಮಗುವನ್ನು ಅಕ್ಕರೆಯಿಂದ ಎತ್ತಿಕೊಂಡು ಎಡಗಡೆ-ಬಲಗಡೆ ಎರಡೂ ಎದೆಯಿದ ಹಾಲು ಉಣಿಸಿದಳು.

ಮೂರು ಮೂರು ಆರು ತಿಂಗಳು ಕಳೆಯಿತು. ಸ್ವಾಮಿ ಜುಂಜಪ್ಪ ಹೇಳಿದ 'ತಾಯಿ ನೀನು ಈ ಗುಡಿಸಲಲ್ಲಿ ಇರಬೇಡ, ನಿನಗೆ ಇನ್ನೂ ಮೂರು ಮಕ್ಕಳ ಫಲ ಉಂಟು, ಆ ಮಗು ಸೂತಕ ನನಗೆ ತಗುಲಬಾರದು. ಆದುದರಿಂದ ನೀನು ಬೇರೊಂದು ಗುಡಿಸಲಲ್ಲಿ ಇರಬೇಕು' ಎಂದು ಶಿಶು ಹೇಳಿತು. ಚಿನ್ನಮ್ಮ ಅದರಂತೆ ಇನ್ನೊಂದು ಗುಡ್ಲು ಕಟ್ಟಿಕೊಂಡು ವಾಸ ಮಾಡಿದಳು. ವರ್ಷ ತುಂಬುವುದರೊಳಗೆ ಚಿನ್ನಮ್ಮ ತುಂಬಿದ ಬಸುರಿಯಾಗಿ ಮಾರಣ್ಣ, ಮೈಲಣ್ಣ ಎಂಬ ಮಕ್ಕಳನ್ನು ಹಡೆದಳು. ಜುಂಜಪ್ಪ ಒಬ್ಬಂಟಿಯಾಗಿ ಕಳ್ಳಿ ಬೇಲಿಗಂಟಾ ಹಾವು ಹರಿದಾಡಿದಂಗೆ ಹರಿದಾಡಿಕೊಂಡು ಬೆಳೆದ. ಮಾರಣ್ಣ-ಮೈಲಣ್ಣರೂ ಇನ್ನೊಂದು ಗುಬ್ಬದಾಗೆ ಬೆಳೆದರು. ಜುಂಜಪ್ಪನಿಗೆ ಒಂದು ವರ್ಷ ಆಯಿತು. ಜುಂಜಪ್ಪ ತಾತ ಕಳುವರಹಳ್ಳಿ ಆಲೇಗೌಡರನ್ನು ಕರೆಸಿಕೊಂಡ. ಮೂರು ತೊಟ್ಟಿಲು ತರಬೇಕೆಂದು ತಾತನಿಗೆ ಹೇಳಿದನು. ಹೊನ್ನಟ್ಟಿ ಆಲೇಗೌಡರು ಬಂಗಾರದಂತ ಮೂರು ಜನ ಮೊಮ್ಮಕ್ಕಳನ್ನು ಕಂಡು ಸಂತೋಷಪಟ್ಟರು. ಮೇದರ ಕಡೆಯಿಂದ ಮೂರು ತೊಟ್ಟಿಲು ತರಿಸಿದನು. ಗೊಲ್ಲರ

ಸಂಪ್ರದಾಯದಂತೆ ತೊಟ್ಟಿಲುಶಾಸ್ತ್ರ ಮಾಡಿಸಿ, ಅದರೊಳಗೆ ಮಕ್ಕಳನ್ನು ಮಲಗಿಸಿದರು. ಮುಂದೆ ವರ್ಷ ತುಂಬುವುದರೊಳಗೆ ಜಡೆ-ಮುಡಿ ತೆಗೆಸಬೇಕೆಂದು ಜುಂಜಪ್ಪನ ಆದೇಶವಾಯಿತು.



# ಚಿನ್ನಮ್ಮನಿಗೆ ಹಾದರದ ಪಟ್ಟ

ಹೊನ್ನಟ್ಟಿ ಆಲೇಗೌಡನ ಹಿರಿಸೊಸೆ ಮೂರು ಮಕ್ಕಳನ್ನು ಹೆತ್ತಳು ಎಂಬ ಸುದ್ದಿ ಸುತ್ತಾರು ಹಳ್ಳಿಗೆ ಹಬ್ತು. ಮಕ್ಕಳು ಕೈಮೇಲಾಡಿ, ತೊಡೆ ಮೇಲಾಡಿ ಕೊನೆಗೆ ತೊಟ್ಟಿಲು ತೂಗಿ ವರ್ಷ ತುಂಬ್ತಾ ಬಂತು. ವರ್ಷ ತುಂಬುವುದರೊಳಗೆ ಹೆಸರಿಕ್ಕಬೇಕು. ನಮ್ಮ ಮನೆ ದೇವರು ಚಿತ್ರದೇವರ ಗುಡಿಗೆ ಹೋಗಬೇಕೆಂದು ದೊಡ್ಡಮಗ ಜುಂಜಪ್ಪ ತಾತನಿಗೆ ಅಪ್ಪಣೆ ಕೊಡಿಸ್ತು. ಮೊಮ್ಮಗನ ಮಾತಿನ ಪ್ರಕಾರ ಬಂಡಿ ಕಟ್ಟಿಕೊಂಡು, ಅದರೊಳಗೆ ನಡುಮಧ್ಯೆ ಜುಂಜಪ್ಪ, ಎಡ ಮಗ್ಗುಲಿಗೆ ಮಾರಣ್ಣ, ಬಲ ಮಗ್ಗುಲಿಗೆ ಮೈಲಣ್ಣ ಎಂಬ ಹಿರೇಮಕ್ಕಳ ತೊಟ್ಟಿಲು ಇಟ್ಟುಕೊಂಡು ಬಂಡಿ ಹೊಡಕೊಂಡು ಎಲ್ಲರೂ ನಡೆದುಕೊಂಡು ತಮ್ಮ ಮನೆದೇವರು ಇರುವಂತ ಜರಿಮಲೆ ಗುಡ್ಡಕ್ಕೆ ಹೋದರು. ಕೊಂಕಿ ಜರಿಮಲೆ ನಮ್ಮ ಚಿತ್ರದೇವರು ಇರುವ ತಾವು. ಅವನೆ ಕಾಡುಗೊಲ್ಲರ ಕುಲಾವಳಿಗೆಲ್ಲಾ ಹಿರಿಯವನು. ಎಲ್ಲರೂ ಅವುನ ಒಕ್ಕಲೆ. ಅವುನ ಅಣ್ಣ ಕಾಟಯ್ಯ. ಅಸಾಧ್ಯ ಪುರುಷ. ಮಹಾ ಸತ್ಯವಂತ, ಅವುನಿಂದಲೇ ಪರಪಂಚದ ಮೇಲೆ ಜ್ಯೋತಿಷ್ಯಶಾಸ್ತ್ರ ಹುಟ್ಟಿದ್ದು. ಆತನ ಬಳಿ ಕಾಲಜ್ಞಾನ ಎಂಬ ಚಿಂತಾಮಣಿ ಹೊತ್ತಿಗೆ ಇತ್ತು. ಪಾರ್ವತಿ ಪರಮೇಶ್ವರರು ಇದನ್ನು ಕೊಟ್ಟಿದ್ದು. ಮಹಾವಿದ್ಯಾವಂತ ಚಿತ್ತಯ್ಯ ರಾಜ. ಚಿತ್ರಗಿರಿ ಪಟ್ಟಣ ಆಳಿದವನು. ಇವನ ಮಡದಿ ಮಾಳಮ್ಮ ಬ್ರಾಹ್ಮಣರ ಹೆಣ್ಣುಮಗಳು. ಇವರ ತಾವ ಒಂದು ಬಂಗಾರದ ಗೊಡಗು ಇತ್ತು. ಅಂದ್ರೆ ಬಂಗಾರದ ಕೊಡೆ. ಅದು ಇವರಿಗೆ ಬೇಕು. ಬೇಕಾದುದನ್ನೆಲ್ಲಾ ಕೊಡೋದು. ಇಂಥ ದೇವರು ಗೊಲ್ಲಾಳಿಕೆಗೆಲ್ಲಾ ದೊಡ್ಡದು. ಅದಕ್ಕಾಗಿಯೇ ನಾವೆಲ್ಲರೂ ಚಿತ್ರದೇವರ ಒಕ್ಕಲು. ಮನೆ ಮಕ್ಕಳಿಗೆ ಹುಟ್ಟುತಾಲೆ ಚಿತ್ತಯ್ಯ, ಕಾಟಯ್ಯ ಅಂತಾಲೇ ಹೆಸರಿಕ್ಕದು. ಇಂಥ ಚಿತ್ರದೇವರು ಗುಡಿಗೆ ಹೊನ್ನಟ್ಟಿ ಆಲೇಗೌಡ ಅಳುವಿನೋ ಒಕ್ಕಲಿಗ ಭಕ್ತನಾಗಿದ್ದನು. ಅದು ಜುಂಜಪ್ಪನ ಕೃಪೆಯಿಂದ. ಇಂತ ದೇವಸ್ಥಾನಕ್ಕೆ ಬಂಡಿ ಕಟ್ಟಿ, ಮಕ್ಕಳನ್ನು ತೊಟ್ಟಿಲಾಗೆ ಹಾಕಿ ಕರಕೊಂಡು ಬಂದರು.

ಚಿತ್ರದೇವರ ಗುಡಿತಾಕೆ ಬಂದು ಪೂಜಾರಪ್ಪನ ಕರೆದು 'ನನ್ನ ಮಗ ಕೆಂಗರು

ಮಲ್ಲೇಗೌಡನ ಹೆಂಡತಿ ಸಿನ್ನಮ್ಮ ಮೂರು ಮಕ್ಕಳನ್ನು ಹಡೆದವಳೆ. ತೊಟ್ಟಿಲುಶಾಸ್ತ್ರ, ಜೆನಿಗೆ ಶಾಸ್ತ್ರ, ನಾಮಕರಣದ ಶಾಸ್ತ್ರ ಮಾಡಬೇಕ್ರಪ್ಪ' ಎಂದು ಕಳುವರಹಳ್ಳಿ ಆಲೇಗೌಡ ಕೇಳಿಕೊಂಡ. ಅಂಗನ್ನುತ್ತಿದ್ದಂಗೆ ಪೂರಪ್ಪಗೆ ಸ್ಯಾನೆ ಕೋಪ ಬಂದುಬಿಡ್ತು. 'ಹೋಗಯ್ಯ ಗೌಡನೇ, ಹೊನ್ನಟ್ಟಿ ಆಲೇಗೌಡನೆ, ನಿನ್ನ ಮಗ ಅಂತ ಹೇಳಿಕೊಂಡು ಒಂದು ಹುಡುಗ ಹನ್ನೆರಡು ವರ್ಷದಿಂದ ಇಲ್ಲೇ ಕುರುಬರ ಬೀಳಾಗೆ ಕಳ್ಳಿಬೇಲಿ ಹಾಕಿಕೊಂಡು ದನ-ಕರು ಮೇಯಿಸಿಕೊಂಡು ಇದೆ. ಒಂದು ದಿನಾನು ದನ ಬಿಟ್ಟು ಹೊರಗೆ ಹೋದಾನಲ್ಲ. ಮದುವೆ ಇಲ್ಲ, ಶಾಸ್ತ್ರವಿಲ್ಲ, ಹೆಂಡತಿಲ್ಲ, ಮುಂದಿಲ್ಲ, ಹಿಂದಿಲ್ಲ. ಅಂತಾದ್ರಾಗೆ ಬಂದು ನನ್ನ ಮಗ, ನನ್ನ ಸೊಸೆ ಅಂಬ್ತಾ ಹೇಳ್ತಾ ಇದ್ದೀಯ. ಮಗ ಯಂಗಾದ? ಸೊಸೆ ಯಂಗಾದ್ಲು? ಅದು ಹೋಗಲಿ ಹನ್ನೆರಡು ವರ್ಷ ಇಲ್ಲೇ ಇರುವಾಗ ಆಯಮ್ಮ ಹೆಂಗೆ ಬಿಮ್ಮನ್ಸೆ ಆದಳು? ನಾಚಿಕೆಗೇಡು. ಹೋಗು ಇನ್ನೊಂದು ಸಲ ಹೀಂಗೆಲ್ಲಾ ಹೇಳಬಾರದು, ಕೇಳಬಾರದು. ಕುಲಗೆಟ್ಟವರಿಗೆಲ್ಲಾ ದೇವಸ್ಥಾನದೊಳಗೆ ಬಿಡಂಗಿಲ್ಲ' ಎಂದನು. ದೇವಸ್ಥಾನದ ಒಳಕ್ಕೂ ಬಿಟ್ಟುಕೊಳ್ಳಲಿಲ್ಲ. ಆಗ ದೊಡ್ಡನು ಜುಂಜಪ್ಪ ಯೋಚನೆ ಮಾಡಿದ. ಈ ಕಾಡುಗೊಲ್ಲ ದಳವಾಯಿ ಚಿತ್ತನಿಗೆ ಸರಿಯಾಗಿ ಬುದ್ದಿ ಕಲಿಸಬೇಕೆಂದು ಚಿಂತಿಸಿ. ಪ್ರಪಂಚದ ಮೇಲಿರುವ ಎಲ್ಲಾ ಮಾರಮ್ಮಗಳ ಕರೆದನು. ಸ್ವಾಮಿ ಜುಂಜಪ್ಪ ಯಾವಾಗ ಜುಂಜಪ್ಪನ ಅಪ್ಪಣೆ ಆಯಿತೋ ಬೇವಿನ ಕರಿಯಮ್ಮ, ಸಾಕ್ಷಿಹಳ್ಳಿ ಮಣ್ಣೆಮ್ಮ, ಗೌರಸಂದ್ರದ ಮಾರಕ್ಕ, ಯರಬಳ್ಳಿ ಮಾರಿ, ಕರಮರಹಳ್ಳಿ ಮಾರಮ್ಮ ಎಲ್ಲರೂ ಬಂದು, ಅಣ್ಣ ಜುಂಜಪ್ಪನ ಮುಂದೆ ಶರಣ ಶರಣಾರ್ಥಿ ಅಂದ್ರು. ಆಗ ಸ್ವಾಮಿ ಜುಂಜಪ್ಪ ಹೇಳುತಾನೆ 'ನಮ್ಮ ತಾಯಿ ಸಿನ್ನಮ್ಮ ಸತ್ಯವಂತೆ. ಆಕೆಯನ್ನು ಪೂಜಾರಿ ಚಿತ್ತಯ್ಯ ಹೊಲಸು ಮಾತಾಡಿ ಹದಗೆಡಿಸ್ಯಾನ, ಸೂಳೆ ಪಟ್ಟ ಕಟ್ಟವನೆ. ಆ ಚಿತ್ರದೇವರ ಹಟ್ಟಿ ಹೆಂಗಸರು, ಇನ್ನೊಂದು ಹೆಂಗಸು ಅನ್ನಾದ ಮರೆತು ಬಾಯಿ ಬಂದಂಗೆ ಎಲುಬಿಲ್ಲದ ನಾಲಿಗೆಯಲ್ಲಿ ಮಾತಾಡಿದೆ. ಇವರಿಗೆಲ್ಲಾ ತಕ್ಕ ಶಾಸ್ತಿ ಮಾಡಿ, ತನ್ನ ಘನಮಹಿಮೆ ತೋರಬೇಕು' ಎಂದು ದೊಡ್ಡನು ಜುಂಜಪ್ಪ ಅಪ್ಪಣೆ ಕೊಡಿಸಿದನು. ಯಾವಾಗ ಜುಂಜಪ್ಪ ಹೀಗೆ ಅಪ್ಪಣೆ ಕೊಡಿಸಿದನೋ ಒಂದೊಂದು ಮಕ್ಕಳಿಗೂ ಒಂದೊಂದು ತರದ ಕಾಯಿಲೆ, ಅಮ್ಮಗಳಾಗಿ ಚಿತ್ರದೇವರ ಹಟ್ಟಿನೆ ನಾಶ ಮಾಡಂಗೆ ಮಾಡಿದರು.

# ಚಿತ್ತಮ್ಮಳ ಗರ್ವ

ಬಂಜೆ ಬಸಿರಾದ್ಲು ಕಂಬೇರ ಸಿನ್ನಮ್ಮ ಗಂಡುಮಗ ಹಡೆದಳು. ಈ ಸಂಗತಿ ಕೆಲವರಿಗೆ ಕುಹಕವಾಯ್ತು. ಅಂದರು, ಹಂಗಿಸಿದರು. ಅದರಲ್ಲಿ ಜುಂಜಪ್ಪನ ತಾತದಿರು ಇದ್ರಲ್ಲ ಬಕ್ಕತಲೆ ಚಿತ್ತಯ್ಯ, ಬರಿತಲೆ ಚಿತ್ತಯ್ಯ ಅಂಬ್ತಾ ಅವುರಲ್ಲಿ ಬಕ್ಕತಲೆ ಚಿತ್ತಯ್ಯನ ಹೆಂಡತಿ ಬಲು ಅಸಾಧ್ಯಗಾರ ಹೆಂಗಸು. ಜಾಸ್ತಿ ಕೊಂಗು ಬುದ್ದಿ. ಸಹಿಸಾಗಿಲ್ಲ. ಸಹಾಯ ಮಾಡಾಳಲ್ಲ. ಚಿನ್ನಮ್ಮನಿಗೆ ಗಂಡು ಮಗ ಆಗಿ ಅವುರ ಒಕ್ಕಲಿಗರಾದರೂನೂ ಊರಾ ಹೊರಕ್ಕೆ ಪಾತಿ ಮಾಡಿಕೊಂಡು ಕಳುವರಹಳ್ಳಿ ದಿಣ್ಣೆ ಮೇಲೆ ಚಿನ್ನಮ್ಮ ಒಬ್ಬಳೇ ಇದ್ದುಕೊಂಡು ಮಕ್ಕಳನ್ನ ಹಡೆದವಳೆ ಅಂಬ್ತಾ ಕುಹಕವಾಡಿದಳು. ಇವಳಿಗೆ ಮಗು ನೋಡೋ ಆಸೆ. ಆದರೂನೂ ಸೂತಕ ಮುಟ್ಟುವಂಗಿಲ್ಲವಲ್ಲ. ದೂರದಿಂದಲೇ ಮಗು ನೋಡಬೇಕೆಂದು ಬಂದ್ಲು. ಕಳುವಾರಹಳ್ಳಿ ದಿಣ್ಣೆಗೆ ಬಂದ್ಲು. ಮೂರು ಊದಿ ದಾಟಿ, ಕೊನೆ ಉದಿಯಾಗೆ ನಿಂತು ಕೂಗಿಕೊಂಡ್ಲು. ಆಗ ಚಿನ್ನಮ್ಮ ಹೇಳಿದಳು. ಹಿಂದೆಲ್ಲ ಈಯಮ್ಮ ಬಹಳಾನೇ ಆಡಿಕೊಂಡಿದ್ಲು. ನೂರೊಂಬತ್ತು ಜಾತಿಗೆ ಹುಟ್ಟಿಕೊಂಡವಳೆ. ಗಂಡನಿಲ್ಲದೆ ಬಸಿರಾಗವಳೆ ಅಂಬ್ತಾ. ಈಗ ಮಗ ನೋಡಿ ಇನ್ನೇನು ಕುಹಕ ಮಾತಾಡುತಾಳೊ ಬಿನ್ನಾಣಗಿತ್ತಿ, ಅಂಬ್ತಾಲೇ ಕೋಪದಿಂದಲೇ ಹೇಳಿದಳು 'ಹೋಗಮ್ಮ ಶ್ಯಾಬಸ್ತಿ, ನನ್ನಂತ ಹದಿನೆಂಟು ಜಾತಿಗೆ ಹುಟ್ಟಿಸಿಕೊಂಡಿರೋ ಮಗುವನ್ನ ನಿನ್ನಂತ ಪತಿವ್ರತೆಯರು ನೋಡಬಾರದು. ನೋಡಿರೆ ನಿಮಗೆ ಕೇಡುಗೀಡು ಬಂದುಬಿಟ್ಟಾತು' ಅಂಬ್ತಾ ಕೋಪದಿಂದಲೇ ನುಡಿದಳು. ಇದಕ್ಕೆ ಚಿತ್ತಮ್ಮ ಹೇಳಿಳು 'ಅಯ್ಯೋ ಬಿಡುತಾಯಿ ಅಂಗೆಯಾಕೆ ಅಂದೀಯ. ನಮ್ಮ ವಂಶದ ಕುಡಿ ಬಂದೈತೆ ಅಂಬಾ ಸಂತೋಷ ಇಲ್ಲವೆ? ನಾವೇನು ಹೊಟ್ಟೆಗೆ ಮಕ್ಕಳು ಕಟ್ಟೆಗೆ ನೀರಿಲ್ಲದವರ? ಏನೋ ಒಂದು ಬರುತ್ತೆ ಹೋಗುತ್ತೆ. ಆ ದಿನ ಏನೋ ವಿಸ ಘಳಿಗೆ. ಒಂದು ಆಡಿದೆ. ಅದನ್ನೇ ದೊಡ್ಡದು ಮಾಡಿರೆ ಯಂಗೆ? ಮಗು ತೋರಿಸಮ್ಮ ನೋಡಿಬಿಟ್ಟು ಹೋಗುತೀನಿ' ಅಂದ್ಲು.

ಚಿನ್ನಮ್ಮ ನೋಡಕ್ಕ ಅಂಬ್ತಾ ಜುಂಜಪ್ಪನಿಗೆ ಹೊದಿಸಿದಳಲ್ಲ ಬಟ್ಟೆ, ಅದು ಮುಖ ಮೈ ಗುಬರಾಕಿಕೊಂಡು ಮಲಗಿತ್ತು. ಚಿನ್ನಮ್ಮ ಮಗುವಿನ ಮುಖದ ಮೇಲಿನ ಬಟ್ಟೆ ವಾರೆ

ಮಾಡಿದಳು. ಯಾವಾಗ ವಾರೆ ಮಾಡಿದಳೋ ಆಗ ಉದಾಸೀನದಿಂದಲೇ ಚಿತ್ತಮ್ಮ ಜುಂಜಪ್ಪನ ಮುಖ ನೋಡಿದಳು. ನೋಡುತ್ತಿದ್ದವಳಿಗೆ ಅದು ಮಗುವಿನ ಮುದ್ದಾದ ಮುಖ ಕಂಡಂಗಾಗಿ ತಕ್ಷಣ ತೀಕ್ಷ್ಣವಾದ ಬೆಂಕಿ ಉಂಡೆಯಾಗಿ ಕಂಡುಬಿಡ್ತು. ಜುಂಜಪ್ಪನ ದೃಷ್ಟಿ ಜ್ವಾಲೆಯಾಗಿ ಅವುಳನ್ನು ಅಟ್ಟಿಸಿಕೊಂಡು ಬಂದಂಗಾಯ್ತು. ನೋಡ್ತಾ ನೋಡ್ತಾ ಗ್ಯಾನ ತಪ್ಪಿ ಬಿದ್ದುಹೋಗಿಬಿಟ್ಟಳು. ರಕ್ತದ ವಾಂತಿ ಮಾಡಿಕೊಂಡು ಬಿಟ್ಟಳು. ಸೀರೆಗೆನೆ ಉಚ್ಚೆ ಹುಯ್ಯಕೊಂಡುಬಿಟ್ಟಿದ್ದಳು. ಚಿನ್ನಮ್ಮ ಚಿತ್ತಮ್ಮನಿಗೆ ಆದ ಸ್ಥಿತಿ ನೋಡಿ ಕೂಗಾಡಿದಳು. ಆಗ ಎಲ್ಲರೂ ಓಡಿಬಂದು ನೋಡುತಾರೆ, ಚಿತ್ತಮ್ಮ ಗ್ಯಾನ ತಪ್ಪಿ ಕೈಕಾಲು ಆಡಿಸದಂಗೆ ಬಿದ್ದುಬಿಟ್ಟವಳೆ. ಬಂದವರೆಲ್ಲ ಎದೆ ಎದೆ ಬಡುಕೊಂಡ್ರು. ಬಕ್ಕದಲೆ ಚಿತ್ತಯ್ಯ, ಪೂಜಾರಿ ಚಿತ್ತಯ್ಯ ಮನೆದೇವುರು ಮಾರಸಂದ್ರದ ಮಾರಕ್ಕನ ನೆನೆದು, ಕಷ್ಟ ಪಾರು ಮಾಡುವಂತೆ ಹರಕೆ ಕಟ್ಟಿಕೊಂಡರು.

ಗೌರಸಂದ್ರದ ಮಾರಕ್ಕ ಕೊರವಂಜಿ ರೂಪದಲ್ಲಿ ಬಂದಳು. ಬಂದವಳು ಚಿತ್ತಯ್ಯನ ಮುಂದೆ ಕಣಿ ಕಣಿ ಅಂಬ್ತಾ ತಿರುಗಾಡಿದಳು. ಇದನ್ನು ಕಂಡ ಚಿತ್ತಯ್ಯ ಮೂರು ಹಿಡಿ ಹೊನ್ನು ಮೂರು ನಿಂಬೆಹಣ್ಣು ಇಟ್ಟು ಒಂದು ಕಣಿ ಕೇಳಿದ. ಆಗ ಕೊರವಂಜಿ ಮೂರು ಪರ್ತದ ದಪ ಕೆಂಡ ಮಾಡಿಬಿಟ್ಲು. ಅದಕ್ಕೆ ಧೂಪ ದೀಪ ಮಾಡಿಬಿಟ್ಟಳು. ಪಟ್ಟೆ ಬರೆದು ಕವಡೆ ಬಿಟ್ಟು ಕಣಿ ಹೇಳಿದಳು.

ಕೆಂಗರು ಮಲ್ಲಯ್ಯ, ಮಲ್ಲೇಗೌಡ ಅವುನ ಪರಶಿವನ ಅವತಾರ, ಬೇರೆಲ್ಲ. ಶಿವನೇ ಅವುನು. ಅವುನ ಈ ಯಮ್ಮ ಹಾದರಕ್ಕೆ ಹುಟ್ಟಿದವನು. ಕುಲಗೆಟ್ಟವರ ವಂಶ ಅಂದೆಲ್ಲಾ ಹಂಗಿಸಿದ್ದಳಲ್ಲ ಅದಕೆ ಇಂತ ಸ್ಥಿತಿ ಒದಗಿದೆ. ಈಗ ಚಿನ್ನಮ್ಮನಿಗೂ ಜುಂಜಪ್ಪನಿಗೂ ಜೆನ್ನಿಗೆ ಹುಯ್ದು, ಹಟ್ಟಿಯೊಳಗೆ ಕರಕೊಂಡು ಬಂದು ನಾಮಕರಣನೆ ಮಾಡಬೇಕು. ಮಗುವಿಗೆ ಹೆಸರನ್ನೇ ಇಡಬೇಕು. ಏನಂತ ಹೆಸರಿಡಬೇಕಪ್ಪ ಅಂದ್ರೆ ಜುಂಜಪ್ಪ ಅಂಬ್ತಾ ಕರೆಯಬೇಕು ಎಂದಳು.

ಕೊರವಂಜಿ ಹೇಳಿದಂಗೆ ಚಿತ್ತಯ್ಯನು ಒಂದು ಅಂಡ ಕುರಿ ಹಿಡಕೊಂಡ. ಅದಕ್ಕೆ ಜೆನ್ನಿಗೆ ಹುಯ್ದು ಹಾಲು ಮೀಸಲು ಬಿಟ್ಟ. ಅದರಿಂದ ಕರೆದ ಹಾಲು ತಕ್ಕೊಂಡು ಚಿನ್ನಮ್ಮನಿಗೂ ಮಗುವಿಗೂ ಜೆನ್ನಿಗೆ ಹೊಯ್ದರು. ಯಾವಾಗ ಜೆನ್ನಿಗೆ ಹೊಯ್ದರೋ, ರಕ್ತ ಕಕ್ಕಿಕೊಂಡು ಗ್ಯಾನ ತಪ್ಪಿ ಮಲಗಿದ್ದಳಲ್ಲ ಬಡಚಿತ್ತಮ್ಮ ಎಷ್ಟೊತ್ತು ಮಲಗಿದ್ದನಪ್ಪ ದೇವರೆ ಅಂಬ್ತಾ ಎದ್ದು ಕುಂತಳು. ಎಲ್ಲರಿಗೂ ದೇವರ ಮಹಿಮೆ ತಿಳಿದುಹೋಯ್ತು. ಆಗ ಸೇರಿದ್ದವರೆಲ್ಲ ಮಗುವಿಗೆ ಕೆಂಡಗಣ್ಣಿನವನು, ನಾಗಭೂಷಣ, ವೀರಾಧಿವೀರನು, ಶೂರಾಧಿ ಶೂರನು. ಕೈಯಲ್ಲಿ ಕತ್ತರಿ, ಬಾಣ ನೆತ್ತೀಲಿ ನೆತ್ತರ ಬಾಣ ಈಶ್ವರನ ಮಗ, ವೀರಭದ್ರ,


ತಾಯಿ ಹೊಟ್ಟೆಗೆ ಹುಟ್ಟಲಿಲ್ಲ. ತಾಯಿ ಬೆನ್ನಾಗೆ ಹೊಡೆದವನು. ಕಂಬೇರ ಚಿನ್ನಮ್ಮನ ಮಗನಾಗಿ ಕರಡೇರ ಕುಲ ಹೊನ್ನು ಒಕ್ಕಲು ಮಾಡಿದವನು. ಕನ್ನೆಗಮಾರ, ಪುಂಡುಕೋರ, ಎತ್ತಿದ ಬಾಣ ಇಳಿಸಿದವರ ಮಗನಲ್ಲ. ಮುಂದೆ ಇಕ್ಕಿದ ಹೆಜ್ಜೆ ಹಿಂದೆ ತೆಗೆದವನಲ್ಲ.ಆಡಿದ ಮಾತು ಹುಸಿ ಬಂದವನಲ್ಲ, ಕೆಂಡಗಣ್ಣಿನವನು, ಕೆದರಿದ ಮುಡೇನು, ವೀರಾಧಿ ವೀರ ವೀರಜುಂಜಪ್ಪ ಎಂದು ಹೆಸರು ಪಡೆದು ಮೀರಿ ಮೀರಿದವರನ್ನೆಲ್ಲಾ ಮೀಸೆ ಬೋಳಿಸಿ, ಹೆಚ್ಚು ಹೆಚ್ಚಿದವರನ್ನೆಲ್ಲಾ ನೆತ್ತಿ ಬೋಳಿಸಿ, ಮಾಟ ಮಾಡೋರ ಗಂಡ ಶೂನ್ಯ ಮಾಡೋರಿಗೆ ಮಿಂಡ, ನಾಗರಹಾವಿನ ಗಂಡ, ಉರಿಗಣ್ಣಿನ ಉದ್ದಂಡ, ನಿಡಗಲ್ಲು ಮಿಡಿಗೇಶಿ, ಚೇಳೂರು, ಸಿರ‍್ಯಾದಲ್ಲಿ ದೇವನಗಿರಿ ಪುಣ್ಯದ ಬಾಗಿಲು ತೆರೆದವನು. ಎಪ್ಪತ್ತೇಳು ರಾಜ್ಯಕ್ಕೆ ಹೆಚ್ಚುಗಾರಿಕೆ ಪಡೆದವನು. ಚಪ್ಪನ್ನೈವತ್ತಾರು ರಾಜ್ಯಕ್ಕೆ ಹೆಸರುವಾಸಿಯಾಗಲಿ, ಮನೆ ಸ್ವಾಮಿ ಜುಂಜಪ್ಪ, ಜುಂಜಪ್ಪ ಅಂದು ಹೆಸರಿಡಿದು ಕರೆದುಬಿಟ್ಟರು.

ಆಗ ಜುಂಜಪ್ಪ ತೊಟ್ಟಿಲಾಗೆ ಹೇಳ್ತಾನೆ 'ಮುಂದೆ ನನ್ನ ತಮ್ಮಗಳು ಮಾರಣ್ಣ ಮೈಲಣ್ಣ, ತಂಗಿ ಸಣ್ಣ ಮಾರಕ್ಕ ಅಂಬೋಳು ಹುಟ್ಟುತಾಳೆ. ಅವರಿಗೆಲ್ಲಾ ಜೆನ್ನಿಗೆ ಹಾಲು ಕರೆದು ತಪ್ಪು ಕಾಣಿಕೆ ಕೊಡಬೇಕೆಂದು, ತಾತ ಬಕ್ಕದಲೆ ಚಿತ್ತಯ್ಯನಿಗೆ ಹೇಳಿಬಿಟ್ಟನು'.ಜುಂಜಪ್ಪನ ಸತ್ಯ ಪರೀಕ್ಷಿಸಿದ ಬಕ್ಕದಲೆ ಚಿತ್ತಯ್ಯನಿಗೆ ಸಂತೋಷ ಆಗೋಯ್ತು. ನಮ್ಮ ವಂಶದಾಗೆ ಇಂಥ ವೀರಾಧಿವೀರ, ದೇವುರ ರೂಪ ಹುಟ್ಟಿಬಿಡತಲ್ಲ ಎಂದು, ಆವತ್ತು ಚಿಕ್ಕದ್ಯಾವರಹಟ್ಟಿಗೆ ಪಾಲು ಪಂಚಾಮೃತದ ಅಡಿಗೆ ಮಾಡಿಸಿ, ಸ್ವಾಮಿ ಜುಂಜಪ್ಪನ ಹುಟ್ಟು ಊಟ ಹಾಕಿಸಿಬಿಟ್ಟರು.

ಸ್ವಾಮಿ ಜುಂಜಪ್ಪನು ಒಬ್ಬನೇ ಒಂದು ಪಾಕಿಲಿ ಬೆಳೆಯುತಾ ಅವನೆ. ಅವನಿಗೆ ಹಾವಿನ ಹಾಸಿಗೆ, ಚೇಳಿನ ಗದ್ದಿಗೆ, ಹಾವಿನ ಹೆಡೆ ಮೇಲೆ ಕುಂತು ಕುಣಿಯೋನು. ಮೂರು ತಿಂಗಳು ನಿದ್ದೆ, ಮೂರು ತಿಂಗಳು ಎಚ್ಚರ. ಆ ಕಾಲಕ್ಕೆ ತಾಯಿ ಚಿನ್ನಮ್ಮ ಶಿವನ ವರಪ್ರಸಾದದಿಂದ ಮಾರಣ್ಣ, ಮೈಲಣ್ಣ, ಚಿಕ್ಕ ಮಗಳು ಮಾರಕ್ಕರನ್ನು ಹಡೆದಳು. ಯಾವಾಗ ಕೊನೆಯವಳು ಮಾರಕ್ಕ ಹುಟ್ಟುವಾಗ ಸ್ವಾಮಿಗೆ ಘನನಿದ್ದೆ ತೀರಿತು. ಕೇಡಿನ ಬುದ್ದಿ ಬಂದಂಗಾತು. ಮಾರಕ್ಕ ಬ್ಯಾಡ ಅಂದ. ನಿನಗೆ ಬಲು ಕಷ್ಟ ಬರುತ್ತೆ ನೋಡು ಅಂಬ್ತಾ ಸಾರಿ ಸಾರಿ ಹೇಳಿದ. ಆದರೆ ಮಗನ್ನ ಮಾತ ಕೇಳದೆ ಚಿನ್ನಮ್ಮ ಮೂಕಿ ತರನೇ ಇದ್ದಳು. ಆವಾಗ ಪರಮೇಶ್ವರನೂ ಹಂಗೆ ಹೇಳಿದ್ದ. ಈ ಮಗುನಿಂದೆ ನಿನಗೆ ಕಡುಕಷ್ಟ ಅಂದು ಆದರೂನೆ ಚಿನ್ನಮ್ಮ ಮೂರು ಗುಡಿನ ಹಿಂದೆ ಒಂದು ಇರಲಿ. ಕೀರ್ತಿಗೆ ಮಗ, ಆರತಿಗೆ ಮಗಳು, ಅಂಬ್ತಾಲೇ ಗೊಲ್ಲಪಟ್ಟು ಹಿಡಿದುಬಿಟ್ಟಳು. ಜುಂಜಪ್ಪನು ತಾಯಿಗೆ ಹೇಳಿ ನೋಡಿದ. ಆಯಮ್ಮ ಜಗ್ಗಲಿಲ್ಲ. ಸ್ವಾಮಿನೂ ಸುಮ್ಮಕಾದ. ಮೂರು ಗಂಡಿನಿಂದೆ ಒಂದು ಹೆಣ್ಣು

ಹುಟ್ಟಿರುವುದರಿಂದ ಚಿನ್ನಮ್ಮ ಪಡಬಾರದ ಪಾಡು ಪಟ್ಟಳು. ಗಂಡನ್ನ ಕಳಕೊಂಡ್ಲು. ಉಟ್ಟ ಸೀರೆನೂ ಹಾರಿ ಹೋಗಿ ಕಾಡು ಎಲೆಗಳಿಂದ ಮೈಮುಚ್ಚಿಕೊಳ್ಳೋ ಕರ್ಮಕ್ಕೆ ಒಳಗಾದಳು.

ಕತ್ತಲಿಗೆದ್ದೇವು ಮತ್ತೇನು ಮಾಡೇವು
ಹುಲಿಗಂಜಿ ಹುಲಿಯ ಮರಿಗಂಜಿ
ಹುಲಿಗಂಜಿ ಹುಲಿಯ ಮರಿಗಂಜಿ । ಜುಂಜಪ್ಪ
ನಿನಗಂಜಿ ಕೈಯ ಮುಗಿದೇವು



## ಪತಿವ್ರತೆಗೆ ಅವಮಾನ ಪಾಪದ ಬಾಯಿಗೆ ಮಣ್ಣು

ಸತ್ಯವಂತೆ, ಮಹಾ ಪತಿವ್ರತೆ ಚಿನ್ನಮ್ಮನು ದೇವುತರ ವರದಿಂದ ದೇವ ಮಾನವರಾಗಿ ಮೂವರು ಮಕ್ಕಳನ್ನು ಹಡೆದುದನ್ನು ಹಾದರು ಮಾಡವಳೆ, ಗಂಡ ಇಲ್ಲದೇ ಮಕ್ಕಳ ಹೆತ್ತವಳು, ಬೇಡರಿಗೋ, ಕುರುಬರಿಗೋ, ಕಂಕರಿಗೋ ಹುಟ್ಟಿಸಿಕೊಂಡವಳೆ ಎಂದೆಲ್ಲಾ ಹಂಗಿಸಿದ ಚಿತ್ರದೇವರ ಹಟ್ಟಿ ಗೊಲ್ಲರಿಗೆಲ್ಲಾ ಮಾರಕ್ಕಗಳು ಸರಿಯಾದ ಬುದ್ದಿ ಕಲಿಸಿದರು. ಹಟ್ಟಿಗೆ ಮಾರಿಹೊಕ್ಕಂಗೆ ಅಂಬ್ತಾರಲ್ಲ ಹಾಗೆ. ಹಾಗೆ ಕುರಗಜ್ಜಿ, ವಾಂತಿ, ಬೇದಿ, ಗೂರಲು, ಕಣ್ಣು ಕಾಣದಂಗೆ, ಕಿವಿ ಕೇಳದಂಗೆ, ಇದ್ದಕ್ಕಿದ್ದಂಗೆ ಕೈಕಾಲು ಸೋಲು ಆಗಿ ಇಂತ ಕಾಯಿಲೆ ಅಂಬ್ತಾ ಹೇಳಂಗಿಲ್ಲ ಅಂತಾ ಕಾಯಿಲೆ ತಂದಿಕ್ಕಿ ಕೊಡಬಾರದ ಹಿಂಸೆ ಮಾಡಬಾರದ ಕಾಟ ನೀಡಿದಳು, ಗೌರಸಂದ್ರದ ಮಾರಮ್ಮ. ಒಬ್ಬರು ತಿರುಗಾಡಲ್ಲ, ಮಕಾಡೆ ಮಲಗವರೆ. ಆಗ ಹಿರೇಕರು ಕುಂಟುತ್ತಾ, ಕಾಲೆಳಕೊಂಡು ಮನೆದೇವರು ಗೌರಸಂದ್ರದ ಮಾರಕ್ಕನ ಮೊರೆ ಹೋದರು. ಮಾರಮ್ಮನ ಗುಡಿಗೆ ಬಂದರೆ, ಮಾರಮ್ಮನೇ ಕಾಣಂಗಿಲ್ಲ, ಕೊರವಂಜಿ ಹಂಗೆ ಕುಂತಾಳೆ. ಅಂಗಂಗೆ ಮಾಯ. ಇನ್ನು ಭಯವಾಯ್ತು ದಳವಾಯಿ ಪೂಜಾರಪ್ಪಗೆ. ಬಾಕಲಾಗೆ ಕುಂತುಕೊಂಡು ಹೀಗೆ ಬೇಡಿಕೊಂಡರು 'ತಾಯಿ ನಮ್ಮಿಂದ ಏನು ತಪ್ಪಾಗೆದೆ ತಿಳೀವಲ್ದು. ನಮ್ಮ ತಪ್ಪು ನೆಪ್ಪನ್ನೆಲ್ಲಾ ಮನ್ನ ಮಾಡಿಕೊಂಡು ನಿನ್ನ ರಕ್ಷಣೆ ನೀಡಮ್ಮ. ದನ-ಕರು, ಕುರಿಮರಿ ಬಾಯೊಳಗೆ ಹುಲ್ಲುಕಡ್ಡಿ ಹಾಕಿಲ್ಲ, ನೀರು ಮುಟ್ಟಿಲ್ಲ. ಇನ್ನು ಮನುಷ್ಯರಾದಿ ಮನುಷ್ಯರೆಲ್ಲಾ ನರಮನುಷ್ಯರಾಗಿ ಉಳಿದಿಲ್ಲ. ಊರು ತುಂಬಾ ವಾಂತಿ ಭೇದಿ. ಮುಖ ಇಕ್ಕಂಗಿಲ್ಲ ಊರಾಗೆ. ತಮ್ಮ ತಾಕೆ ಬಂದು ರಕ್ಷಣೆ ಕೇಳ್ತಾ ಇದ್ದೀವಿ, ತಪ್ಪು ಕಾಣಿಕೆ ಕಟ್ಟುತ್ತಿದ್ದೀವಿ. ನಮ್ಮನ್ನ ನೀನೆ ಕೈಹಿಡಿಬೇಕಮ್ಮ' ಅಂದು ಗೋಳು ತೋಡಿಕೊಂಡರು. ಆಗ ಗೌರಸಂದ್ರದ ಮಾರಮ್ಮ ಕಣ್ಣು ತೆರೆದು 'ಕಾರಣವಿಲ್ಲದೆ ನಿಮ್ಮಟ್ಟಿ ನಾಶವಾಗಿಲ್ಲ. ರಕ್ತಭೇದಿ, ವಾಂತಿ ಭೇದಿ ಆಗಿಲ್ಲ. ಕಣ್ಣು ಕಾಣದಂಗಾಗಿಲ್ಲ. ಯಾನು ಅರೀದ ಎಳೆ ಬಾಲೆ ಸಿನ್ನಮ್ಮನನ್ನು ಹಾದರ ಮಾಡಿ, ಮಕ್ಕಳನ್ನು ಹೆತ್ತವಳೆ ಅಂಬ್ತಾ ಅನ್ನಬಹುದೆ? ಆಕೆ ಪತಿವ್ರತೆ, ಸತ್ಯವಂತೆ, ಶಿವ ಪಾರ್ವತಿಯೇ ಮಕ್ಕಳ ಫಲ ಕರುಣಿಸಿದ್ದಾರೆ. ಸತ್ಯವಂತ ಮಕ್ಕಳು ಹುಟ್ಟಿದ್ದಾರೆ. ಅವರನ್ನು ಅನ್ನಬಾರದ ಅಂದರೆ ನಿಮ್ಮ ಹಟ್ಟಿ ನಾಶ. ನಿಮ್ಮ ವಂಶ ಸರ್ವನಾಶ

ಆಗುತ್ತದೆ. ಆಕೆಗೆ ಹಂಗಿಸಿದ್ದಕ್ಕೆ ಮೂವರು ಮಾರಮ್ಮಗಳು ಮಾರೆರಾಗಿ ವಾಂತಿ, ಭೇದಿ, ಹೊಟ್ಟೆ ಬೇನೆ ತಂದಿದ್ದಾರೆ. ಅದರಿಂದ ಸ್ವಾಮಿ ಜುಂಜಪ್ಪನ ಹುಟ್ಟಿರಾದು. ಅವನು ವೀರಭದ್ರ. ಜಗತ್ತಿಗೆ ದೊಡ್ಡಾನು. ಅವನನ್ನು ಪಡೆದಿರುವ ಸಿನ್ನಮ್ಮ ಮಹಾ ಪತಿವ್ರತೆ. ತಪ್ಪು ಮಾಡಿರುವ ನೀವು ತಪ್ಪು ಕಾಣಿಕೆ ಕಟ್ಟಿ, ನೂರೊಂದು ದಿಂಡುಳ್ಳು ಹಾಕಿರೆ ನಿಮ್ಮ ಹಟ್ಟಿ ಜನ ಉಳಿತಾರೆ. ನೀವು ಬದುಕುತೇರ. ಮೊದಲು ಮೂರು ತೊಟ್ಟಿಲು ಒಳಕೆ ಬಿಟ್ಟುಕೊಂಡು ಹನ್ನೆರಡು ಕೈವಾಡದವರನ್ನು ಕರೆಕೊಂಡು ಮಕ್ಕಳಿಗೆ ನಾಮಕರಣ ಮಾಡಿರಿ. ಮಕ್ಕಳಿಗೆ ಜೆನಿಗೆ ಹಾಕ್ರಿ' ಅಂಬ್ತಾ ಗೌರಸಂದ್ರದ ಮಾರೆಮ್ಮ ಹೇಳಿದಳು.

ಸ್ವಾಮಿ ನಿನ್ನ ನೆನೆದೇವು ಸಾಮ್ರಾಣಿ ಹೊಯ್ದಿವು
ಸಾಲಬೈಗಿನೋ ದೊಡ್ಡನು ಜುಂಜಪ್ಪನ । ನೆನೆದಾರೆ
ಇದ್ದಂತ ಪಾಪಗಳೇ ಪರಿಹಾರ



## ಜುಂಜಪ್ಪ ಅಂಬ್ತಾ ಹೆಸರಿಟ್ಟರು

ಗಂಡನಿಲ್ಲದೆ ಮಕ್ಕಳನ್ನು ಹಡೆದವಳು ಎಂದು ಬಾಯಿಗೆ ಬಂದ ಹಾಗೆ ಹಂಗಿಸಿದ್ದ ಸಿತ್ರದೇವರ ಪೂಜಾರಮ್ಮ, ಅವರ ಹಟ್ಟಿ ಹೆಂಗಸು, ಅವರಿಂದ ಪಡಬಾರದ ಪಾಡು ಅನುಭವಿಸಿದರು. ನರನರಕ ಅನುಭವಿಸಿದರು. ಕೊನೆಗೆ ಗೌರಸಂದ್ರದ ಮಾರೆಮ್ಮನ ಬೆನ್ನು ಬಿದ್ದು ಬದುಕಿಕೊಂಡರು. ಮಾಡಿದ ತಪ್ಪಿಗೆ, ಈಗ ಕೈವಾಡದವರು ಸೇರಿಕೊಂಡು ಏಳು ಹುದಿ ಆಚೆಗೆ ತೊಟ್ಟಿಲು ಇಟ್ಟುಕೊಂಡು ಕೂತು, ಮುಖವಾಗಿ ಕೂತಿದ್ದ ಚಿನ್ನಮ್ಮನ ಬಳಿಗೆ ಬಂದರು. ಹಾಸಿ ಹಾಸಿ ಅಡ್ಡಬಿದ್ದರು. ಬಾಯಿತಪ್ಪಿನ ಕ್ಷಮೆ ಕೇಳಿದರು. ಬಿಡ್ತು ಅಂದರು. ನಿನ್ನ ಹೀಯಾಳಿಸಿ ದೊಡ್ಡ ತಪ್ಪು ಮಾಡಿದೆವು, ನಮ್ಮದು ಸವಾಂತು ತಪ್ಪಾಯಿತು ಅಂದು ಉದ್ದಕ್ಕೂ ಅಡ್ಡಬಿದ್ದರು. ಮೂರು ಉಳ್ಳು ಪ್ರದಕ್ಷಿಣೆ ಹಾಕಿದರು. ಆಗ ಚಿನ್ನಮ್ಮ ತೊಟ್ಟಿಲು ತಲೆ ಮೇಲೆ ಇಟ್ಟರೆ ನಾಗರಹಾವು ಸಿಂಬೆ ಆತು. ಸೂರ್ಯನ ಬಿಸಿಲು ಬೀಳದಂತೆ ಸರ್ಪರಾಜ ಹೆಡೆ ಬಿಚ್ಚಿ ಮಗುವಿಗೆ ನೆರಳು ಮಾಡ್ತು. ಜನಾದಿ ಜನವೆಲ್ಲ ಸೋಜಿಗಪಟ್ಟರು.

ನಾಮಕರಣ ಶಾಸ್ತ್ರ ನಡೆಯಿತು. ಗೊಲ್ಲರ ಶಾಸ್ತ್ರದ ತರಾನೇ ಮಾಡಿದರು. ದೇವರಟ್ಟಿಯಿಂದ ಹೊರಗೆ ಹುದಿಬಾಗಿಲಿಂದ ಮೂರು ತಾವ ಕೂಡಿಸಿ, ಮೂರು ತಾವ ಏಳಿಸಿದರು. ಚೆನನಿಗೆ ಹಾಲು ಕುಡಿಸಿದರು. ಗೋಮೂತ್ರ, ಗಂಜಲನ್ನೇ ಕುಡಿಸಿದರು. ಬೇವಿನ ಕಡ್ಡಿಯಾಗೆ ನಾಲಿಗೆ ಕುಡಿಸಿದರು. ಮುಂದೆ ಮಕ್ಕಳ ತೊಟ್ಟಿಲು ಹೊತ್ತುಕೊಂಡು ಚಿತ್ರದೇವರ ಗುಡಿ ಹಜಾರಕ್ಕೆ ಬಂದರು. ಕುರುಬರ ಕಂಬ್ಳಿ ಹಾಸಿ, ವೀಳ್ಯ ಹಾಕಿ ತೊಟ್ಲು ಮೂರನ್ನು ಅದರ ಮೇಲಿಟ್ಟರು. ಚಿತ್ರದೇವರಿಗೆ ಘನಪೂಜೆ ಮಾಡಿರು. ಆ ವೇಳ್ಯಾಗೆ ಚಿತ್ರದೇವರು ಪ್ರತ್ಯಕ್ಷವಾಗಿ ಈ ಮಕ್ಕಳು ಶಿವನ ಪ್ರಸಾದ. ಈವಮ್ಮ ಪರಮ ಪತಿವ್ರತೆ. ಜೋಡಿಲಿ ಹುಟ್ಟಿದ ಮಕ್ಕಳಿಗೆ ಮಾರಣ್ಣ-ಮೈಲಣ್ಣ ಅಂಬ್ತಾ ಕರೆಯಿರಿ. ಸ್ವಾಮಿ ಭಗವಂತ ಮುಂದಾಗಿ ಹುಟ್ಟಿದಾನು. ಜುಂಜಪ್ಪ ಅಂಬ್ತಾ ಕರೆಯಮ್ಮ ಅಂದು ಚಿತ್ರದೇವರು ಹೇಳ್ತು. ದೇವರ ಪ್ರಸಾದ ಆಗುತ್ತಿದ್ದಂತೆ ಜನವಾದಿ ಜನವೆಲ್ಲ ಜುಂಜಪ್ಪ ಅಂಬ್ತಾ ಕರೆದರು.

# ಮಹಿಮೆ ತೋರಿದ ಜುಂಜಪ್ಪ

ಜನಾದಿ ಜನವೆಲ್ಲ ಜುಂಜಪ್ಪ ಜುಂಜಪ್ಪ ಅಂಬ್ತಾ ಕರೆದರು. ಊಟ, ಉಪಚಾರ ಮುಗೀತು. ಆವಾಗ ಬಾಲಕ ಜುಂಜಪ್ಪ ತೊಟ್ಟಿಲೊಳಗಿಂದ ಎದ್ದುನಿಂತುಕೊಂಡು ಸುತ್ತಲಿನ ಜನಾನ ದೃಷ್ಟಿಸಿ ನೋಡಿತು. ಪೂಜಾರಿ ಚಿತ್ತಯ್ಯನ ಮಗಳು ಕಂಡ್ಲು. ಆಕೆ ದೇವರಿಗೆ ಅಂತಾ ಬಂದ ಚಿನ್ನಮ್ಮನ್ನ 'ಮಿಂಡರಿಗೆ ಹುಟ್ಟಿಸಿಕೊಂಡವಳು, ಹಾದರಗಿತ್ತಿ, ದೇವಸ್ಥಾನಕ್ಕೆ ಬಂದವಳೆ' ಅಂದಿದ್ಲಲ್ಲ, ಅಕೆನ ಜುಂಜಪ್ಪ ದೃಷ್ಟಿಸಿದ. 'ನೀನು ನನ್ನ ತಾಯಿನ ಹಾದರಗಿತ್ತಿ ಅಂದಿದ್ದೀಯ, ನೀನು ಜನಗಳ ಬಾಯಲ್ಲಿ ಸದಾ ಬೈಸಿಕೋ. ಕುರುಡುಕಣ್ಣಾಗೆ ನೀರು ಬಿದ್ದಂಗೆ ಸದಾ ಸುರಿದು, ಜನಗಳಿಗೆ ಬೇಸರಿಕೆ ತಂದು ಅವರ ಕೈಯಿಂದ ಬೈಸಿಕೋ' ಅಂದು ಸಿನ್ನಮ್ಮನನ್ನು ಹಸ್ತ-ಚಿತ್ತೆ ಮಳೆ ಮಾಡಿಬಿಟ್ಟ ಸ್ವಾಮಿ ಜುಂಜಪ್ಪ.

ತೊಟ್ಟಿಲುಶಾಸ್ತ್ರ ಮುಗಿಸಿಕೊಂಡು ಜುಂಜಪ್ಪನ ಕರಕೊಂಡು ಸಿನ್ನಮ್ಮ ಹೊನ್ನಟ್ಟಿ ಆಲೇಗೌಡ, ರಾಯ ಕಳುವರಹಳ್ಳಿ ಕಡೆಗೆ ತಿರುಗಿದರು. ಜನ ಮಳ್ಳಾಕಿರೆ ಮಳ್ಳು ಇಳಿದಂಗೆ ಸೇರಿದರು, ಕಳಿಸಿಕೊಟ್ಟರು. ಗೌಡನ ಮನೆಗೆ ಬಂದ ಚಿನ್ನಮ್ಮಗೆ ಸಡಗರ ಹೇಳತೀರದು. ಸತ್ವಪರೀಕ್ಷೆಗೋಗಿ ಈಗ ಆಕೆ ಮ್ಯಾಲೆ ಯಾವ ಅನುಮಾನವೂ ಇಲ್ಲ. ಹನ್ನೆರಡು ಅಂಕಣದ ಮನೆ, ಕಂಬಸಾಲೆ ಮನೆ, ನಡುಮನೆಯಾಗೆ ನೂಲ ಹಗ್ಗದಿಂದ ನಾಗಬೆತ್ತದ ತೊಟ್ಟಿಲು ಕಟ್ಟಿಸಿದರು. ನಡುವೆ ಜುಂಜಪ್ಪ ಅತ್ತ ಕಡೆಗೂ ಇತ್ತಕಡೆಗೂ ಮಾರಣ್ಣ-ಮೈಲಣ್ಣ. ಮೂರು ತೊಟ್ಟಿಲು ಹೊನ್ನಟ್ಟಿ ಆಲೇಗೌಡರ ಮನೆಯಲ್ಲಿ ತೂಗುತಾವೆ. ಹೊನ್ನಟ್ಟಿ ಆಲೇಗೌಡರ ಕುಟುಂಬದ ಬರಡು ಹೈನು ಹಾಲು ಕರೀತಾವೆ. ಸಂಪತ್ತು ತುಂಬಿ ತುಳುಕುತ್ತದೆ. ಹೀಗೆ ಮಕ್ಕಳು ಬೆಳೆದು ದೊಗ್ಗಾಲು ಊರಿಕೊಂಡು ತಿರುಗಾಡಂಗಾದ್ರು. ಮೂರು ವರ್ಷ ತುಂಬುತ್ತಾ ಬಂತು. ಮತ್ತೆ ಚಿನ್ನಮ್ಮ ಮಾಯದ ಗರ್ಭ ಧರಿಸಿದಳು. ನವಮಾಸ ಕಳೀತು. ಸ್ವಾಮಿ ಈಶ್ವರ ಹೇಳಿದಂಗೆ ಮೂರು ಗಂಡಿನ ಹಿಂದೆ ಒಂದು ಹೆಣ್ಣುಮಗು ಆತು. ಪರಮೇಶ್ವರ 'ಇದು ಬ್ಯಾಡ' ಅಂದಿದ್ದ. ತೊಂದರೆ ಪಡುತೀಯ ಅಂದಿದ್ದ. ಮೂರು ಗಂಡಿನ ಹಿಂದೊಂದು ಹೆಣ್ಣು ಮಗ ಒಳ್ಳೇದಲ್ಲ, ಹುಟ್ಟಿದ ಮನೆಗೂ ಕೊಟ್ಟ ಮನೆಗೂ

ತೊಂದರೆ ತಪ್ಪಿದ್ದಲ್ಲ ಅಂತಾ ಪಾರ್ವತಿ ಪರಮೇಶ್ವರರು ಹೇಳಿದ್ರು. ಆಯಮ್ಮ ಚಿನ್ನಮ್ಮ ಕೇಳಿರಲಿಲ್ಲ. ಆರತಿ ಹೊರಕ್ಕೆ ಒಬ್ಬಳು ಮಗಳು ಬೇಕು ಅಂದಿದ್ಲು. ಈಗ ಅದರಂತೆ ಸ್ವಾಮಿ ಕಣ್ಣುಬಿಟ್ಟ. ಚಿನ್ನಮ್ಮ ತುಂಬಿದಂಗೆ ಗರ್ಭಿಣಿಯಾದ್ಲು, ನವಮಾಸ ಕಳೀತು. ಗೊಲ್ಲರ ಪ್ರಕಾರವೇ ಶಾಸ್ತ್ರ ಸಂಬಂಧ, ಬಸಿರು ಬಯಕೆ ತಿನ್ನಿಸಿದರು.

ಮೂರು ಗಂಡಿನ ಹಿಂದೆ ಒಂದು ಹೆಣ್ಣು ಮಗು ಆಯ್ತು. ಒಂಬತ್ತು ದಿನಕ್ಕೆ ತೊಟ್ಟಿಲು ಶಾಸ್ತ್ರ ಮಾಡಿರು. ಆಲೇಗೌಡ ಈ ಮಗಾನೂ ಅಕ್ಕರೆಯಿಂದಲೇ ಕಂಡು ಸಾಕಿದ. ನಾಮಕರಣಮಾಡಿಸಿ ಗೌರಸಂದ್ರದ ಮಾರಮ್ಮನ ಹೆಸರೆತ್ತಿ ಮಗುವಿಗೆ ಮಾರಕ್ಕೆ ಅಂತಂದು ಹೆಸರು ಕಟ್ಟಿರು.



## ಒಂದಾದ ಸತಿಪತಿಯರು

ಮಾರಕ್ಕ ಹುಟ್ಟಿದ ಗಳಿಗೆ ಸರಿಬರಲಿಲ್ಲ. ಕೊಂಕಿಚಿರೆಮಲೆಗಿದ್ದ ಕೆಂಗರು ಮಲ್ಲೇಗೌಜನ ದನಗಳಿಗೆಲ್ಲಾ ಸಪ್ಪೆ ರೋಗ ಬಂದು ಹುಲ್ಲು-ನೀರು ಬಿಟ್ಟವು. ಕೆಂಗರು ಮಲ್ಲೇಗೌಡ ಗಾಬರಿಗೊಂಡ. ಒಂದು ದನನೂ ಸಾಯಬಾರದು ಅಂದು ಗೌರಸಂದ್ರದ ಮಾರಕ್ಕನ ಕೇಳಿಕೊಂಡ. ನನ್ನೂರು ಕಳುವರಹಳ್ಳಿಗೆ ಹೋಗಿ ಜಾತ್ರೆ ಮಾಡುತೀನಿ. ಬಾನುಗುರಿ ಕಡಿಸಿ, ಬ್ಯಾನದ ಅರಿಸೇವೆ ಮಾಡುತೀನಿ ನಿನ್ನ ಆರತಿನ ದೂಳ ಮೆರವಣಿಗೆ ಮಾಡುತೀನಿ, ನನ್ನಿಂದ ತಪ್ಪಾಗಿದ್ರೆ ಹೊಟ್ಟೆಗಾಕಿಕೊಳ್ಳವ್ವ ತಾಯಿ ಅಂದು ಶರಣಾದ. ದನಗಳನ್ನೆಲ್ಲಾ ಹೊಡಕೊಂಡು ನೇರವಾಗಿ ಕಳುವರಹಳ್ಳಿ ದಿಣ್ಣೆಗೆ ಬಂದ. ಕಳ್ಳಿ ಕಡಿದು ಬೇಲಿ ಹಾಕಿದ. ಊರೊಳಗೆ ಬರುವಾಗ್ಗೆ ಕುಲೊಂಬತ್ತು ಜಾತಿ ಜನಗಳು ಅವನನ್ನು ನಾನಾ ರೀತಿಯಲ್ಲಿ ನೋಡಿದರು. 'ಹೆಂಡರನ್ನು ಮಿಂಡರು ಪಾಲು ಮಾಡಿ ದನ ಆಳೋಕೋಗವನೆ' ಎಂದೆಲ್ಲಾ ಅಂದಾಡಿರು. ಕೆಂಗರು ಮಲ್ಲೇಗೌಡನಿಗೆ ಏನೇನೂ ತಿಳಿಯವಲ್ಲದು. ಮನೆತಾಕೆ ಬರುತಾನೆ, ಜುಂಜಪ್ಪ, ಅವನ ತಮ್ಮಗಳಾದ ಮಾರಣ್ಣ-ಮೈಲಣ್ಣ, ಕೊನೆ ಮಗಳು ಮಾರಕ್ಕ ಬೀದಿಯಲ್ಲಿ ಆಟ ಆಡುತ್ತಿದ್ದವು. ಅವರು ಅವ್ರ ಅಪ್ಪನ ತರಾನೇ ಇದ್ವು. ಸೂರ್ಯ-ಚಂದ್ರರ ಹಾಗೆ ಇದ್ದರು. ಕೆಂಗರು ಮಲ್ಲೇಗೌಡನಿಗೆ ದಿಣ್ಣೆತಾವಿಂದ ಬರುವಾಗ ಅವರು, ಇವರು ಮಾತಾಡುತ್ತಿದ್ದ ಊರಮಿಂಡರು ಇವುನ ಕಾಡುಮಿಂಡ ಊರಿಗೆ ಬಂದ ಅಂಬ್ತಾ ಮಾತು ನೆಪ್ಪಾಯಿತು. ಆದರೂ ಸೂರ್ಯಚಂದ್ರರಂತ ಮಕ್ಕಳ ಕಂಡಮೇಲೆ ಅವುನ ಕ್ವಾಪಾನು ಅಂಗೇ ಇಳಿದೋಯ್ತು. ಚಿನ್ನಮ್ಮ ಓಡಿಬಂದ್ಲು, ಗಂಡನ ಕಾಲಿಗೆ ನೀರು ಕೊಟ್ಲು. ನಾಲ್ಕು ಮಕ್ಕಳನ್ನು ಕರೆದಳು. ಅವೆಲ್ಲಾ ಓಡಿಬಂದು, ಅವುರಪ್ಪನ ತೊಡೆ ಮೇಲೆ, ತೋಳ ಮೇಲೆ, ಭುಜದ ಮೇಲೆ ಕುಂತು ಮಂಗಚೇಷ್ಟೆ ಆಡಿದವು. ಅಪ್ಪ ಮುದ್ದಾಡಿದನು. ಚಿನ್ನಮ್ಮ ಗಂಡನ ಪಾದಕ್ಕ ಶರಣು ಮಾಡಿ, ಅವತ್ತು ರಾತ್ರಿ ಹಬ್ಬದ ಅಡಿಗೆ ಮಾಡಿದರು.

## ಮಾರಮ್ಮನ ಜಾತ್ರೆ, ಮಲ್ಲೇಗೌಡನ ಸಾವು

ಜುಂಜಪ್ಪನ ತಂದೆ ಕೆಂಗರು ಮಲ್ಲೇಗೌಡ ಬೆಂಕಿ ಮಲೆ ಗುಡ್ಡದಾಗೆ ಇರುವಾಗ ದನಗಳಿಗೆ ಸಪ್ಪೆರೋಗ ಬಂದಿದ್ವು. ಆಗ ಗೌರಸಂದ್ರದ ಮಾರಮ್ಮನ ಪಾದ ಹಿಡಿದ ಕೆಂಗರು ಮಲ್ಲೇಗೌಡ. ಗೌರಸಂದ್ರದ ಮಾರಮ್ಮನಿಗೆ ಬಾನದ ಆರತಿ ಮಾಡಿ ಜಾತ್ರೆ ಮಾಡಿಸುವುದಾಗಿ ಹರಕೆ ಕಟ್ಟಿಕೊಂಡಿದ್ದ. ಅದರಂತೆ ದನಗಳನ್ನೆಲ್ಲಾ ಹೊಡಕೊಂಡು ಕಳುವರಹಳ್ಳಿ ಬಯಲಿಗೆ ಬಂದ ಕೂಡಲೇ ಅವರಪ್ಪ ಆಲೇಗೌಡನ ಹತ್ತಿರ ಹೇಳಿಕೊಂಡ. ದನಗಳ ರಕ್ಷಣೆಗಾಗಿ ಮಾಡಿದ್ದ ಗೌರಸಂದ್ರದ ಮಾರಮ್ಮನ ಹರಕೆ ತೀರಿಸಬೇಕು. ಅದಕ್ಕಾಗಿ ಕಳುವಾರಹಳ್ಳೀಲಿ ಭಾರೀ ಜಾತ್ರೆ ಮಾಡಿಸಬೇಕು. ಏಳೂರಿಗೆ ಸಾರಿ, ಜನ ಸೇರಿಸಬೇಕೆಂದು ಹೇಳಿಕೊಂಡ. ಮಗನ ಬಯಕೆಯನ್ನು ಅಪ್ಪ ಹೊನ್ನಟ್ಟಿ ಆಲೇಗೌಡ ಒಪ್ಪಿಕೊಂಡ. ಸದ್ಯ ಹಿರೇಮಗ ಮನೆಗೆ ಬಂದದ್ದೇ ಆಲೇಗೌಡರಿಗೆ ಐಭೋಗ. ಆಗಲಪ್ಪ, ಮುಂದಿನ ಮಂಗಳವಾರ ಸಿರಾ ಸಂತೆಗೆ ಹೋಗಿ, ಸಂತೆ ಸಾಮಾನೆಲ್ಲಾ ತಂದು ಸಂಜೆಗೆ ಜಾತ್ರೆ ಮಾಡೋಣ ಅಂದರು. ಈ ಮಂಗಳವಾರ ಊರು ತುಂಬಾ ಸಾರಿಸಿದನು. ಮುಂದಿನ ಮಂಗಳವಾರ ಮಾರಿಹಬ್ಬ ಅಂದು ಹೇಳಿಕೆ ಕೊಟ್ಟರು.

ಮಂಗಳವಾರ ಆಡಿದಂಗೆ ಬಂತು. ಆ ಹೊತ್ತು ಹಿಂದಿನ ದಿನವೇ ಏಳು ಗಾಡಿ ಹೂಡಿ ಸಿರಾ ಪಟ್ಟಣಕ್ಕೆ ಹೊರಟರು. ಜಾತ್ರೆಗೆ ಬೇಕಾಗುವ ಸಕಲೊಂಬತ್ತು ಸಾಮಾನುಗಳನ್ನೆಲ್ಲಾ ಕೊಂಡುಕೊಂಡರು. ಗಾಡಿ ಹಿಂದಿರುಗಿಸಿ, ಸಂಜೆ ವೇಳೆಗೆ ಕಳುವಾರಹಳ್ಳಿಗೆ ಸೇರಿದರು. ಅಷ್ಟೊತ್ತಿಗೆ ಊರು ತುಂಬಾ ಜಾತ್ರೆ ಸಡಗರ. ತಮಟೆ ಸದ್ದು, ಕೆಂಗರು ಮಲ್ಲೇಗೌಡ ಹೊಸ ಬಟ್ಟೆಯುಟ್ಟು ಬಾನದ ಅನ್ನ ಹೊತ್ತುಕೊಂಡು ಊರ ಮುಂದೆ ಅರಳಿಮರದ ಬುಡದಲ್ಲಿರುವ ಮಾರಮ್ಮನ ಗದ್ದಿಗೆ ಬಳಿಗೆ ಬರುತ್ತಾನೆ. ಮುಂದೆ ಪಟ್ಟದ ಕ್ವಾಣ, ಗಾವು ಮರಿ, ಧೂಳು ಮರಿ ಮೆರವಣಿಗೆ ಹೊರಟೈತೆ. ಕಳುವರಹಳ್ಳಿ ಗೌಡರ ಮನೆಯಿಂದ ಬಾನ ಬರುತೈತೆ. ಆ ಬಾನವನ್ನು ಹೊನ್ನಟ್ಟಿ ಆಲೇಗೌಡರ ಮಗ ಕೆಂಗರು ಮಲ್ಲೇಗೌಡ ಹೊತ್ತು ನಡೆಮುಡಿ ಹಾಸಿಕೊಂಡು ಒಂದೊಂದೇ ಹೆಜ್ಜೆ ಇಟ್ಟುಕೊಂಡು ಬರುತಾನಣ್ಣ.

ಹೀಗೆ ಊರಮುಂದಕೆ ಬರುತ್ತಿದ್ದಂಗೆ ಜುಂಜಪ್ಪನ ತಂದೆ ಕೆಂಗರು ಮಲ್ಲೇಗೌಡ ಕುಸಿದು ಬಿದ್ದು ಪ್ರಾಣವನ್ನೇ ಬಿಟ್ಟ. ಜನಾದಿ ಜನವೆಲ್ಲಾ ಬಾನ ಇಳಿಸಿ, ಆ ಬಾನದ ಆಲೇಗೌಡರ ಇನ್ನೊಬ್ಬ ಮಗ ಸಿಕ್ಕಾಲಪ್ಪನ ಮೇಲೆ ಹೊರಿಸಿದರು. ಹೆಣಾನ ಎತ್ತಿಕೊಂಡು ಆಲೇಗೌಡರ ಅರಮನೆಗೆ ಬಂದ್ರು. ಮನೆಯೊಳಗೆ ಆಲೇಗೌಡ, ಅವುನ ಹೆಂಡತಿ ದೊಡ್ಡಕ್ಕ ಸಿಕ್ಕಾಲನ ಹೆಂಡತಿ, ದೊಡ್ಡಾಲನ ಹೆಂಡತಿ, ಮಲ್ಲೇಗೌಡನ ಹೆಂಡತಿ ಹೆಣ ತೊಡೇ ಮೇಲೆ ಹಾಕಿಕೊಂಡು ಗೋಳಾಡುತಾರೆ. ಆಗ ಅಲ್ಲಿಗೆ ಬಂದ ದೆಸೆವಂತ ಜುಂಜಪ್ಪ ಹೇಳುತಾನೆ 'ಅದೇಕೆ ಅಳುತೀಯಮ್ಮ? ನೀನು ಮಕ್ಕಳ ಫಲ ಕೇಳುವಾಗ ಪರಮೇಶ್ವರ ಹೇಳಿರಲಿಲ್ವ? ಮೂರು ಜನ ಗಂಡು ಹುಡುಗರ ಹಿಂದೆ ಹೆಣ್ಣು ಬೇಡ, ಹೆಣ್ಣು ಹುಟ್ಟಿದ ವರ್ಷದೊಳಗೆ ನಿನ್ನ ಗಂಡನ ಸಾವು ಅಂಬ್ತಾ? ಆದರೂ ಬೇಕು ಬೇಕು ಅಂಬ್ತಾ ಮಕ್ಕಳ ಫಲ ಪಡೆದೆ. ಅದರಂತೆ ತಂದೆಯ ಸಾವಾಗಿದೆ. ಅದಕ್ಯಾಕೆ ಅಳಬೇಕು' ಎಂದು ಸಮಾಧಾನ ಮಾಡಿದನು. ದಿನ ಬೆಳಗಾಗುತ್ತಿದ್ದಂತೆ ಹೊನ್ನಟ್ಟಿ ಆಲೇಗೌಡ ಗೊಲ್ಲರ ಮುಖಂಡರನ್ನೆಲ್ಲಾ ಕರೆಸಿ ಗೊಲ್ಲರ ಸಂಪ್ರದಾಯದ ಹೇಳಿಕೆ ಪಡೆದು ಮಾರನೋರ ಗೊಲ್ಲರು, ಅಳುವಿನೋರ ಒಕ್ಕಲಿಗರು ಕೂಡಿಕೊಂಡು ಶವಸಂಸ್ಕಾರ ವಿಧಿ ಪೂರೈಸಿದರು. ಹೀಗೆ ಮಾರನೋರ ಗೊಲ್ಲರು ಅಳುವಿನೋರ ಒಕ್ಕಲಿಗರು ಸೇರಿಕೊಂಡು ತಿಥಿನೂ ಮಾಡಿ ಮೂರು ಕೂಳು ಹಾಕಿ ಜುಂಜಪ್ಪನ ತಂದೆ ಕೆಂಗರು ಮಲ್ಲೇಗೌಡನ ತಲೆಗಸೆ ತಿವುದು, ಎದೆ ಮೇಗಳ ಕೂಳುಂಡರು.

ಹೊಂಬಣ್ಣದಾ ದನವು ನಂದಿ ಮಕದ ಚಲುವ
ಅವರೆಯ ಗಿಡಕೆ ಗಮಲಾ ಬಿದ್ದು ಹೋಗುತಾದೆ
ಹಿಡಿಗಲ್ಲು ಪಡೆಗಲ್ಲು ತಕ್ಕೊಂಡು ಹೊಡೆದು
ಕಾವಲಿಗೆ ನಿಂತವಳೆ ದೊಡ್ಡಕ್ಕ ಹೊಲವ

## ಬಡತನಕ್ಕೆ ಹೆದರಿದ ಸಿನ್ನಮ್ಮ

ಕೆಂಗರು ಮಲ್ಲೇಗೌಡ ಸತ್ತೋದನು, ಸಿನ್ನಮ್ಮ ಗಂಡ ಇಲ್ಲದೋಳು ಅಂಬ್ತಾ ಸದರ ಮಾಡಬಾರದು ಅಂಬ್ತಾ, ಹೊನ್ನಟ್ಟಿ ಆಲೇಗೌಡ ಮನೆ ಭಾಗ ಮಾಡಿ ಹಿರೇ ಮಗನಿಗೆ ಕಳುವರಹಳ್ಳಿ ಊರ ಮುಂಭಾಗದಲ್ಲಿ ಹನ್ನೆರಡು ಅಂಕಣದ ದೊಡ್ಡ ಮನೆ ಕಟ್ಟಿಸಿದ. ಕಂಬ ಕಂಬಕ್ಕೆ ಗಿಳಿ ಚಿತ್ತಾರ ಬಿಡಿಸಿದ. ಕಂಸಾಲೆ ಅರಮನೆಯಂಥ ಮನೆಯಲ್ಲಿ ಆಲೇಗೌಡರ ಹಿರಿಸೊಸೆ ಚಿನ್ನಮ್ಮನ್ನ ಬಿಟ್ಟು. ಬೇಕಾದಷ್ಟು ಮುತ್ತು, ರತ್ನ, ವೈಢೂರ್ಯ ಕೊಟ್ಟು ಕಳಿಸಿದ. ಇನ್ನಿಬ್ಬರು ಮಕ್ಕಳಾದ ಸಿಕ್ಕಾಲಪ್ಪ, ದೊಡ್ಡಾಲಪ್ಪರಿಗೂ ಬೇರೆ ಕಳುಹಿಸಿ ಅವುರ ಪಾಲಿಗೆ ಅವುರನ್ನು ಬಿಟ್ಟುಬಿಟ್ಟ. ಸಿನ್ನಮ್ಮ ಮೂರು ಗಂಡುಮಕ್ಕಳ ಮೇಲೊಂದು ಹೆಣ್ಣು ಹೀಗೆ ಐದು ಜನಾನೂ ಸುಖವಾಗಿ ಇರುತ್ತಿದ್ದರು. ಮೂರು ವರ್ಷ ಕಳೆಯಿತು. ಅದೇ ತುಂಬಿದ ಮನೆ ಮಾರಿ ಬಡಿದಂಗಾಗಿ ಖಾಲಿಖಾಲಿಯಾಯಿತು. ತಿನ್ನಕೆ ಉಣ್ಣಾಕೆ ಏನೂ ಇಲ್ಲದಂಗೆ ಆಯಿತು. ಹೀಗೆ ಒಂದಿಷ್ಟು ದಿನ ಇದ್ರು. ಕಾಡಿನಾಗೆ ಕಕ್ಕೆ ಸೊಪ್ಪು, ಬಿಕ್ಕೆ ಸೊಪ್ಪು ತಂದು ಬೇಯಿಸಿಕೊಟ್ಟು ಹಸಿವು ಇಂಗಿಸುತ್ತಿದ್ದಳು ಸಿನ್ನಮ್ಮ. ನಾದಿನಿಯರ ಮನೆಗೂ ಸೇರಕ್ಕಿ, ಸೇರು ಬ್ಯಾಳೆ ಹೀಗೆ ಸಾಲ ಮಾಡಿ ಮಕ್ಕಳ ಹೊಟ್ಟೆ ತುಂಬಿಸುತ್ತಾ ಬಂದಳು.

ಬರುಬರುತ್ತಾ ಬಡತನ ಜಾಸ್ತಿ ಆಯಿತು. ಆದರೂ ಭಂಗ ಹರೀಲಿಲ್ಲ. ಬಡತನ ತೀರಲಿಲ್ಲ. ಒಂದು ದಿನ ಸ್ವಾಮಿ ಜುಂಜಪ್ಪ ಕೇಳಿದ. ಅಮ್ಮ ಪರಮೇಶ್ವರ ಹೇಳಿದ ಮೂರು ಗಂಡಿನಿಂದೆ ಒಂದು ಹೆಣ್ಣು ಬ್ಯಾಡ. ಪಡಬಾರದ ಪಾಡು ಪಡುತೀಯ ಅಂಬ್ತಾ. ನೀನು ಕೇಳಲಿಲ್ಲ. ಈಗ ಬಡತನ ಬಂತು ಅಂತು ಶೋಕನೇ ಮಾಡಿದರೆ ಬಂದ ಭಾಗ್ಯವೇನಮ್ಮ? ನಡಿಯಮ್ಮ ನಾವಿಲ್ಲಿರಬಾರದು. ಸರೀಕರಿಗೆ ನಮ್ಮ ಭಂಗದ ಬಾಳ ತೋರಬಾರದು ಎಂದು ತಾಯಿಗೆ ಹೇಳಿದನು.

## ಮಂಡಗಳ್ಳಿ ಕಾಡಲ್ಲಿ ಚಿನ್ನಮ್ಮನ ವಾಸ

ಜುಂಜಪ್ಪನ ಅಪ್ಪಣೆಯಂತೆ ಚಿನ್ನಮ್ಮ ಮಾವಯ್ಯ ಕಳುಹಿಸಿಕೊಟ್ಟಿದ್ದ ಅರಮನೆಗೆ ಬೀಗ ಹಾಕಿದಳು. 'ಯಾರಾದರೂ ನನ್ನ ತವರುಮನೆಯವರು ಬಂದರೆ ತೆಗೆದ ಬಾಗಿಲು ತೆಗೆದಂತಿರಲಿ. ಆಡೋ ಮಕ್ಕಳು ಆಡುವಂಗಿರಲಿ' ಎಂದು ಪರಮೇಶ್ವರನಲ್ಲಿ ಪ್ರಾರ್ಥನೆ ಮಾಡಿದಳು. ಜುಂಜಪ್ಪ ಹೇಳಿದಂಗೆ ಹಿರಿಯೂರು ಕಾಡಿನ ಭಾಗಕ್ಕೆ ಬಂದರು, ಮಂಡಗಳ್ಳಿ ಕಡಿದು ಒಂದು ಮೂಗುತ್ತದ ತಾವ ಬೇಲಿ ಹಾಕಿದರು. ಮುತ್ತುಗದ ಎಲೆತಂದು ರೊಪ್ಪ ಬಗ್ಗಿಸಿದರು. ಮಡಿಕೆ-ಕುಡಿಕೆ ಹೊಂದಿಸಿಕೊಂಡು ಕಾಡಿನ ಸೊಪ್ಪು ಕೊಯ್ದು ತಂದು ಮಕ್ಕಳಿಗೆ ಬೇಯಿಸಿಕೊಟ್ಟು ತಾನೊಂದು ತುತ್ತು ತಿಂದ್ಲು. ಹೀಗೆ ಕಾಲ ಹಾಕತೊಡಗಿದಳು. ಒಂದು ದಿನ  ಸಿನ್ನಮ್ಮ ಮಾರಣ್ಣ-ಮೈಲಣ್ಣ ಚಿಕ್ಕಳು ಮಾರಕ್ಕನ ತೊಡೆ ಮ್ಯಾಲೆ ಹಾಕಿಕೊಂಡು ಯಂಗಿದ್ದ ಬಾಳು ಯಂಗಾತು? ಹುಟ್ಟುತಾನೆಲೆ ರಾಣಿಯಂಗೆ ಬೆಳೆದೆ. ಮದುವೆಯಾಗುತಾಳೆ, ಗಂಡ ಇದ್ರೂ, ಇಲ್ಲದಂಗೆ ಬಂಜೆ ಅಂಬ್ತಾ ಅನ್ನಬಾರದವರ ಕೈಯಲಿ ಅನ್ನಿಸಿಕೊಂಡೆ. ಪಡಬಾರದ ಪಾಡು ಪಟ್ಟು, ಶಿವನ ಧ್ಯಾನ ಮಾಡಿ ಮಕ್ಕಳನ್ನು ಪಡೆದೆ. ಮುತ್ತಿನಂಥ ಮಕ್ಕಳು ಕೈಯಿಗೆ ಬಂದಮೇಲೂ ನನ್ನ ಬಾಳು ಕಾಡುಪಾಲಾಯಿತು. ಆಡಿಕೊಂಡು ಅನ್ನ ತಿನ್ನ ಬಾಯಿಗೆ ಕಾಡು ಸೊಪ್ಪೇ ಪ್ರಾಪ್ತವಾಯಿತು. ಪಾಪಿ ಸಮುದ್ರ ಹೊಕ್ಕರೂ ಮೊಳಕಾಲುದ್ದ ನೀರು ಅನ್ನುವ ಹಾಗೆ ಆಯಿತು ಎಂದು ದುಃಖಾನೆ ಮಾಡುತಾಳೆ, ಸಂಕಟಾನೆ ಪಡುತಾಳೆ. ಆಟ ಆಡೋಕೆ ಹೊರಗೆ ಹೋಗಿದ್ದ ಸ್ವಾಮಿ ಜುಂಜಪ್ಪಗೆ ಅಮ್ಮ ಕಣ್ಣಾಗೆ ನೀರು ಹಾಕುತ್ತಿರುವುದು ಗೊತ್ತಾತು. ಹೇಳಿದ 'ತಾಯಿ ಪರಮೇಶ್ವರನ ಕೃಪೆ ತಪ್ಪಿದೆ. ಕಾಟಾಚಾರ ಪ್ರಾಪ್ತವಾಗಿದೆ. ಏನೂ ಮಾಡಂಗಿಲ್ಲ. ಆದುದರಿಂದ ತಮ್ಮಂದಿರನ್ನ, ತಂಗಿಯನ್ನು ಮೂರು ತಿಂಗಳುಗಳ ಕಾಲ ನಾನು ಪೋಷಿಸುತ್ತೇನೆ. ನೀನು ನಿನ್ನ ತವರು ಮನೆಯಲ್ಲಿ ತಿಂದು, ಉಂಡು ಕಾಲಹರಣ ಮಾಡು' ಎಂದು ಹೇಳಿದನು. ಆದರೆ ತಾಯಿಕರುಳು, ಚಿನ್ನಮ್ಮ 'ನಾನು ಮಕ್ಕಳನ್ನು ಬಿಟ್ಟು ತವರುಮನೆಗೆ ಹೋಗಲಾರೆ. ಅದು ನನ್ನಿಂದ ಸಾಧ್ಯವೇ ಇಲ್ಲ ಸ್ವಾಮಿ. ಆ ಶಿಕ್ಷೆಯನ್ನು ಮಾತ್ರ ನನಗೆ ಕೊಡಬೇಡ' ಎಂದು ಪ್ರಾರ್ಥಿಸಿದಳು. ತಾಯಿಯ ಮಾತನ್ನು ಕೇಳಿದ ಜುಂಜಪ್ಪ ಅದಕ್ಕೆ ಸಮ್ಮತಿಸಿದನು.

## ಅಡವಿ ಸೊಪ್ಪು ವಿಷವಾಯಿತು

ಕಾಡಿನಲ್ಲಿ ಬೇಲಿ ಹಾಕಿಕೊಂಡು ಅಡವಿ ಸೊಪ್ಪು ತಂದು ಉಪ್ಪು ಕಾರವೂ ಇಲ್ಲದಂತೆ ಬೇಯಿಸಿ ಮಕ್ಕಳಿಗೆ ತಿನ್ನಿಸುತ್ತಾ, ಕಾಲಹರಣ ಮಾಡತೊಡಗಿದಳು. ಅದಕ್ಕೂ ಸ್ವಾಮಿ ಸುಮ್ಮನಾಗಲಿಲ್ಲ. ಬೇಯಿಸಿದ ಸೊಪ್ಪು ವಿಷವಾಯಿತು. ಏನನ್ನೂ ಅರಿಯದ ಮಕ್ಕಳು, ತಾಯಿ ಎಲೆ ಮೇಲೆ ಹಾಕುತ್ತಿದ್ದಂತೆ ಬಾಯಿಗೆ ಹಾಕಿಕೊಂಡವು. ಬಾಯೆಲ್ಲ ಇಕ್ಕಟ್ಟೆ ವಿಷ. ಆಚೆಗೆ ಉಗಿದುಬಿಟ್ಟವು. ಜುಂಜಪ್ಪ ನೋಡಿದನು, ತಾಯಿಗೆ ಹೇಳುತ್ತಾನೆ 'ಏನಮ್ಮ ಬಡತನ ಬರಬಹುದು, ಭಂಗ ಬರಬಹುದು, ಹೆತ್ತ ಮಕ್ಕಳಿಗೆ ವಿಷ ಹಾಕೋ ಬುದ್ದೀನೂ ಬರುತ್ತಾ? ಬಡತನ ಬಂತು ಅಂಬ್ತಾ ಹೆತ್ತ ಮಕ್ಕಳನ್ನು ಸಾಯಿಸಾಕೆ ನೋಡುತೀಯ?' ಅಂತೆಂದು ನುಡಿದನು. ಅಂಗಂತಲೇ ಆಯಮ್ಮ ಗೊಳೋ ಅಂತ ಅತ್ತಳು. 'ಶಿವಶಿವಾ! ಎಂಥಾ ಮಾತು ಅಂಬ್ತಾ ಹೇಳುತೀರಪ್ಪ? ಶಂಕರಾ, ನಾನು ಪ್ರಮಾಣವಾಗಲೂ ಇಂಥ ಕೆಲಸ ಮಾಡಲಿಲ್ಲ ಕಣಪ್ಪ' ಅಂದಳು. 'ಅಡವಿ ಸೊಪ್ಪು, ಮಡುವಿನ ನೀರಾಗೆ ಮಕ್ಕಳು ಬೆಳಕಾತಾವೆ. ಯಾರ ಹಂಗೂ ಬ್ಯಾಡ ಅಂಬ್ತಲೇ ನಾನು ಕಾಡಿಗೆ ಬಂದೆನಪ್ಪ. ನಾನು ಮಕ್ಕಳ ಸಾಯಿಸಿ ಹೊಟ್ಟೆ ಹೊರೆಯೋ ಮಗಳಲ್ಲಪ್ಪ. ನಿಮ್ಮ ಪಾದವೇ ಸಾಕ್ಷಿ' ಅಂದಳು. ಅಲ್ಲಿಗೆ ಸುಮ್ಮನಾದನು.

ಮಾರ-ಮೈಲಣ್ಣ ತಾಯಿ ಆಳ ಕಳಿಸ್ಯವಳೇ  
ರಾತರಿ ಕನಸು ಬಿತ್ತು ನನಗೆ ...  
ತಂಗಡೀ ಗಿಡವೇ ಕಿತ್ತುಕೊಂಡು ಬರುವೋದು  
ಕೆಂದೂಳಿಗಾಳಿ ಬರುವು ಬಂದಂಗೆ ಕಾಣೋದು ।

## ಜವಗೋನಹಳ್ಳಿ ಗುಡ್ಡದಾಗೆ ಸೌದೆ ಕಡಿದಳು

ಸಿನ್ನಮ್ಮ ಅಡವಿ ಅರಣ್ಯದಾಗೆ ಜೀವನ ಮಾಡ್ತಾ ಇರಬೇಕಾದರೆ ಮಕ್ಕಳು ಅನ್ನ ಕಂಡು ಅಪಾರ ದಿನವಾಯ್ತು. ಕಾರ್ ಕಾರ್ ಅಂಬ್ತಾ ಅತ್ತವು. ಕಳ್ಳು ಕಟ್ಟಿದಂಗಾಯಿತು. ಆಗ ಸೊಪ್ಪು ತಿಂದು ಬದುಕಾದು ಕಷ್ಟ ಅಂದು ಸಿನ್ನಮ್ಮ ಸೌದೆ ಕಡಿದು, ಹೊರೆ ಮಾಡಿ ಹಿರಿಯೂರು ಪೇಟೆಗೆ ಕೊಂಡೊಯ್ದು ಮಾರಿದಳು. ಅದರಿಂದ ಬಂದ ಕಾಸಾಗೆ ಒಂದಿಷ್ಟು ಅಕ್ಕಿ, ಬೇಟೆ, ಸ್ವಾಮಿ ಜುಂಜಪ್ಪನಿಗೆ ಹಸಿ ಕಡ್ಲೆ ತಗೊಂಡು ಬಂದಳು. ಮಕ್ಕಳಿಗೆ ಅನ್ನ ಬೇಯಿಸಿ ಹಾಕಿ, ಸ್ವಾಮಿ ಜುಂಜಪ್ಪನಿಗೆ ನೆನೆ ಅಕ್ಕಿ, ನೆನೆಗಡಲೆ ಮಾಡಿ ಕೊಟ್ಟಳು. ಸ್ವಾಮಿಗೆ ಬೆಂದದ್ದು, ಬಸದ್ದು ಆಗೋದಿಲ್ಲ. ಆದ್ದರಿಂದ ಹಾಗೆ ಮಾಡಿದಳು. ಹೀಂಗೆ ಸ್ವಲ್ಪ ದಿನ ಕಳೆದಳು. ಒಂದು ದಿನ ಎಂದಿನಂತೆ ಸೌದೆಗೆ ಹೋದಳು. ಚುಪ್ಪು ಕೊಡಲಿಯಿಂದ ಕೊಂಬೆ ಕಡಿದು ಹೊರೆ ಕಟ್ಟಿ ಇನ್ನೇನು ಸೌದೆ ತಲೆ ಮ್ಯಾಲೆ ಇಟ್ಟುಕೋಬೇಕು ಅನ್ನುವಷ್ಟರಲ್ಲಿ ಮಾಯಾಕಾರ ಜುಂಜಪ್ಪನ ಕೃಪೆಯಿಂದ ಮಾಯದ ಬಿರುಗಾಳಿ ಬೀಸಿತು. ಸಿನ್ನಮ್ಮನದು ಮಾರುದ್ದ ಜಡೆ. ಒಣಗಿ, ಎಣ್ಣೆಯಿಲ್ಲದೆ ಸೀಳು ಸೀಳಾಗಿತ್ತು. ಆಗ ಗಾಳಿ ಬೀಸಿದೇಟಿಗೆ ತಲೆಯಾಗಿನ ಕೂದಲೆಲ್ಲಾ ಕಿತ್ತು ಹಾರಿಹೋದವು. ತಲೆ ಅನ್ನೋದು ಹಿತ್ತಾಳೆ ಚೊಂಬು ಆದಂಗೆ ಆಯಿತು. ಏನು ಮಾಡಬೇಕೆಂಬುದೇ ತಿಳಿಯದೆ ಚಿನ್ನಮ್ಮ ಬೋಳು ತಲೆ ಮೇಲಿರೋ ಕಟ್ಟಿದ್ದ ಸೌದೆ ಹೊರೆಯನ್ನು ಇಟ್ಟುಕೊಂಡು ಹಿರಿಯೂರು ಪೇಟೆಗೆ ಬಂದು ಮಾರಿ ಅಕ್ಕಿ, ಬೇಳೆ, ಹಸಿ ಕಡ್ಲೆ ತಗೊಂಡು ಸೆರಗಿನಾಗೆ ಗಂಟು ಕಟ್ಟಿಕೊಂಡು ಬೇಗ ಬೇಗ ಬಂದ್ಲು. ಮಕ್ಕಳಿಗೆ ತಾಯಿ ಕೂದಲೆಲ್ಲಾ ಉದುರಿ ಹೋಗಿದ್ದು ಕಂಡು ಹೆದರಿಕೆ ಆಯಿತು. ಎಲ್ಲಾ ಕಥೆ ಹೇಳಿದಳು. ಬದುಕು ಹಿಂಗೇ ನಡೆಯಿತು. ಒಂದು ದಿನ ಕಾಡಿನಾಗೆ ಸೌದೆ ಹೊರೆ ಕಟ್ಟುವಾಗ ಉಟ್ಟಿದ್ದ ಸೀರೆ ಉದುರಿ ಹೋಗಿಬಿಡ್ತು. ಬಗ್ಗಿ ತಗೊಳ್ಳೋ ಹೊತ್ತಿಗೆ ಬೆಂಕಿ ತಗುಲಿದಂತಾಗಿ ದಗದಗ ಅಂತಾ ಉರಿದುಬಿಡ್ತು. ಪರಮೇಶ್ವರಾ ಎಂಥ ಕಷ್ಟ ಕೊಟ್ಟೆ ಶಿವನೆ. ಉಟ್ಟ ಸೀರೆನೂ ಕಿತ್ತುಕೊಂಡು ಹುಟ್ಟು ನಿರ್ವಾಣ ಮಾಡಿಬಿಟ್ಟೆ ಅಂಬ್ತಾ ಯೋಚನೆ ಮಾಡುತ್ತಿರುವಾಗ ದೂರಕ್ಕೆ ಒಂದು ಮುತ್ತುಗದ ಮರ ಎಲೆ ಬಿಟ್ಟು ತೂಗುತ್ತಿತ್ತು. ಆ ಮರದ ಎಲೆಗಳನ್ನು ಕಿತ್ತು ಅದನ್ನು ಹಂಚಿಕಡ್ಡಿಯಿಂದ ಪೋಣಿಸಿಕೊಂಡು ಸೀರೆ ತರ

ಮಾಡಿಕೊಂಡು ಉಗುಣಿ ಬಳ್ಳಿ ಕಿತ್ತು ಮೈತುಂಬಾ ಸುತ್ತಿಕೊಂಡು, ಹೊರೆ ಕಟ್ಟಿದ ಸೌದೆ ಹೊತ್ತುಕೊಂಡು ವಿಕಾರ ರೂಪದಲ್ಲಿ ಹಿರಿಯೂರು ಪ್ಯಾಟೆಗೆ ಬರುತ್ತಾಳೆ. ಸೌದೆ ಮಾರಿ ಬಂದ ಹಣದಲ್ಲಿ ರೇಷನ್ ತಕ್ಕೊಂಡು ಅಡವಿಗೆ ಬಂದಳು. ತಾಯಿಯ ಬದಲಾದ ರೂಪ ಕಂಡು ಮಕ್ಕಳು ಹೆದರಿದರು, ಅತ್ತರು, ಕರೆದರು. ತಾಯಿ ಶಿವನ ಕೃಪೆ ಇದ್ದಂಗೆ ಆಗಲಿ, ಅಳಬ್ಯಾಡಿರಿ ಅಂಬ್ತಾ ಸಮಾಧಾನ ಮಾಡಿದಳು. ಇಂಥ ಭಂಗ, ಬಡತನದಾಗೆ ಯಂಗೋ ಸಂಸಾರ ಸಾಗಿಸುತ್ತಾಳೆ. ಒಂದು ದಿನ ಕಾಡಿನಾಗೆ ಸೌದೆ ಕಡಿಯುವಾಗ ಮುತ್ತು ರತ್ನದ ವ್ಯಾಪಾರಕ್ಕೆ ಅಂಬ್ತಾ ಹೋಗುತ್ತಿದ್ದ ಚಿನ್ನಮ್ಮನ ಅಣ್ಣಂದಿರು ಕಂಡರು. ಇದ್ಯಾರಮ್ಮ ಈಯಮ್ಮ ಹಿಂಗಿದೆ ಅಂಬ್ತಾ ಯೋಚನೆ ಮಾಡಿದರು. ಅವುಳು ಸಿನ್ನಮ್ಮನ ತರನೇ ಅವಳೆ. ಇರಲಿ ಒಂದು ಮಾತು ಕೇಳೇ ಬಿಡಾನ ಅಂದು ಮಾತಾಡಿಸಿದರು.



## ತವರು ಸೇರಿದ ಚಿನ್ನಮ್ಮ

ಕಾಡಿನಾಗೆ ಕಾಡುಪಾಪದಂಗೆ ಬದುಕುತ್ತಿದ್ದ ತಂಗಿ ಚಿನ್ನಮ್ಮನನ್ನು ಕಂಡ ಅಣ್ಣಗಳು ಗುರುತಿಸಿದರು, ಮಾತಾಡಿಸಿದರು. ಓಡೋಗಿ ಒಂದು ಮರದ ಪೊಟರೆ ಸೇರಿಕೊಂಡು ದುಃಖಿಸಿದಳು. ಆಗ ಅಣ್ಣಗಳು ತಾವು ಸುತ್ತಿದ್ದ ರುಮಾಲೆ ಬಿಚ್ಚಿ ತಂಗಿಗೆ ಕೊಟ್ರು. ಉಟ್ಟುಕೊಂಡು ಈಚೆಗೆ ಬರಾಕೆ ಹೇಳಿದರು. ಅಂಗೆ ಚಿನ್ನಮ್ಮ ಈಚೆಗೆ ಬಂದ್ಲು. ಅಣ್ಣಗಳು ತಂಗಿಯ ಕಥೆ ಕೇಳಿ ಮರುಗಿದರು. ತಮ್ಮ ಊರಿಗೆ ಬಲವಂತವಾಗಿ ಕರೆದುಕೊಂಡು ಬಂದ್ರು. ತೌರ ಔತಣ ನೀಡಿದರು. ಬಗೆಬಗೆಯ ಮಾತಾಡಿ, ತಂಗಿಗೆ ಬಂದ ಬಡತನದ ಮೇಲೆ ಮರುಗಿದರು. ಗಂಡ ಸತ್ತ ಮೇಲೆ ತೌರಿಗೆ ಕರೆದುಕೊಂಡು ಬಂದ ಉಪಚಾರ ಮಾಡಲಾಗದಿದ್ದಕ್ಕಾಗಿ ಮರುಗಿ ಮುತ್ತೈದೆತನದ ಗೌರವ ನೀಡಿದರು. ಕರೆ ಸೀರೆ ಉಡಿಸಿ, ಮಡಿಲಕ್ಕಿ ತುಂಬಿ ಕಳಿಸಿಕೊಟ್ಟರು.

ಮರಳಿ ತನ್ನ ಕಾಡಿಗೆ ಚಿನ್ನಮ್ಮ ಓಡೋಡಿ ಬಂದಳು. ಬರುವಾಗ ಸ್ವಾಮಿ ಜುಂಜಪ್ಪ ಈ ಹಿಂದೆಯೇ ಒಂದು ಕರಾರು ಹಾಕಿದ್ದನು. ಅದೇನೆಂದರೆ ಕಣ್ಣಿಗೆ ಬೆಳಕು ಇದ್ದಾಗಲೇ ತಮ್ಮ ಗೂಡು ಸೇರಿಕೋಬೇಕು. ಒಂದು ವೇಳೆ ಕತ್ತು ಆದ ಮೇಲೆಯೇ ರಾತ್ರಿ ಕಳೆದು ಬೆಳಕಾದ ಮೇಲೆ ಗೂಡಿಗೆ ಬಂದರೆ ಗೂಡಿಂದ ಹೊರಗಿರಬೇಕು. ಸೂರ್ಯ ಮುಳುಗಿದ ಮೇಲೆ ಗೂಡಿನೊಳಗೆ ಕಾಲಿಕ್ಕಿದರೆ ನಾನು ಮಗನೂ ಅಲ್ಲ, ನೀನು ತಾಯಿನೂ ಅಲ್ಲ ಎಂದು ಈ ಹಿಂದೆಯೇ ತಾಕೀತು ಮಾಡಿದ್ದನು. ಈಗ ದಾರಿಯಲ್ಲಿ ಅದನ್ನು ಚಿನ್ನಮ್ಮ ಸ್ಮರಣೆ ಮಾಡಿಕೊಂಡಳು. ಆದರೂ ಮಕ್ಕಳೋ ಅಂಬೋ ಕಿಚ್ಚು ಬಿಡಬೇಕಲ್ಲ. ಗಾಸಿಯಾಗಿಯೇ ಬಂದಳು. ಬಂದು ಕಳ್ಳೆ ಬಾಗಿಲಾಗೆ ನಿಂತು ಮಾರಣ್ಣ, ಮೈಲಣ್ಣ ಅಂಬ್ತಾ ಹೂಲಿಕ್ಕಿದಳು.

# ಕಟಕಟೆಯಲ್ಲಿ ಸಿನ್ನಮ್ಮ

ತೌರುಮನೆಯಿಂದ ಸಿನ್ನಮ್ಮ ಬಿಳಿಸೀರೆ ಉಟ್ಟುಕೊಂಡು ಅಂಗು ದಾರ ಕಟ್ಟಿಕೊಂಡು, ಗೊಲ್ಲಗಡಗ ಹಾಕಿಕೊಂಡು, ಕಾಸಗಲ ಕುಂಕುಮ ಇಟ್ಟುಕೊಂಡು ಕೆನ್ನೆ ತುಂಬಾ ಅರಿಶಿನ ಬಳಕೊಂಡು ಓಡೋಡಿ ಬಂದ್ಲು. ಸ್ವಾಮಿ ಜುಂಜಪ್ಪ ಅಷ್ಟು ಹೊತ್ತಿಗಾಗಲೇ ಕೆಂಡಾಮಂಡಲವಾಗವನೆ. ತಮ್ಮಂದಿರಾದ ಮಾರಣ್ಣ, ಮೈಲಣ್ಣ, ಚಿಕ್ಕವಳು ಮಾರಕ್ಕರ ಕರಕೊಂಡು ಒಂದು ಮರ ಏರಿ ಕುಂತುಬಿಟ್ಟವನೆ. ಪಾಪ ಬಂದ್ಲು ಸಿನ್ನಮ್ಮ. ಕಳ್ಳಿ ಸರಿಸಿ ಒಳಗೆ ಹೋಗಿ ನೋಡುತಾಳೆ, ಮಕ್ಕಳಿಲ್ಲ. ಎಲ್ಲಿಗೆ ಹೋದರು? ಕಾಡೆಂಬ ಕಾಡು, ಹುಲಿ-ಚಿರತೆ ಪಾಲಾದವ್ರೋ, ಇಲ್ಲ ನಮ್ಮ ಅಮ್ಮ ನಮ್ಮನ್ನ ಬಿಟ್ಟು ಹೋದಳು ಅಂಬ್ತಾ ಕಾಡಾಗೆ ಅಲೆದು ಎಲ್ಲಿಯಾದರೂ ತಪ್ಪಿಸಿಕೊಂಡವಾ? ಯಾರಾದರೂ ಅನಾಥ ಮಕ್ಕಳು ಅಂಬ್ತಾ ಕರೆದುಕೊಂಡು ಹೋಗಿ ಕುರಿ-ದನ ಕಾಯಾಕೆ ಸೋಪತಿ ಮಾಡಿಕೊಂಡರಾ ಅಂತಾ ಗೋಳಾಡಿದಳು. ಅತ್ತಳು, ಕರೆದಳು. ಯಾರದೂ ಸದ್ದೇ ಇಲ್ಲ. ಕೊನೆಗೆ ಸ್ವಾಮಿ ಜುಂಜಪ್ಪನೇ ಮಾತಾಡಿದನು. 'ರಾತ್ರಿಯೆಲ್ಲಾ ಎಲ್ಲಿಗೆ ಹೋಗಿದ್ದೆ? ನಾನು ಮೊದಲೇ ಹೇಳಿರಲಿಲ್ವಾ ಹಗಲು ಹೊತ್ತು ಎಲ್ಲಿಗಾರ ಹೋಗು, ಸೂರ್ಯ ಮುಳುಗೋ ಹೊತ್ತಿಗೆ ಗೂಡು ಸೇರಿಕೋಬೇಕು. ಇಲ್ಲದಿದ್ದರೆ ನಾನು ಮಗನೂ ಅಲ್ಲ, ನೀನು ತಾಯಿನೂ ಅಲ್ಲ' ಅಂದು ಹೇಳಿದ್ದನ್ನು ನೆನಪಿಸಿದನು.

ಪಾಪ ಸಿನ್ನಮ್ಮ ಪರದೇಶಿ ಮುಂಡೇದು, ಇದ್ದುದು ಇದ್ದಂಗೆ ಹೇಳಿತು. ಅಣ್ಣಂದಿರು ಬ್ಯಾಡ ಬ್ಯಾಡಂತಂದ್ರೂ ಆದ್ರೂನೆ ಕರೆದುಕೊಂಡು ಹೋಗಿದ್ದು, ತೌರು ಸೀರೆ, ಮಡಿಲಕ್ಕಿನೆಲ್ಲಾ ತೋರಿಸಿತು. ಜುಂಜಪ್ಪ ಬಿಲ್‌ಕುಲ್ ಒಪ್ಪಲಿಲ್ಲ. 'ನೀನು ದಿನಾ ಸೌದೆ ಮಾರೋಕೆ ಹಿ ರಿಯೂರು ಪ್ಯಾಟೆಗೆ ಹೋಗುತೀಯ. ಅಲ್ಲೇ ಯಾರೋ ಕ್ವಾಂಟಿಗರನ್ನು ಮಡಿಕಂಡು, ರಾತ್ರಿಯೆಲ್ಲಾ ಅವುನ ಮಗ್ಗುಲಾಗೆ ಮಲಗಿ ಈಗ ಬಂದಿದ್ದೀಯ. ಹೋಗಮ್ಮ ಆಯಪ್ಪನ ತನಕೆಯಾ. ನಮ್ಮನ್ನು ಮುಟ್ಟಕೂಡದು' ಅಂದು ಆರ್ಭಟಿದನು. ಚಿನ್ನಮ್ಮ ಏಟು ಸತ್ಯ ಹೇಳಿದರೂ ಕೇಳಲಿಲ್ಲ. ಮಕ್ಕಳನ್ನು ಎತ್ತಿಕೊಂಡು, ಆಲದ ಮರ ಹತ್ತಿ ಕೂತನು, ಕೆಳಕೆ

ಇಳೀಲೇ ಇಲ್ಲ. ಚಿನ್ನಮ್ಮನೇ ದೇವತೆಗಳ ಪ್ರಾರ್ಥನೆ ಮಾಡಿದಳು, ಬಗ್ಗಲಿಲ್ಲ. ಕೊನೆಗೆ ಜುಂಜಪ್ಪ ಹೇಳಿದ 'ತಾಯಿ ಮಕ್ಕಳ ನ್ಯಾಯ ನಡೆದು ಕಳುವಾರಹಳ್ಳಿ ದಿಣ್ಣೆಗೆ ಕುಲವಸ್ತರು, ಏಳೂರು ಗೌಡ, ಶ್ಯಾನುಭೋಗ, ಪಟೇಲರನ್ನು ಕರೆಸಿ, ಮಲಗದಂತೆ ಕುಂತು ಕುಂತಾಗೆ ಹನ್ನೆರಡು ತಿಂಗಳು ನ್ಯಾಯ ನಡೆಯಬೇಕು. ಅದರಲ್ಲಿ ಗೆದ್ದರೆ ನಿನ್ನ ಸತ್ಯ ನಾನು ಒಪ್ಪಿಕೋತೀನಿ. ಇಲ್ಲದಿದ್ರೆ ನೀನು ತಾಯಿನೂ ಅಲ್ಲ, ನಾವು ಮಕ್ಕಳೂ ಅಲ್ಲ' ಅಂದುಬಿಟ್ಟ.

ಸರಿ, ಈ ವಿಚಾರ ತಾತ ಹೊನ್ನಟ್ಟಿ ಆಲೇಗೌಡರ ತನಕ ಹೋಯಿತು. ಪ್ರಪಂಚಕ್ಕೆಲ್ಲಾ ಸಾರಬೇಕು. ತಾಯಿ-ಮಕ್ಕಳ ನ್ಯಾಯ ಕಳುವೋರಹಳ್ಳಿ ದಿಣ್ಣೆಗೆ ನಡೆಯಬೇಕು. ಎಲ್ಲರನ್ನೂ ಕರೆಸಬೇಕೆಂದು ಜುಂಜಪ್ಪ ತಾತನಿಗೆ ಹೇಳಿದ. ಜುಂಜಪ್ಪನಿಗೆ ಹೊನ್ನಟ್ಟಿ ಆಲೇಗೌಡ ಪರಿಪರಿಯಾಗಿ ಕೇಳಿಕೊಂಡ. ಚಿನ್ನಮ್ಮ ಸತ್ಯವಂತೆ, ಪತಿವ್ರತೆ. ಅವುಳ ಮೇಲೆ ಆರೋಪ ಬೇಡಪ್ಪ ಅಂಬ್ತಾ ಬೇಡಿಕೊಂಡ. ಆದರೂ ಕೇಳಲಿಲ್ಲ. ಜನವಾದಿ ಜನರೆಲ್ಲಾ ನ್ಯಾಯಕ್ಕೆ ಸೇರಿಸೋ ಕೆಲಸ ಮಾಡಲು ಹೊನ್ನಟ್ಟಿ ಆಲೇಗೌಡ ಒಪ್ಪಿಕೊಂಡ.



# ತಾಯಿ-ಮಕ್ಕಳ ನ್ಯಾಯ

ಆಲೇಗೌಡರ ಮಾತಿಗೂ ಸ್ವಾಮಿ ಜುಂಜಪ್ಪ ಬಗ್ಗಲಿಲ್ಲ. ತಾಯಿಂದ ಅಪವಾದ ಆಗಿದೆ. ತಪ್ಪಿಗೆ ಶಿಕ್ಷೆ ಆಗಲೇಬೇಕು. ಬೇಗ ನ್ಯಾಯಕ್ಕೆ ಕರೆಯಬೇಕೆಂದು ಜುಂಜಪ್ಪ ಅಜ್ಜನಿಗೆ ಹೇಳಿದನು. ಅದರಂತೆ ಸೋಮವಾರದ ದಿನ ಸೂರ್ಯ ಹುಟ್ಟುತ್ತಲೇ ಸುತ್ತಲ ಏಳು ಹಳ್ಳಿ ಗೌಡ, ಶ್ಯಾನುಭೋಗರು, ಕೈವಾಡದವರು, ಕಟ್ಟೇಮನೆ ಯಜಮಾನರು, ಪೂಜಾರಿಗಳು ಎಲ್ಲರೂ ಬರಬೇಕೆಂದು ಆಲೇಗೌಡರು ಕರೆಕಳಿಸಿದರು. ಅದರಂತೆ ಸೋಮವಾರ ಬಂತು. ತಾಯಿ-ಮಕ್ಕಳ ನ್ಯಾಯ ಅದೇನಿರಬಹುದೆಂದು ಕೊಡಲು-ಕೇಳಲು ಅಪಾರ ಜನ ಕಲೆತರು. ಹೊನ್ನಟ್ಟಿ ಆಲೇಗೌಡ ಕರಿ ಕಂಬಳಿ ಜಾಡಿ ಹಾಸಿದ. ನಡುವೆ ಒಂದು ಗದ್ದಿಗೆ ಮಾಡಿದ. ಹನ್ನೆರಡು ಸೇರು ಅಡಿಕೆ, ಮೂರು ಪೆಂಡಿ ವೀಳೆದೆಲೆ ಅದರ ಮೇಲಿಕ್ಕಿದ. ತಾಯಿ ಚಿನ್ನಮ್ಮನೂ, ಮಗ ಜುಂಜಪ್ಪನೂ ಕರೆಸಿದರು. ಇಬ್ಬರನ್ನೂ ಒಂದೊಂದು ಮೂಲೆಗೆ ಕೂಡಿಸಿದರು. ಇಬ್ಬರಿಗೂ ವೀಳ್ಯಕೊಟ್ಟು ಕೇಳಿದರು.

ಸ್ವಾಮಿ ಜುಂಜಪ್ಪ ನೀನು ನೋಡಿದರೆ ಮಗ, ಚಿನ್ನಮ್ಮ ನಿನ್ನ ಹೆತ್ತ ತಾಯಿ. ತೌರು ಮನೆಗೆ ಹೋಗವಳೆ. ನೀನು ಇಲ್ಲ ಅಂಬ್ತೀಯ. ಇದರ ಮರ್ಮ ಯಾರಿಗೂ ತಿಳೀವಲ್ದು. ಏನು ಸ್ವಾಮಿ ಇದರ ಗುಟ್ಟು? ಈಗ ನಾವು ಸತ್ಯ ಕಂಡುಹಿಡಿಯೋದೆಂಗೆ ಅಂದ್ರು. ಆಗ ಜುಂಜಪ್ಪ ದೊಡ್ಡೋನು ಹೇಳಿದ 'ಕೇಳ್ರಿ ಪ್ರಜೆಪಾಲಕರೆಲ್ಲ, ಗೌಡ ಶ್ಯಾನುಭೋಗರೆಲ್ಲ. ನಮ್ಮ ಕುಲಾವಳಿ ಮೀರಿ ನಮ್ಮ ಅವ್ವ ನಮ್ಮನ್ನು ಆಡಂದಡವೀಗೆ ಬಿಟ್ಟು ಹಿರಿಯೂರು ಪ್ಯಾಟೆಗೆ ತಂಗಬಹುದ? ನಮ್ಮ ಗೊಲ್ಲಾಳಿಕೆಯಂತೆ ಒಂದು ಹೆಂಗ್ಸು ಹೊತ್ತು ಮುಳುಗಾದುಕೆ ಮುಂಚೆ ಮನೆ ಸೇರಿಕೋಬೇಕು. ರಾತ್ರಿಯೆಲ್ಲಾ ಬೇರೆಯವರ ಜೊತೆಗಿದ್ದು ಬೆಳಕಾದ ಮೇಲೆ ನಮ್ಮವ್ವ ನಮ್ಮತಾಕೆ ಬಂದವಳೆ. ಅವುಳು ಪತಿವ್ರತೆಯಾಗಿದ್ರೆ ಒಂದು ಒಣಕೆ ತರಿಸಿ, ಅದನ್ನು ಒಂದೇಟಾಕಿ ಎರಡು ಹೋಳಾಗಿ ಸೀಳಿ, ಆ ಸೀಳಿನ ಪಾಳಿನೊಳಗಿಂದ ಒಂದು ಮುಕ್ಕಾಗದೆ ಉದ್ದನೆಯ ನಾರು ತೆಗೆಯಬೇಕು. ಆಗ ನಿನ್ನ ಸೊಸೆ ಪತುರತೆ ಅಂಬ್ತಾ ಒಪ್ಪಬಹುದು' ಅಂದನು. ಇದು ಒಳ್ಳೆಯ ಕತೆ. ಆಯಿತಲ್ಲಪ್ಪಾ ಅಂತಾ ತಲೆ

ಕೆರಕೊಂಡ ಆಲೇಗೌಡ. ಊರಿಂದ ಒಂದು ಆರು ಮೊಳದ ಒಣಕೆ ತರಿಸಿದ. ಅದಕ್ಕೂ ಪೂಜೆ ಮಾಡಿ ವಿಭೂತಿ ಧರಿಸಿದ. ತಾಯಿ ಚಿನ್ನಮ್ಮನ್ನ ಸಭಾ ಮಧ್ಯಕ್ಕೆ ಕರೆದು ಈ ಒಣಕೆಲಿ ಉದ್ದಕ್ಕೆ ನಾರು ತೆಗೆಯಬೇಕೆಂದು ಅಪ್ಪಣೆ ಮಾಡಿದ.

ತಾಯಿ ಚಿನ್ನಮ್ಮ ಹೆದರಲಿಲ್ಲ, ಗಾಬರಿನೂ ಆಗಲಿಲ್ಲ. ಪರಮೇಶ್ವರನೇ ಇಷ್ಟೆಲ್ಲಾ ಶಿಕ್ಷೆ ಕೊಟ್ಟಿರಬಹುದೆಂದು ತಾಯಿ ಗೌರಸಂದ್ರದ ಮಾರಕ್ಕನ ನೆನೆದಳು. ಮೊಲೆ ಸೆರಗು ಕಟ್ಟಿಕೊಂಡಳು, ತಲೆಗೆ ಗಂಟು ಹಾಕಿಕೊಂಡಳು. ಬಲಗೈಲಿ ಒಣಕೆಗೆ ಶರಣು ಮಾಡಿಕೊಂಡು ಮೇಲಕ್ಕೆ ಎತ್ತಿಕೊಂಡು ಒಣಕೆನಾ ನೆಲಕ್ಕೆ ಬಡಿದಳು. ಮಧ್ಯಕ್ಕೆ ಸೀಳಿಕೊಂಡು ಒಳಗಿಂದ ಒಂದು ಸಣ್ಣ ನಾರು ತೆಗೆದು ಎಲ್ಲರಿಗೂ ತೋರಿಸಿ ಕರಿ ಕಂಬಳಿ ಗದ್ದಿಗೆ ಮೇಲಿಕ್ಕಿದಳು. ಎಲ್ಲರಿಗೂ ಆಶ್ಚರ್ಯವಾಯಿತು. ಒಣಸೌದೆಗೆ ನಾರು ತೆಗೆಯಾದು ಅಂದ್ರೆ ಸಾಮಾನ್ಯ ಸಂಗತಿ ಅಲ್ಲವೇ ಅಲ್ಲ. ಇದು ಸತ್ಯದ ಮಾತು. ದೇವರ ವರ ಅಂದ್ರು. ತಾಯಿ ಚಿನ್ನಮ್ಮ ಸತ್ಯವಂತೆ, ಪತಿವ್ರತೆ ಒಪ್ಪಿಕೊಳ್ಳಪ್ಪ ಅಂದ್ರು.

ಜುಂಜಪ್ಪ ನಗುತ್ತಾ ಹೇಳಿದ 'ನಾನು ಇದನ್ನ ಒಪ್ಪಾಕಿಲ್ಲ. ನಮ್ಮ ತಾಯಿಗೆ ಇಲ್ಲಿ ಮೂರು ತಿಂಗಳಿಂದ ಒಂದೇ ಸಮನೆ ಸೌದೆ ಮಾರಾಕೆ ಹಿರಿಯೂರು ಪೇಟೆಗೆ ಹೋಗುತ್ತಿದ್ದಳು. ಆಗ ಇಂಥ ಯಕ್ಷಿಣಿ, ಮೋಡಿ ಆಟನ ಕಲಿತವಳೆ. ಈ ಪ್ರಕಾರನೇ ಈಗ ಒಣಗಿದ ಒನಕೆಯಿಂದ ನಾರು ತೆಗೆದಿರುವುದು. ಇದು ಕಣ್ಣುಕಟ್ಟು. ನಾನು ಒಪ್ಪಲ್ಲ. ತಾನು ಪತಿವ್ರತೆ ಆಗಿದ್ರೆ ಇನ್ನೊಂದು ಸತ್ಯ ತೋರಿಸಬೇಕು' ಅಂದನು. ಪ್ರಜೆಗಳು 'ಅದೇನು ಹೇಳು ಸ್ವಾಮಿ' ಅಂದರು. ಆಗ ಹೇಳುತಾನೆ ಜುಂಜಪ್ಪ 'ನಮ್ಮ ತಾಯಿ ಮೂಡುಗಡೆಕಿರುವ ಕಳುವರಹಳ್ಳಿ ಕಲ್ಯಾಣಿಗೆ ಹೋಗಿ ತೂತು ಹಿಡಿದ ಜರಡಿ ತಕ್ಕೊಂಡು, ಆ ತೂತು ಜರಡಿ ಒಳಗೆ ನೀರು ಹಿಡಕೊಂಡು ಬಂದು ನನ್ನ ಪಾದದ ಮೇಲೆ ಹಾಕಿದರೆ ಮಾತ್ರ ನಾನು ಒಪ್ಪಿಕೋತೀನಿ' ಅಂದನು. ಜನಾದಿ ಜನವೆಲ್ಲಾ ದಿಗಿಲ್ ಬಿದ್ರು. 'ಆಯಿತು' ಅಂತಾ ಆಯಮ್ಮ ಒಪ್ಪಿಕೊಂಡು ಅದರಂತೆ ಅನುವಾಯಿತು.

ಚಿನ್ನಮ್ಮ ಕಳುವಾರಹಳ್ಳಿ ಕಲ್ಯಾಣಿಗೆ ಬಂದ್ಲು. 'ದೇವರೇ ಪರಮಾತ್ಮ, ಗೌರಸಂದ್ರ ಮಾರಿ, ನಾನು ಸತ್ಯವಂತೆ ಆಗಿದ್ರೆ, ನನ್ನ ಮಗ ನನ್ನ ಮನೆಯೊಳಗೆ ಬಿಟ್ಟುಕೊಳ್ಳಲಿ. ನನ್ನ ಮಕ್ಕಳು ನನ್ನ ಕೈ ಸೇರಲಪ್ಪ' ಅಂದು ತೂತು ಜರಡಿಯಿಂದ ಕಲ್ಯಾಣಿಗೆ ನೀರು ತುಂಬಿಸಿ ಮೇಲಕ್ಕೆ ಎತ್ತಿ ತಲೆಯ ಮೇಲೆ ಇಕ್ಕಿಕೊಳ್ಳುವ ಕಾಲಕ್ಕೆ ಸರಿಯಾಗಿ ಮಾಯಾಕಾರ ಶಿವ ಏಳು ಮಾರುದ್ದ ಸರ್ಪವಾಗಿ ಬಂದು ತೂತು ಜರಡಿ ಒಳಗೆ ಕಾಣದಂತೆ ಮಲಗಿಬಿಡ್ತು. ಜರಡಿ ತೂತೆಲ್ಲ ಮುಚ್ಚಿಕೊಂಡು ಚಿನ್ನಮ್ಮ ತುಂಬಿದ ಜರಡಿ ತೆಗೆದು, ತಲೆ ಮ್ಯಾಲೆ ಇಟ್ಟುಕೊಂಡರೆ ಒಂದು ಹನಿನೂ ನೀರು ತೊಟ್ಟಿಕ್ಕಲಿಲ್ಲ. ಹೆಜ್ಜೆ ಮೇಲೆ ಹೆಜ್ಜೆ ಇಕ್ಕಿಕೊಂಡು

ಕಳುವಾರಹಳ್ಳಿ ಬಯಲಾಗಿ ಕಲೆತಿದ್ದ ನ್ಯಾಯಸ್ಥಾನಕ್ಕೆ ಬಂದಳು. ಜುಂಜಪ್ಪ ಎದ್ದು ನಿಂತುಕೊಂಡ. ತಾಯಿ ಚಿನ್ನಮ್ಮ ತಲೆ ಮೇಲಿದ್ದ ತೂತು ಜರಡಿ ತೆಗೆದು ಕೆಳಗೆ ಜುಂಜಪ್ಪನ ಪಾದಕೆ ನೀರು ಬಸಿದಳು. ಜನವಾದಿ ಜನವೆಲ್ಲ ಸೋಜಿಗಪಟ್ಟರು. ತೂತು ಜರಡಿಯೊಳಗೆ ನೀರು ನಿಂತುದು ಹೇಗೆ? ಅದನ್ನು ತಲೆ ಮೇಲೆ ಸೋರದಂಗೆ ಹೊತ್ತುಕೊಂಡು ಬಂದುದು ಹೆಂಗೆ? ಈ ಯಮ್ಮ ನಿಜವಾಗಿಯೂ ಸತ್ಯವಂತೆ ಅಂಬ್ತಾ ಮಾತಾಡಿಕೊಂಡರು. ಜುಂಜಪ್ಪ ಎದ್ದು ನಿಂತು ಹೇಳಿದ 'ಇದನ್ನು ನಾನು ಒಪ್ಪೋದಿಲ್ಲ. ಇದೆಲ್ಲ ಹಿರಿಯೂರು ಕ್ವಾಮಟಿಗ ಶೆಟ್ಟಿ ಮಾಡಿರೋ ಕಣ್ಣುಕಟ್ಟು. ನೀನು ಪತಿವ್ರತೆಯಾದರೆ ನಾನು ಈ ಮುತ್ತಿನ ಉಂಗುರಾನ ಕಳುವರಹಳ್ಳಿ ಕೆರೆಗೆ ಹಾಕುತೀನಿ. ನೀನು ತುಂಬಿದಂತ ಕೆರೆಯಾಗಿ ಬಿದ್ದಿರುವ ಈ ಮುತ್ತಿನ ಉಂಗುರವನ್ನು ಸರಿರಾತ್ರಿ ಹನ್ನೆರಡು ಗಂಟೆಗೆ ಕೆರೆಗೆ ಬಿದ್ದು ಎತ್ತಿಕೊಂಡು ಬರಬೇಕು' ಎಂದು ಹೇಳಿದ. ಚಿನ್ನಮ್ಮ ಅದಕ್ಕೂ ಒಪ್ಪಿಕೊಂಡು ಗೌರಸಂದ್ರದ ಮಾರಮ್ಮನ ನೆನೆದಳು. ಉಂಗುರ ನಡು ಕೆರೆ ಒಳಗೆ ತಳಗೆ ನೀರಾಗೆ ಮುಳುಗಿತ್ತು. ಏನು ಮಾಡಾದು ತಿಳಿಯವಲ್ಲದು. ಅದಕ್ಕೂ ದೇವರ ನೆನೆದು ಕೆರೆಗೆ ಮುಳುಗು ಹಾಕಿದಳು. ಉಂಗುರ ಸಿಗಲಿಲ್ಲ. ಇನ್ನೊಂದು ಕಡೆಗೆ ಮುಳುಗು ಹಾಕಿದಳು. ಇವಳು ಮುಳುಗಿದ ರಭಸಕ್ಕೆ ನೀರು ಸೀಳಿಕೊಂಡು ಸೂರ್ಯದೇವನ ಬೆಳಕು ಬಿದ್ದಿತ್ತು. ನೀರೊಳಗೆ ತಪಸ್ಸು ಮಾಡಿಕೊಂಡು ಕುಂತಿದ್ದ ಜಲಧಿರಾಯ, ಅವನೇ ಬೊಪ್ಪರಾಯಪ್ಪ ದೇವರು ಕಾಣಿಸಿಕೊಂಡು 'ಯಾರಮ್ಮ ನೀನು? ನನಗೂ ಸೂರ್ಯದೇವನ ದರ್ಶನ ಮಾಡಿಸಿದ ಮಾತೆ?' ಅಂದನು. ಚಿನ್ನಮ್ಮ ತನ್ನ ಸಂಕಟ ತೋಡಿಕೊಂಡಳು. 'ಅಯ್ಯೋ ತಾಯಿ ನಿನಗೆ ಹುಟ್ಟಿರೋ ಮಗ ವೀರಭದ್ರ ಶಂಕರ. ಅವನ ಮುಂದೆ ನಮ್ಮದೆಲ್ಲಾ ಶೂನ್ಯ. ಅವುನ ನೆನೆದರೆ ಅರೆಗಳಿಗೆಯೊಳಗೆ ಉಂಗುರ ಕೈಯಿಗೆ ಬರುತ್ತೆ. ಅಷ್ಟು ಮಾಡು ತಾಯಿ' ಅಂದನು. ಚಿನ್ನಮ್ಮ ಹಾಗೆಯೇ ಮಾಡಲು ಕಣ್ಣು ಮುಚ್ಚಿ ಕಣ್ಣು ತೆಗೆಯೋದರೊಳಗೆ ಉಂಗುರ ಕೈಗೆ ಬಂತು. ತಗೊಂಡು ಸೀದಾ ಕಳುವಾರಹಳ್ಳಿ ಬಯಲಿಗೆ ಬಂದು, ಪ್ರಜೆಪಾಲಕರ ಮುಂದಿಟ್ಟಳು. ಅಲೇಗೌಡರಿಗೆ ಸಂತೋಷವಾಯಿತು. ಸೊಸೆ ಎಲ್ಲ ಪರೀಕ್ಷೆಯಲ್ಲೂ ಗೆದ್ದು ತೊಳೆದ ಮುತ್ತಾಗುತ್ತಿರುವುದು ಆಶ್ಚರ್ಯವೂ ಆಯಿತು. ಮೊಮ್ಮಗನನ್ನು ಕರೆದು 'ಒಪ್ಪಿಗೆ ಆಯಿತೇನಪ್ಪ?' ಅಂತ ಕೇಳಿದನು. ಜುಂಜಪ್ಪ ತಲೆ ಅಲ್ಲಾಡಿಸಿ 'ಇದು ಮೋಸ, ಕಣ್ಣುಕಟ್ಟು. ನಾನು ಒಪ್ಪಾಕಿಲ್ಲ. ಇನ್ನೊಂದು ಪರೀಕ್ಷೆನೂ ಎದುರಿಸಬೇಕು' ಅಂದನು. ಆಲೇಗೌಡ 'ಅದೇನು ಮೊಮ್ಮಗನೆ ಹೇಳಪ್ಪ, ಅದೂ ಆಗಿಬಿಡಲಿ' ಅಂದನು. ಆಗ ಸ್ವಾಮಿ ಜುಂಜಪ್ಪ ಹೇಳುತ್ತಾನೆ 'ಇಲ್ಲಿ ಸೇರಿರುವ ಪ್ರಜೆಪಾಲಕರ ಮುಂದೆ ಸೀಗೆ ಎಲೆ ತಂದು ಹಾಕಬೇಕು. ಅದರಲ್ಲಿ ಉಂಬಾ ಎಲೆ ಕಟ್ಟಿ ಉಣ್ಣಾಕೆ ಹಾಕಬೇಕು' ಎಂದನು. ಚಿನ್ನಮ್ಮ ಅದನ್ನೂ ಮಾಡುವುದಕ್ಕೆ ಸಿದ್ಧವಾದಳು. ಪ್ರಜೆ ಪಾಲಕರ ಮುಂದೆ ಕುಂತು, ರಾಶಿ ಹಾಕಿದ್ದ ಸೀಗೆ ಎಲೆಗಳ ಜೋಡಿಸಿ, ಹಂಚಿಕಡ್ಡಿ ಪೋಣಿಸಿ

ಉಂಬಾ ಎಲೆ ಕಟ್ಟುತ್ತಾ ಹೋದಳು. ಪರಮೇಶ್ವರ ಶಂಕರನ ಕೃಪೆಯಿಂದ ಊಟದ ಎಲೆ ತಯಾರಾಗಿ ಹೋಯ್ತು. ಚಿನ್ನಮ್ಮ ಒಪ್ಪಿಸಿದಳು. ಪ್ರಜೆಯಾದ ಪ್ರಜೆಯೆಲ್ಲಾ ಸಂತೋಷಪಡ್ತು. ಆದರೆ ಸ್ವಾಮಿ ಜುಂಜಪ್ಪ ಬಿಲ್‌ಕುಲ್ ಒಪ್ಪಲಿಲ್ಲ. 'ಇದೆಲ್ಲಾ ಕ್ವಾಮಟಿಗ ಮಾಡಿರೋ ಕಣ್ಣುಕಟ್ಟು, ನಾನು ಒಪ್ಪೋದಿಲ್ಲ' ಅಂದನು. ಪ್ರಜೆಗಳಿಗೆ ಸ್ಯಾನೆ ಬೇಜಾರು ಆತು. ಸಂಕಟ ತಂದುಕೊಂಡರು. 'ಈ ಹುಡುಗ ಇನ್ನೇನು ಕೇಳುತ್ತೆ ಕೇಳಲಿ' ಎಂದು ರೇಗಿದರು. ಆದ್ರೂನೂ ಜುಂಜಪ್ಪ ಒಪ್ಪದೆ 'ಇನ್ನೂ ಎರಡು ಪರೀಕ್ಷೆ ನಾನು ಒಡ್ಡಬೇಕು. ಆ ಎರಡರಲ್ಲೂ ನಮ್ಮಮ್ಮ ಗೆದ್ದರೆ ಮಾತ್ರ ಈ ಪ್ರಜೆಗಳ ಮುಂದೆ ತಾಯಿ ಅಂತ ಒಪ್ಪಿಕೊಂಡು ಮಕ್ಕಳು ಒಂದಾಗುತೀವಿ' ಅಂದನು. ಆಲೇಗೌಡರು 'ಅದೇನು ಹೇಳಿ ಸ್ವಾಮಿ, ನೀನು ದೊಡ್ಡೋನು' ಅಂದು ಕೈ ಮುಗಿದರು. ಜುಂಜಪ್ಪ ಹೇಳುತಾನೆ 'ನೀನು ಕಳುವೋರಹಳ್ಳಿ ಊರು ಮುಂಭಾಗದಲ್ಲಿ ನಿಗಿನಿಗಿ ಕೆಂಡ ಮಾಡಿ. ಆ ಅಗ್ನಿಕೊಂಡದ ಒಳಗೆ ಕಳಸ ಹೊತ್ತು ಕಳಸಕ್ಕೆ ಹೊಂಬಾಳೆ ಮುಡಿಸಿ, ಬಿಳೀ ಸೀರೆ ಉಟ್ಟುಕೊಂಡು ಹಗಲು ಆರುಗಂಟೆ, ರಾತ್ರಿ ಆರುಗಂಟೆ ಹನ್ನೆರಡು ಗಂಟೆ ನಿಲ್ಲಬೇಕು. ಬೆಂಕಿಲಿ ಸುಡದೆ ಈಚೆಗೆ ಬಂದ್ರೆ ನಾನು ಒಪ್ಪುತೀನಿ' ಅಂದನು.

ಚಿನ್ನಮ್ಮ ಅದಕ್ಕೂ ಇಲ್ಲ ಅನ್ನಲಿಲ್ಲ. ಕಳುವೋರಹಳ್ಳಿ ಊರ ಮುಂದೆ ಅಗ್ನಿಕುಂಡ ತೆಗೆಸಿದರು. ಹುಣಸೆ, ತುಗ್ಗಲಿ ಸೌದೆ ತರಿಸಿದರು. ಹಸೀನ ತುಪ್ಪ ಹಾಕಿ ಅಗ್ನಿಕುಂಡಕ್ಕೆ ಬೆಂಕಿ ಹತ್ತಿಸಿದರು. ಕೆಂಡ ರೆಡಿಯಾಗೋ ವ್ಯಾಳ್ಯಕ್ಕೆ ಚಿನ್ನಮ್ಮ ಕೆರೆಗೆ ಮೂರು ಮುಳುಗು ಹಾಕಿ ಬಿಳೀ ಸೀರೆ ಉಟ್ಟಕೊಂಡು ಮಲಕಟ್ಟು ಕಟ್ಟಿಕೊಂಡು ಊರು ಮುಂದಕ್ಕೆ ಬಂದಳು. ಹೊನ್ನಟ್ಟಿ ಆಲೇಗೌಡರ ಮನೆ ತಲೆ ಬಾಗಿಲಿಂದ ಹೊನ್ನು ಹೊಂಬಾಳೆ ಮುಡಿಸಿದ ಕಳಸಕ್ಕೆ ಕಳಸ ಪೂಜೆ ಮಾಡಿ ಪರಮೇಶ್ವರ, ಶಂಕರ ಅಂದು ತಾಯಿ ಗೌರಸಂದ್ರದ ಮಾರಮ್ಮನ ಸ್ಮರಿಸಿ ಕಳಸ ಹೊತ್ತು ಅಗ್ನಿಕೊಂಡಕ್ಕೆ ಇಳಿದಳು. ಹಗಲು ಆರು ಗಂಟೆ, ಇರುಳು ಆರು ಗಂಟೆ - ಆರು ಆರು ಹನ್ನೆರಡು ಗಂಟೆ ಅಗ್ನಿಕೊಂಡದೊಳಗೆ ನಿಂತುಕೊಂಡಳು ಸಿನ್ನಮ್ಮ.

ಹನ್ನೆರಡು ಗಂಡೆ ಅಗ್ನಿಕೊಂಡದೊಳಗೆ ನಿಂತರೂ ಚಿನ್ನಮ್ಮನ ಪಾದ ಸುಡಲಿಲ್ಲ, ಮುಡಿದ ಹೊಂಬಾಳೆ ಬಾಡಲಿಲ್ಲ, ಬಿಳೀ ಸೀರೆ ಕಪ್ಪಾಗಲಿಲ್ಲ. 'ಶಂಕರ ನೀನು ದೊಡ್ಡವನಪ್ಪ' ಎಂದು ಸಿನ್ನಮ್ಮ ಹೊರಕ್ಕೆ ಬಂದು ಪ್ರಜೆಪಾಲಕರಿಗೆ ಗೌಡಳಿಕೆಗೆ ಕುಲದ ಸ್ವಾಮಿಗಳಿಗೆ ಕೈಯೆತ್ತಿ ಮುಗಿದಲು. ಜನವಾದಿ ಜನವೆಲ್ಲ ರಾಪಿದರು. ಶಿವ ಶಿವ ಅಂಬ್ತಾ ಬಾಯಿ ಮೇಲೆ ಕೈ ಇಟ್ಟುಕೊಂಡರು. 'ಏನು ಜುಂಜಪ್ಪ ಈಗಲಾದರೂ ಒಪ್ಪುತೀಯಲ್ಲ, ಸ್ವಾಮಿ' ಅಂದರು. ಜುಂಜಪ್ಪನಿಗೆ ಸಮಾಧಾನ ಆಗಲಿಲ್ಲ. ತಲೆ ಅಲ್ಲಾಡಿಸಿದನು. 'ನಾನಿದೆಲ್ಲಾ ಒಪ್ಪಕಿಲ್ಲ. ಇದನ್ನೆಲ್ಲ ಕಣ್ಣುಕಟ್ಟಿನಿಂದಲೂ ಮಾಡಬಹುದು. ಹಿರಿಯೂರಾಗೆ ಸೌದೆ ಮಾರೋಕೆ ಹೋದಾಗ ನಮ್ಮವ್ವ ಇದನ್ನೆಲ್ಲಾ ಕಲಿತು ಬಂದವಳೆ' ಅಂದನು. ಕೊನೆಗೆ ಪ್ರಜಾಪಾಲಕರ

ಒತ್ತಾಯದ ಪ್ರಕಾರ, ಕೊನೆ ಪರೀಕ್ಷೆ ಏನು ಎಂದು ಕೇಳಿದರು. ಆಗ ಜುಂಜಪ್ಪ ಹೇಳುತ್ತಾನೆ 'ನಮ್ಮಪ್ಪ ಕೆಂಗರು ಮಲ್ಲೇಗೌಡ ಸತ್ತು ಏಳು ವರ್ಷ ಆಯಿತು. ಕಳುವೋರಹಳ್ಳಿ ಏಣಿನಾಗೆ ಸಮಾಧಿ ಮಾಡಲಾಗಿದೆ. ಸತ್ತ ನಮ್ಮಪ್ಪನ್ನ ಬದುಕಿಸಿ ಮಾತಾಡಿಸಿದರೆ ಆಗ ನಮ್ಮವ್ವನ್ನ ನಾನು ಒಪ್ಪುತ್ತೀನಿ' ಅಂದನು ಸ್ವಾಮಿ. ಆಗ ಜನವಾದಿ ಜನರೆಲ್ಲಾ ಬಾಯಿ ಮೇಲೆ ಕೈ ಇಕ್ಕಿಕೊಂಡರು. ಎಲ್ಲಾದರೂ ಉಂಟೇನಪ್ಪ? ಸತ್ತು ಹೋಗಿ ಏಳು ವರ್ಷ ಆಗಿರುವವರನ್ನು ಬದುಕಿಸುವುದಕ್ಕೆ ಆಗುತ್ತಾ? ಬದುಕಿಸಿ ಮಾತಾಡುವುದಕ್ಕೆ ಆಗುತ್ತಾ? ಇದು ನಡೆಯಬಾರದ ಕೆಲಸ ಅಂದು ಬಿಟ್ರು. ಆಗ ಸಿನ್ನಮ್ಮನೇ ಮುಂದೆ ಬಂದು ಆಗಲಿ. ಪರಮೇಶ್ವರ ನಮ್ಮಪ್ಪನ ಕೃಪೆ ಏನಿದೆಯೋ ಆದು ಆಗಿಯೇ ಬಿಡಲಿ, ಎಂದು ಸಮಾಧಿ ಬಳಿಗೆ ಬಂದ್ಲು. ಕಾಯಿ ಒಡೆದು, ಕೈ ಮುಗಿದು ಗಂಧ, ಕರ್ಪೂರ ಹಾಕಿದಳು. 'ಸ್ವಾಮಿ ನಿನ್ನ ಮಗ ನನ್ನನ್ನ ತಾಯಿನೇ ಅಲ್ಲ ಅಂಬ್ತಾನೆ. ಪತಿವ್ರತೆ ಅಲ್ಲ ಅಂಬ್ತಾ ನಾನಾ ಕಷ್ಟಕ್ಕೆ ಎಡೆ ಮಾಡವನೆ. ಈಗ ನಾನು ನಿನ್ನ ಮೊರೆಹೋಗಿದ್ದೀನಿ. ನೀನು ಸಮಾಧಿ ಒಳಗಿಂದ ಎದ್ದು ಬಂದು, ಮೂರು ಮಾತಾಡಬೇಕು. ಇಲ್ಲದಿದ್ದರೆ ನಾನೂ ನಿನ್ನ ತಾಕೆ ಬರುತೀನಿ' ಅಂದ್ಲು. ಆಯಮ್ಮ ಹಿಂಗಂದ ಕೂಡಲೇ ಏಳು ವರ್ಷದ ಹಿಂದೆ ಮಣ್ಣು ಮಾಡಿದ ಗುಂಡಿ ಫಟಾರನೆ ಎರಡು ಭಾಗಕ್ಕೆ ಸೀಳಿ ಕೊಂಡು ಬಿಡ್ತು. ಸ್ವಾಮಿ ಜುಂಜಪ್ಪನಿಗೆ ಅವರಪ್ಪ ಕೆಂಗರು ಮಲ್ಲೇಗೌಡ ಹೇಳುತ್ತಾನೆ 'ಅಪ್ಪಾ ಮಗನೆ, ನಿನ್ನ ತಾಯಿ ಚಿನ್ನಿ ಸ್ಯಾನೆ ಸತ್ಯವಂತೆ ಕಣಪ್ಪ. ಪರಮೇಶ್ವರನ ಕೃಪೆಯಿಂದ ಮೂರು ಮಕ್ಕಳ ಮೇಲೆ ಒಂದು ಹೆಣ್ಣು ಪಡೆದು ಬಾಳಿದವಳು. ಅದರಿಂದ ಈಗ ಇಷ್ಟೊಂದು ಕಾಟ ಅನುಭವಿಸಾದು. ಆಕೆ ಸತ್ಯವಂತೆ ಕಣಪ್ಪ' ಎಂದು ಮೂರು ಮಾತಾಡಿ ಗುಂಡಿ ಹಿಂದಿನಂತೆಯೇ ಮುಚ್ಚಿಕೊಂಡುಬಿಡ್ತು.

ಸೇರಿದ್ದ ಪ್ರಜಾಪಾಲಕರೆಲ್ಲ 'ಅಲ ಅಲಾ ಶಂಕರಾ, ಈ ಯಮ್ಮ ಅದೆಂತ ಸತ್ಯವಂತೆ. ಆಗಬಾರದು, ಮಾಡಲಾಗದುದನೆಲ್ಲಾ ಮಾಡಿ ತೋರಿಸಿದಳು' ಎಂದು ಒಬ್ಬರಿಗೊಬ್ಬರು ಮಾತಾಡಿಕೊಂಡರು. ತಾತ ಮೊಮ್ಮಗನ್ನ ಕರೆದ. 'ಒಪ್ಪಿದೇನಪ್ಪ, ಚಿನ್ನಮ್ಮ ಸತ್ಯವಂತೆ ಅಂಬೋದನ್ನ' ಎಂದನು. ಆದರೂ ಜುಂಜಪ್ಪ ಒಪ್ಪಲಿಲ್ಲ. ಈಗ ಕೊನೇ ಒಂದು ಪರೀಕ್ಷೆ. ಅದೇನಪ್ಪ ಅಂದರೆ ನಮ್ಮ ತಾಯಿ ನಮ್ಮ ನಾಲ್ಕು ಮಕ್ಕಳಿಗೂ ಎದೆ ಹಾಲು ಕುಡಿಸಬೇಕು ಅಂದ. ಚಿನ್ನಮ್ಮಗೆ ಎದೆ ಹಾಲು ನಿಂತು ಏಳು ವರ್ಷ ಆಗಿತ್ತಲ್ಲ, ಎಲ್ಲಿ ಬಂದಾವು? ಆದರೂ ಆಯಮ್ಮ ಒಪ್ಪಿಕೊಂಡಳು. ಅದರಂತೆ ಮಾರಣ್ಣ, ಮೈಲಣ್ಣ, ಚಿಕ್ಕವಳು ಮಾರಕ್ಕನಿಗೆ ಸ್ವಾಮಿ ಜುಂಜಪ್ಪನಿಗೂ ಹಾಲು ಹರಿಸಿದಳು. ಇದು ಪರಮೇಶ್ವರನ ಮಡದಿ ಪಾರ್ವತಿದೇವಿನೇ ದೇವಲೋಕದಿಂದ ಸುರಿಸಿದ ಹಾಲಿನಂತೆ ಇತ್ತು. ಮಕ್ಕಳು ಸಂತೃಪ್ತಿಯಾಗಿ ಹಾಲು ಕುಡಿದರು. ತಿರುಗ ಜುಂಜಪ್ಪ ಒಪ್ಪಿಕೊಂಡ. 'ನಾನು ಯಾಕೆ ಹೀಗೆ ಮಾಡಿದೆ

ಅಂದ್ರೆ, ನಮ್ಮವ್ವ ನಮ್ಮಪ್ಪ ಇಲ್ಲದೇ ಇರುವಾಗ ಮಕ್ಕಳನ್ನು ಹೆತ್ತಳು. ಅದಕ್ಕೆ ಪರಮೇಶ್ವರನ ವರ ಅಂಬ್ತಾ ಹೇಳಿರೂ ಯಾರೂ ನಂಬುಲಿಲ್ಲ. ಈ ನಂಬಿಕೆ ಹುಸಿಯಾಗಲಿ, ನಮ್ಮ ಅವ್ವನ ಸತ್ಯ ಎಲ್ಲರಿಗೂ ತಿಳಿಯಲಿ ಅಂಬ್ತಾನೆ ಇಷ್ಟೆಲ್ಲಾ ಮಾಡಿದ್ದು' ಅಂದನು. ಜನರೆಲ್ಲಾ 'ಅಲ ಅಲಾ ಶಿವನೇ! ಏನಪ್ಪ ನಿನ್ನ ಲೀಲೆ' ಅಂಬ್ತಾ ಸೋಜಿಗಪಟ್ಟರು.

ಬಂದಿದ್ದ ಏಳುರಿನ ದೊರೆಗಳು, ಗೌಡರು ಕಟ್ಟೇಮನೆಯವರನ್ನು ಕಳುವರಳ್ಳಿಗೆ ಕರೆಕೊಂಡು ಬಂದು, ಹಾಲು ಪಂಚಾಮೃತದ ಅಡಿಗೆ ಮಾಡಿಸಿ ಊಟಕ್ಕೆ ಹಾಕಿಸಿದನು. ಎಲ್ಲರೂ ಊಟ ಮಾಡಿ, ಅವರವರ ಊರಿಗೆ ಹೋದರು. ಮೊದಲು ಬಡತನವಿದ್ದ ಮನೆ ಈಗ ಲಕ್ಷ್ಮಿ ನಾಟ್ಯವಾಡೋ ಅಂಗಾಯ್ತು. ದುಡ್ಡು ಕಣಜ ತುಂಬಿತ್ತು. ಮಾರಣ್ಣ, ಮೈಲಣ್ಣ ಮತ್ತು ಮಾರಕ್ಕ ಚಿನ್ನಮ್ಮನ ಜೊತೆಗೆ ಸುಖವಾಗಿದ್ದರು. ಜುಂಜಪ್ಪ ಬೈಲಾಗೆ ದನಕರು ನೋಡಿಕೊಂಡಿದ್ದ.



## ಕಳುವೊರಹಳ್ಳೀಲಿ ಜುಂಜಪ್ಪನ ಅರಮನೆ

ತಾಯಿಗೆ ಕೊಡಬಾರದ ಹಿಂಸೆ ಕೊಟ್ಟನು ಜುಂಜಪ್ಪ. ಅದರಾಗೆಲ್ಲಾ ಗೆದ್ಲು ಚಿನ್ನಮ್ಮ. ಸರಿ ಹಿಂದೆ ಬಂಗ ಬಡತನ ಬಂದು ಮನೆಗೆ ಏನೂ ಇರಲಿಲ್ಲವಲ್ಲಾ ಈಗ ನಾಲ್ಕು ಮೂಲೆಗೂ ಲಕ್ಷ್ಮಿ ನಾಟ್ಯವಾಡಿದಳು. ಮಕ್ಕಳು ತುಪ್ಪ ಅನ್ನದಾಗೆ ಕೈ ತೊಳೆದವು. ಜುಂಜಪ್ಪ ಎಂದಿನಂತೆ ನೆನೆಅಕ್ಕಿ, ನೆನೆಗಡಲೆ, ಒಣ ಕೊಬ್ಬರಿಲಿ ಜೀವನ ಸಾಗಿಸಿದ. ಒಳ್ಳೆ ಹೊಲ ಬಂದಿತ್ತಲ್ಲ ತಾತನ ಕಡೆಯಿಂದ, ಆ ಹೊಲದಾಗೆನೆ ಗುಡ್ಲು ಹಾಕಿಕೊಂಡು ಜುಂಜಪ್ಪ ಜೀವನ ಹೊರೀತಿದ್ದ. ಮನೆಗೆ ಒಂದೇ ಒಂದು ಹಸು. ಆ ಹಸುವೇ ಅವರಿಗೆಲ್ಲಾ ಸಾಕು ಸಾಕಾಗುವಷ್ಟು ಹಾಲು ಕೊಡ್ತಾ ಇತ್ತು. ಜುಂಜಪ್ಪನಿಗೆ ಕರೆದ ಹಾಲು ಕರೆದಂಗೆ ಕೊಡಬೇಕಾಗಿತ್ತು. ಕಾಯಿಸಂಗಿಲ್ಲ, ಹೆಪ್ಪು ಮಾಡಂಗಿಲ್ಲ. ಚಿನ್ನಮ್ಮ ಅಂಗೇ ಮಾಡುತ್ತಿದ್ದಳು. ಮಕ್ಕಳು ದೊಡ್ಡವಾಗ್ತಾ ಬಂದ್ರು. ಮಾರಣ್ಣ, ಮೈಲಣ್ಣ ತಾತ ಹೊನ್ನಟ್ಟಿ ಆಲೇಗೌಡ ಅವರ ಹೊಲ, ತೋಟದಾಗೇ ದುಡಿಯಾಕೆ ಹೋಗ್ತಾ ಇದ್ದ. ಚಿಕ್ಕಪ್ಪಗಳು ದೊಡ್ಡಾಲ, ಚಿಕ್ಕಾಲಗಳು ನಮ್ಮ ಅಣ್ಣನ ಮಕ್ಕಳು, ತಂದೆ ಇಲ್ಲದಾವು ಅಂಬ್ತಾ ಕರುಣೆಯಿಂದ ಬೆಳೆಸ್ತಾ ಬಂದ್ರು. ಹೊನ್ನಟ್ಟಿ ಆಲೇಗೌಡನ ಸಂಸಾರ ಅಂದ್ರೆ ಏಳು ವರ್ಜೆ ಎತ್ತು, ಏಳು ನೇಗಿಲು ಹೂಡಿರೆ ಹೊಲಾದಿ ಹೊಲವೆಲ್ಲಾ ಒಂದೇ ದಿನಕ್ಕೆ ಉಕ್ಕೆ ಹೊಡೆಯೋರು. ಏಳು ಜನಗಳಿಗೂ ಅವರೆಂಡತೀರು ಊಟ ತಗೊಂಡು ಹೊಲಕ್ಕೆ ಹೋದರೆ ನಾಯಿ, ಆಳುಗಳೆಲ್ಲಾ ಕುಂತುಕೊಂಡು ಉಂಡರೂ ಸವೀತಿರಲಿಲ್ಲ. ಅಷ್ಟೊಂದು ಧಾರಾಳವಾದ ಕುಟುಂಬ. ಹಿಂಗೆ ನಡೀತಾ ಇತ್ತು ಆಲೇಗೌಡನ ಸಂಸಾರ. ಹಿಂಗೆ ಆಡ್ತಾ ಆಡ್ತಾ ಮಕ್ಕಳು ದೊಡ್ಡವರಾದರು. ಮಾರಣ್ಣ ಮೈಲಣ್ಣ ಚಿಕ್ಕಳು ಮಾರಕ್ಕ ಎಲ್ಲರೂ ಕೈ ಆಸರೆಗೆ ಬಂದ್ರು. ಅದರಲ್ಲಿ ಚಿಕ್ಕೋಳು ಮಾರಕ್ಕ ಹೆಣ್ಣುಮಗಳು ಮೈ ಕೈ ತುಂಬಿಕೊಂಡು ಬೆಳೆದಿದ್ಲು. ಬೆಳೆದು ದೊಡ್ಡಾಳಾದ್ಲು. ಆಗ ತೌರು ಮನೆಯಿಂದ ಮಡಿಲಕ್ಕಿ ಬಂದು ಗೊಲ್ಲರ ಶಾಸ್ತ್ರದಂತೆ ಮಾರಕ್ಕನ ಹದಿನಾರು ದಿನ ಊರಿಂದ ಹೊರಕ್ಕೆ ಕಳಿಸಿರು. ಏಳು ಉದಿ ಕಳ್ಳೆ ಬೈಲಾಗೆ ಮಾರಕ್ಕ ಕಾಲ ಕಳೆದಳು. ಏಳು ನೀರು ಆದ ಮೇಲೆ ಒಂದು ದಿನ ಮಾರಕ್ಕನಿಗೆ ಗುಡ್ಲು ಶಾಸ್ತ್ರ ನಡೆಸಿರು. ಆಗ ಸ್ವಾಮಿ ಜುಂಜಪ್ಪ ಹೇಳಿದ 'ತಂಗಿ ಮಾರಕ್ಕನ ಗುಡ್ಲುಶಾಸ್ತ್ರ

ಊರಿಂದ ಹೊರಗೆ ನಡೆಸಬೇಕು' ಅಂತ. ಅದರಂತೆ ಕಳುವೋರಹಳ್ಳಿ ಬೈಲಾಗೆ ಶಾಸ್ತ್ರದ ಕಾರ್ಯ ನಡೆಯಿತು. ಬಾದೆಹುಲ್ಲು, ಹತ್ತಿ ಕೊನೆ ತಂದು ಸೋದರಮಾವ ದೊಡ್ಡ ಸಿನ್ನೇಗೌಡ, ಸೊಸೆ ಮಾರಕ್ಕನ ಗುಡ್ಲಿಗೆ ಕೊಡಿಸಿದನು. ನೆನೆ ಅಕ್ಕಿ, ನೆನೆಕಡಲೆ ಹಸಿ ಅಕ್ಕಿ ತಂಬುಟ ರೆಡಿ ಮಾಡಿದರು. ಏಳು ಖಂಡುಗದ ಎಳ್ಳು ಕಲೆಸಿ ಚಿಗುಳಿ ಉಂಡೆ ಮಾಡಿದರು. ಏಳು ಪಿಂಡಿ ವೀಳೆದೆಲೆ, ಮೂರು ಬಳ್ಳ ಅಡಿಕೆ ತರಿಸಿ ಎಲ್ಲರಿಗೂ ತಿದ್ದಿದರು. ಆ ಹೊತ್ತಿನಿಂದ ಹದಿನಾರು ದಿನ ಗುಡ್ಲು ಒಳಗಿದ್ದು ಹದಿನೇಳನೇ ದಿನಕ್ಕೆ ಸೂತಕ ತಕ್ಕೊಂಡರು. ಏಳು ನೀರು ಹಾಕಿದರು. ಕರೆಸೀರೆ ಉಡಿಸಿದರು. ಏಳು ಉದಿಗೂ ಒಂದೊಂದು ಹೆಜ್ಜೆ ನಡೆಸಿ ಅರಳಿ ಎಲೆಯಿಂದ ನಾಲಿಗೆ ಸುಡಿಸಿ, ಬೆಂಕಿ ತುಳಿಸಿ ಕಳುವಾರಹಳ್ಳಿ ಊರೊಳಕೆ ಕರಕೊಂಡು ಬಂದ್ರು.



# ಮಾರಕ್ಕನ ಮದುವೆ

ನಮ್ಮ ಗೊಲ್ಲರ ಸಂಪ್ರದಾಯದ ಪ್ರಕಾರ ಹೆಣ್ಣುಮೈನೆರೆದ ಮೇಲೆ ಹೆಚ್ಚು ದಿನ ಮನೆಯಾಗೆ ಇಟ್ಟುಕೊಳ್ಳುವಂಗಿಲ್ಲ. ಗಂಡಿನ ಮನೆಗೆ ಹೋಗಿ ಮದುವೆ ಮಾಡಿಕೊಳ್ಳಿ ಅಂತ ಕೇಳುವಂತಿಲ್ಲ. ಗಂಡಿನ ಕಡೆಯವರೇ ಬಂದು ಹೆಣ್ಣು ಕೇಳುವುದು ವಾಡಿಕೆ. ಈ ಪ್ರಕಾರ ಮಾರಕ್ಕ ಋತುಮತಿಯಾದ ವರ್ಷದೊಪ್ಪತ್ತಿನಲ್ಲಿ ಮದುವೆ ಪ್ರಸ್ತಾಪ ಆಯಿತು. ಚಿನ್ನಮ್ಮನ ತವರು ಮನೆಯಿಂದ ಹಸಿರು ವೀಳ್ಯೆ ಬಂತು. ಚಿನ್ನಮ್ಮನ ಹಿರಿಯಣ್ಣ ದೊಡ್ಡ ಸಿನ್ನೇಗೌಡ ಹಟ್ಟಿ ಗೌಡನೊಂದಿಗೆ ಬಂದ. ಬಂದವರು ಹಟ್ಟಿ ದೇವರಿಗೆ ಶರಣೆಂದು, ಹಿರಿಯರಿಗೆ ಶರಣೆಂದರು. ಆಮೇಲೆ ಚಿನ್ನಮ್ಮನ ಮನೆಗೆ ಬಂದರು. ಹಿರೇಮಾವ ಬಂದ, ಅಂತೆಂದು ಸ್ವಾಮಿ ಜುಂಜಪ್ಪ ಜಾಡಿ ಹಾಕಿ ಕೂಡ್ರಿಸಿದ. ಜುಂಜಪ್ಪನಿಗೆ ಅವರು ನಮಸ್ಕರಿಸಿದರು. ತಂದಿದ್ದ ಒಂದು ಕಟ್ಟು ವೀಳ್ಯದೆಲೆ, ಅರೆಪಾವು ಅಡಿಕೆ, ಹುರಿಗಡಲೆ, ಒಂದಚ್ಚು ಬೆಲ್ಲ, ಟೇಪು ಚೀಲದಿಂದ ತೆಗೆದು ಒಂದು ಹರಿವಾಣಕ್ಕೆ ಇಕ್ಕಿದರು. ಸ್ವಾಮಿ ಜುಂಜಪ್ಪನನ್ನು ಮಧ್ಯಕ್ಕೆ ಕೂರಿಸಿಕೊಂಡು ಮಾತಿಗಿಳಿದರು. ಸ್ವಾದರಳಿಯ ಜುಂಜಪ್ಪನೇ ನಿನ್ನ ತಂಗಿ ಮಾರಕ್ಕನ ನನ್ನ ತಮ್ಮ ಕಟ್ಟಾಣಿಗೆ ಕೊಡ್ರಪ್ಪ ಎಂದನು. ಜುಂಜಪ್ಪ 'ಆಗಲೇಳು ಮಾವ ಕೊಡನಾ' ಅಂದ. ತಾಯಿ ಚಿನ್ನಮ್ಮನಿಗೂ ಕೇಳಿದರು. 'ಕುರಿ ಕೊಟ್ಟವರಿಗೆ ಮರಿ ಕೊಡಬೇಕು ಅಂತಾರೆ. ತೌರು ಮನೆಗೆ ಹೆಣ್ಣು ಕೊಡದಿರುವುದಕ್ಕೆ ಆಗುತ್ತಾ? ಕೊನೆ ತಮ್ಮ ಕಟ್ಟಾಣಿ ಕರಿಯನಿಗೆ ಹೆಣ್ಣು ಕೊಡುತೀನಿ' ಅಂದಳು.

ವೀಳ್ಯ ಬದಲು ಮಾಡಿಕೊಂಡರು. ಹಾಲು-ಅನ್ನ ಉಂಡು ದೊಡ್ಡ ಚಿನ್ನೇಗೌಡನೂ, ಹಟ್ಟಿಗೌಡನೂ ಹೊರಟರು. ಇತ್ತ ಮದುವೆ ದಿನ ಗೊತ್ತು ಮಾಡಾಕೆ ಕುಲಸ್ಥರನ್ನು ಕೂಡಾಕಿದರು. ಗೊಲ್ಲರ ಸಂಪ್ರದಾಯದಂತೆ ಮೊದಲು ಕಲ್ಲುಕುಂಟೆ ಚಿತ್ರದೇವರು, ಕಾಟಂದೇವರು ಗುಡಿಗೆ ಹೋಗಿ ತೀರ್ಥ ಪ್ರಸಾದ ತಂದರು. ಮದುವೆ ಮುಂದಿನ ಪೂರ್ಣಿಮೆ ಕಳೆದ ನಾಲ್ಕನೇ ದಿನ ಸೋಮವಾರ ಅಂಥ ಕುಲಸ್ಥರು ತೀರ್ಮಾನ ಮಾಡಿದರು. ಅದರಂತೆ ಹೆಣ್ಣಿನೋರು-ಗಂಡಿನವರು ಅವರವರ ದೇವರುಗಳಿಗೆ ಹೋಗಿ ಮದುವೆ ಸಿದ್ಧತೆ

ಮಾಡಿಕೊಂಡರು. ಮದುವೆ, ಹೆಣ್ಣಿನ ಮನೆಗೆ ಅಂದರೆ ಕಳುವಾರಹಳ್ಳಿ ಪಟ್ಟಣದಾಗೆ ನಡೆಸಾಕೆ ಸಿದ್ಧತೆ ಆತು. ಏಳು ಅಂಕಣದ ಮನೆ ಮುಂದೆ ಹನ್ನೆರಡು ಅಂಕಣದ ಚಪ್ಪರ ಹಾಕಿದರು. ಅರುಣೆ ತಂದ್ರು, ಮಧ್ಯಾಹ್ನದಾಗೆ ಶಾಸ್ತ್ರದ ನೀರು ತಂದ್ರು. ಸಂಜೆಗೆ ಸರಿಯಾಗಿ ಕಂಬೇರಹಟ್ಟಿ ಅಂದರೆ ಗಂಡಿನ ಊರು ಅದು ಕಳುವಾರಹಳ್ಳಿಗೆ ಪಡುವಲಾಗಿ ಒಂದು ಅರ್ಧ ಮೈಲಿ ದೂರದಲ್ಲಿದೆ. ಅದು ಚಿನ್ನಮ್ಮನ ತೌರುಮನೆ. ಈಗ ಕಂಬೇರಹಟ್ಟಿ ನಾಶವಾಗಿದೆ. ಅಲ್ಲಿ ಒಂದು ಮನೆನೂ ಇಲ್ಲ. ಅದೇ ಜಾಗದಲ್ಲಿ ದೊಡ್ಡಾನು ಜುಂಜಪ್ಪನ ಸಮಾಧಿ ಇದೆ. ಕಂಬೇರಹಟ್ಟಿ ನಾಶವಾದ ಮೇಲೆ ಅಲ್ಲಿಂದ ಒಂದು ಮೈಲಿ ದೂರದಲ್ಲಿ ಹೊಸಹಳ್ಳಿ ಅಂಬ್ತಾ ಒಂದು ಊರು ಆತು. ಅದು ಜುಂಜಪ್ಪನ ಮಾವಗಳ ಊರು. ಈ ಊರಾಗೆ ಈಗ್ಲೂ ಗೊಲ್ಲರೇ ಜಾಸ್ತಿ ವಾಸವಾಗವರೆ. ಕಂಬೇರಹಟ್ಟಿಯಿಂದ ಗಂಡು ಕರಕೊಂಡು ಬಂದ್ರು. ಜನಾದಿ ಜನ ಸೇರಿರು. ಕುರಿ ಕರೆದರು. ಸೋಬಾನ ಪದ ಹಾಡಿದರು. ಸಿತ್ರುದೇವರು ಸೋತ್ರ ಮಾಡಿರು. ಸ್ವಾಮಿ ಜುಂಜಪ್ಪ ಬಂದಂತ ನೆಂಟ್ರನ್ನ, ಕುಲವಸ್ತರನ್ನ ತಾಂಬೂಲ ಕೊಟ್ಟು ಕರೆಕೊಂಡರು.

ಸೋಮವಾರದ ದಿನ ಹೊತ್ತು ಹುಟ್ಟಿ ಒಂದು ಆಳುದ್ದಕ್ಕೆ ಬರುತ್ತಿದ್ದಂತೆ ಕಳುವರಹಳ್ಳಿಗೆ ಹೊನ್ನಟ್ಟಿ ಆಲೇಗೌಡನ ಅರಮನೆಗೆ ಕಟ್ಬಾಣಿ ಕರಿಯನೂ, ಚಿಕ್ಕವಳು ಮಾರಕ್ಕನಿಗೂ ಧಾರೆ ಮೂರ್ತನೇ ಮಾಡಿದರು. ಚಿತ್ರದೇವರು, ಬೇವಿನಹಳ್ಳಿ ಕರಿಯಮ್ಮ, ನಂದಿಹಳ್ಳಿ ರಂಗಪ್ಪ ದೇವರುಗಳಿಗೆ ಏದುರೆತ್ತಿ ಈಡುಗಾಯಿ ಒಡೆದರು. ವೀಳ್ಯೆ ನೀವಾವಳಿ ಮಾಡಿದರು. ಧೂಳು ನೀರು ತೆಗೆದರು. ಧೂಳು ಮೆರವಣಿಗೆ ಮಾಡಿ, ಒಳಕೆ ಕರಕೊಂಡರು. ಬಂದಂತ ಕುಲಸ್ಥರಿಗೆ, ಊರಿನವರಿಗೆ ಪಾಲು ಪಂಚಾಮೃತದ ಊಟ ಹಾಕಿದರು. ಏಳು ಜನ ಅಣ್ಣಗಳು ಬಂದಂಥ ನೆಂಟರಿಗೆ ವೀಳ್ಯ ಕೊಟ್ಟು, ಕಳುಹಿಸಿಕೊಟ್ಟರು.




## ಗಂಡನ ಮನೆಯಲ್ಲಿ ಮಾರಕ್ಕ

ಮಾರಕ್ಕನಿಗೂ ಕಟ್ಟಾಣಿ ಕರಿಯನಿಗೂ ಮದುವೆ ಆಯ್ತು. ಮದುವೆ ಆಗಿ ಒಂದು ತಿಂಗಳ ಕಾಲ ಮನೆಯಲ್ಲಿಯೇ ಅಳಿಯೂಟನೂ ಆಯಿತು. ಅಳಿಯೂಟ ಎಂದರೆ ಕಳುವೋರ ಹಳ್ಳಿಯಲ್ಲಿ ಅಕ್ಕನೇ ಈ ತಮ್ಮನಿಗೆ ಮಗಳು ಕೊಟ್ಟಂತ ಕಾರಣದಿಂದ ಅಳಿಯನೂ ಆಗಲೇಕು, ಅಳಿಯೂಟ ಆಗಿ, ಹೆಣ್ಣಿನ ಕಡೆಯಿಂದ ಚಿತ್ರದೇವರು, ಕಾಟಂಲಿಂಗ ಎಲ್ಲ ದೇವರಿಗೂ ಪೂಜೆ, ಮೀಸಲಿಕ್ಕಿ ಆಯಿತು. ಮೀಸಲು ಹಣ ಕೊಟ್ಟರು. ಎಲ್ಲ ಕಾರ್ಯ ಆದಮೇಲೆ ದೊಡ್ಡ ತಮ್ಮ ದೊಡ್ಡಸಿನ್ನೇಗೌಡ ನಾದಿನಿ ಕರೆಯಾಕೆ ಬಂದ. ಒಂದು ದಿನ ತಮ್ಮನ್ನು ಮನೆಯಾಗೆ ಇರಿಸಿಕೊಂಡು ಅವನಿಗೂ ಪಾಲು ಪಂಚಾಮೃತದ ಅಡಿಗೆ ಮಾಡಿ ಊಟ ಮಾಡಿಸಿದರು. ಮಾರನೇ ದಿನ ಚಿನ್ನಮ್ಮ ಮಗಳು ಮಾರಕ್ಕನನ್ನು ಅವುಳ ಗಂಡನ ಮನೆಗೆ ಕಳುಸಬೇಕು. ಆಗ ಹುಡುಗಿಗೆ ಬಿಳೀ ಸೀರೆ ಉಡುಸಿ, ಅಂಗುದಾರ ಕಟ್ಟಿ, ಮಡಿಲಕ್ಕಿ ಹಾಕಿ ಮೂರು ಜನ ಮುತ್ತೈದೆಯರಿಗೆ ವೀಳ್ಯ ಕೊಟ್ಟು ನಮಸ್ಕಾರ ಮಾಡಿಸಿ, ಮೂಡಲಾಗಿ ನಿಲ್ಲಿಸಿ ಸೂರ್ಯನಿಗೆ ಕೈಮುಗಿಸಿ ಹೆಣ್ಣನ್ನು ಹೊರಡಿಸಿದಳು. ಒಬ್ಬಳೇ ಅಂತ ತಾಯಿ ಚಿನ್ನಮ್ಮ, ಮಗ ಸ್ವಾಮಿ ಜುಂಜಪ್ಪನೂ ಹೋದರು. ಕಂಬೇರಹಟ್ಟಿಗೆ ಹೊಸ ಹೆಣ್ಣು ಬಂತು. ಅಲ್ಲಿಯೂ ಶಾಸ್ತ್ರ ಮಾಡಿ ಒಳಗೆ ಕರಕೊಂಡ್ರು. ಬೆಳಿಗ್ಗೆ ತನಕ ಚಿನ್ನಮ್ಮ, ಜುಂಜಪ್ಪ ಅವರು ಮಾವಗಳು ಅಂದರೆ ತಾಯಿ ತಮ್ಮಗಳ ಮನೆ ಕಂಬೇರಹಟ್ಟಿಯಲ್ಲಿ ಇದ್ದು ಬೆಳಿಗ್ಗೆ ಕಳುವೋರಹಳ್ಳಿಗೆ ಹಿಂತಿರುಗಿ ಬಂದರು.

ಸೀರ್ಯರ ಸಿಕ್ಕಡಕೆ, ದ್ವಾರಾಳ ಬಿಳಿಯೆಲೆ
ತಾವರೆಕೆರೆಯ ಕೆನೆಸುಣ್ಣ ಇಬ್ಬರೂ
ಸರಿಸಮಕೆ ಕುಂತು ಮೆಲ್ಲಾದರು

## ಕರು ಕೊಟ್ಟ ತಮ್ಮಗಳು

ಏಳು ಸೊಲಿಗೆ ದನಗಳ ಗೂಡಿಗೆ ಒಡೆಕಾರನಾಗಿದ್ದವನು ಕೆಂಗರು ಮಲ್ಲೇಗೌಡ ಅಂದರೆ ಜುಂಜಪ್ಪನ ಅಪ್ಪ. ಈಗ ಜುಂಜಪ್ಪನ ಮನೆಯಲ್ಲಿ ಒಂದು ದನಾನೂ ಇಲ್ಲ. ದೇವರ ಕ್ರೂರವಾದ ದಿಸೆಯಿಂದ ದನ-ಕರು, ನಗ-ನಾಣ್ಯ ಎಲ್ಲವೂ ಹೋಗಿ ಚಿನ್ನಮ್ಮ ವನವಾಸ ಮಾಡುವಂತಾಗಿತ್ತಲ್ಲ, ಈಗ ಖಾಲಿಮನೆ. ಅದಕಂಡು ತವರು ಮನೆಯವರ ಕಳ್ ಚುರುಕ್ ಅಂದು, ಏಣಿಸಿ ಏಣಿಸಿ ಏಳು ಕರುಗಳನ್ನು ಕೊಟ್ಟರು. ಜುಂಜಪ್ಪ ಆ ಅನ್ನಲಿಲ್ಲ, ಊ ಅನ್ನಲಿಲ್ಲ. ಎಲ್ಲ ಮಾವುಗಳೇ ಮಾಡಿದರು. ಮಾವುಗಳು ಕೊಟ್ಟ ಏಳು ಮೊಣಕಗಳನ್ನು ಜುಂಜಪ್ಪ, ಅವುರ ತಾಯಿ ಚಿನ್ನಮ್ಮನ್ನ ಕೂಡಿ ಹೊಡೆದುಕೊಂಡು ಕಳುವಾರಹಳ್ಳಿ ಕಡೆ ಬರುತ್ತಿದ್ದರು. ಆಗ ಜುಂಜಪ್ಪ ಹೇಳಿದ 'ಅವ್ವ ನಮ್ಮ ಅಪ್ಪ ದನನ ಊರು ಒಳಿಕೆ ಬಿಡದಂಗೆ ಕಾದ. ನಾನೂ ಅಂಗೇ ಮಾಡಬೇಕು. ಅಂಟು ಚೊಟ್ಟು ಆಗಬಾರದು. ಗೋವುಗಳಿಗೆ ಒಳ್ಳೆದಾಗಲ್ಲ' ಅಂದ. ತಾಯಿ ಚಿನ್ನಮ್ಮ ಅಂಗೇ ಮಾಡಪ್ಪ ಅಂದ್ಲು. ಸರಿ ಜುಂಜಪ್ಪ ಕಳುವಾರಹಳ್ಳಿ ಬಯಲಾಗೆ ಒಂದು ಮೋಟು ಹುತ್ತ, ಅದರ ತಡದಾಗೆ ಕಳ್ಳಿ ಬೇಲಿ ಹಾಕಿದ. ಜಾಲಿ ಕಡಿದ, ಕಾರೆ ಕಡಿದ, ತರೇದ ಮುಳ್ಳು ಕಡೆದು ಬೇಲಿ ತಿರುವಿದ. ಹುಲಿ-ಕರಡಿಗೆ ಸಿಕ್ಕದ ಹಾಗೆ ಆ ಕರುಗಳನ್ನು ಆ ಬೇಲಿ ಒಳಗೆ ಕೂಡಿ, ತಾಯಿಗೆ ಹೇಳಿದ 'ನೀನು ಹೋಗವ್ವ ಮನೆಗೆ. ನನಗೆ ಇನ್ನು ಮೇಲೆ ಅಡವಿ ನೀರು, ಗಿಡದ ನೆಳ್ಳೆ ಸೋಪ್ತಿ. ನಾನಾತು ನನ್ನ ದನ ಆಯಿತು' ಎಂದು ತಾಯಿನ ಮನೆಗೆ ಕಳುಹಿಸಿಕೊಟ್ಟ. ಕಳುವಾರಹಳ್ಳಿ ಬೈಲು ಅಲ್ಲೊಂದು ಮೂಗುತ್ತ, ಅಲ್ಲಿ ದನಗಳ ಕೊಪ್ಪಲು ಹಾಕಿ ಅದರೊಳಗೊಂದು ಮಂಚಿಕೆ ಮಾಡಿಕೊಂಡು ಸ್ವಾಮಿ ಜುಂಜಪ್ಪ ವಾಸನೇ ಮಾಡತೊಡಗಿದ. ದನಾದಿ ದನಗಳು ಕಳುವೋರಹಳ್ಳಿ ಬೈಲು, ಹುಲಿಕುಂಟೆ ಏಣು, ರಂಗನಹಳ್ಳಿ ಕಾವಲು, ಚಿಕ್ಕಸಂದ್ರ ಕಾನು, ಹಂಡೇನಹಳ್ಳಿ ಕೆರೆ, ಚಂಗಾವರದ ದಿಣ್ಣೆ ಇಲ್ಲೆಲ್ಲಾ ಈಜಾಡಿಕೊಂಡು ಮೇಯಿಕೊಂಡವು. ಇವೇ ಏಳು ಮೊಣಕಗಳು ಈಲಾಗಿ ಕರು ಹಾಕಿದವು. ಅವು ಬೆಳೆದು ದೊಡ್ಡವಾದವು. ಬೆಳೆದು ಬೆಳೆದು ಗೋವು ಹೆಚ್ಚಿಕೊಂಡು ಬರುತಾ ಬರುತಾ ಏಳು ಲಕ್ಷದ ಮೇಲೆ ಗೋವು ಹೆಚ್ಚಿಕೊಂಡು ಬಿಟ್ಟವು. ಮೊದಲಿಗೆ ಜುಂಜಪ್ಪ ಒಬ್ಬನೇ ದನ ನೋಡಿಕೊಳ್ಳುತ್ತಿದ್ದ. ಈಗ



ಮಾರಣ್ಣ-ಮೈಲಣ್ಣ ಅಣ್ಣನ ಜೊತೆ ದನಗಳ ಕಾವಲಿಗೆ ನಿಂತರು. ಈಗ ದನ ಹೆಚ್ಚಾದ ಮೇಲೆ ದನಗಳು ಮಂಚಲದೊರೆ ಕಾವಲು, ಬಾಣಗೆರೆ, ಮಣ್ಣೆಮಾರಿ ಕಾವಲು, ಮರಡಿಗುಡ್ಡದ ಕಾವಲು, ಹೊನ್ನೇನಹಳ್ಳಿ ಕಾವಲು, ಚೇಳೂರು ಕೆರೆ, ಸಿರಾದ ಬಯಲು, ಗಮ್ಮನಹಳ್ಳಿ ದಿಣ್ಣೆ, ಚಿಕ್ಕನಹಳ್ಳಿ ಏಣು ಇತ್ತ ಕಡಿಕೆ ಹಿರಿಯೂರು ಬಯಲು, ಹುಲಿಕುಂಟೆ ಅಂಗಳ, ಕ್ಯಾದಿಕುಂಟೆ ಕಟ್ಟೆ, ಬರಗೂರ ದಿಣ್ಣೆ, ವೀರಬೊಮ್ಮನಹಳ್ಳಿ ದಿಬ್ಬ, ತರೂರು ಏಣು, ರತ್ನಸಂದ್ರದ ಕಾವಲು, ಅಮರಾಪುರದ ಬಯಲು, ಧರ್ಮಪುರ ತಗ್ಗಿನಿಂದ ವೇಣುಕಲ್ಲು ಗುಡ್ಡ, ಇಕ್ಕನೂರು ದಿಣ್ಣೆ, ಗಾಸಿ, ದ್ವಾರನಕುಂಟೆ, ಉತ್ತಪ್ಪನ ಕಟ್ಟೆ ತನಕ ದನಗಳು ಕೆರೆದಿರಿಕೊಂಡು, ಈಜಾಡಿಕೊಂಡು ಮೇಯುತ್ತಿದ್ದವು. ನರಮನುಷ್ಯರಿಗೇನು ದೇವಾನುದೇವತೆಗಳಿಗೂ ಆಶ್ಚರ್ಯ ಆಗಿಬಿಡ್ತು. ಜುಂಜಪ್ಪನ ದನ ಅಂದರೆ ಭೂಮಿ ತುಂಬಾ ವಾಲಾಡಿಕೊಂಡು ಬಸವಗಳು ಬರುತ್ತಿದ್ದವು. ದನಗಳಿಗೂ ಒಂದೊಂದಕ್ಕೂ ಒಂದೊಂದು ಹೆಸರಿಕ್ಕಿ ಜುಂಜಪ್ಪ ಕರೀತಿದ್ದ. ಜುಂಜಪ್ಪ ಬಿದಿರು ಗಣೆ ತಕ್ಕೊಂಡು ಮರದ ಮೇಲೆ ಕುಂತು ಗಣೆ ಹಿಡಿದು ಬಿಟ್ಟರೆ ಹುಲ್ಲಮ್ಮ, ಕಲ್ಯಾಣಿ, ದೈಮಾರಿ, ದೇವಕ್ಕ, ಗಂಗೆ-ಗೌರಿ, ಭದ್ರೆ ಹೀಂಗೆ ಒಂದೊಂದು ದನಿಗೂ ಒಂದೊಂದು ಹೆಸರಿಕ್ಕಿ ಕರೆದರೆ ಅವು ಓಡೋಡಿ ಬರುತ್ತಿದ್ದವು.

## ಹೊಟ್ಟೆಕಿಚ್ಚಾದ ಸೋದರ ಮಾವುಗಳು

ಜುಂಜಪ್ಪಗೆ ಏಳೇ ಏಳು ಕರ ಕೊಟ್ಟಿದ್ದರಲ್ಲ ಮಾವುಗಳು ಅವೆಲ್ಲಾ ಹೆಚ್ಚಿಕೊಂಡು ಈಗ ಏಳು ಲಕ್ಷ ಆಗಿಬಿಟ್ಟವು. ದನ ಅಂದರೆ ಜುಂಜಪ್ಪ, ಜುಂಜಪ್ಪ ಅಂದರೆ ದನ. ಬಸವನೂ ಜುಂಜಪ್ಪನೇ ಆಗಿಬಿಡ್ತು. ಇದರಿಂದ ಹುಲ್ಲು ನೀರಿಗೆ ಬರವೂ ಬಂತು, ಜಾಸ್ತಿ ದನ ಆದವಲ್ಲ ಅದಕ್ಕಾಗಿ. ಇದು ಅವರ ಸೋದರ ಮಾವಗಳಿಗೆ ತಡೆಯಲಾಗಲಿಲ್ಲ. ಅವುರ ದನ ಅಂಗೇ ಇದ್ದವು. ಹೆಚ್ಚಲಿಲ್ಲ, ಕಡಿಮೆ ಆಗಲಿಲ್ಲ. ಇವನ ದನಗಳು ಮಾತ್ರ ಭೂಮಿ ತುಂಬಾ ಆಗಿಬಿಟ್ಟವು. ಆಗ ಏನಾರ ಮಾಡಿ ಜುಂಜಪ್ಪನ ದನಗಳಿಗೆ ಕೇಡು ಮಾಡಬೇಕೆಂದು ಮಾವಗಳು ತೀರ್ಮಾನ ಮಾಡಿದರು. ಮೊದಮೊದಲು ಮಾಟಶೂನ್ಯ ಮಾಡಿರು. ರೋಗ ಬರಂಗೆ ಜಾಡು ಮಾಡಿಸಿದರು. ಜಾಡು ಅಂದರೆ ದನ ಹೋಗಿ ಬರೋ ಜಾಗದಲ್ಲಿ ಕಾಯಿಲೆ ದನ ಕಟ್ಟಿರೆ ಅಥವಾ ಸತ್ತ ದನ ಬಿಸಾಕಿರೆ ಆವಾಗ ಖಾಯಿಲೆ ಹರಡುತ್ತೆ. ಅಂಥ ಕೆಲಸನೂ ಮಾಡಿದರೂ ಏನೂ ಪ್ರಯೋಜನವಾಗಲಿಲ್ಲ. ಏನು ಮಾಡಾದು? ಸುತ್ತಲ ಏಳೂರು ಕಾವಲಾಗೂ ಜುಂಜಪ್ಪನ ದನಗಳೇ ಮೇದು, ಪರಸವ್ವನ ಕೆರೆಯಾಗೆ ನೀರು ಕುಡಿದು, ಸಗಣಿ ಹಾಕಿಕೊಂಡು ಲಗ್ಗೆ ಹೊಡಕೊಂಡು ಮೇಯುತ್ತಿದ್ದವು. ಇದರಿಂದ ಸೋದರ ಮಾವರಿಂದ ದನಗಳಿಗೆ ಹುಲ್ಲು ಇಲ್ಲದೆ ಜುಂಜಪ್ಪನ ದನಗಳು ಮೇದು ಬಿಟ್ಟ ಮೋಟು ಸಿಗದಂಗಾಯ್ತು. ಕೆರೆ ನೀರೆಲ್ಲ ಗಂಜಲು. ಬಯಲೂ ಸಗಣಿಯಾದಂಗಾಯ್ತು. ಇದೇ ಸೋದರಮಾವಂದಿರುಗಳಿಗೆ ಹಿಂಸೆ ಆತು. ಏನಾರು ಮಾಡಿ ಜುಂಜಪ್ಪನೂ, ಅವುನ ದನಗಳೂ ಸಾಯಿಸಬೇಕೆಂದು ಮಾವುಗಳು ಮಾತಾಡಿಕೊಂಡರು.

## ಶಿವನೂ ಜುಂಜಪ್ಪನಿಗೆ ಕ್ರೂರನಾದ

ಯಾವಾಗ ಜುಂಜಪ್ಪ ಏಳು ಲಕ್ಷ ದನಗಳ ಒಡೆಯನಾದನೋ ಆವಾಗ ಎಲ್ಲರ ಕಣ್ಣು ಇವನ ಮೇಲೆ ಬಿತ್ತು. ಜುಂಜಪ್ಪನ ದನಗಳ ಕಾಟ ತಟ್ಟಿಕೊಳ್ಳಾದು ಕಷ್ಟ ಅನ್ನಂಗಾಯ್ತು. ಶಿವನೂ ಜುಂಜಪ್ಪನ ಪಾಲಿಗೆ ಕ್ರೂರವಾದ. ಇದಕ್ಕೆ ಶಿವನ ಶಾಪವೂ ಕಾರಣ. ಅದೇನೆಂದರೆ ಈ ಗೊಲ್ಲರು ಇದ್ದರಲ್ಲ ಅವರೆಲ್ಲರೂ ಶಿವನ ಗಣಗಳನೇ. ಕೈಲಾಸದಲ್ಲಿ ಶಿವಗಣವಾಗಿದ್ದವರು. ಇದರಲ್ಲಿ ಕಂಬೇರಗೊಲ್ಲರು ಒಬ್ಬರು. ಈ ಕಂಬೇರಗೊಲ್ಲರೇ ಭೂಕೈಲಾಸದ ಶಿವಗಣಗಳು. ಶಿವ ಏನು ಮಾಡಿದನಪ್ಪ ಎಂದರೆ ಜುಂಜಪ್ಪನ ಸತ್ವ ಪರೀಕ್ಷೆ ಮಾಡಿಬಿಡಬೇಕು, ಅವ್ವನ ತಾಯಿನೂ ಸತ್ವಪರೀಕ್ಷೆಯಲ್ಲಿ ಗೆದ್ದವಳೆ. ಕಂಬೇರ ಗೊಲ್ಲರು ಪರಮೇಶ್ವರನ ದ್ವಾರಪಾಲಕರು. ಶರಣರು ಕೈಲಾಸಕ್ಕೆ ಹೋದಾಗ, ಅವರನ್ನೆಲ್ಲಾ ಹಂಗಿಸಿ, ಅಂದು ವಾಪಸ್ಸು ಕಳಿಸಿದ್ದರು. ಆ ಶಾಪಕ್ಕೆ ಕಂಬೇರರು ಸಿಕ್ಕಿದ್ದರು. ಇದಕ್ಕೆ ತಕ್ಕನಾಗಿ ಭೂಲೋಕದಲ್ಲಿ ಕಂಬೇರ ಗೊಲ್ಲರು ಅಂಬ್ತಾ ಹುಟ್ಟಿ ಜುಂಜಪ್ಪನ ಮಾವುಗಳಾಗಿದ್ದಾರೆ. ವೀರಭದ್ರನ ಅವತಾರದಲ್ಲಿ ಜುಂಜಪ್ಪನೂ ಜನಿಸಿದ್ದಾನೆ. ಅದರಿಂದಲೇ ಕಂಬೇರಿಗೆ ಜುಂಜಪ್ಪನನ್ನು ಕಂಡರೆ ಆಗಲ್ಲ. ಅದೂ ಮಾವುಗಳು ಕೊಟ್ಟ ಏಳು ಕರ, ಏಳು ಲಕ್ಷ ದನ ಹೆಚ್ಚಿಕೊಂಡದ್ದು ಅವರಿಗೆ ತಡಕೊಳ್ಳಲಾಗಲಿಲ್ಲ. ಜುಂಜಪ್ಪನ ವೈರಿಗಳಾದರು. ಅದೂ ಅಲ್ಲದೆ ಕಂಬೇರು ಶರಣರನ್ನು ನಿಂದನೆ ಮಾಡಿದ್ದರಿಂದ ನರಮನುಷ್ಯರಾಗಿ ಹುಟ್ಟಿ, ವೀರಭದ್ರನ ಅವತಾರದ ನರಮಾನವ ಜುಂಜಪ್ಪನಿಂದ ನಾಶವಾಗಲು ಅವತಾರ ಎತ್ತಿದವರು. ಈಗ ತಡೆದುಕೊಳ್ಳಲಾರದಷ್ಟು ಸಿಟ್ಟು, ಸಂಕಟ, ಹೊಟ್ಟೆಕಿಚ್ಚು ಬಂದು ಬಿಡ್ತು, ಕಾಡುಗೊಲ್ಲರಿಗೆ ಈಗ ಏನೂ ಮಾಡಕಾಗಲಿಲ್ಲ. ಮಾಟ ಶೂನ್ಯ ಮಾಡಿಸಿ, ಜುಂಜಪ್ಪನನ್ನು, ಅವ್ವನ ದನಗಳನ್ನೂ ಸಾಯಿಸಬೇಕೆಂದು ತೀರ್ಮಾನಿಸಿದರು.

# ಜುಂಜಪ್ಪನಿಗೆ ಮಾಟ

ನಮ್ಮ ತಂಗಿ ಚಿನ್ನಿಮಗ ಜುಂಜಪ್ಪ ಅಸಾಧ್ಯವಾದವನು. ಅವನನ್ನು ಬಗ್ಗಿಸಾದು ಯಾರಿಂದಲೂ ಆಗಲ್ಲ. ಈಗ ಅವನನ್ನು ಮಾಟ ಮಾಡಿಸಿ, ಅವುನ ದನ ಸಾಯಿಸಿ, ಅವುನ್ನೂ ಆಹುತಿ ತಗೋಬೇಕೆಂದು ಮಾವುಗಳು ತೀರ್ಮಾನಿಸಿದರು.

ಹುಲಿಕುಂಟೆಯೆಂಬೋದು ಕಳುವಾರಹಳ್ಳಿಗೆ ಮೂಡು ಮುಂದಾಗಿ ರವಾಟು ಬಲಕ್ಕೆ ಅದೆ. ಅಲ್ಲಿದೊಂದು ದೊಡ್ಡ ಕೆರೆ. ಆ ಕೆರೆಗೆ ಜುಂಜಪ್ಪನ ದನ ದಿನಾಲೂ ನೀರು ಕುಡಿಯಲು ಬರುತ್ತಿದ್ದವು. ಬೇವಿನಹಳ್ಳಿ, ಚಂಗಾವರ, ಚಿಕ್ಕೇನಹಳ್ಳಿಯಾಗಾಸಿ ಹಾದು ಹುಲಿಕುಂಟೆಗೆ ಹೋಗಾವು. ಹಾಲಪ್ಪನ ಅಡ್ಡೋಣಿ ದನ ದಿನಾಲೂ ಹುಲಿಕುಂಟೆ ಕಡೆಗೆ ಹೋಗುತ್ತಿದ್ದುದನ್ನು ಕಂಬೇರು ಕಂಡಿದ್ದರು. ಕಂಬೇರಿಗೆ ಇದು ತಡಕಣಕ್ಕಾಗದಷ್ಟು ಸಿಟ್ಟು. ನಮ್ಮ ದನಗಳಿಗೆ ಒಂದು ಕಡ್ಡಿ ಹುಲ್ಲು ಇಲ್ಲದಂಗೆ ಮಾಡ್ತಾ ಅವನಲ್ಲ ಈ ಜುಂಜಪ್ಪ ಅಮ್ತಾ ಒಂದು ಪ್ಲಾನ್ ಮಾಡಿರು. ಅದೇನಪ್ಪಾಂದ್ರೆ ಹುಲಿಕುಂಟೇಲಿ ತಮ್ಮಣ್ಣ ಅಂಮ್ತಾ ಒಬ್ಬರಿದ್ರು. ತಮ್ಮಣ್ಣನ ತಾಕೆ ಹೋಗಿ ಏನಂತ ಕೇಳಿಕಂಡ್ರಪ್ಪ ಅಂದ್ರೆ

'ಜುಂಜಪ್ಪ ನಮ್ಮ ಬಾಮೈದುನ. ಅವುನಿಗೆ ಏನಿಲ್ಲ ಅಂಬ್ತಾ ಏಳೇ ಏಳು ಹಸುವಿನ ಮೊಣಕಗಳುನ್ನ ಕೊಟ್ಟಿದ್ದೆವು. ಅವು ಈಚಲು ಹುಳ ಒಡೆದುಕೊಂಡಂಗೆ ಒಡೆದು ಭೂಮಿ ತುಂಬಾ ಹರಡಿಕೊಂಡಾವೆ. ನಮ್ಮ ದನ-ಕರುಗಳಿಗೆ ಹುಲ್ಲು ನೀರಿಲ್ಲ. ನಮಗೆ ಏಳಿಗೆ ಆಗುತ್ತಿಲ್ಲ. ಇದರಿಂದ ನಮಗೆ ತೊಂದರೆ ಆಗಿದೆ. ಆದುದರಿಂದ ನಿನ್ನ ಪಾದಕ್ಕೆ ಬಂದು ನಮ್ಮ ಕಷ್ಟ ಹೇಳಿಕೋತೀವಿ ಅಂದರು. ಅದಕ್ಕೆ ನಾನು ಏನು ಮಾಡಬೇಕೆಂದು ಬಿಡಿಸಿ ಹೇಳಿ ಗೌಡ್ರೆ ಅಂದನು. ಆಚಾರಿ ಕೇಳಿದ. ಆಗ ಕಂಬೇರು ಬಾಯಿ ಬಿಟ್ರು. 'ಸ್ವಾಮಿ ಈಗ ನಮಗೆ ಜುಂಜಪ್ಪನಿಂದ ಉಳಿಗಾಲವಿಲ್ಲ. ನೀವು ಕಲಿತಿರುವ ಮಾಟದ ವಿದ್ಯೆಯಿಂದ ಮಾಟ ಶೂನ್ಯ ಮಾಡಿ, ಜುಂಜಪ್ಪನನ್ನು ಸಾಯಬಡಿಬೇಕು. ಹಾಗೇ ಮಾಡಿಬಿಡು ನಿಮಗೆ ಕೇಳಿದಷ್ಟು ಹೊನ್ನು ಕೊಡುತೀವಿ' ಅಂತ ಅಂಗಲಾಚಿದರು. 'ಅಯ್ಯೋ ಅಯ್ಯೋ ಇದೇನು ಗೌಡ್ರೆ ನೀವು ಹೇಳಾದು! ಜುಂಜಪ್ಪ ಪರಮೇಶ್ವರ. ಅವನ ತಂಟೆಗೆ ಬಂದ್ರೆ ಸುಮ್ಮನೆ ಬಿಟ್ಟಾನ!

ಸುಟ್ಟು ಬೂದಿ ಮಾಡಿಬಿಡುತಾನೆ. ಸಾಧ್ಯವಿಲ್ಲ ಹೋಗಿ' ಅಂದನು. ಅಂಗಲ್ಲಾ ಕಣ್ರಪ್ಪ! ಪಂಡಿತರೆ, ಅವುನ ದನಗಳ ಒಳಗೆ ನಾವು ಬದುಕಾಕಾಗುವುದಿಲ್ಲ. ಹೋಗಲಿ ಅವುನ ದನ ನೀರು ಕುಡಿಯೋ ಹುಲಿಕುಂಟೆ ಕೆರೆಗಾದರೂ ನೀವು ಮಾಟ ಶೂನ್ಯ ಮಾಡಿ. ದನ ಸಾಯಿಬಡಿಬೇಕೆಂದು ಕಾಲು ಕಾಲು ಹಿಡಿದುಕೊಂಡರು. ಅಲ್ಲದೆ ನಿಮಗೂ ಜುಂಜಪ್ಪನಿಗೂ ಮಾಟದ ವಿಚಾರದಲ್ಲಿ ಆಗಿಬರೋಲ್ಲ. ಅಂತವನಿಗೆ ತೊಂದ್ರೆ ಕೊಡಾದು ತಪ್ಪಲ್ಲ. ನೀವು ಮಾಟ ಶೂನ್ಯ ಮಾಡಿರೆ ನಾಟುತ್ತ? ನಿಮ್ಮ ಹೆಸರು ಸೂರ್ಯ ಚಂದ್ರ ಇರೋವರೆಗೂ ಇರುತ್ತೆ. ನಮ್ಮ ಕಷ್ಟ ಪರಿಹರಿಸು ತಂದೆ ಅಂಬ್ತಾ ಅಂಗಲಾಚಿದರು.

ಜುಂಜಪ್ಪನಿಗೆ ಮಾಟ ಮಾಡಬೇಕೆಂದು ಕಂಬೇರಗೊಲ್ಲರು ಆಗೋದಿಲ್ಲ ಅಂಬ್ತಾ ಆಚಾರಪ್ಪ ಕೊನೆಗೆ ಒಪ್ಪಿಕೊಂಡು 'ಆಯ್ತು ನಾವು ಜುಂಜಪ್ಪನ ಮಾಟ ಮಾಡಕಾಗಲ್ಲ. ಅವುನ ದನಗಳಿಗೆ ಮಾಟ ಮಾಡುತೀವಪ್ಪ. ಅದು ದನಗಳಿಂದ ಅವನಿಗೂ ತಲುಪಿ ಜುಂಜಪ್ಪನಿಗೂ ಕೇಡು ಆಗಬಹುದು' ಎಂದನು.

ತಮ್ಮಣ್ಣ ಮೊದಲಿಗೆ ಏನು ಮಾಡಿನಪ್ಪ ಎಂದರೆ ಏಳು ಬೇತಾಳ ಸೃಷ್ಟಿಮಾಡಿ ಜುಂಜಪ್ಪನ ಹಾವಿನ ಗೂಡಿಗೆ ಬಿಟ್ಟ. ಆ ಬೇತಾಳಗಳೋ ರಣಚಂಡಿ ಚಾಮುಂಡಿ ತರ ಬೆಳೆದು ಕಳುವಾರಹಳ್ಳಿ ಹಾಲಪ್ಪನ ಅಡ್ಡೇಣಿಗೆ ಬಂದ್ವು. ಜುಂಜಪ್ಪನ ದನಗಳ ಹಟ್ಟಿಗೆ ನುಗ್ಗಬೇಕು. ಜುಂಜಪ್ಪ ಮಂಚದ ಮೇಲೆ ಮಲಗಿದ್ದವನಿಗೆ ಮುಂಗಾರು ಮಿಂಚು ಬಡಿದಂಗಾತು. ಎದ್ದು ಕೂತ. ಮೂಡಲ ಕಡೆಯಿಂದ ಚಿತ್ರಗಿರಿ ಪರ್ವತ ಬಂದಂಗೆ ಬೇತಾಳ ಬರುತಾ ಅವೆ. ಜುಂಜಪ್ಪನಿಗೆ ಗೊತ್ತಾಗಿ ಬಿಡ್ತು. ಓಹೋ ಇದು ಕಂಬೇರ ಕರಾಮತ್ತು ಅಂಬ್ತಾ ತಿಳಿದು ಕುಂತ ಜಾಗದಿಂದಲೇ ಈಶ್ವರನ ಸ್ಮರಣೆ ಮಾಡಿ ಉರಿಗಣ್ಣ ಬಿಟ್ಟ. ಜುಂಜಪ್ಪನ ದನಗಳ ಹಟ್ಟಿ ಬಾಗಿಲು ಏಳು ಹೆಜ್ಜೆ ಇರುವಾಗಲೇ, ಆ ಏಳು ಬೇತಾಳಗಳೂ ಬೆಂಕಿ ಹತ್ತಿಕೊಂಡು ಉರಿದುಹೋಗಿಬಿಟ್ಟವು.

ಇತ್ತ ಈ ಹೊತ್ತು ಬೆಳಕು ಹರಿಯೋದರೊಳಗೆ ಜುಂಜಪ್ಪನ ದನನೆಲ್ಲಾ ಬೇತಾಳಗಳ ಬಿಟ್ಟು ತಿಂದಾಕಿಸಿಬಿಡುತೀನಿ ಅಂಬ್ತಾ ಹೇಳಿದ್ದನಲ್ಲ ಹುಲಿಕುಂಟೆ ತಮ್ಮಣ್ಣ, ಅವುನ ಮಾತು ನಂಬಿಬಿಟ್ಟು, ಬಾಯಿಗೆ ಬಟ್ಟೆ ತುರುಕಿಕೊಂಡು ಅದುರುಗಾಲಿಕ್ಕಿಕೊಂಡು, ತಲೆ ಮ್ಯಾಲೆ ವಲ್ಲಿ ಮುಚ್ಚಿಕೊಂಡು ಬರುತಾರೆ ಕಂಬೇರು. ಬೇತಾಳ ಉರಿದು ಉರಿ ಚಿತ್ರಗಿರಿ ಬೆಟ್ಟದಂಗೆ ಕಾಣುತ್ತದೆ. ಹೋ ಹೋ ಜುಂಜಪ್ಪನ ಹಾವಿನ ಗೂಡಿಗೆ ಆಚಾರಿ ಮಾಯಾದ ಬೆಂಕಿ ಹಾಕಿ ದನನೆಲ್ಲಾ ಸುಟ್ಟುಬಿಟ್ಟ ಅಂಬ್ತಾ ಕ್ಯಾಕೆ ಹೊಡೆದುಕೊಂಡು ಏಳು ಜನ ಮಾವುಗಳೂ ಓಡೋಡಿ ಬರುತ್ತಾರೆ. ಹತ್ತಿರಕ್ಕೆ ಬರುತ್ತಾರೆ. ಜುಂಜಪ್ಪನ ಹಾವಿನ ದೂಡಿನ ದನ ಕುಡಿದ ನೀರು ಅಳ್ಳಾಡದಂಗೆ, ಮೆಲಕಾಡಿಕೊಂಡು ಮಲಗಿವೆ. ಜುಂಜಪ್ಪ ಗಣೆ ಊದುತಾ ಕುಂತವ್ನೆ.

ಇದನ್ನ ನೋಡಿ ಕಂಬೇರು ಎದೆಗೆ ಗುಂಡೇಟು ಹೊಡೆದಂಗಾಯ್ತು. ಅಂಗೆ ಅರುಗಾಗಿ ಹುಲಿಕುಂಟೆ ಹಾದಿ ಹಿಡಿದರು. ತಮ್ಮಣ್ಣ ಮಹಾಪಂಡಿತ. ಮನೆ ಮುಂದೆ ಕುಂತಿದ್ದ. ಕಂಬೇರು ದೂರದಿಂದಲೇ ಪಂಡಿತರೆ ಪಂಡಿತರೆ ಅಂಬ್ತಾ ಕೂಗಿದರು. ತಮ್ಮಣ್ಣ ಸುಮ್ಮನೆ ಕೂತಿದ್ದವನಂತಿದ್ದ. ಹೊನ್ನಹಟ್ಟಿ ಕಂಬೇರಗೊಲ್ಲರು ಅನುಮಾನ ಬಂದು ನಿಮ್ಮ ಕೆಲಸ ಆಗಿರಬೇಕಲ್ವ ಅಂದನು. ಆಗ ಕಂಬೇರು ಹಣೆ ಹಣೆ ಬಡಕೊಂಡು ನಡೆದಿರಾ ಸಂಗತಿ ಹೇಳಿದರು. ತಮ್ಮಣ್ಣ 'ಜುಂಜಪ್ಪ ಮಹಾ ಶಕ್ತಿವಂತ. ಸತ್ಯವಂತರ ಮಗ. ಅವುನ ತಂಟೆ ನಮಗೂ ಬ್ಯಾಡ ನಿಮಗೂನೂ ಬ್ಯಾಡ' ಅಂದನು. ಆ ಮಾತು ಕೇಳುತಲೇ ಮರಿ ಕರಡಿ ಅತ್ತಂತೆ ಅತ್ತರು, ಬೇಡಿಕೊಂಡರು. ಏನಾರ ಮಾಡಿ ನಮ್ಮ ದನಗಳನ್ನ ಉಳಿಸಪ್ಪ ಅಂತಾ ಅಂಗಲಾಚಿದರು.

ಕಂಬೇರಗೊಲ್ಲರ ಬಂಗ ನೋಡಲಾರದ ತಮ್ಮಣ್ಣ 'ಆಯ್ತು, ಜುಂಜಪ್ಪನ ದನ ನೀರು ಕುಡಿಯುವ ಕೆರೆಗೆ ಜಾಡು ಮಾಟ ಮಾಡುತೀವಿ. ಅದರಿಂದ ಅವುನ ದನಗಳೆಲ್ಲಾ ಸತ್ತೋಗಿ ಬಿಡುತವೆ' ಅಂದನು. ಜಾಡು ಮಾಡಬೇಕಾದರೆ ಬೇಕಾದ ಸಾಮಾನುಗಳ ಪಟ್ಟಿ ಹೇಳಿದನು. ನೋಡಿ ಹುಲಿಕುಂಟೆ ಕೆರೆಗೆ ಜುಂಜಪ್ಪನ ದನ ನೀರು ಕುಡಿಯಾಕೆ ಬಂದೇ ಬರುತವೆ. ಅಲ್ಲಿಗೆ ಮಾಟ ಮಾಡುತೀನಿ ಅಂದನು.

**ಹುಲಿಕುಂಟೆ ಕೆರೆಗೆ ಮಾಟ**

ತಮ್ಮಣ್ಣಾಚಾರಿ ಕಂಬೇರಗೊಲ್ಲರ ಒತ್ತಾಯಕ್ಕೆ ಮಣಿದು ಜುಂಜಪ್ಪನ ದನಗಳಿಗೆ ಮಾಟ ಮಾಡೋದು ಅಂತ ತೀರ್ಮಾನಿಸಿದ. ಆಗ ಹೀಗೆ ಹೇಳ್ತಾನೆ 'ಆಯ್ತು ಮುಂದಿನ ಆಯತವಾರ (ಭಾನುವಾರ) ಅಮಾಸೆ ಬರುತ್ತೆ. ಅವತ್ತೆ ಮಾಡಿರೆ ಹಿಡಿಯುತ್ತೆ. ಆಗಬಹುದಾ?' ಅಂದ್ರು. ಗೊಲ್ಲಗೌಡರು 'ಆಗಬಹುದು ಸ್ವಾಮಿ' ಅಂದ್ರು. ಮಾಟ ಶೂನ್ಯ ಮಾಡಾಕೆ ಮೂರು ಬಗೆಯ ರಕ್ತ ಆಗಬೇಕು. ಕರೇ ಮೇಕೆ ಹೋತ, ಕರೇ ಕೋಳಿ, ಒಂದು ಹಂದಿ ಕುನ್ನಿ - ಈ ಮೂರನ್ನು ಹೊಂದಿಸಿಕೊಳ್ಳಬೇಕು. ಒಂದು ಸೇರು ಗೋಧಿ ಹಸಿಟ್ಟು, ನೂರೊಂದು ಹೊಸ ಕುಡಿಕೆ, ಕುಂಬಾರ ಗುಂಡಿ (ಆವಿಗೆ) ಬೂದಿ, ಇಪ್ಪತ್ತೊಂದು ತಾಮ್ರದ ಮೊಳೆ, ಇಪ್ಪತ್ತೈದು ಗಜನಿಂಬೆಹಣ್ಣು, ಇಪ್ಪತ್ತೊಂದು ಬಾಳೆಹಣ್ಣು, ಒಂಬತ್ತು ಸೇರು ಅಕ್ಕಿ ಅನ್ನ, ಹೊಸ ಬಾನದ ಮಡಕೆ, ಅದಕೆ ಮುಚ್ಚಳ, ಮೂರು ಬಗೆಯ ಸೌದೆ. ಮೂರು ಕೆರೆ ಜೇಡಿ ಮಣ್ಣು, ಮೂರು ಸ್ಮಶಾನದ ಮಣ್ಣು, ಹೊಸ ಪಂಚೆ, ಇಪ್ಪತ್ತೊಂದು ಕಾಸು, ಹಂಗುನೂಲು, ಅಂಕಾಲೆ ಕಡ್ಡಿ ಇಷ್ಟನ್ನು ರೆಡಿ ಮಾಡಿಕೊಳ್ಳಿ. ನಾವು ಶನಿವಾರ ಸಂಜೆ ಹೊತ್ತಿಗೆ ನಿಮ್ಮೂರಿಗೆ ಬರುತೀನಿ.

ಆಯತವಾರ, ಸೂರ್ಯ ಹುಟ್ಟುವುದಕ್ಕೆ ಮುಂಚೆ ಯಾರ ಕಣ್ಣಿಗೆ ಬೀಳದಂಗೆ ಮಾಟದ ಕೆಲಸ ಆಗಬೇಕು, ಅಂದರು ಪಂಡಿತರು. ಅದಕ್ಕೆ ಒಪ್ಪಿದ ಕಂಬೇರು, ಏಳು ಹೋರಿಗಳಿಂದ ಹೊರಿಸಿಕೊಂಡು ಬಂದಿದ್ದ ನಾಣ್ಯಗಳನ್ನು ಪಂಡಿತರಿಗೆ ಕೊಟ್ಟು, ಬೆಳಕು ಹರಿಯೋದರೊಳಗೆ ಕಳುವಾರಹಳ್ಳಿ ತಾವ ಇರುವ ಕಂಬೇರಹಟ್ಟಿಗೆ ಸೇರಿಕೊಂಡರು.

ಸರಹೊತ್ತಿಗೆ ಎದ್ದು ಗಾಡಿ ಕಟ್ಟಿರು. ಸಾಮಾನುಗಳನೆಲ್ಲಾ ಹೇರಿ ಕಳಿಸಿ, ಪಂಡಿತರನ್ನು ಕರಕೊಂಡು ಒಂದು ಗಾಡಿಲಿ ಕೂರಿಸಿಕೊಂಡು ಭೂತಪ್ಪನ ಗುಡಿ ಏಣಿನಾಗಿ ಹೊರಟು ಕೋಳಿ ಕೂಗೋ ಮುಂಚೆ ಹುಲಿಕುಂಟೆ ಕೆರೆ ದಂಡೆ ತಲುಪಿದರು.

ಹುಲಿಕುಂಟೆ ಕೆರೆಯೊಳಗೆ ಮೂಡು ಮುಖದಲ್ಲಿ ಒಂದು ಭಾಗ ಮಾಡಿಕೊಂಡರು. ಮೂಗರಿನ ಸಗಣಿಯಿಂದ ಸಾರಿಸಿದರು. ಮೂರು ಭೇತಾಳಗಳ ಸೃಷ್ಟಿಸಿ ಮೂರು ಕಡೆಗೂ ಮುಖ ಮಾಡಿ ಕಾವಲಿರಿಸಿದರು. ಜೇಡಿಮಣ್ಣು ಸೇರಿಸಿ ಕಲೆಸಿ ಚೌಡಿ ಮಾಡಿರು. ಅದನ್ನು ಪ್ರತಿಷ್ಠಾಪಿಸಿದರು. ಅದರ ಮುಂದೆ ಒಂಬತ್ತು ಸೇರಿ ಅಕ್ಕಿ ಬಾನ ಸುರಿದರು. ಅಗ್ರದೆಲೆ ಹಾಸಿ ಅದರ ಮುಂದೆ ಒಂದು ಕರೆ ಹೋತ, ಒಂದು ಹಂದಿ ಕುನ್ನಿ, ಒಂದು ಕೋಳಿ ಬಲಿ ಕೊಟ್ಟು ಒಂದು ಮಡಕೆಗೆ ಅದರ ರೈತ ಹಿಡಕೊಂಡರು. ನಿಂಬೆಹಣ್ಣು ಕತ್ತರಿಸಿ ದಿಕ್ಕು ದಿಕ್ಕಿಗೆ ದಿಕ್ಕುಬಂದಿ ಮಾಡಿದರು. ಬಾಳೆಹಣ್ಣು ಮುರಿದಿಟ್ಟರು. ನೂರೊಂದು ಕುಡಿಕೆಗೆ ಬೂದಿ ತುಂಬಿ, ಅದಕ್ಕೆಲ್ಲ ಮಸಾಣದ ಮಣ್ಣು, ಅದಕ್ಕೆ ಒಂದೊಂದಿಷ್ಟು ರಕ್ತ ಹಾಕಿದರು. ಒಂಬತ್ತು ಸೇರು ಹಸಿ ಅಕ್ಕಿ ತಕ್ಕೊಂಡು, ಒಂದೊಂದು ಅಕ್ಕಿ ಮೇಲೆ ಸ್ವಾಮಿ ಜುಂಜಪ್ಪನ ರೂಪನೆ ತಿದ್ದಿರು. ಕಪ್ಪು ಹಾಕಿ ನೋಡಿರು. ಸ್ವಾಮಿ ಜುಂಜಪ್ಪ ಎಲ್ಲಿ ಮಲಗಿದೋನೋ ನೋಡಿರು. ಸಕ್ಕನ್ನ ರಾತ್ರಿ ಜುಂಜಪ್ಪ ಏಳು ಲಕ್ಷದ ಗೋವಿನ ನಡುವೆ ಮಂಚ ಹಾಕಿಕೊಂಡು ಸುಖನಿದ್ರೆ ಮಾಡ್ತಾ ಅವನೆ. ಅವನೆದ್ರೆ ಇನ್ನು ತರವಲ್ಲ, ನಮ್ಮಿಂದ ಸಾಧ್ಯವಿಲ್ಲ ಅಂದುಬಿಟ್ರು ಮಾಟಗಾರರು. ಕೂಡಲೆ ಜುಂಜಪ್ಪ ಯಂಗೆ ಮಲಗಿದ್ದನೋ ಅಂಗೆ ಅಂಗೆ ಹನ್ನೆರಡು ಹನ್ನೆರಡು ಇಪ್ಪತ್ತನಾಲ್ಕು ಮಳೆ ತಗೊಂಡು ಅವನ ಚಿತ್ರದ ಮೇಲೆ ಹೊಡೆದುಬಿಟ್ರು. ದನಗಳ ನೀರು ಕುಡಿಯಾಕೆ ಮಾರಣ್ಣ, ಮೈಲಣ್ಣ ದನ ಕರಕೊಂಡು ನಾಳೆ ಮಧ್ಯಾಹ್ನದೊಳಗೆ ಹುಲಿಕುಂಟೆ ಕೆರೆಗೆ ನೀರು ಕುಡಿಸಾಕೆ ಬಂದೇ ಬರುತಾರೆ. ಆಗ ಅವುರ ತಲೆ ತೆಗಿಯಬೇಕು ಎಂದು ತಲೆ ಶಿರ ತೆಗೆಯಬೇಕೆಂದು ಬೇತಾಳಗಳಿಗೆ ಆಜ್ಞೆ ಮಾಡಿದರು. ಒಂದು ಹೊಟ್ಟೆ ಕರುವೊಂದನ್ನು ಹಿಡಕೊಂಡು ಬಂದು ಅದನ್ನು ಹುಲಿಕುಂಟೆ ಕೆರೆ ನಡುನೀರಿಗೆ ತಳ್ಳಿಕೊಂಡು ಹೋದರು. ಆ ಕರ ಅತ್ತ ಇತ್ತ ತಿರುಗದಂತೆ ಭರ್ಜಿ ಹೊಡೆದು ದಬ್ಬೆ ಕಟ್ಟಿ ನಿಲ್ಲಿಸಿದರು. ಆ ಕರುವಿನ ತಲೆ ಮ್ಯಾಲೊಂದು ದೀಪ ಹಚ್ಚಿಟ್ಟರು. ಮಾಟ, ಮಂತ್ರ ಮಾಡಿ ಹೊರಗೆ ಬರುವಾಗ ಅಕ್ಕಿ ಕಾಳಾಗೆ ಜುಂಜಪ್ಪನ ಚಿತ್ರ ಬರೆದು, ಅದಕ್ಕೊಂದು ಕೈಕಾಲು ಸೃಷ್ಟಿ

ಮಾಡಿದರು. ಮಾಟ ಮುಗಿದ ಮೇಲೆ ಕೀಲು, ಕೀಲು ಹಿಡಕೊಳ್ಳ ಅಂಗೆ ಜುಂಜಪ್ಪನಿಗೆ ಅಕ್ಕಿ ಕಾಳಿನ ಮೇಲೆ ತಾಮ್ರದ ಮೊಳೆ ಹೊಡೆದುಬಿಟ್ರು. ಆದರೂ ಸ್ವಾಮಿಗೆ ನಾಟನಿಲ್ಲ. ಅಂತೂ ಮಾಡಿದರು. ಕೊನೆಗೆ ಮಾಯಾದ ನಿದ್ದೆ ಬರುವಂತೆ ಮಾಟವ ಮಾಡಿ ಅಲ್ಲಿಂದ ಹೊರಟು ನಡೀತಿದ್ದರು.



## ಮಾಯಕಾರ ಜುಂಜಪ್ಪನಿಗೆ ಮಾಯಾದ ಸುಖನಿದ್ರೆ

ಕಂಬೇರಗೊಲ್ಲರ ಕುತಂತ್ರದಿಂದ ಹುಲಿಕುಂಟೆ ಕೆರೆ ನೀರಿಗೆ ಮಾಟ ಮಾಡಿರು. ಹೊಟ್ಟೆ ಕರುವನ್ನು ಕೆರೆ ಮಧ್ಯೆ ನಿಲ್ಲಿಸಿರು. ಮೂರು ಬೇತಾಳ ಸೃಷ್ಟಿ ಮಾಡಿ ಜೀವ ಕೊಟ್ಟು ನಿಲ್ಲಿಸಿರು. ತೀಡ್ರು ಹರಿಯೋ ಹೊತ್ತಿಗೆ ಹೊರಟು ಬಂದು ಕಳುವಾರಹಳ್ಳಿ ತವ ಕಂಬೇರಟ್ಟಿ ಸೇರಿಕೊಂಡರು.

ಇತ್ತ ಜುಂಜಪ್ಪನ ದನಗಳು ರಂಗನಹಳ್ಳಿ ಕಾವಲಾಗೆ ಚಿಕ್ಕಸಂದ್ರದ ಕಾವಲಾಗೆ, ಹೊನ್ನೇನಹಳ್ಳಿ ಕಾವಲಾಗೆ ಬೈರಸಂದ್ರದ ಕಾವಲಾಗೆ, ಗುಡ್ಡರಂಗಪ್ಪನ ಏಣಿನಾಗೆ, ಗುಡ್ಡದಾಗೆಲ್ಲಾ ಈಜಾಡಿಕೊಂಡು ಮೇಯ್ದು. ಸ್ವಾಮಿ ಜುಂಜಪ್ಪ ದೊಡ್ಡ ಹುಲಿಕುಂಟೆ ಏಣಿ, ಪಟ್ಟನಾಯ್ಕನಹಳ್ಳಿ ಬಯಲಾಯ್ದು ಮದ್ದಕ್ಕನಹಳ್ಳಿ ದಿಣ್ಣೆಗೆ ಬರುವಾಗ ಮಾಯಾದ ಆಕಳಿಕೆ ಬಂದಂತೆ ಆತು. ಮಾಯದ ತೂಕಡಿಗೆ ಬಂದಂಗೆ ಆತು. ಮಂಕು ಕವಿದು ಕಣ್ಣು ರೆಪ್ಪೆ ತೆರೆಯದ ಅಂಗೆ ಆಯ್ತು. ಕಾಲು ಎತ್ತಿ ಇಕ್ಕದಂಗೆ ಆಲಸ್ಯ ಬಂದು ಜಡವಾಯ್ತು. ಇದರಿಂದ ಸ್ವಾಮಿನೆ ಜುಂಜಪ್ಪ ಏನು ಮಾಡಿದನಪ್ಪ ಅಂದ್ರೆ, ಸ್ವಲ್ಪ ಹೊತ್ತು ನೆಲಕ್ಕೆ ಕುಂತ್ನು. ಹಿಂದಿನಿಂದ ಇವನ ಮಗ್ಗುಲಾಗಿ ಪಂಚಕಲ್ಯಾಣಿ ಎಂಬ ಹಸು ಮೇಯ್ತಿತ್ತು. ಅದನ್ನು ಕರೆದ. 'ನನಗೆ ಮಾಯದ ನಿದ್ದೆ ಕವಿತಾ ಬಂದದೆ. ಅದೇನು ಕೇಡೋ ಶಿವ ಬಲ್ಲ. ನಾನು ಸ್ವಲ್ಪ ಹೊತ್ತು ಈ ಆಲದ ಮರದ ಕೆಳಗೆ ಮಲಗಿರುತ್ತೀನಿ. ನೀನು ದನಗಳನ್ನು ಜಾಗ್ರತೆ ಮಾಡವ್ವ' ಅಂದು ಅಂಗೆ ಹೊಳ್ಳಿಕೊಂಡ. ಸರಿ, ಪಂಚಕಲ್ಯಾಣಿ 'ಆಯಿತಣ್ಣ ನೀನು ಹೇಳಿದಂಗೆ ನಮ್ಮ ಪುಣ್ಯಕೋಟಿಗಳಿಗೆ ಯಾವ ತೊಂದರೆನೂ ಬರದಂಗೆ ನೋಡಿಕೋತೀನಿ. ನೀನು ಸುಖನಿದ್ರೆ ಮಾಡಣ್ಣ' ಅಂತಂದು ಹೇಳಿತು. ಜುಂಜಪ್ಪ ಮದ್ದಕ್ಕನಹಳ್ಳಿ ಏಣಿನಾಗೆ ಹೆಬ್ಬಾಲದ ಮರದ ಕೆಳಗೆ ಮಲಗಿದ. ಸ್ವಾಮಿಗೆ ಭೂಮಿನೇ ಹಾಸಿಗೆ, ಆಕಾಶವೇ ಹೊದಿಕೆ, ಹಕ್ಕಿ ಪಕ್ಷಿ ಪದ ಹಾಡಿದವು. ದನಗಳು ಮೇಯ್ದುಕೊಂಡು ಮೇಯ್ದುಕೊಂಡು ಹುಲಿಕುಂಟೆ ದಿಣ್ಣೆಗೆ ಬಂದವು.

## ಗುಡ್ಡದ ರಂಗಪ್ಪನ ಉಪದೇಶ

ನಡು ಮಧ್ಯಾಹ್ನ, ಕೆಟ್ಟ ಬಿಸಿಲು, ದನಗಳೆಲ್ಲಾ ಮೇಯ್ದು ಬಿಟ್ಟು ದಣಿವಾಗಿ ಬಿಟ್ಟವೆ. ನೀರು ಕುಡಿಯಾಕೆ ಪರಸಕ್ಕನ ಕೆರೆ ಕಡೆಕೆ ಬತ್ತಾ ಅವೆ. ಸರಿ ಆಗ ಗುಡ್ಡದರಂಗಪ್ಪ ಏನು ಮಾಡಿದ ಗೊತ್ತಾ? ರಾತ್ರಿಯೆಲ್ಲಾ ಈ ಕಂಬೇರಗೊಲ್ಲರು ಕೆರೆಗೆ ಮಾಟ, ಮಂತ್ರ ಮಾಡುತ್ತಿರುವುದನ್ನು ನೋಡಿದ್ದ. ಆಗ ದನಗಳೆಲ್ಲಾ ಈ ವಿಷದ ನೀರು ಕುಡಿದು ಸತ್ತೋಗಿ ಬಿಡುತಾವೆ. ಏನು ಮಾಡಾದು ಅಂತ ಗುಡ್ಡದ ರಂಗನಾಥ ಯೋಚನೆ ಮಾಡಿದ. ಹಾಗಂತ ಸುಮ್ಮನೆ ಕೂತುಕೊಳ್ಳಲಿಲ್ಲ. ಕೂಡಲೆ ಜುಂಜಪ್ಪನ ದನಗಳಲ್ಲಿ ಪಂಚಕಲ್ಯಾಣಿ ಅಂಬ್ತಾ ಒಂದು ಹಸುವಿತ್ತು. ಬಹಳ ಸತ್ಯವಂತ ಹಸು. ಅದು ಪುಣ್ಯಕೋಟಿ ತರಾನೇ. ಅದಕ್ಕೆ ರಂಗಪ್ಪ ಹೇಳಿದ ಹುಲಿಕುಂಟೆ ಕೆರೆಗೆ ದನಗಳು ನೀರು ಕುಡಿಯದಂಗೆ ತಡೆಯುವಂತೆ ಮಾಡಿದ. ಪಂಚಕಲ್ಯಾಣಿನೂ ಗ್ಯಾನವಸ್ತೆ. ಏನು ಮಾಡುತ್ತೆ ಅಂದ್ರೆ ಆ ಕೆರೆ ಹತ್ತಿರ ಬಂದು ನೋಡುತ್ತೆ. ಅಲ್ಲೆಲ್ಲಾ ರಕ್ತ, ಬಣ್ಣದ ಸಾಮಾನು ಚೆಲ್ಲಾಡಿದೆ. ಮಂಡಲ ಹೊಡೆದು ಬಿಟ್ಟವೆ. ಅದರಾಗೆ ಒಂದು ಹನಿ ನೀರು ಕುಡಿದರೂ ಏಳು ಲಕ್ಷ ದನಗಳೂ ಸತ್ತು ಹೋಗಿ ಬಿಡುತಾವೆ ಅಂತ ಯೋಚನೆ ಮಾಡಿತು. ಆಗ ಪಂಚಕಲ್ಯಾಣಿ ಮಾರಣ್ಣ, ಮೈಲಣ್ಣರ ಬಳಿಗೆ ಬಂತು. ನಿಮ್ಮ ಸೋದರ ಮಾವುಗಳು ಕೆರೆ ನೀರಿಗೆ ಮಾಟ ಮಾಡಿ ವಿಷ ಹಾಕವರೆ. ಒಂದು ತೊಟ್ಟು ನೀರು ಕುಡಿಸಿದರೂ ಎಲ್ಲವೂ ಸಾಯಬೇಕಾಗುತ್ತೆ. ಅದಕ್ಕೆ ಈಗ ನೀವು ಪರಸವ್ವನ ಕೆರೆಗೆ ದನಗಳನ್ನು ಬಿಡದೆ ಹಿಂದಕ್ಕೆ ಅಟ್ಟಿರಿ. ನಾನು ಹೋಗಿ ನಿಮ್ಮಣ್ಣನ ಕರಕೊಂಡು ಬರುತೀನಿ ಅಂಬ್ತಾ ತಿರುಗಿ ಮಣ್ಣೆಮಾರಿ ಕಾವಲಾಗಿ ಮೇಕೇರಹಳ್ಳಿ ದಾಟಿ ಅಂತಃಪುರ ಬೂವನಹಳ್ಳಿ ದಾಟಿ ಮದ್ದಕ್ಕನಹಳ್ಳಿ ಏಣಿಗೆ ಬಂತು. ಒಂದು ಆಲದ ಮರ, ಅದರ ಕೆಳಗೆ ಸ್ವಾಮಿ ಜುಂಜಪ್ಪ ಹಾವಿನ ಹಾಸಿಗೆ, ಚೇಳಿನ ತಲೆದಿಂಬು ಮಾಡಿಕೊಂಡು ಮಲಗ್ಯಾವನೆ. ಏನು ಮಾಡಿರೂ ಮಂಪರು ಹರಿದು ಏಳಾಕೆ ಆಗೋದಿಲ್ಲ. ಮಾಟದ ಪ್ರಭಾವ. ಇತ್ತ ಬಾಯಾರಿ ನೀರು ಕುಡಿಯಾಕೆ ಧಾವಂತದಿಂದ ಬಂದಂತ ಗೋವುಗಳನ್ನು ತಡೆದು ಮಾರಣ್ಣ ಮೈಲಣ್ಣ ಇವರ ಜೊತೆಗೆ ಗೋವುಗಳನ್ನೆಲ್ಲಾ ತಡೆದರು. ಎರಡು ಎತ್ತುಗಳಿದ್ದವು. ಅವುಗಳನ್ನು ಜುಂಜಪ್ಪ ವೀರಭದ್ರ, ಗಿರಿಮಲ್ಲ ಎಂದು ಕರೆಯುತ್ತಿದ್ದ.

ಅವು ಹೆಸರು ಹಿಡಿದು ಕರೆದರೆ ಸಾಕು ಬಂದುಬಿಡುತ್ತಿದ್ದವು. ಈಗ ಸಂಕಷ್ಟ ಬಂದದೆ. ಏನು ಮಾಡಾದು? ದನ ಹಿಂದಕ್ಕೆ ಹೋಗಲ್ಲ, ಬಾಯಾರಿವೆ. ರಣ ಬಿಸಿಲು ಬೇರೆ ಅಂಬ್ತಾ ಯೋಚನೆ ಮಾಡಿದ. ಮಾರಣ್ಣ ಮೈಲಣ್ಣ ಗಿರಿಮಲ್ಲ, ಈರಭದ್ರ ಅಂಬ್ತಾ ಹೆಸರಿಡಿದು ಕರೆದ ಕೂಡಲೇ ಅವು ಗುಡ್ಡನೇ ನಡೆದು ಬರೋ ಹಂಗೆ ಬಂದುಬಿಟ್ಟವು. ಆಗ ನಡೆದ ಸಂಗತಿ ಹೇಳಿ ದನಗಳನ್ನೆಲ್ಲ ಹಿಂದಕ್ಕೆ ಓಡಿಸಬೇಕು ಎಂದು ಚಿಕ್ಕಸಂದ್ರದ ಕಾವಲಿಗೆ ಮಾರಣ್ಣ ಮೈಲಣ್ಣ, ಈರಭದ್ರ, ಗಿರಿಮಲ್ಲ ಸೇರಿಕೊಂಡು ನೀರು ಕುಡಿಯಲು ಬಂದ ದನಗಳನ್ನೆಲ್ಲಾ ಚಿಕ್ಕಸಂದ್ರದ ಕೆರೆಗೆ ತರುಬಿದರು.

ದನಗಳೆಲ್ಲಾ ಹಿಂದಿರುಗಿ ಚಿಕ್ಕಸಂದ್ರದ ಕಾವಲು, ಕೆರೆ ಇಲ್ಲೆಲ್ಲಾ ನೀರು ಕುಡಿಯಲು ಬಂದವು. ಜುಂಜಪ್ಪನಿಗೆ ಮಾಯಾದ ನಿದ್ದೆ ಇನ್ನೂ ಹರೀಲಿಲ್ಲ. ದನಗಳು ಎಲ್ಲಾ ಹಿಂದಿ ರುಗಿ ಮದ್ದಕ್ಕನಹಳ್ಳಿ ಕಾವಲಿಗೆ ನಡೀತಾವೆ. ಸ್ವಾಮಿ ಮಲಗವನೆ. ದನಗಳು ಒಂದೇ ಸಮನೆ ಅಂಬಾ ಅಂಬಾ ಅಂತಾ ಅರಚಿಕೋತಾವೆ. ಉಡ್ರಿಕೆ ಹಾಕಿದವು. ಬಾಲದಾಗೆ ಸ್ವಾಮಿಗೆ ಮುಖ ಮೈ ಸವರಿದವು. ಕಾಲಿಂದ ಕರೆದವು. ಬಾಯಿಂದ ಸ್ವಾಮಿ ಮುಖ ಉಜ್ಜಿದವು. ಊಹೂಂ ಸ್ವಾಮಿಗೆ ಎಚ್ಚರವೇ ಆಗಲಿಲ್ಲ.

ಆಗ ಗೋವುಗಳೆಲ್ಲಾ ಒಟ್ಟಾಗಿ ಸೇರಿಕೊಂಡು ಬಿಟ್ಟು ಮೇಲಗಡಿಕೆ ತಲೆ ಎತ್ತಿ ಅಂಬಾ ಅಂಬಾ ಅಂಬ್ತಾ ಮೂರು ಮೂರು ಆರು ಬಾರಿ ಅರಚಿಕೊಂಡವು. ದನಗಳ ಈ ಕೂಗು ಕೈಲಾಸದಲ್ಲಿರುವ ಪರಮೇಶ್ವರನಿಗೂ, ಅವನ ಮಡದಿ ಪಾರ್ವತಿಯ ಕಿವಿ ಕರಣಕ್ಕೆ ಬೀಳ್ತು. ಶಿವ ಇದೇನೆಂದು ಪಾರ್ವತಿನ ಕೇಳುತಾನೆ. ಆಗ ಆಯಮ್ಮ ಜುಂಜಪ್ಪನಿಗೆ ಮಾಯಾದ ನಿದ್ದೆ ಬರಿಸಿ, ಅವುನ ದನಗಳ ಸಾಯ ಬಡೀಬೇಕು ಅಂಬ್ತಾ ಮಾವುಗಳು ಮಾಡಿರೋ ಕೇಡು ಬುದ್ದಿಯನ್ನು ಹೇಳುತ್ತಾಳೆ. ಈಗ ನಾನೇನು ಮಾಡಬೇಕು, ಈ ಗೋವುಗಳು ಯಾತಕ್ಕಾಗಿ ಹೀಗೆ ಅರಚುತಾವೆ ಎಂದು ಪರಮೇಶ್ವರ ಕೇಳಲಾಗಿ, ಪಾರ್ವತೀದೇವಿ ಹೇಳುತಾಳೆ 'ಸ್ವಾಮಿ ಸುರಲೋಕ, ನರಲೋಕ, ದೇವಲೋಕಗಳೆಲ್ಲವೂ ನಮ್ಮನ್ನು ದೇವತರು ಅಂಬ್ತಾ ಹೇಳುತಾರೆ. ನರ ಮನುಷ್ಯರಿಗೆ ಬಂದಂತ ದುಃಖನ ನಾವಲ್ಲದೆ, ಇನ್ಯಾರು ಪಾರು ಮಾಡುತಾರೆ? ಈಗ ಜುಂಜಪ್ಪ ಮಾಯದ ನಿದ್ದೆ ಬಡಿದು ಮಲಗಿದ್ದಾನೆ. ಅವುನ ಸೋದರ ಮಾವುಗಳು ಮೋಸ ಮಾಡಿ, ಜುಂಜಪ್ಪನ ಏಳು ಲಕ್ಷದ ದನಗಳು ಕುಡಿಯೋ ನೀರಿಗೆ ವಿಷ ಹಾಕವರೆ. ಆ ನೀರೇನಾದರೂ ಈ ಗೋವುಗಳು ಕುಡಿದರೆ, ಗೋವು ಸಂತತಿನೇ ಇಲ್ಲದಂಗೆ ನಾಶವಾಗುತ್ತೆ. ಅದರಿಂದ ಶಂಕರನೇ ಈಗ ಜಾಗ್ರತೆ ಭೂಲೋಕಕ್ಕೆ ಹೋಗಿ ಮಾಯನಿದ್ರೆಯಲ್ಲಿರುವ ಜುಂಜಪ್ಪನಿಗೆ ಬೆತ್ತದಿಂದ ಹೊಡೆದು ಎಚ್ಚರಿಸು, ಆಮೇಲೆ ಅವುನ ಪರಾಕ್ರಮದಿಂದ ಗೋವುಗಳನ್ನು ಉಳಿಸಿಕೊಳ್ಳುತ್ತಾನೆ ಅಂದ್ಲು.

ಅದಕ್ಕೆ ಶಿವ ಹರ ಅನ್ನಲಿಲ್ಲ, ಶಿವ ಅನ್ನಲಿಲ್ಲ. ಜಪ್ಪಯ್ಯ ಅಂಬ್ರಾ ಕೂತುಕೊಂಡು ಬಿಟ್ಟ. ಪಾರ್ವತಿ ಹೇಳಿದಳು. 'ಸ್ವಾಮಿ ಜುಂಜಪ್ಪ ನಿನ್ನ ವರದಿಂದ ಜನಿಸಿದ ಶಿಶುಮಗ. ನೀನೇ ಅವುನಿಗೆ ಗೋವುಗಳನ್ನು ಕೊಟ್ಟವನು. ಅಂತಾದ್ರಾಗೆ ಈಗ ಅವುನ ಒಂದೇ ಒಂದು ದನ ಸತ್ತರೂ ಜುಂಜಪ್ಪ ಏಳು ಜನ್ಮವೆತ್ತಬೇಕು. ಅಂತಾದ್ರಾಗೆ ಏಳು ಲಕ್ಷ ಗೋವುಗಳು ಸತ್ತರೆ ಗತಿ ಏನು? ಪ್ರಪಂಚದ ಮೇಲೆ ನಮ್ಮ ನಂದಿ ಸಂತಾನವೇ ಇಲ್ಲದಂಗೆ ಆಗುತ್ತೆ. ಜಾಗ್ರತೆ ಭೂಲೋಕಕ್ಕೆ ಹೋಗಿ ಜುಂಜಪ್ಪನಿಗೆ ಎಚ್ಚರಿಸಿ ಗೋರಕ್ಷಣೆ ಮಾಡಿ ಅಂಬ್ರಾ ದುಂಬಾಲು ಬಿದ್ಲು ಪಾರ್ವತಿದೇವಿ. ಆವಾಗ ಪರಮೇಶ್ವರ ನಂದಿರೂಢನಾಗಿ ಭೂಲೋಕಕ್ಕೆ ಬರುತ್ತಾನೆ.

ಜುಂಜಪ್ಪ ಮಲಗಿಬಿಟ್ಟಾನೆ. ಅವನಿಗೆ ಹಾವಿನ ಹಾಸಿಗೆ, ಚೇಳುಗಳೇ ತಲೆದಿಂಬು, ಮಂಡರಗಪ್ಪೆ ಮೈಮೇಲೆಲ್ಲಾ ಹರಿದಾಡುತಾವೆ. ಸ್ವಾಮಿ ಪರಮೇಶ್ವರ ನೋಡಿದ, ಬೆತ್ತ ತಕ್ಕೊಂಡು ಮೂರೇಟು ಕೊಟ್ಟ. ಆಗ ಜುಂಜಪ್ಪನಿಗೆ ಎಚ್ಚರ ಆತು. ಎದ್ದು ನೋಡುತಾನೆ, ಕೆದರಿಕೊಂಡು ಬೈಲಾಗೆ ಮೇಯಬೇಕಾದ ದನವೆಲ್ಲಾ ಜುಂಜಪ್ಪನಿಗೆ ಕಾವಲಾಗವೆ. ಇದೇನೆಂದು ಯೋಚಿಸುತ್ತಾನೆ. ಅವನಿಗೆ ಏನೂ ಅರಿವಾಗವಲ್ಲದು. ಅವುನ ಹುಟ್ಟಿದ ಏಳು ವರ್ಷ ಆಮೇಲೆ ಏಳುವರ್ಷ ಹದಿನಾಲ್ಕು ವರ್ಷ ಆದರೂ ಎಂದೂ ಇಂಥ ಮಾಯದ ನಿದ್ರೆಯಾಗಲಿ, ಮಂಪರಾಗಲಿ ಬಂದಿರಲಿಲ್ಲ. ಈಗ ಇದೇನಪ್ಪ ಹಿಂಗಾತು ಅನ್ನುವಾಗ ಪಂಚಕಲ್ಯಾಣಿ ತಮ್ಮ ಸೋದರ ಮಾವುಗಳ ಮೋಸ ತಿಳಿಸುತ್ತೆ. ಆಗ ಜುಂಜಪ್ಪ ಎದ್ದೋನು ಜಾಡಿ ಹೆಗಲಿಗೆ ಎಸಕೊಂಡು, ಗಣೆ ತಗೊಂಡು ಊದಿಕೊಂಡು ದನ ಕರಕೊಂಡು ನೇರವಾಗಿ ಹುಲಿಕುಂಟೆ ಕೆರೆ ತಾವಕೆ ಬಂದನು. ನೋಡುತಾನೆ ಕೆರೆಯಾದ ಕೆರೆಯೆಲ್ಲಾ ವಿಷಯ ಮಂಡಲವೊಡೆದು ಹಸಿರುಗಟ್ಟೈತೆ. ಕೆರೆ ಒಳಗೆ ಸಣ್ಣದಾಗೆ ಬೆಳಕು ಬೇರೆ ಬರುತ್ತೈತೆ. ಅದರಾಗೆ ಹಸಿನ ಕರ ಹೂತು, ಅದರ ಮುಖದ ಮೇಲೆ ದೀಪ ಹಚ್ಚಿ ಮಾಟ ಮಾಡಿ ಹೋಗಿ ಬಿಟ್ಟವರೆ. ಸ್ವಾಮಿ 'ಅಲೆಲೆ ಕಂಬೇರು ಮೋಸಗಾರ' ಅಂದುಬಿಟ್ಟು ನೀರಿಗೆ ಇಳಿದುಬಿಟ್ಟ. ಮೀನು ಈಜಿದಂಗೆ ಮೂರೇ ಗೇಣಿಗೆ ನಡುಕೆರೆಗೆ ಬಂದುಬಿಟ್ಟ. ಅಲ್ಲಿ ಮಂಡಲ ಹೊಡೆದ ನೀರನ್ನು ಮೂರು ಬೊಗಸೆ ತುಂಬಿಕೊಂಡು ಗಟಗಟ ಅಂತಾ ಕುಡಿದುಬಿಟ್ಟ. ಜುಂಜಪ್ಪ ಕುಡಿದ ವಿಷದ ನೀರು ಅಮೃತವಾಗಿಬಿಡ್ತು. ದನಗಳೆಲ್ಲಾ ಕೆರೆಗೆ ಇಳಿದು ನೀರು ಕುಡಿದು, ಅಡವಿ ಹುಲ್ಲು ಮೇಯ್ದು ಬದುಕಿಕೊಂಡವು.

ಮಾಟ ಮಾಡಿ ಹುಲಿಕುಂಟೆ ಕೆರೆ ಒಳಗೆ ಕೆಸರಿಗೆ ದಡಿ ಬಡಿದು ಈಚೆಗೆ ಬರದಂಗೆ ಒಂದು ಹೊಟ್ಟೆ ಕರುವನ್ನು ಹೂತು ಅದರ ತಲೆಮ್ಯಾಲೆ ದೀಪ ಹಚ್ಚಿಬಿಟ್ಟು ಬಂದಿದ್ದರು. ಯಾವಾಗ ಜುಂಜಪ್ಪ, ಮಾರಣ್ಣ, ಮೈಲಣ್ಣ ತಮ್ಮ ಏಳು ಲಕ್ಷ ದನಗಳು ನೀರು ಕುಡಿದು

ಮರಡಿಗುಡ್ಡದ ಕಾವಲಾಗೆ ಮೇಯುತ್ತಿದ್ದವೋ ಆಗ ಸ್ವಾಮಿ ಜುಂಜಪ್ಪ ಒಂದು ಆಲದ ಮರದ ಕೆಳಗೆ ಕುಂತಿದ್ದ. ಸುಮ್ಮನೆ ದಿಬ್ಬದಿಂದ ಕೆಳಗೆ ಹುಲಿಕುಂಟೆ ಕೆರೆ ಕಡೆಗೆ ತಿರುಗಿ ನೋಡುತಾನೆ. ನಡು ನೀರಿನಾಗೆ ಕೈಪತ್ತು ಉರಿಯೋ ಹಂಗೆ ಉರೀತಾ ಇದೆ. ಒಂದು ಬಡ ಕರು ಅಂಬಾ ಅಂಬಾ ಅನುತಾ ಬಡಕೋತದೆ. ಸ್ವಾಮಿಗೆ ಕರುಣೆ ಬಂತು. ಎದ್ದವನು ಸೀದಾ ಕೆರೆ ಒಳಗೆ ಹೋದ. ಈಜಿಕೊಂಡು ಹೋಗಿ ಕರ ನೋಡುತಾನೆ, ಈಚೆಗೆ ಬರದಂಗೆ ಹೂತುಬಿಟ್ಟರೆ ಬಡಿಗೆಯಿಂದ ಸುತ್ತು ಕಟ್ಟವರೆ. ಹಣೆ ಮೇಲೆ ದೀಪ ಇಟ್ಟು ಉರಿಯೋ ಹಾಗೆ ಮಾಡಿದ್ದಾರೆ. ಕರು ರಾತ್ರಿಯೆಲ್ಲಾ ನೀರು ಕುಡಿಯೋ ಹಾಗಿಲ್ಲ. ಕತ್ತು ಕೆಳಗೆ ಬಗ್ಗಿಸೋ ಹಾಗಿಲ್ಲ. ಜುಂಜಪ್ಪನಿಗೆ ಹೊಟ್ಟೆ ಚುರುಕ್ ಅಂದುಬಿಡ್ತು. ಜಾಡಿಸಿ ಕಂಬಕ್ಕೆ ಒದ್ದ ಏಟಿಗೆ ಕರದ ಸಮೇತ ಕಿತ್ತುಕೊಂಡು ಮರಡಿಗುಡ್ಡದ ಬಯಲಿಗೆ ಬಿತ್ತು. ಅಲ್ಲಿಂದ ಬಂದು ಕರಿನ ತಲೆಮೇಲಿದ್ದ ದೀಪ ಕೆಡಿಸಿದ. ಕರ ನೀರು ಕುಡಿದು ಹೊಟ್ಟೆ ಊದಿಕೊಂಡಿತ್ತು. ಚಳಿಯಾಗೆ ನಡುಗುತ್ತಿತ್ತು. ಬೆಂಕಿ ಕಾಯಿಸಿ ಕಾವು ಕೊಟ್ಟು ಅಂಚಿ ಹುಲ್ಲು, ಕರಕೆ ಹುಲ್ಲು, ಹಕ್ಕಿ ಹುಲ್ಲು, ಕಿತ್ತು ತುತ್ತು ಮಾಡಿ ಬಾಯಿಗೆ ಇಕ್ಕಿದರು. ಕರ ನಿಧಾನವಾಗಿ ಚೇತರಿಸಿಕೊಂಡು ಮೈಕೊಡವಿಕೊಂಡು ಮೇಲಕ್ಕೆ ಎದ್ದು ತಟ್ಟಾಡಿಕೊಂಡು ನಾಲ್ಕು ಹೆಜ್ಜೆ ಇಕ್ತು. ಆಗ ಸ್ವಾಮಿ ಜುಂಜಪ್ಪ 'ನೋಡ್ರಿ ಆ ಮೋಸಗಾರರು ಕಂಬೇರರು ಎಂಥ ನೀಚ ಕೆಲಸ ಮಾಡವರೆ. ಕರ ಸಾಯಹಾಕುತ್ತಿದ್ದರು. ಇರಲಿ ಅವರ ಒಡವೆ ಅವುರಿಗೆ ಇರಲಿ. ತಗೊಂಡು ಹೋಗಿ ಕಂಬೇರಹಟ್ಟಿಗೆ ಬಿಟ್ಟು ಬನ್ನಿ' ಅಂದನು. ಅದರಂತೆ ಮಾರಣ್ಣ ಮೈಲಣ್ಣ ಕರ ಕರೆದುಕೊಂಡು ಅವ್ರು ಮಾವುಗಳ ಊರು ಕಂಬೇರಹಟ್ಟಿಗೆ ಹೋದರು. ಮಾವಯ್ಯ ಮಾವಯ್ಯ ನಿಮ್ಮ ಬಡಕರ ನೀರು ಕುಡಿಯೋಕೆ ಹೋಗಿ, ಕೆರೆ ಒಳಗೆ ಕೆಸರಾಗೆ ಸಿಕ್ಕಿಕೊಂಡು ಬಿಟ್ಟಿತ್ತು. ಅದನ್ನು ಕಂಡ ನಾವು ಅದನ್ನು ಬಿಡಿಸಿಕೊಂಡು ಕರ ನಿಮ್ಮ ದನಿನೊಳಗೆ ಬಿಟ್ಟು ಹೋಗಾನ ಅಂತ ಬಂದಿದ್ದೀನಿ ಅಂದ್ರು. ಅದಕೆ ಮಾವುಗಳು 'ಅಯ್ಯೋ ಬಾಮೈದುಗಳ ಎಷ್ಟು ದೂರದಿಂದ ಬಂದಿದ್ರಪ್ಪ. ಬಾಳ ಬಡವಾಗಿದ್ದೀರ. ಬನ್ರಪ್ಪ, ಮನೆಯ ಹತ್ರ ಹೋಗಾನ' ಅಂದ್ರು. ಆಗ ಹುಡುಗರು 'ಇಲ್ಲ ಕಣ ಮಾವ, ದನಗಳ ಬಿಟ್ಟು ಬಂದು ಬಿಟ್ಟಿದ್ದೀನಿ. ಅಣ್ಣ ಜುಂಜಪ್ಪ ಕರ ಬಿಟ್ಟು ಬೇಗ ಬರಾಕೆ ಹೇಳಿದ್ದಾನೆ. ಹೋಗಬೇಕು' ಅಂದ್ರು. ಕಂಬೇರು ಕೇಳಲಿಲ್ಲ. ಬರಲೇಬೇಕೆಂದು ಮಂಡಿಕುಂತ್ರು. ಹುಡುಗರು ಇಕ್ಕಟ್ಟಿಗೆ ಸಿಕ್ಕಿದಂಗಾಡಿದರು. ಆಯಿತು ಅಂಬ್ತಾ ಕಂಬೇರಹಟ್ಟಿಗೆ ಹೋದರು.

ಹುಡುಗರು ಹೋಗುತ್ತಿದ್ದಂಗೆ ಇನ್ನೂ ಹಟ್ಟಿ ಒಂದು ಫರ್ಲಾಂಗ್ ದೂರ ಇದೆ ಅಂಬುವಷ್ಟರಲ್ಲೇ ಇಬ್ಬರು ಹುಡುಗರನ್ನು ಇಡಕಂಡು ಎಡಮುರಿ ಕಟ್ಟಿ ಹುಣಸೇಮರಕ್ಕೆ ಬಿಗಿದು, ಹುಣಸೆ ಬರಲು ತಕ್ಕೊಂಡು ರಪಾ ರಪಾ ಅಂಬ್ತಾ ಬಾರಿಸಿ ಬಿಸಾಕಿದರು.

ಹುಡುಗರು ಬಾಯಿ ಬಡುಕೊಂಡರೂ ಬಿಡಲಿಲ್ಲ. ಕೊನೆಗೆ ಮೈಕೈ ಬಾತುಕೊಂಡ ಮೇಲೆ, ಹುಡುಗರು ಪರಮೇಶ್ವರನ ಸ್ಮರಣೆ ಮಾಡಿ ಅಲ್ಲಿಂದ ಬಿಡಿಸಿಕೊಂಡು ಕಂಬದಹಳ್ಳಿ ಕಡೆಗೆ ಓಟಾಕಿತ್ತರು. ಹೊಟ್ಟೆ ಕರಾನು ಅವರನ್ನೇ ಹಿಂಬಾಲಿಸಿಕೊಂಡು ಹೋಗಿ, ತಿರುಗ ಜುಂಜಪ್ಪನ ದನದ ಗುಂಪಿಗೆ ಸೇರಿಕೊಂಡಿತು.

ಸ್ವಾಮಿ ಜುಂಜಪ್ಪ ನೋಡಿದ ಹುಡುಗರ ಮೈಕೈಯೆಲ್ಲ ಗಾಯ, ರಕ್ತ ಸೋರುತ್ತೆ. ಮೈಯೆಲ್ಲಾ ಕೆಂಪಿಡಿದಿದೆ. ಇದೇನೆಂದು ತಿಳುಕೊಳ್ಳಲಾಗಿ ಶಂಕರ ಹುಡುಗರು ವಿಷಯ ಬಿಟ್ಟುಕೊಡಲಿಲ್ಲ. ನಮ್ಮಣ್ಣ ಜುಂಜಪ್ಪ ಅಸವಲ್ಲದವನು. ಹೆತ್ತ ತಾಯಿ ಅಂದರೂ ಬಿಡದೆ ಕಾಟ ಕೊಟ್ಟವನು. ಅಂತಾದರಾಗೆ ಕಂಬೇರು ಹಾಗೆ ಮಾಡಿರು ಅಂತ ವಿಷಯ ತಿಳಿದರೆ ಸುಮ್ಮನೆ ಬಿಟ್ಟಾನ? ಅವರ ಚಮ್ಮಟಿಗೆ ಎಬ್ಬಿ ಬಿಡುತ್ತಾನೆ ಅಂಬ್ತ ಆ ಹುಡುಗರು ಬೇರೊಂದು ಕಥೆ ಕಟ್ಟಿ ಹೇಳಿದರು. 'ಅದರ ಬಾಯಿಗೆ ಮಣ್ಣಾಕ ಅದೆಂತಾದೋ ಕೆಟ್ಟ ಕೆಂಬಾಟೆ ಗಾಳಿ ಬೀಸಿ ಎತ್ತ ತಿರುಗಿಕೊಂಡರು ಬಿಡದೆ ಕಾರೆಗಿಡ, ಬಾರೆಗಿಡದ ತವಕೆ ಹೋದರೆ ಬಿಡದೆ ಕಾಡಿಸಿ ರಾಸಿ ತಳ್ಳಿಬಿಡ್ತು. ಅಂಗಾಗಿ ಮೈಕೈಯೆಲ್ಲ ಬಾಸುಂಡೆ ಬಂದದೆ. ಕಾರೆಗಿಡದ ಮೇಲೆ ಬಾರೆಗಿಡದ ಮುಳ್ಳು ತಾಗಿ ಇಂಗಾಗಿದೆ' ಅಂದನು. ಆಗ ಜುಂಜಪ್ಪ ಆವುಡುಗರನ ಪರಸಪ್ಪನ ಕೆರೆಗೆ ಕರಕೊಂಡು ಹೋಗಿ ಮೈತೊಳೆದು ಕೆರೆಗೆ ಮೂರು ಮುಳುಗಾಕಿಸಿ, ಈಚೆಗೆ ಕರೆದುಕೊಂಡು ಬಿಟ್ಟು. ಆ ಕರ ನೋಡ್ತಾನೆ ಹಿಂದೇನೇ ಬಂದುಬಿಟ್ಟೈತೆ. ನಮ್ಮದೇ ನಮಗಿಲ್ಲ, ಅಂತಾದ್ರಾಗೆ ಕಂಡಾರ ಸ್ವತ್ತು ನಮಗೇಕೆ? ಅಂದುಬಿಟ್ಟು ಶಂಕರ ಆ ಮಾಟದ ಹೊಟ್ಟೆ ಕರ ಹಿಡಕೊಂಡು, ಹೆಗಲ ಮೇಲೆ ಇಟ್ಟುಕೊಂಡು ಕಂಬೇರಹಟ್ಟಿ ಕಡೆ ಹೋದ. ಕಂಬೇರು ಕಿಲಾಡಿಗಳು, ಜುಂಜಪ್ಪ ಬಂದ್ರೆ ಸುಮ್ಮನೆ ಬಿಡಾಕಿಲ್ಲ. ಚಮ್ಮಟ ಎಬ್ಬಿ ಬಿಡುತಾನೆ ಅಂದು ಬಿಟ್ಟು ಮನೆ ಒಳಗೆ ಅಡಗಿಕೊಂಡುಬಿಟ್ರು.

ಸ್ವಾಮಿ ಜುಂಜಪ್ಪ ಮಾವುಗಳ ಮನೆಗೆ ನೇರವಾಗಿ ಬಂದ. ಅವರು ಅತ್ತೆಯರು ಜುಂಜಪ್ಪನಿಗೆ ಕರಿ ಕಂಬಳಿ ಹಾಸಿ, ಗಂಧದೀಳ್ಯೆ ತಂದಿಕ್ಕಿ ಬಂದ ಕಾರ್ಯ ಕೇಳಿದರು. 'ಏನಿಲ್ಲ ಅತ್ತೆಮ್ಮ, ಮಾವಯ್ಯಗಳು ಎಲ್ಲಿ ಹೋದರು? ಅವುರ ಕೂಟ ಒಂದು ಮಾತಾಡಬೇಕಿತ್ತು' ಅಂದನು. ಆಗ ಅತ್ತೆರು ಹೇಳುತಾರೆ 'ಜುಂಜಪ್ಪ ಹೊತ್ತಾರೆ ಕೋಳಿ ಕೂಗಿದಾಗ ಎದ್ದು ಮಾರೆ ತೊಳೆದು, ಹೊರಕೆ ಹೋದವರು ಅದೆತ್ತ ಹೋದರೋ ಏನು ಕಥೆಯೋ ತಿಳೀವಲ್ದು, ಇಲ್ಲೀಗಂಟ ಅವುರ ಸುಳಿವಿಲ್ಲ' ಅಂದರು. ಜುಂಜಪ್ಪ ಈ ದಗಡಿ ಮುಂಡೇರು ಸರಿಯಾಗಿಯೇ ಅವರೆ. ಕಂತೆಗೆ ತಕ್ಕ ಬೊಂತೆ ಅಂಬೋಂಗೆ ಅಂದುಕೊಂಡು ಎದ್ದು ಸ್ವಾಮಿ ಉರಿಗಣ್ಣ ಬಿಟ್ಟುಕೊಂಡು ಮನೆಯಾದ ಮನೆಯಲ್ಲಿ ಕಾಣದಂಗಾತು. ಮಿಂಚು ಸೆಳೆಯಾಗಿ ರಾವಿಬಿಡ್ತು. ವಾಡೆ ಸಂದಿಯಾಗೆ, ಮೂಡೆ ಸಂದಿಯಾಗೆ, ಬಾನ

ಸಂದಿಯಾಗೆ ಅವುತುಕೊಂಡು ಕೂತಿದ್ದರಲ್ಲಿ ಕಂಬೇರ ಏಳು ಜನ ಸೋದರ ಮಾವುಗಳು, ಎಲ್ಲರೂ ಕಂಡೋದರು. ಜುಂಜಪ್ಪ ನಗುತಾ ಹೇಳುತಾನೆ 'ಬನ್ರಿ ಮಾವಯ್ಯ ಅದ್ಯಾಕೆ ಇಂಥ ಭಂಗವಿಲ್ಲದ ಬಾಳು ಬಾಳೀರಿ?' ಅಂದು ಸಮಾಧಾನದಿಂದಲೇ ಮಾತಾಡಿಸಿ ಕೇಳಿದ. 'ಈ ಕರು ಯಾರದ್ದು? ಇದನ್ನು ಬಿಟ್ಟು ಬರೋಕೆ ತಮ್ಮಗಳು ಬಂದರೆ ಅವುರನ ಬೆದರಿಸಬಹುದೆ? ಬಂಗಪಡಿಸಬಹುದೆ?' ಅಂದ್ನು. ಸೋದರ ಮಾವುಗಳು ಉತ್ತರ ಹೇಳಾಕೆ ತಡರಿಸಾಡಿರು. ಕಡೆಗೆ ಜುಂಜಪ್ಪ ಹೇಳಿದ 'ಈ ಕರು ಯಾರದ್ದು ಹೇಳಿರಿ' ಅಂತ. ಅದಕ್ಕೆ 'ಸುತರಾಂ ಅದು ನಮ್ಮದಲ್ಲ' ಅಂದ್ರು. ಜುಂಜಪ್ಪ ಸುಮ್ಮನಾಗಲಿಲ್ಲ. ಗೌಡ, ಶ್ಯಾನುಭೋಗರನ್ನ ಕರೆಸಿ ಓದೆಕಾರರನ್ನು ಕರೆಸಿ, ಭಿನ್ನ ಬರವಣಿಗೆ ಮಾಡಿಸಿ 'ಈ ಕರ ತಮ್ಮದು ಅಲ್ಲವೇ ಅಲ್ಲ' ಅಂಬ್ತಾ ಬರೆಸಿಕೊಂಡ. ಏಳು ಜನ ಸೋದರ ಮಾವಂದಿರ ಕುಂಟೆ ರುಜು ಮಾಡಿಸಿಕೊಂಡ. ಗೌಡ, ಶ್ಯಾನುಭೋಗರ ಕುಂಟೆ ಸಾಕ್ಷಿ ಬರೆಸಿಕೊಂಡು ಹೊರಟ. ಜುಂಜಪ್ಪನ ಆಟನ ಸೋದರ ಮಾವುಗಳು ಮಿಕಮಿಕ ನೋಡಿರು. ಬದುಕಿಸಿ ಹೋದ ಜುಂಜಪ್ಪ ಅಂಬ್ತಾ ಏದುಸಿರು ಬಿಟ್ಟರು. ಅವುರ ಹೆಂಡತಿಯರು ಗಂಡಂದಿರು ಮಾಡಿದ ನಾಟಕ ನೋಡಿ, ಅಂಗಿಸಿ ಆಡಿಕೊಂಡರು. ಈ ಸಂಪತ್ತಿಗೆ ಆಟೊಂದು ಅವುತಾರ ಯಾಕೆ ಎತ್ತಬೇಕಾಗಿತ್ತು ಅಂದರು.



## ಮಾಟದ ಕರು ಮನೆಗಾತ್ರ ಬೆಳೆಯಿತು

ಹೊಟ್ಟೆ ಕರ ಮಾಟ ಮಾಡಿ, ಅದು ಸತ್ತು ಜುಂಜಪ್ಪನ ದನಗಳೆಲ್ಲ ಸಾಯಲಿ ಎಂದು ಹುಲಿಕುಂಟೆ ಕೆರೆಯಲ್ಲಿ ಹೂಳು, ಕೆಸರಾಗೆ ಸಿಗಾಕಿ ಬಂದಿದ್ರು ಸೋದರ ಮಾವುಗಳು. ಪರಮೇಶ್ವರನ ಕೃಪೆಯಿಂದ ಜುಂಜಪ್ಪನಿಗೆ ಮಾಟ, ಶೂನ್ಯ ಒಂದೂ ನಾಟಲಿಲ್ಲ. ಹುಲಿಕುಂಟೆ ಕೆರೆ ನೀರೆಲ್ಲಾ ಮಂಡಲ ಹೊಡೆದ ವಿಷವೇರಿತ್ತು. ಜುಂಜಪ್ಪ ಆ ವಿಷದ ನೀರು ಮೂರು ಬೊಗಸೆ ಕುಡಿದು, ಕೆರೆ ವಿಷನೆಲ್ಲಾ ತೆಗೆದುಕೊಂಡುಬಿಟ್ಟ. ಹಾವು, ಚೇಳು, ಮಂಡರಗಪ್ಪೆ ಮೊದಲಾದ ವಿಷಜಂತು ಜುಂಜಪ್ಪನ ಒಡನಾಡಿಗಳು, ಆಪ್ತರು. ಯಾವುದೇ ವಿಷ ಸ್ವಾಮಿಗೆ ನಾಟಲ್ಲ. ಆ ಸ್ವಾಮಿ ವಿಷ ಕುಡಿದುದರಿಂದ ವಿಷನೇ ಅವುನಿಗೆ ಇಷ್ಟ. ಅದಕ್ಕೆ ಚೇಳು, ಹಾವು ಅವನಿಗೆ ಇಷ್ಟವಾಗುವುದು. ಭಕ್ತರು ಜುಂಜಪ್ಪನಿಗೆ ಹರಸಿಕೊಂಡರೆ ಹಾವು ಚೇಳಿನ ಕಾಟ ಇರೋದಿಲ್ಲ ಅಂಬೋದು ಇದೇ ನೆವದಿಂದಲೇ.

ಯಾವಾಗ ಕಂಬೇರಗೊಲ್ಲರು ಎಲ್ಲರ ಮುಂದೆ ಈ ಹೊಟ್ಟೆ ಕರ ನಮ್ಮದಲ್ಲ. ಇದರ ಗುರುತೇ ನಮಗಿಲ್ಲ ಅಂತ ಆಣೆ ಪ್ರಮಾಣ ಮಾಡಿರೋ, ಜುಂಜಪ್ಪ ಇರಲಿ ಇದೇ ರೋಗದ ಕರನೇ ಶಿವನ ನಂದಿ ತರ ಬೆಳೆದು, ನನಗೆ ರಕ್ಷಣೆಯಾಗಿರಲಿ. ನನ್ನ ಏಳು ಲಕ್ಷದ ದನಗಳ ಒಳಗೆ ಇದೊಂದು ಬಸವನಾಗಿ ಇರಲಿ ಎಂದು ತೀರ್ಮಾನಿಸಿ ಹಿಂದಕ್ಕೆ ಹೊಟ್ಟೆ ಕರ ಎತ್ತಿಕೊಂಡು ಬಂದ. ಬರುವಾಗ ದಾರಿಲಿ ಪೂರಲೇಹಳ್ಳಿ ಮಾರ್ಗವಾಗಿ ಬಂದ, ಬಡಮೈಲ ಅಂಬೋ ಹೊಟ್ಟೆಕರು, ಭಾರವಾದ ಹಾಗೆ ಅನ್ನಿಸ್ತು. ಜುಂಜಪ್ಪ ಅದನ್ನು ಕೆಳಕೆ ಇಳಿಸುತಾನೆ. ಕೋಡು ನಿಗುರಿಸಿಕೊಂಡು, ಬಾಲ ಎತ್ತಿಕೊಂಡು ಕಿವಿ ಆನಿಸಿಕೊಂಡು ಲಗ್ಗೆ ಹೊಡೆಕೊಂಡು ಒಂದೇ ಓಟ ಕಿತ್ತು ಮರಡಿಗುಡ್ಡ ಬೈಲಾಗೆ ಇದ್ದವಲ್ಲ ಜುಂಜಪ್ಪನ ದನಗಳು ಅವುಗಳ ಬಳಿಗೆ ಸೇರಿಕೊಂಡುಬಿಡ್ತು ಹೊಟ್ಟೆಕರ. ಗೋವುಗಳ ಜೊತೆಗೆ ಸೇರಿಕೊಂಡು ಜುಂಜಪ್ಪನ ದನಗಳ ಜೊತೆಗೆ ಹೊಂದಿಕೊಂಡು ಬಿಡ್ತು.

ಹೀಗೆ ಒಂದು ಆರು ತಿಂಗಳು ಕಳೆಯಿತು. ಬರುತಾ ಬರುತಾ ಕರ ಒಂದು ಮನೆ ಗಾತ್ರ ಬೆಳೆದು ನಂದಿನೇ ಆಗಿಬಿಡ್ತು. ಜುಂಜಪ್ಪ ಎಲ್ಲಿಗೇ ಹೋಗಲಿ, ಬರಲಿ ಅವುನ

ಎಡಬಲನೇ ಇರುತ್ತಿತ್ತು. ಜುಂಜಪ್ಪನ ಪಂಚಕಲ್ಯಾಣಿ ಒಂದು ರೀತಿಲಿ ಉಪಕಾರ ಮಾಡಿರೆ ಬಡಮೈಲ ಇನ್ನೊಂದು ರೀತಿಯಲಿ ಸಹಾಯ ಮಾಡ್ತಾ ಕಾಕ ಪ್ರಾಣಿಗಳಿಗೆ ವೈರಿಗಳಿಗೆ ದನಗಳು ತುತ್ತಾಗದ ಹಾಗೆ ರಕ್ಷಣೆ ಮಾಡಿಕೊಂಡು ಬಂತು. ಈ ಹೊಟ್ಟೆ ಕರುವನ್ನು ಜುಂಜಪ್ಪ ಬಡಮೈಲ ಅಂಬ್ತಾ ನಾಮಕರಣ ಮಾಡಿದ. ಬಡಮೈಲ ಅಂಬ್ತಾ ಹೆಸರಿಡ್ದು ಕರೆದರೆ, ಅದೆಷ್ಟು ದೂರವೇ ಇರಲಿ ಒಂದೇ ಹೆಜ್ಜೆಗೆ ಓಡಿ ಬರುತ್ತಿತ್ತು. ಅದು ಬರುತ್ತಿರ ಬೇಕಾದರೆ ಭೂಮಿನೆ ನಡುಗಾದು. ಉಡ್ರಿಕೆ ಹಾಕಿದ್ರೆ ಆಕಾಶಗಂಟ ಕೇಳಿಸ್ತದೆ. ಬಡಮೈಲ ನಂದಿಯಾಗಿಬಿಡ್ತು. ಅಷ್ಟಕ್ಕೆ ಸುಮ್ಮನಾಗಲಿಲ್ಲ. ಏನು ಮಾಡ್ತಪ್ಪ ಅಂದ್ರೆ, ಕಂಬೇರಹಟ್ಟಿಗೆ ರಾತ್ರಿಕೆ ಹೋಗಿ ಅವುರ ದನಗಳನ್ನೆಲ್ಲಾ ತಿವಿದು ರಕ್ತಸೋರ ಹಂಗೆ ಮಾಡಿಬಿಡ್ತು. ಇದರಿಂದ ಕೆಲವು ದನಗಳೂ ಸತ್ತುಹೋಗಿಬಿಟ್ಟವು. ಇದು ತಿಳಿದ ಕಂಬೇರ, ಯಾವುದೋ ಹುಲಿನೋ ಚಿರತೆನೋ ನುಗ್ಗಿ ದನಿನ ಗೂಡಿಗೆ ಹಾವಳಿ ಮಾಡಿದೆ. ದನನೆಲ್ಲಾ ತಿಂದು ಹಾಕಿಬಿಡುತ್ತಾ ಅಂಬ್ತಾ ರಾತ್ರಿಯೆಲ್ಲಾ ಏಳು ಜನ ಅಣ್ಣ ತಮ್ಮಗಳು ದನಿನ ಗೂಡಿನ ಸುತ್ತಲೂ ಮಂದೆ ಕಾಯ್ದರು. ಆದರೂ ಬಡಮೈಲನ ದಾಳಿ ನಿಲ್ಲಲಿಲ್ಲ. ರಾತ್ರಿಗೆ ಕಂಬೇರ ಗೂಡಿಗೆ ನುಗ್ಗಿ ಒಳ್ಳೆ ನಾಣ್ಯವಾದ ಎತ್ತು, ಹಸು, ಮಣಕಗಳನ್ನೆಲ್ಲಾ ತಿವಿದು, ಒದ್ದು, ಗುದ್ದಿ ಸಾಯಿಸಿ ಬಿಡ್ತು. ಕಂಬೇರಿಗೆ ಗಾಬರಿ, ಭಯ ಎರಡೂ ಆಯಿತು. ಇದೇನಪ್ಪ ನಾವು ಮಂದೆ ಕಾದರೂ ಸದ್ದೇ ಆಗದಂಗೆ ದನಗಳನ್ನು ಯಾವುದೋ ಕ್ರೂರ ಪ್ರಾಣಿ ಬಂದು ತಿನ್ನತಾ ಇದೆ. ರಕ್ತ ಕುಡಿದು ಹೋಗುತ್ತದೆ. ಏನು ಮಾಡಾದು ಶಂಕರ? ಹೀಗೇ ಆದ್ರೆ ನಮ್ಮ ಗೋವುಗಳು ಒಂದೂ ಇಲ್ಲದಂಗೆ ನಾಶವಾಗಿ ಬಿಡುವವಲ್ಲ ಏನು ಮಾಡಾದು ಅಂಬ್ತ ಎದೆ ಎದೆ ಬಡಿದುಕೊಂಡರು.

ಹುಲಿಕುಂಟೆ ಕೆರೆಯಲ್ಲಿ ಜುಂಜಪ್ಪನ ದನಗಳಿಗೆ ಮಾಟ ಶೂನ್ಯ ಮಾಡಿ ಹಂದಿಮರಿ, ಕರಿ ಕೋಳಿ, ಕರೆ ಮೇಕೆ ಹೋತನ ಬಲಿ ಕೊಟ್ಟು ರಕ್ತ ಚೆಲ್ಲಾಡಿದರಲ್ಲ, ಅದೇ ತರ ಕಂಬೇರಹಟ್ಟಿಗೆ ದನದ ಗೂಡಾಗೆ ರಕ್ತ ಕಾಣಿಸಿಕೊಂಡಿತು. ಕಂಬೇರಿಗೆ ದಿಗಿಲಾತು. ಇದಕ್ಕೆ ಜುಂಜಪ್ಪನೇ ಪರಿಹಾರ ಅಂಬ್ತಾ ಓಡಿ ಓಡೋಡಿ ಬಂದು ಎದೆ ಎದೆ ಬಡಕೊಂಡು ತಮ್ಮ ಗೋಳು ತೋಡಿಕೊಂಡರು. ಜುಂಜಪ್ಪ ಮಾವುಗಳ ಗೋಳನ್ನು ಆಲಿಸಿದನು. ಇದೇನೆಂದು ಚಿಂತಿಸಿ ನಾನು ನೋಡುತೀನಿ. ನೀವು ಸರದಿ ಪ್ರಕಾರ ಮಂದೆ ಕಾಯಿರಿ, ಯಾವು ಕಡೆಯಿಂದ ಹುಲಿ ಚಿರತೆ ಬರುತ್ತೆ ನೋಡಿ ಅಂಬ್ತಾ ಹೇಳಿದನು. ಆಗ ಸ್ವಾಮಿ ಕಾರೇಳು ಕತ್ತಲೆ ಕಲ್ಲು ನೀರು ಕರಗೋ ಹೊತ್ತಿಗೆ, ಒಂದು ಗನವಾದ ಹೋರಿ ತರ ಬರುತ್ತೆ. ಬಂದು ಬಂದಂಗೆ ಕಳ್ಳಿಬೇಲಿ ಹಾರಿ, ಬಲವಾದ ಹೋರಿನೆಲ್ಲಾ ತಿವಿದು ಸದ್ದು ಇಲ್ಲದಂಗೆ ಪರಸಮ್ಮನ ಕೆರೆಗೆ ಮೂಡು ಮುಂದಾಗಿ ಹೋಗುತ್ತೆ ಅಂದನು. ಜುಂಜಪ್ಪನಿಗೆ ಇದು ಸಂಶಯವಾಗಿ




ಕಾಣಿಸತೊಡಗಿತು. ಆಗ ನಾನು ಪರೀಕ್ಷೆ ಮಾಡುತೀನಿ ಮಾವುಗಳೇ ನೀವಿನ್ನು ಹೋಗಿ ಅಂದು ದನಿನ ಗೂಡಿಗೆ ಸ್ವಾಮಿ ಬಂದ.

# ಬಡಮೈಲನ ಸೇಡು

ಬಡಮೈಲ ಮೊದಲು ಹೊಟ್ಟೆಕರು. ಮಾಟ ಮಾಡಿಸಿ ಕಂಬೇರ ಗೊಲ್ಲರು ಕೆರೆಗೆ ಹೂತಾಕಿ ಬಂದಿದ್ರು. ಅದರ ಮೇಲೆ ಉರಿಯೋ ದೀಪ ಹಚ್ಚಿದ್ದರು. ತುಂಬಾನೆ ಹಿಂಸೆ ಕೊಟ್ಟಿದ್ದರು. ಆಮೇಲೆ ಮಾರಣ್ಣ, ಮೈಲಣ್ಣರು ಹೊಟ್ಟೆಕರ ನಮ್ಮ ಮಾವಗಳದ್ದು ಅಂಬೋದು ತಿಳಿದು ಅದನ್ನು ಬಿಟ್ಟು ಬರೋಕೆ ಅಂಬ್ತಾ ಕಂಬೇರಹಟ್ಟಿಗೆ ಹೋದಾಗ 'ಉಣ್ಣಾಕೆ ಬರ್ರಿ ನಮ್ಮ ತಂಗಿ ಮಕ್ಕಳಾ, ಅಂಗೆ ಹೋಗಬಾರದು. ಹಂಗೇ ಹೋದರೆ ಜನ ಏನು ತಿಳಿದುಕೊಳ್ಳುತ್ತಾರೆ? ಬರ್ರಪ್ಪ' ಅಂಬ್ತಾ ಮನೆಗೆ ಕರಕೊಂಡು ಹೋಗ ಹಾಗೆ ನಾಟಕ ಆಡಿ, ಹಗ್ಗತಂದು ಮರಕ್ಕೆ ಕಟ್ಟಿ, ಹುಣಸೆ ಬರಲು ತಂದು, ರಪ ರಪ ಅಂಬ್ತಾ ಮೈ ಕೆರೆದು ಹೋಗೋ ಹಂಗೆ ಬಾರಿಸಿಬಿಟ್ರು. ಬಾಸುಂಡೆ ಬಂದ್ರೂ ಬಿಡಲಿಲ್ಲ, ಕರ ನಮ್ಮದಲ್ಲ ನಮ್ಮ ದನ ಸಾಯಿಸೋಕೆ ಈ ಮೋಸ ಆಡುತೀರ ಅಂಬ್ತಾ ಹೊಡೆದು ಕಳಿಸರಲ್ಲ ಕಂಬೇರ ಗೊಲ್ಲರು. ಅದಕ್ಕೆ ಮುಯ್ಯಿ ತೀರಿಸಿಕೊಳ್ಳಕೆ ಬಡಮೈಲ ಕಂಬೇರಗೊಲ್ಲರ ದನಗಳನ್ನೆಲ್ಲಾ ಸಾಯಿಸಾಕೆ ಈ ಕೆಲಸ ಮಾಡ್ತಾ ಇತ್ತು. ಇದು ಯಾರಿಗೂ ತಿಳಿದಿರಲಿಲ್ಲ.

ಜುಂಜಪ್ಪನಿಗೆ ಈ ಸಮಾಚಾರ ಗೊಂದಲವಾಯಿತು. ಮಾವುಗಳು ದನನೆಲ್ಲಾ ಸಾಯಿಸುತಾ ಇರೋರು ಯಾರು? ಅಂಬಾದ ಪತ್ತೆ ಹಚ್ಚಬೇಕೆಂದು ಯೋಚನೆ ಮಾಡ್ತಾ ಅವುನೆ. ಹೀಂಗೆ ಪತ್ತೆ ಮಾಡಬೇಕೆಂದು ಯೋಚಿಸಿದ. ಸುಮ್ನೆ ಮಲಗೋ ಆಟ ಮಾಡಿದ. ದನಗಳೆಲ್ಲಾ ಮಲಗಿದ್ದೆವು. ಕಲ್ಯಾಣಿ, ಬಡಮೈಲ, ಗಿರಿಮಲ್ಲ, ಈರಭದ್ರರೆಲ್ಲರೂ ಮೆಲಕಾಕಿಕೊಂಡು ಮಲಗಿದ್ದು. ಸ್ವಾಮಿ ಸುಮ್ನೆ ಮಲಗಿಕೊಂಡ. ನಂತರ ಸ್ವಲ್ಪ ಸಮಯ ಬಿಟ್ಟು ನೋಡುತಾನೆ, ಬಡಮೈಲ ಪತ್ತೇನೆ ಇಲ್ಲ. ಸ್ವಾಮಿಗೆ ಅನುಮಾನ ಬಂತು. ಚುಪ್ಪು ಕೊಡಲಿ ತಗೊಂಡು ಜುಂಜಪ್ಪ ಎದ್ದುನಿಂತು ಬಡಬಡ ಅಂತ ಬಂದು ಪರಸವ್ವನ ಕೆರೆ ಏಣಿನಾಗೆ ನಿಂತನು. ಪಡುಗಡಿಕೆ ನೋಡುತಾನೆ. ಸ್ವಾಮಿ ಆಗ ಪರಸವ್ವನ ಕೆರೆ ಏರಿ ಮುಂದೆ ಹಾದು ಏಣಿನಾಗೆ ಇಳಿದು ಬಡಬಡಾ ಅಂತ ಎತ್ತು ಬರುತ್ತಿತ್ತು. ಸ್ವಾಮಿಗೆ ಗೊತ್ತಾಯಿತು. ಕಂಬೇರ ದನಗಳ ಕೊಂದಿರುವುದು ಈ ಬಡಮೈಲನ ಕೆಲಸ ಅಂದುಕೊಂಡು



ಬಲಮೈಲನನ್ನ ಮಾತಾಡಿಸಿದನು. ಆಗ ಬಡಮೈಲ ಹೇಳಿತು 'ಅಣ್ಣ ಈ ಕಂಬೇರು ನನಗೆ ನಡುನೀರಾಗೆ ನಿಲ್ಲಿಸಿ ಹೋಗೋ ಬರೋ ಜೀವ ಮಾಡಿದ್ದರು. ನಿನ್ನಿಂದ ಬದುಕಿಕೊಂಡೆ. ನಿನ್ನ ತಮ್ಮಗಳು ನಿಮ್ಮದು ಕರು ತಗೊಳ್ರಿ ಮಾವಯ್ಯಗಳೆ ಅಂದುದಕ್ಕೆ ಉಪಾಯವಾಗಿ ಊಟ ಮಾಡಿಕೊಂಡು ಹೋಗೋರಂತೆ ಬನ್ನಿ ಅಂತ ಕರೆದುಕೊಂಡು ಹೋಗಿ ಹುಣಸೆ ಬರಲು ಮುರಿದು ಹೋಗೋ ಹಂಗೆ ರಪ ರಪ ಅಂಬ್ತಾ ಮೈಯಿ ಕೈ ಕಿತ್ತೋಗೋ ಹಂಗೆ ಬಡಿದುಬಿಟ್ಟ. ಪ್ರಾಣ ಹೋಯ್ತು ಅಂದರೂ ಬಿಡಲಿಲ್ಲ. ಅವುರ ಅಲ್ಲಿಂದ ಬದುಕಿ ಬಂದುದೇ ಹೆಚ್ಚು' ಅಂದು ಗೋಳಾಡಿಕೊಂಡು ಕಂಬೇರಗೊಲ್ಲರು ಕೊಟ್ಟ ಕಾಟವನ್ನು ಸವಿವರವಾಗಿ ಜುಂಜಪ್ಪನಿಗೆ ಬಡಮೈಲ ಒಪ್ಪಿಸಿಬಿಡ್ತು. 'ಅದಕೆ ನಾನು ಆ ನನ್ನ ಮಕ್ಕಳಿಗೆ ಗೋ ಸಂತತಿನೇ ಇರಬಾರದು ಅಂಬ್ತಾ ಯೋಚನೆ ಮಾಡಿ ಈ ರೀತಿ ಮಾಡಿ ನಮ್ಮ ದನಗಳಿಗೆ ಮೈಲಿಗೆ ಆಗಬಾರದು, ಅಂಬ್ತಾನೆ ಪರಸಪ್ಪನ ಕೆರೆಗೆ ಹೋಗಿ ಮುಳುಗಿ ಮಡಿಯಾಗಿ ಬರುತ್ತಿದ್ದೇನೆ. ನನ್ನ ತಪ್ಪು ಮನ್ನಿಸು' ಅಂತಾ ಕಾಲಿಗೆ ಬೀಳ್ತು ಬಡಮೈಲ.

ಜುಂಜಪ್ಪನಿಗೆ ಎಲ್ಲಾ ಹೊಳೆಯಿತು. ಎಲಾ ಕಂಬೇರ! ಎಂತ ದ್ವೇಷ ಸಾಧಿಸುತ್ತಿದ್ದೀರಿ ಅಂಬ್ತಾ ಅಂದುಕೊಂಡು ಸೀದಾ ಗೂಡಿಗೆ ಬಂದನು. ಬಡಮೈಲನ ಪವಾಡ, ಅವುನ ಶಕ್ತಿ, ಸಾಮರ್ಥ್ಯ ಜುಂಜಪ್ಪನಿಗೆ ಅರಿವಾಗಿಬಿಡ್ತು. ಇದು ಗೂಡಿನ ಇತರೆಯವರಿಗೂ ತಿಳಿಲಿ ಅಂಬ್ತಾ ಎಲ್ಲರಿಗೂ ಸಾರಿ ಹೇಳಿದ. ಆಮೇಲೆ ಹೇಳಿದ 'ನನಗೆ ರಕ್ತಪಾತ, ಹಿಂಸೆ ಆಗೋದಿಲ್ಲ. ವಿನಾಕಾರಣ ಯಾರ ಮೇಲೆ ದ್ವೇಷ ಸಾಧಿಸಬೇಡ' ಅಂದನು. ಯಾರ ಮೇಲೂ ಕೈ ಮಾಡಬ್ಯೇ ಅಂತ ಶಪಥ ಮಾಡಿಸಿಕೊಂಡ. ಮುಂದೆ ಜುಂಜಪ್ಪ ಬಡಮೈಲನನ್ನು ಗೂಡಿನ ಮುಖಂಡನನ್ನಾಗಿ ಮಾಡಿಕೊಂಡ. ಬಡಲಮೈಲ ಈರಭದ್ರನಾಗಿ ಬೆಳೆದ.


## ಹುರುಳು ಹಾರಿದ ಬಡಮೈಲ

ಕಂಬೇರಗೊಲ್ಲರು ದಿನ ಬೆಳಗಾದರೆ, ಕರಗುತಾ ಬಂದ್ರು. ಜುಂಜಪ್ಪ ಅವುನ ದನಗಳು ದಿನ ದಿನವೂ ಏಳಿಗೆ ಕಂಡವು. ಇದು ಮಾವುಗಳಿಗೆ ತಟ್ಟಿಕಾಣಕೆ ಆಗದೋಯಿತು. ಏನಾರ ಮಾಡಿ ಜುಂಜಪ್ಪನೂ ಅವುನ ದನಗಳನ್ನು ಸದೆ ಬಡೀಬೇಕೆಂದು ದುರಾಲೋಚನೆ ಮಾಡಿರು. ಮ್ಯಾಸಬೇಡರಿಗೆ ಇವುನ ಬಗೆಗೆ ಚಾಡಿ ಹೇಳಿರು. ಅವುನ ದನನ ತಿಂಬಾಕೆ ಹೇಳಿರು. ಬಡಮೈಲ ಹೋರಿ ಅಂದ ಚಂದ ಹೇಳಿದರು. ಅದು ಕೊಬ್ಬಿ ನಿಂತಿರುವುದನ್ನು ಹೇಳಿದರು. ಜುಂಜಪ್ಪನ ದನಗಳು ಸದಾ ಬೇಡರ ಹೊಲ, ಬಯಲಾಗೆ ಮೇಯ್ದು ಗೂಡಿಗೆ ಬರುತ್ತಿದ್ದವು. ಜುಂಜಪ್ಪನ ಮಾವುಗಳ ಮಾತ ಕೇಳಿಬಿಟ್ಟ ಮ್ಯಾಸಬ್ಯಾಡರು, ಒಂದಿಳ್ಳು ಬಡಮೈಲ ಹೋರಿ ಹಿಡಿಯಬೇಕೆಂದು ನಾನಾ ಪಳಾನು ಮಾಡಿರು. ದೂರದಲ್ಲೆ ಕೂತು ಕಾದರು. ಬೇಡರ ಹೊಲದಾಗೆ ಆಚೆ ಬಡಮೈಲ ಮೇಯ್ದು ಬಸವ ಬಂದಂಗೆ ಬಂತು. ಬರ್‍ತಾ ಇರೋ ಬಸವನನ್ನು ಹಿಡಿಯಬೇಕೆಂದು ಮ್ಯಾಸಬ್ಯಾಡರು, ದೂರದಲ್ಲಿ ಬರೋದಾರಿಗೆ ಉಳ್ಳು ಹಾಕಿದರು. ಬಸವನ್ನ ಅದರಲ್ಲಿ ಕೆಡುವನಾ ಅಂಬ್ತಾ ಹಗ್ಗ ಹಾಕಿ, ಮರಕ್ಕೆ ಬಿಗಿದು ಕಟ್ಟಿರು. ಸುತ್ತಲೂ ಕಂದಕ ಹೊಡೆದರು.

ಸರಿ, ಬಡಮೈಲ ಮೇಯ್ದು, ತನ್ನ ಗೂಡಿಗೆ ಹೋಗಾಕೆ ಬಂತು. ದಾರಿಲಿ ಸೂತ್ರದ ತರ ಬಿಗಿಯಾಗಿ ಕುಣಿಕೆ ಹಗ್ಗ ಹಾಕಿ, ಆಕಡೆ ಈಕಡೆನೂ ಮರಕ್ಕೆ ಕಟ್ಟೆವರೆ. ಬಡ ಮೈಲ ಬಂತು. ಹಗ್ಗದ ಕುಣಿಕೆ ನಾಲ್ಕು ಕಾಲೂ ಸಿಕ್ಕಿದವು. ಬಸವ ಒಂದು ಸಾರಿ ಜಾಡಿಸುತ್ತಿದ್ದಂತೆ, ಹಗ್ಗ ಹಿಡಿದು ಆ ಕಡೆ ಈ ಕಡೆ ನಿಂತಿದ್ದರಲ್ಲ ಮ್ಯಾಸಬೇಡರು, ಅವುರ ಹಿಡಿದಿದ್ದ ಬಡಿಗೆ ಮೂರು ಉಳ್ಳಾಗಿ ಬಿದ್ದು ಹೊಳ್ಳಾಡಿರು. ಬಡಮೈಲ ಒಂದು ನೊಣ ಹಾರಿಸಿದಂಗೆ ಹಾರಿಸಿಬಿಟ್ಟು, ನಿಧಾನವಾಗಿ ತನ್ನ ಗೂಡಿಗೆ ಹೋತು. ಆವತ್ತಿನಿಂದ ಮ್ಯಾಸಬೇಡರು, ಕಂಬೇರ ಮಾತು ಕೇಳಲಿಲ್ಲ. ಬಡಮೈಲನ ತಂಟೆಗೂ ಬರಲಿಲ್ಲ. ಜುಂಜಪ್ಪನ ಒಕ್ಕಲಾದರು.

ಕಂಬೇರ ಮಾತ ಕೇಳಿ ಕೆಟ್ಟೆವಲ್ಲೋ ಶಿವಶಿವ
ನಾವು ಕಲಿತಾ ವಿದ್ಯೆನೂ ಪುಡಿಪುಡಿ ಹಿರಿಯಣ್ಣ

ಕಂಬೇರಹಟ್ಟೋರು ಕೇರಿಗೆ ಬಿಟ್ಟರು
ಕೆಂಡದಂತ ಮಾತು ಮನದೊಳಗೆ ಜುಂಜಪ್ಪ
ಹುಟ್ಟೋ ಮಗುವಿಗೂ ವಿಷವ ಹಾಕೋವರು



# ಮೈಲಣ್ಣನ ಹುಲ್ಲು-ನೀರು ಹುಡುಕಾಟ

ಮಾರಣ್ಣ, ಮೈಲಣ್ಣ, ಪಂಚಕಲ್ಯಾಣಿ ಜೊತೆಗೆ ಬಡಮೈಲ ಈ ಎಲ್ಲವರೂ ಕೂಡಿಕೊಂಡು ಏಳು ಲಕ್ಷ ದನಗಳನ್ನು ಮೇಯಿಸಿಕೊಂಡು ಕಾಲ ಹಾಕ್ತಾ ಅವರೆ. ಹಿಂಗೆ ಒಂದು ದಿನ ಪಂಚಕಲ್ಯಾಣಿ ಭವಿಷ್ಯ ನುಡೀತು ಅದೇನೆಂದರೆ 'ಅಣ್ಣ ಜುಂಜಣ್ಣ ಬರಗಾಲ ಬಂದು ನೀರು ನಿಡಿ ಇಲ್ಲದಂಗೆ ಆಗುತ್ತೆ. ಈಗ ಒಂದು ಭರಣಿಯಲ್ಲಿ ಬಸವನ ಪತ್ರೆನೂ, ಇನ್ನೊಂದು ಭರಣಿಯಲ್ಲಿ ಒಂದಿಷ್ಟು ನೀರನೂ ಮಡಿಕೊಂಡು ಬಿಡಪ್ಪ' ಅಂತು. ಆಗ ಜುಂಜಪ್ಪ ಒಪ್ಪಿಕೊಂಡ. ಹಿಂಗೆ ದನಿನ ಸವಾಸ, ಮೇಯಿಸ ಭರದಲ್ಲಿ ಪಂಚಕಲ್ಯಾಣಿ ಹೇಳಿದ ಮಾತನ್ನು ಮರೆತುಬಿಟ್ಟ ಜುಂಜಪ್ಪ. ಭೀಕರ ಬರಗಾಲ ಬಂದೇ ಬಿಡ್ತು. ಬರಗಾಲ ಅಂದ್ರೆ ಅಂತಿಂತದಲ್ಲ, ಭೂಮಿ ಮೇಲೆ ಹಸಿರು ಅನ್ನಾದು ಕಾಣಲೇ ಇಲ್ಲ. ನೀರು ಅನ್ನೋದು ಇಲ್ಲವೇ ಇಲ್ಲ. ಕೆರೆ ಕಟ್ಟೆಗಳೆಲ್ಲಾ ಒಣಗಿ ಒಂದೊಂದು ಗೇಣುದ್ದ ಬೀಟೆ ಬಿಟ್ಟವು. ಇಂಥ ಕಾಲದಲ್ಲಿ ಜುಂಜಪ್ಪ ಯೋಚನೆ ಮಾಡಿದನು. ಸೂರ್ಯ ಹುಟ್ಟಿದ ಕೂಡಲೇ ದನಗಳು ಎದ್ದು ಹುಲ್ಲು ನೀರಿಗೆ ತಾರಾಡುತಾವೆ. ಅದಕೆ ಸೂರ್ಯ ಹುಟ್ಟದೇ ಬ್ಯಾಡ ಅಂದುಬಿಟ್ಟು ತಪಸ್ಸಿಗೆ ಕೂತುಬಿಟ್ಟ. ತಮ್ಮ ಮಾರಣ್ಣ ಮೈಲಣ್ಣರಿಗೆ ಹೇಳಿದ 'ದನ ಸತ್ತರೂ ಪರವಾಗಿಲ್ಲ, ನಾನು ತಪಸ್ಸು ತಿಳಿದು ಎಬ್ಬಿಸಿಕೋತೀನಿ, ಆದರೆ ಯಾವುದೇ ಕಾರಣಕ್ಕೂ ದನ ತಿನ್ನಾಕೆ ಹದ್ದು ಕಾಗೆಗೆ ಮಾತ್ರ ಬಿಡಬೇಡಿರಿ' ಅಂದನು. ಸ್ವಾಮಿ ಅದರಂತೆ ಧ್ಯಾನಕ್ಕೆ ಕುಂತುಕೊಂಡು ಬಿಟ್ಟ. ಮಾರಣ್ಣ ಮೈಲಣ್ಣ ದನಗಳ ರೊಪ್ಪದ ಸುತ್ತ ಕವಣೆ ಕಲ್ಲು ಹಿಡಕೊಂಡು ನಿಂತರು.

ದನಗಳ ಗೋಳಾಟ, ಅರಚಾಟ ಹೇಳತೀರದು. ಅಂಬಾ ಅಂತಾವೆ ಕೆಳಕೆ ಬೀಳುತಾವೆ. ಚಿತ್ರಹಿಂಸೆ ಅನುಭವಿಸುತಾವೆ. ನೀರಿಲ್ಲ, ಹುಲ್ಲಿಲ್ಲ. ಆಗ ಮಾರಣ್ಣ ಮೈಲಣ್ಣ ಇರುವಾಗ ಮೈಲಣ್ಣ ಏನು ಮಾಡಿನಪ್ಪ ಅಂದ್ರೆ ಅಣ್ಣ ಮಾರಣ್ಣನಿಗೂ ಪಂಚಕಲ್ಯಾಣಿಗೂ ಬಡಮೈಲನಿಗೂ ಹೇಳಿಬಿಟ್ಟು ಕವಣೆಕಲ್ಲು ಅಲ್ಲೇ ತಂಗಟಿ ಗಿಡದ ಬುಡದಲ್ಲಿ ಮಡಗಿ ಹುಲ್ಲು ನೀರು ಇರೋ ತಾವನ್ನು ಹುಡಿಕಂಡು ಸೀದಾ ಹೊರಟನು. ಬಂದ ಬಂದ, ಗೊಂಡಾರಣ್ಯಕ್ಕೆ ಬಂದ. ಕಾರೆಗಿಡ, ಬಂದ್ರೆಗಿಡ, ಮುತ್ತುಗದ ಗಿಡ, ತಂಗಟಿ ಗಿಡ, ಮರಡಿ ಗಿಡ, ಬಿಕ್ಕೆ ಗಿಡ,



ತೂಬರೆ ಗಿಡಗಳನ್ನೆಲ್ಲಾ ಬೇಡಿದ. ನೀರು ಹುಲ್ಲು ಇರೋ ಜಾಗ ಹೇಳಿ ಎಂದು ಮೈಲಣ್ಣ ಬಗೆಬಗೆಯಲ್ಲಿ ಬೇಡಿಕೊಂಡ. ಯಾವ ಮರ ಗಿಡಗಳೂ ಹುಲ್ಲು ನೀರಿನ ಸುಳಿವು ನೀಡಲಿಲ್ಲ. ಹಂಗೆ ಬರ್‍ತಾ ಅವ್ನೆ. ಮುಂದಕ್ಕೆ ಆಗ ಕಾಡಿನಾಗೊಂದು ಹುಲಿ ಸಂತತಿ ಪಾಪ, ಬರಗಾಲ ಊಟವಿಲ್ಲ, ಹಣ್ಣು ಆಹಾರವಿಲ್ಲ. ಏನು ಮಾಡಾದು? ಹುಲಿಯಾದ ಹುಲಿಯಲ್ಲ ಒಂದು ಬೋನಿನಾಗೆ ಸೇರಿಕೊಂಡು ಯೋಚ್ನೆ ಮಾಡುತಾವೆ. ಅಷ್ಟರಲ್ಲಿ ಯಾರೋ ನರಮನುಷ್ಯರು ಕೂಗಿಕೊಂಡು ಹೋಗುತ್ತಿರುವ ಸಂಗತಿ ತಿಳೀತು. ರಾಜ ಹುಲಿ ಈಚೆಗೆ ಬಂದು ನೋಡುತ್ತೆ. ಮೈಲಣ್ಣ ನಮ್ಮ ದನಗಳಿಗೆ ಹುಲ್ಲು ನೀರು ತೋರಿಸಿರಪ್ರೋ ಅಂಬ್ತಾ ಕೂಗಿಕೊಂಡು ಹೋಗ್ತಾ ಅವುನೆ. ಅವುನ ಬಿಟ್ಟರೆ ಇಡೀ ಆಡಂದರಣ್ಯದಾಗೆ, ನೀನೆ ಅನ್ನುವರ್‍ಯಾರೂ ಇರಲಿಲ್ಲ. ನರಮಾನವರ ಸುಳಿವಿಲ್ಲ, ಬರಗಾಲ ಬಂದು ಹುಲುಪ್ರಾಣಿಗಳೆಲ್ಲಾ ಸತ್ತು ಹೋಗಿಬಿಟ್ಟಿವೆ. ಅಂತಾದ್ರಲ್ಲಿ ಒಂದು ಹುಡುಗಾ ಕಾಡಿನಾಗೆ ಅಡ್ಡಾಡುತೈತೆ. ವಪ್ಪತ್ತಿಗೆ ಒಳ್ಳೆ ಊಟ ಸಿಗುತ್ತೆ ಅಂದು ಬಿಟ್ಟು ಹುಲಿಗಳೆಲ್ಲಾ ಕೂಡಿಕೊಂಡು ಪ್ಲಾನು ಮಾಡಿಬಿಟ್ಟು ಮೈಲಣ್ಣನ್ನ ಮುತ್ತಿಗೆ ಹಾಕಿಬಿಟ್ಟವು.

# ಹುಲಿಯ ಕೊಂದ ಜುಂಜಪ್ಪ

ಮುಂದೆ ಮುಂದಕೆ ಮೈಲಣ್ಣ ಬರುತಿದ್ದಂಗೆ ಹಿಂದು ಹಿಂದಕೆ ಹುಲಿಗಳು ಬಂದವು. ಮೈಲಣ್ಣನನ್ನು ಸುತ್ತು ಬಳಸಿ ಅಡ್ಡಗಟ್ಟಿದವು. ನಿನ್ನ ತಿಂದಾಕಿ ಬಿಡುತೀವಿ ಅಂದವು. ಮೈಲಣ್ಣಿಗೆ ಪ್ರಾಣ ಹೋದಂಗಾದರೂ ಸಾವರಿಸಿಕೊಂಡು ಕೇಳಿಕೊಂಡ, ನನ್ನ ದನಗಳು ಹುಲ್ಲು ನೀರಿಲ್ಲದೆ ಸಾಯುತ್ತಿದ್ದಾವೆ. ನಾನು ದನಗಳಿಗೆ ಹುಲ್ಲು-ನೀರು ಹುಡುಕಿ, ಅವುಕೆ ಒಂದು ದಾರಿ ತೋರಿಸಿ ಬಂದು ನಿಮಗೆ ಮೇವಾಗುತೀನಿ. ಈಗ ನನ್ನನ್ನು ಬಿಟ್ಟು ಬಿಡಿರಿ ಅಂದ. ಹುಲಿಗಳು ಕೇಳಲಿಲ್ಲ. ಈ ಸಂಗತಿ ತಪಸ್ಸು ಮಾಡ್ತಾ ಕುಂತಿದ್ದನಲ್ಲ ಜುಂಜಪ್ಪಗೆ ತಿಳೀತು. ಕೂಡಲೇ ಕಣ್ಣು ಬಿಟ್ಟು ಒಂದು ಚುಪ್ಪು ಕೊಡಲಿ ತಗೊಂಡು ಅಲ್ಲಿಂದಲೇ ಬೀಸಿದ. ಯಾವಾಗ ಜುಂಜಪ್ಪ ಚುಪ್ಪುಕೊಡಲಿಯಿಂದ ಬೀಸಿನೋ ಆ ರಭಸಕ್ಕೆ ಹುಲಿರಾಜನ ಶಿರ ಕತ್ತರಿಸಿ ಎರಡು ತುಂಡಾತು. ವಾರಿಗೆ ಹುಲಿಗಳೆಲ್ಲ ಸತ್ತೆವೋ ಬದುಕಿದೆವೋ ಅಂಬ್ತಾ ಓಟ ಕಿತ್ತವು. ಹುಲಿಯಿಂದ ಬದುಕಿದ ಮೈಲಣ್ಣ ಹುಲಿಗೆ ಚುಪ್ಪು ಕೊಡಲಿಯಿಂದ ಹೊಡೆದದ್ದು ನಮ್ಮಣ್ಣನೆ. ಅವುನ ಇಲ್ಲೆ ಎಲ್ಲರ ಇರಬಹುದೆಂದು ಕಾಡಾಗೆಲ್ಲಾ ಕೂಡಿದ. ಕೂಗಿದ ಶಬ್ದ ಅಪ್ಪಳಿಸಿ ಇವನಿಗೆ ಕೇಳಿಸಿತು. ಆದರೆ ಜುಂಜಪ್ಪ ಸಿಗಲಿಲ್ಲ. ಮೈಲಣ್ಣನಿಗೆ ಬೇಜಾರಾತು. ನೋಡು ಹುಲಿ ಬಾಯಿಗೆ ಮೇವಾಗುತ್ತಿದ್ದ ನನ್ನ ಬದುಕಿಸಿದ ನಮ್ಮ ಅಣ್ಣ ಈಗ ನೋಡಿರೆ ನನ್ನ ಮಾತಾಡಿಸದಂಗೆ ಮರೆಯಾಗಿಬಿಟ್ಟವನೆ. ಅವುನ ಹೇಳಿದ್ದಂಗೆ ನಾನು ದನಗಳ ರೊಪ್ಪದ ತವಾನೇ ಇರಬೇಕಾಗಿತ್ತು. ಅದನ್ನು ಬಿಟ್ಟು ಹುಲ್ಲು ನೀರು ಹುಡುಕಿಕೊಂಡು ಬಂದು ಈಗ ಹುಲಿ ಪಾಲಾಗುತ್ತಿದ್ದೆ ಅಂಬ್ತಾ ಕೋಪ ಬಂದು ಹಿಂಗೆ ಮಾಡ್ತಾ ಅವುನೆ ಅಂದುಬಿಟ್ಟು ನಮ್ಮಣ್ಣನಿಗೇ ಬೇಕಿಲ್ಲದ ಮೇಲೆ ನಾನು ಈ ಲೋಕದಾಗೆ ಇದ್ದು ಇನ್ನೇನು ಫಲ ಅಂದು ಬಿಟ್ಟು ಮೈಲಣ್ಣ ಕಾಡಿನ ನಾರು ಕಡ್ಡಿ ಮುರಕೊಂಡು ಉದ್ದಕ್ಕೆ ನಾರು ಸಿಗಿದುಬಿಟ್ಟು, ಮರಡಿಗಿಡಕ್ಕೆ ನೇಣು ಹಾಕಿಕೊಳ್ಳಲು ಮರ ಹತ್ತಿದ.

## ಕೊರವಂಜಿ ತೋರಿದ ಹುಲ್ಲುಗಾವಲು

ಯಾವಾಗ ಮೈಲಣ್ಣ ನಮ್ಮಣ್ಣನ ಮುಖ ನೋಡದ ಮೇಲೆ ನಾನು ಈ ಪರಪಂಚದ ಮೇಲೆ ಇರಬಾರದು ಅಂದುಬಿಟ್ಟು ಒಂದು ಮರಡಿ ಗಿಡಕ್ಕೆ ನೇಣು ಬಿಗಿದುಕೊಂಡನೋ ಆಗಲೆ ಜುಂಜಪ್ಪ 'ಎಲೆ ಎಲೆ ಶಂಭುವೆ, ಅನ್ಯಾಯವಾಗಿ ಈ ಹುಡುಗ ಪ್ರಾಣಾನೆ ಕಳೆದು ಕೊಳ್ಳುತ್ತಾನೆ, ಸುಳ್ಳೇ ಸತ್ಯ ಆಗಿಬಿಡುತ್ತೆ' ಅಂದುಬಿಟ್ಟು ಅಹುದು ಮೈಲಣ್ಣನ ಪಾರು ಮಾಡಲು ಗೌರಸಂದ್ರದ ಮಾರಮ್ಮನ್ನ ನೆನಪು ಮಾಡಿಕೊಂಡ. ಆ ತಾಯಿ ಗೌರಸಂದ್ರದ ಮಾರಕ್ಕ ಕೊರವಂಜಿ ವೇಶ ಹಾಕಿಕೊಂಡು, ಮೈಲಣ್ಣ ನೇಣು ಬಿಗಿದಿದ್ದ ಮರದ ಬುಡಕ್ಕೆ ಬಂದಳು. ನೋಡುತಾಳೆ ನರಮನುಷ್ಯರು ಇದೇನು, ಹೆಂಗೆ ಅಂದೆಲ್ಲಾ ಕೇಳಿ ತಿಳುಕೊಂಡು ತಾನೊಂದು ಕಣಿ ಹೇಳುತೀನಿ ಕೇಳಪ್ಪ ಅಂದು, ಕಣಿ ಹೇಳಕೆ ಅವುನ ಕೊರಳ ನಾರು ಬಿಡಿಸಿ ಕೆಳಕೆ ಕರಕೊಂಡು ಬಂದ್ಲು. ಕಣಿ ಹೇಳೋಳಂಗೆ ಮಾತು ಸುರು ಮಾಡಿ, ತನ್ನ ಅಣ್ಣ ಪರಾಕ್ರಮಿ, ಅವುನು ನಿಜವಾದ ಪರಮೇಶ್ವರ. ಈಗ ಸೂರ್ಯದೇವುನ ಕುರಿತು ತಪಸ್ಸಿಗೆ ಕುಂತಾನೆ. ನಿನಗೆ ಶತ್ರುವಾಗಿ ಒಂದು ಪ್ರಾಣಿ ತಿನ್ನಕೆ ಬಂತು. ದಿವ್ಯಜ್ಞಾನಿ ನಿನ್ನ ಅಣ್ಣ ಕುಂತಕಡೆಯಿಂದಲೇ ಚುಪ್ಪು ಕೊಡಲಿ ತೆಗೆದು ಬೀಸಿದೇಟಿಗೆ ಹುಲಿ ಎರಡು ತುಂಡಾಯಿತು. ಇತರೆ ಹುಲಿಗಳೆಲ್ಲಾ ಹೆದರಿಕೊಂಡು ಓಟ ಕಿತ್ತವು. ನೀನು ಬದುಕಿಕೊಂಡೆ. ಆಮೇಲೆ ಹುಡುಗ ನೀನು ನಮ್ಮಣ್ಣನೇ ಬಂದು ಹುಲಿ ಓಡಿಸಿ ನನ್ನ ಬದುಕಿಸಿದ ಅಂಬ್ತಾ ತಿಳುಕೊಂಡು ಅವುನ ಮಾತಾಡಿಸೋಕೆ ಹೋದೆ. ಆದರೆ ಜುಂಜಪ್ಪ ಈಚೆಗೆ ಬಂದವನೇ ಅಲ್ಲ. ಅವನ ಸದ್ದೇ ಇಲ್ಲ, ದರುಶನವೇ ಇಲ್ಲ. ಆದರೂ ಕೂಗಾಡಿ ನೀನು ಅಣ್ಣ ಮಾತಾಡಲ್ಲ ಅಂಬ್ತಾ ಪ್ರಾಣ ಕಳೆದುಕೊಳ್ಳೋಕೆ ಹೋದೆ. ಇದು ತಪ್ಪು ಮಗನೆ ಅಂಬ್ತಾ ನಡೆದ ಕತೆನೆಲ್ಲಾ ಇದ್ದುದು ಇದ್ದ ಹಾಗೆಯೇ ಹೇಳಿಬಿಟ್ಟಳು ಕೊರವಂಜಿ.

ಕೊರವಂಜಿ ಹೇಳಿದ ಕಣಿ ಕೇಳಿ ಮೈಲಣ್ಣನಿಗೆ ಆಶ್ಚರ್ಯವಾಯ್ತು. ಇವಳು ಸತ್ಯವಂತೆ ಅಂಬ್ತಾ ತಿಳಿದುಬಿಟ್ಟು ಮೈಲಣ್ಣ ಹೇಳಿದ 'ತಾಯಿ ಕೊರವಂಜಿ, ನಮ್ಮದು ದನಗಳ ಮೇಯಿಸೋ ವಂಶ. ಅವುಗಳಿಗೆ ಮೇವು ನೀರು ಹಾಕದೆಲೆ ನಾವು ಊಟ ಮಾಡೋ

ಹಂಗಿಲ್ಲ. ಒಂದನಿ ನೀರು ಮುಟ್ಟಲ್ಲ. ಅಂತಾದ್ರಾಗೆ ನೀನು ಈಗ ದೇವರಾಗೆ ಸಿಕ್ಕಿದ್ದೀಯ. ಸಿರಾ ಸೀಮೆಗೆ ಬರಗಾಲ ಬಂದು, ಕೆರೆಕಟ್ಟೆ ಒಣಗಿ ಗೇಣುದ್ದ ಬೀಟೆ ಒಡೆದು ಬಿಟ್ಟವೆ. ಹಸಿರು ಅಂಬಾದು ಕಾಣದಂಗಾಗೈತೆ. ಹೇಳು ತಾಯಿ, ದನಗಳಿಗೆ ಹುಲ್ಲು ನೀರಿಗೆ ಯಾವ ಜಾಗ ಅಯಿತೆ ಅಂಬ್ತಾ ಒಂದು ಹೇಳಮ್ಮ' ಅಂದನು ಮೈಲಣ್ಣ.

ಕೊರವಂಜಿ ಮೈಲಣ್ಣನಿಗೆ ಹುಲ್ಲು-ನೀರಿನ ಬಗ್ಗೆ ಸುಳಿವು ನೀಡುತ್ತಾಳೆ. 'ಚೇಳೂರು ಎಂಬೋದು ಏಳು ಸುತ್ತಿನ ಕ್ವಾಟೆ. ಅದಕೆ ಒಡೆಕಾರರು ನಾಯ್ಕ ಮಕ್ಕಳು - ರಂಗಪ್ಪನಾಯ್ಕ ಅಂತ ಅವುನ ಹೆಸರು. ಅವುನ ಕಾವಲಾಗೆ ಹಕ್ಕಿಹುಲ್ಲು, ಸ್ವಾಲೆಬುಡ್ಡ, ಅಣ್ಣೆಬುಡ್ಡ, ಕರಡೆಹುಲ್ಲು, ಹಾಸಿಗೆ ಹಾಸಿದಂಗೆ ಮಲಗೈತೆ. ಒಂದೈದು ನಿಮಿಷಕ್ಕೆ ದನ ಮೇಯ್ದು ಮಲಗಬಹುದಪ್ಪ. ದನ ಬದುಕಿಕೊಂತಾವೆ ಹೋಗರಪ್ಪ' ಅಂದುಬಿಟ್ಲು ಕಣಿ ಹೇಳೋ ಕೊರಮಿ ಮಂಗನೆ ಮಾಯವಾಗಿಬಿಟ್ಲು.

ಸ್ವಾಮಿ ಜುಂಜಪ್ಪ ಧ್ಯಾನದಲ್ಲೇ ಕುಂತಿರುವಾಗ ಸಿಕ್ಕೋನು ಮೈಲಣ್ಣ, ಬಡಮೈಲ, ಪಂಚಕಲ್ಯಾಣಿ, ಈರಭದ್ರ, ಗಿರಿಮಲ್ಲ ಹೋರಿಗಳೊಂದಿಗೆ ಮಾತಾಡಿಬಿಟ್ಟು, ಚೇಳೂರು ಮುಖವಾಗಿ ಬಟ್ಟಿಗಾನಹಳ್ಳಿ, ಬಿಜ್ಜನಬೆಳ್ಳ, ಶೇಷೇನಹಳ್ಳಿಗೆ ತಿರುವಿ, ಅಂಕಸಂದ್ರ ಕಾವಲಾಗಾಸಿ ರಂಗನಹಳ್ಳಿ ತಾವ ಬಲಕೆ ತಿರುಗಿ, ಮಲಮಾಚಕುಂಟೆ ಎಣಿಗೆ ಬರುತಾವೆ. ದನಗಳ ಹಿಂಡು ನೀರು ಹುಲ್ಲು ಇಲ್ಲದೆ ಬುಸುಗರಿಸುತಾವೆ. ಬಟಂಬೈಲು, ನೀರಿಲ್ಲ, ಹಸುರಿಲ್ಲ. ರೋಜಂ ಸೊಪ್ಪು, ಬದರೆ ಸೊಪ್ಪೂ ಇಲ್ಲ. ಅಲ್ಲೆಲ್ಲ ಇದ್ದ ಚೂರು ಪಾರು ಆಲದ ಎಲೆ ಕಿತ್ತು ಹಾಕ್ತಾ ಕರುಗಳ ಬಾಯಿ ಆಡಿಸುತಾ ದನ ಹೊಡೆದ ಚೇಳೂರು ಬಯಲಿಗೆ. ಚೇಳೂರು ಕೆರೆ ಬೈಲಾಗೆ ನೂರೈವತ್ತು ಎಕರೆ ಹುಲ್ಲುಗಾವಲು. ಆನೆ, ಕುದುರೆ, ಬಸವಗಳನ್ನು ಮೇಯ್ಸೋ ಬೈಲದು. ಅದನ್ನು ಸುತ್ತಲೂ ಬೇಲಿ ಹಾಕಿ ಏಳು ಜನ ಕಾವಲುಗಾರರನ್ನು ನೇಮಿಸಿಬಿಟ್ಟವನೆ. ಅದರೊಳಗೆ ಒಂದು ನೀರಿನ ಮಡುವು, ಹುಲ್ಲು ಕೆದರಿಕೊಂಡು ಹರಡಿಕೊಂಡುಬಿಟ್ಟೈತೆ. ನೋಡುತಾನೆ ಮೈಲಣ್ಣ, ಆದರೆ ಹೊರಗಿಂದ ಒಂದು ಇಲಿಮರಿ ಸುಳಿಯಾಕೆ ಜಾಗವಿಲ್ಲ. ಏನು ಮಾಡಾದಪ್ಪ ಬಂದ್ ಮಾಡಿಬಿಟ್ಟಾರೆ. ಸ್ವಾಮಿ ಯೋಚನೆ ಮಾಡುತಿದ್ದಾಗ, ಬಡಮೈಲ ಕಾಲು ಕೆರೆದು ಕೊಂಬಾಗೆ ಮೀಟಿದ ಕೂಡಲೆ ಬಲವಾದ ಬೇಲಿ ಎರಡು ಭಾಗವಾಯ್ತು. ದನಗಳು ಒಳಗೆ ನುಗ್ಗಾರೆ ಜಾಗ ಮಾಡಿಕೊಟ್ಟು ಏಳುಲಕ್ಷ ದನಗಳು ಒಳಾಕೆ ನುಗ್ಗಿಸಿದರು.

## ಚೇಳೂರು ಕಾವಲಾಗೆ ಜುಂಜಪ್ಪನ ದನ

ಜುಂಜಪ್ಪನ ದನಗಳು ಚೇಳೂರು ರಂಗಣ್ಣನ ಹುಲ್ಲುಗಾವಲಲ್ಲಿ ಲಗ್ಗೆ ಹೊಡೆದು ಮೇಯ್ತಾ ಇದ್ದವು. ಚೇಳೂರು ರಂಗಣ್ಣ ಚೇಳೂರು ರಾಜ್ಯಭಾರ ಮಾಡೋದರ ಜೊತೆಗೆ ಮುತ್ತು ರತ್ನದ ವ್ಯಾಪಾರನೂ ಮಾಡ್ತಾ ಇದ್ದನು. ಬಸವಗಳ ಮೇಲೆ, ಆನೆ ಮೇಲೆ, ಕುದುರೆ ಮೇಲೆ ಏರು ಹಾಕಿಕೊಂಡು ಅಣ್ಣ ತಮ್ಮಂದಿರು ವ್ಯಾಪಾರಕ್ಕೆ ಸದಾ ಹೋಗುತ್ತಿದ್ದರು. ಹುಲ್ಲುಗಾವಲು ನೋಡಿಕೊಳ್ಳೋಕೆ ಏಳು ಜನ ಕಾವಲುಗಾರರನ್ನು ಇಟ್ಟಿದ್ದ. ಇವರಾದರೂ ನಾವು ದೊರೆ ಆಳುಗಳು, ನಮ್ಮ ತಂಟೆಗೆ ಯಾರೂ ಬರೋದಿಲ್ಲ ಅಂದುಬಿಟ್ಟು ದಿಮಾಕು ಮಾಡಿಕೊಂಡು ಬಿಗಿಯಾಗೆ ಉಂಡುಬಿಟ್ಟು ಆನೆಕಟ್ಟೋ ಆಟ, ಚೌಕಾಬಾರ ಆಡಿಕೊಂಡು ಕಾಲ ಕಳೆಯುತ್ತಿದ್ದರು. ಹಿಂಗೆ ಒಂದೆರಡು ದಿನ ಕಳೆಯಿತು. ಜುಂಜಪ್ಪನ ದನ ರಂಗಣ್ಣನ ಕಾವಲಾಗೆ ಮೇಯ್ದು ಹುಲ್ಲುಗಾವಲು ತಪ್ಪಲು ಮಾಡಿಬಿಟ್ಟವು. ಅಷ್ಟೊತ್ತಿಗೆ ಕಾವಲುಗಾರರು ಬಂದು ನೋಡುತ್ತಾರೆ, ಗಾಬರಿಯಾಗಿಬಿಟ್ರು. ಇಷ್ಟೊಂದು ದನಗಳ ನೋಡಿರಲೇ ಇಲ್ಲ. ಎಲ್ಲ ಸಿಂಹ, ಸಿಂಹದಂತ ದನ. ಇದೇನಪ್ಪ ಇದು? ಅಂದು ಬಿಟ್ಟು ಗಾಬರಿಯಾದರು.

ಇಷ್ಟು ಹೊತ್ತಿಗೆ ಧ್ಯಾನಕ್ಕೆ ಕುಂತಿದ್ದ ಸ್ವಾಮಿ ಜುಂಜಪ್ಪ ತನ್ನ ದನಿನ ಗೂಡಿಗೆ ಬಂದು ನೋಡುತಾನೆ, ಒಂದೇ ಒಂದು ಕರಾನೂ ಇಲ್ಲ. ಎಲ್ಲಿಗೆ ಹೋಗಿರಬಹುದೆಂದು ದನಗಳು ಹೋದ ಜಾಡು ಹಿಡಕೊಂಡು ಬಂದಾನು. ಸೀದಾ ಚೇಳೂರು ರಂಗಣ್ಣನ ಕಾವಲಿಗೆ ಬಂದುಬಿಟ್ಟ. ದನಗಳು ಈಜಾಡಿಕೊಂಡು ಮೇವು ತಿನ್ನುತ್ತಿರುವುದು ಅವನಿಗೆ ಬಹಳ ಸಂತೋಷವಾಯ್ತು. ಈಗ ಕಾವಲುಗಾರರು ಬರಾದು ಕಂಡು, ಮಾರಣ್ಣ, ಮೈಲಣ್ಣನ ದನಿನ ಬಳಿಗೆ ಕಳುಹಿಸಿಬಿಟ್ಟು, ಕಾವಲುಗಾರರು ಬರೋ ದಾರಿಗೆ ಅಡ್ಡಲಾಗಿ ಹಣ್ಣು ಹಣ್ಣು ಮುದುಕನಾಗಿ ಕುಂತುಬಿಟ್ಟ. ಸರಿ ಕಾವಲುಗಾರರು ಬಂದ್ರು, ಅಜ್ಜನಿಗೆ ಗದರಿಸಿದರು, ಗಲಾಟೆ ಮಾಡಿದರು. ಅಜ್ಜನಿಗೆ ಒಂದೂ ತಿಳೀವಲ್ದು. ಹರ ಅನ್ನಲಿಲ್ಲ, ಶಿವ ಅನ್ನಲಿಲ್ಲ. ಸುಮ್ಮನೆ ಕುಂತು ಕೈಸನ್ನೆ, ಬಾಯಿಸನ್ನೆ ಮಾಡ್ತು. ಅಜ್ಜನ ಹಿಡಕೊಂಡು ದೊರೆಗೊಪ್ಪಿಸಿ ಬಂದೂಕಿನಿಂದ ಸುಡುಸಬೇಕು ಅನ್ನೋ ಹೊತ್ತಿಗೆ, ಈ ನನ್ನ ಮಕ್ಕಳು ಅಸವಲ್ಲದವರು

ಮುಟ್ಟಿ ಅಂಟು ಮುಟ್ಟು ಮಾಡಿಬಿಡುತಾರೆ ಅಮ್ತಾ ತಿಳಿದ ಸ್ವಾಮಿ ಜುಂಜಪ್ಪ ಹಣ್ಣು ಹಣ್ಣು ಮುದುಕನಾಗಿ ನಿಂತುಕೊಂಡುಬಿಟ್ಟ. ನಾಯ್ಕ ಮಕ್ಕಳಿಗೆ ಆಶ್ಚರ್ಯವಾಯಿತು. ಇದೇನಪ್ಪ ಹಿಂಗೆ ಮಾಯಾಕಾರ ಈವಜ್ಜ ಅಂದುಬಿಟ್ಟು 'ನಡಿ ದಗಡಿ ಮಗನೆ, ನಮ್ಮ ದೊರೆ ಹತ್ರ ಹೋಗಾನ, ದನ ಮೇಯಿಸಿದ್ದುದಕ್ಕೆ ದಂಡ ಕಟ್ಟಿ, ಆಮೇಲೆ ಬಂದೂಕದಿಂದ ಸುಡಿಸಿಬಿಡುತೀವಿ' ಅಂದರು. ಆಗ ಜುಂಜಪ್ಪನು ತಮ್ಮ ಮೇಲಿನ ಒಂದು ಹನಿ ಬೆವರು ಭೂಮಿಗೆ ಅಪ್ಪಳಿಸಿದ. ಅದೊಂದು ಉಡುದ ರೂಪ ತಾಳಿಬಿಟ್ಟು, ತೆವಳಿಕೊಂಡು ತೆವಳಿಕೊಂಡು ಹೋಗಿ ಒಂದು ಹುತ್ತ ಸೇರಿಕೊಂಡು ಬಿಡ್ತು. 'ಅದನ್ನ ಹಿಡಕೊಡಿ, ನಾನು ಬರುತೀನಿ' ಅಂದ. ಇದೊಳ್ಳೆ ಕೆಲಸ ಅಂದು ಕೋಲುಕಾರರು ಹುತ್ತ ಅಗೆದು ಉಡ ಹಿ ಡಿಯಾಕೆ ಮುಂದಾದರು, ಸುಸ್ತಾದರು. ಕಡೆಗೆ ಸಾಹಸಪಟ್ಟು ಉಡ ಹಿಡಿದು ತಂದ್ರು. ಆಗ ಜುಂಜಪ್ಪ ಅದನ್ನು ತಗೊಂಡು ಒಂದು ಸುತ್ತು ತಿರುವಿದ ಕಾವಲುಗಾರರಿಗೆ ದೊಡ್ಡುದು ಪೆಟ್ಟಾಗಿ ಬಿಡ್ತು. ಹೆದರಿಕೊಂಡು ಓಡೋದ ಕಾವಲುಗಾರರು ದೊರೆಗೆ ದೂರು ಕೊಟ್ಟರು. ದೊರೆ ಈ ಗೊಲ್ಲರ ಅಜ್ಜನ ಕತೆ ಕೇಳಿ ಹಲ್ಲು ಕಡಿದು ಸುಮ್ಮನಾದನು.

ಹಿಂಗೆ ಒಂದು ಸ್ವಲ್ಪ ದಿನ ಕಳೆಯಿತು. ಹಿರಿಯೂರು ಪೇಟೆಗೆ ಮುತ್ತು ರತ್ನದ ಯಾಪಾರ ಮಾಡಾಕೆ ಕಂಬೇರು ಹೋಗ್ತಾ ಇದ್ರಲ್ಲ, ಅವುರಿಗೆ ಜುಂಜಪ್ಪನ ದನಗಳು ಹುಲ್ಲು ನೀರಿಗೆ ಚೇಳೂರು ದೊರೆ ರಂಗಣ್ಣನ ಕಾವಲಾಗೆ ಇರೋದು ತಿಳಿಯಿತು. ಏನಾದರೂ ಮಾಡಿ ಅವರನ್ನ ನಾಶ ಮಾಡಿ, ಜುಂಜಪ್ಪನ ಕೊಲ್ಲಾಕೆ ಮಾಡಬಾರದ ಪಾಡು ಮಾಡಿದರು.

ಒಂದು ದಿನ ಕಂಬೇರಗೊಲ್ಲರು ಅಣ್ಣ ತಮ್ಮನಂತ ಏಳು ಜನರೂ ಕೂಡಿಕೊಂಡು, ಚೇಳೂರು ದೊರೆ ನೋಡಲು ಬಂದರು. ದೊರೆ ರಂಗಣ್ಣ ಇವರಿಗೆ ಗೌರವ ಮಾಡಿದ. ಬಂದಂಥ ಕಾರಣ ಕೇಳಿದ. ಆಗ 'ಜುಂಜಪ್ಪ ನಮ್ಮ ಅಕ್ಕನ ಮಗ. ಅವುನ ದನಗಳೆಲ್ಲಾ ನಮ್ಮವು. ಅವನ ತಾವ ಇರೋ ಬಸವ ನಮ್ಮದು. ಹಸುಗಳಿಗೆ ಒಂದೋರಿ ಬೇಕು ಅಂದ, ಕೊಟ್ಟಿದ್ವಿ. ಈಗ ಅದು ನಮ್ಮದು ಅಂತಾನೆ. ಏನಾರ ಮಾಡಿ ಆ ಬಸವ ತಾವು ವಶಪಡಿಸಿಕೊಳ್ಳಬೇಕು. ಅದರ ಖರ್ಚು ನಾವು ಕೊಡುತೀವಿ' ಅಂದ್ರು. ಆದರೂ ರಂಗಣ್ಣ ಜುಂಜಪ್ಪನ ಸಮಾಚಾರ ಕೇಳಿ ತಿಳಿದಿದ್ದ. ಅಳಿಮನಸ್ಸಿನಿಂದಲೇ 'ಆಯಿತು. ಸದ್ಯ ನನ್ನ ಹುಲ್ಲುಗಾವಲಿನಿಂದ ಅವುನ ಓಡಿಸಿ, ನನ್ನ ದನಿಗೆ ಹುಲ್ಲು ಮಾಡಿರೆ ಸಾಕಪ್ಪ' ಅಂದನು. ಕಂಬೇರಿಗೆ ವೀಳ್ಯ ಕೊಟ್ಟು ಉಪಚಾರ ಮಾಡಿ ಕಳಿಸಿಕೊಟ್ಟ, ಚೇಳೂರು ದೊರೆ ರಂಗಪ್ಪನಾಯ್ಕ.

## ಚೇಳೂರು ರಂಗಣ್ಣ-ಜುಂಜಪ್ಪನ ಭೇಟಿ

ಹುಲ್ಲುಗಾವಲಿನ ಕಾವಲುಗಾರರು ಜುಂಜಪ್ಪನ ಶಕ್ತಿ, ಸಾಮರ್ಥ್ಯ ತಿಳಿಸಿದರು. ನಾಯ್ಕ ಜುಂಜಪ್ಪನ ತಕೆ ಬಂದ. ಈ ಸಂಗತಿ ಮದಲೇ ದಿವ್ಯದೃಷ್ಟಿಯಿಂದ ಜುಂಜಪ್ಪನಿಗೆ ತಿಳಿದುಹೋಯ್ತು. ಬಸವನಿಗೆ ಹೇಳಿದ 'ದಾರಿಗೆ ಅಡ್ಡವಾಗಿ ಇರು' ಅಂಬ್ತಾ. ಬಸವ ಬಡಮ್ಯೆಲ ರಂಗಣ್ಣ ಬರೋ ದಾರಿಗೆ ಅಡ್ಡಲಾಗಿ ನಿಂತುಕೊಂಡುಬಿಟ್ಟಿತು. ರಂಗಣ್ಣ ನೋಡ್ತಾನೆ, ಒಳ್ಳೆ ಸಿದ್ದರಬೆಟ್ಟ ನಿಂತಂಗೆ ನಿಂತಿತ್ತು ದಾರಿಗೆ ಅಡ್ಡಲಾಗಿ. ಇಂಥ ಬಸವನ ಅವುನ ಜೀವಮಾನದಲ್ಲಿ ಕಂಡಿದ್ದೇ ಇಲ್ಲ ಅಂದುಕೊಂಡು ಮನಸ್ಸಿನಲ್ಲಿ ಯೋಚನೆ ಮಾಡಿದ. ಉಪಾಯವಾಗಿ ಈ ಹೋರಿ ವಶಪಡಿಸಿಕೋಬೇಕು, ಇವನು ಸಾಮಾನ್ಯ ಗೊಲ್ಲ ಅಲ್ಲ ಅಂದುಕೊಂಡು, ಬಂದವನೇ ಹಗೆತನ ಬಿಟ್ಟು ಜುಂಜಪ್ಪನಿಗೆ ಶರಣಾರ್ಥಿ ಮಾಡಿಬಿಟ್ಟ. ಜುಂಜಪ್ಪನೂ ಶರಣು ಶರಣು ಅಂದ. ಜುಂಜಪ್ಪನೇ ಹೇಳಿದ 'ನಿಮ್ಮ ಹುಲ್ಲುಗಾವಲಲ್ಲಿ ದನ ಮೇಯ್ದು. ಮೂಗು ದನ ಗೊತ್ತಾಗಲಿಲ್ಲ. ಎಲ್ಲಿಯೂ ಹುಲ್ಲು ನೀರು ಇಲ್ಲ. ತಪ್ಪು ನಮ್ಮದೇ, ತಪ್ಪು ದಂಡ ಕಟ್ಟುತೀವಿ' ಅಂದ. ಮರ್ಮಗಾರ ರಂಗಪ್ಪ ಹೇಳುತಾನೆ 'ನಿನ್ನಿಂದ ತಪ್ಪು ಆಗಿಲ್ಲ. ನಾನು ರಾಜನಾದರೂ ಇಂಥ ಹೋರಿ ಕಟ್ಟಕೆ ಆಗಿಲ್ಲ. ಈ ಹೋರಿ ಕೊಟ್ಟು ಬಿಡು, ನಿನ್ನ ಹೆಸರೇಳಿಕೊಂಡು ರಾಜ್ಯಭಾರ ಮಾಡುತೀನಿ' ಅಂಬ್ತಾ ದೊರೆ ಜುಂಜಪ್ಪನಿಗೆ ಕೇಳಿದ. ಜುಂಜಪ್ಪ 'ಬಿಲ್‌ಕುಲ್ ಕೊಡಾಕಿಲ್ಲ' ಅಂದ. ಕೊಡು ಅಂತ ರಾಜ, ಇಲ್ಲ ಅಂತ ಜುಂಜಪ್ಪ. ಶ್ಯಾನೆ ಹೊತ್ತು ರಂಪಾಟ ನಡೆಯಿತು. ಕೊನೆಗೆ ಜುಂಜಪ್ಪ ಅಲ್ಲೇ ಹರಿದಾಡುತ್ತಿದ್ದ ಉಡಾ ತಕ್ಕೊಂಡು ಒಂದು ಹೊಡೆದುಬಿಟ್ಟ. ಆ ಉಡ ದೊರೆ ರಂಗಣ್ಣನನ್ನು ಸುತ್ತುವರಿದು ಬಾಲದಿಂದ ನಾಲ್ಕು ಏಟು ಬಿಡ್ತು. ಯಾವಾಗ ನಾಲ್ಕು ಏಟು ಬಲವಾಗಿ ಬಿತ್ತೋ ಸತ್ತೆನೋ ಕೆಟ್ಟೆನೋ ಅಂಬ್ತಾ ಓಟ ಕಿತ್ತ ರಂಗಣ್ಣ. ಅವುನ ತಂಟೆಗೆ ಹೋಗಬಾರದಪ್ಪ ಅಂಬ್ತಾ ಯೋಚನೆ ಮಾಡುತಾನೆ ಚೇಳೂರು ದೊರೆ ರಂಗಣ್ಣ. ಜುಂಜಪ್ಪ ತಮ್ಮಗಳನ್ನು ಕರೆದು ಹೇಳುತಾನೆ 'ತಮ್ಮಗಳಿರಾ ಕಂಡೆ ಅಂದಿರಾ, ಕಾಣೆ ಅಂದಿರಾ? ನಮ್ಮ ಮಾವುಗಳು ನಮ್ಮ ಮೇಲೆ ಕೆಕ್ಕರಿಸಿಕೊಂಡು ಇಲ್ಲದ ಕಾಟ ಕೊಡಾಕೆ ನೋಡುತ್ತಿದ್ದಾರೆ. ಈಗ ದನಗಳ ಮೇಲೂ ಅವರು ಕಣ್ಣು ಬಿದ್ದಿದೆ. ಹುಷಾರಾಗಿರಬೇಕು' ಅಂತಾ ಹೇಳಿಬಿಟ್ಟ ಸ್ವಾಮಿ ಜುಂಜಪ್ಪನು.

ಚೇಳೂರು ರಂಗಣ್ಣ ಜುಂಜಪ್ಪನಿಂದ ಅವಮಾನ ಮಾಡಿಸಿಕೊಂಡು ಬಂದ, ಊಡಿನ ಏಟು ತಿಂದ. ಕಂಬೇರು ಈ ವಿಷಯ ತಿಳುಕೊಂಡರು. ಏನಾದರೂ ಸರಿಯೆ ಜುಂಜಪ್ಪನಿಗೆ ಮೋಸ ಮಾಡಲೇಬೇಕು. ಅವುನ ಬಡಮೈಲನ ಅಪಹರಿಸಬೇಕೆಂದು ಪ್ಲಾನ್ ಮಾಡಿರು. ಅದರಂತೆ ಸೇಳೂರು ರಂಗಣ್ಣನೊಂದಿಗೆ ಮಾತಾಡಿದರು. ಸರಿ ಒಂದಷ್ಟು ದಿನ ಬಿಟ್ಟುಬಿಟ್ಟು ಆಮೇಲೆ ಏನು ಮಾಡಿರಪ್ಪ ಈ ಕಂಬೇರಂದ್ರೆ ಏಳು ಜನ ಮಾವುಗಳ ಒಳಗೆ ಮೂವರು ಮಾವುಗಳು ಅಳುತಾ ಜುಂಜಪ್ಪನ ದನಗಳ ಹತ್ತಿರಕೆ ಹೋದರು. ಜುಂಜಪ್ಪನಿಗೆ ಇವರ ನಾಟ್ಕಾ ಎಲ್ಲ ತಿಳಿದಿತ್ತು. ಆದರೂ ಸೋದರಮಾವಂದಿರು ತಾಯಿ ಇದ್ದಂಗೆ. ತಾಯಿ ಕಣ್ಣೀರು ಹಾಕಿರು ಒಂದೇ, ಸೋದರ ಮಾವುಗಳು ಕಣ್ಣೀರು ಹಾಕಿರು ಒಂದೇ ಅಂದುಬಿಟ್ಟು 'ಯಾಕೆ ಮಾವುಗಳೆ ಕಣ್ಣೀರು? ಏನು ಎತ್ತ?' ಅಂಬ್ತಾ ಮಾರಣ್ಣ, ಮೈಲಣ್ಣ ವಿಚಾರಿಸಿಕೊಂಡರು. ಬಿಕ್ಕ ಬಿಕ್ಕಳಿಸಿಕೊಂಡು ಅಳ್ತಾ ಇದ್ದ ಕಂಬೇರು ಆಮೇಲೆ ಮಕ್ಕಳ ತಬ್ಬಿಕೊಂಡು ಬಂಗ ಬಡತನದ ಬಗ್ಗೆ ಹೇಳಿಕೊಂಡರು. ಹಿಂದೆ ಹೊಡೆದಿದ್ರಲ್ಲ ಮಾರಣ್ಣ-ಮೈಲಣ್ಣನ ಬಡ ಕರುವಿನ ಮಾತಿಗೆ, ಅದಕ್ಕೆ ಮರುಗಿದರು. 'ನಾವು ಪಾಪಿಗಳು, ಆವೊತ್ತು ಕೆಟ್ಟ ಕಾಲ. ಭಗವಂತ ಕ್ರೂರನಾಗಿ ಇಷ್ಟೆಲ್ಲ ಮಾಡಬೇಕಾಯಿತು ಶಿವನೆ' ಅಂಬ್ತಾ ತಪ್ಪು ಒಪ್ಪಿಕೊಂಡರಂಗೆ ಮಾತಾಡಿ ಬಿಡುತು ಬಿಡುತು ಅಂತ ಅಂದುಕೊಂಡರು. ಮಾರಣ್ಣ ಮೈಲಣ್ಣ ಮಾವುಗಳ ಸಮಾಧಾನ ಮಾಡಿದ ಮೇಲೆ, ಯೋಗಕ್ಷೇಮ ವಿಚಾರಿಸಿದರು. ಊರ ಕಡೆ ವರ್ತಮಾನ ತಿಳಿದುಕೊಂಡರು. ಆಮೇಲೆ ಬಂದ ಕಾರಣ ಕೇಳಿದರು.

ಸರಿ ಯಾವಾಗ ಈ ಹುಡುಗರು ಸಮಾಚಾರ ಕೇಳಿರೋ ಅವುರಿಗೆ ಜೀವ ಬಂದಂಗೆ ಆತು. ನಮ್ಮ ತಂಗಿ ಮಕ್ಕಳು ಸಮಾಧಾನ ಆದರು. ನಮ್ಮಗಳ ಮೇಲೆ ಕ್ವಾಪ ಇಲ್ಲ ಅಂದುಬಿಟ್ಟು ಮಾತಿಗೆ ಸುರು ಮಾಡಿದರು. 'ನಾವು ಚೇಳೂರ ಪಾಳ್ಯೆಯಗಾರರ ಗೆಳೆಕಾರರು. ಅಪಾರ ವರ್ಷದಿಂದ ಮುತ್ತು ರತ್ನದ ವ್ಯಾಪಾರನ ಸಿರಾ, ಹಿರಿಯೂರು ಪ್ಯಾಟೆಯಾಗೆ ಒಟ್ಟಿಗೆ ಮಾಡ್ತಾ ಗೆಳೆಕಾರರಾಗಿದ್ದೀವಿ. ಈಗ ನಮ್ಮನ ಕರಿಸಿಕೊಂಡು ಅವುನ ಅರಮನೆಗೆ ಉಪಚಾರ ಮಾಡಿದ ನಾಯ್ಕ ಮಗ. ಆಮೇಲೆ ನಮ್ಮ ದನ ಅವುನ ಕಾವಲಾಗೆ ಮೇಯ್ತಿದ್ರೋದು, ಅವುಗಳಲ್ಲಿ ಒಂದು ಬಸವ ಇರೋದು ಹೇಳಿದ. ಅವುನ್ದು ಆಸೆ ಏನಪ್ಪ ಅಂದ್ರೆ ಚೇಳೂರು ಊರೊಳಗೆ ನಮ್ಮ ಬಸವ ಬಡಮೈಲ ಮೆರವಣಿಗೆ ಹೊರಡಬೇಕಂತೆ. ಅದನ್ನು ನೋಡಿ ಜನವಾದಿ ಜನವೆಲ್ಲಾ ಆಸೆಯಿಂದ ಹಸುಗಳನ್ನು, ಹೋರಿನ ಸಾಕಾದು ಕಲಿಯಬೇಕಂತೆ. ಈ ಸುತ್ತಿಗೆ ಇಂಥ ಬಸವ ಇಲ್ಲವಂತೆ. ಅದಕ್ಕೋಸ್ಕರ ಅದರ ಮೆರವಣಿಗೆ ಮಾಡಬೇಕೆಂದು ಕೇಳಿಕೊಂಡ. ಆಗ ನಾವು ಜುಂಜಪ್ಪ ಬೇರೆ ಅಲ್ಲ, ನಾವು ಬೇರೆ ಅಲ್ಲ. ಅವುನು ನಮ್ಮ ಖಾಸಾ ತಂಗಿ ಮಗ. ದನಗಳು ನಾವು ಅವುನಿಗೆ ಬೆಳ್ಳುಳ್ಳಿ ಕೊಟ್ಟಿದ್ದೆವು.

ನಮ್ಮ ಚಿಕ್ಕತಂಗಿ ಚಿನ್ನಮ್ಮನಿಗೆ ಎಣಿಸಿದಂಗೆ ಏಳು ಹಸುವಿನ ಕರ ಕೊಟ್ಟಿದ್ದೆವು. ಅದರಾಗೆ ಒಡೆದುಕೊಂಡಿರೋ ದನಗಳಿವು ಅಂಬ್ತಾ ದೊರೆಗೆ ಹೇಳಿದೆವು. ಅದಕ್ಕೆ ದೊರೆ ಮೆಚ್ಚಿ ಇಂಥಾ ಬಸವನ ನಾನು ಜೀವಮಾನದಲ್ಲಿ ನೋಡಲೇ ಇಲ್ಲ. ಅದನ್ನ ನನ್ನ ರಾಜ್ಯದಲ್ಲಿ ಮೆರೆಸಬೇಕೆಂದು ಆ ಬಸವನ ಚೇಳೂರು ಪೇಟೆಯಾಗೆ ಮೆರವಣಿಗೆ ಮಾಡಿಸಬೇಕೆಂದು ಆಸೆ ಅಂತ ಹೇಳಿಕೊಂಡ ದೊರೆ. ನಾವು ನಮ್ಮ ತಂಗಿ ಮಗನಿಗೆ ಹೇಳಿ ಆ ಬಸವನನ್ನು ಮೆರವಣಿಗೆ ಮಾಡಿಸಲು ಒಪ್ಪಿಸುತೇವೆಂದು ಮಾತುಕೊಟ್ಟು ಬಂದುಬಿಟ್ಟೆದೀವಿ. ಏನು ಮಾಡಾದು?' ಅಂತಾ ಪೇಚಾಡಿಕೊಂಡರು.

ಮಾವುಗಳು ಹೇಳಿದ ಮಾತನ್ನು ಸ್ವಾಮಿ ಜುಂಜಪ್ಪ ಕೇಳಿಸಿಕೊಂಡ. ಅವನಿಗೆ ಎಲ್ಲಾ ಗೊತ್ತು. ಆದರೂ ತಾಯಿ ಮುಂದೆ ಹುಟ್ಟಿದ ಮಕ್ಕಳು. ಬಾಮೈದುನರ ಹತ್ತಿರ ಬದ್ದು ಭಿಕ್ಷೆ ಕೇಳಿದಂಗೆ ಕೇಳುತ್ತಿದ್ದಾರೆ. ಈಗ ಇಲ್ಲ ಅನ್ನಬಾರದು. ಇದು ತಾಯಿ ಋಣ ಅಂಬ್ತಾ ಸ್ವಾಮಿ ಜುಂಜಪ್ಪ ತೀರ್ಮಾನ ಮಾಡಿಬಿಟ್ಟ. ಅವುನ ತಮ್ಮಗಳ ಕರೆದು ಇದು ಕಂಬೇರಗೊಲ್ಲರು ಮಾಡುತ್ತಿರುವ ನಾಟಕ. ಆದರೂ ಅವುರದೇನೂ ನಡೆಯೋದಿಲ್ಲದಂಗೆ ನಾನು ಮಾಡುತೀನಿ ಅಂಬ್ತಾ ಬಸವ್ನ ಚೇಳೂರು ಪೇಟೆಗೆ ಮೆರವಣಿಗೆ ಮಾಡಿಸಲು ಒಪ್ಪಿಕೊಂಡ.

ಚೇಳೂರು ಊರೊಳಿಕೆ ಹೋಗಬೇಕಾದ್ರೆ ಸುಮುಸುಮನೆ ಆಗಲ್ಲ. ಮೊದಲು ಊರೊಳಗೆ ಯಾವುದೇ ಸೂತಕ, ಅಂಟು ಮುಟ್ಟು ಇರಬಾರದು. ಹೆರಿಗೆ ಸೂತಕ ಇರಬಾರದು. ಹೆಣ್ಣಾದರೂ ಹೊರಗೆ ಹೋಗಿರಬೇಕು. ಸಾವಿನ ಸೂತಕ, ಹೆತ್ತ ಸೂತಕ ಬಸವನಿಗೆ ಆಗೋದಿಲ್ಲ. ಅದರಂತೆ ಮೆರವಣಿಗೆ ಕೋಟೆ ಬಾಗಿಲಾಗೆ ಆಗೋದಿಲ್ಲ. ಊರು ಬಾಗಿಲು ಬಸವಣ್ಣನ ಹಿಡಿಸೋದಿಲ್ಲ. ಅದರ ಬದಲಿಗೆ ಪೇಟೆ ಬೀದಿಗೆ ಹೊರಟು ಕೋಟೆ ಬಾಗಿಲು ಬದಿಗೆ ಶೆಟ್ರು ಬೀದಿ ಆಸಿಂದ ಹೊಸ ಓಣಿ ನಿರ್ಮಾಣ ಮಾಡಬೇಕು. ಚೇಳೂರ ಊರ ಬಾಗ್ಲಿಂದ ಮಗ್ಗದರ ಕೇರಿಗಂಟ ಒಂದೇ ಸಮನೆ ದಾರಿ ಇರಬೇಕು. ದೇವಸ್ಥಾನಗಳ ಮುಂದೆ ಜುಂಜಪ್ಪನ ಬಸವ ನಿಂತಾಗ ಬಸವನಿಗೆ ದೇವಸ್ಥಾನದಿಂದ ಮಂಗಳಾರತಿ ಆಗಬೇಕು. ಇದರಲ್ಲಿ ಭಿನ್ನ ಭೇದ ಇರಬಾರದು. ಚೇಳೂರು ವೆಂಕಟರಮಣನ ಗುಡಿಯಿಂದ ಹೊರಟ ಬಸವ, ಹೊನ್ನಾದೇವಿ ಗುಡಿ, ಬನಶಂಕರಮ್ಮನ ಗುಡಿ, ಮೈಲಾರಲಿಂಗಪ್ಪನ ದೇವಸ್ಥಾನ ಅಲ್ಲಿಂದ ತಿರುಗಿ ಗೌರಮ್ಮನ ಗುಡಿ ಹಾದು ಊರು ಮುಂದೆ ಇರತಕ್ಕ ಮಾರಮ್ಮನ ಗದ್ದಿಗೆ ತನಕ ಮೆರವಣಿಗೆ ಬರಬೇಕು. ಮೆರವಣಿಗೆ ಬರೋ ಪೂರಾ ಜಾಗ ಹೂ ತೋರಣ, ರಂಗೋಲಿಗಳಿಂದ ಅಲಂಕಾರ ಮಾಡಿ ಮಡಿವಾಳಣ್ಣನಿಂದ ಮಡಿಬಟ್ಟೆ ಹಾಸಬೇಕು, ಪತ್ತು ಹಿಡೀಬೇಕು. ಚಲವಾದಿಗಳಿಂದ ವಾದ್ಯ ನುಡಿಸಬೇಕು. ಮಣೆಗಾರರು ತಮಟೆ ಗಿಮಟೆ

ಬಡೀಬಾರದು. ಅದರ ಸದ್ದು ನಮ್ಮ ಬಡಮ್ಮೈಲನಿಗೆ ಆಗಲ್ಲ ಅಂತೆಲ್ಲಾ ಜುಂಜಪ್ಪ ಕಂಬೇರ ಗೊಲ್ಲರಿಗೆ ತಿಳಿಸಿ 'ಅಂಗಿದ್ದರೆ ಮಾತ್ರ ಜುಂಜಪ್ಪನ ಬಸವ ಬಡಮ್ಮೈಲ ಚೇಳೂರು ಪೇಟೆಗೆ ಬರುತ್ತೆ. ಇಲ್ಲದಿದ್ದರೆ ಬರೋದಿಲ್ಲ' ಅಂದನು. ಕಂಬೇರಿಗೆ ಬಲು ಸಂತೋಷ ಆತು. ಜುಂಜಪ್ಪ ಒಪ್ಪೋದಿಲ್ಲ ಅಂತ ಅಳುಕುತ್ತಲೇ ಬಂದಿದ್ದ ಸೋದರಮಾವುಗಳು ನೇರವಾಗಿ ಚೇಳೂರು ಪಾಳ್ಯಗಾರ ರಂಗಪ್ಪನಾಯ್ಕನ ಹತ್ತಿರ ಹೋದರು. 'ನಾವು ಹೇಳಿದ ಕೆಲಸ ಆತು. ಹೋರಿ ತಂದು ಚೇಳೂರು ಪೇಟೆಗೆ ನಿಲ್ಲಿಸುವ ಜವಾಬ್ದಾರಿ ನಮ್ಮದು. ಅದನ್ನು ವಶಪಡಿಸಿಕೊಂಡು ಕೊಲ್ಲದು, ಬೇಟೆಯಾಡಾದು ನಿನ್ನ ಜವಾಬ್ದಾರಿ' ಅಂದ್ರು. ದೊರೆ ಒಪ್ಪಿಕೊಂಡ.

ನಾಳೆ ಸೋಮವಾರ. ಜುಂಜಪ್ಪನ ಬಸವ ಬಡಮ್ಮೈಲ ನಾಳೆ ಹನ್ನೆರಡು ಗಂಟೆಗೆ ವ್ಯಾಳೆದೊಳಗೆ ಚೇಳೂರು ಪೇಟೆಗೆ ಹೊಡೆತರಲು ಕಂಬೇರ ಗೊಲ್ಲರು ಸಿದ್ಧವಾದರು. ಜುಂಜಪ್ಪ ಬಡಮ್ಮೈಲನ ಕರೆದು ಹೇಳಿದ 'ಇದು ನಮ್ಮ ಸತ್ವಪರೀಕ್ಷೆ ಕಾಲ. ಇಲ್ಲ ಅಂದುಬಿಟ್ಟರೆ ಈ ನಾಯ್ಕಮಕ್ಕಳು ಸದರ ಮಾಡಿಕೋತಾರೆ. ದನಗಳು ಮಸ್ತಾಗಿ ಮೇಯುತಾವೆ. ಮೇವು ದಕ್ಕದಂಗೆ ಆಗುತ್ತೆ. ಆದ್ದರಿಂದ ಮಾವುಗಳ ಮಾತು ಕೇಳಿದಂಗೆ ಆಗುತ್ತೆ, ಅವುರಿಗೆ ಸರಿಯಾದ ಪಾಠ ಕಲಿಸಿದಂಗೂ ಆಗುತ್ತೆ. ಈಗ ನೀನು ಏನು ಮಾಡಬೇಕೆಂದರೆ ಚೇಳೂರು ಕೋಟೆ ಬಾಗಿಲಿಗೆ ನೀನು ಹೋಗುತಿದ್ದಂಗೆ ನಿನ್ನ ಹಿಡಿಯಾಕೆ ಬರುತಾರೆ. ಡಂಗೂರ ಹಾಕಿ ಊರಾಗಿರುವ ಬಾಕು, ಬಿಲ್ಲು, ಕತ್ತಿ, ಭರ್ಜಿ ಹೊತ್ತುಕೊಂಡು ಬಂದು ನಿನ್ನ ಇರಿಯುವುದಕ್ಕೆ ಬರುತಾರೆ. ಆಗ ಮೊದಲು ಸುಮ್ಮನಿರು. ಇನ್ನೇನು ನಿನ್ನ ಮೇಲೆ ಬೀಳಬೇಕು ಅಂಬ್ತಾ ಕಾಲಕ್ಕೆ ಕಾಲ ಕೆರೆದು ಉಡುರಕೆ ಹೊಡೆದುಬಿಡು. ಇದರಿಂದ ಜನವಾದಿ ಜನವೆಲ್ಲ ಮೇಲಕ್ಕೆ ಎಗರಿ ಕೆಳಕೆ ಬೀಳುತಾರೆ. ಊರೊಳಗಿನ ಬಸಿರಾರು ಹೆದರಿಕೊಂಡು ಮೈ‌ಇಳಿದು ಬಿಡುತಾರೆ. ಮನೆಯೊಳಗಿರೋ ಗಂಗಳ, ಚೆಂಬು, ಕಂಚು - ಹಿತ್ತಾಳೆ ಎಗರಿ ಬೀಳುತಾವೆ. ಉಡ್ರಿಕೆ ಹಾಕಿ ಕೋಟೆಗೆ ಹೋಗಿ ಕಾಲು ಕೆರೆದು ಕೋಟೆ ಬಾಗಿಲಾಗಾಸಿ ನುಗ್ಗು. ಆದರೆ ಕೋಟೆ ಬಾಗಿಲು ನಿನ್ನ ರಭಸಕ್ಕೆ ಹಿಡಿಸಲಾರದೆ ಮುರಿದು ತಳಕೆಳಕಾಗುತ್ತೆ. ಇದು ಬಡಮ್ಮೈಲನ ಬಾಗಿಲು ಅಂಬ್ತಾ ಸೂರ್ಯ-ಚಂದ್ರ ಇರೋವರೆಗೂ ಉಳಿಯುತ್ತೆ. ಅಂಗೇ ಮಾಡು' ಅಂಬ್ತಾ ಜುಂಜಪ್ಪ ಹೇಳಿ ಮೂಗುಬಸವ ಬಡಮ್ಮೈಲನ ಮೈ ಸವರಿ ಮೋಸಗಾರರು ಅವುರ ಸೋದರ ಮಾವುಗಳ ಕೈಲಿ ಹೊಡೆದು ಕಳಿಸಿದ ಜುಂಜಪ್ಪ ಬಸವನ್ನ.

# ಚೇಳೂರು ಬೀದಿಗೆ ಬಡಮೈಲ

ಜುಂಜಪ್ಪನ ಬಸವ ಚೇಳೂರು ಕೋಟೆ ಮುಂದೆ ಬಂತು. ಏಳು ಸುತ್ತಿನ ಕೋಟೆ ದಾಟಿತು. ಊರು ಬಾಗಿಲು ಹಿಡಿಸಲಿಲ್ಲ. ಅಲ್ಲೇ ಪಕ್ಕದಾಗೆ ಹಾದು ಊರಾಡಿಕೊಂಡು ಚೇಳೂರು ಪಾಳೇಗಾರ ರಂಗಪ್ಪನ ಮನೆಗೆ ಬಂತು. ಸಿದ್ದರಬೆಟ್ಟದಂತ ಹೋರಿ ಸಣ್ಣದಾಗಿ ಒಳಗೆ ಸೇರಿತು. ಮೊದಲು ರಂಗಣ್ಣ, ಅವನ ಹೆಂಡತೇರು ಭಕ್ತಿಯಿಂದಲೇ ಬಸವನ ಪೂಜೆ ಮಾಡಿದರು. ನಂತರ ಬಸವ ಈಚೆಗೆ ಬರುತಾಲೂ ಅವುನ ದರ್ಶನಕ್ಕೆ ಚೇಳೂರು ಪೇಟೆಯ ಜನವಾದಿ ಜನವೆಲ್ಲ ಸೇರಿಕೊಂಡರು. ಎಲ್ಲರೂ ಬೆಟ್ಟದಂತ ಬಸವನ ನೋಡಿ ಗಾಬರಿಯಾದರು. ಪ್ರತಿಯೊಬ್ಬರು ಬಸವಣ್ಣನ ಪಾದಪೂಜೆ ಮಾಡಿದರು. ಬಸವ ಅಂದರೆ ಬಸವ. ಒಬ್ಬರಿಗೆ ಹಾಯುವುದಿಲ್ಲ, ಒದೆಯುವುದಿಲ್ಲ, ಬಾಲ ಆಡಿಸೋಲ್ಲ, ಕಾಲೆತ್ತಲ್ಲ. ಇದನ್ನು ಕಂಡು ಜನವಾದಿ ಜನವೆಲ್ಲಾ ಬಾಯಿ ಮೇಲೆ ಕೈ ಇಟ್ಟುಕೊಂಡರು.

ಇತ್ತ ಬಸವನ ಪೂಜೆ ಮಾಡುವಾಗಲೇ ನನ್ನ ಮಕ್ಕಳು ಕಂಬೇರು ಕಕ್ಕುಲಾತಿ ಬುದ್ದಿ ತೋರಿಸಿದರು. ನಾಯ್ಕನಿಗೆ ಸೂಚನೆ ಕೊಟ್ಟರು. ಇದೊಳ್ಳೆ ಟೈಮು. ಬಸವನ ಇರಿದುಬಿಡಿ. ಭರ್ಜಿ, ಬಿಲ್ಲು, ಗುರಾಣಿ, ಕತ್ತಿ, ಕಠಾರಿ ತನ್ನಿ ಅಂತ ಹೇಳಿದರು. ಪಾಪ ಪಾಳೆಯಗಾರ ರಂಗಪ್ಪ ಈ ಕಂಬೇರ ಮಾತು ಕೇಳಿ ಕೆಟ್ಟ. ಮಾಡಬಾರದ ಕೆಲಸಕ್ಕೆ ಕೈಹಾಕಿ ಅಲ್ಲ ಅನ್ನಿಸಿಕೊಂಡು ಬಿಟ್ಟ. ಯಾವಾಗ ಕಂಬೇರು ಬಸವನ ಕೊಲ್ಲೋಕೆ ಹೇಳಿದರೋ, ರಂಗಣ್ಣ ಹುಕುಂ ಅಂದುಬಿಟ್ಟ. ಎಲ್ಲರೂ ಕತ್ತಿ, ಗುರಾಣಿ, ಕಠಾರಿ, ಚೂರಿ ತಗೊಂಡು ಓಡೋಡಿ ಬಂದ್ರು. ಬಸವ ಸುಮ್ಮನಿದ್ದು ಹತ್ರಕ್ಕೆ ಬರುತಾಲೇ ಉಡ್ರಿಕೆ ಹೊಡೆದೇಟಿಗೆ ಭೂಮಿನೇ ಅದುರಿಬಿಡ್ತು. ಆಯುಧ ಹಿಡಿದೋರೆಲ್ಲಾ ಮುಗ್ಗರಿಸಿ ಬಿದ್ರು. ಬಸವ ಕೋಟೆ ಬಾಗಿಲು ಒದ್ದು ತಲೆಕೆಳಗು ಮಾಡಿ ಅಲ್ಲಿಂದ ಹಾರಿ ಚೇಳೂರು ಕೇರೆ ಮುಂಭಾಗದ ರಂಗಣ್ಣನ ಹುಲ್ಲುಗಾವಲಿಗೆ ಸೇರಿಕೊಂಡುಬಿಡ್ತು. ಸ್ವಾಮಿ ಜುಂಜಪ್ಪ ಇದನ್ನ ನೋಡಿ ನಗುತಾ ಅವುನೆ. ಆಮೇಲೆ ಬಸವನ ಚೇಳೂರು ಕೆರೆ ಒಳಗೆ ಸ್ನಾನನೆ ಮಾಡಿಸಿ ದನಿನ ಗೂಡೊಳಗೆ ಕರಕೊಂಡರು.

ಯಾವಾಗ ಬಡಮೈಲ ರಂಗಣ್ಣನ ಕೈಯಿಂದ ತಪ್ಪಿಸಿಕೊಂಡು ಬಂತೋ ಕಂಬೇರಿಗೆ ನಡುಕ ಶುರುವಾಯ್ತು. ರಂಗಣ್ಣನೂ ಗೊಲ್ಲರನ್ನು ಬಾಯಿಗೆ ಬಂದಂಗೆ ಬೈದ. ಆಮೇಲೆ ಗೊಲ್ಲ ಮಾಯವೋ ಎಲ್ಲ ಮಾಯವೋ ಹೋಗರಯ್ಯ ಸಾಕು ನಿಮ್ಮ ಸಾವಾಸ ಅಂದು ಮುಖ ಇಷ್ಟು ಮಾಡಿಕೊಂಡ ಚೇಳೂರು ರಂಗಣ್ಣ. ಆಗ ಕಂಬೇರು ಮೋಸಗಾರರು ಇನ್ನೊಂದು ಆಟ ಆಡಿದರು. 'ಕೋಪ ಬೇಡ ಪಾಳೆಯಗಾರ, ನಾವು ಜುಂಜಪ್ಪನ ಬಸವನ ಹಿಡಿದು ಕೊಟ್ಟೇ ತೀರುತೀವಿ. ಚಿಂತೆ ಮಾಡಬೇಡಿ' ಅಂದುಬಿಟ್ಟು ಒಂದು ಪ್ಲಾನು ಮಾಡಿದರು. ಅದೇನೆಂದರೆ 'ನೋಡಿ ನಾಯ್ಕರೆ ಜುಂಜಪ್ಪನ ದನಿನ ಗೂಡೊಳಗೆ ಇರೋತನಕ ಈ ಬಸವನ ಮುಟ್ಟಕೆ ಆಗಲ್ಲ. ಅದರಿಂದ ಈ ಜುಂಜಪ್ಪನ ಅವುನ ಊರು ಕಳುವಾರಹಳ್ಳಿಗೆ ಸಾಗುಹಾಕಿರೆ ಸುಲಭವಾಗಿ ಈ ಬಸವನ್ನ ಹಿಡಿಕೊಂಡು ಬರಬಹುದು' ಅಂದು ಪುಸಲಾಯಿಸಿದರು. ಅದಕ್ಕೆ ಪಾಳೆಯಗಾರ ಒಪ್ಪಿಕೊಂಡನು.

ಕಂಬೇರ ಗೊಲ್ಲರು ಬಸವಗಳ ಮೇಲೆ ಕೂತುಕೊಂಡು ಗಂಟೆ ಸರ ಹಾಕಿಕೊಂಡು ಕಳುವರಹಳ್ಳಿ ಕಡೆಕೆ ಬಂದರು. ಬಂದವರು ಆಲೇಗೌಡನ ಮನೆ ದಾಟಿ, ಅವುರ ಅಕ್ಕನ ಮನೆ ಮುಂದೆ ಹಾದು ಮುಂದೆ ಹೋಗೋ ನಾಟಕ ಆಡಿರು. ಚಿನ್ನಮ್ಮ ಅರಮನೆ ಒಳಗೆ ಏಳು ಕಡೆ ಮಂತು ಹಾಕಿ ಕೆನೆಮೊಸರು ಕಡೀತಾ ಇದ್ದವಳಿಗೆ ಇದ್ದಕ್ಕಿದ್ದಂತೆ ಗಂಟೆ ಶಬ್ದ ಕೇಳಿದಂಗಾಯಿತು. ಜುಂಜಪ್ಪನ ಬಸವನೇನಾದರೂ ಬಂದಿದ್ದತ ಅಂಬ್ತಾ ತಾಯಿ ಚಿನ್ನಮ್ಮ ಈಚೆಗೆ ತಲೆಬಾಗಿಲಾಗೆ ನಿಂತು ನೋಡುತಾಳೆ, ಅವುಳ ಏಳು ಜನ ಅಣ್ಣಗಳು ಬಸವನ ಹೊಡೆಕೊಂಡು ಗಂಟೆಸರ ಕಟ್ಟಿಕೊಂಡು ಹೋಗ್ತಾ ಅವುರೆ. ತಮ್ಮ ಬೀಗರ ಮನೆಗೂ ಹೋಗದೆ, ತನ್ನ ತಂಗಿ ಮನೆಗೂ ಹೋಗದೆ ಹೋಗತರಲ್ಲಪ್ಪ ನನ್ನ ಅಣ್ಣಗಳು. ಅಯ್ಯೋ ಶಿವನೆ ಅದೆಂತ ಕೇಡು ಬಂತು ಇವರಿಗೆ ಅಂತಾ ಕೆದರಿದ ತಲೆ ಕೆದರಿದಂಗೆ, ಸೆರಗು ಹೊದ್ದುಕೊಂಡು ಓಡಿಬಂದಳು. ಬಂದವಳು ರಸ್ತೆಗೆ ಅಡ್ಡ ನಿಂತು ಅಣ್ಣಗಳ ಬಸವನ ತಡೆದಳು. 'ಇದೇನರಣ್ಣಯ್ಯ ನೀವು ಮಾಡ್ತಾ ಇರೋದು? ಊರಿಗೆ ನಾನಿದ್ದಾಗಲೇ ಇರೋ ಒಬ್ಬ ತಂಗಿ ಮನೆ ಬಾಗಿಲಿಗೆ ಬಂದು ಒಳಗೆ ಬರದಂಗೆ ಹೋದರೆ ನಾನು ಈ ಭೂಮಿ ಮೇಲೆ ಇದ್ದರೇನು ಸತ್ತರೇನು? ನೀವು ಯಾಕೆ ಇಂಗೆ ಮಾಡುತೀರ? ಬನ್ನಿ ಬನ್ನಿ ಉಂಡುಕೊಂಡು ಹೋಗಿರಂತೆ' ಅಂಬ್ತಾ ತಂಗೆಯಮ್ಮ ಅಂಗಲಾಚಿದಳು. ತಂಗಿ ಇತ್ತ ಎಳೆಯಾಕೆ ಹೋರಿನ ಮುಂದೆ ಹೊಡೆಯಾಕೆ. ಕೊನೆಗೆ ದೊಡ್ಡನು ದೊಡ್ಡಚಿನ್ನ ಹೇಳಿದ 'ನೋಡು ತಂಗೆಮ್ಮ ನಿನಗೆ ಮೂವರು ಗಂಡು ಹುಡುಗರು ಹುಟ್ಟಿದವು. ಹುಟ್ಟಿದ ಲಾಗಾಯ್ತು ಕಾಡು-ಮೇಡು, ದನ-ಕರ ಅಂಬ್ತಾ ಅಲೀತಾ ಅವರೆ. ಜೀವಂತ ನಾತ ಬಡೀತಾರೆ. ನೀರು ನಿಡಿ ಕಂಡು, ಎಣ್ಣೆ-ಸೀಗೆ ನೋಡಿ ಎಷ್ಟು ದಿನ ಆತೋ. ಗೊಲ್ಲರು ಈಶ್ವರನ ಭಕ್ತರು.

ಸಿಂಗು ಹೊಡೆದು ನಾರುತಾರೆ ಅಂಬೋ ಅಪಖ್ಯಾತಿ ಬಂದೈತೆ. ಚೇಳೂರು ದೊರೆಗಳಿಗೂ ನಮಗೂ ತುಂಬಾನೇ ಸಂಬಂಧ ಬೆಳೆದೈತೆ. ಮುತ್ತು-ರತ್ನದ ವ್ಯಾಪಾರಕ್ಕೆ ಒಂದೇ ಕಡೆ ಹೋಗುತೀವಿ. ಈಗ ನಿನ್ನ ಮಕ್ಕಳು ಚೇಳೂರು ರಂಗಣ್ಣನ ಕಾವಲಾಗೆ ದನ ಮೇಯಿಸಿಕೊಂಡು ಗೂಡಾಕೆಂಡು ಇದಾರೆ. ಶೂರರು, ಪರಾಕ್ರಮಿ ಅಂಬುತಾ ನಾವೆಲ್ಲಾ ಹೇಳಿಕೊಂಡು ತಿರುಗುತೀವಿ. ನಮ್ಮ ತಂಗಿಮಕ್ಕಳು, ತಂದೆ ಇಲ್ಲದ ತಬ್ಬಲಿಗಳು ಅಂಬ್ತಾ ಏಳು ಹಸುವಿನ ಮೊಣಕಗಳನ್ನು ಕೊಟ್ಟೆವು. ಅವು ಈಗ ಭೂಮಿ ತುಂಬಾ ಬೆಳೆದುಬಿಟ್ಟವೆ. ಅವುಗಳ ನೋಡಿಕೊಂಡು ಮೇಯಿಸಿಕೊಂಡು ನಿನ್ನ ಮಕ್ಕಳು ಕಾಡುಮನುಷ್ಯರಾಗಿಬಿಟ್ಟವರೆ. ನಿನ್ನ ಹಿರೇಮಗ ಜುಂಜಪ್ಪ ಅಸಿಸೇ ಅವುನ ನೋಡಿರೆ ಹಿಟ್ಟು ಒಳಕೆ ಹೋಗಲ್ಲ. ಬಟ್ಟೆ ಮಾಸಿ ಒಂದು ಕೈ ಮಂದಕ್ಕೆ ಆಗೆವೆ. ಮಂಡೆ ಜಾಡು ಹಿಡಿದು, ನುಸಿ ಹತ್ತಿ ಹೇನು-ಕೂರೆ ಗೂಡು ಕಟ್ಟಿಕೊಂಡವೆ. ಅವುನಿಂದ ಬರೋ ನಾತ, ಮೂರು ಮೈಲಿ ದೂರಕ್ಕೆ ಬಡಿತೈತೆ. ಇಂತಾದ್ರಾಗೆ ನಾವುಗಳು ಅವರು ಜಾತಿಯವರು, ಗೊಲ್ಲರು ಅಂಬ್ತಾ ಹೇಳಾಕೆ ನಾಚಿಕೆಯಾಗುತ್ತೆ. ಅಂತಾದ್ರಾಗೆ ಈ ಮೂರು ಜನ ಹುಡುಗರು, ನಮ್ಮ ಅಕ್ಕನ ಮಕ್ಕಳು ಅಂಬ್ತಾ ಹೇಳಿಕೊಂಡು ತಿರುಗಾಡಾಕೆ ನಾಚಿಕೆ ಆಗುತ್ತೆ. ಚೇಳೂರು ದೊರೆ ಕೇಳಿರೆ ಏನು ಹೇಳಾದು? ನಾವು ಆ ಕಡೆಗೆ ಹೋಗುವಂತೆಯೇ ಇಲ್ಲ. ವ್ಯಾಪಾರಕ್ಕೆ ಹೋದಾಗಲೂ ಮುಖ ತೋರಿಸಾಕೆ ಭಯ ಆಗಿಬಿಟ್ಟೈತೆ. ಹೀಗಾದರೂ ನೀನು ಮಕ್ಕಳ ಬಗ್ಗೆ ಒಂದು ಚೂರು ಯೋಚ್ನೆ ಮಾಡದೆ ಅರಮನೆಯಂತ ಮನೆಯೊಳಗೆ ಇದ್ದೀಯ. ನೀನು ನಮ್ಮ ತಂಗಿ. ಜುಂಜಪ್ಪ, ಮಾರಣ್ಣ, ಮೈಲಣ್ಣ ನಮ್ಮ ತಂಗಿ ಮಕ್ಕಳು ಅಂಬ್ತಾ ಹೇಳಾಕೆ ನಾಚಿಕೆ ಆಗುತ್ತೆ. ಹೋಗವ್ವ ಸಾಕು. ಹುಟ್ಟಿದ್ದಕ್ಕೂ ಬೆಳೆದುದ್ದಕ್ಕೂ ಒಳ್ಳೆ ಮಕ್ಕಳನ್ನ ಹೆತ್ತೆ. ದೊಡ್ಡ ಬಹುಮಾನ ತಂದುಕೊಟ್ಟೆ. ನಾಯಿ ಹೆತ್ತು ನಡುನೀರುಗಾಕಿದಂತೆ ನೀನು ಹೆತ್ತು ಕಾಡಿಗೆ ಹಾಕಿದೆ' ಅಂಬ್ತಾ ಗೋಳೋ ಅಂಬ್ತಾ ಅತ್ತುಬಿಟ್ಟರು ಚಿನ್ನಮ್ಮನ ಅಣ್ಣಗಳು. ಚಿನ್ನಮ್ಮನಿಗೂ ಅಳು ತಡೆಯಕಾಗಲಿಲ್ಲ. ಅತ್ತುಬಿಟ್ಟಳು. 'ಅಯ್ಯೋ ಶಂಕರ, ನಾನೇನು ಅವುರ್ನ ಊರಿಗೆ ಬರಬೇಡ್ರಪ್ಪ ಅಂದಿದ್ದೇನಾ? ಮನೆಗೆ ಬರಬೇಡಿ ಅಂದಿದ್ದೇನಾ? ಯಾವ ಜನ್ಮದ ಕರ್ಮ ನನಗೆ? ಗಂಡ ಇದ್ದರೂ ಊರ ಮುಖ ನೋಡಲಿಲ್ಲ. ಪರಮೇಶ್ವರನ ವರದಿಂದ ಮಕ್ಕಳ ಫಲ ಪಡೆದೆ. ಇವೂ ಅಂಗೇ ಮಾಡುತಾವೆ. ನಾನು ಏನು ಮಾಡಲಿ? ಅವುರ ಮಾತಿಗೆ ಹೆದರಿ ನೀವು ಊರಿಗೆ ಬಂದೂ ಮನೆಗೆ ಬರಲಿಲ್ಲ ಅಂದರೆ ನಾನು ಭೂಮಿ ಮೇಲೆ ಪ್ರಾಣವರಿಯಬಹುದೋ' ಅಂದಳು. ಅದಕ್ಕೆ ಕಂಬೇರ 'ಈಗ ಮೊದಲು ಜುಂಜಪ್ಪನಿಗೆ ಊರಿಗೆ ಕರೆದು ಸ್ನಾನ ಮಾಡಿಸಿ, ಬಟ್ಟೆ ತೊಡಿಸಿ ಮನೆಗೆ ಮೂರು ದಿನ ಇರಿಸಿಕೊಂಡು ಆಮೇಲೆ ದನಿನತಾಕೆ ಕಳುಹಿಸುತೀನಿ ಅಂಬ್ತಾ ಮಾತುಕೊಟ್ಟರೆ ಮಾತ್ರ ನಾವು ಬರುತೀವಿ. ಇಲ್ಲದಿದ್ದರೆ ಸರಿಕರ ಮುಂದೆ ಮುಖ ಹೊತ್ತುಕೊಂಡು ತಿರುಗಾದ ಕೊಳಕರ ಸಂಬಂಧ ನಮಗೆ ಬೇಡವೇ ಬೇಡ'



ಅಂದರು. ಮಾರಕ್ಕ 'ಬರ್‍ರೀ ಅಣ್ಣಗಳೇ ನೀವು ಹೇಳಿದಂಗೆ ಮಾಡುದಿದ್ದರೆ ನಾನು ಕಂಬೇರ ಹೆಣ್ಣೇ ಅಲ್ಲ. ನಿಮ್ಮ ತಂಗಿ ಅಂಬ್ತಾ ಕರೀಬ್ಯಾಡರಿ' ಅಂತ ಮಾತು ಕೊಟ್ಟ ಮೇಲೆ ಏಳು ಜನ ಅಣ್ಣಗಳು ಎತ್ತು ನಿಲ್ಲಿಸಿ, ಕೊರಳು ಕಳೆದು ಹುಲ್ಲಾಕಿ ಒಳಿಕೆ ಬಂದರು. ಕೈಕಾಲು ಮುಖ ತೊಳೆದು ಉಂಬಾಕೆ ಕುಂತರು. ತಾಂಬೂಲ ಹಾಕಿಕೊಂಡು ನಾಟಕದ ಮಾತಾಡಿ ಕಂಬೇರು ಹೊರಟು ನಡೀತಿದ್ದರು.

ಸೋಮಾರ ಬಂತು. ಮಾರಣ್ಣ-ಮೈಲಣ್ಣ ಚೇಳೂರು ತಾವಿಂದ ಹಸುಗಳಿಂದ ಹಾಲು ಕರೆದು ಮೊಸರು-ಹಾಲು ತಗೊಂಡು ದಿನ ಬಿಟ್ಟು ದಿನ ಬರತಾ ಇದ್ರು. ಈಗಲೂನೂ ಬಂದ್ರು. ಅವುರನ್ನ ಒಳಿಕೆ ಬಿಟ್ಟಕಣದೆ ಸಿನ್ನಮ್ಮ ಬಾಗಿಲಲ್ಲೇ ಹೊಟ್ಟೆನೋವು, ತಲೆನೋವು, ಕಣ್ಣುಬೇನೆ, ಕಾಲುಬೇನೆ ಅಂಬ್ತಾ ಒದ್ದಾಡುತ್ತಾ 'ಜುಂಜಪ್ಪ ಬಂದು ಒಂದು ಅನಿ ನೀರು ಬಾಯಿಗೆ ಬಿಡಲಿ, ನಾನು ಬದುಕಲ್ಲ' ಅಂಬ್ತಾ ಒದ್ದಾಡುತ್ತಿದ್ದಳು. ಹುಡುಗರು ನೋಡಿ ಗಾಬರಿ ಆದರು. ಓಡಿ ಹೋಗಿ ಅಣ್ಣನಿಗೆ ಸುದ್ದಿ ಕೊಟ್ಟು ಅವ್ವನ ಕಥೆ ಹಿಂಗಾಗಿಬಿಟ್ಟಿದೆ ಅಂಬ್ತಾ ಅತ್ತರು. ಜುಂಜಪ್ಪನಿಗೆ ಎಲ್ಲ ವಿಚಾರ ತಿಳಿದಿದ್ರು ತಾಯಿ ಆರೋಗ್ಯ ಇಂಗಾಯಿತಲ್ಲ ಅಂಬ್ತಾ ಯೋಚಿಸಿಬಿಟ್ಟು ಕಂಬೇರ ಮೋಸ ಮಾಡ್ತಾ ಅವುರೆ. ಅವುರ ಬಗ್ಗೆ ಎಚ್ಚರಿಕೆಯಿಂದ ಇರಬೇಕೆಂದು ಹೇಳಿ ಪಂಚಕಲ್ಯಾಣಿ, ಬಡಮ್ಯೆಲರಿಗೆ ಸೂಚನೆ ಕೊಟ್ಟು ಸ್ವಾಮಿ ಜುಂಜಪ್ಪ ಚೇಳೂರು ರಂಗಣ್ಣನ ಹುಲ್ಲುಗಾವಲಿನಿಂದ ಸೀದಾ ಕಳುವರಹಳ್ಳಿಗೆ ಬಂದ.

ಸ್ವಾಮಿ ಜುಂಜಪ್ಪ ಕಳುವಾರಹಳ್ಳಿಗೆ ಅವುನ ಮನೆಗೆ ಬಂದ ಕೂಡಲೇ ಅವುನ ತಾಯಿ ಸಿನ್ನಮ್ಮ ಎದ್ದು ಕುಂತಳು. ಮಗನ ಮುಖ ಕಂಡು ಗಳಗಳನೆ ಅತ್ತಳು. ಜುಂಜಪ್ಪ ತಾಯಿಯನ್ನು ಸಮಾಧಾನಪಡಿಸಿದನು. ಸೋದರ ಮಾವುಗಳು ಕೊಡೋ ಕಾಟನೆಲ್ಲಾ ಹೇಳಿದನು. ತಾಯಿ ಮರುಗಿದಳು.

## ಬಡಮೈಲ ಬಂಧಿಯಾದ

ಇತ್ತ ಜುಂಜಪ್ಪ ಕಳುವಾರಹಳ್ಳಿಗೆ ಬಂದುಬಿಟ್ಟ. ತಾಯಿ ಒಂದೆರಡು ದಿನ ಇದ್ದುಬಿಟ್ಟು ಹೋಗಪ್ಪ ಅಂದಳು. ಜುಂಜಪ್ಪನಿಗೆ ಯಾವಾಗಲೂ ದನಗಳ ಮೇಲೆ ಒಂದು ಕಣ್ಣಾದರೆ ಮಾವುಗಳ ಮೇಲೆ ಒಂದು ಕಣ್ಣು. ಕುತಂತ್ರ ಮಾಡಿ ದನಕ್ಕೆ ಎಲ್ಲಿ ಮೋಸ ಮಾಡುತಾರೋ ಅಂಬ್ತಾ ಭಯ. ಆಮೇಲೆ ಚಿನ್ನಮ್ಮ ಏಳು ಕೊಪ್ಪರಿಗೆ ನೀರು ಕಾಸಿ, ಜುಂಜಪ್ಪನಿಗೆ ಎರೆದು ಪಟ್ಟೆ ಮಂಚದ ಮೇಲೆ ಕರಿಕಂಬಳಿ ಹೊದಿಸಿ ಮಲಗಿಸಿದಳು. ಆಗ ದೇವಲೋಕದ ಸುಖ ಸ್ವರ್ಗದ ನಿದ್ದೆ ಕವಕೊಂಡು ಜುಂಜಪ್ಪಗೆ ಎಚ್ಚರವಾಗದಂತ ನಿದ್ರೆ ಬಂದುಬಿಡ್ತು.

ಇತ್ತ ಜುಂಜಪ್ಪನ ದನಗಳ ಕಥೆ ಏನಾತು ಅಂದರೆ, ಜುಂಜಪ್ಪ ಚೇಳೂರು ಕಾವಲಿಂದ ಕಳುವಾರಹಳ್ಳಿ ಕಡೆ ಹೊರಟಾಗ ಅವುನ ಬಸವ ಬಡಮೈಲ ಅವುನ ಹಿಂದೇನೆ ಹೊರಟು ಬಿಡ್ತು. ಜುಂಜಪ್ಪ ಮುಂದೆ, ಬಡಮೈಲ ಹಿಂದೆ ಹೋಗ್ತಾ ಅವುರೆ. ಆದರೆ ಜುಂಜಪ್ಪನಿಗೆ ಇದು ಅರಿವಾಗಲಿಲ್ಲ. ಇನ್ನೇನು ಕಳುವಾರಹಳ್ಳಿ ಒಳಿಕೆ ಹೋಗಬೇಕು ಅನ್ನುವಾಗ ಹಿಂದಕೆ ತಿರುಗುತಾನೆ ದೂರದಲ್ಲಿ ಬಡಮೈಲ ಬರುತಾ ಅವುನೆ. ಸ್ವಾಮಿಗೆ ಗಾಬರಿಯಾತು. ಬಡಮೈಲ ಊರ ಒಳಗೆ ಬರಬಾರದು, ಅಂಟುಮುಟ್ಟಾಗುತ್ತದೆ ಅಂಬ್ತಾ ಏನು ಮಾಡಿನಪ್ಪ ಅಂದರೆ ಅಲ್ಲೊಂದು ಒಣಗಿದ ಬ್ಯಾಟೆ ಗಿಡದ ಮುರುಡು ಇತ್ತು. ಅದಕ್ಕೆ ಜುಂಜಪ್ಪನ ರುಮಾಲು, ಕರಿ ಕಂಬಳಿ ಕೊಪ್ಪೆ, ಜೋಡು, ಹೆಗಲ ಮೇಲಿನ ವಸ್ತ್ರ ಎಲ್ಲನೂ ತೆಗೆದು ಆ ಒಣಗಿದ ಕಂಬಕ್ಕೆ ತೊಡಿಸಿ ಬಸವನಿಗೆ ಜುಂಜಪ್ಪನ ತರ ತೋರಿಸಿದ. ತನ್ನೊಡೆಯ ನನ್ನ ಬಿಟ್ಟು ಹೋಗುತಾನೆ ಅಂಬ್ತಾಲೇ ಹಿಂಬಾಲಿಸಿ ಬಂದ ಹೋರಿ, ಜುಂಜಪ್ಪ ಇಲ್ಲೇ ನಿಂತುಕೊಂಡು ಬಿಟ್ಟಾನೆ ಅಂಬ್ತಾ ಅವುನ ದಿರಿಸು ನೋಡಿಕೊಂಡು ಅವುನ ಗೊಂಬೆ ನೋಡಿಕೊಂಡು ಸುಮ್ಮನೆ ನಿಂತುಕೊಂಡು ಬಿಡುತು. ಹೀಗೆ ಬಹಳ ಹೊತ್ತು ಕಳೆಯಿತು. ಅಷ್ಟೊತ್ತಿಗೆ ಸಿರಾ ಪೇಟೆಯಿಂದ ಹಾಯ್ದು ಚೇಳೂರು ರಂಗಣ್ಣನ ಮನೆಗೆ ಹೋಗಾಕೆ ಕಂಬೇರ ಗೊಲ್ಲರು ಮೂರು ಜನ ಹೊರಟರು. ಚಾಡಿ ಹೇಳಿಬಿಟ್ಟು ಬಡಮೈಲನ ಹಿಡಕೊಂಡು ಹೋಗಿ ಚೇಳೂರು ದೊರೆ ಪಾಲು ಮಾಡಾದು ಕಂಬೇರರ ಉದ್ದೇಶ. ಇದಕ್ಕೆ ತಕ್ಕ ಪ್ಲಾನು

ಮಾಡಿಕೊಂಡು ಹೊರಟರು. ಹೋಗಬೇಕಾದರೆ ತಗ್ಗು ಹತ್ತಿ, ದಿಣ್ಣೆ ಇಳೀಬೇಕು. ಅಷ್ಟರಲ್ಲಿ ಸಿದ್ದರಬೆಟ್ಟ ನಿಂತಂಗೆ ಬಸವ ನಿಂತುಬಿಟ್ಟವನೆ. ಕತ್ತು ಮೇಲೆತ್ತಿಕೊಂಡು ಮೆಲುಕು ಹಾಕಿಕೊಂಡು, ಕಣ್ಣು ಬಿಟ್ಟುಕೊಂಡು ಬೇಟೆ ಮುರುಡು ನೋಡಿಕೊಂಡು ನಿಂತುಬಿಟ್ಟವನೆ ಬಸವ. ಈಗ ಕಂಬೇರಿಗೆ ಇದರ ಪ್ಲಾನು ಗೊತ್ತಾಗಿಬಿಡ್ತು. ಜುಂಜಪ್ಪ ನಮ್ಮ ಅಕ್ಕನ ಮಗ. ನಾವು ಹೇಳಿಕೊಟ್ಟಂಗೆ ನಮ್ಮಕ್ಕ ನಾಟ್ಕಾ ಆಡಿಕೊಂಡು ಮಗನ್ನ ಕರೆಸಿಕೊಂಡವಳೆ. ಅವುನ ಹಿಂದೆ ಬಸವನೂ ಬಂದೈತೆ. ಬಸವ ಊರೊಳಿಕೆ ಬರಬಾರದು ಎಂದು ತಡೆದು ಇಲ್ಲೇ ನಿಲ್ಲಿಸಿ ಹೋಗಿಬಿಟ್ಟವನೆ. ಸರಿ ಈಗ ಬಸವ ನಿಂತು ನಿಂತಂಗೆ ಮದ್ದು ಗುಂಡಿನಿಂದ ಸುಡಿಸಬೇಕೆಂದು ಕಂಬೇರು ಹುಷಾರಾದರು. ಕೂಡಲೇ ಚೇಳೂರು ರಂಗಣ್ಣನ ಅರಮನೆಯಿಂದ ಬಂದೂಕ, ಕತ್ತಿ, ಗುಂಡು ದಾಳಿ ಮಾಡಿಸಿದರು. ಢಂ ಢಂ ಢಮಾರ್ ಅಂಬ್ತಾ ಒಂದೇ ಸಮ ದೀಪಾವಳಿ ಹಬ್ಬದಾಗೆ ಜುಂಜಪ್ಪನ ಜಾತ್ರೆಗೆ ದೀಪ ಏರಿದಾಗ ಪಟಾಕಿ, ಮದ್ದು ಗುಂಡು ಸುಡುತಾರಲ್ಲ ಹಂಗೇನೇ ಡಂ ಡಂ ಡಮಾಯಿಸಿದರು. ಬಸವನ ಮೇಲೆ. ಜುಂಜಪ್ಪ ಹಿಂದೆ ಬಸವನಿಗೆ ಒಂದು ಮಾತು ಹೇಳಿದ್ದ. ಯಾವಾಗ ಎಂದರೆ ಬಡಮೈಲ ಹೊಟ್ಟೇಕರ ಕಂಬೇರ ದನಗಳ ಗೂಡಿಗೆ ಯಾರಿಗೂ ತಿಳೀದಂಗೆ ಸಕ್ಕ ಸರುಹೊತ್ತಿನಾಗೆ ಹೋಗಿ ಕಂಬೇರ ದನಗಳನ್ನೆಲ್ಲಾ ತಿವಿದು, ಬಗೆದು, ರಕ್ತಕಾರಿಸಿ ಬರುತ್ತಾ ಇತ್ತಲ್ಲ ಆವಾಗ, ಸ್ವಾಮಿ ಜುಂಜಪ್ಪ ಹೇಳಿದ್ದ 'ಬಸವಣ್ಣ ಹಂಗೆ ಮಾಡಾದು ತಪ್ಪು. ಯಾರಿಗೂ ರಕ್ತಪಾತ ಮಾಡಬಾರದು. ಕಾಲು ಎತ್ತಬಾರದು. ಕೊಂಬು ತೋರಿಸಬಾರದು. ಇದು ನನ್ನಾಣೆ' ಅಂಬ್ತಾ ಹೇಳಿದ್ದನಲ್ಲಾ ಅದನ್ನೇ ಸತ್ಯ ಮಾಡಿಕೊಂಡು ಬಡಮೈಲ ಕಂಬೇರು ಏನೆಲ್ಲಾ ಹಿಂಸೆ ಮಾಡಿರೂ, ತೊಂದರೆ ಕೊಟ್ಟರೂ ಹರ ಶಿವ ಅನ್ನಲೇ ಇಲ್ಲ. ಇತ್ತ ಮದ್ದು ಗುಂಡಿನಿಂದ ಹೊಡೆದುಬಿಟ್ಟು ತೊಡೆ ಸತ್ರೆಗೆ ಗುಡಿ ಇಳಿಬಿದ್ದು ಬಸವಣ್ಣ ಕುಸಿದೋತು. ಕಂಬೇರಿಗೋ ಬಲು ಸಂತೋಷ. ಕೇಕೆ ಹಾಕಿಕೊಂಡು ಕುಣಿದಾಡಿದರು. ಪಾಳೆಗಾರರನ್ನು ಕರೆಸಿ ನೂಲಗ್ಗದ ಮಿಣಿ ಹಾಕಿಕೊಂಡು ಬಸವನ್ನ ನಮ್ಮ ಬಡಮೈಲನ್ನ ಚೇಳೂರು ಪೇಟೆಗೆ ಸಾಗಿಸಿದರು. ಚೇಳೂರು ಊರು ಮುಂದೆ ಕಲ್ಲು ಕಂಬಕ್ಕೆ ಹಗ್ಗ ಹಾಕಿ, ಸರಪಣಿ ಬಿಗಿದು ಕಟ್ಟಿರು. ಸಾಗಿಸಿ ಚೇಳೂರು ರಂಗಣ್ಣನಿಗೆ ಹೇಳುತಾರೆ 'ಈ ಹೋರಿ ಸತ್ತದೆ ಅಂಬ್ತಾ ತಿಳಿದುಕೊಂಡು ಸುಮ್ಮಕಾಗಬೇಡ. ಜುಂಜಪ್ಪ ಅಸಲ್ಲದವನು. ನೊಣವಾಗಿಯಾದರೂ ಬಂದು ಹಿಂಸೆ ಕೊಡುತಾನೆ. ಬೇಗ ಬೇಗ ಈ ಬಸವನ ಕತ್ತರಿಸಿ ಪಾಲು ಮಾಡಿ ಮಣೆಗಾರರಿಗೆ, ಕಟುಕರಿಗೆ ಕೊಟ್ಟು ಬರ್ರಿ' ಅಂದ್ರು.

ಇತ್ತ ಜುಂಜಪ್ಪನು ಬಹಳ ಹೊತ್ತು ಮಲಗಿದ್ದವನು ಎದ್ದನು. ತಾಯಿ ಚಿನ್ನಮ್ಮ ನೆನೆಯಕ್ಕಿ, ನೆನೆಗಡಲೆ, ಚಿಗಳಿ ಹುಡಿ ಎಲ್ಲಾನೂ ಮಾಡಿ ಸ್ವಾಮಿಗೆ ಎಡೆ ಮಾಡಿದಳು.

ನಂತರ ಎಣ್ಣೆ ಕಾಸಿ ಬಂಗಾರದ ಬಟ್ಟಲಿಗೆ ಹಾಕಿಕೊಂಡು ತಲೆಗೆ ಸರವಾಕೆ ಹೋಗುತಾಳೆ. ಆಗ ಬಂಗಾರದ ಬಟ್ಟಲಾಗೆ ಚೇಳೂರು ಪೇಟೆಯೊಳಗೆ ಜುಂಜಪ್ಪನ ಬಸವನ ಕೊಯ್ಯಕೆ ಕತ್ತಿ, ಕಠಾರಿ ಮಸೆಯೋದು, ಬಸವನ್ನ ಕಲ್ಲು ಕಂಬಕ್ಕೆ ಬಿಗಿದಿರುವುದು ಎಲ್ಲಾ ಕಂಡುಬಿಡ್ತು. ಜುಂಜಪ್ಪನಿಗೆ ಗಾಬರಿಯಾಯ್ತು. ಕೂಡಲೇ ಎದ್ದುಬಿಟ್ಟ. ಚಿಪ್ಪುಕೊಡಲಿ ತಗೊಂಡಿ ಅಲ್ಲಿಂದ ಒಂದೇ ನೆಗೆತ ನೆಗೆದು ಚೇಳೂರು ಸಮೀಪದ ಮಂಚಲದೊರೆ ಮದಕ್ಕೂ ಅಲ್ಲಿಂದ ಸಣಬನಹಳ್ಳಿ ಬಂಡೆತಾಕನೂ ಹಾರಿ ಬಂದುಬಿಟ್ಟ. ಸಣಬನಹಳ್ಳಿ ಬಂಡೆ ತಕೆ ಬಂದು ನಿತು ಜುಂಜಪ್ಪ ಚೇಳೂರು ಪಟ್ಟಣ ಸುಟ್ಟುಬಿಡಲು ಉರಿಗಣ್ಣು ಬಿಡಬೇಕೆಂದಿರುವಾಗ ಶಿವ ಪ್ರತ್ಯಕ್ಷನಾಗಿ ಹೇಳುತಾನೆ.



## ಉರಿಗಣ್ಣಾಗೆ ಒಡಮೂಡಿದ ಓಂಕಾರ

ಜುಂಜಪ್ಪನಿಗೆ ಬಡಮ್ಮೈಲನಿಗೆ ಕೊಟ್ಟ ಹಿಂಸೆ ನೋಡಿ ತಡಕಣಾಕ್ಕಾಗಲಿಲ್ಲ. ಸೇಣಬನಹಳ್ಳಿ ಏಣಿಗೆ ಬಂದವನೆ ಉಗ್ರಕೋಪ ತಾಳಿಬಿಟ್ಟ. ಚೇಳೂರು ಚೇಳೂರನ್ನೇ ಸುಟ್ಟು ಭಸ್ಮ ಮಾಡಿಬಿಡಬೇಕು ಅಂದು ಉರಿಗಣ್ಣು ಉರಿಮಾಡಿದ. ಅಷ್ಟೊತ್ತಿಗೆ ಪರಮೇಶ್ವರ ಪ್ರತ್ಯಕ್ಷನಾಗಿ ಇನ್ನು ಜಗತ್ತು ಪ್ರಳಯ ಮಾಡಿಬಿಡುತಾನೆ ಜುಂಜಪ್ಪ ಅಂದುಬಿಟ್ಟು ಅಪ್ಪಾ ಮಗನಿಗೆ ಅವರು ಪಾಪಿಗಳು. ಕುದ್ದವನಿಗೆ ಕೂಳಿಲ್ಲ, ಬೆಂದವನಿಗೆ ಬಾಳಿಲ್ಲ. ನಿನ್ನ ಮೇಲೆ ಹಗೆ ಮಾಡಿ ಕಂಬೇರ ಉದ್ದಾರ ಆಗೋದು ಅಳುತಕೆ ಅದೆ. ಮಗನಿಗೆ ನಿನ್ನೇನೋ ಉರಿಗಣ್ಣು ಬಿಟ್ಟರೆ ಒಂದು ಅಡಿಕೆ ಕಡಿಯೋ ಹೊತ್ತಿಗೆ ಚೇಳೂರು ದೊರೆ, ಅರಮನೆ, ಕೋಟೆ ಎಲ್ಲವೂ ಭಸ್ಮವಾಗುತ್ತೆಪ್ಪ. ಆದರೆ ಈ ಪಾಪಿಗಳು ಮಾಡಿದ ತಪ್ಪಿಗೆ ಬಸಿರೆಂಗಸರು, ಬಾಣಂತಿಯರು, ಕಾಲಿಲ್ಲದವರು, ಶಿಶುಮಕ್ಕಳು ಎಲ್ಲರೂ ಬೆಂಕಿಲಿ ಬೆಂದು ಉರಿದು ಹೋಗಿಬಿಟ್ಟರೆ ಅವರೆಲ್ಲರ ಪಾಪ ನಿನಗೆ ತಗುಲಿ ನೀನು ಬದುಕಾಕಾಗುತ್ತೇನಪ್ಪ? ನಿನ್ನ ದೇವತರು ಅಂಬ್ತಾ ಕರೆಯಾಕಾಗುತ್ತೆಯೆ? ಬ್ಯಾಡಪ್ಪ ಬ್ಯಾಡ. ಉರಿಗಣ್ಣು ಬಿಡಬೇಡ ಅಂದನು ಶಂಕರ. ಒಂದು ಕಡೆ ಬಸವನ ಹೊಡೆದು ಸಾಯಬಡಿದಿದ್ದಾರೆ, ಅದೇ ಅವುನಿಗೆ ಜೀವ. ಬಡಮ್ಮೈಲ ಅಂದ್ರೆ ಪರ್ವತ ಬಂದಂಗೆ ಬರೋದು. ಮಾತಾಡುವುದಿಲ್ಲ ಅಷ್ಟೇ. ಉಳಿದಿದ್ದೆಲ್ಲಾ ತಿಳಿಯುತ್ತೆ. ಅಂದು ಕಾಮದೇವನನ್ನು ಕಂಬೇರ ಮಾತು ಕೇಳಿಬಿಟ್ಟು ಅನ್ಯಾಯವಾಗಿ ನಾಯ್ಕ ಮಕ್ಕಳು ಹೊಡೆದುಬಿಟ್ಟವರೆ ಅಂಬ್ತಾ ಜುಂಜಪ್ಪ ದುಃಖಮಾಡುತಾನೆ. ಆವಾಗ ಜುಂಜಪ್ಪ 'ಈ ನನ್ನ ಮಕ್ಕಳು ಕಂಬೇರಿಗೆ, ನಾಯಕರಿಗೆ ಸರಿಯಾದ ಪಾಠ ತೋರಬೇಕು' ಎಂದು ಜುಂಜಪ್ಪ ಮೂರು ಜನ ಮಾರೆವ್ವನ ಕರೆದ. ಮಾದೇನಹಳ್ಳಿ ಮಾರೆಮ್ಮ, ಯಣ್ಣೆಕಟ್ಟೆ ಮಾರಮ್ಮ, ಚೇಳೂರು ದೊಡ್ಡ ಮಾರಿನ ಕಳೆದುಬಿಟ್ಟ. ಅವರು ಮೂರು ಗುಂಗಾರಿ ಹುಳ ಮಾಡಿ, ಅವುಗಳಿಗೊಂದು ಸಂಜೀವಿನಿ ಕಡ್ಡಿ ಕೊಟ್ಟು ಏಟು ತಿಂದು ಸಪ್ಪಗಿರುವ ಬಡಮ್ಮೈಲನ ಕಿವಿಯೊಳಗೆ ಹಾಕುವಂತೆ ಹೇಳಿದ. ಇದೊಂದು ಗುಂಗಾರಿಗೊನಾ ಬಂದೂಕದಿಂದ ಹೊಡೆದಿರೋ ಗಾಯದ ತೂತುಗಳಿಗೆ ಹಾಕಲು ಹೇಳಿದ. ಇನ್ನೊಂದರಿಂದ ಎದೆಗುಡಿಯೊಳಗೆ ಜೋಡುನಳಿಕೆ ಬಂದೂಕುದಿಂದ ಸುಟ್ಟಿರೋ ಗಾಯದ ಭಾಗಕ್ಕೆ ಹಾಕಲು ಹೇಳಿಬಿಟ್ಟು

ಸ್ವಾಮಿ ಕಳಿಸಿದ. ಆಗ ಮಾರಮ್ಮ ಅಣ್ಣ ಜುಂಜಪ್ಪ ಹೇಳಿದಂಗೆ ಮಾಡಿದವು. ಅಷ್ಟು ಹೊತ್ತಿಗಾಗಲೇ ಚೇಳೂರಾಗೆ ಶರಣರು, ಜಂಗಮರು ಬಸವನ ಸಾಯಿಸಿದ ನಾಯ್ಕ ಮಕ್ಕಳು ಸರ್ವನಾಶವಾಗುತಾರೆ. ಸಿದ್ದರಬೆಟ್ಟದಂತೆ ಬಸವುನ, ನಂದಿ ರೂಪದವನ, ಪರಮೇಶ್ವರನ ವಾಹನನ ಕೊಂದುಬಿಟ್ಟವರೆ. ಇವರ ಮನೆ ಹಾಳಾಗುತ್ತೆ ಅಂಬ್ತಾ ಮಾತಾಡಿಕೊಳ್ಳುತ್ತಾ ಇದ್ದರು.

ಸರಿ, ಗುಂಗಾರಿ ನೊಣ ಮೂರು ಆಗಿದ್ದವು ಆರು ಆದವು. ಆರು ಆಗಿದ್ದವು ಅರವತ್ತ ಮೂರು ಆದವು. ಬಂದು ಬಸವಣ್ಣನ ಪೂರಾ ಮುತ್ತಿದವು. ಆಗ ಅಲ್ಲಿ ಕಠಾರಿ, ಬಾಕು ಮಸಕೊಂಡು ಬಸವನ ಕತ್ತರಿಸಿ ತಿನ್ನಬೇಕು ಅಂಬ್ತಾ ಕಾಯ್ತಾ ಇದ್ದರಲ್ಲ ಅವರು ತಯಾರಿ ಮಾಡಿಕೊಳ್ಳುವಾಗ ನೊಣ ಮುತ್ತಿದ್ದು ಕಂಡು, ಎತ್ತಿನ ಪ್ರಾಣ ಪಕ್ಷಿ ಹಾರಿಹೋಯಿತು. ಹಾಕರಿ ಇವಾಗ ಎತ್ತಿಗೆ ಬಾಕ ಅಂದ್ರು. ಯಾವಾಗ ನೊಣ ಬಂದು ಮುತ್ತಿದವೋ ಆವಾಗ ನೋಡಿ ನೋಡುತಾಲೆ ಬಸವನ ಕಿವಿ ಆಡಿಸಿದಂಗಾತು. ಬಾಲ ಸಡಿಲಿಸಿದಂಗಾತು. ಉಸಿರು ಬಿಟ್ಟಂಗಾತು. ಆಗ ನೊಣ ಹಾರಿಬಿಟ್ಟು ಸಣಬನಹಳ್ಳಿ ಬಂಡೆ ಮೇಲೆ ಕುಂತಿದ್ದನಲ್ಲ ಜುಂಜಪ್ಪ ಅವುನ ತಾಕೆ ಹೋದವು. ನಿಜರೂಪ ತಳೆದು ಅಕ್ಕತಂಗಿಯರಾಗಿ ನಿಂತುಕೊಂಡು ಬಸವನಿಗೆ ಆಗಿರುವ ಸಂಕಟನೆಲ್ಲಾ ಹೇಳಿದರು. ಜುಂಜಪ್ಪ ನಗುತ್ತಲೇ ಹೇಳುತ್ತಾನೆ. 'ಬಸವ ಸತ್ತು ನಾನು ಬದುಕುತ್ತೇನೆಯೇ? ನೋಡ್ತಾ ಇರ್ರಿ ಇನ್ನೊಂದು ಆರು ಗಳಿಗೆಗೆ ಏನಾಗುತ್ತೆ ಅಂಬ್ತಾ' ಅಂದು ನಿಧಾನಕ್ಕೆ ಕಂಬಳಿ ಕೊಪ್ಪೆಯಿಂದ ಜುಂಜಪ್ಪ ಗಣೆತೆಗೆದ.

ಕಲ್ಡೆನೆ ಹುಲ್ಲು ಕರಡಿ ಉದ್ದಕೆ ಬೆಳೆದೈತೆ
ಮಾರುಳ್ಳೆ ಹುಲ್ಲು ಮಾರುದ್ದ ಬೆಳೆದೈತೆ
ಮಿಥುವಿನ ಹುಲ್ಲು ಮೇಲೇರಿ ಬೆಳೆದೈತೆ
ಕಮ್ಮಗಡ್ಲೆ ಹುಲ್ಲು ಸುಮ್ಮನೆ ಹರಿದೈತೆ
ಚೇಳೂರ ಹೊರೆಯ ಊರಾಗಿಲ್ಲವೇನೋ
ಆಳ ಚಿನ್ನಿಮಗ ದನಬಿಟ್ಟು ಮೇಯ್ಸಿದ
ಚೇಳೂರು ಕಾವಲಾಗೆ ದನ ಲಗ್ಗೆ ಹೊಡೆತಾವೋ

## ಚೇಳೂರು ಕೋಟೆ ಪುಡಿಪುಡಿ

ಬಡಮ್ಯೆಲನ್ನ ಅವುರ ಮಾವುಗಳ ಮಾತು ಕೇಳಿ ಕೊಂದುಬಿಟ್ಟ, ಕಳುವಾರಹಳ್ಳಿ ದಿಣ್ಣೆಯಿಂದ ಹೋರಿನ ಏಳು ಜೋಡು ರಥ ಕಟ್ಟಿ ಅದಕ್ಕೆ ಗಾಡಿ ಮಾಡಿ ಅದರ ಮೇಲೆ ಬಸವನ ಮಲಗಿಸಿ ಎಳೆದು ತಂದಿದ್ದರು ಚೇಳೂರ ಪೇಟೆಗೆ. ರಕ್ತ ಸೋರಿ ಕೋಡಿಯಾಗಿ ಹರಿದಿತ್ತು. ಮಾನವಂತರು ತಿರುಗಾಡದಂಗೆ ಮಾಡಿದ್ರು. ಗರತೀರು, ಮುತ್ತೈದೇರು ನೀರು ತರಬೇಕಾದರೆ ಭಯಪಟ್ಟುಕೊಂಡು ತಿರುಗಾಡುತ್ತಿದ್ದರು. ಸ್ವಾಮಿ ಜುಂಜಪ್ಪ ಬೇಕು ಬೇಕು ಅಂತಾಲೇ ತಮಾಸೆಯಾಗಿ ಸುಮ್ಮನಿದ್ದು, ಈಗ ಅವುನ ಅವತಾರ ತೋರಿಸಿದ. ಸಣಬನಹಳ್ಳಿ ದಿಣ್ಣೆಯಿಂದ ನೆಗೆದು ಮಂಚಲದೊರೆ ಮದಗದ ಮೇಲೆ ನಿಂತುಕೊಂಡು ಗಣೆ ಹಿಡಿದ. ಗಣೆ ಹಿಡಿದು ಏನಂತ ಕರೆಯುತಾನೆ ಬಸವನ ಅಂದ್ರೆ 'ಕಲ್ಲು ಕಂಬಾನ ಮುರಿಯೋ। ಏಳು ಸರಪಣಿ ಹರಿಯೋ । ಚೇಳೂರ ಕೋಟೆ ತೆನೆ ಮುರಿಯೋ । ಗೆದ್ದು ಬಾರಪ್ಪ ಬಯಲಾಗೆ' ಅಂಬ್ತಾ ಪಿಳ್ಳಂಗೋವಿಯೊಳಗೆ ಸ್ವರ ಹಿಡಿದು ಕೂಗುತ್ತಿದ್ದಂಗೆ ಚೇಳೂರು ಬಯಲು ಕೋಟೆ ಮುಂದೆ ಏಳು ಕಂಬಕ್ಕೆ ಏಳು ಸರಪಣಿ ಹಾಕಿ ಹೋರಿ ಬಿಗಿದಿದ್ರಲ್ಲ ಅದನ್ನೆಲ್ಲಾ ಎದ್ದು ದಗ್ಗುಲುಮಂಡಿ ಊರಿ, ಕಾಲು ಕೆರೆದು, ಗುಟ್ರಿಕೆ ಹೊಡೆದು ಏಟಿಗೆ ಚೇಳೂರು ಕೋಟೆ ರಪ ರಪ ಅಂಬ್ತಾ ಬಿದ್ದೋಗಿಬಿಡ್ತು. ಸರಪಣಿ ಹಾಕಿದ್ರಲ್ಲ, ಕಲ್ಲು ಕಂಬ ಮುರಿದು ಚೂರುಚೂರು ಆಗಿಹೋಯ್ತು. ಪಾಳೇಗಾರ್ರ ಹೆಂಡ್ರು ತುಂಬಿದ ಬಸುರಿ, ಬಸವನ ಉಡ್ರಿಕೆಗೆ ಮೈ ಇಳಿದುಹೋದ್ಲು. ಹಾಲು ಕುಡಿಯೋ ಮಕ್ಕಳು ಚಿಟ್ಟನೆ ಚೀರಿ ಹೆದರಿಕೊಂಡುಬಿಟ್ರು. ತಣಿಗೆ ಚೆಂಬು ಎಗರಿ ಏಳು ಮಾರು ದೂರಕ್ಕೆ ಬಿದ್ದವು. ಅಲ್ಲಿಂದ ನೆಗೆದ ಬಡಮ್ಯೆಲ ಸಣಬನಹಳ್ಳಿ ಬಂಡೆ ಮೇಲೆ ಒಂದು ಪಾದ ಊರಿದ್ದು. ಅಲ್ಲಿಂದ ಕಳುವಾರಹಳ್ಳಿ ಕಡಿಕೆ ಹೋಗಾಕೆ ನೆಗೆದು ತಿರುಗಿ ಮಂಚಲದೊರೆ ಮದಗದ ಮೇಲೆ ನಿಂತುಬಿಡ್ತು.

ಬಸವ ಯಾವಾಗ ಕಳುವಾರಹಳ್ಳಿ ಕಡೆ ತಿರುಗಿಬಿಡ್ತೋ ಜುಂಜಪ್ಪ ಒಂದೇ ವಾಟಕ್ಕೆ ಮರಡಿಗುಡ್ಡದ ಹತ್ತಿರಕೆ ಬಂದ. ಬಂದುಬಿಟ್ಟು ಬಸವನ ನೋಡಿದ, ಮ್ಯೆಯೆಲ್ಲಾ ತೂತಾಗಿ

ರಕ್ತ ಸೋರಿಹೋಗಿತ್ತು. ಸ್ವಾಮಿ ಸಂಕಟದಿಂದಲೇ ಹೋರಿನ ಸವರಿದ. ಗಾಯೆಲ್ಲಾ ಮಾಯವಾಗಿ ಹೋರಿ ಎಳೆಕರಿನಂಗೆ ಪಳಪಳ ಹೊಳೆಯುವಂತಾಯ್ತು. ಹೊಟ್ಟೆಗೆ ಹೊಕ್ಕಿದ ಗುಂಡುಗಳೆಲ್ಲಾ ಬಿದ್ದುಹೋಗಿಬಿಟ್ಟವು. ಅಸವಲ್ಲದವರು ಮುಟ್ಟಿ ಮೈಲಿಗೆ ಆಗಿರುವುದರಿಂದ ಬಸವನ್ನ ಜುಂಜಪ್ಪ ಏಳುಕೆರೆಗೆ ಮುಳುಗಿಸಿ ಪುಣ್ಯ ಮಾಡಿಸಿಕೊಂಡು ತಿರುಗ ಚೀಳೂರು ರಂಗಣ್ಣನ ಕಾವಲಿನಲ್ಲಿದ್ದ ತನ್ನ ದನಿನ ಒಳಕೆ ಬಿಟ್ಟು ತಮ್ಮಗಳೊಂದಿಗೆ ಸುಖವಾಗಿದ್ದ.



ಕಲ್ಲು ಕಂಬ ಮುರಿಯೋ ಕಬ್ಬುನದ ಸರಮುರಿಯೋ
ಮುದ್ದು ಚೀಳೂರ ತೆನೆ ಮುರಿಯೋ । ಬಡಮೈಲ
ಗೆದ್ದು ಬಾರೋ ಚೀಳೂರ ಬಯಲಾಗೆ ॥

# ಚೇಳೂರು ಆಳಿದ ವೀರ ಜುಂಜಪ್ಪ

ಜುಂಜಪ್ಪ ಸತ್ತ ಬಡಮ್ಮೈಲನನ್ನ ಬದುಕಿಸಿದ. ಜನಾದಿ ಜನಗಳಿಗೆಲ್ಲಾ ಜುಂಜಪ್ಪನ ಸತ್ಯ ಅರಿವಾಯ್ತು. ದೇವರು, ಈರಭದ್ರ, ಪರಮೇಶ್ವರ ಅಂದುಕೊಂಡುಬಿಟ್ರು. ಆ ಹೊತ್ತಿನಿಂದ ಚೇಳೂರ ರಂಗಣ್ಣ ಜುಂಜಪ್ಪನ ತಂಟೆಗೆ ಬರಲಿಲ್ಲ. ದನಗಳು ಈಜಾಡಿಕೊಂಡು ರಂಗಣ್ಣನ ಕಾವಲಾಗೆ ಮೇಯ್ದು, ಮಡುವಿನ ನೀರು ಕುಡಿದು ಸುಖವಾಗಿದ್ದವು. ಹಿಂಗೆ ಕೆಲವು ಸಮಯ ಕಳೀತು. ಕೆಟ್ಟಬುದ್ದಿ ಕಂಬೇರು ಮಾತ್ರ ತಮ್ಮ ನೀಚಬುದ್ದಿ ಬಿಡಲಿಲ್ಲ. ಏನಾದರೂ ಜುಂಜಪ್ಪನಿಗೆ ತೊಂದರೆ ಮಾಡೇ ಮಾಡಬೇಕೆಂದು ಯೋಚನೆ ಮಾಡುತ್ತಲೇ ಇದ್ರು. ಒಂದು ಉಪಾಯ ಮಾಡಿರು ಕಂಬೇರು. ಅದೇನಪ್ಪ ಅಂದರೆ ಕಂಬೇರು ಏಳು ಜನಗಳೂ ಸೀದಾ ಚೇಳೂರು ರಂಗಣ್ಣನ ಅರಮನೆಗೆ ಬಂದುಬಿಟ್ರು. ರಂಗಣ್ಣ ದೊರೆ ಮೊದಲಿನಂಗೆ ಅಕ್ಕರವಾಗಿಯೇನು ಕಾಣಲಿಲ್ಲ. ಆದರೂ ಬಂದವರೆ ಗೊಲ್ಲಗೌಡರು ಅಂಬ್ತಾ ಕುಂಡರಿಸಿ ತಾಂಬೂಲ ಕೊಡಿಸಿ, ಬಂದ ಕಾರ್ಯ ಏನು ಎಂದು ಕೇಳಿದನು. ಮೊದಲಿಗೆ ಅತ್ತಂಗೆ ಆಡಿದರು, ಆಮೇಲೆ ಉಸ್ ಅಂಬ್ತಾ ಉಸಿರುಬಿಟ್ಟರು. ಮೋಸಗಾರರು ಹೇಳುತಾರೆ 'ನೋಡಿ ನಾವು ಸುಮ್ಮನೆ ಇದ್ದ ತಮಗೆ ತೊಂದರೆನೆ ಕೊಟ್ಟಂಗೆ ಆಯಿತು. ಅದರಿಂದ ಪ್ರಯೋಜನವಿಲ್ಲದಂಗೆ ಆಯ್ತು. ಏನು ಮಾಡಾದು? ಈ ಜುಂಜಪ್ಪನ ಸೊಕ್ಕ ಅಡಗಿಸಲು ಆಗಲಿಲ್ಲ. ಇನ್ನೂ ಒಂದು ಪ್ಲಾನು ಅಯಿತೆ. ಅದನ್ನೂ ನೋಡಿ ಬಿಡನಾ' ಅಂದರು. 'ಏನ್ರಿ ಗೊಲ್ಲಗೌಡರೆ ನಿಮ್ಮ ಪ್ಲಾನೆಲ್ಲಾ ಉಲ್ಟಾಸೀದ ಆಗೆವೆ. ಅದರಲ್ಲಿ ನಿಮದೆಂತಾದು?' ಅಂದ್ರು. 'ಏನಿಲ್ಲ ದೊರೆಗಳೆ, ಈಗ ಜುಂಜಪ್ಪನಿಗೆ ಓದು-ಬರಹ ಬರೋದಿಲ್ಲ. ತಿಳುವಳಿಕೆ ಇಲ್ಲದ ಮೂಢ. ತಾವು ಪಗಡೆ ಆಟದಲ್ಲಿ ಎತ್ತಿದ ಕೈ. ನಿಮ್ಮನ್ನು ಮೀರಿಸೋರು ಯಾರು ಹುಟ್ಟಿಲ್ಲ. ಇದೊಂದು ಪ್ಲಾನು ಮಾಡಿದ್ದೀವಿ. ಈಗ ನಾವೇ ಜುಂಜಪ್ಪನತನಕ ಹೋಗಿ ರಂಗಪ್ಪ ನಾಯ್ಕನ ಜೊತೆಗೆ ಪಗಡೆ ಆಡಲೇಬೇಕಪ್ಪ, ನೀನು ಇಷ್ಟೆಲ್ಲಾ ಪರಾಕ್ರಮ ತೋರಿದ್ದೀಯ. ಅದಕ್ಕೆ ಅರ್ಥನೂ ಬರುತ್ತೆ. ಅಲ್ಲದೆ ಚೇಳೂರು ರಾಜ್ಯ ನಿಂದೂ ಆಗುತ್ತೆ ಅಂದು ಹೇಳುತೀವಿ. ಜುಂಜಪ್ಪ ಒಪ್ಪಿಕೋತಾನೆ. ನೀವು ಹೂಂ ಅನ್ನಬೇಕು' ಎಂದು ಒತ್ತಾಯ ಮಾಡಿದರು ಕಂಬೇರರು. 'ಸರಿ ಗೌಡರೆ ನೀವು ಹೇಳಿದಂಗೆ ಕೇಳುತೀವಿ. ಸೋತರೆ ಜುಂಜಪ್ಪನ ಏಳು

ಲಕ್ಷ ದನ, ಬಡಮ್ಮೈಲ ಹೋರಿ ನಮ್ಮದಾಗುತಾವೆ' ಅಂಬ್ತಾ ಹೇಳಿದರು. ಮೊದಲು ಜುಂಜಪ್ಪನನ್ನು ಒಪ್ಪಿಸು ಅಂದರು.

ಕಂಬೇರ ಈಗ ಏನು ಮಾಡಿರಪ್ಪಾ ಅಂದರೆ ತಿರುಗಾ ಜುಂಜಪ್ಪನ ತಕೆ ಬಂದ್ರು. ದನಗಳ ಬಗೆಗೆ ಒಳ್ಳೆ ಮಾತಾಡಿದರು. ಅವುಗಳ ಸುಳಿ ಬಳ್ಳಿ ಎತ್ತಿ ಹಾಡಿದರು. ಬಡಮ್ಮೈಲ ನಮ್ಮ ದೇವರು, ಗೊಲ್ಲರ ಶಕ್ತಿ, ಶಂಕರ ಅಂದ್ರು. ಅದೂ ಇದೂ ಮಾತಾಡ್ತಾ ಆಡುತ್ತಾ ನಾವೆಲ್ಲಾ ಒಂದಾಗಿಬಿಡಬೇಕಪ್ಪ ಅಂದರು. ಗೊಲ್ಲರು ಅಗಲಬಾರದು ಅಂದರು. ನಮ್ಮ ತಂಗಿಮಕ್ಕಳು ಅದೆಷ್ಟು ಸಣ್ಣಗಾಗಿದ್ದೀರಪ್ಪ, ಹುಲ್ಲು ನೀರಿಗಾಗಿಯೇ ಬಡವರಾಗಿಬಿಟ್ಟಿರಿ. ಮದುವೆ ಮಾಡಿಕೊಳ್ಳಲಿಲ್ಲ, ಸಂಸಾರಸ್ಥರು ಆಗಲಿಲ್ಲ ಅಂದೆಲ್ಲಾ ಮಾತಾಡಿದರು. ಈ ಮರುಳು ಮಾತು ಜುಂಜಪ್ಪನಿಗೆ ಅರ್ಥವಾದರೂ ಮಾವುಗಳು ಅಂಬೋ ಮುಲಾಜಿನಿಂದ ಬೆಲೆ ಕೊಟ್ಟ. 'ಆಗಬಹುದು ಮಾವಯ್ಯಗಳೇ' ಅಂದನು. ಬಾಯಿ ತುಂಬಾ ಎಲೆ ಅಡಿಕೆ ಕೊಟ್ಟರು. ಮೂರು ಜನ ಅಣ್ಣತಮ್ಮಗಳು ಎಲೆ ಅಡಿಕೆ ಹಾಕಿಕೊಂಡರು. ನಿಧಾನವಾಗಿ ಸೋದರಮಾವ ಹಿರೇಮಾವ ದೊಡ್ಡಚಿನ್ನೇಗೌಡ ಹೇಳಿದ 'ಜುಂಜಪ್ಪ ಈಗ ನೀನು ಒಂದು ಕೆಲಸ ಮಾಡಬೇಕು. ಅದೇನಪ್ಪ ಅಂದ್ರೆ, ಈ ಚೇಳೂರು ದೊರೆ ರಂಗಪ್ಪನ ರಾಜ್ಯ ನಮ್ಮದಾಗಬೇಕು. ಈ ನಾಯ್ಕ ಮಕ್ಕಳನ ಸೋಲಿಸಬೇಕು' ಎಂದನು. ಅದಕ್ಕೆ ಜುಂಜಪ್ಪ ಹೇಳಿದ 'ಮಾವ ಅವುರ ರಾಜ್ಯ, ಅವುರ ಆಸ್ತಿ ನಮಗೇಕೆ ಬೇಕು? ಕಂಡೋರ ಒಡವೆ ವಿಷಕ್ಕೆ ಸಮ. ಬಿಲ್‌ಕುಲ್ ಬೇಡ' ಅಂದನು. ಆದರೂ ಕಂಬೇರು ಕೇಳಲಿಲ್ಲ 'ಏನಿಲ್ಲ ಸುಲಭವಾಗಿ ಚೇಳೂರು ಸೀಮೆ ಗೊಲ್ಲರದು ಅನ್ನಂಗೆ ಆದರೆ ಆಯ್ತು. ಆಮೇಲೆ ಅವುರಿಗೆ ಬಿಟ್ಟರಾಯ್ತು' ಅಂದರು. ಅದಕ್ಕೆ ಜುಂಜಪ್ಪ 'ನಾವು ಏನು ಮಾಡಬೇಕು' ಎಂದು ಕೇಳಿದನು. 'ಏನು ಇಲ್ಲ, ಚೇಳೂರು ರಂಗಣ್ಣನ ಕೂಟೆ ಒಂದು ಆಟ ಪಗಡೆ ಆಡಿ. ಅದರಲ್ಲಿ ಅವುನು ಸೋತರೆ ಅವುನ ರಾಜ್ಯ ನಮ್ಮದು. ನಾವು ಸೋತರೆ ನಮ್ಮ ದನಗಳು ಅವನವು ಇಷ್ಟೇ ಪಣ. ನೀನು ಒಪ್ಪಲೇಬೇಕು. ಬಡಮ್ಮೈಲನನ್ನು ಬದುಕಿಸಿದ ಕೀರ್ತಿ ನಿನ್ನದು. ಚೇಳೂರು ನಿನ್ನದಾಗಬೇಕು' ಎಂದು ಕಂಬೇರಗೊಲ್ಲರು ಗೋಗರೆದರು. ಜುಂಜಪ್ಪ 'ಆಯಿತು' ಅಂದ ಇದೂ ಒಂದು ಆಟ ಆಡೋಣ. ಸೋಲಂಗಿಲ್ಲ, ಗೆದ್ದರೆ ಅವುನ ರಾಜ್ಯ ಅವುರಿಗೆ ಬಿಟ್ಟರಾಯ್ತು ಅಂದು ಮನಸ್ಸಿನಲ್ಲಿ ಅಂದುಕೊಂಡು 'ಆಯಿತು ಮಾವಯ್ಯಗಳೆ ನೀವು ಆಟಕ್ಕೆ ಅಣಿಮಾಡಿರಿ ನಾವು ಬರುತ್ತೇವೆ' ಅಂಬ್ತಾ ಸ್ವಾಮಿ ಜುಂಜಪ್ಪ ಹೇಳಿಬಿಟ್ಟು ಕಳುಹಿಸಿದನು.

ಕಂಬೇರಿಗೆ ಸಂತೋಷವೋ ಸಂತೋಷ. ಜುಂಜಪ್ಪ ಸುಲಭವಾಗಿ ಸೋತುಬಿಡುತಾನೆ. ಓದು ಬರೋಲ್ಲ, ಬರಹ ಬರೋದಿಲ್ಲ ಅಂದುಬಿಟ್ಟು ಸೀದಾ ಚೇಳೂರು ರಂಗಣ್ಣ ದೊರೆ ಮನೆಗೆ ಬಂದು ನಮಸ್ಕಾರ ಮಾಡಿ ಹೇಳಿದರು. ಜುಂಜಪ್ಪ ತಮ್ಮ ಕೂಟೆ ಪಗಡೆ ಆಡಲು

ಒಪ್ಪಿಕೊಂಡಿದ್ದಾನೆ. ನೀವು ಸಿದ್ದವಾಗಿ ಅಂದರು. ದಡ್ಡ, ಓದು ಬರಹವಿಲ್ಲ. ಸೋತುಬಿಡುತಾನೆ. ಏಳು ಲಕ್ಷ ದನ ನಮ್ಮದಾಗುತ್ತವೆ ಅಂತ ರಂಗಣ್ಣ ಒಳಒಳಗೆ ಸಂತೋಷಪಟ್ಟ.

ಸೋಮವಾರ ಹನ್ನೆರಡು ಗಂಟೆ ಸಮಯ. ಜುಂಜಪ್ಪ ಹೇಳಿದ 'ಇದು ದೊಡ್ಡ ಸಮಾಚಾರ, ರಾಜ್ಯದ ವಿಷಯ. ನಾನು ನೀವು ಇಬ್ಬರಿಗೇ ತಿಳಿದಿರೋದಲ್ಲ. ಸಮಸ್ತ ರಾಜ್ಯಕ್ಕೆ ತಿಳೀಬೇಕು, ಪ್ರಜೆಪಾಲಕರಿಗೆಲ್ಲಾ ತಿಳಿಯಬೇಕು. ಅವುರನೂ ಕರೆಸಬೇಕೆಂದು, ಡಂಗೂರ ಸಾರಿಸಿ' ಎಂದು ಹೇಳಿದನು. ದೊರೆ ರಂಗಣ್ಣನೂ, ಗೊಲ್ಲರ ಜುಂಜಪ್ಪನೂ ಜೂಜಾಡುತ್ತಾರೆ. ಚೇಳೂರು ಪಟ್ಟಣನೇ ಪಣಕ್ಕೆ ಇಟ್ಟವನೆ ರಾಜ. ಏಳು ಲಕ್ಷದ ಮೇಲೆ ಬಡಮೈಲ ಎಂಬ ಹೋರಿನೂ ಜುಂಜಪ್ಪ ಪಣ ಇಟ್ಟು ಆಟ ಆಡುತಾರೆ. ಎಲ್ಲರೂ ಬರಬೇಕು, ಬಂದು ಆಟ ನೋಡಿ ನ್ಯಾಯ ಕೊಡಿಸಬೇಕೆಂದು ಸಾರಿಸಿದ. ಸರಿ ಅವತ್ತು ಸೋಮವಾರ ಮಧ್ಯಾಹ್ನ ಹನ್ನೆರಡು ಗಂಟೆ, ಜನಾದಿ ಜನವೆಲ್ಲ ಮಳ್ಳಾಕಿರೆ ಮರಳು ಇಳಿಯದಂಗೆ ಸೇರಿಬಿಟ್ರು, ಚೇಳೂರು ರಂಗಣ್ಣನ ಅರಮನೆ ಮುಂದೆ. ಜುಂಜಪ್ಪ ಮುಂದೆ, ಅವನಿಂದೆ ಮಾರಣ್ಣ-ಮೈಲಣ್ಣನೂ ಬಂದ್ರು. ಕಂಬೇರು ಆಗಲೇ ಬಂದುಬಿಟ್ಟು ರಂಗಣ್ಣನ ಅರಮನೆ ಒಳಗೆ ಮೊದಲೇ ಸೇರಿಕೊಂಡು ಬಿಟ್ಟಿದ್ದರು.

ಚೇಳೂರ ಊರ ಮುಂದಲ ಅರಳಿಕಟ್ಟೆ ಮೇಲೆ ರತ್ನಕಂಬಳಿ ಹಾಸಿತ್ತು. ಬಂದವನೇ ಜುಂಜಪ್ಪ ಅದರ ಮೇಲೆ ಕರಿ ಕಂಬಳಿ ಹಾಸಿದ. ಭೂತಾಯಿಗೆ ಶರಣು ಮಾಡಿ ಕುಂತುಕೊಂಡ. ರಾಜ ರಂಗಪ್ಪನೂ ಬಂದ. ಅವುನ್ ಅರಮನೆ ಸಿಬ್ಬಂದಿಗಳೂ ಬಂದ್ರು. ಆವಾಗ ಏನಾತಪ್ಪ ಅಂದ್ರೆ ಜುಂಜಪ್ಪ ಹೇಳುತಾನೆ. 'ದೊರೆಯೆ, ಪ್ರಜಾಪಾಲಕರೆ, ಕಾಣೆ ಅಂದಿರಾ, ಕಂಡೆ ಅಂದಿರಾ? ಇದು ಸಮಸ್ತರ ಮಾತು. ಆಟ ಆಡೋ ಮುಂದೆ ಚೇಳೂರು ಗೌಡಗಳು, ಶ್ಯಾನುಭೋಗರು ಬರಬೇಕು. ಕಾಗದ ಪತ್ರ ತರಬೇಕು, ಮಸಿಕುಡಿಕೆ ತರಬೇಕು, ಲೇಖನಿ ಸೀಸದ ಕಡ್ಡಿ ತರಬೇಕು. ಯಾರು ಸೋತರೆ ಏನು ಕೊಡಬೇಕು, ಯಾರಾರ ಷರತ್ತು ಏನು ಅಂಬೋದನ್ನು ಕಾಜಗದಮೇಲೆ ಬರೆಸಬೇಕು' ಅಂದನು. ಜುಂಜಪ್ಪ ಹೇಳಿದಂತೆ ರಾಜ ರಂಗಪ್ಪನಾಯಕ ಚೇಳೂರು ಗೌಡಗಳನ್ನೂ, ಶ್ಯಾನುಭೋಗರನ್ನೂ ಕರೆಸಿದ. ಮಧ್ಯಸ್ತಿಕೆಗೆ ಒಪ್ಪಿಸಿದ. ಆಟನ ಶುರು ಮಾಡಿದರು.

ಮೊದಲು ದೊರೆ ರಂಗಪ್ಪನಾಯಕನ ಸರದಿ. ಕವಡೆ ಆಡಿಸಿ ಬಿಟ್ಟ. ಸೋಲಾತು. ಇದು ದೇವರಾಟ ಅಂದ. ಇನ್ನೂ ಮೂರು ಆಟ ಅವೆ ಅಂದ. ಮೊದಲ ಪಗಡೆ ಉರುಳಿಸಿದ, ಸೋಲಾತು. ಎರಡನೇ ಆಟನೂ ಸೋಲಾತು. ಮೂರನೇ ಕಾಯಿನೂ ಮಕಾಡೆ ಬಿದ್ದು. ಸರಿ ಚೇಳೂರು ರಂಗಪ್ಪ ತನ್ನ ಸರದಿ ಮುಗಿಸಿಕೊಂಡ. ಈಗ ಜುಂಜಪ್ಪನ ಸರದಿ ಬಂತು. ಸ್ವಾಮಿ ಜುಂಜಪ್ಪ ಕವಡೆ ಕಾಯಿಗಳನ್ನು ಕೈಗೆತ್ತಿಕೊಂಡ. ಸ್ವಾಮಿ ಶಂಕರನ ನೆನೆದ.

ಗೌರಸಂದ್ರದ ಮಾರಮ್ಮನ ನೆನೆದ. ಸುತ್ತೇಳು ದೇವತೆರನ್ನ ನೆನೆದ. ಸ್ವಾಮಿ ದುಷ್ವೇಶ್ವರನ್ನ ನೆನೆದು ಪ್ರಜೆಪಾಲಕರನ್ನು ನೆನೆದು ಕೈಯೆತ್ತಿ ಕೈಮುಗಿದು ಆಟ ಸುರು ಮಾಡಿದ. ಮೊದಲ ಆಟ ಕಾಯಿ ಉರುಳಿಬಿಟ್ಟ. ಕವಡೆ ಎಲ್ಲ ಮೇಲ್ಮುಖವಾಗಿ ಬಿದ್ದವು. ಜುಂಜಪ್ಪನಿಗೆ ಗೆಲುವಾಯಿತು. ಎರಡನೇ ಆಟ ಆಡಿದ, ಅದರಲ್ಲೂ ಜುಂಜಪ್ಪ ಗೆದ್ದ. ಮೂರು ಆಟ ಆಡಿದ ಮೂರರಲ್ಲೂ ಜುಂಜಪ್ಪ ಗೆದ್ದ. ಯಾವಾಗ ಜುಂಜಪ್ಪ ಗೆದ್ದನೋ, ಸೇರಿದ್ದ ಜನವಾದಿ ಜನವೆಲ್ಲ ಕೇಕೆ ಹಾಕಿಬಿಟ್ರು. ಸಿಳ್ಳೆ ಹೊಡೆದುಬಿಟ್ಟರು. 'ಗೊಲ್ಲರ ಜುಂಜಪ್ಪ ಇನ್ನು ಮೇಲೆ ಚೇಳೂರು ರಾಜ' ಅಂತಾ ಕೂಗಾಡಿದರು. ಅದರಂತೆ ಗೌಡರು, ಶ್ಯಾನುಭೋಗರು ಕೂಡಿಕೊಂಡು ಕಾಗದದ ಮೇಲೆ ಬರೆದರು. ರಂಗಪ್ಪನಾಯಕ 'ನಾನು ಸೋತೆ, ನನ್ನ ರಾಜ್ಯ ಇನ್ನು ಮುಂದೆ ಜುಂಜಪ್ಪನದು' ಅಂತಾ ಬರೆದು ರುಜು ಮಾಡಿದ. ಜುಂಜಪ್ಪ 'ರಾಜ್ಯ ನನ್ನದು' ಅಂಬ್ತಾ ಬರೆಸಿ ಹೆಬ್ಬೆಟ್ಟು ಒತ್ತಿಕೊಂಡು ಮೇಲೆದ್ದರು.

ಚೇಳೂರು ಜುಂಜಪ್ಪನ ವಶವಾಯಿತು. ಹೂತೋಟ, ಹುಲ್ಲು ಕೊಪ್ಪಲು ಜುಂಜಪ್ಪನದು ಆತು. ಜುಂಜಪ್ಪ ಎದ್ದು ಸೀದಾ ತಮ್ಮ ಗೋವುಗಳ ತವಕೆ ಬಂದುಬಿಟ್ಟ. ಮೂರು ದಿನ ಕಳೆಯಿತು. ಚೇಳೂರು ದೊರೆಗಳು ಏನೂ ಆಗದವರಂತೆ ಸುಮ್ಮನೆ ಅರಮನೆಗೆ ಅವುರೆ. ಜುಂಜಪ್ಪ ಯೋಚನೆ ಮಾಡಿದ, ಇವರಿಗೆ ಪಾಠ ಕಲಿಸಬೇಕೆಂದು ಚಿಂತಿಸಿದ. ಸೀದ ಚೇಳೂರ ಊರೊಳಿಕೆ ಹೋದ. ಅರಮನೆ ಮುಂದೆ ನಿಂತುಕೊಂಡು, ದೊರೆ ರಂಗಪ್ಪನನ್ನು ಕರೆದ. 'ಚೇಳೂರು ನಮ್ಮದಾತು, ದೊರೆತನ ನಮ್ಮದಾತು. ಇನ್ನೂ ಯಾಕ್ರಯ್ಯ ಅರಮನೆಗೆ ಇದ್ದೀರ? ಮಾತಿನಂತೆ ಹೊರಕೆ ಬನ್ನಿ' ಅಂದನು.

'ಹೇಳಿದ ಮಾತಿನಂತೆ ಚೇಳೂರು ಆಡಳಿತ ಬಿಟ್ಟುಕೊಡಬೇಕು' ಅಂದುಬಿಟ್ಟ. ಇವನೇನು ಮಾಡುತಾನೆ ಹೆರಿಗೊಲ್ಲ ಅಂದುಕೊಂಡುಬಿಟ್ಟಿದ್ದ ಪಾಳೆಗಾರರಿಗೆ ಈಗ ಸಣ್ಣಗೆ ಬೇದಿ ಅದಂಗೆ ಆತು. ಮುಂದೆ ಹೇಳಿದ ಜುಂಜಪ್ಪ ಗೌಡ ಶ್ಯಾನುಭೋಗರನ್ನು ಕರೆಸಿದ. ಆ ಹೊತ್ತು ಬರೆಸಿದ್ದ ಪತ್ರ ಓದಿಸಿದ. ಅದರಲ್ಲಿ ಜುಂಜಪ್ಪ ಗೆದ್ದು, ಚೇಳೂರು ದೊರೆಗಳು ಸೋತರೆ ದೊರೆಗಳು ಜುಂಜಪ್ಪನಿಗೆ ರಾಜ್ಯ ಬಿಟ್ಟು ಕೊಟ್ಟು ಏಳು ವರ್ಷ ಮಣ್ಣು ವಡ್ಡರಾಗಿ, ಕೂಲಿ ಆಳಾಗಿ ಚೇಳೂರು ಕೆರೆ ಕಟ್ಟಬೇಕು. ಚೇಳೂರು ಸೀಮೆಗೆ ಜುಂಜಪ್ಪ ಕೈಗೊಳ್ಳೊ ಕಲ್ಯಾಣ ಕಾರ್ಯಗಳಲ್ಲಿ ತಟ್ಟೆ ತಗೊಂಡು, ಹಾರೆ ಸಲಿಕೆ ತಕ್ಕೊಂಡು ಆಳುಗಳಾಗಿ ರಂಗಣ್ಣ ದುಡಿಯಬೇಕು ಹಂಗಂತಾ ಬರೆಸಿದ್ರು. ಈಗ ಜುಂಜಪ್ಪ ಎಲ್ಲರ ಮುಂದೆ ಕೇಳಿದ. ಜನಾದಿ ಜನವೆಲ್ಲ 'ಅಲಾ ಅಲಾ ಜುಂಜಪ್ಪ, ಸತ್ಯವಂತ ಕಣಲಾ. ಸತ್ತಿರೋ ಬಸವನ ಎಬ್ಬಿಸಿದ ಧೀರ. ಕವಡೆ ಆಡೋಕೆ ಬರೋದಿಲ್ಲ ಅಂದೋನು ಪಾಳೆಗಾರರನ್ನೇ ಸೋಲಿಸಿದ ಧೀರ. ಸತ್ಯವಂತ. ಯಾವ ತಾಯಿ ಹಡೆದ ಮಗನಪ್ಪ' ಅಂಬ್ತಾ ಎಲ್ಲರೂ ಬಾಯಿ ಮೇಲೆ

ಕೈಯಿಕ್ಕಿಕೊಂಡರು. ಈ ನನ್ನ ಮಕ್ಕಳು ಕಂಬೇರಗೊಲ್ಲರು ಭಾರೀ ಮೋಸಗಾರರು. ಇವುರ ಮಾತು ಕೇಳಿ ಹಾಳಾಗೋದೆವಲ್ಲಪ್ಪ. ಕೆಟ್ವೆವೋ ಸತ್ತೆವೋ ಅಂಬ್ತಾ ಚೇಳೂರು ದೊರೆಗಳು ಧೋತರ ಕಳಚಿ, ಬಿಳಿ ಅಂಗಿ ತೆಗೆದು ಜೋಡು ಮೆಟ್ಟು ಕಳಚಿ ಹಾರೆ, ಪಿಕಾಸಿ, ಗುದ್ದಲಿ ಹಿಡಿದು ಚೇಳೂರು ಕೆರೆ ಕಟ್ಟಕ್ಕೆ ಸೋಪ್ತಿಯಾದರು. ಆಮೇಲೆ ಬಸವ ದೊಗ್ಗಾಲು ಮಂಡಿ ಊರಿಕೊಂಡು ಎದ್ದು ಕೋಟೆ ಕೆಡವಿತ್ತಲ್ಲ, ಅಲ್ಲೇ ನೂರೊಂದು ಹಿಡಿ ಮರಳ್ಹಾಕಿ ದೊಡ್ಡ ನಂದಿ ಬಸವನ ದೇವಸ್ಥಾನ ಕಟ್ಟಿಸಿದನು. ಅದೇ ಈಗ ಮರಳು ಬಸವಣ್ಣನ ದೇವಸ್ಥಾನವಾಗಿ ಪ್ರಸಿದ್ಧವಾಗಿದೆ. ಚೇಳೂರು ಬಾವಿ ತೋಡಿಸಿದನು. ಇದಕ್ಕೆ ಸಾಕ್ಷಿಯಾಗಿ ಚೇಳೂರು ಊರ ಬಾಗಿಲಲ್ಲಿ ಕಲ್ಲು ಬಸವಣ್ಣನ ಕಡೆಸಿ ನಿಲ್ಲಿಸಿದ. ಊರ ಬಾಗಿಲು ಹುದಿಗೆ ಕಲ್ಲು ಕೋಳಿ ಕಡೆಸಿದ.

ಒಂಬತ್ತು ತಿಂಗಳು ಚೇಳೂರು ದೊರೆಸ್ತಾನ ಮಾಡಿದ ಜುಂಜಪ್ಪ ಆಳಾಗಿ ದುಡಿಯುತ್ತಿದ್ದ ತಳವಾರ ಮಕ್ಕಳನ್ನು ಕರೆದು, ಗೌಡ ಶಾನುಭೋಗರನ್ನು ಕರೆದು ಹೇಳಿದ, 'ಈ ರಾಜ್ಯ ಸ್ಥಿರವಲ್ಲ. ನನಗೆ ರಾಜ್ಯ ಬೇಡ. ಆದರೆ ನ್ಯಾಯವಾಗಿ ಪರಿಪಾಲಿಸಪ್ಪ' ಅಂತೇಳಿ ನಾಯಕ ಮಕ್ಕಳಿಗೆ ರಾಜ್ಯ ಒಪ್ಪಿಸಿದನು. ಅವರು 'ಮಾಡಬಾರದ ತಪ್ಪು ಮಾಡಿದೆವು, ಸ್ವಾಮಿ ನಿನ್ನ ಹೆಸರೇಳಿಕೊಂಡು ದೀಪ ಹಚ್ಚುತೀವಿ. ನಿನ್ನ ಹೆಸರಲ್ಲೇ ದೀಪಾವಳಿ ಹಬ್ಬಾನೂ ಮಾಡುತೀವಿ' ಅಂದ್ರು. ರಾಜ್ಯ ಒಪ್ಪಿಸಿದ ಜುಂಜಪ್ಪ ಸತ್ಯವಂತರು ಶರಣರು ಬಸವನ ನಾಯಕರು ಹಿಡಿಯುವಾಗ ಬೋರಾಡಿ ಗುದ್ರ ಬಿದ್ದ ಜಾಗದಲ್ಲಿ ನೂರು ಶರಣರಿಂದ ನೂರೊಂದು ಹಿಡಿ ಮರಳು, ನೂರೊಂದು ಕಾಸಿಕಣಗಲು ಹೂವು, ನೂರೊಂದು ಬಿಂದಿಗೆ ನೀರು ಹಾಕಿ ಮರಳು ಬಸವನ ಸ್ಥಾಪಿಸಿದನು. ಸ್ವಾಮಿ ಬೆಳೆದು ಒಂದು ಊರು ದಪ್ಪವಾಗುತ್ತೆ ಬಸವ. ಮುಂದೆ ಈ ಬಸವ ಉಡ್ರಿಕೆ ಹಾಕಿರೆ ಚೇಳೂರು ಬಾವಿ ತುಂಬಿ ಮೇಲಕ್ಕೆ ಬಂದ್ರೆ, ಚೇಳೂರು ಊರು ಬಾಗಿಲಾಗಿರೋ ಕಲ್ಲುಕೋಳಿ ಕೂಗಿರೆ ಈ ಪ್ರಪಂಚ ತಲೆಕೆಳಗಾಗಲಿ. ಲೋಕ ಪ್ರಳಯವಾಗಲಿ ಅಂಬ್ತಾ ಸ್ವಾಮಿ ಶಾಪ ಹಾಕಿಬಿಟ್ಟು, ನಾಯಕ ಮಕ್ಕಳಿಗೆ ರಾಜ್ಯ ಕೊಟ್ಟು ಹೊರಟುಬಿಟ್ಟ.

ರಾಜ್ಯನ ದೊರೆ ರಂಗಪ್ಪ ನಾಯಕನಿಗೆ ಬಿಟ್ಟು ಬಿಟ್ಟು ಧರ್ಮಕಾರ್ಯದಲ್ಲಿ ರಾಜ್ಯ ಪರಿಪಾಲಿಸಬೇಕೆಂದು ಹೇಳಿಬಿಟ್ಟು ತಮ್ಮಗಳ ಕರಕೊಂಡು ದನ ಹೊಡೆಕೊಂಡು ಸಿರಾ ಸೀಮೆ ಕಡೆ ಜುಂಜಪ್ಪ ಬಂದುಬಿಟ್ಟ.

ಕೆಲವರು ಹೇಳುತಾರೆ ಜುಂಜಪ್ಪ ಚೇಳೂರು ಪೇಟೆನ ಏಳು ವರ್ಷ ಆಳಿದನೆಂದರೆ ಕೆಲವರು ಇಲ್ಲ ಕಂಡವರ ಆಸ್ತಿ, ಅಡವು ನಮಗಾಗಲ್ಲ. ಅವುರಿಗೆ ಬುದ್ಧಿ ಕಲಿಸಾಕೆ ಮಾತ್ರ



ಜುಂಜಪ್ಪ ಒಂಬತ್ತು ತಿಂಗಳು ಮಾತ್ರ ಚೇಳೂರು ಪಟ್ಟಣ ಆಳಿದ. ಆವಾಗಲೇ ಕೆರೆನೂ ಕಟ್ಟಿಸಿ ಹಗಲಿರುಳು ಬಸವೇಶ್ವರ ದೇವಸ್ಥಾನ ಕಟ್ಟಿಸಿಬಿಟ್ಟು, ಜುಂಜಪ್ಪ ಚೇಳೂರು ಪಟ್ಟಣ ಆಳಿದುದಕ್ಕೆ ನೆನಪಿರಲಿ ಅಂದುಬಿಟ್ಟು ಹೇಳಿ ಹೊರಟುಹೋದ ಅಂತಲೂ ಕಥೆ ಹೇಳುತಾರೆ. ಚೇಳೂರು ಸೀಮೆಗೆ ಜುಂಜಪ್ಪನ ದನ ಈಜಾಡಿಕೊಂಡು ಮೇಯ್ತು. ಮಂಚಲದೊರೆ ಮದಗದ ಹತ್ರ ಗೂಡಾಕಿಕೊಂಡು ಸ್ವಾಮಿ ದನಗಳು ಜೋಪಾನ ಮಾಡಿದನು. ಆಮೇಲೆ ಬಂದು ಸ್ವಾಮಿ ತಮ್ಮ ಚಿಕ್ಕತಮ್ಮ ದೊಡ್ಡ ತಮ್ಮಗಳ ಕರೆದು ಹೇಳಿದ. ನಾವಿಲ್ಲಿ ಇರಬಾರದು. ನಮ್ಮ ಸೀಮೆಗೆ ನಾವು ಹೋಗಾನ. ನಡೀರಿ ಎಂದು ದನಗಳನ್ನ ಹೊಡೆದುಕೊಂಡು ಸಿರಾ ಸೀಮೆಗೆ ಬಂದುಬಿಟ್ರು. ಕಂಬದಹಳ್ಳಿ ಏಣಿನಾಗೆ ದನಗಳಿಗೆ ಲಕ್ಷದ ಗೂಡಾಕಿದೆ. ದನಗಳು ಮಂಚಲದೊರೆ ಮದಗದಿಂದ ಹಿಡಿದು ಹೊಸೂರು ಕೆರೆಗುಂಟ ಕೆದರಿಕೊಂಡು ಮೇಯುತ್ತಿದ್ದವು. ಸಿರಾ ಕೆರೆಗೆ ನೀರಿಗೆ ಬರುತ್ತಿದ್ದವು. ಹಾಲುಕೂರುಗೆ ಹಾಲು ಕರೆದು ಸ್ವಾಮಿ ಜುಂಜಪ್ಪ ಮಾರಣ್ಣ ಮೈಲಣ್ಣರ ಕೂಟೆ, ಕಳುವಾರಹಳ್ಳಿಗೆ ಕಳುಸಾದು ಸಿರಾ ಪಟ್ಟಣಕ್ಕೆ ಹಾಲು ಕೊಡಾದು ಮಾಡ್ತಾ ಇದ್ದ.

## ತಲೆಮಗನಾದ ಮಾದಿಗರ ಈರೋಬ

ಜುಂಜಪ್ಪನ ದನಗಳು ಹುಲ್ಲು-ನೀರಿಗಾಗಿ ಪರಸ್ಥಳ ಬಂದಿದ್ವು. ಚೇಳೂರು ರಂಗಣ್ಣನನ್ನು ಗೆದ್ದು ಚೇಳೂರು ಕಾವಲನ್ನು ಜುಂಜಪ್ಪ ತನ್ನದನ್ನಾಗಿಸಿಕೊಂಡಿದ್ದನು. ಆದರೂ ಧರ್ಮದಿಂದಲೇ ಚೇಳೂರನ್ನು ಪರಿಪಾಲಿಸುತ್ತಾ ಇದ್ದ. ಚೇಳೂರು ರಂಗಣ್ಣನನ್ನು, ಅವುನ ಸೈನಿಕರನ್ನು ಸುಮ್ಮನೆ ಕೂರಿಸಬಾರದೆಂದು, ಜುಂಜಪ್ಪ ಚೇಳೂರು ಕೆರೆ ಕಟ್ಟಿಸುತ್ತಾನೆ. ಕೆರೆ ಏರಿಗೆ ಮಣ್ಣು ಹೊರಿಸುತ್ತಾನೆ. ಚೇಳೂರು ಊರ ಮುಂದಲ ಹನ್ನೆರಡಾಳುದ್ದದ ಕಲ್ಲುಬಾವಿ ತೋಡಿಸುತ್ತಾನೆ. ಅದಕೆಲ್ಲಾ ಪಾಳೆಯಗಾರ ರಂಗಪ್ಪನೂ, ಅವುನ ಆಳುಗಳನ್ನು ಕೂಲಿ ಆಳು ಮಕ್ಕಳಾಗಿಸಿಕೊಳ್ಳುತ್ತಾನೆ. ಹಿಂಗೆ ಜುಂಜಪ್ಪನ ಕೀರ್ತಿ ಸುತ್ತಲ ಹಳ್ಳಿಗಳಿಗೆಲ್ಲಾ ಹರಡಿಬಿಡುತ್ತೆ. ಜುಂಜಪ್ಪ, ಗೊಲ್ಲರ ಹುಡುಗನಂತೆ, ದೇವರಂತೆ, ಅವುನು ಮುಟ್ಟಿದ್ದು ಚಿನ್ನವಾಗುತ್ತಂತೆ, ಹಾವುಗಳ ಹಾಸಿಗೆ ಮೇಲೆ ಮಲಗುತಾನಂತೆ, ಚೇಳಿನವು ತಲೆದಿಂಬಂತೆ. ಹಸಿ ಅಕ್ಕಿ, ನೆನೆಗಡಲೆ ಅವುನ ಊಟವಂತೆ, ಒಬ್ಬನೇ ಒಬ್ಬ ಚೇಳೂರು ದೊರೆನ ಸೋಲಿಸಿ, ಅವುನ್ನ ಕೆರೆ ಕಟ್ಟೋ ಕೆಲಸದ ಆಳು ಮಾಡಿಕೊಂಡನಂತೆ, ಅಂತೆಂಬಾ ಸುದ್ದಿ ಎಲ್ಲಾ ಕಡೆಗೂ ಹಬ್ಬಿಬಿಡ್ತು. ಇತ್ತ ಜುಂಜಪ್ಪನ ದನಗಳು ರಾಜಾರೋಷವಾಗಿ ಅಡವಿಹುಲ್ಲು ಮೇಯ್ದು, ಮಡುವಿನ ನೀರು ಕುಡಿದು, ಆನಂದವಾಗಿದ್ದವು. ಚೇಳೂರು ಕಾವಲಿಂದ ಮಂಚಲದೊರೆ ಮದಗದಾಚೆ, ಹಾಗಲವಾಡಿ ಕಾನದವರೆಗೂ, ಜುಂಜಪ್ಪನ ದನಗಳು ಮೇಯುತ್ತಿದ್ದವು.


ಹಾಗಲವಾಡಿ ಈರಲಿಂಗಪ್ಪ, ಕದರಮ್ಮ ಅಂಬ್ತಾ ಗಂಡಹೆಂಡಿರು. ಮಣೇಗಾರರು ದೊಡ್ಡ ಸಂಸಾರ. ಹನ್ನೆರಡು ಗಂಡುಮಕ್ಕಳು, ಬಡತನ. ತಿನ್ನಾಕೆ ಏನೂ ಇಲ್ಲದ ಕುಟುಂಬ. ಒಂದಿನ ಈರಲಿಂಗಪ್ಪ ಏನು ಯೋಚನೆ ಮಾಡುತಾನಪ ಅಂದರೆ, 'ಅಯ್ಯೋ ನಮಗೆ ತಿಂಬಾಕೆ ಅನ್ನವಿಲ್ಲ' ಅಂಬ್ತಾ ಯೋಚನೆ ಮಾಡುತ್ತಿದ್ದರು. ಜುಂಜಪ್ಪನ ಇಚಾರ ಕೇಳಿದ್ರು. ಅವನ ದನ ಕಾಯೋಕೆ ಯಂಗೂ ಆಳುಗಳು ಬೇಕಾಗುತ್ತೆ ಅಂದುಬಿಟ್ಟು ಈ ಹುಡುಗ ಈರೋಬನನ್ನು ತಂದು ಕಾಡಿಗೆ ಬಿಟ್ಟುಬಿಟ್ರು. ಕಾಡಿಗೆ ಯಾಕೆ ಬಿಟ್ರಪ್ಪ, ಜುಂಜಪ್ಪನಿಗೆ

ಕೊಡುಬದಿತ್ತಲ್ಲವೆ? ಅಂದರೆ ಇವರು ಮಣೆಗಾರರು ಅವರು ಜುಂಜಪ್ಪನಿಗೆ ಮೈಲಿಗೆ ಆಗುತ್ತೆ, ಹತ್ತಿರ ಹೋಗಬಾರದು ಅಂಬ್ತಾ ಅಂಗೆ ಮಾಡಿದರು. ಆಮೇಲೆ ಈ ಮಗ ಕಾಡಿನಾಗೆ ಅಳುತಾ ತಿರುಗುವಾಗ, ಮಾರಣ್ಣ-ಮೈಲಣ್ಣರು ಕಂಡ್ರು. ಆ ಮಗುವನ್ನು ಜುಂಜಪ್ಪನ ತಕೆ ಕರೆಕೊಂಡು ಬಂದುಬಿಟ್ರು. ಜುಂಜಪ್ಪ ಚಿಕ್ಕರೆಂಬ ಎಂಬ ಹಸುವಿನಾಗೆ, ಹಾಲು ಕುಡಿಯಬೇಕೆಂದು ಅಪ್ಪಣೆ ಕೊಡಿಸಿದ, ಆ ಹುಡುಗನಿಗೆ. ಈರೋಬ ಎಂದು ನಾಮಕರಣ ಮಾಡಿ, ತನ್ನ ದನಗಳ ಗೂಡೊಳಗೆ ಮಗುವನ್ನು ಬೆಳೆಸಿ ದೊಡ್ಡದು ಮಾಡಿದ.

ಬೆಳೆಯುತಾ ಬೆಳೆಯುತಾ ಹುಡುಗ ದೊಡ್ಡದಾಯ್ತು. ಹಿಂಗಿರಬೇಕಾದ್ರೆ ಒಂದು ಸರ್ತಿ ಏನಾತಪ್ಪ ಅಂದ್ರೆ, ಜುಂಜಪ್ಪನ ದನಗಳ ಪೈಕಿ ಒಂದು ಹೋರಿಕರು ಸತ್ತೋತು. ಆದ್ರೆ ಈ ಹುಡುಗ ಈರೋಬ ಏನು ಮಾಡಿತು ಅಂದ್ರೆ, ಆ ಬಸವನ ಬಿಸಾಕಿದ್ರಲ್ಲ ಅಲ್ಲಿಗೆ ಹೋಗಿ, ಅದರ ಚಕ್ಕಳ ಸುಲಿದು, ಅಂಗೆ ಕಾಡಾಗೆ ಒಣಗಿಸಿ, ಜುಂಜಪ್ಪನ ಪಾದಕ್ಕೆ ಒಂದು ಜೊತೆ ಮೆಟ್ಟು ಮಾಡಿಕೊಂಡು ಬಂತು. ಜುಂಜಪ್ಪನಿಗೆ ಈ ಹುಡುಗ ಮಣೇಗಾರನು ಅಂಬೋದು ತಿಳಿದೋಯ್ತು. ಆಗ ಆ ಹುಡುಗನ್ನ ನಾಲಿಗೆ ಸುಡಿಸಿ, ಪ್ರಾಣಿ ದನಗಳಿಗೆ ತೊಂದ್ರೆ ಮಾಡದಂಗೆ, ಹೇಳಿಬಿಟ್ಟು ವಚನ ತಗೊಂಡ. ಮಾಂಸ ಮಡ್ಡಿ ಮುಟ್ಟದಂಗೆ ಇರಬೇಕೆಂದು ಕಟ್ಟು ಕರಾರು ಹಾಕಿದ. ನೀನು ನನ್ನ ಒಡಹುಟ್ಟಿದವನಂತೆ ಇರಬೇಕೆಂದು ತಿಳಿಸಿ, ತನ್ನವನನ್ನಾಗಿ ಮಾಡಿಕೊಂಡ.

ಹೀಗೆ ಸ್ವಲ್ಪ ಕಾಲ ಕಳೆದರು. ಈ ಹುಡುಗನೂ ಅಷ್ಟೇ ದನಗಳನ್ನು ನ್ಯಾರವಾಗಿ ಮೇಯಿಸೋದು, ಅವುಗಳ ಆರೈಕೆ ಮಾಡೋದು, ನೇರುಪಾಗಿ ಮಾಡಿಕೊಂಡು ಇತ್ತು. ಆಮೇಲೆ ದಿನಾ ಚೇಳೂರು ಬಯಲಿಂದ ಕಳುವಾರಳ್ಳಿಗೆ ಹಾಲು-ಮೊಸರು ತರುತಾ ಇದ್ರಲ್ಲ ಮಾರಣ್ಣ-ಮೈಲಣ್ಣ ಅವುರ ಜೊತೆಗೆ ಈ ಹುಡುಗನೂ ಸೇರಿಕೊಂಡು ಬಿಡ್ತು. ಮುಂದೆ ಈ ಹುಡುಗ ಕುವಾರಹಳ್ಳಿಯೊಳಗೆ ಚಿನ್ನಮ್ಮನ ಮನೆಯಾಗೆ ನೀರು-ನೀಡಿ ನೋಡಿಕೊಂಡು ಚಿನ್ನಮ್ಮನ ಸೇವೆ ಮಾಡಿಕೊಂಡು ಇತ್ತು.

ಒಂದು ದಿನ ಈ ಹುಡುಗ ರೊಟ್ಟಿ ಬುತ್ತಿ ತಗೊಂಡು, ದನಿನ ಗೂಡಿಗೆ ಬರುವಾಗ ಇದ್ರಲ್ಲ, ಆ ಕಂಬೇರು ಹಿಡುಕೊಂಡುಬಿಟ್ರು. ಹಿಡಕೊಂಡು ಕಲ್ಲುಗುಂಡಿ ತೆಗೆದು ತಲೆ ಮುಂದಾಗಿ ಹೂಣಾಕಿಬಿಟ್ರು. ಈ ಸುದ್ದಿಯನ್ನು ಅಲ್ಲೇ ಕುರಿಯುತ್ತಿದ್ದ ಕುರುಬರ ಬೀರಣ್ಣ ಅಂಬೋನು ಓಡೋಡಿ ಬಂದು ಚಿನ್ನಮ್ಮನಿಗೆ ತಿಳಿಸುತ್ತಾನೆ. ಈ ಸುದ್ದಿ ತಿಳಿಯುತ್ತಿದ್ದಂಗೆ ಚಿನ್ನಮ್ಮ ಸಾಕುಮಗ ಸತ್ತ ಮೇಲೆ ಮಗ ಸತ್ತಂಗೆ, ಅಂಬ್ತಾಲೇ ತಿಳಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳಾಕೆ ಸಿದ್ಧವಾಗುತಾಳೆ. ಈ ಸಂಗತಿ ತಿಳಿದು ಜುಂಜಪ್ಪ ಓಡೋಡಿ ಬಂದು ತಾಯಿ ಬೆಂಕಿಗೆ ಬೀಳುವುದನ್ನು ತಪ್ಪಿಸಿ, ಚಿನ್ನಮ್ಮನ ಬದುಕಿಸಿಕೊಳ್ಳುತ್ತಾನೆ. ಸೋದರ



ಮಾವುಗಳು ಮಾಡಿದ ಮೋಸದಿಂದ ಬ್ಯಾಸರ ಮಾಡಿಕೊಂಡ ಜುಂಜಪ್ಪ, ಈರೋಬನನ್ನು ಬದುಕಿಸಿಕೊಳ್ಳುತ್ತಾನೆ. ಕಂಬೇರ ಗೊಲ್ಲರು ಸತ್ತಾಗ ತಲೆಗೋವಿ ತಿವಿಯೋಕೆ ಮಣೆಗಾರ ಪೈಕಿ ಯಾರಾದರೂ ಒಬ್ಬರು ಬಂದು ಗುಡ್ಡೆಶಾಸ್ತ್ರ ಮಾಡೇಮಾಡಬೇಕೆಂದು ಸಂಪ್ರದಾಯವಿದೆ.

# ದೀಪ ಏರಿಸೋ ಹಬ್ಬ

ಗೊಲ್ಲರಿಗೆ ದೀಪ ಏರಿಸೋ ಹಬ್ಬ ಬಲು ದೊಡ್ಡ ಹಬ್ಬ. ಅದನ್ನೇ ದೀಪಾವಳಿ ಅಂಬ್ತಾ ಕರೀತಾರೆ. ಹಿರಿಯರಿಗೆ ಹಾಲು ತುಪ್ಪ ಎರೆಯೋ ಹಬ್ಬ. ಇದನ್ನು ಹಾಲಬ್ಬ ಅಂತಲೂ ಕರೆಯುತಾರೆ. ಜುಂಜಪ್ಪ ಚೇಳೂರಿನಿಂದ ಹಿಂತಿರುಗಿ ಬಂದ ಮೇಲೆ ಹಾಲಬ್ಬ ಮಾಡಬೇಕೆಂದು ತೀರ್ಮಾನಿಸುತ್ತಾನೆ. ಹಾಲಬ್ಬಕ್ಕೆ ಜಿನ್ನಿಗೆ ಹಾಲು, ಹೊಸಬಟ್ಟೆ, ಹೊಸ ಮಡಿಕೆ ಎಲ್ಲನೂ ಬೇಕು.

ದೊಡ್ಡಕ್ಕ ಅಂತ ಇದ್ದಳು. ಅವುಳು ಬೇರೆಯಲ್ಲ ಜುಂಜಪ್ಪನ ಅಜ್ಜಿ ಹೊನ್ನಟ್ಟಿ ಆಲೇಗೌಡರ ಹೆಂಡತಿ. ಒಂದು ಚೂರು ಸಿಡುಕಿನ ಸ್ವಭಾವದ ಹೆಂಗಸು. ಗಂಡ ಆಲೇಗೌಡರ ಮಾತೂ ಕೇಳೋಳಲ್ಲ. ಬೇಸಾಯ ಅಂದ್ರೆ ಅವುಳಿಗೆ ಪ್ರಾಣ. ಒಂದತ್ತು ಎಕರೆ ಎರೆ ಹೊಲದಾಗೆ ಅವರೆ ಗಿಡ ಬೆಳೆಸಿದ್ದಳು. ಕಾಯಿ ಗೊನೆಯೊಡೆದು ಹಣೆಮಟ್ಟ ನಿಂತುಬಿಟ್ಟಿತ್ತು. ದಾರಿಗೆ ಹೋಗೋರೆಲ್ಲಾ ಯಾವ ಪುಣ್ಯಾತ್ಮನದೋ ಇಷ್ಟೊಂದು ಚೆನ್ನಾಗಿ ಅವರೆಗಿಡ ಬೆಳೆಸವರೆ ಅಂಬ್ತಾ ಬಾಯಿ ನೀರು ಕುಡಕೊಂಡು ಹೋಗುತ್ತಿದ್ದರು. ಅಂಥ ಅವರೆಕಾಯಿ ನೋಡಿ ಜುಂಜಪ್ಪನೂ ಆಸೆಪಟ್ಟ. ಹಿರಿಯರ ಹಬ್ಬ ಮಾಡಬೇಕು. ದೀಪ ಏರಿಸೋ ಹಬ್ಬ, ಹಾಲು-ತುಪ್ಪ ಬಿಡೋ ಹಬ್ಬ. ಅದಕೆ ನಮ್ಮ ಹಿರಿಯಜ್ಜಿ ದೊಡ್ಡಕ್ಕನ ಹೊಲಕೆ ಹೋಗಿ ಮೂರು ಹಿಡಿ ಅವರೆಕಾಯಿ ತಗೊಂಡು ಬರ್ರಿ ಅಂಮ್ತಾ ಜುಂಜಪ್ಪ ಸಣ್ಣ ತಮ್ಮಂದಿರಿಗೆ ಹೇಳಿ ಕಳುಹಿಸಿದನು. ಈ ಹುಡುಗರು ಬಂದ್ರು. ಬಂದವರೆ ಅವರು ಅಜ್ಜಿ ದೊಡ್ಡಮ್ಮನಿಗೆ ಶರಣು ಮಾಡಿದರು. 'ಏನ್ರಪ್ಪ ಬಂದದ್ದು?' ಅಂತ ಆವಜ್ಜಿ ಕೇಳಿತು. 'ಏನಿಲ್ಲ ಕಣಜ್ಜಿ, ನಮ್ಮಣ್ಣ ಕಳುಹಿಸಿದ. ನಮ್ಮ ಹಿರಿಯರ ಹಬ್ಬ, ಹಾಲು-ತುಪ್ಪದ ಹಬ್ಬ, ದೀಪ ಏರಿಸೋ ಹಬ್ಬ. ದೀಪಾವಳಿ ಹಬ್ಬ ಅಂತಲೂ ಕರೀತಾರೆ. ಆ ಹಬ್ಬಕ್ಕೆ ಮೂರು ಹಿಡಿ ಅವರೆಕಾಯಿ ಆಗಬೇಕು. ಮೂರು ಅವರೆ ಹೂವಿನ ಗೊನೆಯಾಗಬೇಕು. ನೀನು ಕೊಡಬೇಕು. ಇಸಕೊಂಡು ಬಾ ಅಂತಲೇ ನಮ್ಮಣ್ಣ ಕಳುಹಿಸಿದ ಕಣಜ್ಜೀ' ಅಂದರು ಹುಡುಗರು. ಅವರೆಕಾಯಿ ಅನುತ್ತಿದ್ದಂಗೆ ದೊಡ್ಡಕ್ಕಜ್ಜಿಗೆ ಗಾಬರಿಯಾಯಿತು. ತಡವರಿಸಿಕೊಂಡು ಆವಜ್ಜಿ ಹೇಳಿತು.

‘ಇಲ್ಲಪ್ಪ ಕೊಡಾಕೊ ಆಗೋದಿಲ್ಲ ಮೊದಲು ದೇವರಿಗೆ ಮೀಸಲಿಕ್ಕಿದ್ದೀನಿ. ಭೂತಪ್ಪನಿಗೆ ಕೊಡಬೇಕು. ಹನುಮಂತನಿಗೆ ಕೊಡಬೇಕು. ಮದ್ದಮ್ಮನಿಗೆ ಕೊಡಬೇಕು. ಎಲ್ಲ ದೇವತರಿಗೆ ಎಡೆ ಕೊಟ್ಟು. ಮೀಸಲು ಅಳಿದ ಮೇಲೆ ಸೀರ್‍ಯಾದ ರಂಗಣ್ಣನಿಗೂ ಕಳುಹಿಸಿ, ಅವತ್ತಿನಿಂದ ನಾವು ನರಮಾನವರು ಊಟ ಮಾಡಾದು. ಮುಂದಿನ ಸೋಮಾರ ಕಳೆದ ಮೇಲೆ ನೀವು ಬಂದರೆ ನಿಮಗೂ ಮೂರು ಅಲ್ಲ, ಆರು ಹಿಡಿ ಕೊಡುತೀನಪ್ಪ. ಆ ಮುಂಚೆ ಕೊಡಕಾಗೋದಿಲ್ಲ ಹೋಗರಪ್ಪ, ಜುಂಜಪ್ಪನಿಗೆ ಹೇಳಿ’ ಅಂದುಬಿಡ್ತು ಆವಜ್ಜಿ ಖಡಾಖಂಡಿತವಾಗಿ. ಆಗ ಹುಡುಗರು ‘ಹಂಗನ್ನಬೇಡ ಕಣಜ್ಜಿ ನಾಳೆ ಸೋಮವಾರ ದೀವಣಿಗೆ ಹಬ್ಬ ಮಾಡಲೇಬೇಕು. ಅದರಲ್ಲಿ ಹೊಸ ಬೆಳೆಯನ್ನ ಎಡೆ ಮಾಡಿ ಪರಮೇಶ್ವರನಿಗೆ ಎಡೆ ಮಾಡಬೇಕು. ಮೂರು ರಾಗಿ ತೆನೆ, ಮೂರು ಉತ್ರಾಣಿ ತೆನೆ, ಮೂರು ಅಣ್ಣೆ ಹೂವಿನ ತೆನೆ, ಮೂರು ಕುಂಬಳ ಹೂವಿನ ತೆನೆ, ಹುಚ್ಚೆಳ್ಳು ಹೂವು, ಮೂರು ಗೊನೆ ಬತ್ತದ ತೆನೆ, ಮೂರು ಗೊನೆ ಅವರೇಕಾಯಿ ಮೂರು ತೆನೆ ಅವರೇ ಹೂವು ಎಲ್ಲವೂ ಕೂಡಿಸಿ ಮೂಗ ಹಸುವಿನ ಸಗಣಿ, ತೆಪ್ಪೆ ತಂದು ಹೊರಗಡೆ ಹೊಸಲು ಮುಂದೆ ಸಾರಿಸಿ, ಗುಡಿಸಿ ಸಗಣಿಯಿಂದ ತೊಪ್ಪೆ ಹಾಕಿ ಹುಚ್ಚೆಳ್ಳು ಹೂ ಮುಡಿಸಿ ಅದರ ಪಕ್ಕದಲ್ಲೇ ಇನ್ನೊಂದು ತೊಪ್ಪೆಗೆ ಇದೆಲ್ಲಾ ಹೂಗಳನ್ನು ಮುಡಿಸಬೇಕು. ಹೊಸ ಬೆಳೆ ಫಲನ ಇಡಬೇಕು. ಅದಕ್ಕೆ ಮೂರು ಹಿಡಿ ಅವರೆ ಬೇಕೇ ಬೇಕು’ ಎಂದು ಮಾರಣ್ಣ-ಮೈಲಣ್ಣ ಹಟ ಹಿಡಿದು ಕುಂತುಬಿಟ್ಟವು. ಅದಕ್ಕೆ ದೊಡ್ಡಜ್ಜಿ ಹೇಳುತಾಳೆ ‘ಹೋಗರಲೇ, ಗೊಲ್ಲರ ಹುಡುಗರ. ಗೊಲ್ಲರಿಗೆ ಹಬ್ಬ ಹೆಚ್ಚು, ಕುಂಚಿಟಿಗರಿಗೆ ಮದುವೆ ಹೆಚ್ಚು ಅಮ್ತಾರೆ. ನಿಮಗೆ ಚಿತ್ರದೇವರು, ಕಾಟಂದೇವರು ಹೆಚ್ಚಾದರೆ ನಮಗೋ ಈಶ್ವರ, ಬ್ರಹ್ಮ, ಈಶ್ವರ ಹೆಚ್ಚು. ನಾವು ನಮ್ಮ ಬೆಳೆನ ನಮ್ಮ ದೇವರಿಗೆ ಮೀಸಲಿಟ್ಟಿದ್ದೀವಿ. ಯಾವುದೇ ಕಾರಣಕ್ಕೂ ನಮ್ಮ ದೇವರಿಗೆ ಮೀಸಲು ಅಳಿಯೋ ತನಕ ಕೊಡಕಾಗುವುದಿಲ್ಲ. ಕೊಡಲ್ಲಪ್ಪ, ಹೋಗರಪ್ಪ’ ಅಂತ ಅಜ್ಜಿ ಹಕ್ಕಿ ಹೊಡೆಯೋಕೆ ಕವಣೆ ಬೀಸಿದಳು. ಹುಡುಗರು ಅವರೆ ಕಾಯಿ ಹುಟ್ಟದಲೇ ಅಳುಮೋರೆ ಹಾಕಿಕೊಂಡು ದನಿನ ಗೂಡಿನ ಹಾದಿ ಹಿಡಿದರು. ದನಿನ ಗೂಡಿಗೆ ಹೋಗುತ್ತಿದ್ದಂಗೆ ಎಲ್ಲಾ ವಿಚಾರ ಕೇಳಿದ ಜುಂಜಪ್ಪ ದೊಡ್ಡಕ್ಕ ಹೇಳಿದ ಸಂಗತಿಯನೆಲ್ಲಾ ಹೇಳಿದರು. ಆ ಹುಡುಗರು ಜುಂಜಪ್ಪನಿಗೆ ತಮ್ಮಗಳ ಮೇಲೆ ಕೋಪ ಬಂತು. ಆದರೂ ಅಸವಲ್ಲದವರು. ಅವುರ ಮೇಲೆ ಕೋಪ ಮಾಡಿಕೊಂಡರೆ ಏನು ಬಂತು ಅಂದುಬಿಟ್ಟು ಜುಂಜಪ್ಪನೇ ನೇರವಾಗಿ ಕಳುವಾರಹಳ್ಳಿ ದಿಣ್ಣೆಯ ಹೊಲಕ್ಕೆ ಬಂದನು.

ದಿಣ್ಣೆ ಹೊಲ, ಹದಿನಾರು ಎಕರೆ ಹೊಲದಾಗೆ ಅವರೆಕಾಯಿ ಆರತಿ ಶೃಂಗಾರ ಮಾಡಿದಂಗೆ, ಬೆಳ್ಳಗೆ ಹೂ ಕಾಯಿ ಹಿಡಿದು ಲಕ್ಷ್ಮಿ ನಾಟ್ಯವಾಡುವಂಗೆ ನಾಟ್ಯನೇ ಆಡುತ್ತೆ.

ಅವರೆಕಾಯಿ ಹಣ್ಣು ಬಿಟ್ಟು ಬೆಳ್ಳಂಬೆಳ್ಳಗಾಗಿಬಿಟ್ಟೈತೆ. ಗಾಳಿ ಬೀಸಿದರೆ ಬಾಗಿ ಗೊನೆ ಭಾರಕ್ಕೆ ಮಲಗಿಬಿಟ್ಟವೆ ಅವರೆಗಿಡ. ಆ ಹೊಲದ ಮಧ್ಯದಲ್ಲಿ ಹೊನ್ನಟ್ಟಿ ಆಲೇಗೌಡನ ಹೆಂಡತಿ ದೊಡ್ಡಕ್ಕ. ಮಂಚಿಕೆ ಹಾಕಿಕೊಂಡು, ಆ ಮಂಚಿಕೆ ಮೇಲೆ ಹುಲ್ಲು ಹಾಸಿ ಅದರ ಮೇಲೊಂದು ಹಾಸಿಗೆ ಹಾಕಿಕೊಂಡು ಅದರ ಮೇಲೆ ಮಲಗಾಕೆ ತಾವು ಮಾಡಿಕೊಂಡು ದೂರದಿಂದಲೇ ಕಳ್ಳರು ಕಾಕರು, ಪ್ರಾಣಿ ಪಕ್ಷಿಗಳು ಬಂದರೆ ಅಲ್ಲಿಂದಲೇ ಗದರಿಸಾಕೆ ಒಂದು ಕವಣೆ ಕಲ್ಹಿಡಿದು ನಿಂತುಬಿಟ್ಟವಳೆ ದೊಡ್ಡಕ್ಕ. ಒಂದು ಪಕ್ಷಿನೂ ಹೊಲದ ಮೇಲೆ ಹಾರಾಡಕ್ಕೆ ಬಿಡೋದಿಲ್ಲ. ಒಂದು ಪಕ್ಷಿನೂ ಇತ್ತಕಡೆ ತಿರುಗಿ ನೋಡೋಹಾಗಿಲ್ಲ ಅಂತ ಕಟ್ಟುನಿಟ್ಟಿನ ಅಜ್ಜಿ. ಸರಿ, ಅಲ್ಲಿಗೆ ದೊಡ್ಡನು ಜುಂಜಪ್ಪ ಬಂದ. 'ನಮಸ್ಕಾರ ಹಡೆದಜ್ಜಿ' ಅಂದ. 'ಬಾರಪ್ಪ ಮೊಮ್ಮಗನೆ, ಏನಪ್ಪ ವಿಚಾರ?' ಅಂದಳು ಅಜ್ಜಮ್ಮ. ಆಗ ಜುಂಜಪ್ಪ ಹೇಳಿದ 'ಅಜ್ಜಮ್ಮ ಈಗಾಗಲೇ ನನ್ನ ತಮ್ಮಗಳು ಬಂದು ಹಾಲು-ತುಪ್ಪದ ಹಬ್ಬಕ್ಕೆ ನಮ್ಮ ಹಿರಿಯರ ಹಬ್ಬಕ್ಕೆ ಮೂರು ಹಿಡಿ ಅವರೆಕಾಯಿನೂ, ಮೂರು ಅವರೆಹೂವಿನ ಗೊನೆನೂ ಬೇಡಿದರೂ ನೀನು ಕೊಡಲ್ಲ ಅಂದೆಯಂತೆ. ನಾನು ನಿನ್ನ ಮೊಮ್ಮಗ. ನಿನ್ನ ಹೆಸರೇಳಿ ಹಿರಿಯರಿಗೆ ಹಾಲು ತುಪ್ಪ ಎರೀತೀವಿ. ಮೂರು ಗೊನೆ ಅವರೇಕಾಯಿ ಕೊಡಜ್ಜಿ' ಅಂಬ್ತಾ ಸ್ವಾಮಿ ಜುಂಜಪ್ಪ ಕೇಳಿದನು. ಅದಕ್ಕೆ ಆವಜ್ಜಿ ಕೋಪಾನೆ ಮಾಡಿಕೊಂಡು ಹೇಳಿತು 'ನೀನಲ್ಲ, ನಿಮ್ಮಪ್ಪ ಸತ್ತೋಗಿರೋನು ಕೆಂಗರು ಮಲ್ಲೇಗೌಡ ಬಂದರೂ ಅವರೆ ಹೊಲಕ್ಕೆ ಕೈ ಇಕ್ಕಿಸೋದಿಲ್ಲ. ಹುಷಾರು, ಏತಕ್ಕಪ್ಪಾ ಎಂದರೆ ನಮ್ಮ ದೇವರು ಅಸವಲದ್ದು. ಮೊದಲು ಮನೆದೇವರು, ಕುಲದೇವರು, ಗುಡಿದೇವರಿಗೆ ಮೀಸಲು ಕೊಟ್ಟು ಊರಿನ ಹನುಮಂತ ದೇವರು, ಜಂಗಮಯ್ಯ, ದಾಸಯ್ಯ, ಗೌಡ ಶ್ಯಾನುಭೋಗರಿಗೆ, ಪಾಪಿ ಪರದೇಶಿಗಳಿಗೆ ಒಂದೊಂದು ಹಿಡಿ ಕೊಟ್ಟು ಹೊನ್ನು ಉಕ್ಕಲಿ ಅನ್ನಿಸಿಬಿಟ್ಟು ಶಾಸ್ತ್ರ ಕಳೀಬೇಕು. ಹೊಲದ ದೇವರು ಮಾಡಬೇಕು. ನಾಲ್ಕು ಜನಕ್ಕೆ ಅನ್ನನೇ ಹಾಕಬೇಕು. ಜೋಗಪ್ಪ, ದಾಸಯ್ಯನಿಗೆ ಇಕ್ಕಿಸಬೇಕಪ್ಪ. ಅದು ಆದ ಮೇಲೆ ಬಾರಪ್ಪ ಮೂರಲ್ಲ, ಒಂಬತ್ತು ಹಿಡಿ ಬೇಕಾದರೆ ತಗೊಂಡು ಹೋಗುವಿಯಂತೆ ಮೊಮ್ಮಗನೆ. ನಿನಗೆ ಇಲ್ಲ ಅನ್ನಕಾಗುತ್ತೇನಪ್ಪ' ಅಂದುಬಿಟ್ಲು ದೊಡ್ಡಜ್ಜಿ.

ಜುಂಜಪ್ಪ ಹಲ್ಲು ಕಡಿದು ಸುಮ್ಮಕಾದ. ಮನಸ್ಸಿನಲ್ಲೇ ಯೋಜನೆ ಹಾಕಿದ. ಮುಂದಕೆ ಮೂರೆಜ್ಜೆ ಹೋಗಿ 'ಅಂಗಾದರೆ ಕೊಡಕೆ ಆಗುವುದಿಲ್ಲವೇನಜ್ಜಿ? ನಮ್ಮದು ದೇವರ ಕೆಲಸ. ಹಿರೇರ ಹಬ್ಬ. ಚಿತ್ರಲಿಂಗ, ಕಾಟಂಲಿಂಗ, ಮಹಾಲಿಂಗ, ಈರಮುದ್ದಪ್ಪ, ಹಿರಿಯೋನು ಈರಣ್ಣ ಇವರಿಗೆ ಹಾಲು-ತುಪ್ಪ ಬಿಡೋ ಹಬ್ಬ ಕೊಟ್ಟುಬಿಡಜ್ಜಮ್ಮ. ಮೂರೇ ಮೂರು ಗೊನೆ ಅವರೇಕಾಯಿ' ಅಂದು ಕೊನೇ ಸಲ ಕೇಳಿದ ಸ್ವಾಮಿ. ಅಜ್ಜಿ, ದೊಡ್ಡಕ್ಕಜ್ಜಿ ಜುಂಜಪ್ಪನ

ದೊಡ್ಡಜ್ಜಿ 'ಇಲ್ಲ' ಅಂದು ಮಂಚಿಗೆ ಮೇಲೆ ಹೋಗಿ ಕುಂತಕೊಂಡ್ಲು.

ಸ್ವಾಮಿ ಜುಂಜಪ್ಪ ಸೀದ ಬಂದುಬಿಟ್ಟ. ಬಂದಾನು ನಮ್ಮದೇ ಹೊಲ, ಬೆಳೆ. ನಮ್ಮ ಹಿರಿಯರ ಹಬ್ಬಕ್ಕೆ ಮೂರು ಹಿಡಿ ಅವರೇಕಾಯಿ ಈ ಅಜ್ಜಿಯಿಂದ ಹುಟ್ಟಲಿಲ್ಲವಲ್ಲ ಶಂಕರ ಅಂದು ಯೋಚನೆ ಮಾಡಿದ. ಆಮೇಲೆ ಏನು ಮಾಡಿದನಪ್ಪ ಎಂದರೆ, ಒಬ್ಬ ಮುದಿ ಜಂಗಮಯ್ಯನ ರೂಪ ತಾಳಿಬಿಟ್ಟು ಮೂರು ಗಳಿಗೆ ಬಿಟ್ಟು ದೊಡ್ಡಕ್ಕನ ಹೊಲದತಾಕೆ ಹೋಗಿ 'ಹರನಮಃ ಪಾರ್ವತಿ ಪತಯೇ ಹರ ಹರ ಮಹಾದೇವ' ಅಂದುಬಿಟ್ಟ. ಇವುನ್ಯಾರೋ ಜಂಗಮ ಮನೆಬಿಟ್ಟು, ಮಠ ಬಿಟ್ಟು ಹೊಲಕ್ಕೆ ಬಂದ ಅಂದುಬಿಟ್ಟು ಎಂದು ದೊಡ್ಡಕ್ಕ ಮಂಚಿಕೆಯಿಂದ ಕೆಳಕೆ ಇಳಿದು ಬಂದು, 'ಯಾವೂರು ಜಂಗಮಯ್ಯ? ಹೊಲದ ತಾವ ಭಿಕ್ಷೆ ಕೇಳಾಕೆ ಬಂದಿದ್ದೀಯಲ್ಲ ಎಲ್ಲಾರ ಉಂಟೇನಪ್ಪ?' ಅಂದ್ಲು. ಆಗ ಜಂಗಮಯ್ಯ 'ತಾಯಿ ನಮ್ಮದು ಶಿರಾ ತವ ಕಾಳಿಂಗಯ್ಯನ ಮಠ. ಕಂತೆ ಭಿಕ್ಷೆ ಮಾಡೋದು ನಮ್ಮ ಧರ್ಮ ಬಂದಿದ್ದೀನಿ. ನಿಮ್ಮ ಹೊಲದಾಗೆ ಮಹದೇವ ನಾಟ್ಯವಾಡುವಂಗೆ ಅವರೆಕಾಯಿ ಬಂದುಬಿಟ್ಟೈತೆ. ನೋಡೋಕೆ ಒಂದು ಐಭೋಗ. ಇಂಥ ಅವರೇಕಾಯಿ ನಾನು ಎಲ್ಲಿಯೂ ನೋಡಲಿಲ್ಲ ತಾಯಿ. ಶಿವಶಿವ ತಾವು ಕೈಮುಟ್ಟಿ ಮೂರು ಗೊನೆ ಅವರೇಕಾಯಿ ಕೊಟ್ಟರೆ ಜಂಗಮರಿಗೆ ಕೊಟ್ಟ ಪುಣ್ಯ ಬರುತ್ತೆ. ಕೊಡಮ್ಮ ಕೋರಣ್ಯ ಭಿಕ್ಷೆ' ಎಂದು ವಿನಯವಾಗಿ ಕೇಳಿಕೊಂಡನು.

ದೊಡ್ಡಕ್ಕ 'ಸ್ವಾಮಿ ಹೊಲಕ್ಕೆ ಬಂದು ಯಾವ ಜಂಗಮಯ್ಯ ಭಿಕ್ಷಾ ಕೇಳಾಕಿಲ್ಲ. ಇವನ್ಯಾವನೋ ಕೇಳಿರುವನು. ಹಾದಿ ಬೀದಿ ಜಂಗಮರಿಗೆಲ್ಲಾ ನನ್ನ ಮೀಸಲವರೆ ದಕ್ಕುವುದಿಲ್ಲಪ್ಪ. ನಮ್ಮ ಮನೆದೇವರು ಮಾಲಿಂಗ, ಊರ ದೇವರು ಹನುಮಂತನಿಗೆ ಮೀಸಲು ಪಡಿ ಕೊಡದ ಹೊರತು ಬೇರೆಯವರಿಗೆ ಕೈಯೆತ್ತಿ ಕೊಡಂಗಿಲ್ಲ, ಮುಂದೆ ಹೋಗು ಜಂಗಮಯ್ಯ' ಅಂದುಬಿಟ್ಟಳು ದೊಡ್ಡಜ್ಜಿ. ಜಂಗಮ ವೇಷದ ಜುಂಜಪ್ಪ ಒಳ್ಳೆ ಅಜ್ಜಿ ಸಹವಾಸವಾಯಿತಲ್ಲಪ್ಪ, ಏನು ಮಾಡಾದು ಅಂದುಬಿಟ್ಟು ದಾರಿ ಮುಂದಾಗಿ ಹೊರಟ.

ತಿರುಗ ದೊಡ್ಡಕ್ಕ ಮಂಚಿಗೆ ಏರಿಳು. ಮಧ್ಯಾಹ್ನ ಆಗತಾ ಬಂತು. ಬಿಸಿಲು ಏರಿತು. ಸೂರ್ಯ ವಾಲಾಹೊತ್ತು. ಮಂಚಿಕೆ ಮೇಲೆ ಅಂಗೆ ಉರುಳಿಕೊಂಡಳು. ಅಂಗೆ ಮಂಪರು ನಿದ್ದೆ ಬಂದಂಗೆ ಆತು. ಆಮೇಲೆ ಕಣ್ಣು ತೆರಿತಾಳೆ ಒಬ್ಬ ಜೋಗಪ್ಪ ಬಂತು ನಿಂತುಬಿಟ್ಟವನೆ ಇದೇನಪ್ಪ ಇದು ಹಣೇಬರ, ಈವತ್ತು ಯಾವ ಗಳಿಗೇಲಿ ಎದ್ದೆನೋ ಶಿವ, ಒಂದೇ ಸಮನೆ ಯಾರ್‍ಯಾರೋ ಬಂದು ಕಾಡುತಾವೆ, ಅಂದುಕೊಂಡು ಕಣ್ಣು ಬಿಟ್ಟಳು. ಜೋಗಪ್ಪ ಮಾತಾಡುತಾನೆ 'ತಾಯಿ ನಮ್ಮದು ನಾಯಕನಹಟ್ಟಿ. ನಾವು ಚುಂಚನಗಿರಿ ಭೈರವನ

ಒಕ್ಕಲು. ಊರಾಡಿಕೊಂಡು ಆದಿ ಚುಂಚನಗಿರಿಗೆ ಹೋಗುತೀವಿ. ಅಲ್ಲಿ ಸ್ವಾಮಿಗೆ ನಮ್ಮ ಸೇವೆ ಮಾಡಿ ಹಿಂತಿರುಗಿ ಬರುತೀನಿ. ನಿನ್ನ ಹೊಲದಂತ ಹೊಲನ, ಅವರೆ ಗಿಡದಂತ ಗಿಡನ ನಮ್ಮ ಜೀವಮಾನದಲ್ಲಿ ಕಂಡಿಲ್ಲ. ನಾವು ಮೈಸೂರು, ನಾಗಮಂಗಲ, ಕಡಬಾ ಕಲ್ಲೂರು, ಮಾಯಸಂದ್ರ, ಚೇಳೂರು ಸೀಮೆ ಮೇಲೆಲ್ಲಾ ತಿರುಗಾಡಿದ್ದೀನಿ, ಅವರೆಗಿಡ ಕಂಡಿದ್ದೀನಿ. ಆದರೆ ಈ ಪಾಟಿ ಅವರೆಕಾಯಿ ಕಂಡಿಲ್ಲ ತಾಯಿ. ಅದು ಯಾವ ಕೈಲಿ ಕಾಳು ಹಾಕಿದೆ ತಾಯಿ? ಆರತಿ ಶೃಂಗಾರ ಮಾಡಿದಂಗೆ ಕಾಳು ಮನೆ ಹೊಡೆದು ಮಲಗಿದೆ. ಕಾಯಿ ನೋಡಿ ಎಂತರಿಗೂ ಆಸೆ ಬರುತ್ತೆ. ನಾವು ಜೋಗಿಗಳು. ಊರೂರು ತಿರುಕರು. ನಮಗೆ ಒಂದು ಮೂರಿಡಿ ಅವರೆಕಾಯಿ ಕೊಡು ತಾಯಿ. ಊರು ಊರು ಮೇಲೆ ನಿಮ್ಮ ಹೆಸರು ಕೊಂಡಾಡಿ ಮೆರೆಸುತೀವಿ, ಪಾಂಡವರ ಕತೆ ಮಾಡುತೀವಿ' ಅಂದ ಜೋಗಿ.

ಆಮೇಲೆ ದೊಡ್ಡಕ್ಕ ಹೇಳುತಾಳೆ 'ಅಯ್ಯೋ ಜೋಗಪ್ಪ ಚೆಂದಾಕ ಪದನೇನೋ ಹೇಳಿಬಿಟ್ಟೆ ಕಣಪ್ಪ. ಆದರೆ ಒಂದೇ ಒಂದು ಯಡವಟ್ಟು ಕಣೋ. ನಾವು ಬೆಳೆದ ಯಾವು ಬೆಳೆನೂ ನಮ್ಮ ಕುಲದೇವರಿಗೆ, ಮನೆದೇವರಿಗೆ ನೈವೇದ್ಯಕ್ಕೆ ಕೊಡದ ಹೊರತು ಬೇರೆಯವರಿಗೆ ಕೊಡಂಗಿಲ್ಲ ಕಣೋ ಜೋಗಪ್ಪ' ಅಂದು 'ಮುಂದೆ ಹೋಗು, ಮುಂದಿನ ಸೋಮಾರ ಕಳೆದು ಬಾರಪ್ಪ, ನಿನಗೂ ಮೂರು ಬೊಗಸೆ ಅವರೆಕಾಯಿ ಕೊಡುತೀನಪ್ಪ' ಅಂದಳು. ಇನ್ನ ಈಯಮ್ಮನ ಬಲವಂತ ಪಡಿಸುವುದರಲ್ಲಿ ಸುಖವಿಲ್ಲ. ಕೊಡಲ್ಲ ಅಂದ ಮೇಲೆ ಕೊಡಲ್ಲ. ಸಾಮಾನ್ಯದಳಲ್ಲ ದೊಡ್ಡಜ್ಜಿ. ಈ ಅಜ್ಜಿಗೆ ನನ್ನ ನಿಜರೂಪ ತೋರಿಸಬೇಕು ಅಂದಾನು ಜುಂಜಪ್ಪ ಯೋಚಿಸಿಕೊಂಡು 'ಜಂಗಮರಿಗಿಲ್ಲ, ಜೋಗಿಗಿಲ್ಲ ಅಂದ ಮೇಲೆ ನಿನ್ನ ಹೊಕ್ಕಳಕ್ಕಿ ಅನ್ನ, ಹೊನ್ನು ಮೂಡೆ ಅವರೆಕಾಳು ನಿನ್ನ ಮನೆಗಿದ್ದರೇನು, ಇಲ್ಲದೆ ಹೋದರೇನು? ನಾಯಿ ಮೊಲೆ ಹಾಲಿದ್ದಂಗೆ. ಪಾಪಿಗಿಲ್ಲ, ಪರದೇಶಿಗಿಲ್ಲ' ಅಂದುಬಿಟ್ಟು ಬಿರಬಿರನೆ ನಡೆದುಬಿಟ್ಟ. ಬಂದವನೆ ನಾಗೇಂದ್ರನ ಜಪವ ಮಾಡಿದ ಜುಂಜಪ್ಪ. ಕಣ್ಣು ಮುಚ್ಚಿ ಕಣ್ಣು ಬಿಡೋದರೊಳಗೆ ನಾಗರಹಾವು ದರ್ಶನವಾಯಿತು. 'ಅಣ್ಣ ಜುಂಜಪ್ಪ ನನ್ನ ಕರೆಸಿಕೊಂಡ ಕಾರಣವೇನಣ್ಣ? ಯಾರಪ್ಪ ನಿನ್ನ ವೈರಿ? ಅವರನ್ನ ಮಂಡಲ ಹೊಡೆದು ಎದುರಿಸಬೇಕಾ? ವಿಷ ಕುಟುಕಿ ಸಾಯಿಸಬೇಕಾ? ಸರ್ಪಸುತ್ತಾಗಿ ಕಾಡಲಾ? ಏನು ಮಾಡಬೇಕು ಹೇಳಪ್ಪ ವೀರಭದ್ರ' ಅಂತು ಸರ್ಪರಾಜ. ಆವಾಗ ಜುಂಜಪ್ಪ ಹೇಳಿದ 'ನೀನು ಮಂಡಲ ಹೊಡೆಕೊಂಡು ಮನೆಗೆ ಮಲಗಿದರೆ ಮನೆ ಮಂದಿ ಹೆದರುತಾರೆ. ಏಳು ಅಡಿ ಸರ್ಪರಾಜನಾಗಿ ಹರಿದರೆ ಹೆದರಿ ದೂರ ಹೋಗುತಾರೆ. ಅಂತಾದು ಏನೂ ಮಾಡಬೇಡ. ನಮ್ಮ ಅಜ್ಜಿ ದೊಡ್ಡಕ್ಕಜ್ಜಿ, ನಮ್ಮ ತಾತ ಹೊನ್ನಟ್ಟಿ ಆಲೇಗೌಡನ ಹೆಂಡತಿ. ಗೌಡತಿ ದೊಡ್ಡಕ್ಕನಿಗೆ ಸ್ಯಾನೆ ದವಲತ್ತು ಬಂದುಬಿಟ್ಟೈತೆ. ಬಂಗ ಗೊತ್ತಿಲ್ಲ, ಬಡತನ

ಗೊತ್ತಿಲ್ಲ. ದಾನ ಗೊತ್ತಿಲ್ಲ, ಧರ್ಮ ಗೊತ್ತಿಲ್ಲ. ನಾನು ನಾನು ಅಂಬ್ತಾ ಮೆರೀತೈತೆ ಆವಜ್ಜಿ. ಹಿಂಗೇ ಜೀವನ ಕಳೀತು. ಈಗ ಅವಳಿಗೆ ನೀನು ಬುದ್ದಿ ಕಲಿಸಬೇಕು' ಅಂತ ಸ್ವಾಮಿ ಜುಂಜಪ್ಪ ಹೇಳಿಬಿಟ್ಟ. ಸರ್ಪರಾಜ ಹೇಳಿತು 'ಅಣ್ಣ ನಾನೇನು ಮಾಡಲಿ ಹೇಳಪ್ಪ. ನಿನ್ನ ಆಜ್ಞೆ ಪಾಲಿಸುತೇನಪ್ಪ' ಅಂತು. 'ಸರಿ ನಮ್ಮ ಅಜ್ಜಿ ದೊಡ್ಡಜ್ಜಿ ಕಳುವರಹಳ್ಳಿ ಏಣಿನಾಗೆ ಹದಿನಾರು ಎಕರೆ ಹೊಲ, ಅದರಾಗೆ ಅವರೆಹಣ್ಣು ಮೆಟ್ಟಿ ನಿಂತದೆ. ಅದನ್ನು ನರಮನುಷ್ಯರಾಗಲಿ, ಪಶು ಪಕ್ಷಿಗಾಗಲಿ ಒಂದು ಎಲೆನೂ ಮುಟ್ಟಿಸದೆ ಎಂಜಲುಗೈಲಿಯೂ ಕಾಗೆ ಓಡಿಸದೆ, ಕವಣೆ ಕೈಲಿಡಿದು ಮಂಚಿಕೆ ಹಾಕಿಕೊಂಡು ಕಾವಲಿದೆ. ಒಂದಿಡಿ ಅವರೆಕಾಯಿ ಕೊಡಜ್ಜಿ, ಹಿರಿಯರ ಹಾಲಬ್ಬ ಮಾಡಬೇಕೆಂದು ಕೇಳಿಕೊಂಡರೆ ಇಲ್ಲ ಅಂಬ್ತಾ ಅವಮಾನ ಮಾಡಿ ಕಳಿಸಿತು. ಆಕೆಗೆ ಸರಿಯಾಗಿ ಬುದ್ದಿ ಕಲಿಸು ನಾಗೇಂದ್ರ' ಅಂದುಬಿಟ್ಟು 'ನೀನು ಈಗ ಮಿಡಿ ನಾಗರಹಾವಾಗಿ, ಒಂದು ಗೇಣುದ್ದ ರೂಪ ತಾಳಿ ತರಗಿನಾಗಾಸಿ ಹಾದು ಮಂಚಿಕೆ ಕೋಲಿನ ಮೇಲೆ ಹತ್ತಿ, ಹುಲ್ಲು ಸಂದೆಗೆ ಸೇರಿಕೊಂಡು ಬಿಡು. ಆಮೇಲೆ ಯಾವುದೇ ಕುರಿ ಮೇಕೆನೋ, ದನ-ಕರನೋ ಬೆದರಿಸಾಕೆ ಆ ಅಜ್ಜಿ ಮಂಚಿಕೆಯಿಂದ ಇಳಿದು ಬರುತಾದೆ. ಆಮೇಲೆ ಮಂಚಿಕೆ ಹತ್ತಿ ಕುಂತುಕೊಂತದೆ. ನೀನು ಮಂಚಿಕೆ ಹುಲ್ಲಿನಾಗಿಂದ ನಿಧಾನವಾಗಿ ಅಜ್ಜಿ ಸೀರೆ ಒಳಗಾಸಿ ಸೀರೆ ನೆರಿಗೆ ಮೇಲೆ ಹರಿದು ಎರಡು ಕಾಲು ಸಂದಿಗೆ ಸರಿಯಾಗಿ ಕಚ್ಚಿ ವಿಷ ಬಿಟ್ಟುಬಿಡು. ಆಮೇಲೆ ನಿಧಾನವಾಗಿ ಇಳಿದು ಮರೆಯಾಗಿ ಬಿಡಬೇಕಪ್ಪ' ಅಂತ ಜುಂಜಪ್ಪ ನಾಗರಾಜನಿಗೆ ಆದೇಶ ಮಾಡಿಬಿಟ್ಟ.

ಸರ್ಪರಾಜ 'ಹಾಗೆಯೇ ಆಗಲಿ ಹಿರಿಯಣ್ಣ' ಅಂದುಬಿಟ್ಟು ಇದ್ದಕ್ಕಿದ್ದಹಾಗೆ ಮಾಯವಾಗಿಬಿಡ್ತು. ಜುಂಜಪ್ಪನ ಆದೇಶವನ್ನು ಪಾಲಿಸಿದ ಸರ್ಪರಾಜ ಬರಬರಾ ಅಂತ ಹರಿದು ಕಳುವಾರಹಳ್ಳಿ ಏಣಿನಾಗಾಸಿ ಎರೆ ಹೊಲಕ್ಕೆ ಬಂತು. ದೊಡ್ಡಕ್ಕಜ್ಜಿ ಬಾಯಿ ಮಾಡ್ತಾ ಇದ್ದುದು ಕೇಳಿಸ್ತು. ಸರಿ, ಸರ್ಪರಾಜ ಅವರೆಗಿಡ ಬುಡದಾಗೆ ಹರಿದು, ತರಗಿನೊಳಗಾಸಿ ಹರಿದು ಮಂಚಿಕೆ ಹತ್ತಿರಕ್ಕೆ ಬಂತು. ದೊಡ್ಡಜ್ಜಿ ಇಳಿದು ಹೊಲದ ಸುತ್ತಾಕಿ ಆ ಊ ಅಂದು ಕವಣೆಗೆ ಕಲ್ಲಿಕ್ಕಿ ಬೀಸಿ ಬಂದಳು. ಬಿಸಿಲು ಏರಿದಂಗಾಗಿ ಇನ್ನೇನು ಪ್ರಾಣಿ ಪಕ್ಷಿಗಳು ಬರೋದಿಲ್ಲ ಅಂದುಬಿಟ್ಟು ಮಂಚಿಕೆ ಹತ್ತಿ ಮಲಗಾಕೆ ಹೋದಳು. ಮಂಚಿಕೆ ಹತ್ತಿ ಅದರ ಮೇಲೆ ನಿಂತುಕೊಂಡು ಆವಜ್ಜಿ ಬಿಚ್ಚಿ ಹೋಗಿರೋ ತಲೆಕೂದಲನ್ನ ಕೊಡವಿ ಏಣೆ ಗಂಟಾಕಿಕೊಳ್ಳಕೆ ನಿಂತುಕೊಂತು. ಆಗ ಸರ್ಪರಾಜ ಮಿಡಿನಾಗರ ರೂಪ ತಾಳಿ, ಸೀರೆ ಮೇಲೆ ಸರಸರ ಹರಿದು ಸೊಂಟದ ಸಂದಿಗೆ, ಸೀರೆ ನರಿಗೆ ಒಳಗೆ ಅಡಗಿಬಿಡ್ತು. ಆ ಊ ಅಂದ ದೊಡ್ಡಕ್ಕ ಅಂಗೆ ಉರುಳಿಕೊಂಡಳು. ಸ್ವಾಮಿ ಮಿಡಿನಾಗ ಎಚ್ಚರವಾಗಿ ಒಳ ತೊಡೆ ಸಂದಿಗೆ ಸರಿಯಾಗಿ ಹಾಕಿಬಿಡ್ತು. ಪಟ್ಟಂತ ಕುಕ್ಕಿ ಬಾಡು ಈಚೆಗೆ ಬರೋಂಗೆ

ಕೆರೆದು ಗಾಯ ಮಾಡಿಬಿಟ್ಟು ಹೊರಟುಹೋಗಿಬಿಡ್ತು. ದೊಡ್ಡಕ್ಕಜ್ಜಿಗೆ ಒಂದೇ ಏಟಿಗೆ ಉರಿ ಒಡೆತ ಸುರುವಾಯ್ತು. ತಡೆದುಕೊಳ್ಳಕಾಗಲಿಲ್ಲ. ಕೆರೆ ಬಾವಿ ಅನ್ನುತಾಳೆ, ಹೇಳಿಕೊಳ್ಳಕೆ ನೀನೆ ಅನ್ನೋರು ಇಲ್ಲ. ಒಂದು ಅರೆ ಘಳಿಗೆ ಒಳಗೆ ಬಾಯಲ್ಲಿ ನೊದಲೆ ಬಂತು. ಮೈಯೆಲ್ಲ ಹಸಿರು ಒಡೀತು. ಕಣ್ಣು ತಿರುವಿದಂಗಾಗಿ ಹೊಟ್ಟೆ ತೊಳಸ್ತು. ವಿಷ ಕಾರಿಕೊಂಡು ಮಂಚದ ತುಂಬಾ ವಾಂತಿ ಮಾಡಿಕೊಂಡು ಗಬ್ಬೊಡೆದಳು. ಒಂದು ಘಳಿಗೆ ಸರ್ಪ ಅವಳಿಗೆ ಕಚ್ಚಿದ್ದು. ಅಷ್ಟರೊಳಗೆ ಒದ್ದಾಡಿ ಒದ್ದಾಡಿ ಸತ್ತಳು. ಒಂದು ಹನಿ ನೀರು ಬಿಡರೂ ಯಾರೂ ಇಲ್ಲ. ದೊಡ್ಡಕ್ಕ ಕಾಡು ಹೆಣವಾದಳು.

ಹಿಂಗೆ ಹೊತ್ತು ಹೋತು. ಸಂಜೆ ಆಗುತಲೂ ಒಂದಿಷ್ಟು ಊಟ ತಗೊಂಡು ಹೊನ್ನಟ್ಟಿ ಆಲೇಗೌಡರು ತಮ್ಮ ಅವರೆ ಹೊಲದ ತಾವಕ್ಕೆ ಹೋಗುತಾರೆ. ಅಷ್ಟರೊಳಗೆ ಜುಂಜಪ್ಪನ ಬಸವ ಬಡಮೈಲ ದೊಡ್ಡಕ್ಕನ ಅವರೆಹೊಲನ ಪೂರಾ ಮೇಯ್ದುಬಿಟ್ಟು, ಕಳುವಾರಹಳ್ಳಿ ಊರ ಮುಂದಲ ಕಲ್ಯಾಣಿಗೆ ನೀರು ಕುಡಿಯಾಕೆ ಅಂಬ್ತಾ ಬರುತ್ತಿತ್ತು. ಅದ್ನ ಕಂಡು ಆಲೇಗೌಡರಿಗೆ ಆನಂದನೂ ಆಯಿತು, ಅವರೆ ಹೊಲನೇನಾದರೂ ತಿಂದಿದ್ರೆ, ಅದಕ್ಕೆ ಆ ದಡ್ಡಿ ಬಿಡುತಾಳ? ಅಂತಲೇ ಧೈರ್ಯ ತಗೊಂಡು ಬಂದರು ಹೊನ್ನಟ್ಟಿ ಆಲೇಗೌಡರು. ಬಂದು ನೋಡುತಾರೆ, ಅವರೆ ಹೊಲವೆಲ್ಲಾ ಧೂಳೀಪಟವಾಗಿದೆ. ಹೋದರೂ ಹೋಗಲಿ ಅಂತ ಹೊಲದಾಗಿರುವ ಮಂಚಿಕೆ ತಕೆ ಬರುತಾನೆ. ಮಾರು ದೂರಕ್ಕೆ ಗಬ್ಬನೆ ವಾಸನೆ ಬರುತೈತೆ. ದೊಡ್ಡಜ್ಜಿ ವಾಂತಿ ಮಾಡಿಕೊಂಡು, ಒದ್ದಾಡಿ ಒದ್ದಾಡಿ ಸತ್ತದ್ದರಿಂದ ವಾಂತಿಯೆಲ್ಲಾ ಮಂಚಿಕೆ ತುಂಬಾ ಮೆತ್ತಿಕೊಂಡು ಬಟ್ಟೆ ಬರೆಯೆಲ್ಲಾ ಆಗಿ ಗಬ್ಬೆನ್ನುತ್ತದೆ. ಆವಾಗ ಓಹೋ ಏನೋ ಅನಾಹುತ ಆಗಿಬಿಟ್ಟಿದೆ. ಮಹಾಲಿಂಗ, ಶಂಕರ, ಗೌರಸಂದ್ರ ಮಾರಮ್ಮ, ಮದ್ದಕ್ಕನಹಳ್ಳಿ ಮದ್ದಕ್ಕ, ತಾವರೆಕೆರೆ ಕೊಲ್ಲಾಪುರಿ, ಸಿರಾದ ದುರ್ಗಮ್ಮ ಅಂದು ದೇವಾದಿ ದೇವತರನ್ನು ಸ್ಮರಣೆ ಮಾಡಿಬಿಟ್ಟ, ಬಾಯಿ ಬಡಕೊಂಡು ಊರಿಗೆ ಓಡಿಬಂದ. ಊರಾಗೆ ಅವನ ಮಕ್ಕಳು ಚಿಕ್ಕಾಲ, ದೊಡ್ಡಾಲ ಇದ್ದರಲ್ಲಾ ಅವರು, ಅವರ ಹೆಂಡತೇರು ಎಲ್ಲಾ ಸೇರಿಕೊಂಡು ಎರೆಹೊಲದ ತಾಕೆ ಓಡೋಡಿ ಬಂದುಬಿಟ್ರು.

ಸೊಸೆಯರಾದರೋ ನಟನಟನೆ ನಟಿಕೆ ಮುರಿದ್ರು. ಬದುಕಿದ್ದಾಗ ತಿನ್ನಾಕೂ ಬಿಡಲಿಲ್ಲ, ಉಣ್ಣಾಕೂ ಬಿಡಲಿಲ್ಲ. ಅವರೆ ಹೊಲದಾಗೆ ಅವರೆಕಾಯಿ ಹಣ್ಣೊಡೆದು ಮಲಗಿದರೂ ದೇವರಿಗೆ, ದಿಂಡರಿಗೆ ಅಂಬ್ತಾ ಋಣಕ್ಕೂ ಒಂದು ಕಾಳಾಕಿ ಅಂಬ್ರನೇ ಮಾಡಲಿಲ್ಲ. ಕಿವುಚು ಸಾರು ಮಾಡಲಿಲ್ಲ ಅನಿಷ್ಟ ಮುಂಡೇದು. ಈಗ ನೋಡು ಅನ್ಯಾಯವಾಗಿ ಬೆಳೆದು ನಿಂತಿದ್ದ ಅವರೆಗಿಡ ಧೂಳೀಪಟವಾಗಿ ಹೊಲವೆಲ್ಲಾ ಬಟಾಬಯಲಾಗಿದೆ ಅಂಬುತಾ ಸೊಸೆಯರು ಮಾತಾಡಿಕೊಂಡರು.

ಇಷ್ಟೊತ್ತಿಗೆ ಜುಂಜಪ್ಪ ದನಗಳ ಮೇಯಿಸಿಕೊಂಡು ಮದ್ದಕ್ಕನಹಳ್ಳಿ ದಿಣ್ಣೆಗಿದ್ದ ಜುಂಜಪ್ಪನಿಗೂ ಸುದ್ದಿ ಹೋತು. ಮಾರಣ್ಣ, ಮೈಲಣ್ಣ, ದೊಡ್ಡನು ಜುಂಜಪ್ಪ ಪುರಲೆಹಳ್ಳಿ ದಿಣ್ಣೆ ಮೇಲೆ ಮಲಗಿಕೊಂಡು ದನಗಳು ಎಲ್ಲೆಲ್ಲಿ ಮೇಯುತಾವೆ ಅಂಬ್ತಾ ನೋಡ್ತಾ ಇದ್ರು. ಅಷ್ಟೊತ್ತಿಗೆ ಬಂಡೆ ಮೇಲೆ ಕಲ್ಲು ಹೊಡೆಯುತ್ತಿದ್ದ ವಡ್ಡರನೊಬ್ಬ, ಅವುನು ಲಬೋ ಲಬೋ ಬಾಯಿ ಬಡಿದುಕೊಂಡು ಸಿರಾ ಪೇಟೆ ಕಡೆಗೆ ಓಡ್ತಾಇದ್ದ. ಅದೇ ಪುರಲೇಹಳ್ಳಿ ಏಣಿಗೆ ಹೊನ್ನಟ್ಟೆ ಆಲೇಗೌಡರೂ ಅಳುತಾ ಬಂದರು. ಅವರಿಗೆ ತಿಳಿದಿತ್ತು, ಇದೆಲ್ಲಾ ಸತ್ಯವಂತ ಜುಂಜಪ್ಪನ ಕೈಮತ್ತು ಅಂಬೋದು. ಬಂದು ಬಂದೋನೆ ರಪ್ಪನೆ ಜುಂಜಪ್ಪನ ಮುಂದೆ ಬಿದ್ದೋದ ಆವಜ್ಜ. ತಾತನನ್ನು ಹಾಗೆ ಆತುಕೊಂಡು, ಕರಿಕಂಬಳಿ ಜಾಡಿ ಮೇಲೆ ಕೂರಿಸಿದ ಜುಂಜಪ್ಪ. ಕಾರಣವೇನೆಂದು ತಿಳಿದುಕೊಂಡ. ದೊಡ್ಡಕ್ಕಜ್ಜಿ ಸತ್ತೋಗಿರೋದು, ಏರೆಯೊಳಗಿನ ಅವರೇಹೊಲ ಹಾಡಂದಗಲೇ ದೂಳಿದಿಡು ನಾಶವಾಗಿರುವ ಸಂಗತಿನೆಲ್ಲಾ ತಿಳಿಸಿದ. ಜುಂಜಪ್ಪ ನಗುತಲೇ ಅಜ್ಜಯ್ಯನ ಸಮಾಧಾನಮಾಡಿದ.

ಇತ್ತ ಏನಾತಪ್ಪ ಅಂದರೆ, ಒಡ್ಡ ತಿಮ್ಮಾಬೋವಿ ಅಂಬೋನಿದ್ದ. ಅವುನಿಗೂ ಸೀರ್ಯಾದ ರಂಗಣ್ಣನಿಗೂ ಶ್ಯಾನೆ ಗೆಳೆತನ. ಸಿರಾ ಕೋಟೆ ಕಟ್ಟಾಕೆ ಇವುನೆ ಕಲ್ಲುಬಂಡೆ ಸಪ್ಲೆ ಮಾಡಿದೋನು. ಅಲ್ಲದೆ ರಂಗಣ್ಣನಿಗೆ ಬೇಕು ಬೇಕಾದುದನೆಲ್ಲಾ ಇವನೆ ಒದಗಿಸುತ್ತಿದ್ದವನು. ಇವನಿಗೂ ಜುಂಜಪ್ಪನಿಗೂ ಅಷ್ಟಕ್ಕಷ್ಟೇ. ಮಾತ್ರವಲ್ಲ ಜುಂಜಪ್ಪನಿಗೂ ಸೀರ್ಯಾ ರಂಗಣ್ಣನಿಗೂ ಆಗಿಬರುತ್ತಿರಲಿಲ್ಲ. ಜುಂಜಪ್ಪನ ತಾತ ಹೊನ್ನಟ್ಟೆ ಆಲೇಗೌಡನಿಗೂ, ಸೀರ್ಯಾದ ರಂಗಣ್ಣನಿಗೂ ಗೆಳೆತನವಿತ್ತು. ಈಗ ಗೌಡನ ಹೆಂಡತೀನ ಜುಂಜಪ್ಪ ಸಾಯ ಬಡಿದು, ಅವುಳ ಅವರೆ ಗಿಡನೆಲ್ಲಾ ಮೇಯಿಸಿಬಿಟ್ಟನೆ. ಆಯಮ್ಮ ದೊಡ್ಡಕ್ಕ ಒಂದಿಷ್ಟು ಅವರೆಕಾಯನ್ನು ಸಿರಾ ರಂಗಪ್ಪನಾಯಕನ ಅರಮನೆಗೆ ಕೊಡಬೇಕು ಅಂತಿದ್ದಳು. ಅಷ್ಟರಲ್ಲೆ ಜುಂಜಪ್ಪ ಇಂಥ ಕೆಲಸ ಮಾಡವನೆ ಎಂದು ರಂಗಪ್ಪ ದೊರೆಗೆ ವಡ್ಡಾಬೋವಿ ಹೇಳಿಬಿಟ್ಟ, ಇದನ್ನು ಕೇಳಿದ ರಂಗಪ್ಪನಾಯಕ ಹಲ್ಲು ಕಡಿದು, ಕಣ್ಣು ಕೆಂಪಗೆ ಮಾಡಿಕೊಂಡು ಪ್ರಜೆ ಪಾಲಕರೂ, ದಳವಾಯಿ, ಸೈನಿಕರನೂ ಕರೆದು ಕರೆದು ಹುಕುಂ ಮಾಡಿಬಿಟ್ಟ. ಹುಕುಂ ಏನಂತ ಮಾಡಿಬಿಟ್ಟನಪ್ಪ ಅಂದರೆ, ಜುಂಜಪ್ಪ ಸಿರ್ಯಾ ನಾಡಿನಲ್ಲಿ ಪುಂಡನಾಗಿದ್ದಾನೆ. ಅವುನ ದನಗಳ ಹೊಲಗಳ, ತೋಟಗಳ ಮೇಲೆ ನುಗ್ಗಿಸುತ್ತಾನೆ. ಅದನ್ನು ತಡೆದರೆ ಅವುನು ಮಾಟ ಸೂನ್ಯ ಮಾಡಿಸಿ ಸಾಯಿಸಿಬಿಡುತ್ತಾನೆ. ಅದರಿಂದ ಜುಂಜಪ್ಪನ ದನಗಳನ್ನು ಸೀರ್ಯಾ ದೊರೆ ಹರಾಜು ಹಾಕುತ್ತಿದ್ದು ಯಾರು ಬೇಕಾದರೂ ಅವರಿಗೆ ಇಷ್ಟವಾದ ದನಗಳನ್ನು, ಹೋರಿಗಳನ್ನು, ಮೊಣಕಗಳನ್ನು, ಹಾಲು ಕರೆಯೋವನ್ನು, ಗೊಡ್ಡು ಹಸುಗಳನ್ನು, ಮುದಿ ಹೋರಿಗಳನ್ನು, ಗೇಮೆ ಮಾಡೋ ದನಗಳನ್ನು ಅವರವರ ಶಕ್ತ್ಯಾನುಸಾರ ಬಂದು ಹೊಡಕೊಂಡು

ಹೋಗಬಹುದು. ದೊರೆ ಆಜ್ಞೆಯಾಗಿದೆ. ಪ್ರಜೆಪಾಲಕರೆಲ್ಲಾ ಗೌಡ ಶ್ಯಾನುಭೋಗರೆಲ್ಲಾ ನಾಳೆ ಬೆಳಕು ಹರಿದು ಹನ್ನೆರಡು ಗಂಟೆ ವೇಳ್ಯದಾಗೆ ಕಳವೋರಹಳ್ಳಿ ದಿಣ್ಣೆಗೆ ಬರಬೇಕು. ಅಲ್ಲಿ ಜುಂಜಪ್ಪನ ರಾಸುಗಳನ್ನು ಹರಾಜು ಹಾಕಲಾಗುತ್ತೆ ಅಂಮ್ತಾ ತಮಟೆಯವರನ್ನು ಕರೆದು ಡಂಗೂರ ಹೊಡೆಸಿಬಿಟ್ಟ ಪಾಳೆಯಗಾರ.

ಯಾವಾಗ ಜುಂಜಪ್ಪನ ದನ ಹರಾಜು ಹಾಕಿ ಮಾರಾಟ ಮಾಡಲಾಗುತ್ತೆ, ಇದು ದೊರೆ ಆದೇಶ ಅಂಬ್ತಾ ಟಾಂಮು ಹೊಡೆದುಬಿಟ್ರೋ, ಆವಾಗ ಜುಂಜಪ್ಪನಿಗೆ ತಿಳೀತು ಇದು ಮದ್ದಕ್ಕನಹಳ್ಳಿ ವಡ್ಡಾಬೋವಿ ಕರಾಮತ್ತು ಅಂಬೋದು ಜುಂಜಪ್ಪನಿಗೆ ತಿಳಿದೋತು. ಸ್ವಾಮಿ ಏನು ಮಾಡಿನಪ್ಪ ಅಂದ್ರೆ, ವಡ್ಡಾಬೋವಿ ತಿಮ್ಮಣ್ಣನ ಹೆಂಡತಿ ರಕ್ತ ಕಕ್ಕಿಕೊಂಡು ಸತ್ತಳು. ಮದ್ದಕ್ಕನಹಳ್ಳಿ ಬಂಡೆ ಮೇಲೆ ಹಸಿ ಕಲ್ಲು ಕಿತ್ತು, ಬಂಡೆ ಕುಟ್ಟೋ ಕೆಲಸ ಮಾಡೋ ತಿಮ್ಮಾಬೋವಿ ಮಕ್ಕಳು ವಾಂತಿ ಮಾಡಿಕೊಂಡು ವರಗಿದರು. ಸಿರಾ ಪಟ್ಟಣದಾಗೆ ಪಾಳೆಯಗಾರನಿಗೆ ಚಾಡಿ ಹೇಳೋಕೆ ಹೋದ ತಿಮ್ಮಾಬೋವಿ ಮಕ್ಕಳು ವಾಂತಿ ಬೇದಿ ಹತ್ತಿ ಸತ್ತೋದ ಸಂಗತಿ ತಿಳಿದು ಓಡೋಡಿ ಬಂದ. ಬಂದು ಮನೆಗೆ ನೋಡುತಾನೆ! ಅವುನ ಹೆಂಡತಿ, ಸೊಸೆಯರು ಯಂಗೆ ಮಲಗಿದ್ದರೋ ಅಂಗೆಯೇ ಮಲಗಿದ್ದಾರೆ. ಆಗ ತಿಮ್ಮಾಬೋವಿ ಓಡಿಬಂದುಬಿಟ್ಟ. ಕಳುವಾರಹಳ್ಳಿ ಬಯಲಾಗೆ ಜುಂಜಪ್ಪ ಒಂದು ಮರದ ಅಡಗೆ ಕುಂತು ಗಣೆ ಊದುತ್ತಿದ್ದ. ವಡ್ಡಾಬೋವಿ ಬಂದು ಬಂದಾನೆ 'ತಪ್ಪಾಯಿತು, ನಾನು ಸೀರ್‍ಯಾದ ರಂಗಣ್ಣನಿಗೆ ತಮ್ಮ ಬಗೆಗೆ ಚಾಡಿ ಹೇಳಿದ್ದು, ಸರ್ವಾಂತು ತಪ್ಪಾಯಿತು ಸ್ವಾಮಿ. ಇನ್ನು ಮುಂದೆ ನಾನು ನಿನ್ನ ಸೇವಕನಾಗಿ, ನಿನ್ನ ಗುಡಿ ಕಟ್ಟಾಗೆ ಸೀಳು ಬಂಡೆ ಒಡೆದು ಕೊಡುತೀನಪ್ಪ. ನನ್ನ ಸಂಸಾರ ಹಾಲು-ತುಪ್ಪದಂಗೆ ಮಾಡಪ್ಪ' ಅಂಬ್ತಾ ಕಾಲಿಡಿದುಕೊಂಡ. ಜುಂಜಪ್ಪ ಉರಿಗಣ್ಣಿನಿಂದ ಸತ್ತೋಗಿದ್ದ ತಿಮ್ಮಾಬೋವಿ ಹೆಂಡರು, ಮಕ್ಕಳು ಕಡೆ ನೋಡಿದ. ಅವರೆಲ್ಲಾ ಎದ್ದು ಕೂತರು. ಜುಂಜಪ್ಪನ ಮಹಿಮೆಯನ್ನು ಕಂಡ ತಿಮ್ಮಾಬೋವಿ 'ಸ್ವಾಮಿ ತಮ್ಮ ಮಹಿಮೆಯನ್ನು ಅರಿಯದೆ ನಾನು ಮಣ್ಣು ತಿನ್ನುವ ಕೆಲಸ ಮಾಡಿದೆ. ಪಾಳೆಯಗಾರನಿಗೆ ಸುಳ್ಳು ಹೇಳಿದೆ. ಅವುನು ನಿನ್ನ ಮಹಿಮೆ ಅರಿಯಲಿಲ್ಲ. ಪ್ರಜೆ ಪಾಲಕರಿಗೆ ಡಂಗೂರ ಸಾರಿಸಿ ಜುಂಜಪ್ಪನ ದನಗಳನ್ನು ಹರಾಜು ಹಾಕುವ, ಸಾಕುವವರು ಹೊಡೆದುಕೊಂಡು ಹೋಗಿರೆಂದು ಹುಕುಂ ಹೊರಡಿಸಿದನು. ಇದಕ್ಕೆಲ್ಲಾ ನಾನೇ ಸ್ವಾಮಿ ಕಾರಣ. ನಾನು ಕಳುವಾರಹಳ್ಳಿಯ ಕಡೆಗೆ ಹೋದಾಗ ಆಲೇಗೌಡರ ಮನೆಗೆ ಹೋಗುತ್ತಿದ್ದೆ. ಒಳಕಲ್ಲು, ಗುಂಡುಕಲ್ಲು, ಬೀಸಾಕಲ್ಲು, ಅಡಿಗಲ್ಲು ಅಂತ ಅದೂ ಇದೂ ಕೆಲಸ ಇರುತ್ತಿತ್ತು. ಹೊಟ್ಟೆ ತುಂಬಾ ಮುದ್ದೆ ಹಾಕುತ್ತಿದ್ದರು. ಇತ್ತ ಕೋಟೆ ಕೆಲಸಕ್ಕೂ ಹೋಗುತ್ತಿದ್ದೆವು. ಅವರ ಸಂಬಂಧವೂ ಇತ್ತು. ಇದೇ ಯಡವಟ್ಟಾಗಿ ತಮ್ಮ

ಮೇಲೆ ದೂರು ಕೊಡಬೇಕಾಯಿತು. ನನ್ನದು ಸರ್ವತ್ರ ತಪ್ಪಾಯಿತು. ನಾನು ಜೀವಂತ ಇರೋಮಟ್ಟ ನಿನ್ನ ಸೇವಕನಾಗಿ, ನಿನ್ನ ಕೆಲಸಗಳನ್ನು ಮಾಡಿಕೊಂಡು ಇರುತ್ತೇನೆ' ಎಂದು ವಡ್ಡರ ತಿಮ್ಮಾಬೋವಿ ಜುಂಜಪ್ಪನಿಗೆ ಶರಣಾದರು.

ಇತ್ತ ಜುಂಜಪ್ಪನ ಮೇಲೆ ಯುದ್ಧ ಸಾರಿದ, ಆತನ ದನಗಳನ್ನು ಹರಾಜು ಮೂಲಕ ಮಾರಾಟ ಮಾಡುವ ಟಾಂಮು ಟಾಂಮು ಹಾಕಿಸಿದ್ದ, ಸೀರ್ಯಾದ ರಂಗಣ್ಣ ನಗಾರಿ ಹೊಡೆಸಿಕೊಂಡು, ದಂಡು ದಳವಾಯಿ ಕರೆಸಿಕೊಂಡು, ಕುದುರೆಗೆ ಲಗಾಮು, ಜೀನು, ತಡಿ ಬಿಗಿಸಿ ಸನ್ನದ್ದನಾದನು. ಆದರೆ ರಂಗಪ್ಪನಾಯಕನು ಜುಂಜಪ್ಪನ ಮೇಲೆ ಯುದ್ಧಕ್ಕೆ ಹೋಗುವ ಸಂಗತಿ ತಿಳಿದ ಆತನ ತಾಯಿ ತಿಮ್ಮೋಜಮ್ಮನೆಂಬ ಹೆಂಗಸು 'ಬ್ಯಾಡ ಕಣಪ್ಪ ಜುಂಜಪ್ಪನ ಮೇಲೆ ಯುದ್ಧ ತರವಲ್ಲ. ಅವುನು ಸಾಮಾನ್ಯ ಮನುಷ್ಯನಲ್ಲ. ದೇವುತರ ರೂಪ. ಆತನೊಂದಿಗೆ ವೈರ ಬೇಡ ಮಗನೆ' ಎಂದು ಕಾಲು ಕಾಲು ಹಿಡಿದುಕೊಂಡಳು. ಹಣೆ ಹಣೆ ಬಡಿದುಕೊಂಡಳು. ಆದರೆ ರಂಗಪ್ಪ ಕೇಳುವ ಮನುಷ್ಯನಾಗಿರಲಿಲ್ಲ. ಜುಂಜಪ್ಪನ ಮೇಲೆ ನೆಗೆದು ಯುದ್ಧಕ್ಕೆ ಹೊರಟು ನಿಂತನು. ಆಗ ತಿಮ್ಮಕ್ಕ ಜುಂಜಪ್ಪನ ಮಹಿಮಾವಳಿಯನ್ನು ಮಗನಿಗೆ ತಿಳಿಸಿ ಹೇಳುತ್ತಾಳೆ 'ಜುಂಜಪ್ಪಪ್ಪ ಅಸವಲ್ಲದವನು. ಅವುನು ಗೊಲ್ಲರ ಕಂಬೇರ ದೊಡ್ಡ ಚಿನ್ನಮ್ಮ ಎಂಬುವವಳಿಗೆ ಹುಟ್ಟಿದವನು. ಅವುನ ತಾಯಿ ಗರ್ಭದಲ್ಲಿರುವಾಗಲೇ ಮಾತಾಡುತ್ತಿದ್ದವನು. ಕುಂಚಿಟಿಗರ ಆಲೇಗೌಡನ ಸೊಸೆಯಾದ ಈ ಚಿನ್ನಮ್ಮ ಒಳಮನೆಯಲ್ಲಿ ಹೆರಿಗೆಯಾಗಬೇಕೆಂದು ಆಲೇಗೌಡರ ಬಯಕೆ. ಆದರೆ ಜುಂಜಪ್ಪ ತಾಯಿಗೆ ಹೇಳಿಬಿಟ್ಟ ನಾನು ಕಳುವಾರಹಳ್ಳಿ ಏಣಿನಾಗೆ ಹುಟ್ಟಬೇಕು. ಮೂರು ಗುಡಿಸಲು ಹಾಕಬೇಕು. ಕಳ್ಳಿಬೇಲಿ ಹಾಕಬೇಕು. ಗುಡಿಸಲಿಗೆ ಹುದಿ, ಎಲ್ಲೆ ಕಟ್ಟು ನಿರ್ಮಿಸಬೇಕು. ನನ್ನ ತಾಯಿಯೊಬ್ಬಳೇ ಆ ಗುಡಿಸಲಲ್ಲಿ ವಾಸಿಸಬೇಕು. ಅಲ್ಲಿಗೆ ನರಮನುಷ್ಯರು ಬರಬಾರದು. ಬಂಧು-ಬಳಗ, ಹೆತ್ತವರು, ಸೂಲಗಿತ್ತಿಯರು ಬರಕೂಡದು ಎಂದು ಜುಂಜಪ್ಪನ ಆಜ್ಞೆಯಾಗಿತ್ತು. ತಾಯಿ ಹೊಟ್ಟೆಯೊಳಗಿದ್ದಾಗಲೇ ಆದರೂ ಆಲೇಗೌಡ, ಮನೆಯ ಹಿರೇಸೊಸೆ, ಮನೆಗೆ ಮೊಮ್ಮಕ್ಕಳು ಹುಟ್ಟುತ್ತಾರೆ. ಹೆರಿಗೆ ಬೇನೆ, ಬಾಣಂತಿ ನೋವು ನೋಡಿಕೊಳ್ಳಲು ಸಹಾಯಕ್ಕೆ ಇರಲಿ ಅಂಬ್ತಾ ನನ್ನನ್ನು ಕರೆಸಿದರು. ನಾನು ಕಳುವಾರಹಳ್ಳಿಗೆ ಕಾಲಿಕ್ಕಿದೆ ನೋಡಪ್ಪ ಅದೆಲ್ಲಿತ್ತೋ ಹೊಟ್ಟೆಬೇನೆ. ಅದು ನಿನ್ನ ಹೆರುವಾಗ ಇಲ್ಲದ್ದು, ಮೂರು ಮಕ್ಕಳ ಹೆರಿಗೆಯಲ್ಲೂ ಇಲ್ಲದ್ದು ಆಗ ಸುರುವಾಯಿತು. ತೇಟ್ ಅದೇ, ಹೊಟ್ಟೆಯೊಳಗೆ ಮಗ ಓಡಾಡುವುದು, ಕಾಲಿಂದ ಒದೆಯುವುದು. ಹಿಂಸೆ ಹಿಂಸೆ ತಡಕಳಕ್ಕಾಗದಷ್ಟು ಹಿಂಸೆ. ಕಡೆಗೆ ಸ್ವಾಮಿ ನಿನ್ನ ಆಜ್ಞೆ ಮೀರಿ ನಿನ್ನ ಮುಟ್ಟುದುಕೆ ಬಂದುದು ಸರ್ವತಾ ತಪ್ಪಾಯಿತು ದೇವರೆ. ಅಪರಾಧ ಮಾಡಿದೆ. ನನ್ನ ತಪ್ಪು ಹೊಟ್ಟೆಗಾಕಿಕೊಳ್ಳಪ್ಪ ಅಮ್ತಾ ತಪ್ಪು ದಂಡ ಕಟ್ಟಿ ಕಳುವಾರಹಳ್ಳಿಯಿಂದ ಕಾಲು

ತೆಗೆದ ಮೇಲೆ ಉಸಿರಾಡುವಂಗಾಯ್ತು. ಆಮೇಲೆ ಅಲ್ಲಿಂದ ಬೇವಿನಹಳ್ಳಿ ತಲುಪದರೊಳಗೆ ಎಂದಿನ ಮನುಷ್ಯಳಾದೆನಪ್ಪ. ಇಂಥ ದೊಡ್ಡವನ ಮೇಲೆ ಯುದ್ಧಕ್ಕೆ ಹೋದರೆ ನೀನು ಸುಟ್ಟುಹೋಗಿಬಿಡುತೀಯಪ್ಪ. ಬೇಡ' ಅಂದಳು ದೊಡ್ಡತಾಯಿ ತಿಮ್ಮಕ್ಕ.

ಆ ವ್ಯಾಳ್ಯಕೆ ದಂಡು ಬಂದು ಕೋಟೆ ಬಾಗಿಲಾಗೆ ನಿಂತುಬಿಟ್ಟು ರಣ ಬೇರೆ ಬಾರಿಸುತವೆ. ಡೋಲು, ನಗಾರಿ ಕುಣೀತಾವೆ. ಜೋಡು ಕಳಸದೋರು, ಆರತಿ ತಗೊಂಡು ಬಂದ್ರು. ತಾಯಿ ಮಾತು ಮೀರಿ ರಂಗಪ್ಪ ಆಚೆಗೆ ಕಾಲಿಕ್ಕುತ್ತಿದಂಗೆ ಹೆಗಲ ಮ್ಯಾಗಳ ಶಲ್ಯ ಕೆಳಕೆ ಬಿತ್ತು. ಮುಂದಕ್ಕೆ ಮೂರು ಹೆಜ್ಜೆ ಇಟ್ಟ. ವಜ್ರದ ಕತ್ತಿ ಕೆಳಗೆ ಬಿತ್ತು. ಬಲಗಡೆ ಕೋಟೆ ಬದಿಯಿಂದ ನಾಗರಹಾವು ಬುಸ್ ಎಂದು ಎದುರಾತು. ಒಂದಲ್ಲಾ ಒಂದು ಅವಲಕ್ಷಣ ನಡೀತಾ ಹೋದವು. ತಾಯಿ ವಂಶಕ್ಕೆ ಒಬ್ಬನೇ ಮಗ. ದೇವತೆಗಳ ಸಮಾನವಾದ ಸ್ವಾಮಿ ಜುಂಜಪ್ಪನ ಮೇಲೆ ಯುದ್ಧಕ್ಕೆ ಹೋದರೆ ಅವುನ ಬದುಕಾದುಂಟಾ? ಬಾಳಾದುಂಟ? ಮೀಸೆ ಬಂದ ಮಗ ತಾಯಿ ಮಾತು ಕೇಳಾದುಂಟ? ಅಂದು ಕೋಟೆಯೊಳಗೆ ಒಬ್ಬೊಬ್ಬರೇ ಮಾತಾಡಿಕೊಳ್ಳುತ್ತಾರೆ.


ಯಾರು ತಡೆದರೂ ಸೀರ್ಯಾದ ರಂಗಪ್ಪ ಜುಂಜಪ್ಪನ ಮೇಲೆ ಯುದ್ಧಕ್ಕೆ ಹೊರಟುಬಿಟ್ಟ. ಗುಡ್ಡದರಂಗಪ್ಪನನಿಗೆ ನಿಂತು ನಮಸ್ಕಾರ ಮಾಡಿದ. ಕೇಡುಗಾಲ, ಎಡಗಣ್ಣು ಅದುರಿದಂಗಾಯ್ತು. ಎಡದಲೆ ಶೂಲೆ ಬಂದಂಗಾಯ್ತು. ಯಾಕೆ ಅಂತ ಅನುಮಾನ ಬಂತು. ಆದರೂ ನಾಯ್ಕ ಮಕ್ಕಳು ಮುಂದೆ ಇಕ್ಕಿದ ಕಾಲು ಹಿಂದೆ ತೆಗೆಯೋ ಹಂಗಿಲ್ಲ. ದಂಡು ದಳವಾಯಿಗಳ ಜೊತೆ ಮುಂದೆ ಮುಂದೆ ಹೋದ.

ಇತ್ತ ರಂಗಪ್ಪ ತನ್ನ ಮೇಲೆ ಯುದ್ಧಕ್ಕೆ ಬರೋದು, ತನ್ನ ದನಗಳ ಮೇಲೆ ಕಣ್ಣಾಕಿರೋದು ತಿಳಕೊಂಡಿದ್ದ ಜುಂಜಪ್ಪ ಅವುನು ಬರಲಿ ಅಂದುಬಿಟ್ಟು ಕಾಯ್ತಾ ಇದ್ದ. ಆಮೇಲೆ ದೇವೇಂದ್ರನಿಗೆ ಓಲೆ ಬರೆದು ಒಂದು ಕುದುರೆ ತರಿಸಿಕೊಂಡಿದ್ದ. ಆ ಮಾಯಾದ ಕುದುರೆ ಮುಂದೆ ನಿಂತು ಹೇಳಿದ 'ನನಗೆ ಒಂದು ಚೂರು ತೊಂದರೆ ಆದರೂ ಆಗಲಿ. ಏಳು ಲಕ್ಷದ ಒಳಗೆ ಒಂದೇ ಒಂದು ಕರುವಿಗೂ ಏನಾದರೂ ತೊಂದರೆ, ತಾಪತ್ರಯವಾದರೆ ನಾನು ಸುಮ್ಮನೆ ಇರೋಕಿಲ್ಲ' ಎಂದು ಹಲ್ಲು ಕಡಿದು, ಉರಿಗಣ್ಣು ಬಿಟ್ಟ ಸ್ವಾಮಿ. ದೇವೇಂದ್ರನ ಮಾಯಾದ ಕುದುರೆ ನೇರವಾಗಿ ಮದ್ದಕ್ಕನಹಳ್ಳಿ, ಹೊನ್ನೇನಹಳ್ಳಿ ದಿಣ್ಣೆಗೆ ಸೀರ್ಯಾದ ರಂಗಪ್ಪನ ದಂಡು ತಡೀತು. ಆಳು ಇಲ್ಲ, ದಂಡು ಇಲ್ಲ, ದಳವಾಯಿಗಳಿಲ್ಲ. ಲಾಳದ ಕುದುರೆ ಆಕಾಶ ಮಾರ್ಗದಲ್ಲಿ ಹಾರಿಬಂದು, ರಂಗಣ್ಣನ ದಂಡು ಮುತ್ತಿತು. ರಂಗಣ್ಣನ ದಂಡಿನಾಗೆ ತಳವಾರರ ದಂಡು, ಸಾಬರ ದಂಡು, ವ್ಯಾಪಾರದವರ ದಂಡು ಅಂತ ಮೂರು ಭಾಗ

ಮಾಡಿಕೊಂಡಿದ್ದನಣ್ಣ. ಬಿಳಿ ಕುದುರೆ, ದೇವೇಂದ್ರನದು, ಕುದುರೆ ಸೀರ್‍ಯಾದ ರಂಗಣ್ಣನ ದಂಡಿನ ಮೇಲೆ ಹಾರಿಬಿಡ್ತು.

ಮದ್ದಕ್ಕನಹಳ್ಳಿ ಏಣಿನಾಗೆ ಸೇರಿಬಿಟ್ಟೈತೆ ಸೀರ್‍ಯಾದ ಮನೆಗಾರ ರಂಗಪ್ಪನಾಯ್ಕನ ದಂಡು. ಸ್ವಾಮಿ ಜುಂಜಪ್ಪ ಹೇಳುತಾನೆ ಬಸರೇರು ಇರುತಾರೆ, ಬಾಣಂತಿಯರು ಇರುತಾರೆ, ತಾಯಿ ಮಗ ಇರುತಾರೆ. ಅವರ್‍ಯಾರಿಗೂ ಸಾವು ಬರಬಾರದು ಅಂಗೆ ಅವರನ್ನೆಲ್ಲಾ ಹಿಂತಿರುಗಿಸಬೇಕೆಂದು ದೇವೇಂದ್ರನ ಕುದುರೆಗೆ ಹೇಳಿಬಿಟ್ಟು ಕಳುಹಿಸಿದ. ಬಂತು ದಂಡಿಗೆ. ಇತ್ತ ದಂಡಿನಾಗೆ ಕುದುರೆ ಮುಂದಕೆ ಓಡಿಸಿದರೆ ಹಿಂದು ಹಿಂದಕೆ ಎಳೀತಾವೆ. ರಥ ಒಂದೆಜ್ಜೆ ಮುಂದಕ್ಕೆ ಹರಿಯೋದಿಲ್ಲ. ಮೂರು ಸಾವಿರ ದಂಡಿನ ಸೈನ್ಯಕ್ಕೆ ಕಣ್ಣೇ ಕಾಣುವುದಿಲ್ಲ. ಕುದುರೆ ಮೇಲಿಂದ ಹಾರಿ ಬಂದುದು ತಲೆಗೆ ಲಟ್ಟಂತೆ ಹೊಡೆಯುತ್ತೆ. ಒಬ್ಬರಿಗೂ ರಕ್ತನೇ ಸುರಿಯುವುದಿಲ್ಲ, ಆದರೂ ನೋವು ತಡೆದುಕೊಳ್ಳಲಾಗುವುದಿಲ್ಲ. ರಂಗಣ್ಣ ಕಂಡ ಬುದ್ದಿನೆಲ್ಲಾ ಖರ್ಚು ಮಾಡುತಾನೆ. ಏನು ಮಾಡಿರುನೂ ಮುಂದಕೆ ಒಂದು ಹೆಜ್ಜೆ ಇಡಕಾಗುವುದಿಲ್ಲ. ಏನು ಮಾಡಬೇಕು ಅಂಬೋದು ನೆಪ್ಪು ಅರಿಯಲಿಲ್ಲ. ಕೊನೆಗೆ ಸೈನಿಕರಲ್ಲಿ ಹಿರಿಯನೊಬ್ಬ ಓಬನಾಯಕ ಅಂಬ್ತಾ ಇದ್ದ. ಅವುನು ಓಡಿ ಬಂದು ಸೀರ್‍ಯಾದ ರಂಗಣ್ಣನಿಗೆ ಹೇಳಿದ 'ಅಯ್ಯೋ ಅಯ್ಯೋ ನಾವು ಯುದ್ಧಕ್ಕೆ ಬಂದಿರೋದು ಮುಕ್ಕಣ್ಣ ಕಣಪ್ಪ, ಈಶ್ವರ. ಮಾಯಾದ ಕುದುರೆ ಬಿಟ್ಟು, ಬಿಟ್ಟುಬಿಡದೆ ಹೊಡೆಸಿ ಗಾಸಿ ಮಾಡುತ್ತಿದ್ದಾನೆ. ಅಂಗೂ ಮುಂದಕ್ಕೆ ಹೋದರೆ ಎಲ್ಲರ ಪ್ರಾಣನೇ ಕಳೆದುಬಿಡುತಾನೆ. ಸ್ವಾಮಿ ಜುಂಜಪ್ಪನ ಮೇಲೆ, ಅದೂ ಅವುನ ಬಸವಗಳ ಮೇಲೆ ಯುದ್ಧಕ್ಕೆ ಬಂದದ್ದು, ಸರ್ವಥಾ ತಪ್ಪಾಯಿತು. ಅವುನತಾಕೆ ತಪ್ಪು ಕ್ಷಮೆ ಮಾಡಬೇಕು' ಎಂದು ಹೇಳಿದನು.

ಆಗ ಜುಂಜಪ್ಪ ಪ್ರತ್ಯಕ್ಷನಾಗಿ ಹೇಳಿದ 'ಈ ಹೊತ್ತು ಭೂಮಿಗೆ ತುಳಿದು ಹಾಕಿಬಿಡುತ್ತಿದ್ದೆ. ಬದುಕಿದೆ, ಪಾಪಿ. ಶಕ್ತಿ ಅದೆ, ಐಶ್ವರ್ಯ ಅದೆ, ಮಂದಿ ಮಾರ್ಬಲ ಅದೆ ಅಂಬ್ತಾ ಬಡವರ ಮೇಲೆ ಕೆಕ್ಕರಿಸಿಕೊಂಡು ಹೋಗುತೀಯ? ನಿನ್ನ ನಾಯಕಸ್ಥಾನ ನಿಮ್ಮ ಮನೆಗಿರಬೇಕು, ಬಡವರ ಮೇಲಲ್ಲ, ಅನಾಧ್ರಿಗಳ ಮೇಲಲ್ಲ' ಅಂದನು. ಆಗ ರಂಗಪ್ಪನಾಯ್ಕ ಕೈ ಮುಗಿದುಕೊಂಡು 'ನನ್ನದು ತಪ್ಪಾಯಿತು ಮಹಾಸ್ವಾಮಿ, ನಿನ್ನ ಹೊಟ್ಟೆ ಒಳಗೆ ಹುಟ್ಟಿದಾನು ಅಂಬ್ತಾ ತಿಳಕೊಂಡು ಬಿಟ್ಟುಬಿಡು. ನಾನಿನ್ನೆಂದೂ ನಿನ್ನ ಸುದ್ದಿಗೆ ಬರೋದಿಲ್ಲ. ನಿನ್ನ ಹೆಸರು ಹೇಳಿಕೊಂಡು ಜೀವ್ನ ಹೊರೀತೀನಿ. ನಾನು ನಿನ್ನ ಒಕ್ಕಲು ಮಗನಾಗಿ ಬಾಳುತೀನಪ್ಪ. ನೀನು ಗುಡಿ ಬಿಟ್ಟು ಮೆರವಣಿಗೆ ಹೊರಟರೆ ನಿನ್ನ ಮುಂದೆ ಎದೆಗೆ ಕೋಲು ಊರಿಕೊಂಡು ದೀಪ ತಲೆ ಮೇಲೆ ಹೊತ್ತುಕೊಂಡು ನಿನ್ನ ಸೇವೆ ಮಾಡುತೀನಿ. ಕೋಲುಕಾರ ಅಂತ ಕರೆಸಿಕೊಂಡು, ನಿನ್ನ ವೀಳ್ಯೆ ತಿನ್ನುತೀನಿ. ನನ್ನ ವಂಶಪಾಲಕರಿಗೂ, ಕುಲಸ್ಥರಿಗೂ



ಜುಂಜಪ್ಪಸ್ವಾಮಿ ಕೋಲುಕಾರರಾಗಿ, ಸ್ವಾಮಿ ಸೇವೆ ಮಾಡ್ರಪ್ಪ ಅಂಬ್ತಾ ಹೇಳಿ ಸಾಯ್ತೀನಪ್ಪ' ಅಂಬ್ತಾ ಜುಂಜಪ್ಪನಿಗೆ ಶರಣಾಗಿಬಿಟ್ಟ. ಕಲ್ಲು, ಮಚ್ಚು, ಕತ್ತಿ, ಭರ್ಜಿ ಹಿಡಿದಿದ್ದ ಸೈನಿಕರೆಲ್ಲ ಅಲ್ಲಲ್ಲೆ ಕೆಳಕೆ ಹಾಕಿರು. ಆಯುಧ ಹಿಡಿದ ಕೈಗಳೆಲ್ಲಾ ಜುಂಜಪ್ಪನಿಗೆ ಕೈಜೋಡಿಸಿ ಶರಣು ಮಾಡಿದರು.

# ಸತ್ತು ಬದುಕಿದ ದೊಡ್ಡಕ್ಕ

ಜುಂಜಪ್ಪ, ಸೀರ್ಯಾದ ರಂಗಣ್ಣನ ವಿರುದ್ಧ ಯುದ್ಧ ಮಾಡಿದನಲ್ಲ ಅದು ಮಾಯಾದ ಯುದ್ಧ. ಅದಕ್ಕೆ ರಂಗಣ್ಣ ಸೋತು ಶರಣಾಗಿ ಜುಂಜಪ್ಪನಿಗೆ ಶರಣಾಗಿಬಿಟ್ಟ. ಇನ್ನು ಮೇಲೆ ಮುಚ್ಚಳೋರು ನಾಯಕರು ಎಲ್ಲಿದ್ದರೂ ಸ್ವಾಮಿ ಜುಂಜಪ್ಪನ ಶಿಶುಮಕ್ಕಳಾಗಿ ಸ್ವಾಮಿಗೆ ಕೋಲುಕಾರರು ಅಂಬ್ತಾ ಬಿರುದಾಂಕಿತ ಮಾಡಿಬಿಟ್ಟ. ಜುಂಜಪ್ಪನ ಜಾತ್ರೆಗೆ, ಮೆರವಣಿಗೆ ಕೋಲು ಹಿಡಿಯೋರು ಮುಚ್ಚಳದ ನಾಯಕರೆ. ದೇವರ ಪ್ರಸಾದ ಹಕ್ಕುದಾರಿಕೆಯಲ್ಲಿ ಗೌಡ, ಕಟ್ಟೆಮನೆ ಗೌಡ, ಪೂಜಾರಿ, ಕುಳವಾಡಿಗಳಂತೆ ಕೋಲುಕಾರನಿಗೂ ಒಂದು ಪಾಲು ಎತ್ತುತಾರೆ. ಆ ಹೊತ್ತಿನಿಂದ ನಾಯಕರೂ ಜುಂಜಪ್ಪನ ಹಬ್ಬ ಮಾಡುತಾರೆ. ಸೋಮವಾರ ಮನೆದೇವರು ವಾರದಂತೆ ವಾರ ಮಾಡುತಾರೆ. ಆ ವಾರ ಮಾಂಸ-ಮಡ್ಡಿ ತಿಂಬಾದಿಲ್ಲ.

ಸ್ವಾಮಿ ಜುಂಜಪ್ಪ ಮಾಯಾದ ಕುದುರೆ ಕರೆದು ಹೇಳಿದ 'ಅಣ್ಣ ದೇವೇಂದ್ರರಾಯನ ಆಸ್ಥಾನ ಸೇರಿಕೊಂಡುಬಿಡಪ್ಪ. ನಾವು ಬಂಗ ಬಡತನದಲ್ಲಿ ಬದುಕೋ ಜನ. ಅಡವಿ ಹುಲ್ಲು, ಮಡುವಿನ ನೀರು' ಅಂತ ಹೇಳಿ ದೇವೇಂದ್ರರಾಯ ಕಳುಹಿಸಿದ್ದನಲ್ಲ ಮಾಯಾದ ಕುದುರೇನ ಹಿಂದಕ್ಕೆ ಕಳುಹಿಸಿದ. ಪ್ರಜೆಪಾಲಕರಿಗೆಲ್ಲಾ ಆಶೀರ್ವಾದ ಮಾಡಿಬಿಟ್ಟು ಸ್ವಾಮಿ ತಮ್ಮಗಳ ಕರಕೊಂಡು ಕಳುವಾರಹಳ್ಳಿ ಕಡೆಗೆ ಬಂದ.

ದಿಣ್ಣೆ ಕಡಿಕೆ ತಿರುಗಿದವನು ಯಾಕೋ ದನಗಳ ಗೂಡು ನೋಡಂಗಾಯ್ತು. ನೇರವಾಗಿ ಕುಂಬಾರಹಳ್ಳಿ ಏಣಿಗೆ ಬಂದ. ಅವುನ ಬರುವಾಗಲೇ ದೂರದಿಂದ ಅವರ ಅಜ್ಜ ಹೊನ್ನಟ್ಟಿ ಆಲೇಗೌಡ ಓಡೋಡಿ ಬರುತ್ತಿರುವುದನ್ನು ಕಂಡ ಜುಂಜಪ್ಪ ಅಷ್ಟು ದೂರದಿಂದಲೇ ತಾತನಿಗೆ ಶರಣು ಮಾಡಿ ಹುಸಿನಗೆ ನಕ್ಕನು. 'ಪಾಪಿ ಮುಂಡೆ ದೊಡ್ಡಿ ಸತ್ತು ಹೋಗಿಬಿಟ್ಟಳು. ನಿನ್ನ ಮೇಲಿನ ಹಗೆಯೇ ಈ ಸಾವಿಗೆ ಕಾರಣವಪ್ಪ. ಈ ವಯಸ್ಸು ಹೋದ ಕಾಲದಲ್ಲಿ ಮೊಮ್ಮಗನೇ ಅಜ್ಜಿನ ಸಾಯಿಸಿದ ವಂಶ ಅಂತ ಅಪವಾದ ಹೊತ್ತುಕೊಂಡು ತಿರುಗುವಂತಾಯ್ತು. ಅರಿಯದ ಮುಂಡೆ, ಅವರ ಅಪ್ಪನ ಮನೆಯಿಂದ ಅವರೆಕಾಯಿ ತಂದವಳಂಗೆ

ನಡೆದುಕೊಂಡುಬಿಟ್ಟಾಳೆ. ನಿನ್ನದೇ ಹೊಲ. ಅವುಳನ್ನ ಕೇಳದೆ ನೀನು ಅವರೆಕಾಯಿ ತಗೊಂಡು ಹೋಗಿದ್ರೆ ಯಾರು ಬ್ಯಾಡ ಅಂತಿದ್ರಪ್ಪ? ತಪ್ಪಾಯ್ತು ಮಾಡಬಾರದ ಮಾಡಿ ಆಗುಬಾರದ ತಂದುಕೊಂತು. ಇದೊಂದು ಸಲ ಅವುಳ ಪ್ರಾಣ ಉಳಿಸಪ್ಪ' ಅಂತ ಆವಜ್ಜ ಬೇಡಿಕೊಂತು. ಆಗ ಜುಂಜಪ್ಪನೂ ಮರುಗಿಬಿಟ್ಟ. ನರಮನುಷ್ಯರ ಮೇಲೆ ದ್ವೇಷಸಾಧನೆ ತರವಲ್ಲ ಅಂದು, ಕೂಡಲೇ ಗಣೆ ತಗೊಂಡು ಊದಿಬಿಟ್ಟು ನಾಗರಾಜನನ್ನು ಕರೆದ. ಅಲ್ಲೇ ಹುತ್ತದೊಳಗೆ ಮಲಗಿದ್ದ ನಾಗರಾಜ ಬಂದು ಸ್ವಾಮಿ ಮುಂದೆ ನಿಂತುಕೊಂತು. 'ಕಳುವರಹಳ್ಳಿ ಎರೆಹೊಲದಾಗೆ ಮೊನ್ನೆ ನೀನು ಮುಟ್ಟಿದ ಅಜ್ಜಿ ಸತ್ತುಹೋಗಿದೆ. ನೀನು ಈಗ ಅಲ್ಲಿಗೆ ಹೋಗಿ ವಿಷ ಮುಟ್ಟಿದ ಜಾಗದಲ್ಲಿ ಮುಟ್ಟಿ ವಿಷ ತಕ್ಕೊಂಡುಬಿಡು ನಾಗೇಂದ್ರ' ಅಂದ. ನಾಗರಾಜ ಭೋರ್ಗರೆಯುತ್ತಾ ಹೋಗಿ ದೊಡ್ಡಕ್ಕಜ್ಜಿನ ಕಚ್ಚಿದ ಜಾಗದಲ್ಲಿ ಸೇರಿಕೊಂಡು ವಿಷ ಹೀರಿಕೊಂಡು ಬಿಡ್ತು. ಆವಜ್ಜಿ ಎದ್ದು ಕೆಮ್ಮಿ ಕುಂತುಕೊಂಡಳು. ಅವರೆ ಹೊಲ ಮೂಡಲ ಮೂಲೆಲಿ ಮೂರು ಗಿಡ ಬಿಟ್ಟು ಉಳಿದುದೆಲ್ಲಾ ಬಸವ ಮೇಯ್ಕಂಡು ಹೋಗಿತ್ತು. ತಾನು ಈ ಹಿಂದೆ ಜುಂಜಪ್ಪನಿಗೆ, ಜಂಗಮಯ್ಯನಿಗೆ, ಜೋಗಪ್ಪನಿಗೆ ಅವರೆಕಾಯಿ ಇಲ್ಲ ಅಂತಾ ಕಳಿಸಿದ್ದು ಗೊತ್ತಾಗಿ ಜುಂಜಪ್ಪನೇ ಇದೆಲ್ಲಾ ಮಾಡಿರನು ಅಂದುಕೊಂಡಳು. ಆಗ ಗೊತ್ತಾಯಿತು ತಾನು ಸತ್ತು ಬದುಕಿದ ಸಂಗತಿ. ಅಷ್ಟೊತ್ತಿಗೆ ಬಂಧು-ಬಳಗ, ಮಕ್ಕಳು ಮರಿಗಳ ಜೊತೆಗೆ ಸೇರಿಕೊಂಡಳು.

ಇತ್ತ ಜುಂಜಪ್ಪ ಮೂರು ಹಿಡಿ ಅವರೇಕಾಯಿ ತಗೊಂಡೋಗಿ ಹಿರೇಯರ ಹಬ್ಬ ದೀವಣಿಗೆ ಹಬ್ಬ ಮಾಡಿದ. ಇದೇ ಹಿರಿಯರ ಹಬ್ಬವಾಗಿ, ದೀವಣಿಗೆ ಹಬ್ಬ ಅಂತ ನಿಂತುಬಿಡ್ತು. ಜುಂಜಪ್ಪ ಸೀರ್ಯಾ ರಂಗಣ್ಣನನ್ನು ಸೋಲಿಸಿ, ಸತ್ತೋಗಿದ್ದ ಸೋದರಜ್ಜಿ ದೊಡ್ಡಕ್ಕಜ್ಜಿಯನ್ನು ಬದುಕಿಸಿದ ಮೇಲೆ ಆತನ ಘನಮಹಿಮೆ ಅಗಾಧವಾಗಿ ಎಲ್ಲಾ ಕಡೆ ಹರಡಿಕೊಂಡುಬಿಡ್ತು. ಆದರೂ ಜುಂಜಪ್ಪ ಮಾತ್ರ ಆರಕ್ಕೆ ಏರಲಿಲ್ಲ, ಮೂರಕ್ಕೆ ಇಳಿಯಲಿಲ್ಲ. ಹಿಂಗೇ ಒಂದು ಆರು ತಿಂಗಳು ಕಳೆಯುತ್ತಾ ಬಂತು. ಸಿರಾ ಸೀಮೆಗೆ ಒಂದು ತರ ರಾಹು ಬಡಿದಂಗಾಯ್ತು. ಜುಂಜಪ್ಪನ ಮೇಲೆ ಯುದ್ಧ ಮಾಡಕೋಗಿದ್ದ ಸೀರ್ಯಾದ ರಂಗಣ್ಣನಿಗೂ ಹೆಚ್ಚು ದಿನ ಉಳಿಗಾಲವಾಗಲಿಲ್ಲ. ಬರಗಾಲ ಬೇರೆ ಬಂದುಬಿಡ್ತು. ಜುಂಜಪ್ಪನ ದನಗಳು ಸಿರಾದ ಕೆರೆ ಮುಂದೆ ಮೇಯ್ದು ಗುಮ್ಮನಹಳ್ಳಿ ಮೇಲಾಸಿ ಮ್ಯಾಕೆರಹಳ್ಳಿ, ನಿಂಬೇರಮರಹಳ್ಳಿ ಕಾವಲಿಗೆ ಬಂದು, ಮರಡಿಗುಡ್ಡದ ಕಾವಲಿಗೆ ಬಂದುಬಿಡುತ್ತಿದ್ದವು. ಅಂಗೆನೇ ಹಾಲು ಕರೆಯೋ ದನಗಳೆಲ್ಲ ಸಿರಾ ಕೆರೆಯೊಳಗೆ ಮುಗಣ್ಣಗಾಸಿ ಮೇಯ್ದು ಅರೇಹಳ್ಳಿ ಅಡ್ಡಗಾಗಿ ತಿರುಗಾಡಿ ಹಾಲುಕೂರು ಹತ್ತಿರಕ್ಕೆ ಬಂದುಬಿಡುತ್ತಿದ್ದವು. ಅಲ್ಲಿ ಸ್ವಾಮಿ ಜುಂಜಪ್ಪ ದನಿನ ಕರುಗಳಿಗೆ ಹಾಲು ಕುಡಿಸೋ ಸ್ಥಳವಾಗಿತ್ತು. ಯಾರಾದರೂ ಪಾಪಿ ಪರದೇಶಿಗಳು ಹುಟ್ಟಿದ

ಹಸುಮಕ್ಕಳಿಗೆ ಹಾಲು ಕರೆದು ಕೊಡುತ್ತಿದ್ದ ಜಾಗವಾಗಿತ್ತು.

ಯಾವಾಗ ಸಿರಾ ಸೀಮೆಗೆ ಬರಗಾಲ ಬಂದುಬಿಡ್ತು, ದನಗಳಿಗೆ ಸುಲ್ಲು ನೀರಿಲ್ಲದಂಗಾಯ್ತು. ಎಲ್ಲಿ ನೋಡಿದರೂ ಒಂದು ಕಡ್ಡಿ ಹಸಿರಿಲ್ಲ. ಬಾಯಾರಿದರೂ ಕುಡಿಯಾಕೆ ಒಂದು ತೊಟ್ಟು ನೀರೂ ಇಲ್ಲದಂಗಾಯಿತು. ಜುಂಜಪ್ಪನ ದನಗಳು ತತ್ತರಿಸುತ್ತವೆ ಹುಲ್ಲು ನೀರಿಗೆ. ರಣಬಿಸಿಲು ಕಾಯ್ದು ಗಣಗಣ ಒಡೆಯುತ್ತದೆ. ಏನು ಮಾಡಾದು ತಿಳಿಯುವಂತಿಲ್ಲ. ಆಗ ತಮ್ಮಂದಿರಾದ ಮಾರಣ್ಣ ಮೈಲಣ್ಣರು ಮೂಡಲ ಪಟ್ಟಣಕೆ ಹೋದರು, ಪಡುವಲ ಪಟ್ಟಣಕೆ ಹೋದರು, ತೆಂಕಣ ಪಟ್ಟಣಕೆ ಹೋದರು, ಬಡಗ ದಿಕ್ಕಿಗೆ ಹೋದರು. ಹೋದವರೆಲ್ಲಾ ತಿರುಗಿ ತಿರುಗಿ ಕಾಲು ಸವೆದು ಉಸ್ ಅಂಬ್ತಾ ಬಂದು ಗೂಡು ಸೇರಿಕೊಂಡರು. ಅಣ್ಣನಿಗೆ ಸುದ್ದಿ ಕೊಟ್ಟರು. ಉತ್ತರ ದೇಶದೊಳಗೆ ಮೂರು ಹನಿ ನೀರಿಲ್ಲ. ಹಸಿರೆಂಬೋದು ದೆಸೆಯಿಲ್ಲ ಅಣ್ಣಯ್ಯ ಅತ್ತ ಕಡೆಗೆ ದನ ಬಿಡಬ್ಯಾಡ ಅಂದರು. ತೆಂಕತಿಟ್ಟಿನ ಕಡೆಗೆ ಹೋದ ಈರಭದ್ರ, ಗಿರಿಮಲ್ಲ ಎಂಬ ಹೋರಿಗಳು ನೀರಿನ ಜರಿನೂ ಕಾಣದೆ ಮೂರು ದಿನ ತಿರುಗಿ ಮುಖ ಒಣಗಿಸಿಕೊಂಡು ಬಂದವು. ಜುಂಜಪ್ಪನಿಗೆ ಸ್ಯಾನೆ ಯೋಚ್ನೆ ಆಗಿಬಿಡ್ತು. ಏನು ಮಾಡೋದು ಅಂಬ್ತಾ ಚಿಂತೆ ಮಾಡುತ್ತಿರುವಾಗ್ಗೆ ಜುಂಜಪ್ಪನ ದನಗಳ ಒಳಗಿರೋ ಪಂಚಕಲ್ಯಾಣಿ ಹಸು ಮುಂದೆ ಬಂತು. ಇದೇ ಪಂಚಕಲ್ಯಾಣಿ ಹಸು ಆ ಹೊತ್ತು ಅವರು ಸೋದರ ಮಾವುಗಳು ಮಾಟ, ಸೂನ್ಯ ಮಾಡಿದಾಗ ಪರಸವ್ವನ ಕೆರೆ ನೀರು ವಿಷದ ಮಂಡಲ ಒಡೆದಿತ್ತಲ್ಲ, ಆ ನೀರನ್ನು ಕುಡಿಯಾಕೆ ಜುಂಜಪ್ಪನ ದನಗಳು ಬಂದಾಗ ಅವುಗಳನ್ನ ಹಿಂದಕ್ಕೆ ಓಡಿಸಿ, ದನಗಳು ನೀರು ಕುಡಿದಂಗೆ ಮಾಡಿತ್ತು. ಅದೇ ಹಸು ಪಂಚಕಲ್ಯಾಣಿ ಈಗ ಜುಂಜಪ್ಪನಿಗೆ ಹೇಳಿತು 'ಅಣ್ಣಯ್ಯ ಹಿರಿ ಯೋನೆ, ಮೂಡಲಕ್ಕೆ ಹೋಗಂಗಿಲ್ಲ, ತೆಂಕಣಕ್ಕೆ ನೀರಿಲ್ಲ, ಬಡಗಲಿಕೆ ಹುಲ್ಲಿಲ್ಲ. ಈಗ ನಾವು ಪಡುಗಡೆ ಹೋಗುವ. ಪಡುಗಡೆ ದಿಕ್ಕಿನಾಗೆ ನೀರು, ಹುಲ್ಲಿನ ಜಾಗ ಇರಬಹುದು ಅನ್ನಿಸುತ್ತೆ. ಹೆಂಗಾರ ಆಗಲಿ ಹೋಗಾನ ಹಿರಿಯಣ್ಣ' ಅಂತು. ಜುಂಜಪ್ಪ ಯಾವಾಗಲೂ ಪಂಚಕಲ್ಯಾಣಿ ಹಸುವಿನ ಮಾತು ಮೀರೋದಿಲ್ಲ. ಹೇಗಾದರೂ ಆಗಲಿ ಹಸುವಿನ ಗೂಡಲಿ ಹುಲ್ಲು ನೀರು ಇಲ್ಲದೆ ದನಗಳು ಪ್ರಾಣ ಬಿಡಬಾರದು. ಜೀವನವೇ ಹೋಗಬಾರದು ಅಂದುಬಿಟ್ಟು ಪಡುಗಡೆಗೆ ದನ ಹೊಡೆದುಕೊಂಡು ಹೋಗಬೇಕು ಅಂಬ್ತಾ ಮನಸ್ಸು ಮಾಡಿದ. ಪಂಚಕಲ್ಯಾಣಿ ಮಾತಿನಂತೆ ತಮ್ಮಂದಿರು ಮಾರಣ್ಣ, ಮೈಲಣ್ಣರಿಗೆ ಹೇಳಿದ. ಭೂಮಿ ಒಣಗಿ ಬಾಯಿಬಿಡುತದೆ. ದನಗಳು ಮೇವಿಲ್ಲದೆ ಬಾಯಿ ಬಿಡುತಾವೆ. ನಾವು ಹಿಂಗೆ ಇದ್ದುಬಿಟ್ಟರೆ ದನಗಳು ಸತ್ತುಹೋಗಿಬಿಡುತಾವೆ. ಮಾವುಗಳು ಹಲ್ಲು ಮಸೆಯುತ್ತಾರೆ. ದನಗಳು ಸತ್ತರೆ ಅವರಿಗೆ ಹಾಲು-ತುಪ್ಪ ಉಂಡಂಗಾಗುತ್ತೆ. ಆಡಿಕಣರ ಮುಂದೆ ಅಂಗಾತ

ಬಿದ್ದಂಗಾಗುತ್ತೆ. ನಡೀರಪ್ಪ ನಮ್ಮ ಹಣೆಬರಹ ಇದ್ದಂಗೆ ಆಗಲಿ, ಪಡುಗಡೆಗೆ ದನ ಹೊಡೆಯುವ. ನಮ್ಮ ಅಪ್ಪಂದಿರೂ ಪಡುಗಡೆ ಜರಿಮಲೆ ಕಾಡಾಗೆ ದನ ಆಳಿದೋರು. ಎತ್ತಪ್ಪನೂ ವೇಣುಕಲ್ಲು ಗುಡ್ಡದಾಗೆ ದನಗಳಿಗೆ ಗೂಡು ಮಾಡಿದವನು. ಅಂಥ ಜಾಗ ನಮ್ಮನ್ನು ಕೈಬಿಡಲಾರದು ಅಂದನು.

ಮಾರಣ್ಣ, ಮೈಲಣ್ಣ ಆಗಲಣ್ಣ ಅಂತೇಳಿಬಿಟ್ಟುರು. ದೂರದ ದೇಶಕ್ಕೆ ಹೋಗಬೇಕು. ಜೆರಿಮಲೆ ಕಾಡು. ಇನ್ನು ಎಷ್ಟು ದಿನ ಆದೀತೋ ಅಂದುಬಿಟ್ಟು ತನ್ನ ತಾಯಿ ಚಿನ್ನಮ್ಮನ ಆಶೀರ್ವಾದ ಪಡೆದುಹೋಗಬೇಕೆಂದು ಬಿಟ್ಟು ಮಕ್ಕಳು ಕಳುವಾರಹಳ್ಳಿ ಊರೊಳಕೆ ಬಂದ್ರು. ಅವುರ ಮನೆ ಊರಿಂದ ಆಚೆಕಡೆನೆ ಇತ್ತಲ್ಲ, ಅಲ್ಲಿಗೆ ಬಂದ್ರು. ತಾಯಿ ಮಕ್ಕಳು ದನ-ಕರ ಅಂಬ್ತಾ ಊರಿಗೆ ಬರಲಿಲ್ಲ. ಅಡವಿ ಅರಣ್ಯದಾಗೆ ವಾಸ, ಮಡುವಿನ ನೀರು ಅಂತೇಳಿ ಬಂದಂತ ಮಕ್ಕಳಿಗೆ ಹಾಲು-ಅಮೃತದ ಅಡಿಗೆ ಮಾಡಿಳು. ಎಣ್ಣೆ ಹಚ್ಚಿ ಮಜ್ಜನ ಮಾಡಿಸಿದಳು. ಹೊಸ ಅರಿವೆ ಬಟ್ಟೆ ಉಡುಸಿದ್ಲು. ಉಂಡಂತ ಮಕ್ಕಳು 'ಅಮ್ಮ ನಾವು ಅಣ್ಣನ ಜೊತೇಲಿ ಜೆರಿಮಲೆ ಕಾಡಿನ ಕಡೆಗೆ ದನಗಳ ಹೊಡೆದುಕೊಂಡು ಹೋಗುತೀವಿ. ಯಾವ ಅಡವಿ ಬಯಲಾಗೂ ಒಂದು ಎಳೆ ಹುಲ್ಲುಕಡ್ಡಿ ಇಲ್ಲ. ಕನ್ನೆಸೊಪ್ಪು, ಕರಡಿಬುಡ್ಡು ಇಲ್ಲವಾಗಿದೆ. ಅಲ್ಲದೆ ಬಂಗ ಬಡತನದಲ್ಲೂ ನಮ್ಮನ್ನ ಕಾಪಾಡೋ ಗಂಗಾಮಾತೆ ಪರಸವ್ವನೂ ನೀರಿಲ್ಲದೆ ಒಣಗಿ ಹೋಗೆದೆ. ಹಿಂಗೆ ಆದ್ರೆ ನಮ್ಮ ದನವಾದಿ ದನಗಳೆಲ್ಲಾ ನುಣ್ಣಗೆ ಸತ್ತುಹೋಗುತಾವೆ. ನಮ್ಮ ದನಗಳ ಪೈಕಿ ಒಂದು ಕರು ಸತ್ತರೂ ನಮ್ಮ ಹಿರಿಯಣ್ಣ ಏಳು ಜನ್ಮ ಎತ್ತಿ ನರಕ ಅನುಭವಿಸಬೇಕಾಗುತ್ತೆ. ಅದರಿಂದ ದನಕರು ಹೊಡೆದುಕೊಂಡು ಹುಲ್ಲು ನೀರಿಗೆ ಹೋಗಬೇಕು. ಅಪ್ಪಣೆ ಕೊಡು' ಅಂತ ಮಾರಣ್ಣ ಮೈಲಣ್ಣ ಬೇಡಿಕೊಂಡರು. ಮಕ್ಕಳ ಮಾತು ಕೇಳಿದ ಮಾರಕ್ಕ 'ಅಯ್ಯೋ ಮಕ್ಕಳೇ, ಹುಟ್ಟಿ ಹನ್ನೆರಡು ವರ್ಷ, ಋತುಮತಿಯಾಗಿ ಹನ್ನೆರಡು ವರ್ಷ, ನಿಮ್ಮಪ್ಪನ ಮದುವೆಯಾಗಿ ಹನ್ನೆರಡು ವರ್ಷ ಪಡಬಾರದ ಪಾಡು ಪಟ್ಟೆ. ಈಗ ನೇರುಪಾದರೂ ಮಕ್ಕಳು ಕಾಡುಪಾಲಾಗಿ ಅಲೆಯುವಂತಾಯಿತಲ್ಲ ಶಂಕರನೆ. ಯೆಂತ ಕಷ್ಟ ಕೊಟ್ಟೆಪ್ಪ ಪರಮಾತ್ಮ' ಅಂಬ್ತಾ ಆಯಮ್ಮ ಚಿನ್ನಮ್ಮ ಕಣ್ಣೀರು ಹಾಕ್ತು. 'ಬಂಗ ಬಡತನ ನೀಚಿರಾಗುತ್ತೆ, ಇಲ್ಲೇ ಇದ್ದುಬಿಡಿರಪ್ಪ. ಜೆರಿಮಲೆ ಕಾಡಿಗೆ ನೀವು ಹೋಗಾದು ಬ್ಯಾಡ. ಅತ್ತ ಕಡಿಕೆ ಮಾಟ-ಶೂನ್ಯರು ಶ್ಯಾನೆ ಅದಾರಂತೆ' ಅಂಬ್ತಾ ಆಯಮ್ಮ ಕಣ್ಣೀರು ಹಾಕ್ತು. 'ದನ ಸತ್ತರೆ ನಮ್ಮ ತವರು ಮನೆಗೆ ಅಣ್ಣಗಳಿಂದ ಬೇಡಿ ನಾಲ್ಕು ಕರ ತರುತೀನಿ. ಅವೇ ಈಚಲು ಹೆಚ್ಚಿಕೊಂಡಂಗೆ ಹೆಚ್ಚಿಕೋತಾವೆ. ಹೋಗಬೇಡ್ರಪ್ಪ. ಕಂಡು ಕೇಳಿಲ್ಲದ ಸೀಮೆಗೆ' ಅಂಬ್ತಾ ಚಿನ್ನಮ್ಮ ಬಲವಂತಪಡಿಸಿದಳು. ಆದರೂ ಮಕ್ಕಳು ಅಣ್ಣನ ಆಜ್ಞೆಯನ್ನು ಮೀರುವಂತಿಲ್ಲ. ಜೆರಿಮಲೆ ಕಾಡಿಗೆ ದನಗಳನ್ನು

ಹೊಡೆದುಕೊಂಡು ಹೋಗಲೇಬೇಕೆಂದು, ತಾಯಿಗೆ ತಿಳಿಸಿ ತಾಯಿ ಕಾಲಿಗೆ ಶರಣು ಮಾಡಿಕೊಂಡು ಹೊರಟರು.

ಜುಂಜಪ್ಪ ಪರಮೇಶ್ವರ ಸ್ಮರಣೆ ಮಾಡಿಕೊಂಡು ಗಣೆ ಹಿಡಿದು ಪಡವಲ ಮುಖವಾಗಿ ಮುಂದೆ ಮುಂದೆ ಹೊರಟನು. ಹಿಂದೆ ಪಂಚಕಲ್ಯಾಣಿ ನಡುವೆ ಬಸವ, ಬಡಮೈಲ, ಗಿರಿಮಲ್ಲ, ಈರಭದ್ರ ದನಗಳು ಹೊರಟವು. ಎಷ್ಟು ದೂರ ಬಂದರೂ ಒಂದು ಹನಿ ನೀರಿಲ್ಲ. ಒಂದು ಪುಟ್ಟಕೂದಲಿನ ಹುಲ್ಲು ಗರಿ ಇಲ್ಲ. ಜುಂಜಪ್ಪ ಯೋಚನೆ ಮಾಡುತಾನೆ. ಭಗವಂತ ಹಿಂಗೆ ಆದ್ರೆ ನಾನೆಂಗಪ್ಪ ಈ ಗೋವುಗಳನ್ನು ಉಳಿಸಿಕೊಳ್ಳೋದು? ಈ ದನಗಳು ಸತ್ತೋಗಿ ಬಿಡುತಾವೆ. ದನಗಳು ಸತ್ತು ನಾನು ಈ ಪ್ರಪಂಚದ ಮೇಲೆ ಬದುಕಿ ಏನು ಪ್ರಯೋಜನ? ಅಂಬ್ತಾ ಜುಂಜಪ್ಪ ಯೋಚನೆಮಾಡಿಬಿಟ್ಟ. ಅಂಗೆಯೆ ಸ್ವಲ್ಪ ದೂರಕ್ಕೆ ಬಂದ, ಹಂಡೇನಹಳ್ಳಿ ದಾಟಿ ತಾವರೆಕೆರೆ ಹಾದು ಮಾರನಗೆರೆಗೆ ಬಂದ. ಅಲ್ಲಿಂದ ಹೊರಟು ಜವಗಾನಹಳ್ಳಿ ಏಣಿಗೆ ಬಂದ. ಅಲ್ಲೊಂದೆರಡು ಆಲದ ಮರಗಳಿದ್ದವು. ಕರಿ ಆಲದ ಮರ, ಅವುಗಳ ನೆರಳಲ್ಲಿ ದನ ತಡದ. ಮಾರಣ್ಣ ಮೈಲಣ್ಣರು ಆ ಮರದ ಮೇಲಕ್ಕೆ ಹತ್ತಿ ಒಂದಿಷ್ಟು ಎಲೆ ಕಿತ್ತು ದನಗಳಿಗೆ ಹಾಕಿದರು. ಮುಂದಲವು ಬಾಯಾಡಿದವು. ಹಿಂದಲವಕ್ಕೆ ಏನೂ ಸಿಗಲಿಲ್ಲ. ಆ ದನಿನ ಗೋಳು ನೋಡಲಾರದೆ ಜುಂಜಪ್ಪ 'ನಾನಿನ್ನು ಇರಲೇಬಾರದು ಈ ಭೂಮಿ ಮ್ಯಾಲೆ. ದನಗಳು ಪರಮೇಶ್ವರನ ಅವುತಾರ. ಅವು ನನ್ನ ಕೈವಶದಲ್ಲಿ ಇರೋಗಂಟ ಅವುಗಳಿಗೆ ಹುಲ್ಲು ನೀರು ಜೋಪಾನ ಮಾಡೋದು ನನ್ನ ಧರ್ಮ. ಅಂತ ಕಾರ್ಯ ಮಾಡಲಿಲ್ಲದ ಮೇಲೆ ನಾನಿದ್ದು ಇನ್ನೇನು ಫಲ ಶಂಕರನೆ' ಅಂದುಬಿಟ್ಟು ಮರ ಹತ್ತಿ ಅಲ್ಲಿಂದ ಬಿದ್ದು ಸತ್ತುಬಿಡಬೇಕು ಅಂಬ್ತಾ ಯೋಚನೆ ಮಾಡಿ ಸ್ವಾಮಿ ಜುಂಜಪ್ಪ ಕರಿ ಆಲದ ಮರ ಏರಿದ. ಇನ್ನೇನು ಕೆಳಕೆ ಬೀಳಬೇಕು, ಅನ್ನೋ ವ್ಯಾಳ್ಯಕ್ಕೆ ದೂರದಾಗೆ ಒಂದು ಹುಲ್ಲೇಕರ ಓಡೋಡಿ ಬರುತ್ತಾ ಇರೋದು ಜುಂಜಪ್ಪನ ಕಣ್ಣಿಗೆ ಕಾಣಿಸ್ತು. ಇದೇನಪ್ಪ ಹುಲ್ಲೇಕರ ಈ ಪಾಟಿ ಓಡಿಬರುತ್ತೆ ಅಂದುಬಿಟ್ಟು ಜುಂಜಪ್ಪ ಅದನ್ನು ಏನಾದರೂ ಆಗಲಿ ಮಾತಾಡಿಸೋನ, ಹುಲ್ಲೇಕರು ಇಲ್ಲೇ ಸ್ಥಳವಂದಿಗ ಆಗಿರುತ್ತೆ. ಒಂದಿಷ್ಟು ನೀರು ನಿಡಿ ಇರೋ ಜಾಗಾನೂ ತೋರಬಹುದು ಅಂದುಬಿಟ್ಟು ಸಾಯಬೇಕು ಅಂತ ಮರ ಹತ್ತಿದ್ದ ಜುಂಜಪ್ಪ, ಕೆಳಕ್ಕೆ ಇಳಿದು ಹಾಗೆಯೇ ಸ್ವಲ್ಪ ದೂರ ಹೋದ. ಹೋಗಿಬಿಟ್ಟು ಅಂಗೇಯ ಒಂದು ಬೇಲಿ ಮರೆಗೆ ನಿಂತುಕೊಂಡ.

ಹುಲ್ಲೇಕರು ಪಸಂದಾಗಿದ್ದು ನೊಣ ಕುಂತರೆ ನೊಣ ಜಾರಂಗಿತ್ತು. ಬಾಯಲ್ಲಿ ಒಂದಿಡಿಯಷ್ಟು ಗರಿಕೆ ಚಿಗುರು ಹುಲ್ಲನ್ನು ಕಚ್ಚಿಕೊಂಡಿತ್ತು. ಆ ಹುಲ್ಲಾದರೂ ಹೆಂಗಿತ್ತಪ್ಪಾಂದ್ರೆ ನೀರು ಹಾಯಿಸಿ ಬೆಳೆಸಿರೋ ತರ ಹಸುರು ನೀರು ಕಕ್ಕಂಗಿತ್ತು. ಜುಂಜಪ್ಪನಿಗೆ ಏನೋ

ಒಂದು ತರ ಆಸೆ ಬಂದಂಗಾಯ್ತು. ಓಹೋ ಹುಲ್ಲು ನೀರು ಇರೋ ಜಾಗ ಸಿಕ್ಕೋಯ್ತು. ಈ ಹುಲ್ಲೇಕರನೆ ಹಿಡಿದರೆ ಆ ಜಾಗನೂ ತೋರಬಹುದು ಅಂದುಕೊಂಡು ಹುಲ್ಲೇಕರನ ಮಾತಾಡಿಸುತ್ತಾನೆ ಜುಂಜಪ್ಪ.



# ಹುಲ್ಲು ತೋರಿದ ಹುಲ್ಲೇಕರು

ಜುಂಜಪ್ಪ ಹುಲ್ಲೇಕರವನ್ನು ಕುರಿತು ಕೇಳಿಕೊಂಡ 'ನಮ್ಮದು ಮೂಡಲದೇಶ, ನನ್ನ ಹೆಸರು ಜುಂಜಪ್ಪ ಅಂಬ್ರಾ. ಪ್ರಾಣಿ ಪಕ್ಷಿಗೆ ನಾನು ಏನೂ ತೊಂದರೆ ಮಾಡನಲ್ಲ. ಈಗ ನನ್ನ ದನಗಳಿಗೆ ಹುಲ್ಲು ನೀರು ಇಲ್ಲದ ಹಾಗೆ ಆಗಿಬಿಟ್ಟು, ಊರುಬಿಟ್ಟು ಪರಸ್ಥಳಕ್ಕೆ ಬಂದುಬಿಟ್ಟಿದ್ದೀನಿ ಹುಲ್ಲು ನೀರಿಗಾಗಿ. ಈ ಅಡವಿ ಅರಣ್ಯದಾಗೆ ಸುತ್ತಾಡೋ ನಿನಗೆ ಎಲ್ಲಾ ಗೊತ್ತು. ಹೇಳು ತಾಯಿ ಎಲ್ಲಿ ಹುಲ್ಲು ನೀರು ಅದೆ ತಿಳಿಸು' ಅಂದನು. ಅದಕ್ಕೆ ಆ ಹುಲ್ಲೇಕರು ಹೇಳಿತು 'ಹೋಗಯ್ಯ ನರಮನುಷ್ಯ ನೀವು ಮಾಯಗಾರರು. ನನ್ನನ್ನು ಹಿಡಕೊಂಡು ತಿನ್ನಕೆ ಇಷ್ಟೆಲ್ಲ ಮಾತು ಆಡುತೀಯ. ಬಿಡಯ್ಯ ದಾರಿನ ನಾನು ಹೋಗಬೇಕು' ಅಂತು. ಆಗ ಜುಂಜಪ್ಪ 'ನಾನು ಜುಂಜಪ್ಪ ಪ್ರಾಣಿಗಂತಲೇ ಅಲ್ಲ, ಗಿಡ ಗಂಟೆಗಳಿಗೂ ಸಹಿತ ನಾನು ತೊಂದರೆ ಮಾಡನಲ್ಲ. ಅಡವಿ ಅರಣ್ಯವೇ ನಮ್ಮ ವಾಸ. ಅಲ್ಲದೆ ನಾನು ಬೆಂದಿದ್ದು ಕೂಡ ಮುಟ್ಟೋನಲ್ಲ. ಸತ್ಯ ಹೇಳುತೀನಿ ನನ್ನ ದನಗಳು ಹುಲ್ಲು ನೀರಿಲ್ಲದೆ ಸಾಯುತಾವೆ. ಒಂದು ಸೂರು ಹುಲ್ಲು ನೀರಿನ ದಾರಿ ತೋರಿಸವ್ವ' ಅಂದು ಬೇಡಿಕೊಂಡನು.

ಆಗ ಆ ಹುಲ್ಲೇಕರು ಯೋಚನೆ ಮಾಡ್ತು. ಇವನ್ಯಾರೋ ಸಭ್ಯಸ್ತನಂಗೆ ಕಾಣುತಾನೆ. ಇರಲಿ. ಯಂಗಾರ ಮಾಡಿ ನಾನಿಲ್ಲಿಂದ ತಪ್ಪಿಸಿಕೊಂಡು ಹೋಗಿಬಿಡನಾ ಅಂಬ್ರಾ ಹೀಗೆ ಹೇಳಿತು. 'ಅಪ್ಪಾ ನರಮನುಸ ಹಿಂಗೆ ಮೂಡು ಮುಂದಾಗಿ ಹೋದರೆ ಅಲ್ಲೊಂದು ಹಾಳು ಬಾವಿ ಅದೆ. ಹಾಳು ಬಾವಿ ಅಂದರೆ ಈಗ ನೀರಿಲ್ಲ. ಯಾರೋ ಪುಣ್ಯಾತ್ಮರು ಬಾವಿ ತೋಡಿಸೆವರೆ. ಪಾಪ ಬರಗಾಲ ಬಂದುಬಿಟ್ಟು ಜಲ ಬತ್ತಿಬಿಟ್ಟೈತೆ. ಅದು ಈಗ ನೀರಿಲ್ಲದೆ ಹೂಳು ತುಂಬಿಕೊಂಡಿದೆ. ಅದಕೆ ಯಾವಾಗಲೋ ಒಂದು ಸಿಡಿಲು ಬಡಿದುಬಿಟ್ಟು ಬಾವಿ ದಡ ಅರ್ಧಕ್ಕೆ ಸೀಳಿಕೊಂಡು ಬಿಟ್ಟೈತೆ. ಆ ಸೀಳಿನಾಗಾಸಿ ಒಂದು ಕರಿಕೆ ಬಳ್ಳಿ ಕುಡಿಯೊಡೆದು ಅಂಗೆ ಹರಡಿಕೊಂಡು ಮುಂದಕೆ ಬಾವಿ ತುಂಬಾ ದಡದಾಗಾಸಿ ಹರಡಿಕೊಂಡು ಬಿಟ್ಟೈತೆ. ನರಮನುಷ್ಯರು ತುಳಿಯಂಗಿಲ್ಲ. ಕೈಗೆ-ಕಾಲಿಗೆ ಸಿಕ್ಕದೆ ಉದ್ದಕ್ಕೆ ಹರಡಿಕೊಂಡೈತೆ. ಅದು ನಾನು ಯಂಗೋ ನೋಡಿಕೊಂಡು ಬಿಟ್ಟಿದ್ದೀನಿ. ನನಗೊಂದು ಮರಿ ಅದೆ. ಅದಕೊಂದಿಷ್ಟು

ಹುಲ್ಲು ತಗೊಂಡು, ನಾನು ಒಂದೆರಡು ಗರಿ ಮೇಯ್ದು ಬರುತಾ ಇದ್ದೀನಿ. ಇಷ್ಟೆನಾ ವಿಷಯ. ದಾರಿ ಬಿಡಪ್ಪ ನಾನು ಹೋಗಬೇಕು' ಅಂತು. ಜುಂಜಪ್ಪನಿಗೆ ಶ್ಯಾನೆ ಕೋಪ ಬಂತು. 'ಲೇ ಹುಲ್ಲೇಕರ ನಿನ್ನ ಸುಳ್ಳು ತಳಕು ನನ್ನತ್ರ ಹೇಳಬೇಡ. ನೀನೆಳದೆಲ್ಲಾ ಸುಳ್ಳು. ಸರಿಯಾಗಿ ಹೇಳಿದರೆ ನಿನ್ನ ಬಿಡುತೀನಿ, ಇದ್ದ ಅಂದ್ರೆ ನನ್ನ ದನಗಳು ಮೂರು ತಿಂಗಳಿಂದ ಹುಲ್ಲು ನೀರು ಇಲ್ಲದಂಗೆ ಸಾಯಬಿದ್ದಾವೆ. ಅವುಗಳ ಗತಿ ನಿನಗೂ ಆಗಿಬಿಡುತ್ತೆ' ಅಂದನು. ಹುಲ್ಲೇಕರು ಗಾಬರಿ ಆತು. ಜುಂಜಪ್ಪನ ಉಗ್ರತನ ಕಂಡು ಹೆದರಿಕೊಂತು. ಇನ್ನೇನು ನಿಜ ಹೇಳದಿದ್ರೆ ಈಯಪ್ಪ ನನ್ನ ಜೀವಸಹಿತ ಬಿಡೋದಿಲ್ಲ, ಅಂದುಬಿಟ್ಟು ಹೇಳಿತು 'ಅಯ್ಯಾ ನರಮನುಷ್ಯ ಈಟೆಲ್ಲಾ ಸುಳ್ಳು, ಕಪಟ ಯಾಕಪ್ಪ ಹೇಳಿದೆ ಅಂದ್ರೆ, ಹುಲ್ಲು ನೀರಿರುವ ಜಾಗ ಬಲು ಕಷ್ಟದು. ನರಮಾನವರು ಆಕಡೆ ತಲೆ ಹಾಕಂಗಿಲ್ಲ. ಅಲ್ಲಿಗೆ ಹೋದರು ಜೀವಸಹಿತ ತಿರುಗಿ ಬರಂಗಿಲ್ಲ. ಬ್ಯಾಡಪ್ಪ ಅದರ ತಂಟೆ' ಅಮ್ತಾ ಹೇಳಿತು. ಆಗ ಜುಂಜಪ್ಪ 'ಅಮ್ಮಾ ಹುಲ್ಲೇಕರು, ನಾನು ಜುಂಜಪ್ಪ, ಪರಮೇಶ್ವರನ ಮಗ. ಶಂಕರನ ಆದೇಶದಂತೆ ನಂದಿಗಳನ್ನು ಪೋಷಣೆ ಮಾಡಿಕೊಂಡು ಜೀವ್ನ ಹೊರೆಯುತ್ತಿದ್ದೀನಿ. ನನಗೆ ಕೇಡು ಬರಂಗಿಲ್ಲ. ನಾನಾಗಿ ನಾನು ಒಂದು ಹುಲ್ಲುಕಡ್ಡಿಗೂ ತೊಂದರೆ ಮಾಡಲ್ಲ. ಹಿಂಸೆ ಕೊಡಾದು ನಮ್ಮ ಜೀವಮಾನದಾಗೇ ಬರಂಗಿಲ್ಲ. ನಾನಾದರೂ ಬೆಂದದ್ದು, ಬಸಿದದ್ದು ಮುಟ್ಟೋದಿಲ್ಲ. ನನ್ನ ಊಟ ವರ್ಷಕ್ಕೆ ಒಂದೇ ದಪ. ಅದೂ ಹಸಿ ಅಕ್ಕಿ ತಂಟ, ನೆನೆ ಅಕ್ಕಿ, ನೆನೆಗಡಲೆ. ನನ್ನ ಮೇಲೆ ಯಾವ ನರಮಾನವನಿಂದಲೂ ಯಾತರದ್ದೂ ತೊಂದರೆ ಮಾಡಾದುಕ್ಕೆ ಸಾಧ್ಯವಿಲ್ಲ. ಈಗ ನನ್ನ ದನಗಳ ಪ್ರಾಣ ಉಳುಕೋಬೇಕು. ಮೊದಲು ಹುಲ್ಲು ನೀರಿನ ಹಾದಿ ತೋರಿಸು' ಅಂದ.

ಆಗ ಹುಲ್ಲೇಕರ ಹೇಳಿತು 'ಅಪ್ಪಾ ನರಮನುಷ್ಯ ಹಿಂಗೆ ತಟಾದು ಮೂಡಲ ಮುಖವಾಗಿ ಹೋದರೆ ಸಾಣೆಕೆರೆ ಅಂಬ್ತಾ ಒಂದು ಊರು. ಆ ಊರಾಗೆ ಒಬ್ಬ ಆಚಾರಪ್ಪ ಅದಾನೆ. ಅವುನು ಬಲು ಕ್ರೂರಿಕಣಪ್ಪ. ಅವುನ ಮನೆಯಾಗೆ ಒಂದು ಕಾಳಿ ಪೂಜಿಸಿಕೊಂಡು ಅವುನೆ. ಅದಕ್ಕೆ ನರಮನುಸರ ಬಲಿ ಕೊಡುತಾನೆ. ಬಲಿ ಕೊಟ್ಟುಬಿಟ್ಟು ಬೇತಾಳ ಸೃಷ್ಟಿ ಮಾಡಿಕೊಂಡು ಅವುಗಳನ್ನೇ ಕಾವಲಿಗೆ ಇಟ್ಟುಕೊಂಡು ಅವನೆ. ಅವುನ ಯಾರು ಬಗ್ಗಿಸೋ ನರಮಾನ್ಯರು ಇಲ್ಲೀಗಂಟ ಹುಟ್ಟಿಲ್ಲ ಕಣಪ್ಪ. ಅವುನ ಮಾಟ ಮಂತ್ರದಿಂದ ಆ ಊರಿನ ಗಂಡಸು ಮಕ್ಕಳನೆಲ್ಲಾ ಸಾಯಿಸಿಬಿಟ್ಟವನೆ. ಅವರು ಹೆಂಡರುಗಳನ್ನು ಅವುನ ಮನೆ ಕೆಲಸಕ್ಕೆ ಇರಿಸಿಕೊಂಡು ಬಿಟ್ಟವನೆ. ಅವುನ ಮುಂದೆ ಯಾರೂ ಉಸಿರಾಡುವಂಗಿಲ್ಲ.'

'ಈ ಪುಟ್ಟಾಚಾರಿಯದ್ದು ಸಾಣೆಕೆರೆಗೆ ಬಡಗಡೆಗೆ ಅವುನದೇ ಜಮೀನಿದೆ. ಆ ಬಯಲು ಬಯಲೆಲ್ಲಾ ಅವುನದೆ. ಏನು ಮಾಡಿಕೊಂಡು ಬಿಟ್ಟವನಪ್ಪ ಈ ಆಚಾರಪ್ಪ ಅಂದ್ರೆ,

ಮನೆಯೊಳಗೆ ಚೌಡಿ ಪೂಜಿಸಿಕೊಂಡು ಆ ಚೌಡಿಗೆ ನರಮನುಷ್ಯರನ್ನು ಆಹುತಿ ಕೊಟ್ಟು ಬಿಡುತಾನೆ. ಅದರಿಂದ ಆ ಚೌಡಿ ವಶಪಡಿಸಿಕೊಂಡು, ದೇವೇಂದ್ರರಾಯನೇ ಹೇಳಿರೆ ಕೇಳೋ ಅಂಗೆ ಮಾಡಿಕೊಂಡವನೆ. ಇವನ ಬಯಲಿಗೆ ಮಾತ್ರ ಮಳೆ ಬೀಳಬೇಕು, ಸುತ್ತಮುತ್ತ ಮಳೆ ಬೀಳಬಾರದು ಅಂಗೆ ಮಾಡಿಕೊಂಡುಬಿಟ್ಟವನೆ. ಆ ಹೊಲಕ್ಕೆ ಸುತ್ತಲೂ ಚಿನ್ನದ ತಂತಿಬೇಲಿ ಹಾಕಿಬಿಟ್ಟು ಹೆಜ್ಜೆ ಹೆಜ್ಜೆಗೂ ಬ್ಯಾತಾಳಗುಳನ್ನ ಕಾವಲಿಗೆ ಇರಿಸ್ಯಾವನೆ. ಆ ಬ್ಯಾತಾಳಗಳೋ ಮಹಾ ರಾಕ್ಷಸಗಳು. ನರಮನುಷ್ಯರ ರಕ್ತಾನೇ ಕುಡೀತಾವೆ. ಮಾಂಸನೇ ತಿಂಬುತಾವೆ. ಇವುಕೆ ಹೆದರಿಕೊಂಡು ಆ ಆಚಾರಪ್ಪನ ಸವಾಸನ ಯಾರೂ ಮಾಡೋದಿಲ್ಲ. ಅವುನ ಸುದ್ದಿಗೂ ಬರೋದಿಲ್ಲ. ಒಂದು ಹಕ್ಕಿ ಪಕ್ಷಿಗೂ ಅವುನ ಹುಲ್ಲು ಹೊಲದತಾವ ಸುಳಿದಾಡೋದಿಲ್ಲ' ಅಂತು. 'ಇಂತ ರಾಕ್ಷಸನ ಹುಲ್ಲುಗಾವಲಿನಿಂದಲೇ ಬದಿನಿಂದ ಆಚೆಗೆ ಚಿಗುರು ಒಡೆದು ಚಾಚಿಕೊಂಡಿರೋ ಹುಲ್ಲನ್ನು ನಾನು ಒಂದು ಚೂರು ಮೇಯ್ದುಬಿಟ್ಟು ಮನೇಲಿ ಹಸಿದುಕೊಂಡಿರುವ ನನ್ನ ಎಳೆ ಕಂದನಿಗೆ, ಒಂದು ಗುಕ್ಕು ತಗೊಂಡು ಹೋಗುತ್ತಿದ್ದೀನಿ' ಅಂತು.

ಆಗ ಜುಂಜಪ್ಪ ಹೇಳಿದ 'ಎಲೆ ಹುಲ್ಲೇಕರು, ಒಳ್ಳೆ ಜಾಗನೇ ನೋಡಿಕೊಂಡಿದ್ದೀಯ. ನರಮಾನವನಾಗಿ ಹುಟ್ಟಿ ನರಮನುಷ್ಯರಿಗೆ ತೊಂದರೆ ಮಾಡೋನು, ಮನುಷ್ಯನೇ ಅಲ್ಲ. ಅವುನು ರಾಕ್ಷಸ. ಅಂಥವನಿಗೆ ಬುದ್ದಿ ಕಲಿಸಬೇಕು. ನಡಿ ನನಗೆ ಅವುನ ಹುಲ್ಲುಗಾವಲು ತೋರಿಸು' ಅಂತ ಹೇಳಿದ. ಅದಕ್ಕೆ ಹುಲ್ಲೇಕರು 'ಆಗಬಹುದು' ಅಂತ ಹೇಳಿಬಿಟ್ಟು ಅಂಗೇನೇ ಹಿಂದಿರುಗಿ ಬಡಬಡನೆ ಬಡಗಡೆಗೆ ಮುಖವಾಗಿ ನಡೆಯಿತು. ಮುಂದೆ ಹುಲ್ಲೇಕರ, ಹಿಂದೆ ಜುಂಜಪ್ಪ ಹೋದರು. ಹಿಂಗೆ ಹೋಗಂದು ಹೋದರು. ಹುಲ್ಲೇಕರ ಹೇಳಿದಂಗೆ ಎಷ್ಟು ದೂರ ಹೋದರೂ ಹಸಿರೊಂದು ಹಸಿರಿಲ್ಲ. ಎಲ್ಲಾ ಕೆಂಬಟ್ಟೆ ಕೆಂಬಯಲು. ದೂರಕೆ ಎತ್ತರಕ್ಕೆ ಯಾರೋ ನಿಂತುಕೊಂಡಿರುವುದು ಕಾಣಿಸಿತು. ಹುಲ್ಲೇಕರು ಅಲ್ಲೇ ನಿಂತುಕೊಂಡು ಹೇಳಿತು, 'ನೋಡಪ್ಪ ನರಮನುಸ, ಅಲ್ಲೇ ಯಾರೋ ನಿಂತಿರುವಂಗೆ ಕಾಣುತಿದೆಯಲ್ಲಾ, ಅದೇ ಆಚಾರಪ್ಪನ ಹೊಲ. ನಿಂತಿರುವುದು ಬ್ಯಾತಾಳ. ಒಂದಲ್ಲ ಎರಡಲ್ಲಪ್ಪ ನೂರಾರು ಬೇತಾಳ ಅದೆ, ಹೆಜ್ಜೆಗೊಂದು. ಅದರ ಕೈಗೆ ಯಾರಾದರೂ ಸಿಕ್ಕಿಬಿಟ್ಟರೆ ಒಂದೇ ಉಸಿರಿಗೆ ಹಿಂಡಕೊಂಡು ರಕ್ತ ಕುಡಿದು ಮಾಂಸನೆಲ್ಲಾ ತಿಂದುಬಿಡುತಾವೆ' ಅಂತ ಹೇಳಿಬಿಟ್ಟು ಹುಲ್ಲೇಕರು ಹಿಂದಕ್ಕೆ ಮುಖ ಮಾಡಿ 'ನಾನು ಹೋಗುತೀನಪ್ಪ. ನಾನಂತೂ ಹುಲ್ಲಿನ ದಾರಿ ತೋರಿದ್ದೀನಿ. ಇದರ ಮೇಲೆ ನಿನ್ನ ಬುದ್ದಿ' ಅಂತು.

ಜುಂಜಪ್ಪನಿಗೆ ಹುಲ್ಲು ನೀರಿನ ಜಾಗ ಕಂಡು ಹೋದ ಜೀವ ಬಂದಂಗೆ ಆತು. ಯಾಕಪ್ಪ ಅಂದ್ರೆ ಬರಾಬರಿ ಮೂರು ತಿಂಗಳು ಆಗಿತ್ತು, ದನಗಳು ಹುಲ್ಲು ತಿಂದು, ನೀರು

ಕುಡಿದು. ಬದುಕಾ ಅಂಗೇನೇ ಇರಲಿಲ್ಲ. ಮೇಲಕ್ಕೆ ಏಳಲಾರದ ಸ್ಥಿತಿಯಲ್ಲಿದ್ದವು. ಚಕ್ಕಳದ ಮೇಲೆಲ್ಲಾ ಗೆದ್ದಲು ಕಟ್ಟಿ ಗೆದ್ದಲು ಹುಳ ಹರಿದಾಡುತ್ತಿದ್ದವು. ಅಂತಾದರಲ್ಲಿ ಬಸವಗಳು ಉಳಕೊಂಡ್ರೆ ಸಾಕಪ್ಪ ಅಂದುದೇ ತಡ, ಜುಂಜಪ್ಪ ಮಾಯಕಾರ ವೇಷ ತಾಳಿದವನು ಹುಲ್ಲು ಕೊಪ್ಪಲಿನ ಒಳಕೆ ಸೇರಿಕೊಂಡುಬಿಟ್ಟ. ಏನು ಹುಲ್ಲು ತೆನೆ ಒಡೆದು ವಾಲಾಡುತ್ತೆ. ಹಕ್ಕಿ ಹುಲ್ಲು, ಸೋಲೆಬುಡ್ಡ, ಕರಕೆ, ಕರಡಿಹುಲ್ಲು, ಅಣ್ಣೆ ಸೊಪ್ಪು, ಬಳ್ಳಿ ಒಡೆದುಕೊಂಡು ಮಲಗಿಬಿಟ್ಟೈತೆ. ಜುಂಜಪ್ಪ ಕಸಬುದಾರ. ಹುಲ್ಲು ಕಂಡ ಕೂಡಲೇ ಆನಂದವಾಗಿಬಿಡ್ತು. ಹುಲ್ಲು ಕೊಯ್ದು ಎರಡು ಆಳು ಎತ್ತಿದರೂ ಏಳಲಾರದಂಥ ಹೊರೆ ಕಟ್ಟಿದನು. ಹೊದಿಯೋ ವಲ್ಲಿ ಇತ್ತಲ್ಲಾ ಅದನ್ನು ಅಲ್ಲೇ ಮಡುವಿನ ನೀರಲ್ಲಿ ನೆನೆಸಿಬಿಟ್ಟ. ಆಮೇಲೆ ಏನು ಮಾಡಿನಪ್ಪ ಅಂದ್ರೆ ನಿಧಾನವಾಗಿ ನೀರು ಸೋರಿಹೋಗದ ಹಂಗೆ ಹುಲ್ಲಿನ ನಡುವೆ ಇಕ್ಕಿಬಿಟ್ಟ. ಉಗಣಿ ಬಳ್ಳಿ ಕಿತ್ತುಕೊಂಡು ಬಿಗಿಯಾಗಿ ಕಂತೆ ಕಟ್ಟಿಕೊಂಡು ತಲೆ ಮೇಲೆ ಇಟ್ಟುಕೊಂಡು ಬೇತಾಳಗಳ ಕಣ್ಣಿಗೆ ಬೀಳದಂಗೆ ಬಂದವನು, ಕರಿಯಾಲದಕೆರೆ ಏಣಿಗೆ ಬಂದ. ದನ ಅಲ್ಲೇ ಇದ್ದವು. ಆ ಆಲದ ಮರದ ನೆಳ್ಳಾಗೆ ಹೊರೆ ಇಳಿಸಿ ಎಲ್ಲಾ ದನನೂ ಕರೆದುಬಿಟ್ಟು ಸ್ವಾಮಿ ಒಂದೊಂದು ಗರಿ ಕೊಟ್ಟ. ದನಗಳಿಗೆ ಹೋದ ಜೀವ ಬಂದಂಗಾತು. ತಮ್ಮಂದಿರಿಗೂ ಬಟ್ಟೆ ನೆನೆಸಿ ನೀರು ತಂದಿದ್ದನಲ್ಲಾ ಅದನ್ನೇ ಹಿಂಡಿದ. ಅವರು ಸಂತೃಪ್ತಿಯಾಗಿ ನೀರು ಕುಡಿದರು. ದನಗಳೂ ಬಾಯಿ ನೆನೆಸಿಕೊಂಡವು. ಆಮೇಲೆ ಕರಿಯಾಲದ ತಾವಿಂದ ಮುಂದಕೆ ದನ ಹೊಡೆದ. ಈ ಹೊತ್ತುನೂ ಜುಂಜಪ್ಪನ ದನಗಳು ತಂಗಿದ್ದ ಕರೇ ಆಲದ ಮರಗಳು ಇದ್ದ ಜಾಗದಲ್ಲಿ ಒಂದು ಊರಾಗಾಗಿದೆ. ಆ ಊರಿಗೆ 'ಕರಿಯಾಲ' ಅಂಬ್ತಾನೆ ಹೆಸರಿಕ್ಕವರೆ.

ಕರಿಯಾಲದಿಂದ ಹೊರಟ ದನಗಳು ಸೀದಾ ಸಾಣೆಕೆರೆ ದಿಣ್ಣೆಗೆ ಬಂದವು. ಪುಟ್ಟಣ್ಣನ ಕಾವಲು ಚಿನ್ನದ ಬೇಲಿ. ಅವುಗಳನ್ನು ಹಾರುವಂಗೆನೂ ಇಲ್ಲ, ಮುರಿಯೋ ಅಂಗೆನೂ ಇಲ್ಲ. ದನಗಳು ಈಗ ಒಳೀಕೆ ಹೋಗಬೇಕು. ಆಗ ಬಡಮೈಲ ಇತ್ತಲ್ಲ ಹೋರಿ, ಅದು ಏನು ಮಾಡುತ್ತಪ್ಪ ಅಂದರೆ ಆ ಬಂಗಾರದ ಬೇಲಿಯನ್ನು ಕೊಂಬಾಗೆ ಅಲ್ಲಾಡಿಸಿ, ಕಾಲಾಗೆ ಕೆರೆದು ತಲೆಯಾಗೆ ಗುದ್ದಿ ಕೆಡವಿಬಿಡ್ತು. ಪುಟ್ಟಾಚಾರಿ ಕಾವಲಿಗೆ ಜುಂಜಪ್ಪನ ದನಗಳೆಲ್ಲಾ ನುಗ್ಗಿದವು. ಮೊದಲೇ ಹಸಿದ ದನ, ಹುಲ್ಲು ನೀರು ಕಂಡು ಮೂರು ತಿಂಗಳಾಗಿತ್ತಲ್ಲ ಲಗ್ಗೆ ಲಗ್ಗೆ ಹೊಡೆದುಕೊಂಡು ಮೇಯ್ದುಬಿಟ್ಟವು. ಸ್ವಾಮಿ ಒಂದು ಮೂಲೆಗೆ, ಮಾರಣ್ಣ, ಮೈಲಣ್ಣ ಹುಡುಗರು ಒಂದು ಮೂಲೆಗೆ ಸುಮ್ಮನೆ ಕುಂತರು. ಆಗಲೆ ದನಗಳು ಯಾವಾಗ ಚೆನ್ನಾಗಿ ಮೇಯ್ದು ಬಿಟ್ಟು ಕಾವಲಾಗೆಲ್ಲಾ ತಿರುಗಾಡಿ ಅಲ್ಲೇ ಇದ್ದು, ಒಂದು ಮಡುವಿನೊಳಗೆ ನೀರು ಕುಡಿದು ಬಿಟ್ಟು, ದನಗಳು ಅಲ್ಲೇ ಮಂದೆ ಹಾಕಿದಂಗೆ ಮಲಗಿಕೊಂಡುಬಿಟ್ಟವು. ಪಾಪ ಈ ಬೇತಾಳ ಇದ್ದುವಲ್ಲ ಅವುಕೆ ಏನಾಗುತ್ತೆ ದನಗಳು ಕಾವಲಿನ ಒಳಗೆ ನುಗ್ಗಿರುವುದು



ತಿಳಿಯುತ್ತಲೇ ಇಲ್ಲ. ಹುಲ್ಲುಗಾವಲಿನೊಳಗೆ ಜುಂಜಪ್ಪ ಮಾತ್ರ ದನ ಮೇಯಿಸುತ್ತಿದ್ದಾನೆ. ಹಿಂಗೆ ಒಂದಿಷ್ಟು ದಿನ ಕಳೆಯಿತು. ದನಗಳು ರವಾಟು ದುಂಡಾದವು. ಒಳ್ಳೆ ದಿನ ಬಂತಪ್ಪ ಅಂದು ಜುಂಜಪ್ಪ, ಶಂಕರ ಪರಮೇಶ್ವರ ಎಂತ ಸಹಾಯ ಮಾಡಿದಪ್ಪ ಅಂಬ್ತಾ ದೇವತೆಗಳಿಗೆಲ್ಲಾ ಕೈಮುಗಿದ. ಮಾರಣ್ಣ ಮೈಲಣ್ಣ ಇದ್ದರಲ್ಲಾ ಅವರೆಲ್ಲಾ ದನ ಮೇಯಿಸಿಕೊಂಡು ದನಿನಿಂದ ಹಾಲು ಕರೆದು ಕಳುವರಳ್ಳಿ ಪೇಟೆಗೆ ಕಳಿಸೋಕೆ ಸುರು ಮಾಡಿರು. ಹಿಂಗೆ ದಿನಾ ಕಳುವಾರಹಳ್ಳಿ ಪೇಟೆಗೆ ಹಾಲು ಬರೋಕೆ ಸುರುವಾಯಿತೋ ಅವರ ಸೋದರ ಮಾವಂದಿರು ಇದ್ದರಲ್ಲ ಕಂಬೇರು ಅವುರಿಗೆ ಗೊತ್ತಾಯಿಬಿಡ್ತು. ಎಲಾ ಸೀಮೆಗೆಲ್ಲಾ ಬರಗಾಲ ಬಂದುಬಿಟ್ಟೈತೆ. ಕುಡಿಯಾಕೆ ನೀರಿಲ್ಲ. ತಿನ್ನಕೆ ಹುಲ್ಲಿಲ್ಲ. ನಮ್ಮ ದನಗಳು ಸತ್ತುಹೋಗಿಬಿಟ್ಟವೆ. ಅಂತದರಾಗೆ ಜುಂಜಪ್ಪ ದನ ಎಲ್ಲಿ ಮೇಯಿಸುತ್ತಿದ್ದಾನು? ನಾವು ಆಗಲೇ ಜುಂಜಪ್ಪನ ದನಗಳೆಲ್ಲಾ ಸತ್ತೋದುವು ಅಂಬುತಿದ್ದೆವಲ್ಲ ಅಂದುಬಿಟ್ಟು ಹೊಟ್ಟೆಕಿಚ್ಚು ಪಡಾಕೆ ಸುರು ಮಾಡಿಬಿಟ್ರು. ಎಲಾ ಕಾಡುಗೊಲ್ಲ, ನೀನು ಇಂಥ ಕಾಲದಲ್ಲೂ ಹಾಲು ಕರೆದು ಕಳುವಾರಹಳ್ಳಿ ಪೇಟೆಗೆ ಹಾಕುತಿರುಬೇಕಾದರೆ ನೀನೇನೆಲ್ಲಾ ಮೋಸ ಮಾಟ ಮಾಡುತಿರಬೇಕು. ಅದೆಂಗೆ ಜುಂಜಪ್ಪ ದನಗಳನ್ನು ಮೇಯಿಸುತ್ತಿದ್ದಾನು? ನೋಡೇ ಬಿಡುವಾ ಅಂಬ್ತಾ, ಕಂಬೇರು ಜುಂಜಪ್ಪನ ದನಗಳನ್ನು ಪತ್ತೆ ಮಾಡಾಕೆ ಸುರು ಮಾಡಿದರು. ಹೇಗೂ ಇವರು ಸಿರಾ-ಹಿರಿಯೂರು ಪ್ಯಾಟೆಗೆಲ್ಲಾ ಮುತ್ತುಪಡಿ ವ್ಯಾಪಾರ ಮಾಡುತ್ತಿದ್ದರಲ್ಲ. ಅಂಗಾಗಿ ಹಿರಿಯೂರು ಸೀಮೆ ಇವರಿಗೆ ತಿಳಿದಿತ್ತು. ಹುಡುಕುವುದಕ್ಕೆ ಸುರು ಮಾಡಿದರು.

## ಸಾಣೆಕೆರೆಯಲ್ಲಿ ಕಂಡ ಜುಂಜಪ್ಪ

ಜುಂಜಪ್ಪನ ಮಾವಗಳು ಇದ್ರಲ್ಲ ಕಂಬೇರು. ಇವರಿಗೆ ಜುಂಜಪ್ಪ ಎಲ್ಲಿಗೆ ಹೋದ. ಅವನು ದನಗಳನ್ನು ಎಲ್ಲಿ ಮೇಯಿಸುತ್ತಿದ್ದಾನೆ ಅಂಬೋದೇ ಚಿಂತೆ. ಏನಾದರೂ ಮಾಡಿ ಜುಂಜಪ್ಪನೂ, ಅವುನ ತಮ್ಮಗಳನ್ನೂ ಸಾಯಿಸಬೇಕೆಂಬುದೇ ಅವರ ಯೋಚ್ನೆ. ಹೀಂಗಿರುವಾಗ ಒಂದಿನ, ಕಂಬೇರ ಗೊಲ್ಲರ ದೊಡ್ಡಚಿನ್ನ ಅಂಬೋನು, ಕಳುವಾರಹಳ್ಳಿಗೆ ಬಂದ. ಅವರು ಅಕ್ಕ ಚಿನ್ನಮ್ಮ ಅದೇ ಜುಂಜಪ್ಪನ ತಾಯಿ, ಅಣ್ಣನಿಗೆ ಕೈಕಾಲಿಗೆ ನೀರು ಕೊಟ್ಟು ಮಕ್ಕಳು ಮರಿ ಎಲ್ಲಾ ಚೆಂದಾಕವರೇನಣ್ಣ ಅಂಬ್ತಾ ವಿಚಾರ ಮಾಡಲಾಗಿ, ಕೊನೆಗೆ ಜುಂಜಪ್ಪ ದನ ಹೊಡೆದುಕೊಂಡು ಯಾವ ಕಡೆಗೆ ಹೋಗವನೆ? ಆ ಹುಡುಗರು ಹಾಲು, ಮೊಸರು ಎಲ್ಲಿಂದ ತರುತಾರೆ? ಅಲ್ಲಿ ಯಂಗೆ ಅವುರೆ, ಅವರು ಬದುಕೇನು? ಬವಣೇನು ಅಂಮ್ತಾ ಎಲ್ಲಾನು ಕೇಳಿಕೊಂಡ. ಆಗ ಆಯಮ್ಮ ಗೊಲ್ಲಮುಂಡೆ ಹಿರಿಯಣ್ಣ ಅಂಬೋ ಪ್ರೇಮದಲ್ಲಿ ಹಿಂಗೇನೇ ಸಾಣೇಕೆರೆ ಅಂಬೋ ಒಂದು ಹಳ್ಳಿ, ಅಲ್ಲಿ ಪುಟ್ಟಾಚಾರಿ ಅಂಬಾ ಒಂದು ಹೊಲದಾಗೆ ದನ ಮೇಯುತ್ತಿದ್ದಾವಂತೆ ಅಂಬ್ತಾ ತಂಗಿ ಹೇಳಿದಳು. ಗೊಲ್ಲರ ದೊಡ್ಡಚಿನ್ನನಿಗೆ ಅಷ್ಟೇ ಬೇಕಾಗಿದ್ದುದು. ಆಚಾರಪ್ಪ ಅಂಬುತಿದ್ದಾಂಗೆ ಅವುನ ಇಚಾರ ತಿಳಿದಿತ್ತು. ಹಿರಿಯೂರು ಪೇಟೆಗೆ ವ್ಯಾಪಾರಕ್ಕೆ ಹೋಗುವಾಗ ಆ ಆಚಾರಪ್ಪನೂ ಇವುನಿಗೆ ಪರಿಚಯವಾಗಿತ್ತು. ಅವುನ ಹಿಕಮತ್ತು ಮಾಡಾದು, ಮಾಟ ಶೂನ್ಯ ವಿಚಾರನೂ ತಿಳಿದಿತ್ತು. ತಂಗಿ ಮನೆಗೆ ಹಾಲು-ತುಪ್ಪ ಉಂಡು, ಹರಿವಾಣದಲ್ಲಿ ಕೈತೊಳೆದು, ತಾಂಬುಲ ತಕ್ಕೊಂಡು ದನ-ಕರಿನ ಕೆಲಸ ಬಾಳ ಅಂತಂದುಬಿಟ್ಟು, ನಾನು ಹೋಗುತೀನಮ್ಮ ಅಂತೇಳಿ ಹೊರಟು ನಡೀತಿದ್ದ. ಆಮೇಲೆ ಏನುಮಾಡಿದನೆಂದರೆ ತಮ್ಮ ನಾಗನ್ನ ಕರಕೊಂಡು ಸೀದಾ ಸಾಣೆಕೆರೆಗೆ ಹೋದ. ಹೋದರೆ ಆಚಾರಿ ಮನೆ ತಿಳಿಯವಲ್ದು. ಅವರಿವರನ್ನು ಕೇಳಿದ. ಕೆಲವರು ಅಂಜು ಅಂಜುತಾಲೆ ದಾರಿ ತೋರಿರೆ, ಇನ್ನು ಕೆಲವರು ಅವನು ಅಸವಲ್ಲದವನು, ಅವುನ ತಂಟೆ ನಮಗೇಕೆ ಅಂದುಬಿಟ್ಟು ನಮಗೆ ತಿಳಿವಲ್ದು ಅಂಬ್ತಾನು ಹೇಳಿಬಿಟ್ಟರು. ಅಂಗು ಇಂಗು ತಲಾಸು ಮಾಡಿಕೊಂಡು, ಆಚಾರಪ್ಪನ ಮನೆತಾಕೆ ಬಂದ. ಬಂದ್ರೆ ಎದೆ ಒಡೆದುಹೋತು. ಹೆಜ್ಜೆಹೆಜ್ಜೆಗೂ ಬೇತಾಳಗಳು ನಿಂತುಬಿಟ್ಟವೆ. ಒಂದು ಹೆಜ್ಜೆ ಮುಂದಕ್ಕೆ

ಇಕ್ಕಿದರೆ ಹಿಂದಕೆ ಏಳು ಹೆಜ್ಜೆ ತೆಗೆದು ಇರಿಸಿದಂಗಾಯ್ತು. ಕೊನೆಗೆ ಒಂದು ಬೇತಾಳನೆ ನಯವಾಗಿ ಮಾತಾಡಿಸಿತು. ಅದೇನಪ್ಪ ಅಂದರೆ ನಿಮ್ಮ ಆಚಾರಪ್ಪನೂ, ನಾನು ಬಹಳ ದಿನದಿಂದಲೂ ಗೆಣೆಕಾರರು, ಹಿರಿಯೂರು ಪೇಟೆಗೆ ವ್ಯಾಪಾರ ಮಾಡುವುದು ಪಕ್ಕಪಕ್ಕದಲ್ಲೇ. ಮುತ್ತುಪಡಿ ವ್ಯಾಪಾರದ ಸಲುವಾಗಿ, ಮೂರು ಮಾತಾಡಿಕೊಂಡು ಹೋಗುತೀವಿ. ರವಾಟು ಒಳಕೆ ಬಿಡು ಅಂದ್ರು ದೊಡ್ಡಚಿನ್ನೇಗೌಡರು, ನಾಗನು. ಆಗ ಬೇತಾಳಗಳು ಮಾತಾಡಿಕೊಂಡವು. ಇವರ್‍ಯಾರೋ ದೂರದ ಪಟ್ಟಣದಿಂದ ಬಂದವರೆ. ನಮ್ಮ ಒಡೆಯರನ್ನು ಕಾಣಾಕೆ ಅಂಬ್ತಾ ಅಂದುಕೊಂಡು ಒಂದು ಬೇತಾಳ ಹೇಳಿತು 'ನೀನು ಇಲ್ಲೇ ನಿಲ್ಲು ಒಳಕೆ ಹೋಗಿ ಯಜಮಾನರನ್ನು ಕೇಳಿಕೊಂಡು ಬರುತೀನಿ. ಅವರು ಬಿಡು ಅಂದ್ರೆ ಬಿಡುತೀವಿ' ಅಂತಂದು ಒಳಾಕೆ ಹೋತು. ಹೋಗಿ ಪುಟ್ಟಾಚಾರಿ ಕಂಡು 'ದೂರದ ಪಟ್ಟಣದಿಂದ ತಮ್ಮನ್ನು ಕಾಣಕೆ ಬಂದವರೆ. ನಿಮ್ಮ ಗೆಳೆಕಾರರಂತೆ ಒಳಗೆ ಬಿಡಬಹುದ?' ಅಂತು. ಪುಟ್ಟಾಚಾರಿ ಮೂರು ಮಾತು ಆಡಿಕೊಂಡು ಹೋಗಿಲಿ, ಒಳಗೆ ಬಿಡರಿ' ಅಂದ. ಪುಟ್ಟಾಚಾರಿ ಹೇಳಿದ ಸಂಗತಿನ ತಂದು ಬೇತಾಳ ಕಂಬೇರ ಗೊಲ್ಲರ ದೊಡ್ಡಚಿನ್ನೇಗೌಡನಿಗೆ ಹೇಳಿ ಕಳುಹಿ ಸಿಬಿಡ್ತು. ದೊಡ್ಡ ಚಿನ್ನೇಗೌಡ ಅವುನ ತಮ್ಮ ನಾಗ ಇಬ್ಬರೂ ಅಳುಅಳುಕುತ್ತಲೇ ಆಚಾರಿ ಮನೆ ಒಳಿಕೆ ಹೋದರು. ಒಳಕೆ ಹೋಗಿ ಪುಟ್ಟಣ್ಣನ ನಡುಮನೆಗೆ ಬಂದ್ರು. ಯಪ್ಪ ಎತ್ತ ನೋಡಿದರೂ ಬೇತಾಳಗಳೇ ನಿಂತುಬಿಟ್ಟವೆ. ಅವುನ ನೋಡುತ್ತಿದ್ದಂಗೆ ನಡುಗಿ ಹೋಗಿಬಿಟ್ಟರು. ನಾವು ತಿರುಗಿ ಊರಿಗೆ ಹೋಗುತೇವೇನಪ್ಪ ಅಂದುಕೊಂಡು ಅಳುಕುತ್ತಲೇ ಮೂರು ಹಜ್ಜೆ ಇರಿಸಿ ಒಳಮನೆಗೆ ಬಂದರು. ಹೆದರಬೇಡರಿ ಗೊಲ್ಲಗೌಡರೆ, ಅವೆಲ್ಲಾ ಜೀವ ಇಲ್ಲದ ಗೊಂಬೆಗಳು. ಈಗ ಏನೂ ಮಾಡೋದಿಲ್ಲ ಅವುಗಳಿಗೆ ಜೀವಕಳೆ ತುಂಬಿರೆ ಅವುಗಳ ಆಟ ನಡೆಯೋದು ಅಂದು ಸಮಾಧಾನಪಡಿಸಿ, ತಾವು ಬಂದ ಕಾರ್ಯವೇನೆಂದು ವಿಚಾರಿಸಿದನು. ಆಗ ಕಂಬೇರ ದೊಡ್ಡಚಿನ್ನ ಅವುತಾರನೇ ಎತ್ತಿಬಿಟ್ಟ. 'ಸಿರಾ ಸೀಮೆಗೆ ಬರಗಾಲ ಬಂದುಬಿಟ್ಟೈತೆ. ನಮಗೆ ದನಗಳು ಎಂದರೆ ದೇವಗಳು. ಈಗ ಹುಲ್ಲು ನೀರು ಇಲ್ಲದೆ ಸಾಯೋ ಸ್ಥಿತಿಗೆ ಬಂದಾವೆ. ನಿನ್ನ ಹುಲ್ಲು ಕೊಪ್ಪಲಲ್ಲಿ ಬೇಕಾದಷ್ಟು ಹುಲ್ಲಿದೆ, ನೀರೂ ಅದೆ. ನಿಮಗೆ ಬೇಕಾದಷ್ಟು ದುಡ್ಡು ಕೊಡುತೀವಿ, ನಿಮ್ಮ ಹುಲ್ಲುಗಾವಲಲ್ಲಿ ನಮ್ಮ ದನಗಳು ಮೇಯುವುದಕ್ಕೆ ಅವಕಾಶ ಮಾಡಿಕೊಡಿ' ಎಂದು ಕೇಳಿಕೊಂಡರು. ಸಾಣೆಕೆರೆ ಪುಟ್ಟಣ್ಣನಿಗೆ ಅನುಮಾನ ಬಂದುಬಿಡ್ತು. 'ಅಲಾಲ ಗೌಡರೆ, ದೇವೇಂದ್ರರಾಯನಿಗೆ ನನಗೆ ಇಬ್ಬರಿಗೆ ಮಾತ್ರ ಗೊತ್ತು ಹುಲ್ಲು ನೀರಿನ ಕತೆ. ಈ ಕಾಡುಗೊಲ್ಲರಿಗೆ ಯಂಗೆ ಗೊತ್ತಾಯಿತಪ್ಪ' ಅಂದುಬಿಟ್ಟು 'ಆಯಿತು, ದನಗಳು ನಿಮ್ಮವಾದರೂ ಒಂದೇ, ನಮ್ಮವಾದರೂ ಒಂದೇ. ಹೊಡೆಕೊಂಡು ಬಂದು ಮೇಯಿಸಿಕೊಂಡು ಹೋಗರಿ' ಅಂದ. ಕೊರಮಗಾರರು ಕಂಬೇರು ರಾಗ ತೆಗೆದರು. 'ಅಂಗಾದ್ರೆ ಯಂಗೆ? ಉಂಬಾದು, ತಿಂಬಾದಕೆ ದಯಾ ದಾಕ್ಷಿಣ್ಯ, ಇದರಾಗೆ ಯಂತದು?



ನಾವು ಏಳು ಹೋರಿಗಳ ಮೇಲೆ ಹೊನ್ನು ಹೇರಿಕೊಂಡು ಬಂದಿದ್ದೀವಿ. ಅದನ್ನು ತಗೊಂಡು ನಿಮ್ಮ ಹುಲ್ಲುಕೊಪ್ಪಲಲ್ಲಿ ದನಗಳ ಮೇಯಿಸಾಕೆ ಒಪ್ಪಿಗೆ ಕೊಡಬೇಕು' ಎಂದು ಕೇಳಿಕೊಂಡರು. ಆಗ ಆಚಾರಪ್ಪ 'ಆಯಿತು' ಅಂದುಬಿಟ್ಟು ದುಡ್ಡಿನ ಚೀಲ ಇಳಿಸಿಕೊಂಡು ಒಳಗೆ ಇಟ್ಟುಕೊಂಡ. ಕಂಬೇರು ವೀಳ್ಯ ಹಾಕಿಕೊಂಡು ನಯವಾಗಿ ಮಾತಾಡಿಬಿಟ್ಟು ಅಲ್ಲಿಂದ ಹೊರಟರು.

# ಬೇತಾಳಗಳು ಬೆದರ್ಯಾವು

ಜುಂಜಪ್ಪನ ದನಗಳು ಪುಟ್ಟಣ್ಣನ ಕಾವಲಾಗೆ ಮೇಯುತಾವೆ. ನೂರೊಂಬತ್ತು ಜಾತಿ ಹುಲ್ಲು, ಹಸಿರು ಕಕ್ಕಂಗೆ ಆಯಿತೆ. ಇತ್ತ ಕಾವಲಿಗಿದ್ದವಲ್ಲ? ಬೇತಾಳಗಳು ಒಂದಕ್ಕೂ ಎಚ್ಚರನೂ ಇಲ್ಲ. ಹೊರಗಿಂದ ನೋಡುಗರಿಗೆ ನಿಂತ ನಿಂತಂಗೇ ಅವೆ. ಆದರೆ ಬರೀ ಗೊಂಬೆ ಮಾತ್ರ. ಜುಂಜಪ್ಪ, ತನ್ನ ತಮ್ಮಗಳ ಜೊತೆಗೆ ಅಲ್ಲೇ ಇದ್ದ ಮರದ ನೆರಳಾಗೆ ಕುಂತುಕೊಂಡು, ದನಗಳು ಮೇಯಾದು ನೋಡಿಕೊಂಡು ಆನಂದಪಡುತಾನೆ. ಹಿಂಗೆ ಕೆಲವು ದಿನ ಕಳೆಯಿತು. ಅಷ್ಟು ಹೊತ್ತಿಗೆ ಜುಂಜಪ್ಪನ ಮಾವುಗಳು ಇದ್ರಲ್ಲ ಕಂಬೇರು ಕಿತಾಪತಿ ಮಾಡಿರು. ಜುಂಜಪ್ಪನ ದನಗಳು ಮೇಯೋ ಕಾವಲನ್ನು ಅವರು ಕಂಡುಕೊಂಡಿದ್ದರು. ಹುಲ್ಲು ಮಾತ್ರ ದನ ಮೇಯಿಸಾಕೆ ಈಗ ನೋಡಿರೋ ಜುಂಜಪ್ಪನೇ ಮೇಯಿಸ್ತಾ ಅವುನೆ. ಅವರಿಗೆ ವಿಷ ಕಕ್ಕಂಡಂಗೆ ಆತು. ಏನು ಮಾಡಾದು? ಅವುನ ಮೇಲೆ ಜಗಳಕೆ ಹೋದರೆ, ಅವುನ ಬಗ್ಗೋ ಮಗ ಅಲ್ಲ. ಚೇಳೂರು ರಂಗಣ್ಣನ ವಿಷಯದಾಗೆ ಆಗಲೇ ಮೋಸ ಹೋಗಿದ್ದಾರೆ. ಈಗ ಉಪಾಯವಾಗಿ ಕಾಲಿಕ್ಕಬೇಕೆಂದು ಯೋಚನೆ ಮಾಡಿದರು. ಬಿರಬಿರನೆ ಸಾಣೆಕೆರೆ ಪುಟ್ಟಾಚಾರಿ ಮನೆಗೆ ಹೋದರು. ಏನು ಆಚಾರ್ಯರೆ ಇಂಥಾ ಕೆಲಸನ ಮಾಡಬಹುದೆ? ಅಂದ್ರು. ಮೋಸದ ಮಾತಾಡಿರು. ಆಚಾರಿಗೆ ಒಂದೂ ಅರ್ಥವಾಗವಲ್ಲದು. ಏನು ಗೊಲ್ಲಗೌಡರೆ, ನೀವು ಹೇಳ್ತಾ ಇರೋದು ಅಂದು ಕೇಳಿದ. ಆಗ ಜುಂಜಪ್ಪನ ಸೋದರಮಾವುಗಳು ಹೇಳಿರು 'ನಿಮ್ಮ ಹುಲ್ಲುಗಾವಲಾಗೆ ಜುಂಜಪ್ಪ ದನ ಬಿಟ್ಟು ಮೇಯಿಸಿಬಿಟ್ಟವನೆ. ಕಾವಲು ನಮ್ದು ಅಂಬ್ತಾ ನಮಗೆ ಮಾತು ಕೊಟ್ಟ ನೀನು ದುಡ್ಡು ಇಸಕೊಂಡು ನಾನು ಅತ್ತ ಕಡೆ ಹೋಗುತ್ತಿದ್ದಂಗೆ ಹಿಂಗೆ ಮಾಡಬಹುದೆ?' ಅಂದ್ರು. ಯಾವಾಗ ಪುಟ್ಟಣ್ಣ ಹುಲ್ಲುಗಾವಲಾಗೆ ಜುಂಜಪ್ಪ ದನ ಬಿಟ್ಟುಕೊಂಡು ಮೇಯಿಸಿದ ಅಂಬ್ತಾ ಸುದ್ದಿ ಬಂತೋ, ಆಚಾರಿ ಮೇಲಕ್ಕೆ ನೆಗೆದು ಕೆಳಕ್ಕೆ ಕುಂತ. 'ಅಲಾ ಅಲಾ ಕಾಡುಗೊಲ್ಲ, ನಿನಗೆ ಅದೆಂತ ಸೊಕ್ಕು ಇರಬೇಕು. ನಾನು ಅಂದರೇನು, ನನ್ನ ಹೊಲ, ಮನೆ ಅಂದರೇನು? ಈ ಸುತ್ತಮುತ್ತಲ ಜನಾದಿ ಜನವೆಲ್ಲ ನನ್ನ ಹೆಸರು ಕೇಳಿದರೆ ನಡುಗುತ್ತಾರೆ. ಅದೂ ಅಲ್ಲದೆ, ಅತಳಪಾತಾಳ ರಸಾತಳ ಅಲ್ಲಾಡಿಸೋ ಬೇತಾಳಗಳು

ಇರುವಾಗ ಅದೆಂಗೆ ಒಳಗೆ ಬಂದ' ಎಂದು ಆಶ್ಚರ್ಯಪಟ್ಟು ಆಚಾರಿ ಜುಂಜಪ್ಪನಿಗೆ ತಕ್ಕ ಶಾಸ್ತಿ ಮಾಡುತೀನಿ, ಅಂತಾ ಎಗರಾಡಿದ. ಕಂಬೇರಿಗೆ ಅದೇ ಬೇಕಾಗಿದ್ದು. ಅವರಿಗೆ ಹುಲ್ಲುಗಾವಲಾಗೆ ದನ ಮೇಯಿಸೋದಕ್ಕಿಂತ ಜುಂಜಪ್ಪನಿಗೆ ಕೇಡು ಮಾಡಾದು ಬೇಕಾಗಿತ್ತು. ಅದಕ್ಕೆ ಆಚಾರಪ್ಪನಿಗೆ ಪುರಲೆ ಹಾಕಿ, ಎತ್ತಿಕಟ್ಟಿ ಅವುನ ಮಾಟ ಮಂತ್ರದಿಂದ ಜುಂಜಪ್ಪನು ರಕ್ತ ಕಾರಿಕೊಂಡು ಸಾಯೋ ಹಂಗೆ ಮಾಡಬೇಕೆಂಬುದೇ ಕಂಬೇರ ಪ್ಲಾನಾಗಿತ್ತು. ನಮ್ಮ ಬಯಕೆ ಈಡೇರಿತೆಂದು ಸಂಭ್ರಮಿಸಿದರು. ಆಚಾರಪ್ಪ ಹೇಳಿದ 'ನಿಮ್ಮ ತಾವ ದುಡ್ಡು ತಗೊಂಡು ನಾನು ಇನ್ನೊಬ್ಬರಿಗೆ ದನ ಮೇಯಿಸಾಕೆ ಬಿಡಾ ಮಗನಲ್ಲ. ಅವುನ ಯಾರಾದರೂ ಆಗಲಿ ಸುಮ್ನೆ ಬಿಡಂಗಿಲ್ಲ. ನಮ್ಮ ಹುಲ್ಲುಗಾವಲಿಗೆ ಕಾಲಿರಿಸಿದ ಅವನ ದನಗಳನ್ನೆಲ್ಲಾ ತಲೆ ಕಡಿಸದೇ ಬಿಡಲ್ಲ. ದನ ಹೊಡೆದುಕೊಂಡು ಬಂದವರನ್ನು ತಲೆ ಕಡಿಸಿ, ನಮ್ಮ ಬಚ್ಚಲು ಮನೆಯ ಕಲ್ಲಿನೊಳಗೆ ಹೂತಾಕಿಸದೇ ಹೋದರೆ, ನನ್ನ ಹೆಸರು ಪಂಚಾಕ್ಷರಿ ಪುಟ್ಟಾಚಾರಿನೇ ಅಲ್ಲ' ಎಂದು ಕಂಬೇರಗೊಲ್ಲರಿಗೆ ಆಶ್ವಾಸನೆ ಕೊಟ್ಟುಬಿಟ್ಟು ಕಳುಹಿಸಿದ.

ಆಮೇಲೆ ಏನು ಮಾಡಿನಪ್ಪ ಈ ಆಚಾರಿ ಅಂದ್ರೆ, ಅವುನ ಮಂತ್ರವಾದಿ ಅಲ್ಲವೆ ಮಾಟ ಶೂನ್ಯ ಮಾಡೋದೆ ಅವುನ ಕೆಲಸ. ಅರಮನೆ ಒಳಿಕೆ ಬಂದು, ಭೂತಾಳೆ ಮರ ಕಡಿದುಬಿಟ್ಟ. ಅದರಲ್ಲಿ ಎರಡು ಬಲಾಢ್ಯವಾದ ಕುರಿಪಟ್ಲಿ ಗುನ್ನ ಕಡೆದುಬಿಟ್ಟ. ಅದಕ್ಕೆ ಮಂತ್ರೋಪದೇಶ ಮಾಡಿ, ಬೇತಾಳದ ರೂಪ ಕೊಟ್ಟುಬಿಟ್ಟ. ಆ ಬೇತಾಳಗಳೋ ಕೊಂಬು ತಿರುಗಿದ ಟಗರಾಗಿ ಸಿದ್ದರಬೆಟ್ಟದ ತರ ನಿಂತುಕೊಂಡುಬಿಟ್ಟವು. ಅವುಗಳಿಗೆ ಹೇಳಿದ 'ಯಾವೋನೋ ದಗಡಿಮಗ, ನಮ್ಮ ಹುಲ್ಲುಗಾವಲಿಗೆ ದನ ತರುವೆವನೆ, ಅವುನ ಗ್ರಾಚಾರ ನೆಟ್ಟಗಿಲ್ಲ. ನೀವು ಕೂಡಲೇ ಹೋಗಿ ಆ ದಗಡಿ ಮಕ್ಕಳನ್ನು ಕುಟ್ಟಿ ಪುಡಿ ಪುಡಿ ಮಾಡಿಕೊಂಡು ನಮ್ಮ ಅರಮನೆ ಮುಂದೆ ದೂಳ ಆಟ ಆಡಿ' ಎಂದು ಕಳುಹಿಸಿಬಿಟ್ಟ.

ಬೇತಾಳದ ಟಗರುಗಳು ಸೀದಾ ಹುಲ್ಲುಗಾವಲಿಗೆ ಬಂದ್ವು. ಜುಂಜಪ್ಪ ಹಂಗೇ ಮರೆಯಾದ, ಮಾರಣ್ಣ, ಮೈಲಣ್ಣ ತಮ್ಮಗಳು ಅಲ್ಲೇ ನಿಂತಿದ್ರು. ಬೇತಾಳ ಟಗರುಗಳು ಬಂದಾವು ಬಂದಂಗೆ ಈ ಹುಡುಗರು ಇಬ್ಬರನ್ನೂ ಓಡಿಸ್ಯಾಡಿಕೊಂಡು ಗುದ್ದಿಬಿಟ್ಟವು. ಜುಂಜಪ್ಪನಿಗೆ ಹೊಟ್ಟೆ ಉರಿದುಹೋತು. ಅನ್ಯಾಯವಾಗಿ ತಮ್ಮಗಳು ಈ ಬೇತಾಳಕ್ಕೆ ಸಿಕ್ಕಿಬಿಟ್ರಲ್ಲ, ಎಂದು ಎದ್ದು ಒಂದೇ ಒಂದು ಒದೆತ ಒದ್ದ ನೋಡು ಬೇತಾಳಕ್ಕೆ. ಒಂದು ಬೇತಾಳ ತಳುಕಿನ ಗುಡ್ಡಕ್ಕೆ, ತಾಕಿ ಪುಡಿಪುಡಿಯಾದರೆ, ಇನ್ನೊಂದು ವೇಣುಕಲ್ಲು ಬೆಟ್ಟಕ್ಕೆ ಸಿಕ್ಕಿ ಚೂರುಚೂರಾಗಿ ಹೋದವು. ಈ ಸಂಗತಿ ಕೇಳಿ ತಿಳಿದ ಆಚಾರಿಗೆ ಗಾಬರಿಯಾತು. ಎಲ್ಲಾ ನಾನೇ ಓದೆಕಾರ. ಏಳೂರಹಳ್ಳಿ ಗಂಡುಸರೆಲ್ಲ ನಪುಂಸಕರಾಗಿ ನನ್ನ ದಾಸರಾಗವರೆ. ಅವುರ ಹೆಂಡತೀರೆಲ್ಲ ನಮ್ಮ ಮನೆ ಕಸನೀರಿಗೆ ಬಿದ್ದವರೆ ಅಂತದರಲ್ಲಿ ಇವನ್ಯಾವನೋ

ಸಿಳ್ಳಿಕ್ಯಾತ ಬೇತಾಳಗಳನ್ನು ಒಡೆದಿದ್ದಾನೆ! ಇವುನೂ ಮಾಟಗಾರನೇ ಇರಬೇಕೆಂದು ಪುಟ್ಟಾಚಾರಿ ಯೋಚನೆ ಮಾಡಿದ.

ಈಗ ಪುಟ್ಟಾಚಾರಿ ಒಂದು ಸಾವಿರ ಬೇತಾಳಗಳನ್ನು ಮಾಡಿ ಮೂಲೆ ಮೂಲೆಗೂ ಬಿಟ್ಟುಬಿಟ್ಟ. ಆ ಬೇತಾಳಗಳೋ ಏನು ಒಂದೇ ಸಮಕೆ ಕುಣೀತಾವೆ. ನಗಾರಿ ಬಡೀತವೆ. ಜೋಡು ಕಹಳೆ ಊದುತಾವೆ. ಕೇಕೆ ಹಾಕಿಕೊಂಡು ಪುಟ್ಟಾಚಾರಿ ಹೊಲ ತಾಕೆ ಹೋದ. ಹೋಗಿಬಿಟ್ಟು ಆಹ ಎಂದು ಬಾಯಿ ತೆರಕೊಂಡು ಮಾರಣ್ಣ ಮೈಲಣ್ಣ ಜುಂಜಪ್ಪನ ತಿಂಬಾಕೆ ಬಂದವು. ಅಷ್ಟೊತ್ತಿಗೆ ಜುಂಜಪ್ಪ ಅಲ್ಲೇ ಒಂದು ಆಲದ ಮರ ಇತ್ತು, ಆ ಆಲದ ಕೊಂಬೆ ಮುರಿದು ನೆಲಕ್ಕೆ ಉಜ್ಜಿ, ಉರಿಗಣ್ಣ ಬಿಟ್ಟ. ಮರವಾದಿ ಮರವೆಲ್ಲಾ ಹತ್ತಿಕೊಂಡು ಉರಿಯೋಕೆ ಸುರುವಾಗಿಬಿಡ್ತು. ಬೇತಾಳಗಳ ಅಟ್ಟಿ ಅಟ್ಟಿಸಿಕೊಂಡು ಸುಟ್ಟು ಭಸ್ಮ ಮಾಡಿಬಿಡ್ತು. ಒಂದು ಮುದಿ ಬೇತಾಳ ಇತ್ತು, ಅದು ಬಾಯಿ ಬಡುಕೊಂಡು ಓಡಿಬಂದು ಪುಟ್ಟಣ್ಣನ ಮನೆತಾಕೆ ಬಂತು. ಬಂದುದು ಬಂದಂಗೆ ಆ ಮುದಿ ಬೇತಾಳನೂ ಉರಿದು ಬೂದಿಯಾಗಿ ಪುಡಿಯಾಗಿ ಹೋಗಿಬಿಡ್ತು.

ಆಚಾರಪ್ಪನಿಗೆ ಎದೆ ಡವಡವ ಬಡಿದುಕೊಳ್ಳಾಕೆ ಸುರುವಾಗಿ ಬಿಡ್ತು. 'ಎಲೇ ಕಾಡುಗೊಲ್ಲ ನಾನು ಕಲ್ತ ವಿದ್ಯೆ ಕರ್ಚು ಮಾಡಿ ಬೇತಾಳ ಬಿಟ್ಟರೆ ಅವುಗಳನ್ನೆಲ್ಲಾ ಸುಟ್ಟು ಹಾಕಿಬಿಟ್ಟೇಯ? ಆಯ್ತು ನಿನ್ನನೂ ನಾನೀಗ ಸುಡುತೀನಿ' ಅಂದುಬಿಟ್ಟು ಮಾಟ ಮಾಡಾಕೆ ಕುಂತನು. ಈಗ ಏನು ಮಾಡಿದನಪ್ಪ ಅಂದ್ರೆ, ಹಿಂದೆ ದೇವೇಂದ್ರನಿಗೆ ಮಾಟಾ ಮಾಡಿ ಅವುನ ಒಲಿಸಿಕೊಂಡು ಮಳೆ ಸುರಿಸೋ ತರ ಮಾಡಿಕೊಂಡಿದ್ದನಲ್ಲ, ಇದೇ ವಿದ್ಯೆನ ಈಗ ಆಚಾರಿ ಜುಂಜಪ್ಪನ ಮೇಲೂ ಮಾಡಾಕೆ ಸುರುಮಾಡಿದ. ನೆಲಮಾಳಿಗೆ ಒಳಗೋದ. ಮಂಡಲ ಬರೆದುಬಿಟ್ಟ, ಚಕ್ರನೇ ಸ್ಥಾಪಿಸಿಬಿಟ್ಟ, ಜುಂಜಪ್ಪನ ಚಿತ್ರನೇ ಬರೆದುಬಿಟ್ಟ. ಅವುಗಳ ಕೀಲು ಕೀಲಿಗೆ ಹನ್ನೆರಡು ಮೊಳೆ ಹೊಡೆದುಬಿಟ್ಟ. ಜುಂಜಪ್ಪನ ಕತೆ ಮುಗೀತು, ಅವುನ ಬಂದಿಸಾಕಿದ್ದೀನಿ ಅಂತ ತಿಳುಕೊಂಡುಬಿಟ್ಟ. ರಾತ್ರಿಯೆಲ್ಲಾ ಮಂಡಲ ಬರೆದು, ಅಕ್ಕಿ ಕಾಳು ತಿದ್ದುತಾ ಕುಂತ.

ಬೆಳಕು ಹರಿತಲೂ ಆಚಾರಪ್ಪನ ಹೆಂಡತೇರು ನೀರು ತರಾಕೆ ಅದೇ ಕಾವಲಿಗೆ ಬಂದ್ರು. ಬಂದವರು ಜುಂಜಪ್ಪನ ದನ ಇರೋದು ತಿಳಿಯಿತು. ಗಾಬರಿಯಾಯ್ತು. ಅಲ್ಲಾ ನನ್ನ ಗಂಡ ಮಾಟಕಾರ. ಅವನೆಂದೂ ಈ ಕಡೆಗೆ ಬಂದಾನಲ್ಲ, ಆದರೂ ನಮ್ಮ ಕಾವಲಾಗೆ ಒಂದು ಪ್ರಾಣಿ-ಪಕ್ಷಿನೂ ಬರಾದಿಲ್ಲ, ಬರುತ್ತಿರಲಿಲ್ಲ. ಈಗ ನೋಡಿದರೆ ಹುಲ್ಲುಗಾವಲು ತುಂಬಾ ದನ ತುಂಬಿಕೊಂಡಾವಲ್ಲ! ಇವನ್ಯಾರಪ್ಪ ಧೀರ? ತಿಳಿದು ಬಂದಾನ ಇಲ್ಲವೇ ತಿಳಿಯದೇ ಬಂದಾನ ಅಮ್ತಾ ಅಂದುಕೊಂಡು ಕೊಡಪಾನದಾಗೆ ನೀರು ತುಂಬಿಕೊಂಡು

ಹೊರಟರು. ಆಗ ಜುಂಜಪ್ಪ 'ಅಮ್ಮ' ಎಂದು ಸೊಲ್ಲು ತೆಗೆದ. ಆ ಹೆಂಗಸರು ನಿಂತರು. ಪರಪುರುಷರ ಕುಂಟೆ ಮಾತಾಡಂಗಿಲ್ಲ. ಗೊತ್ತಿಲ್ಲದೆ ಮಾತಾಡಿರೂ ತಿಳಿಯುತ್ತೆ ಆಚಾರಪ್ಪನಿಗೆ. ಆಯಮ್ಮಂದಿರು 'ಏನಪ್ಪ? ಯಾವೂರು? ನಮ್ಮ ಹೊಲದೊಳಗೆ ನೀನು ದನ ಬಿಡಬಹುದೆ?' ಅಂದ್ರು. ಜುಂಜಪ್ಪ ತನ್ನ ಕಷ್ಟ ಹೇಳಿಕೊಂಡ. ಆಯಮ್ಮಂದಿರು ನೀರು ತುಂಬಿಸಿಕೊಂಡು ಹೊರಟರು. ಜುಂಜಪ್ಪ ಮಾತಾಡಿಸಿದ. ಚಿಕ್ಕ ಹೆಂಡತಿ ತಿರುಗಿನೋಡ್ತು. ಜುಂಜಪ್ಪ ಆಯಮ್ಮನಿಗೆ ಮಾಯದ ಕಣ್ಣುಬಿಟ್ಟ. ಆಯಮ್ಮ 'ಏನಣ್ಣ?' ಅಂತು. 'ಏನಿಲ್ಲ ಕಣವ್ವ, ನಿನ್ನಿಂದ ಒಂದು ಒಳ್ಳೆಯ ಕೆಲಸ ಆಗಬೇಕಾಗಿದೆ. ಅದನ್ನು ಮಾಡಿಕೊಡುಬೇಕಲ್ಲ, ನೀನು ನನ್ನ ಅಕ್ಕ-ತಂಗಿರ ಸಮಾನ' ಅಂದ. 'ಅದೇನು ಹೇಳಣ್ಣ' ಅಂದ್ಲು. ಜುಂಜಪ್ಪ ತಾನು ಯಾರು, ಎಲ್ಲಿಂದ ಬಂದೆ, ಉದ್ದೇಶನೆಲ್ಲಾ ತಿಳಿಸಿಬಿಟ್ಟು ದನ ಉಳಿಸೋ ಕೆಲಸಕ್ಕೆ ಸಹಾಯ ಕೋರಿದ. ಆಯಮ್ಮ ನಿಂತುಕೊಂತು.

ಜುಂಜಪ್ಪ ಹೇಳುತಾನೆ 'ನೋಡು ತಾಯಿ, ನಿನ್ನ ಗಂಡ ದುಷ್ಟ. ದುಷ್ಟಕಾರ್ಯ ಈ ಪರಪಂಚದ ಮೇಲೆ ಹೆಚ್ಚು ದಿನ ನಡೆಯೋದಿಲ್ಲ. ಮೋಸ ನಾಶ ಆಗಲೇಬೇಕು. ಈಗ ನಿನ್ನ ಗಂಡ ನಿನ್ನ ಅರಮನೆ ಒಳಗೆ ಮಂಡಲ ಬರಕಂಡು, ಮಾಟ ಮಾಡ್ತಾ ಕುಂತುಕೊಂಡವನೆ. ಅದು ಕೆಟ್ಟದು. ಕೇಡಿನದ್ದು. ಮಾಟ ಮಾಡಿ ನನ್ನ ಕಾಮಧೇನುಗಳನ್ನು ಸಾಯಿಸೋದ್ರಿಂದ ಏನು ಉಪಯೋಗ? ನೀನು ನಿನ್ನ ಅರಮನೆ ಒಳಕೆ ಹೋಗುತ್ತಿದ್ದಂಗೆ ಮಂಡಲ ಬರೆದಿರೋ ಜಾಗ ಅದೆಯಲ್ಲಾ, ಅದರ ಮೇಲೆ ನೀನು ಹೊತ್ತುಕೊಂಡು ಹೋಗುತ್ತಿರುವ ಕೊಡಪಾನನ ಕಾಣದಂತೆ, ಎತ್ತಿ ಒಗೆದುಬಿಡು, ಮಾಟ-ಮಂತ್ರ ಕೆಡಿಸಿಬಿಡು' ಅಂದ. ಆಯಮ್ಮ ಗಂಡಾ ಅಂತ ಯೋಚನೆ ಮಾಡ್ತು. ಇನ್ನೊಂದು ಕಡೆಗೆ ಹರೆಯದ ದಾಸಿಯರನ್ನ ಕರಕೊಂಡು ಬಂದು ಮನೆಗಿಕ್ಕಿಕೊಂಡಿರೋದು ಅವುನ ಮಾಟ ಶೂನ್ಯದಿಂದಲೇ, ಅಂಮ್ತಾ ಮತ್ಸರನೂ ಉಂಟಾತು. 'ನೋಡಾನ' ಅಂದುಬಿಟ್ಟು ಮನೆಗೆ ಬಂದ್ಲು. ಮನೆ ಒಳಗೆ ಉಪ್ಪರಿಗೆ ಹತ್ತೋ ಮೆಟ್ಟಿಲು ಬದಿಗೆ ಮಂಡಲ ಬರೆದು, ಅಕ್ಕಿಕಾಳು ಹರಡಿ ಅದರೊಳಗೆ ಜುಂಜಪ್ಪನ ಚಿತ್ರ ಬಿಡಿಸಿ, ಅದರ ಕಾಲು, ಕೈಯಿ, ಕೀಲು ಕೀಲಿಗೂ ಮಳೆ ಬಡಿದುಬಿಟ್ಟಾನೆ ಆಚಾರಪ್ಪ. ಸಾಂಬ್ರಾಣಿ ಹೊಗೆ ಹಾಕಿಕೊಂಡು ಬೇತಾಳಗಳ ಪಕ್ಕದಲ್ಲಿ ನಿಲ್ಲಿಸಿಕೊಂಡು ಮಂತ್ರ ಹೇಳುತಾನೆ. ಈಯಮ್ಮ, ಅದೇ ಚಿಕ್ಕ ಹೆಂಡತಿ ಬಂದುದು ಬಂದಂಗೆ, ಎಡವಿದಳಂಗೆ ಅವುಟ ಮಾಡಿ, ಕೊಡಪಾನ ಆ ಮಂಡಲದ ಮ್ಯಾಲೆ ಎತ್ತಿಹಾಕಿಬಿಡ್ತು. ಬೂದಿ ಮಂಡಲ, ಅಕ್ಕಿಕಾಳು ಎಲ್ಲಾ ಜಾಲಾಡಿಕೊಂಡು ಹೋಗಿಬಿಡ್ತು. ಆಚಾರಿ, ಕೆಂಡದಂಗೆ ಕೋಪ ಮಾಡಿಕೊಂಡ. ಆಯಮ್ಮ ನಾಚಿಕೊಂಡು ಏನೂ ಅರಿಯದವಳಂಗೆ ಒಳಾಕೆ ಸೇರಿಕೊಂಡುಬಿಡ್ತು. ಪುಟ್ಟಾಚಾರಿಗೆ ಯಾಕೋ ಅನುಮಾನ ಬಂದುಬಿಡ್ತು. ನಾನು ಯಂಥ

ವಿದ್ಯೆ ಕಲಿತಿದ್ರೂನೂ, ಬೇತಾಳ ಮಾಡಿರೋ ಇವುನು ಹೆದರಿಸುತಾನಲ್ಲ. ಇವನು ಜುಂಜಪ್ಪನೇ ಇರಬೇಕು. ಅವುನು ಅಸವಲ್ಲದವನು ಅಂಬಾದು ಕೇಳಿದ್ದೀನಿ. ಹಾವು, ಚೇಳು ಅವುನ ಕೈಗರಡಿಯೊಳಗೆ ಆಟವಾಡುತ್ತವೆ. ಅಂಥವನ್ನ ಹೇಗೆ ಸೋಲಿಸಾದು, ಅಂದುಬಿಟ್ಟು ಆಚಾರಿ, ಇರಲಿ ಅಂಬ್ತಾ ಪಂಚಾಂಗದ ಕಡೆ ಕಣ್ಣಾಡಿಸಿದ. ಆಯತವಾರ ಅಮಾಸೆ, ದೇವತೆಗಳಿಗೆ ಕ್ರೂರ. ಮಾಟಕಾರರಿಗೆ ಏಳಿಗೆ ಕಾಲ ಅಂದು ತಿಳಿದುಬಿಟ್ಟ. ಮಾಟಾ ಮಾಡಾಕೆ ಸುರುಮಾಡಿದ. ದನಗಳ ಮೇಲೆ ಬೆಂಕಿ ಮಳೆಕರೆದ. ಬೆಂಕಿ ಉಂಡೆ ಉಂಡೆ ರಾಶಿ ತೂರಿಬಿಟ್ಟ. ಆದರೆ ಭಗವಂತ ಯಾವುದೂ ಜುಂಜಪ್ಪನಿಗೆ ತಗುಲಲಿಲ್ಲ. ಆದರೂ ದನಾದಿ ದನವೆಲ್ಲ ಬೆಂಕಿ ಉರಿಗೆ ತತ್ತರಿಸುತ್ತವೆ. ಜುಂಜಪ್ಪನೂ ಸುಮ್ಕೆ ಅದಾನೆ. ಈಗ ಒಂದು ಯೋಚನೆ ಬಂದುಬಿಡ್ತು. ಜುಂಜಪ್ಪ ಪಂಚಕಲ್ಯಾಣಿ ಅಂಬೋ ಹಸುನ ಕರೆದು 'ದೇವೇಂದ್ರರಾಯನ ತಕೆ ಹೋಗಿ ಮಳೆ ಬರಿಸೋ ಹಂಗೆ ಮಾಡು. ಮಳೆ ಬರದಿದ್ರೆ ದನ-ಕರು ಎಲ್ಲಾ ಬೆಂಕಿ ಉಂಡೇಲಿ ಸೀದು ಹೋಗಬೇಕಾಗುತ್ತೆ. ಬಯಲಾಗೆ ದಗೆ ಬಂದು, ಒಂದು ಬೀಜನೂ ಇಲ್ಲದಂಗೆ ಸುಟ್ಟು ಹೋಗಿಬಿಡುತಾವೆ' ಅಂದನು. ಅದರಂತೆ ಪಂಚಕಲ್ಯಾಣಿ ಹಸು ದೇವೇಂದ್ರನ ಪಟ್ಟಣಕೆ ಹೋಗಿ ಬೇಡಿಕೊಂಡುಬಿಡ್ತು. ಇತ್ತ ಜುಂಜಪ್ಪ ನೇರವಾಗಿ ಪುಟ್ಟಣ್ಣನ ಮನೆಗೆ ಬಂದ. ಬಂದವನು ಬಾಗಿಲಾಗೆ ನಿಂತನು. ಅಷ್ಟು ಹೊತ್ತಿಗೆ ದೇವೇಂದ್ರ ಪುಟ್ಟಣ್ಣನ ಕಾಟದಿಂದ ರೋಸಿಹೋಗಿದ್ದ. ಈಗ ಅವುನ ಬುರುಡೆಗೆ ಬಿಸಿನೀರು ಕಾಯಿಸಾಕೆ ರೆಡಿಯಾದ. ಯಾವಾಗ ಸ್ವಾಮಿ ಜುಂಜಪ್ಪನ ದನಗಳ ಮೇಲೆ ಆಚಾರಿ ಕೆಂಡದ ಉಂಡೆ ಬಿಟ್ಟನೋ, ದೇವೇಂದ್ರರಾಯ ಘನಘೋರ ಮಳೆ ಸುರಿಸಿಬಿಟ್ಟ. ಆ ಬೆಂಕಿ ಉಂಡೆಲ್ಲಾ ಆರಿ ತಣ್ಣಗಾತು. ಜುಂಜಪ್ಪನಿಗೆ ದನ ಬದುಕಿದವಲ್ಲ ಅಂಬೋ ಸಂತೋಷವಾಯ್ತು. ದನಗಳು ಸಾಣೆಕೆರೆ ಪುಟ್ಟಣ್ಣನ ಹುಲ್ಲುಗಾವಲಾಗೆ ವಾಲಾಡಿಕೊಂಡು ಮೇಯುತ್ತಿದ್ದವು. ಆಚಾರಪ್ಪನಿಗೆ ಮೈಕೈಯೆಲ್ಲಾ ಉರಿ ಹತ್ತಿಬಿಡ್ತು. 'ಎಲಾ ಕಾಡುಗೊಲ್ಲ! ಅಂಥ ದೇವೇಂದ್ರರಾಯನೇ ನಾನು ಹೇಳಿದಂಗೆ ಕೇಳಿಕೊಂಡು ನನ್ನ ಹೊಲದ ಮ್ಯಾಲೆ ಮಳೆ ಸುರಿಸಿಕೊಂಡವನೆ. ನೀನು ನಾನು ಏನು ಮಾಡಿದರೂ ಎದುರೇ ಇಲ್ಲದಂಗೆ ತಿರುಗುಮುರುಗು ಮಾಡುತೀಯ? ನಿನ್ನ ಪಾಶ ನನ್ನತ್ರ ನಡೆಯೋದಿಲ್ಲ' ಅಂದುಬಿಟ್ಟ.

ಅರಮನೆ ಒಳಗೊಂದು ಕೆಳಮನೆ. ಅಲ್ಲಿ ಅಂದು ಕಾಳಿ ಪೂಜೆ ಮಾಡಿದ್ದನಲ್ಲ, ಅದರ ಮೊರೆಹೋದ. ಇಬ್ಬರು ಬೇತಾಳಗಳನು ಸೃಷ್ಟಿ ಮಾಡಿ ಗಂಡಭೇರುಂಡದ ಪಕ್ಷಿ ರೂಪ ಕೊಟ್ಟ. ಅವುಕೆ ಹೇಳುತಾನೆ ಆಚಾರಿ 'ಎಲೇ ಪಕ್ಷಿಗಳೇ, ಈಗಲೀಗಲೇ ಹಾರಿಹೋಗಿಬಿಡಿ. ಹೊಲದಲ್ಲಿ ಯಾರಾದರೂ ರೈತ ಕೆಲಸ ಮಾಡ್ತಾ ಇರುತಾನೆ. ಅವುನ ಅಂಗೆ ಕೊಕ್ಕಿನಿಂದ ಕಚ್ಚಿಕೊಂಡು ಬಂದುಬಿಡಿ. ಈ ಹೊತ್ತು ಸೂರ್ಯಗ್ರಹಣ. ಕಾಳಿಕಾಮಾತೆಗೆ ರಕ್ತ

ಬಲಿಕೊಡಬೇಕು' ಅಂದ. ಈ ಬೇತಾಳಗಳು ಪಕ್ಷಿಗಳ ರೂಪ ತಾಳಿಬಿಟ್ಟು ಹಾರಿಕೊಂಡು ಹೋದವು.

ಅಂಗೆ ರವಾಟು ಮುಂದಕ್ಕೆ ಹೋದವು. ಅಲ್ಲೊಂದು ಹೊಲ, ಅದರಾಗೆ ರೈತ ಹೊಲದ ಕೆಲ್ಸ ಮಾಡ್ತಾ ಇದ್ದ. ಈ ಬೇತಾಳಗಳು ಹೋದ ಹೋದವೆ ಕೊಕ್ಕಿನಿಂದ ಕುಕ್ಕಿ ಆ ಮುದುಕನನ್ನು ಎತ್ತಿಕೊಂಡು ಬಂದವು. ಬಂದವು ಈ ಆಚಾರಪ್ಪನ ಮುಂದೆ ಇಳಿಸಿದವು. ಒಳಾಕೆ ಬರುತ್ತಲೇ ಆಯಪ್ಪ ರೈತ ಬಾಯಿ ಬಾಯಿ ಬಡುಕೊಂಡ. ಈಗ ಆಚಾರಪ್ಪ ಮೂರು ಅಕ್ಕಿಕಾಳು ಮಂತ್ರಿಸಿ ಎಸೆದ. ಎಸೆಯುತ್ತಲೇ ಆಚಾರಪ್ಪನ ಮಾಟದಿಂದ ರೈತಪ್ಪಗೆ ಬಾಯಿ ಬಿದ್ದೋಗಿಬಿಡ್ತು. ಕಿವಿ ಕೇಳದಂಗೆ ಆದವು, ಕಣ್ಣು ಕಾಣದಂಗೆ ಆದವು. ಮುಂದಿನ ಆಯತವಾರ ಸೂರ್ಯಗ್ರಹಣ. ಆ ಹೊತ್ತು ಸೂರ್ಯಪ್ಪನ ಬೆಳಕು ಭೂಮಿ ಮೇಲೆ ರಾಹುದಿಲ್ಲ. ಅಂಥ ಗಳಿಗೇಲಿ ದೇವಾನುದೇವತೆಗಳಿಗೂ ಕಣ್ಣು ಕಾಣೋದಿಲ್ಲ. ಇದನ್ನು ಅಸ್ತ್ರ ಮಾಡಿಕೊಂಡು ಬಿಟ್ಟು ಆಚಾರಪ್ಪ, ಜುಂಜಪ್ಪನ ಮೇಲೆ ಮಾಟ ಶೂನ್ಯ ಮಾಡಾಕೆ ನೋಡಿ. ಕತ್ತಲು ಕವಿದುಬಿಡ್ತು. ಒಂದು ಚೂರೂ ಬೆಳಕು ಇಲ್ಲ. ಜುಂಜಪ್ಪನಿಗೂ ಕಣ್ಣು ಕಾಣದಂಗೆ ಆದವು. ಕತ್ತಲು ಕವಿದು, ಇನ್ನೇನು ಜುಂಜಪ್ಪನ ದನಗಳನ್ನೆಲ್ಲಾ ತರಿದು ಹಾಕಬೇಕು ಅಂಬೋ ಯೋಚನೆಯಲ್ಲಿಯೇ ಆಚಾರಪ್ಪ ಇದ್ದ. ಇತ್ತ ಕೈಲಾಸದಾಗೆ ಪರಮೇಶ್ವರ ನೋಡ್ತಾಯಿದ್ದ. 'ನನ್ನ ಶಿಶುಮಗ ಯಾವಾನೋ ಮಾಟಗಾರನಿಂದ ಹತನಾಗಿಬಿಡ್ತಾನಲ್ಲ. ಈ ಆಚಾರಿಗೆ ಹಿಂಗೇ ಬಿಟ್ಟರೆ ಮೋಸ ಹೆಚ್ಚಾಗಿ ಅನ್ಯಾಯ ಆಳುತ್ತೆ' ಅಂದು ಶಂಕರ ವಿಷ್ಣುಗೆ ಹೇಳಿ, 'ನೀನು ಈಗ ಜಾಗ್ರತೆ ಭೂಲೋಕಕ್ಕೆ ಹೋಗಬೇಕು. ಜುಂಜಪ್ಪ ಮಾಟಗಾರ ಆಚಾರಿಯ ಮೋಸದಿಂದ ಬಂಧಿಯಾಗಿದ್ದಾನೆ. ಕಣ್ಣು ಕಾಣದಂಗೆ ಆಗಿದೆ. ನೀನು ನಿನ್ನ ಚಕ್ರದಿಂದ ಒಂದು ಚೂರು ಬೆಳಕು ಮಾಡು. ಕತ್ತಲೆಯಿಂದ ಬೆಳಕಿನೆಡೆಗೆ ಜುಂಜಪ್ಪ ಬರಂಗೆ ಮಾಡು' ಅಂದ. 'ಮೋಸ ನಾಶವಾಗಬೇಕು. ಇಲ್ಲದಿದ್ದರೆ ದೇವತರೂ ನಾಶವಾಗಬೇಕು' ಅಂತ ಎಚ್ಚರಿಸಿದ.

ಆಗ ಮಹಾವಿಷ್ಣು ಭೂಲೋಕಕ್ಕೆ ಬಂದವನೆ ಸೂರ್ಯದೇವನಿಗೆ ಚಕ್ರ ಅಡ್ಡಹಿಡಿದು ಒಂದು ಚುಕ್ಕೆ ಬೆಳಕು ಕಾಣಂಗೆ ಮಾಡಿದ. ಆಗ ಜುಂಜಪ್ಪನಿಗೆ ಬ್ರಹ್ಮಾಂಡವೇ ತೆರಕಂಡಂಗೆ ಆತು. ಆ ಚುಕ್ಕೆ ಬೆಳಕಿನಾಗೆ ಆಚಾರಪ್ಪನ ನೋಡುತಾನೆ. ಆಚಾರಿ ತನ್ನ ಅರಮನೆ ಒಳಗೆ ಕಾಳಿಕಾದೇವಿ ಸ್ಥಾಪಿಸಿಬಿಟ್ಟು, ಅದಕ್ಕೆ ನರಮನುಷ್ಯರ ಕತ್ತು ಕಡಿದು ರಕ್ತ ತೊಟ್ಟಿಕ್ಕಿಸಿ, ಅದರ ಮುಂದೆ ಅಕ್ಕಿ ಕಾಳಾಗೆ ಜುಂಜಪ್ಪನ ಚಿತ್ರ ಬರೆದವನೆ. ಕೀಲು ಕೀಲಿಗೆ ಇನ್ನೇನು ಮೊಳೆ ಹೊಡೆಯಬೇಕು, ಅಷ್ಟರೊಳಗೆ ಜುಂಜಪ್ಪ ಏನು ಮಾಡಿನಪ್ಪ ಅಂದರೆ, ಒಂದು ನಾಗರಹಾವನ್ನು ಕರೆದ. ಅದು ಮಿಡಿನಾಗರು ಬಂದುಬಿಡ್ತು. 'ಈಗಲೇ ಹೋಗಿ ಆಚಾರಿ

ಮಾಟದ ಮೊಳೆ ಚೀಲದಲ್ಲಿ ಅಡಗಿರು' ಎಂದು ಹೇಳಿದ. ಆ ನಾಗರಹಾವು ಜುಂಜಪ್ಪ ಹೇಳಿದಂಗೆ ಮಾಡಿತು.

ಬಿರಬಿರನೆ ಹರಿದುಬಂದು ಅರಮನೆ ಹೊಸಿಲು ದಾಟಿ, ನಡುಮನೆ ಹಾದು ಒಳಮನೆ ಸೇರಿತು ನಾಗಪ್ಪ. ಮುಂದೆ ಮಾಳಿಗೆ ಹತ್ತಿ ಕಂಬಸಾಲಿನಾಗೆ ಹರಿದು ಹೋಗಿ ಮೇಗಲ ಜಂತೆಗೆ ಆತುಕೊಂಡು ಮಲಗಿಕೊಂತು.

ಇತ್ತ ಮಾಟದ ಪುಟ್ಟಾಚಾರಿ ಕಾಳಿ ದೇವತೆಗೆ ರಕ್ತಬಲಿಕೊಟ್ಟ, ಮಂತ್ರ ಹೇಳಿದ, ಅಕ್ಕಿ ಕಾಳಿನಾಗೆ ಜುಂಜಪ್ಪನ ಚಿತ್ರ ಒಂದು ಚೂರು ಮುಕ್ಕಾಗದಂಗೆ ಬಿಡಿಸಿದ. ಆಮೇಲೆ ಕೀಲು ಕೀಲಿಗೆ ಮೊಳೆ ಹೊಡೆದು ವಶಪಡಿಸಿಕೊಳ್ಳುವಂಗೆ ಪ್ಲಾನು ಮಾಡಿ ಆನಂದದಿಂದ ಇನ್ನೇನು ಮೊಳೆ ಹೊಡೆಯಬೇಕೆಂದು ಗೋಡೆಗೆ ತಗುಲಾಕಿದ್ದ ಚೀಲಕ್ಕೆ ಆಚಾರಪ್ಪ ಕೈಹಾಕಿದ ನೋಡು, ಸ್ವಾಮಿ ನಾಗಪ್ಪ ಮೇಲೆ ಮಲಗಿತಲ್ಲ ಜಂತೆಗೆ ಆತುಕೊಂಡು, ಚೀಲಕ್ಕೆ ಕೈಹಾಕುತ್ತಿದ್ದಂಗೆ ರಪ್ಪನೆ ಬಾರಿಸಿಬಿಟ್ಟ ನಾಗಪ್ಪ. ಹೊಡೆದ ಏಟಿಗೆ ಆಚಾರಿ ಯಪ್ಪೋ ಅಂಬ್ತಾ ಕೀರಾಡಿಬಿಟ್ಟ. ರಪ್ಪನೆ ನೆಲಕ್ಕೆ ಬಿದ್ದುಬಿಟ್ಟ. ಅವುನ ಕೀರಾಟ ಕೇಳಿದ ಏಳು ಜನ ಅವುನ ಹೆಂಡತೀರು, ಮನೆಯಾಗೆ ತಂದು ಕೂಡಾಕಿಕೊಂಡಿದ್ದನಲ್ಲ ಹೆಂಗಸರು ಅವರೆಲ್ಲಾ ಓಡಿಬಂದ್ರು.

ಓಡಿಬಂದು ನೋಡುತ್ತಾರೆ ಆಚಾರಪ್ಪ ಬಾಯಾಗೆ ಹಸಿರು ಲೊದ್ಲೆ ಸುರಿಸಿಕೊಂಡು ಒದ್ದಾಡುತ್ತವ್ನೆ. ಮೈಯಾದು ಮೈಯೆಲ್ಲಾ ಹಸಿರು ಬಣ್ಣಕ್ಕೆ ತಿರುಗಿಬಿಟ್ಟಿದೆ. ನೋಡು ನೋಡುತ್ತಲೇ ಕಣ್ಣು ಮುಚ್ಚಿಬಿಟ್ಟ.

ಯಾವಾಗ ಆಚಾರಪ್ಪ ಸತ್ತುಹೋಗಿಬಿಟ್ಟನೋ, ಅವುನ ಮನೆಗೆ ಕೂಡಿಹಾಕಿಕೊಂಡಿದ್ದನಲ್ಲ ಹೆಂಗಸರು ಏನು ಜಯಕಾರ ಹಾಕಿಬಿಟ್ಟರು. ದೊಡ್ಡ ಗದ್ದಲ ಎಬ್ಬಿಸಿ ಜನ ಕರೆದರು. ಜನಾದಿ ಜನವೆಲ್ಲ ಹೆದಹೆದರಿಕೊಂಡು ಒಂದೊಂದು ಹೆಜ್ಜೆ ಮುಂದಿಟ್ಟುಕೊಂಡು ಆಚಾರಿ ಮನೆಕಡೆಗೆ ಬಂದರು. ಆಚಾರಪ್ಪ ಮಾಟ-ಶೂನ್ಯ ಮಾಡಿ ಎಲ್ಲರನ್ನೂ ಸಾಯ ಬಡೀತಿದ್ದವನು ಈವತ್ತು ಅವನಿಗೆ ತಿರುವುಮುರುವಾಗಿಬಿಡ್ತು ಅಂದು, ಮೋಸ ನಾಸವಾಯಿತೆಂದು ಜನ ಮಾತಾಡಿಕೊಳ್ಳಕೆ ಸುರು ಮಾಡಿದರು. ಇತ್ತ ಆಚಾರಪ್ಪನ ಏಳು ಜನ ಹೆಂಡತೀಯರು ಗೋಳೋ ಅಂಮ್ತಾ ಅಳುತಾರೆ, ಬಿದ್ದು ಬಿದ್ದು ಏಳುತಾರೆ, ಎದೆ ಬಡುಕಾತಾರೆ, ತಲೆ ಕೆದರಿಕೊಂಡು ಹಣೆ ಹಣೆ ಚಚ್ಚಿಕೋತಾರೆ.

ಕೊನೆ ಹೆಂಡತಿ ಇದ್ದಳಲ್ಲ ಆಯಮ್ಮ ರವಾಟು ಧೈರ್ಯ ತಂದುಕೊಂಡಿತ್ತು. ಧೈರ್ಯವಾಗಿ ಜುಂಜಪ್ಪನ ಕಾವಲಿಗೆ ಓಡಿಬಂತು. ಹತ್ತಿರಕೆ ಬಂದಾಗ 'ನಮಗೆ ಸತ್ತರ ಸೂತಕ ಆಗೋದಿಲ್ಲ, ಏನು ಹೇಳಿ ದೂರವೇ ನಿಂತುಕೊಳ್ಳವ್ವ' ಅಂದನು ಸ್ವಾಮಿ ಜುಂಜಪ್ಪ.

ಆಗ ಆಯಮ್ಮ ಹೇಳಿತು 'ಅಣ್ಣ ಆ ಹೊತ್ತು ನಾನು ನೀನು ಹೇಳಿದ ಕೆಲಸ ಮಾಡಿ, ನನ್ನ ಗಂಡ ಮಾಡೋ ಮಾಟ ಕೆಡಿಸಿದ್ದೆ. ಈಗ ನೀನು ನನ್ನ  ಮಾತು ನಡೆಸಿಕೊಡು' ಎಂದು ಕೇಳಿಕೊಂಡಳು. ಆಗ ಜುಂಜಪ್ಪ ಹೇಳಿದ 'ನಿನ್ನ ಗಂಡ ಪರಮ ದುಷ್ಟ. ಅವುನು ಈ ಭೂಮಿ ಮೇಲೆ ಇರಬಾರದು. ಕಂಡಾರ ಹೆಣ್ಣಿನ ಮೇಲೆ ಕಣ್ಣಾಕಿರೆ, ಅಂತವರು ಹೆಚ್ಚು ಕಾಲ ಬದುಕುವುದಿಲ್ಲ. ನಿಮ್ಮ ಮನೆಗೆ ಇರುವ ಮಾಟದ ಪುಸ್ತಕಗಳನ್ನು ತಗೊಂಡು ಬರ್ರಿ ನೋಡುವ' ಅಂದ. ಆಯಮ್ಮ 'ಆಯಿತು ಸ್ವಾಮಿ' ಅಂಬ್ತಾ ತಿರುಗಿ ಮನೆಗೆ ಬಂತು.

ಇತ್ತ ಹಿರಿಯೂರು ಪೇಟೆಗೆ ಓದಿಕೊಂಡು ಇತ್ತಲ್ಲ ಪುಟ್ಟಣ್ಣನ ಹುಡುಗ, ಅವುನ ಹೆಸರು ರಂಗಣ್ಣ ಅಂಬ್ತಾ. ಅವುನಿಗೆ ಸುದ್ದಿ ಮುಟ್ಟಿಸಿ ಕರಕೊಂಡು ಬಂದಿದ್ರು. ಅದು ಅಪ್ಪನ ಪಿಂಡ, ದುಷ್ಟಬುದ್ದಿ ತೋರಿಬಿಡ್ತು. ಅಪ್ಪ ಮಾಡಿದಂಗೆ ಮಾಡಿಬಿಟ್ಟು ಆ ಜುಂಜಪ್ಪನ ಸಾಯಿಬಡಿದು ಬಿಡುತೀನಿ, ಅಂತ ಮನೆಗೆ ಕಾಳಿ ಸ್ಥಾಪಿಸಿ, ಮಂಡಲ ಬರೆದು, ಅಕ್ಕಿಕಾಳು ತಿದ್ದುತಾ ಕೂತಿತು. ಆಗ ನೋಡಿಕೊಂಡು ಇತ್ತಲ್ಲ ನಾಗರಹಾವು ಪಟ್ಟಂತ ಹೋಗಿ ತಲೆಗೆ ಹೊಡೆದುಬಿಡ್ತು. ಆ ಹುಡುಗನೂ ಮಿಲಿಮಿಲಿ ಒದ್ದಾಡಿಕೊಂಡು ಕ್ಷಣಾರ್ಧದಲ್ಲಿ ಸತ್ತುಹೋಗಿಬಿಡ್ತು. ಆ ಮಾಟದ ಪುಸ್ತಕ ತಗೊಂಡು ಹೋಗಕೆ ಬಂದಿದ್ಲಲ್ಲ ಮಾಟಗಾರನ ಚಿಕ್ಕೆಂಡ್ತಿ, ಓಡೋಗಿ ಸ್ವಾಮಿ ಪಾದ ಹಿಡಕಂಡು ಗೋಳೋ ಅಂಬ್ತಾ ಅಳ್ತಾ 'ನಮ್ಮ ವಂಶನೇ ನಾಶಮಾಡಿಬಿಟ್ಟೆ. ಗಂಡ ಸತ್ತ ಆರು ಗಳಿಗೆ ಒಳಗೆ ಮಗನೂ ಸತ್ತ. ಸ್ವಾಮಿ ನೀನು ದೊಡ್ಡನು. ನಿನ್ನ ಎದುರಾಕಿಕೊಂಡು ಪ್ರಮಾದ ಮಾಡಿದೆವು. ಓದಿಕಾರ ಅಂತ ಅಹಂ ಮಾಡಿ, ಆಚಾರಿ ನಾಶವಾದ. ಅವುನ ಮಗನೂ ಅದೇ ಪಾಡು ಪಡುತು. ಅದನ್ನಾದರೂ ಉಳಿಸಿಕೊಡಪ್ಪ ತಂದೆ' ಅಂಬ್ತಾ ಆಯಮ್ಮ ಬೇಡಿಕೊಂಡಿತು. ಯಾವಾಗ ಆಚಾರಪ್ಪನ ಚಿಕ್ಕೆಂಡ್ತಿ ಜುಂಜಪ್ಪನ ತಕೆ ಬಂದು ಸೆರಗೊಡ್ಡಿ ಬೇಡಿಕೊಂತೋ ಸ್ವಾಮಿಗೆ ಕೋಪ ಹತೋಟಿಗೆ ಬಂದುಬಿಡ್ತು. ಆಯಮ್ಮ ನನಗೆ ಕಷ್ಟಕಾಲದಲ್ಲಿ ಸಹಾಯ ಮಾಡವಳೆ. ಅವತ್ತು ನೀರಿನ ಕೊಡಪಾನವನ್ನು ಆಚಾರಿ ಬರೆದ ಮಂಡಲ ಮೇಲೆ ಎತ್ತಿಹಾಕಿ ಮಂಡಲ ಕೆಡಿಸ್ದಾಯಿದ್ರೆ ಆಚಾರಿ ಇನ್ನೂ ಬಲವಾಗುತ್ತಿದ್ದ, ಇನ್ನೂ ಕಾಟ ಕೊಡುತ್ತಿದ್ದ ಅಂಮ್ತಾ, ಜುಂಜಪ್ಪ ಯೋಚನೆ ಮಾಡಿಬಿಟ್ಟ. ಆಮೇಲೆ ಹೇಳಿದ 'ನೋಡು ತಾಯಿ ನಿನ್ನ ಗಂಡ ಯಾರಿಗೂ ಉಪಕಾರಿಯಾಗಿರಲಿಲ್ಲ. ಪರಮ ಪಾಪಿಷ್ಠ. ಸುತ್ತೇಳು ಜನಕ್ಕೆ ಕೊಡಬಾರದ ಕಾಟ ಕೊಟ್ಟವನೆ. ಅಂಥವನು ಬದುಕಬಾರದು. ಆದರೆ ಅದೇ ಹಮ್ಮು ಬೆಳೆಸಿಕೊಂಡಿರೋ ನಿಮ್ಮ ಹುಡುಗನನ್ನು ಬದುಕಿಸಬಹುದು. ಆದರೂ ಅದಕ್ಕೂ ಒಂದು ಷರತ್ತದೆ' ಅಂದನು.

ಹೋದ ಜೀವ ಬಂದಂಗಾತು ಆಚಾರಪ್ಪನ ಹೆಂಡತಿಗೆ. 'ಅದೇನು ಸ್ವಾಮಿ ಷರತ್ತು ಹೇಳಪ್ಪ, ನೆರವೇರಿಸುತೀನಿ' ಅಂದಳು. 'ಏನಿಲ್ಲ ಕಣಮ್ಮ ನಿಮ್ಮ ಮನೆಯೊಳಗೆ ಮಾಟ-

ಮಂತ್ರದ ಪುಸ್ತಕಗಳಿವೆ. ಅವುಗಳಿಂದಲೇ ನಿನ್ನ ಗಂಡ ನರಮಾನವರಿಗೆ ಕೊಡಬಾರದ ಕಾಟ ಕೊಟ್ಟ, ಕಂಡರ ಹೆಣ್ಣುಮಕ್ಕಳನ್ನು ತಂದು ಮನೆಗೆ ದಾಸಿಯರನ್ನಾಗಿ ಮಾಡಿಕೊಂಡ, ಗಂಡುಳ್ಳ ಗರತಿಯರ ಪಾಡೇನು? ಅವುರ ಮಕ್ಕಳ ಪಾಡೇನು? ಅಂಬಾದ ಯೋಚನೆ ಮಾಡಲಿಲ್ಲ, ಪಾಪಿ ಆಚಾರಪ್ಪ. ಆದುದರಿಂದ ಈಗ ನಿನ್ನ ಮಗ ಉಳೀಬೇಕಾದರೆ ಮೊದಲು, ನಿಮ್ಮ ಮನೆಗಿರುವ ಎಲ್ಲಾ ಪುಸ್ತಕಗಳನ್ನು ತಂದು ರಾಶಿ ಹಾಕಬೇಕು. ಪ್ರಜೆಪಾಲಕರ ಮುಂದೆ ಅವುಗಳಿಗೆ ಅಗ್ನಿ ತೋರಿಸಬೇಕು. ಅಂಗಾದರೆ ಮಾತ್ರ ನಿನ್ನ ಮಗನನ್ನು ನಾನು ಬದುಕಿಸುತೀನಿ' ಅಂದನು. ಈ ಮಾತು ಕೇಳುತಲೇ ಆಚಾರಪ್ಪನ ಚಿಕ್ಕೆಣತಿ ಓಡಿ ಓಡೋಡಿ ಬಂತು, ಆಚಾರಪ್ಪ ಅರಮನೆಗೆ. ಬಂದುದೆ ಅವರ ಹಿರೇ ಅಕ್ಕನಿಗೆ ಜುಂಜಪ್ಪ ಹೇಳಿದ ಕತೆನೆಲ್ಲಾ ಹೇಳಿತು. ಅವುಳ ಮಗನೇ ಈಗ ಸತ್ತಿರದು. ಏನಾದರೂ ಆಗಲಿ ಮಗನಾದರೂ ಬದುಕಲಪ್ಪ ಅಂದುಬಿಟ್ಟು ಮೂರು ಬಂಡಿ ಆಗೋವಷ್ಟು ಪುಸ್ತಕನೆಲ್ಲಾ ಆಚಾರಪ್ಪನ ಅರಮನೆ ಮುಂದೆ, ರಾಶಿ ಹಾಕಿಬಿಡ್ತು. ಸ್ವಾಮಿ ಜುಂಜಪ್ಪ ದನ ಮೇಯಿಸ್ತಾ ಹುಲ್ಲುಗಾವಲಲ್ಲಿದ್ದ, ಅಲ್ಲಿಗೆ ಆಳು ಕಳಿಸಿದರು. ಸ್ವಾಮಿ ಬಂದ. ಬಂದು ಪುಸ್ತಕಾನ ನೋಡುತಾನೆ ಸ್ವಾಮಿ ದಂಗಾಗಿ ಹೋಗಿಬಿಟ್ಟ. ಅಂಡಾಂಡ ಬ್ರಹ್ಮಾಂಡವನ್ನೆಲ್ಲಾ ತಿಳಿಸೋ ಮಾಟ-ಮಂತ್ರದ ಪುಸ್ತಕ ಅವು. ಸ್ವಾಮಿ ಜುಂಜಪ್ಪ ಪುಸ್ತಕದ ರಾಶಿ ಮುಂದೆ ನಿಂತುಕೊಂಡು ಕೇಳಿದ 'ಇಷ್ಟೇನಾ ಪುಸ್ತಕ? ಇನ್ನೂ ಮನೆಯಾಗೆ ಇರಬೇಕಲ್ಲ' ಅಂಬ್ತಾ. ಆಗ ಹಿರಿಯೋಳು ಓಡೋಡಿ ಬಂದು 'ಇಲ್ಲ ಸ್ವಾಮಿ ನಮ್ಮ ಯಜಮಾನರು ಬಳಸೋ ಪುಸ್ತಕಾನೆಲ್ಲ ತಂದು ಹಾಕಿದ್ದೀನಿ. ಇನ್ನೊಂದು ಪುಸ್ತಕ ಅದೆ, ಅದೆಂದರೆ ಮಕ್ಕಳ ಬಾಲಗ್ರಹದ ಪುಸ್ತಕ. ಯಾವುದಾದರೂ ಮಕ್ಕಳಿಗೆ ಬಾಲಗ್ರಹ ಆದರೆ ಅವುಗಳ ಕೊರಳಿಗೆ ಒಂದು ತಾಳಿ ಬೇಕಾಗುತ್ತೆ. ಆ ತಾಳಿ ತಿದ್ದಕೆ ಬಾಲಗ್ರಹದ ಪುಸ್ತಕ ಬೇಕು. ಇದೊಂದು ಇರಲಿ ಸ್ವಾಮಿ. ಇದರಲಿ ಕೇಡಿಲ್ಲ, ಕೆಟ್ಟದ್ದಿಲ್ಲ, ಮಾಟ-ಶೂನ್ಯ ಮೊದಲೇ ಇಲ್ಲ' ಅಂದ್ಲು.

ಆಗ ಜುಂಜಪ್ಪ ಆ ಪುಸ್ತಕದ ರಾಶಿಗೆ ಉಕ್ಕಿನ ಉರಿಬಾಣ ಬಿಟ್ಟ. ಕ್ಷಣಾರ್ಧದಲ್ಲಿ ಪುಸ್ತಕಗಳೆಲ್ಲಾ ಹತ್ತಿಕೊಂಡು ಉರಿಯಾಕೆ ಸುರುಮಾಡಿ ಉರಿದು ಬೂದಿಯಾದವು. ಯಾವಾಗ ಮಾಟದ ಪುಸ್ತಕವೆಲ್ಲ ಸುಟ್ಟು ಭಸ್ಮವಾದವೋ, ಜುಂಜಪ್ಪನಿಗೆ ಸಮಾಧಾನವಾಯಿತು. ಆಗ ಸಾಣೆಕೆರೆ ಪುಟ್ಟಣ್ಣನ ಕಡಿದಿತ್ತಲ್ಲ ಮಿಡಿನಾಗ, ಅದನ್ನು ಕರೆಸಿ ಹೇಳಿದ. 'ನಾಗಪ್ಪ ಬಂದು ನೀನು ಮುಟ್ಟಿದ ಜಾಗದಲ್ಲಿ ಬಾಯಾಕಿ ವಿಷ ತಕ್ಕೋಬಿಡಪ್ಪ' ಅಂತ. ಆಗ ಪುಟ್ಟಣ್ಣ ಅರಮನೆ ಕಂಬಸಾಲಿನ ಮೇಲೆ ಮಂಡಲ ಹೊಡೆದುಕೊಂಡು ಮಲಗಿದ್ದ ನಾಗರಾಜ, ಬುಸುಗುಟ್ಟುತ್ತ ಇಳಿದುಬಂದ. ಜನವಾದಿ ಜನವೆಲ್ಲಾ ಹೆದರಿದರು. ಯಾರಿಗೂ ಏನೂ ತೊಂದರೆ ಮಾಡದೆ ಆಚಾರಪ್ಪನ ಮುಟ್ಟದೆ ಬಂದು ಸತ್ತುಬಿದ್ದ ಅವನ ಮಗ ರಂಗಣ್ಣನ



ಮುಟ್ಟಿತು. ಅಲ್ಲಿಂದ ನೋಡನೋಡುತ್ತಲೇ ನಾಪತ್ತೆಯಾಯ್ತು. ಸ್ವಲ್ಪ ಹೊತ್ತು ಆಗುತ್ತಿದ್ದಂಗೆ ಸತ್ತು ಮಲಗಿದ್ದ ಆಚಾರಿ ಮಗ ರಂಗಣ್ಣ ಎದ್ದುಕುಂತನು. ಜನಾದಿ ಜನವೆಲ್ಲ ಬೆರಗಾದರು. ಆಗ ಸತ್ತ ಆಚಾರಪ್ಪನ ಮಣ್ಣು ಮಾಡಾಕೆ ತಗೊಂಡು ಹೋದರು. ಸಾಣೆಕೆರೆ ಪಡುಗಡೆಗೆ ಮೂರು ಹಾದಿ ಕೂಡ ಜಾಗದಲ್ಲಿ, ಆಚಾರಿನ ಮಣ್ಣು ಮಾಡಿರು. ಅವತ್ತಿನಿಂದ ಆಚಾರಿ ಮಗ ರಂಗನಾಥ ಸ್ವಾಮಿ ಜುಂಜಪ್ಪನ ಸೇವೆ ಮಾಡ್ತಾ, ಸ್ವಾಮಿಗೆ ಬೇಕಾದ ಬೆಳ್ಳಿ ಚೇಳು, ಹಾವು ಮಾಡಿಕೊಡುವ ಮೂಲಕ ಜುಂಜಪ್ಪನ ಋಣ ತೀರಿಸಿದನು.

ಇತ್ತ ಜುಂಜಪ್ಪ ತನ್ನ ದನ ಕರಕೊಂಡು ಊರ ಕಡೆ ಹೋಗಬೇಕೆಂದುಕೊಂಡನು. ದೇವೇಂದ್ರರಾಯನ ಸ್ತೋತ್ರನೇ ಮಾಡಿದ, ಮಸ್ತಾಗಿ ಮಳೆ ಬೆಳೆ ಆತು. ಬರಗಾಲವಾಗಿದ್ದ ಸೀಮೆಗೆ ಬಂಗಾರದಂತ ಬೆಳೆ ಬಂತು. ಸ್ವಾಮಿ ಜುಂಜಪ್ಪ, ಅವುನ ತಮ್ಮಗಳೊಂದಿಗೆ ಕಳುವಾರಹಳ್ಳಿ ಏಣಿಗೆ ದನಕರೆದರು.

ಯಾವಾಗ ಜುಂಜಪ್ಪನ ದನಗಳು ಹೆಚ್ಚಿನ ಏಳಿಗೆಯಾಗಿ ಏಳು ಲಕ್ಷ ಆಗಿ ಬಯಲಾದಿ ಬಯಲಾಗೆಲ್ಲ ಈಜಾಡಿಕೊಂಡು ಮೇಯುತ್ತಿದ್ದವೋ ಅವುರ ಮಾವುಗಳು ಕಂಬೇರಿಗೆ ತಡಕಳ್ಳಾಕೆ ಆಗಲಿಲ್ಲ. ಎಲೆ ಚಿನ್ನಿಮಗನೆ, ನಾವು ಏನು ಮಾಡಿದರೂ ಎಲ್ಲದರಲ್ಲೂ ಇವನೇ ಗೆದ್ದು ಬರ್ತಾನಲ್ಲ, ಅಂದುಬಿಟ್ಟು ಈ ಸಾರಿ ಏನಾದರೂ ಸರಿ. ಅವುನ್ನ ಇಲ್ಲ ಅನ್ನಿಸಲೇಬೇಕು ಅಂದುಬಿಟ್ಟು ಮಾಟಮಂತ್ರ ಬೇಡ, ಯುದ್ಧ ಕದನ ಬೇಡ. ದೇವತೆರು ಮೊರೆಹೋಗಬೇಕು, ಅಂಬ್ತಾ ಪ್ಲಾನು ಮಾಡಿರು. ಯಾವ ದೇವರು ವಾಸಿ ಯಾರಿಗೆ ಅಂತ ಶಕ್ತಿ ಅದೆ ಎಂದು ಹುಡುಕಾಡಿದರು.

## ತಾಳಿದುರ್ಗಿ ಸಂಹಾರ

ತಾಳಿಮದ್ದರಿ ಕಾವಲು, ಅದೊಂದು ಹುಲ್ಲುಗಾವಲಿನ ಪ್ರದೇಶ. ಅಲ್ಲಿ ಮಹಾ ರಾಕ್ಷಸಿ ಅವಳಿಗೆ ಎದುರೇ ಇಲ್ಲ. ಅಂಥ ರಾಕ್ಷಸಿಯಿಂದ ಜುಂಜಪ್ಪನ ಸೊಲ್ಲು ಅಡಗಿಸಬಹುದೆಂದು ಕಂಬೇರಗೊಲ್ಲರು ನಿಶ್ಚಯಿಸಿಕೊಂಡರು. ಒಂದು ಕೆಟ್ಟ ಶುಕ್ರವಾರ ತಾಳೆದುರ್ಗಿ ಕಾವಲಿಗೆ ದೊಡ್ಡಚಿನ್ನ, ಚಿಗಚಿನ್ನ, ಕಟ್ಟಾಣಿನಾಗ ಮೂರು ಜನರೂ ಹೋದರು. ಅವುಳ ದರ್ಶನ ಅಷ್ಟು ಸುಲಭ ಅಲ್ಲ. ಮಹಾರಾಕ್ಷಸಿ. ದೊಡ್ಡ ಬಯಲು, ಅವುಳಿಗೆ ಆರುತಿಂಗಳು ನಿದ್ದೆ, ಆರು ತಿಂಗಳು ಎಚ್ಚರ. ಅವ್ಳು ಹೆಂಗಿದ್ದಳಪ್ಪ ಅಂದ್ರೆ, ಕಾಲು ಬುಡದಾಗೆ ಮುನ್ನೂರು ಹೆಣ, ತಲೆ ಬುಡದಾಗೆ ಮುನ್ನೂರು ಹೆಣ, ಎಡಬದಿಯಾಗೆ ನೂರು ಹೆಣ, ಬಲಬದಿಯಾಗೆ ಎಪ್ಪತ್ತು ಹೆಣ ಹಾಕಿಕೊಂಡು ಮಲಗಿದ್ದಳು. ಇಂಥ ರಾಕ್ಷಸಿನ ಈ ಕಂಬೇರು ಪತ್ತೆ ಮಾಡಿಬಿಟ್ಟರು. ಹೋದಹೋದರೆ ಕಾಳಿಗೆ ಅಡ್ಡಬಿದ್ರು. ಆವಾಗ ದುರ್ಗಿ ಎಚ್ಚರವಾಗಿದ್ಲು. ಎಚ್ಚರವಾಗೆವಳೆ ಅಂಬಾದು ತಾವರೆಗೆ ಆಚಾರಿಯಿಂದ ತಿಳಿದುಕೊಂಡಿದ್ದರು. ಅವನು ಮಾಟಕಾರನೆ. ಅವುನ್ನೂನ ಜೊತೆಗೆ ಕರೆಕೊಂಡು ಹೋಗಿದ್ರು. ಇವುರು ದೂರದಲ್ಲೆ ಕುಂತುಕೊಂಡ್ರು. ಆಚಾರಪ್ಪ ಹೋಗಿ ತಾಳಿದುರ್ಗಿನ ಕಂಡು ಮೂರು ಮಾತಾಡಿಕೊಂಡು ಬಂದ.

ಏನಂತ ಮಾತಾಡಿಕೊಂಡು ಬಂದನಪ್ಪ ಆಚಾರಿ ಅಂದ್ರೆ ಜುಂಜಪ್ಪನು ದನ ಆಳಿಕೊಂಡವನೆ. ಅವುನ ದನಗಳು ಏಳು ಲಕ್ಷ. ಆ ದನಗಳಿಂದ ಇತರೆಯವರಿಗೆ ಉಳಿಗಾಲವಿಲ್ಲ. ಮುಂದಲ ನೀರು ಅವುನದೆ, ಹಿಂದಲ ಮೇವು ಅವುನದೆ. ಒಂದು ಹುಲ್ಲುಗರಿಕೆ ಕೂಡ ನಮ್ಮಗಳಿಗೆ ಸಿಕ್ಕಲ್ಲ. ಅವುನು ಬಡಮೈಲ ಅಂಬ್ತಾ ಒಂದು ಹೋರಿ ಸಾಕೆವನೆ. ಅದು ಬಾರಿ ಕ್ಯಾತೆ ತೆಗೆದು ನಮ್ಮಂಥವರ ದನ ಕರನೆಲ್ಲಾ ಸಾಯಿಸಿಬಿಡುತ್ತೆ. ಏನಾರ ಮಾಡಿ ಜುಂಜಪ್ಪನೂ, ಅವುನ ತಮ್ಮಗಳನ್ನೂ ಸಾಯಿಸಿಬಿಟ್ರೆ ನಾವು ಉಸಿರಾಡಬಹುದು. ಇಲ್ಲದಿದ್ದರೆ ಹೊಟ್ಟೆಗೆ ಕೂಳಿಲ್ಲದೆ ಸತ್ತುಹೋಗುತ್ತೇವೆ ಅಂಬ್ತಾ ಕಾಳಿದುರ್ಗಿ ಹತ್ತಿರ ಹೇಳಿಕೊಂಡರು. ಸರಿ, ಜುಂಜಪ್ಪನ ನಾಶ ಮಾಡಿರೆ ನನಗೇನು

ಕೊಡುತೀರ? ಅಂಬ್ತಾ ತಾಳಿದುರ್ಗಿ ಕೇಳಿಕೊಂಡ್ತು. ಆಗ ಕಂಬೇರು ಹೇಳ್ತಾರೆ 'ಜುಂಜಪ್ಪನ್ನೂ ಅವುನ ತಮ್ಮಗಳಾದ ಮಾರ-ಮೈಲನ್ನು ನೀನೇನಾರ ತಿಂದು ಹಾಕದಾದ್ರೆ, ನಾವು ತಪ್ಪದೆ ನಿನಗೆ ಮುನ್ನೂರು ಕಂಡುಗದ ಅಕ್ಕಿ ಅನ್ನ, ಮುನ್ನೂರು ಗಬ್ಬದ ಕುರಿ, ಬಲಿ ಅರ್ಪಿಸುತೀವಿ. ಸೀರ್ಯ ಪಟ್ಟಣದಾಗಿನ ಮುನ್ನೂರು ವರಹದ ಬಣ್ಣದ ಸೀರೆ ಉಡುಸುತೀವಿ' ಅಂಬ್ತಾ ಹರಕೆ ಮಾಡಿಕೊಂಡರು ಕಂಬೇರು. ತಾಳೆದುರ್ಗಿನಾದರೂ 'ಆಯಿತು ನಾನು ಜುಂಜಪ್ಪನ ಪರಿವಾರ ತಿಂದು ಹಾಕದೇ ಹೋದರೆ ನನ್ನ ಹೆಸರು ದುರ್ಗಿನೇ ಅಲ್ಲ. ಹೋಗರಿ' ಅಂಬ್ತಾ ಕಂಬೇರನ್ನ ಕಳುಹಿಸಿಕೊಡ್ತು. ಕಂಬೇರು ಕುಸಿಯಿಂದ ಹಿಂದಿರುಗಿದರು.

ತಾಳಿದುರ್ಗಿ, ಯಂಗೆ ಜುಂಜಪ್ಪನ ತಾಕೆ ಹೋಗಾದು? ಅಂಬ್ತಾ ಬಾರಿನೆ ಯೋಚನೆ ಮಾಡಿದಳು. ಕೊನೆಗೆ ಕಾಗೆ ಸಿಳ್ಳಿನ ಕೈಲಿ ಒಂದು ಪತ್ರ ಕಳುಹಿಸಿಕೊಟ್ಟು, ಸ್ವಾಮಿ ಜುಂಜಪ್ಪನಿಗೆ. ಆ ಪತ್ರದಲ್ಲಿ ಏನಿತ್ತಪ್ಪಾಂದ್ರೆ 'ಎಲೆ ಜುಂಜ ನೀನು ತಾಯಿ ಹೊಟ್ಟೆಯೊಳಗೆ ಹುಟ್ಟಿಲ್ಲ. ಬೆನ್ನಲಿ ಒಡೆದು ಬಂದೆ. ಮೀರಿ ಮೀರಿದ ಗಂಡಸುಗಳ ಮೀಸೆ ಬೋಳಿಸಿ, ಹೆಚ್ಚು ಮೆರೆದವರನ್ನ ನೆತ್ತಿ ಬೋಳಿಸಿ, ಸೊಕ್ಕಿ ಸೊಕ್ಕಿದವರೆನ್ನ ಸಂಹಾರ ಮಾಡಿ, ಸುತ್ತೇಳು ಪಾಳೆಯಗಾರರ ದೌಲತ್ತು ಅಡಗಿಸಿ, ಮಾಟ ಮಾಡವರಿಗೆ ಮಿಂಡ, ಒದೇಕಾರರ ಗಂಡ, ನಾಗರಹಾವಿನ ಪುಂಡ, ಬೂದಿ ಮುಚ್ಚಿದ ಕೆಂಡ, ಭೂಲೋಕಕ್ಕೆ ಉದ್ದಂಡನಾಗಿ ಮೆರೆಯುತ್ತಿದ್ದೀಯ. ಈಗ ನಿನಗೆ ಅಳಿಗಾಲ ಬಂದೈತೆ. ನೀನು ನಿನ್ನ ತಮ್ಮದಿರು ಕೂಟೆ, ನಿನ್ನ ದನಗಳನ್ನು ಹೊಡೆದುಕೊಂಡು ಬಂದು ಮೂರು ದಿನ ನನ್ನ ಕಾವಲಲ್ಲಿ ದನ ಮೇಯಿಸಬೇಕು. ನಾನು ನಿನ್ನ ಜೊತೆಗೆ ನಾಟ್ಯನೇ ಆಡಬೇಕು. ನೀನೇನಾದರೂ ಬರದೇ ಇದ್ರೆ, ನೀನು ನಾನು ಉಟ್ಟ ಸೀರೆ ಉಟ್ಟುಕೊಂಡು ತಿರುಗಬೇಕು' ಅಂಬ್ತಾ ಕಾಜಗ ಬರೆದಳು.

ತಾಳೆಗರಿ ಕಾಜಗನ ಒಂದು ಕರೆ ಕಾಗೆ ಸಿಳ್ಳ ಕಚ್ಚಿಕೊಂಡು ಬಂದು, ಜುಂಜಪ್ಪನ ಮುಂದೆ ಇಕ್ಕಿ ಅದರನೂ ಮೂರು ಸುತ್ತು ಹಾಕಿ, ಅಂಗೇನೇ ಹಾರಿಹೋಯಿತು. ಜುಂಜಪ್ಪ ಕಾಜಗನ ನೋಡುತಾನೆ. ಮೋಡಿ ಅಕ್ಷರ ತಿಳಿಯವಲ್ದು, ಆಗ ತಮ್ಮಗಳ ಕಳಿಸಿ ತಾವರೇಕೆರೆ ಕುಂಬಾರ ಗುಂಡಣ್ಣ ಅಂಬ್ತಾ ಇದ್ದ. ಅವುನೂ ಓದೇಕಾರ. ಆದ್ರೆ ಕೇಡು ಕಲಿತವನಲ್ಲ. ಜುಂಜಪ್ಪ ಅವುನೂ ಕರೆಸಿಕೊಂಡು, ತಾಳೆಗರಿ ಸಮಾಚಾರ ಪರಾಲೋಚಿಸಿದ. ಗುಂಡಣ್ಣ ಪತ್ರ ಓದುತಾನೆ, ಬೆವರುತಾನೆ, ಓದುತಾನೆ, ಬೆವರುತಾನೆ. ಕಡೆಗೆ ಜುಂಜಪ್ಪನೇ ಕೇಳಿದ 'ಭಯವೇಕೆ? ದಂಗೇಕೇಕೆ? ಚಂಡಿ ಚಾಮುಂಡಿಗೂ ಇಕ್ಕಿ ಮೆಟ್ಟುತ್ತೀನಿ. ಅಂಜದಲೆ, ಅಳುಕದಲೆ ಹೇಳು' ಅಂದನು. ಆಗ ತಾವರೆಕೆರೆ ಗುಂಡಣ್ಣ ಕಾಲದ ಸಮಾಚಾರ ಒಂದೊಂದಾಗಿ ಬಿಡಿಸಿ ಬಿಡಿಸಿ ಜುಂಜಪ್ಪನಿಗೆ ಹೇಳಿದ.

ತಾಳೆದುರ್ಗಿ ತಾಡಪತ್ರ ಓದುತ್ತಿದ್ದಂಗೆ, ಜುಂಜಪ್ಪನಿಗೆ ಕಣ್ಣು ಕೆಂಪಗಾಯ್ತು. ರೋಮಾದಿ ರೋಮವೆಲ್ಲ ನೆಟ್ಟಗಾದಂಗಾಯ್ತು. 'ಎಲೆ ಚೌಡಿ, ನಿನ್ನ ಸೀರೆ ಉಡಬೇಕಾ ನಾನು?' ಅಂದಾನು ಹಲ್ಲು ಹಲ್ಲು ಕಡಿದ. ಈ ಸುದ್ದಿ ಕೇಳುತ್ತಿದ್ದಂಗೆ ಮಾರಣ್ಣ ಮೈಲಣ್ಣ ಮೂರ್ಛೆ ಹೋದಂಗಾದರು. ಜುಂಜಪ್ಪ ಹೇಳಿದ 'ತಮ್ಮಗಳಾ ತಾಳೆದುರ್ಗಿ ನಮ್ಮ ಬಡಮೈಲನ ಬಾಲಕ್ಕೂ ಸಾಟಿಯಲ್ಲ. ಅವುಳಿಗೆ ತಕ್ಕ ಪಾಠ ಕಲಿಸದಿದ್ರೆ ನಾನು ಈಶ್ವರನ ಮಗ ಜುಂಜಪ್ಪನೇ ಅಲ್ಲ. ಮುಂದಿನ ಸೋಮವಾರ ನಡೀರಿ ಪಡುಮುಂದಾಗಿ ದನ ಹೊಡೆಯಿರಿ. ನೋಡಿ ಬಿಡಾನ ಆಯಮ್ಮ ಅದೇನು ಮಾಡುತಾಳೆ ಅಂತ' ಅಂದ.

ಸೋಮವಾರ ಬಂತು, ಪಲ್ಪು ಅರಿತಿದ್ದಂಗೆ ಸ್ವಾಮಿ ಜುಂಜಪ್ಪ, ಬಡಮೈಲ, ಈರಭದ್ರನ ಕರೆದ. ಪಡುಗಡೆಗೆ ದಿನಗಳ ಹೊಡೆಯಬೇಕು. ತಾಳೆದುರ್ಗಿ ಕಾಡಿನಲ್ಲಿ ಹುಲ್ಲು ನೀರು ಅಡವಾಗಿ ಅದೆಯಂತೆ. ಅವುಳು ಮಹಾರಾಕ್ಷಸಿ. ದನಕರಿಗೆ ಏನಾರಾ ತೊಂದ್ರೆ, ತಾಪತ್ರಯ ಮಾಡಿಬಿಟ್ಟಾಳು. ನಾನು ಇರಲಿ, ಇಲ್ಲದಿರಲಿ ದನಗಳ ಜೋಪಾನ ಮಾಡಾದು ನಿಮ್ಮ ಕೆಲಸ ಅಂದನು. ಅವುಗಳು ಹಿರಿಯಣ್ಣ ಹೇಳಿದ ಮಾತು ಕೇಳಿ ತಲೆಹಾಕಿದವು. ಆ ಹೊತ್ತು ಸೋಮವಾರ ದನಗಳ ದೊಡ್ಡಟ್ಟಿ ಏಣಿನಾಗಾಸಿ, ಚಿಕ್ಕಸಂದ್ರದ ಕಾವಲುಗುಂಟಾ ಹಾದು ಹೋಗಂದು ಹೋಗಂದು ಹೋದ್ರು. ತಾಳೆದುರ್ಗಿ ಕಾನು ಕಾಣಲಿಲ್ಲ. ಇನ್ನೂ ಮುಂದಕೆ ಹೋದರು. ಅಲ್ಲೊಂದು ದೊಡ್ಡ ಕಾಡು, ಅದರಲೊಂದಿಷ್ಟು ಪುಡಿಗಿಡಗಳು, ನೂರೊಂದು ಜಾತಿ ಮರ, ಗಿಡ ಹುಲ್ಲು ಹಾಸಿಕೊಂಡು ಬಿದ್ದುಬಿಟ್ಟೈತೆ. ಒಂದು ಅರು ಘಳಿಗೆಗೆ ದನಮೇಯ್ದು ಮಲಗಿಬಿಡಬಹುದು. ದನಗಳು ಬಂದ್ವು, ಅವು ಪಾಡಿಗೆ ಅವು ಮೇಯ್ದು.

ಜುಂಜಪ್ಪ ತಾಳೆದುರ್ಗಿ ಕಾವಲಿಗೆ ದನ ಕರೆದು ಅಲ್ಲೊಂದು ಆಲದ ಮರ, ಅದರ ಬುಡದಲ್ಲಿ ತಮ್ಮಗಳ ಜೊತೆಗೆ ಕುಂತಿದ್ದ. ದನಗಳು ಈಜಾಡಿಕೊಂಡು ಮೇಯ್ದ. ಹಿಂಗೆ ಮೂರು ದಿನ ಕಳೆಯಿತು. ತಾಳಿದುರ್ಗಿ ತನ್ನ ಕಾವಲಿಗೆ ದನ ಕರೆಯಬೇಕು. ಇಲ್ಲದಿದ್ರೆ ನನ್ನ ಸೀರೆ ಉಟ್ಟು ತಿರುಗಬೇಕು, ಅಂಮ್ತಾ ಕಾಜಗ ಬರೆದಿದ್ದಳಲ್ಲ, ಜುಂಜಪ್ಪ ಇವಳಿಗೇನು ಜುಂಜಪ್ಪ ಅಂಮ್ತಾ ತಿಳಿತೋ ಇಲ್ಲವೋ ಅಮ್ತಾ, ಆ ದುರ್ಗಿ ಕಾವಲಿನ ಒಳಿಕೆ ಬಂದ. ಬಂದು ನೋಡುತಾನೆ, ಏನು ತಾಳೆದುರ್ಗಿ ಮಲಗಿಬಿಟ್ಟಳೆ. ಅವುಳ ತಲೆದಿಂಬಿಗೆ ನಾನೂರು ಹೆಣಗಳು, ಮುಂಗೈಗೆ ಮುನ್ನೂರು ಹೆಣ, ಅಂಗಾಲಿಗೆ ಆರುನೂರು ಹೆಣ. ಹೆಣದ ರಾಶಿ ಹಾಕಿಕೊಂಡು ತಾಳೆ ಮಲಗಿಬಿಟ್ಟವಳೆ. ಜುಂಜಪ್ಪ ನೋಡಿದ ಆಕೆಗೆ ಯಾರು ಬಂದದ್ದು, ಹೋದದ್ದು ತಿಳಿವಲ್ದು. ಏನು ಗೊರಕೆ ಹೊಡೆಯುತಾಳೆ. ಆ ಜುಂಜಪ್ಪ ನಾವು ಈ ಕಾವಲಿಗೆ ಬಂದು ಮೂರು ದಿನದ ಹೊತ್ತಾತು, ಆದರೂ ತಾಳೆದುರ್ಗಿ ಮಾತ್ರ ಎದ್ದೇ

ಇಲ್ಲ. ಆಮೇಲೇನಾದರೂ ಜುಂಜಪ್ಪ ಹೆದರಿಕೊಂಡು ಬರಲಿಲ್ಲ ಅಂದ್ರೆ, ಹೆಂಗೆ ಅಂದುಬಿಟ್ಟು ಒಂದು ಆಲದ ಎಲೆ ಕಿತ್ತು ಆಕೆಯ ಮುಖದ ಮೇಲೆ ಹಾಕಿದ. ಎಚ್ಚರಿಕೆ ಆಗಲಿಲ್ಲ. ಕೊನೆಗೆ ಮರದ ಕೊಂಬೆ ಮುರಿದ, ಅದರ ಮೇಲಾಕಿದ. ಆಗ ರವಾಟು ಮಿಸುಕಾಡಿತು. ಆಗ ಮಾರಣ್ಣ ಮೈಲಣ್ಣರು ಗೆಜ್ಜೆ ಕೋಲಾಕಿರು. ದುರ್ಗಿಗೆ ಎಚ್ಚರ ಆಗಿಬಿಡ್ತು. ಆಗ ಜುಂಜಪ್ಪ ಅದರ ಬುಡಕೆ ಹೋದ. ಸ್ವಾಮಿ ಶಂಕರ ಒಂದೇ ಉಸಿರಿಗೆ ಎಳಕೊಂಡು ಬಿಡ್ತು. ತಾಳೆದುರ್ಗಿ ಮೂಗಿನಾಗಾಸಿ ಸ್ವಾಮಿ ಜುಂಜಪ್ಪ ಅಂಗಾತ ಅದರ ಹೊಟ್ಟೆಯೊಳಗೆ ಹೋಗಿಬಿಟ್ಟ. ಇತ್ತ ಅಣ್ಣನಿಗಾದ ಶಿಕ್ಷೆ ನಮಗೂ ಆಗಿಬಿಟ್ಟೀತು ಅಂದುಬಿಟ್ಟು ಮಾರಣ್ಣ ಮೈಲಣ್ಣರು ದುರ್ಗಿ ವೈನಾಗಿ ಮಾತಾಡಿಸಿ ಮಣ್ಣೇವು ತಿನ್ನಾಕೆ ಕರೆದರು. ತಾಯಿ ಗೌರಸಂದ್ರದ ಮಾರವ್ವನ ನೆನಪುಮಾಡಿಕೊಂಡ್ರು. ಆಗ 'ಎಲೆ ಎಲೆ ಶಂಕರ ಎಂಥ ಅನಾನುಕೂಲತೆ ಆಗಿಬಿಡುತಲ್ಲಪ್ಪ' ಅಂದುಬಿಟ್ಟು ಗೌರಸಂದ್ರದ ಮಾರಮ್ಮ ಭೂತಪ್ಪನ ಸೃಷ್ಟಿನೆ ಮಾಡಿ ಕಳಿಸಿಬಿಟ್ಳು. ಮೂಡೆ ಗಾತ್ರದ ಹೊಟ್ಟೆ, ಮೊಳದುದ್ದ ಮೊಕ, ಬೊಗಸೆ ಅಗಲ ಮೊಕದ ಮೇಲೆ ಪಟ್ಟೆ ನಾಮ, ಶಂಖ ಭವನಾಸಿ ಹಾಕಿಕೊಂಡು 'ಗೋವಿಂದ' ಅಂಬ್ತಾ ದಾಸಪ್ಪ ಬಂದೇಬಿಟ್ಟ. ಆ ದಾಸಪ್ಪ ಏನ್ಮಾಡಿದ ಅಂದ್ರೆ ಕೈಲೊಂದು ಬಾಕು ಇಡಕೊಂಡು ಬಂದಿದ್ದ. ಹತ್ತಿರಕ್ಕೆ ಬಂದ, ಆ ದುರ್ಗಿಗೆ ತಾಕಂಗೆ ಮೂರು ಸಾರಿ ಮೂರು ಮಾತು ಹೇಳಿ 'ಜುಂಜಪ್ಪ ದೊಡ್ಡೋನು, ಜುಂಜಪ್ಪ ದೊಡ್ಡೋನು' ಅಂದುಬಿಡ್ತು. ಯಾವಾಗ ಜುಂಜಪ್ಪನ ಶಬ್ದ ತಗುದನೋ ಭೂತರಾಯದ ರೂಪದ ದಾಸಪ್ಪ, ಅಹ ಅಂಬ್ತಾ ಒಂದೇ ಸಾರಿಗೆ ಅವುನ ಮೇಲೆ ದುರ್ಗಿ ನೆಗೆದು ಬಲವಾಗಿ ಹಿಡಕೊಂಡಳು. ಆಗ ಭೂತಪ್ಪ ಸಣ್ಣಕೆ ಒಂದು ಗೊಂಬೆ ತರ ಆಗಿಬಿಟ್ಟ. ದುರ್ಗಿ ಆ ಅಂಬ್ತಾ ಬಾಯಿ ತೆಗೆದಿದ್ದು, ಒಳಗೆ ಎಳಕೊಂಡು ಬಿಡ್ತು. ಆಗ ಏನಾಯ್ತಪ್ಪ ಅಂದ್ರೆ ದಾಸಪ್ಪನ ತರ ಬಂದಿದ್ದನಲ್ಲ ಭೂತರಾಯ ಕೈಲೊಂದು ಬಾಕು ಇಡಕೊಂಡು ಹೋಗಿದ್ದನಲ್ಲ, ದುರ್ಗಿ ಹೊಟ್ಟೆಗೆ ಸೇರಿಕೊಳ್ಳುತ್ತಲೂ ತಾಳೆದುರ್ಗಿಯ ಡೊಳ್ಳು ಹೊಟ್ಟೆಗೆ ಒಳಗಿನಿಂದ ಬಾಕಾಗೆ ಸೀಳಿಬಿಡ್ತು. ಒಳಗಿದ್ದನಲ್ಲ ಜುಂಜಪ್ಪ ಅವನೂ ಸೇರಿಕೊಂಡು ಭೂತಪ್ಪ-ಜುಂಜಪ್ಪನೂ ಪುಳಪುಳ ಅಂದ್ರೂ ಕೆಳಕೆ ಉದುರಿಬಿಟ್ರು. ಎದ್ದ ಜುಂಜಪ್ಪ ತಾಳೆದುರ್ಗಿಗೆ ಮೂರು ಗುದ್ದು ಗುದ್ದಿದನು. ಆದ್ರೂನೂ ತಾಳೆ ರಪ್ ಅಂತ ಎದ್ದು ಜುಂಜಪ್ಪನ ಮೇಲೆ ಹಾರಿ ಬಂದುಬಿಡ್ತು. ಆಗ ಜುಂಜಪ್ಪ ತಲೆಗೆ ಒಂದು ಗುದ್ದಿದ. ತಲೆ ದುರ್ಗಿ ಹೊಟ್ಟೆಗೆ ಸಿಕ್ಕಿಹಾಕಿಕೊಂಡಿತು. ಕೊಸರಿಕೊಂಡು ತಲೆ ಕಿತ್ಕೊಂಡು, ಆಮೇಲೆ ಕೊಟ್ಟ ನೋಡು, ಎರಡು ಕಾಲಿಡಿದು ಮೇಲಕ್ಕೆತ್ತಿ ನೆಲಕ್ಕೆ ಕುಕ್ಕಿದ. ಆದರೂ ಎಗರಾಡುತ್ತಿದ್ದಳು ದುರ್ಗಿ. ಇದರ ಹಮ್ಮು ಅಡಗಲಿಲ್ಲ, ಅಂದುಕೊಂಡ ಜುಂಜಪ್ಪ ತಾಳೆದುರ್ಗಿಯ ಒಂದು ಕಾಲು ನೆಲಕ್ಕೆ ಮೆಟ್ಟಿಕೊಂಡು ಇನ್ನೊಂದು ಕಾಲಿಡಿದು ಕತ್ತಾಳೆ ಪಟ್ಟೆ ಸೀಳಿದಂಗೆ ಸೀಳಿಬಿಟ್ಟು ಒಂದು ಭಾಗನ ಮೇಲೆ ನಾಡಿಗೆ ಬೀಸಿದ, ಇನ್ನೊಂದು ಬೀಸಿದ ಏಟಿಗೆ ಒಂದು ಆಲದ

ಮರಕ್ಕೆ ಬಡಿದು ಆ ರಭಸಕ್ಕೆ ಬೆಂಕಿ ಹತ್ತಿಕೊಂಡು ಉರಿದು ಬೂದಿಯಾಗಿ ಹೋಯ್ತು. ತಾಳೆದುರ್ಗಿ ಅರ್ಧ ದೇಹ ಬೆಂಕಿ ಹತ್ತಿಕೊಂಡು ಉರಿಯುತ್ತಿರುವುದು ಕಂಬೇರ ಹಟ್ಟಿಲಿ ಕುಂತು ನಿಂತು ನೋಡಿದ ಸೋದರಮಾವುಗಳು ಹೊಟ್ಟೆ ಹೊಟ್ಟೆ ಉರಕೊಂಡ್ರು. ಇವನೆಂಥ ಆಸಾಮಿನಪ್ಪ, ಪರ್ವತದ ಗಾತ್ರ ದುರ್ಗಿನೇ ಎರಡು ಸೀಳಿಗೆ ಸೀಳಿಬಿಟ್ಟ. ಹೋ ಇವನು ಎಲ್ಲರನೂ ಮೀರಿಸಿದ ಆಸಾಮಿ, ಅಂಬ್ತಾ ಹೆದರುತಾರೆ. ತಮಗೆ ಉಪಕಾರ ಮಾಡಕ್ಕಾಗಿಯೇ ಹೋದ ತಾಳೆದುರ್ಗಿ, ಸತ್ತದ್ದು ಕಂಬೇರಿಗೆ ಸ್ಯಾನೆ ಬೇಸರವಾಗಿಬಿಡ್ತು. ಅದಕ್ಕೆಂತಲೇ ಕಂಬೇರು ಮಲೆನಾಡು ಚೌಡಿ ಅಂತ ತಾಳೆದುರ್ಗಿನ ಪೂಜಿಕಂತಾರೆ. ಇತ್ತ ತಾಳೆದುರ್ಗಿನ ಕೊಂದ ಮೇಲೆ ಮಾರಣ್ಣ ಮೈಲಣ್ಣನ ಕರಕೊಂಡು, ದನಗಳ ಹೊಡೆದುಕೊಂಡು, ಜುಂಜಪ್ಪ ಹಿಂದಿ ರುಗಿ ಪುರಲೇಹಳ್ಳಿ ದಿಣ್ಣೆಗೆ ಬಂದ್ರು. ದಾಸಯ್ಯನ ವೇಷದಲ್ಲಿ ಬಂದು ಸಹಾಯ ಮಾಡಿದ್ದನಲ್ಲ ಭೂತಪ್ಪ, ಅವುನಿಗೆ ಜುಂಜಪ್ಪ ಒಂದು ಬಂಡೆ ಮೇಲೆ ಕೂರಿಸಿ, ಏಳು ಅಡ್ಡೆ ಹಾಲು ಕರೆದು ಹಾಲಿನಾಗೆ ಮಜ್ಜನ ಮಾಡಿಸಿದ. ಆಗ ಭೂತಪ್ಪ ಹೇಳಿದ 'ಹರಿಯಣ್ಣ ನನ್ನ ಊಟ ಹಾಲಭಿಷೇಕ ಅಲ್ಲ ಕಣಣ್ಣಯ್ಯ ಬಾಡೂಟ. ನನಗೆ ಎಲಪೂಜೆ ಆಗಬೇಕು' ಅಂದ. ಆಗ ಜುಂಜಪ್ಪ 'ನಾವು ಬೆಂದುದನ್ನು ಮುಟ್ಟರಲ್ಲ. ಇನ್ನು ರಕ್ತ, ಮಾಂಸ ನಮಗೆ ಆಗಿಬರಲ್ಲ. ನೀನು ನಮಗೆ ಕಷ್ಟಕಾಲದಲ್ಲಿ ಸಹಾಯ ಮಾಡಿದ್ದೀಯ, ನಿನಗೂ ಪೂಜೆ ಅಭಿಷೇಕ ನಡೆಯಲಿ. ಪ್ರಪಂಚದ ಮೇಲೆ ಸತ್ಯ ಅಂಬೋದಕ್ಕೆ ಗುರ್ತು ಇರಲಪ್ಪ' ಅಂದುಬಿಟ್ಟು 'ನಿನಗೆ ಶುಕ್ರವಾರ ಶನಿವಾರ ಜೋಡು ಪೂಜೆ ನಡೆಯಲಿ, ಮಾಂಸಾಭಿಷೇಕವಾಗಲಿ. ಅಸವಲ್ಲದವರ ಮೇಲೆ ಕೈ ಮಾಡಬೇಡ. ಸತ್ಯ ಪರಿಪಾಲಿಸಪ್ಪ' ಅಂದುಬಿಟ್ಟು ಮಾರಣ್ಣ-ಮೈಲಣ್ಣನ ಕರಕೊಂಡು ಜುಂಜಪ್ಪ ಮುಂದಕೆ ಬಂದುಬಿಟ್ಟ. ಕಳುವಾರಹಳ್ಳಿ ಹಾಲಪ್ಪನ ಅಡ್ಡೇಣಿಗೆ ದನ ಕರೆದುಬಿಟ್ಟ. ಭೂತಪ್ಪಗೆ ಹಾಲಭಿಷೇಕ ಮಾಡಿದ, ಏಳು ಅಡ್ಡೆ ಹಾಲು ಹರಿದು, ಮೊಸರುಕುಂಟೆಗೆ ಕೆರೆಯಾಗಿ ನಿಂತುಬಿಡ್ತು. ಅಲ್ಲೆ ಹೆತ್ತುಕೊಂಡು ಮೊಸರಾತು. ಆ ಹೊತ್ತಿನಿಂದ ಆ ಊರಿಗೆ ಮೊಸರುಕುಂಟೆ ಅಂಬ್ತಾ ಹೆಸರಾತು.

ತಾಳೆ ಮದಲೇರಿ ಹೊಳೆಯಿಂದ, ತಂದ ಮೂರು ಗುಂಡುಗಳನ್ನ, ಭೂತಪ್ಪನ ಸ್ಮರಣಾರ್ಥ ಪುರಲೇಹಳ್ಳಿಯಲ್ಲಿ ಸ್ವತಃ ಜುಂಜಪ್ಪನೇ ಪ್ರತಿಷ್ಠಾಪಿಸುತ್ತಾನೆ. ಈಗ ನಿತ್ಯವೂ ಪುರಲೇಹಳ್ಳಿ ಭೂತಪ್ಪ ಅಂತ ಬೇಟೆ ಪೂಜೆ ನಡೀತದೆ.



ದ್ಯಾವನ ಸೀರ್ಯದೋರು ಹೋರಿಗೆ ಬಂದೈದಾರೆ
ಆವಿನೊಡೆಕಾರ ಮಲಗ್ಯವನೆ । ಜುಂಜಪ್ಪ
ಆಲದ ಮರವೆ ತಲೆಗಿಂಬು ॥

ಇನ್ನದಿನ್ನೈದು ದಿನವೇ ಬಿಟ್ಟು ಮಾವಗಳೇ ಬರುತಾರೆ
ಏನೇ ಚಿನ್ನಮ್ಮ ಎತ್ತಿನ ಗೂಡಾಗೆ ದ್ಯಾವ್ರಡಿಗೆ ಮಾಡಬೇಕು
ಸೋದ್ರಳಿಯರ ಬಿಟ್ಟು ದೇವ್ರ ಮಾಡಿದರಂದ್ರೆ
ಜನಗಳು ನಗುತಾರೆ ನಿನ್ನ ಮಕ್ಕಳ ಕರಕೊಂಡೆ ಬರಬೇಕು॥

# ಮುತ್ತೋಡು ಗೌಡಗಳು ಜುಂಜಪ್ಪಗೆ ಶರಣಾದ್ರು

ಜುಂಜಪ್ಪನ ದನಗಳು ಸಾಣೆಕೆರೆಯಿಂದ ಬಂದ್ವು. ಸಿರಾ ಸೀಮೆಗೆ ಇನ್ನು ಬಂಗ ಬಡತನ ಹೋಗಿರಲಿಲ್ಲ. ಮಳೆ-ಬೆಳೆ ಆಗಿರಲಿಲ್ಲ. ಭೂಮಿಯಾದ ಭೂಮೆಲ್ಲಾ ಕಾದು ಸುಡುಗುಟ್ಟುತ್ತಾ ಇತ್ತು. ಆಗ ಪಂಚಕಲ್ಯಾಣಿ ಅಂಬೋ ಒಂದು ಹಸು, ತನ್ನ ದಿವ್ಯದೃಷ್ಟಿಯಿಂದ ಮುತ್ತೋಡು ಕಾವಲಾಗೆ ಹುಲ್ಲು ಇರುವುದು ತಿಳಿತು. ಹಿರಿಯಣ್ಣ ಅಲ್ಲಿ ದನದ ಗೂಡು ಹೂಡಿ, ಅಲ್ಲಿನ ಕಾವಲಾಗೆ ದನ ಮೇಯಲಿ, ನಾನು ನೋಡಿಕೊಳ್ಳುತೀನಿ ಅಂತ ಹೇಳಿತು. ಸರಿ ಅಂದು ಜುಂಜಪ್ಪ ದನಗಳನ್ನು ಮುತ್ತೋಡು ಕಾವಲಿಗೆ ದನ ಹೊಡೆದನು. ದನಗಳು ಮುತ್ತೋಡು ಕಾವಲಾಗೆ ಈಡಾಡಿಕೊಂಡು ಮೇಯ್ತಾ ಇದ್ದವು. ಅಲ್ಲಿ ಹಾಲು ಕರೆದು ಮಾರಣ್ಣ ಮೈಲಣ್ಣರು ಸಿರಾ ಪೇಟೆಗೆ ಮಾರುತಾ ಇದ್ದರು. ಹಸು ಮಕ್ಕಳಿಗೆ ಅಂಗೆನೆ ಹಾಲು ಕೊಡುತಾರೆ. ಇಂಗಿರಬೇಕಾದರೆ ಇವರ ಸಂಗತಿ ಕಂಬೇರಿಗೆ ತಿಳಿಯಿತು. ಏನಾರ ಮಾಡಿ ತೊಂದರೆ ಮಾಡಬೇಕೆಂದುಕೊಂಡು, ಕಂಬೇರ ಮುತ್ತೋಡಿನ ಗೌಡನಿಗೆ ಹೇಳಿರು. ಗೌಡನಿಗೆ ದನ ಮೇಯೋದರ ಬಗೆಗೆ ಬೇಸರ ಇರಲಿಲ್ಲ. ನಷ್ಟನೂ ಆಗುತ್ತಿರಲಿಲ್ಲ. ಸುಮ್ಮಕಿದ್ದ. ಆದರೂನೂ ಇದ್ರಲ್ಲ, ಇವುರು ಕಂಬೇರು ಆ ಗೌಡನಿಗೆ ಚಾಡಿ ಹೇಳಿರು. ಅವುನ ಸಾಯಿಸಿ, ನಿಮಗೆ ನಮ್ಮ ದನಿನ ಹೋರಿಗಳನ್ನು ಮಾರಿದ ಪೂರಾ ಹಣ ಕೊಡುತೀವಿ ಅಂಮುತಾ ಆಸೆ ಹುಟ್ಟಿಸಿದರು.

ಯಾವಾಗ ಗೌಡನಿಗೆ ಹಣದ ವ್ಯಾಮೋಹ ಹುಟ್ಟಿಬಿಟರೋ ಕಂಬೇರು ಆಗ ಆ ಗೌಡ ಒಂದು ಉಪಾಯ ಕೇಳಿದ. ಅದಕ್ಕೆ ಕಂಬೇರು ಜುಂಜಪ್ಪ ಅಸಾಧ್ಯವಾದವನು. ಅವುನ ಬಗ್ಗಸಾಕಾಗಲ್ಲ. ಮಾಟ-ಮಂತ್ರದಿಂದ ಬಗ್ಗಿಸಬಹುದು ಅಂದ್ರು. ಅದೇನೆಂದ್ರೆ ಆ ಊರಾಗೆ ಮಾಟದ ಲಿಂಗಯ್ಯ ಅಂಬ್ತಾ ಬಹು ಹೆಸರುವಾಸಿಯಾಗಿದ್ದ. ಅಂತ ಮಾಟದ ಲಿಂಗಯ್ಯನಿಗೆ ಹಣದ ಆಸೆ ತೋರಿಸಿದರು. ಯಾವನೋ ಕಾಡುಗೊಲ್ಲ, ಸಿರಾ ಕಡೆಯವನು. ಅವುನು ನಮ್ಮ ಕಾವಲಿಗೆ ದನ ತರುಬಿವನೆ. ಒಂದು ಬದು ತೋಟನೂ ಬಿಡದಂಗೆ ಮೇಯ್ದುಬಿಟ್ಟವೆ. ನಿನಗೆ ನಮ್ಮ ಹೊಸ ಕರುಗಳ ಮಾರಿದ ಏಳು ಗಾಡಿ ಹಣನೆಲ್ಲಾ ನಿನಗೆ ಕೊಟ್ಟು ಬಿಡುತೀನಿ, ಮಾಟ ಮಾಡಿ ಜುಂಜಪ್ಪನ ದನ ಸಾಯಿಸಬೇಕೆಂದು ಕಂಬೇರು ಮಾಟದ ಲಿಂಗಣ್ಣನಿಗೆ

ಹೇಳಿರು.

ಯಾವಾಗ ಹಣದ ಆಸೆ ತೋರಿಸಿದರೋ ಮಾಟದ ಲಿಂಗಣ್ಣ ಒಪ್ಪಿಕೊಂಡ. ಅದಕ್ಕೆ ಬೇಕಾಗೋ ಸಾಮಾನು ಹೇಳಿದ. ಹತ್ತು ಕೊಳಗದ ಎಡೆಯಾಗಬೇಕು. ನೆಲವನ್ನೆಲ್ಲಾ ಕೆತ್ತಿಸಿ ಸೂತ್ರ ಬಿಡಬೇಕು. ದಿಗ್ಬಂದ ಮಾಡಬೇಕು. ಬಿಟ್ಟರೆ ಚಿಕ್ಕ ಅಂಬೋ ಚೌಡಿಯ ಪ್ರತಿಷ್ಠಾಪನೆ ಮಾಡಲುಬೇಕು. ಕರಿಯ ಹೋತವ ಕಡಿಯಲು ಬೇಕು. ಕರಿಯಾನೆ ಮೂರು ಕೋಳಿ ಆಗಲು ಬೇಕು. ನೀರಿಗೆ ಮಂಡಲ ಕಟ್ಟಬೇಕು. ಬಡಕರುವೊಂದನ್ನು ಕೆಸರಿಗೆ ಹೂಳಬೇಕು. ಮೂರು ಹಿಡಿ ದಾರದ ಉಂಡೆ, ಏಳು ಕೆರೆ ಮಣ್ಣು, ಅಂಕಾಲೆ ಕಡ್ಡಿ, ಹೊಸ ಮಡಿಕೆ ಇಷ್ಟೊಂದು ತಂದರೆ ಮಾಟ ಮಾಡಿ, ಬಂದಿರುವ ಗೊಲ್ಲರ ದನಗಳನ್ನು ಸಾಯ ಬಡಿಯಬಹುದು ಅಂದನು. ಕಂಬೇರು ಮರ್ಮಗಾರರು. ಆಗಬಹುದು ಅಂದನು. ಆದರೂ ಮಾಟಗಾರ ಕರಿತಾನೆ ಅಂಬ್ತಾ ಪರಿಚಯವಿರೋ ಮತ್ತೋಡು ಗೌಡನ ಮುಖಂಡತ್ವದಲ್ಲಿ ನಡೀಬೇಕು ಅಂದರು. ಅದಕ್ಕೆ ಮಾಟಗಾರ ಲಿಂಗಣ್ಣ ಒಪ್ಪಿಕೊಂಡ.

ಆ ಹೊತ್ತು ಅಮವಾಸೆ, ಮಟ ಮಟ ಮಂಗಳವಾರ. ಅಂದುಕೊಂಡಂಗೆ ಎಲ್ಲಾ ಸಾಮಾನುಗಳನ್ನು ಬಂಡಿ ಮೇಲೆ ಹೇರಿಕೊಂಡು ಕಂಬೇರು ಬಂದ್ರು. ರಾತ್ರಿ ಹನ್ನೆರಡು ಗಂಟೆ, ಮುತ್ತೋಡು ಕಾವಲಿನ ಕೆಳಗೆ ಒಂದು ಕೆರೆ. ಜುಂಜಪ್ಪನ ದನಗಳ ಮೇಯ್ದು ನೀರು ಕುಡಿಯಾಕೆ ಆ ಕೆರೆಗೆ ಬಂದೇ ಬರುತಾವೆ. ಅಲ್ಲಿ ಮಾಟ ಮಾಡಿಬಿಡುವ ಅಂತ ಪ್ಲಾನ್ ಮಾಡಿಕೊಂಡರು. ಸರಿ ಅಂದುಕೊಂಡಂತೆ ಮಂಗಳವಾರ ಬಂತು. ಆ ಹೊತ್ತು ಅಮಾವಾಸೆ. ಕಂಬೇರು ಮಾಟಗಾರ ಲಿಂಗಣ್ಣ ಹೇಳಿದ್ದ ಸಾಮಾನುಗಳನ್ನೆಲ್ಲಾ ಬಂಡಿ ಮೇಲೆ ಹೇರಿಕೊಂಡು ಮುತ್ತೋಡು ತಲುಪಿದರು. ಹುಲ್ಲುಗಾವಲಿನಕೆರೆ ಬಯಲಾಗೆ ಬಂಡಿ ನಿಲ್ಲಿಸಿ ಚಿಕ್ಕನೋ ಕರಿನಾಗನನ್ನು ಕಳುಹಿಸಿ ಮಾಟಗಾರನನ್ನು ಕರೆಸಿದರು. ಮಾಟ ಮಾಡಿದ. ಮೇಕೆ ಕಡಿಸಿದ. ಕೋಳಿ ಕುಯ್ದು ಹತ್ತು ಕೊಳಗ ಕೆಂಪಕ್ಕಿ ಅನ್ನ ಮಾಡಿ, ಅದಕೆ ರಕ್ತ ಹಿಡಿದು, ಒಂದು ಹುತ್ತದ ಬುಡದಲ್ಲಿ ಪೂಜೆ ಮಾಡಿರು. ಅಂಕಾಲೆ ಕಡ್ಡಿಯಿಂದ ಸೂತ್ರ ಬರೆಯಿಸಿದರು. ದಿಗ್ಬಂಧನ ಮಾಡಿಬಿಟ್ಟರು. ಒಂದು ಬಡಕರನ, ಕೆರೆ ಒಳಗೆ ಕೆಸರಾಗೆ ಹೂತು, ಗಳ ಹೊಡೆದು ಈಚೆಗೆ ಬರದಂಗೆ ಬಂಧಿಸಿದರು. ನೀರೆಲ್ಲಾ ಮಂಡಲ ಹೊಡೆದು, ಏಳು ಕೋಟಿ ಮಾಟದ ಗೊಂಬೆ ಮಾಡಿ ದನ ತಿಂದಾಕೆಗೆ ಮಾಡಿಬಿಟ್ಟರು.

ಬೆಳಕರಿತು, ಜುಂಜಪ್ಪನ ದನ ಎಂದಿನಂತೆ ಮತ್ತೋಡು ಹುಲ್ಲುಗಾವಲಿಗೆ ದನ ಹೋದ. ದನ ಹೋಗುತ್ತಿದ್ದಂಗೆ ಏಳು ಕೋಟಿ ಮಾಟದ ಗೊಂಬೆ ಇದ್ದವಲ್ಲ ಅವು ಜುಂಜಪ್ಪನ ದನಗಳ ಮೇಲೆ ಎಗರಿದವು. ಒಂದು ದನಾನು ಮುಂದಕ್ಕೆ ಬಿಡ್ತಾ ಇಲ್ಲ. ಬಡಮೈಲ ಒಂದು ಕೋಟಿ ಗೊಂಬೆಗಳನ್ನು ತುಳಿದು ಸಾಯಿಸಿ, ಆದರೂ ಎದ್ದು ಎದ್ದು

ಬಂದ. ಗೊಂಬೆಗಳು ವಿಪರೀತ ಕಾಟ ಕೊಟ್ಟವು. ಆಗ ಜುಂಜಪ್ಪ ಬೇವಿನಹಳ್ಳಿ ಕರಿಯಮ್ಮನೂ ಸ್ವಾರೆಕುಂಟೆ ಕರಿಯಮ್ಮನು ಸ್ಮರಣೆ ಮಾಡಿಕೊಂಡ. ಆಗ ಆ ದೇವತೆಗಳು ತನ್ನ ಸೋಮನ ಕಳುಹಿಸಿದವು. ಆ ಸೋಮಗಳು ಈ ಎಲ್ಲ ಮಾಟದ ಗೊಂಬೆಗಳನ್ನು ಹಿಡ ಹಿಡಕೊಂಡು ಹಿಸುಕಿಬಿಟ್ಟವು. ಆ ಎಲ್ಲ ಗೊಂಬೆಗಳನ್ನು ಹಿಸುಕಿ ಪುಡಿ ಪುಡಿ ಮಾಡಿ, ಹಿಡಿ ಮಾಡಿಕೊಂಡು ಉಫ್ ಅಮ್ತಾ ಉರುಬಿದವು.

ಇತ್ತ ಮಾಟಗಾರ ಲಿಂಗಯ್ಯನೂ ಮುತ್ತೋಡು ಗೌಡಗಳೂ ಗಾಬರಿಯಾದರು. ಬಂದಂತವರು ಯಾರು ಅಂತಾನ ಯೋಚನೆ ಮಾಡಿರು. ಕೊನೆಗೆ ಮೂರು ದಿನ ಆದರೂನು ಒಂದೇ ಒಂದು ಗೊಂಬೆ ಬಾರದೆ, ಸೋತು ಸುಣ್ಣವಾದ ರೀತಿ ಕಂಡು ಬೆರಗಾದರು. ಇವನ್ಯಾರೋ ಭಾರಿ ಭೂಪತಿ ಇರಬಹುದೆಂದು ತಿಳಿದು, ಕೊನೆದಾಗಿ ಒಂದೇ ಒಂದು ಕುಂಟ ಗೊಂಬೆ ಇತ್ತು. ಅದನ್ನೂ ಬಿಟ್ಟರು. ಅದು ಬಂದಂಗೆ ಬಂದು ಅಂಗೆ ಹೋದಂಗೆ ಹೋಗಿಬಿಡ್ತು. ಅಯ್ಯೋ ಘಾತವಾಯ್ತು, ಘಾತವಾಯ್ತು. ನಾವು ಯುದ್ಧ ಮಾಡುತಿರುವುದು ಬೇರೆ ಯಾರೂ ಅಲ್ಲ, ವೀರಾಧಿವೀರ. ವೀರ ಜುಂಜಪ್ಪ ಅಂಬಾದು ತಿಳಿದುಹೋಯ್ತು.


ಯಾವಾದ ನಾವು ಮಾಟ ಮಾಡಿದ್ದು, ಗೊಂಬೆ ಬಿಟ್ಟಿದ್ದು ವೀರ ಜುಂಜಪ್ಪನ ಮೇಲೆ ಅಂಬೋದು ತಿಳಿದುಹೋಯ್ತೋ ಮಾಯಗಾರರು, ಕಂಬೇರ ಪ್ಲಾನ್ ಅಂದುಕೊಂಡು ಮುತ್ತೋಡ ಗೌಡ ಓಡೋಡಿ ಬಂದು ಜುಂಜಪ್ಪನಿಗೆ ಶರಣಾದ. ತಪ್ಪನ್ನು ಮಾಫಿ ಮಾಡಬೇಕೆಂದು ಕಾಲಿಡಿದ. ಜುಂಜಪ್ಪನ ಒಕ್ಕಲಾದ. ಆವತ್ತಿನಿಂದ ಮುತ್ತೋಡು ಜುಂಜಪ್ಪನ ಹುಲ್ಲುಗಾವಲಾಯಿತು. ಆರು ತಿಂಗಳು ಅಲ್ಲಿ ದನ ಈಜಾಡಿಕೊಂಡು ಮೇಯ್ದುಕೊಂಡವು.

ಕಂಬೇರ ಗೊಲ್ಲರ ನಂಬದಿರೋ ನನಕಂದ
ಇಂಬಾಗಿ ಹೊಡೆಯೋ ಹೊರಗೂಡ ಜುಂಜಪ್ಪ
ಇಕ್ಕೇರು ನಿನಗೆ ಉರಿಮದ್ದ

## ಹೋರಿಗೆ ಬೆಲೆಕಟ್ಟಿದ ಮುತ್ತಿನಶೆಟ್ಟಿ

ಜುಂಜಪ್ಪನ ದನ ಹುಲಿಕುಂಟೆ ದಿಣ್ಣೆಗೆ ಮೇಯ್ದು ಚಂಗಾವರದ ಬೈಲು, ಕ್ಯಾದಿಗುಂಟೆ ಕೆರೆಗೆ ನೀರು ಕುಡಿದು, ಚಂದವಾಗಿ ಬೆಳೆದುಕೊಂಡಿದ್ವು. ಕಂಬೇರಿಗೆ ಇದನ್ನು ಕಂಡು ತಡೆದುಕೊಳ್ಳಕಾಗದಷ್ಟು ಕ್ವಾಪ. ಯಾನು ಮಾಡಿರೂ ಜುಂಜಪ್ಪನ ದನ ಬಗ್ಗಿಸಾಕಾಗೋದಿಲ್ಲ. ದನಗಳು ಹೆಚ್ಚಿಕೊಂಡು ನಮ್ಮ ದನಗಳಿಗೆ ಒಂದು ಹುಲ್ಲುಕಡ್ಡಿನೂ ಸಿಗದಂಗೆ ಮಾಡಿಬಿಟ್ಟವನೆ ಹಾಳಾದವನು ಅಂದು ಒಳಒಳಗೆ ಏನಾರಾ ಮಾಡಿ ಜುಂಜಪ್ಪನೂ ಅವುನ ತಮ್ಮಗಳನೂ ಸಾಯಿಸಬೇಕೆಂದು, ದನ ಸಾಯಿಸಬೇಕೆಂದು ಕಂಬೇರು ಮಸಲತ್ತು ನಡೆಸುತಾ ಇದ್ರು. ಒಂದು ದಿನ ಏನಾತಪ್ಪಾಂದ್ರೆ ಮೂಡಲಪಟ್ಟಣದಿಂದ ಒಬ್ಬ ಮುತ್ತಿನ ಯಾಪಾರಿ ಬಂದ. ಬಲು ಶ್ರೀಮಂತ. ಮುತ್ತು-ರತ್ನ ಆನೆಗಳ ಮೇಲೆ, ಒಂಟೆಗಳ ಮೇಲೆ ಹೇರಿಕೊಂಡು ಬಂದು ಚಂಗಾವರದ ಏಣಿಗಾಗೆ ತೊರೆ ಸಾಲಾಗಿ ಮುತ್ತಿನ ಶೆಟ್ಟಿ ಬಿಡಾರ ಹೊಡಕೊಂಡಿದ್ದ. ಇದನ್ನು ಕಂಬೇರು ಕಂಡರು. ಅವುನತಾಕೆ ಬಂದು ಗೆಳೆತನ ಬೆಳೆಸಿದ್ರು. ಜುಂಜಪ್ಪ ನಮ್ಮ ಹುಡುಗನೆ. ಅವುನ ದನಗಳಲ್ಲೊಂದು ಹೋರಿ ಅದೆ. ಅದರೆಸರು ಬಡಮೈಲ ಅಂದು. ಅದನ್ನು ಏನಾರ ಮಾಡಿ, ನೀನು ಕೊಳ್ಳನಂಗೆ ಮಾಡಿ ಹೊಡೆದು ಬಿಡು. ನಿನಗೆ ಹತ್ತು ಬಿಂದಿಗೆ ಹೊನ್ನು ಕೊಡುತೀವಿ, ಅಂಬ್ತಾ ಉಬ್ಬಲಿಕ್ಕಿದರು. ಮುತ್ತಿನ ಶೆಟ್ಟಿ ದುಡ್ಡಿಗೆ ಆಸೆ ಪಟ್ಟು ಆಯಿತು ಅಂದ. ಅದರಂತೆ ಜುಂಜಪ್ಪನ ತಕೆ ಬಂದ. ಜುಂಜಪ್ಪ ದನಗಳ ಜೊತೆಗೆ ತಮ್ಮಂದಿರು ಕೂಡಿಸಿಕೊಂಡು ಚಂಗಾವರದ ಏಣಿನಾಗೆ ಕುಂತಿದ್ದ. ಮುತ್ತಿನ ಶೆಟ್ಟಿ ಅಲ್ಲಿಗೆ ಶರಣು ಅಂದ. ಜುಂಜಪ್ಪನೂ ಶರಣಾರ್ಥಿ ಮಾಡಿದ. ಏನು ದೂರದಿಂದ ಬಂದಂಗಾಯಿತಲ್ಲ ಸಮಾಚಾರ ಅಂದು, ಜುಂಜಪ್ಪ ಕೇಳಿದ. ಮುತ್ತಿನ ಶೆಟ್ಟಿ ಹೇಳಿದ. ನಿನ್ನ ದನಗಳಿಗೊಂದು ದೊಡ್ಡೋರಿ ಅದೆಲ್ಲಾ, ಅದು ನಮಗೆ ಬೇಕಾಗೆದೆ. ಅದರಿಂದ ನಾವು ದನಕರ ಬೆಳೆಸಿಕೋಬೇಕು. ವ್ಯಾಪಾರಕ್ಕೆ ಲಾಟು ಹೊರಾಕೆ ಆಗುತದೆ, ಕೊಟ್ಟುಬಿಡು, ನೀನು ಕೇಳಿದಷ್ಟು ಹೊನ್ನು ಕೊಡುತೀವಿ ಅಂದ. ಅದಕೆ ಜುಂಜಪ್ಪ ನಕ್ಕ. ತಮಾಸೆ ಮಾಡುಬೇಡಪ್ಪ, ನಾನು ದೂರದ ಪಟ್ಟಣದಿಂದ ನಿನ್ನನ್ನೇ ನಂಬಿಕೊಂಡು ಬಂದಿದ್ದೀನಿ ಅಂದ. ಆಗ ಜುಂಜಪ್ಪ ಹೇಳಿದ ನನ್ನ ಪ್ರಾಣಾನಾದರೂ ಕೊಡುತೀನಿ ಆದ್ರೆ ಯಾವುದಕ್ಕೂ ಬಡಮೈಲನ್ನ ಕೊಡೋಕಿಲ್ಲ ಅಂದ.

ಮುತ್ತಿನಶೆಟ್ಟಿ ಬಲವಂತ ಮಾಡುತಲೇ ಇದ್ದ. ಹತ್ತು ಕೊಳಗ ಹೊನ್ನು ಕೊಡುತೀನಿ ಅಂದ. ಜುಂಜಪ್ಪ ತಲೆ ಅಲ್ಲಾಡಿಸಿದ. ಶೆಟ್ಟಿ ಮಾತಾಡುತ್ತಲೇ ಮುಂದುವರಿದ. ಜುಂಜಪ್ಪ ಹತ್ತಿರಕೆ ಬಂದ, ಜೋರು ಮಾಡಿದ. ಕೊಡಲೇಬೇಕು ಎತ್ತ ಎಂದು ಎತ್ತು ಹಿಡಿಯಾಕೆ ಮುಂದಾದ. ಮುತ್ತಿನಶೆಟ್ಟಿ ಜೊತೆಗೆ ಪಡ್ಡೆ ಹುಡುಗರನ್ನ ಕರಕೊಂಡು ಬಂದಿದ್ದ. ಆ ಹುಡುಗರು ಹೋರಾಡಿ ಹೋರಿ ಹಿಡಿಯಲು ಮುಂದಾದರು. ಆಗ ಸ್ವಾಮಿ ಉರಿಗಣ್ಣ ಬಿಟ್ಟ. ಆ ಉರಿಯ ಬಿಸಿಯನ್ನು ತಾಳಲಾರದೆ, ಹೋರಿ ಹಿಡಿಯಲು ಬಂದಿದ್ದ ಪಡ್ಡೆಹುಡುಗರು ದಿಕ್ಕಾಪಾಲಾಗಿ ಓಡಿಹೋದರು. ಮುತ್ತಿನಶೆಟ್ಟಿಯು ಜುಂಜಪ್ಪನಲ್ಲಿ ತಪ್ಪುಕಾಣಿಕೆ ಕಟ್ಟಿ ಅಡ್ಡಲಾದನು. ಕಂಬೇರ ಮಾತು ಕೇಳಿ ಮೋಸಹೋದ ಮುತ್ತಿನ ಶೆಟ್ಟಿ, ಪಶ್ಚಾತ್ತಾಪದಿಂದ ತೊರೆಯ ಬದಿಗೆ ಬಂದು, ಒಂದು ಹೊಂಗೆಯ ಮರದ ಬಳಿ ಮಲಗಿದ್ದನು. ಇವನ ಜೊತೆಗೆ ಬಂದಿದ್ದ ಹುಡುಗರೆಲ್ಲಾ ಮುತ್ತುಗಳೊಂದಿಗೆ ಪರಾರಿಯಾಗಿದ್ದ ಚಿಂತೆ ಅವನಿಗೆ. ಅಷ್ಟೊತ್ತಿಗೆ ಪಡುಗಡೆ ಪಟ್ಟಣದಲ್ಲಿ ಮಳೆ ಬಂದು, ತೊರೆ ಹರಿದು ಬಂತು. ನೀರಿನಾಗೆ ಕೊಚ್ಚಿ ಹೋಗಲಿದ್ದ ಮುತ್ತಿನಶೆಟ್ಟಿಯ ಸ್ಥಿತಿಯನ್ನು ಕಂಡ ಜುಂಜಪ್ಪ, ಬೆಳವನಹಕ್ಕಿಗೆ ಹೇಳಿ ಕಳುಹಿಸಿದ. ಆ ಹಕ್ಕಿ ಅವನ ಬಳಿಗೆ ಹೋಗಿ 'ಮುತ್ತಿನ ಶೆಟ್ಟಿ ತೊರೆ ತೊರೆ' ಎಂದು ಕೂಗಿತು. ಎದ್ದು ನೋಡಿದ ಶೆಟ್ಟಿ ಬರುತ್ತಿರುವ ಹೊಳೆ ಕಂಡು ಹೆದರಿದನು. ತನ್ನ ಬಳಿ ಇದ್ದ ಮುತ್ತಿನಚೀಲ ತೆಗೆದುಕೊಂಡು, ತೊರೆಯ ದಂಡೆಗೆ ಬಂದನು. ತನ್ನನ್ನು ಪ್ರಾಣಾಪಾಯದಿಂದ ಪಾರು ಮಾಡಿದ ಬೆಳವನಹಕ್ಕಿಯ ಕೊರಳಿಗೆ ಒಂದು ಮುತ್ತಿನ ಸರ ಹಾಕಿ, ತನ್ನ ಋಣ ತೀರಿಸಿ ಸ್ವಾಮಿ ಜುಂಜಪ್ಪನ ಒಕ್ಕಲಾಗಿ ಮೂಡಲದೇಶಕ್ಕೆ ವ್ಯಾಪಾರಕ್ಕೆ ಹೊರಟುಹೋದನು.



## ಸೊಂಡೋರ ಬಯಲಾಗೆ ದನ ಮೇಯ್ದು

ಸೊಂಡೂರು ಕಾಡಾಗೆ ಜುಂಜಪ್ಪನ ದನಗಳೂ ಮೇಯುತ್ತಿದ್ದವು. ಆ ಭಾಗದಲ್ಲಿ ಒಂದು ಹುಲ್ಲುಗಾವಲು. ಅದು ಬೊಮ್ಮಕ್ಕ ಎಂಬ ಹೆಂಗಸಿಗೆ ಸೇರಿತ್ತು. ಈ ಬೊಮ್ಮಕ್ಕ ಬಹು ಬಿನ್ನಾಣಗಾರ ಹೆಂಗಸು. ರಾಜಾಧಿರಾಜರನ್ನೆಲ್ಲಾ ತನ್ನ ಎಡಗೈ ಕಿರುಬೆರಳಾಗೆ ಆಡಿಸುತ್ತಿದ್ದಳು. ತನ್ನ ಹುಲ್ಲುಗಾವಲು ನೋಡಿಕೊಳ್ಳಕೆ ಒಬ್ಬಳು ಮಹಾರಾಕ್ಷಸಿನೇ ನೇಮಕ ಮಾಡಿಕೊಂಡಿದ್ದಳು. ಈ ರಾಕ್ಷಸಿನಾದರೂ ಸಾಮಾನ್ಯಳೇನಲ್ಲ. ಅವುಳ ಊಟಕ್ಕೆ ಒಂದು ದಿನಕ್ಕೆ ಒಂದು ಕೊಂಬು ತಿರುಗಿದ. ಟಗರನೂ ಒಂದು ಬಳ್ಳ (ಕೊಳಗ) ಅಕ್ಕಿಯ ಅನ್ನನೂ ಮುಕ್ಕು ಮಾಡದಂಗೆ ಕೊಡಬೇಕಾಗಿತ್ತು. ಅಂತ ರಾಕ್ಷಸಿ ತನ್ನ ಕಾವಲಿನ ಒಳಗೆ ಒಂದು ಪ್ರಾಣಿ ಪಕ್ಷಿ ಸುಳಿಯದ ರೀತಿಲಿ ನೋಡಿಕೊಂಡಿದ್ದಳು.

ಸಿರಾ ಸೀಮೆಗೆ ಬರಗಾಲ ಬಂತು. ಕಳುವೊರಹಳ್ಳಿ ಕಡೆಯಿಂದ ಪಡುಗಡಿಕೆ ದನ ಹೊಡೆಯಬೇಕೆಂದು ಜುಂಜಪ್ಪ ತಮ್ಮಗಳಿಗೆ ಹೇಳಿದ. ತಮ್ಮಗಳು ಅಣ್ಣನ ಮಾತಿನಂತೆ ಬಿಡುಗಡೆಗೆ ದನ ಬಿಟ್ಟುಕೊಂಡು ಅದರ ಹಿಂದೆ ಹೋದರು. ಹೋದಂತ ದನ ಸೊಂಡೂರಿನ ಊರ ಮುಂದಾಸಿ ಹೊರಟು. ಬೊಮ್ಮಕ್ಕನ ಕೋಟೆಯೊಳಗೆ ಬಂದವು. ರಾಕ್ಷಸಿ ಬಂದಂತ ದನಗಳನ್ನು ಅವುಗಳ ಹಿಂದೆ ಬಂದಂತ ಮಾರಮ್ಣನೂ ಮೈಲಣ್ಣನನ್ನು ತಿಂಬಾಕೆ ಬಾಯಿ ತೆರಕೊಂಡು ಬಂದುಬಿಟ್ಟಳು. ಆ ಹುಡುಗರು ಅಣ್ಣ ಜುಂಜಪ್ಪನನ್ನು ನೆನೆದರು. ಜುಂಜಪ್ಪ ತಮ್ಮಗಳಿಗೆ ಉಕ್ಕಿನ ಉರಿಬಾಣ ನೀಡಿದ. ಅದನ್ನು ರಾಕ್ಷಸಿಯ ಮೇಲೆ ಮಾರಣ್ಣ-ಮೈಲಣ್ಣರು ಪ್ರಯೋಗಿಸಿದರು. ಮಾರಣ್ಣ-ಮೈಲಣ್ಣ ಬಿಟ್ಟ ಉಕ್ಕಿನ ಉರಿಬಾಣದಿಂದ ಕೋಟೆ ನಡುಗಿಬಿಡ್ತು. ಅದರ ಹೊಡೆತಕ್ಕೆ ರಾಕ್ಷಸಿ ಹಾರಿಹೋಗಿ ನಾಯಕಸಾನಿ ಬೊಮ್ಮಕ್ಕನ ಮನೆಯ ಬಾಗಿಲಿಗೆ ಅಡ್ಡಲಾಗಿ ಮಲಗಿಬಿಟ್ಟಳು.

ನಾಯಕಸಾನಿ ಬೊಮ್ಮಕ್ಕ ಯಾರೋ ಮನೆಗಾರ ನಮ್ಮ ಸೀಮೆಗೆ ಬಂದು ನಮ್ಮ ಮೇಲೆ ಪರಾಕ್ರಮ ತೋರುತಾನಲ್ಲ. ನಮ್ಮ ಎದೆಗಾರ್ತಿ ರಾಕ್ಷಸಿನೂ ಸೋಲಿಸಿಬಿಟ್ಟನಲ್ಲ. ಇವನ್ಯಾರೋ ಅಸಾಧ್ಯವಾದ ಗಂಡು. ಇವುನ ಸೊಕ್ಕು ಯಂಗಪ್ಪ ಮುರಿಯದು ಎಂದು

ಯೋಚನೆ ಮಾಡಿದಳು. ಅವುಳ ಕೈಕೆಳಗೆ, ಅವುಳ ಹೇಳಿದಂಗೆ ಕೇಳಿಕೊಂಡಿದ್ದ ಮ್ಯಾಸಬೇಡರ ಐದಾರು ತುಂಡು ಹುಡುಗರಿದ್ದರು. ಅವುರು ಇವಳಿಗೆ ಯಾವಾಗಲೂ ರಕ್ಷಣೆ ಕೊಡೋರು. ಅವುರುಗಳಿಗೆ ಸನ್ನೆ ಮಾಡಿಬಿಟ್ಟಳು. ಅವುರು ಎದ್ದೇವೋ ಬಿದ್ದವೋ ಎಂದು ಓಡೋಡಿ ಬಂದ್ರು. ಬಂದಂತ ಬೇಡರಿಗೆ ಹೆಂಡನೂ, ಹುರಿದ ಬಾಡಿನ ಮಡಕೆನೂ, ಕೊಟ್ಟು ಸಂತೃಪ್ತಿಗೊಳಿಸಿದಳು. ಆಮೇಲೆ ನಮ್ಮ ಹುಲ್ಲುಗಾವಲಿಗೆ ಅವನ್ಯಾರೋ ಮೂಡಲ ಸೀಮೆಯವನು ದನ ತರುವಿದ್ದಾನೆ. ಅದನ್ನು ಕೇಳಿದ ನಮ್ಮ ಬೊಮ್ಮ ರಾಕ್ಷಸಿಯನ್ನು ಅಂಗಾತ, ಮುಂಗಾತ ಕೆಡುವಿಬಿಟ್ಟವರೆ. ಇಂಥವರಿಗೆ ಸರಿಯಾಗಿ ತದುಗಿ, ಅವುನ ದನಗಳನ್ನು ತಂದು ಕೋಟೆ ಮೂಡಲಿಗೆ ಬಂಧಿಸಿಬಿಡಿ ಅಂದ್ಲು.

ಆ ಮ್ಯಾಸಬ್ಯಾಡರೋ ಬಲು ಅಸಾಧ್ಯವಾದವು. ಹೆಂಡ-ಬಾಡು ಅಂದರೆ ತಲೆ ಹುಯ್ಯಿಸಿಕೊಳ್ಳುತ್ತಾರೆ. ಯಾವಾಗ ಹೆಂಡನೂ, ಬಾಡು ಒಳಾಕೆ ಹೋಗಿಬಿಡುತೋ ಮಿಂಡಾಳು ತರ ಕುಣಿದಾಡಿಬಿಟ್ಟರು. ದನಗಳನ್ನು ದನ ಬಿಟ್ಟವನನ್ನು ತರಿದುಹಾಕಿಬಿಡುತೀವಿ. ದನಗಳನ್ನು ತಂದು ಕೋಟೆ ಉದಿಗೆ ಗೂಟಕ್ಕೆ ನೇತುಹಾಕಿಬಿಡುತೀವಿ ಅಂಬ್ತಾ ತಲಾಗೊಂದೊಂದು ಮಾತಾಡಿಕೊಂಡರು. ಆಯುಧ ಹೆಗಲಿಗೆ ಏರಿಸಿಕೊಂಡು ಬೊಮ್ಮಕ್ಕನೇ ಹುಲ್ಲುಗಾವಲಿನ ಕಡಿಕೆ ಬಂದರು.

ಬಂದು ನೋಡುತಾರೆ ಜುಂಜಪ್ಪನ ದನಾದಿ ದನವೆಲ್ಲಾ ಹಕ್ಕಿಪಕ್ಷಿ ಹರಡಿಕೊಂಡು ಮೇಯು ಅಂಗೆ ಮೇಯ್ತವೆ. ಬೊಮ್ಮಕ್ಕನ ಹುಲ್ಲುಗಾವಲು ತುಂಬಾ ಕೆದರಿಕೊಂಡಿವೆ. ಒಂದಲ್ಲ ಎರಡಲ್ಲ ಏಳು ಗೂಡಿನ ದನ ಅವು. ಏಳು ಲಕ್ಷ ಗೋವುಗಳು. ಅವುಗಳ ಮೇಯೋದು ನೋಡಿಕೊಂಡು, ಜುಂಜಪ್ಪ ಆನಂದವಾಗಿ ತಮ್ಮ ಮಾರಣ್ಣ ಮೈಲಣ್ಣನ ಕೂಟೆ ಮಾತಾಡಿಕೊಂಡು, ಉರಿಗದ್ದಿಗೆ ಹಾಕಿಕೊಂಡು ಕೂತುಬಿಟ್ಟವನೆ. ಇಂತಹ ಬೇಡರು ಕಂಡರು. ಎತ್ತ ಕಡೆಯಿಂದ ದನಗಳನ್ನು ಹಿಡಿಯೋದು, ಎಲ್ಲಿಗೆ ಕಳಿಸೋದು, ಒಂದೆ ಎರಡೆ ಹಿಡಿದು ಕಟ್ಟಿಹಾಕಲು ನಾವು ತಿಳಿದು ಒಪ್ಪಿಕೊಂಡೆವೋ ತಿಳಿಯದಲೆ ಒಪ್ಪಿಕೊಂಡೆವೋ ಅಂಬ್ತಾ ಯೋಚನೆ ಮಾಡುತ್ತಾರೆ. ಆಗ ಇರಲಿ ಅಂಬ್ತಾ ಆ ಗೋವುಗಳ ಮೇಲೆ ಬಾಣಗಳನ್ನು ಬಿಡುತಾರೆ. ಮದ್ದನ್ನು ಎಸೆಯುತ್ತಾರೆ. ದನಗಳಿಗೆ ಇಷ್ಟೊಂದು ಸೊಳ್ಳೆ ಕಡಿದಂತಾಗಿ ಮೇಯುತಾ ಅವೆ. ಅಷ್ಟರಲ್ಲಿ ಒಬ್ಬ ಬೇಡ ನೇರವಾಗಿ ಗುರಿ ಇಟ್ಟು ಬಾಣ ಹೂಡಿಬಿಟ್ಟ. ಆ ಬಾಣಗಳು ವೇಗವಾಗಿ ಬಂದಾವು ಬಂದು, ಸಣ್ಣ ಮಲ್ಲಿಗೆ ಚತುರೆಂಬೆ ಅಂಬೋ ಹಸುಗಳ ಕಣ್ಣಿಗೆ ನಾಟಿಕೊಂಡು ಬಿಟ್ಟವು. ಅವು ಅಂಬಾ ಅಂಬಾ ಅಂತ ಅರುಚಿದವು. ಜುಂಜಪ್ಪ ಇದೇನಪ್ಪ ಈತರ ದನ ಎಂದು ತಮ್ಮಗಳೊಂದಿಗೆ ಮಾತಾಡುತಾ ಕುಂತಿದ್ದವನು ಎದ್ದು ಓಡಿ ಬಂದುಬಿಟ್ಟ. ಬಂದು ನೋಡುತಾನೆ. ಅವನ ಹಸುಗಳಾದ ಸಣ್ಣಮಲ್ಲಿ, ಚತುರಂಬೆ

ಕಣ್ಣಿಗೆ ಬಾಣ ನೆಟ್ಟುಕೊಂಡು ರಕ್ತನೆ ಸುರೀತದೆ. ನೆತ್ತರನೆ ಹರೀತದೆ. ಇದೇನಪ್ಪ ಕೇಡು ಅಂದಾನು ಓಡಿಬಂದನು. ಬಂದಂಗೆ ಕೈಯಿಂದ ಆ ಎರಡು ಹಸುಗಳಿಗೆ ಹೊಕ್ಕಿದ್ದ ಬಾಣಾನ ಕೀಳುತಾನೆ. ಕಿತ್ತಾಗ ರೈತ ಬುಳಬುಳ್ಳಾ ಅಂತಾ ಜಿನುಗುತ್ತೆ. ಸ್ವಾಮಿ ಜುಂಜಪ್ಪ ಎರಡೂ ಕಣ್ಣುಗಳಿಗೆ ಸವರಿದ. ಹಸುವಿನ ಕಣ್ಣಿನಿಂದ ಬರುತ್ತಿದ್ದ ರಕ್ತ ನಿಂತುಹೋಯಿತು. ಎದ್ದು ನೋಡುತಾನೆ ಬೇಡರ ಹುಡುಗರು ತುಂಡು ಆರೆ ಇದ್ದಂಗೆ ಆವುರೆ. ಎಲಾ ಪಾಪಿಗಳಿರಾ ಕರ್ಮಗೇಡಿ ನನ್ನ ಮಕ್ಕಳ. ಪುಣ್ಯಕೋಟಿ ಅಂಬ್ತಾ ಗೋವುಗಳಿಗೆ ಬಾಣ ಬಿಡುತೀರಿ. ನಿಮ್ಮ ಕಣ್ಣು ಇಂಗಿಹೋಗಲಿ ಅಂದುಬಿಟ್ಟ. ಕ್ಷಣಾರ್ಧದಲ್ಲಿ ಬಂದಂತ ನ್ಯಾಸಬೇಡರು ಐದು ಹುಡುಗರೂ ಕುರುಡರಾಗಿ ನೆಲಹಿಡಿದು ಕೂತುಬಿಟ್ಟರು.

ಯಾವಾಗ ಜುಂಜಪ್ಪನ ತರುವಿಕೊಂಡು ಬಂದು, ನಿನ್ನ ಕೋಟೆ ಉದಿ ಬಾಗಿಲಾಗೆ ಅಡ್ಡಾಕುತೀವಿ, ಅಂಬುತಾ ಬೊಮ್ಮಕ್ಕನಿಗೆ ಮಾತು ಕೊಟ್ಟಿದ್ದರಲ್ಲ ಆ ತುಂಡು ಹುಡುಗರು, ಆಗ ಬರುತಾವೆ ದನ ಈಗ ಬರುತಾವೆ ಅಂಬ್ತಾ ಕಾದಳು. ಏನಾರಾ ದನಗಳನೆಲ್ಲಾ ಅಲ್ಲೆ ಸಂಹಾರ ಮಾಡಿಬಿಟ್ಟರಾ ಅಂಬುತಾಲೂ ಯೋಚನೆ ಮಾಡಿದಳು. ಸರಿ ನೋಡಾನ ಅಂಬ್ತಾ ಬೊಮ್ಮಕ್ಕ ತನ್ನ ಏಳು ಸುತ್ತಿನ ಕೋಟೆ ಹತ್ತಿ, ಉಪ್ಪರಿಗೆ ಮೇಲೆ ನಿಂತು ಕಾಟಣ್ಣ, ಮೋಟಣ್ಣ, ಸುಂಡಣ್ಣ ಅಂಬ್ತಾ ಮೂರು ಸರಿ ಕೂಗುತಾಳೆ. ಒಬ್ಬರೂ ಸುಳಿವಿಲ್ಲ. ಆ ಅನ್ನಲಿಲ್ಲ, ಹೂ ಅನ್ನಲಿಲ್ಲ. ಅಯ್ಯೋ ಶಿವನೆ ಇದೇನಪ್ಪ ಕೇಡು, ಹಿಂಗಾಯ್ತು ಅದೇಕೆ ಒಬ್ಬರೂ ಮಾತು ಇಲ್ಲ, ಕತೆನೂ ಇಲ್ಲ ಅಂದುಬಿಟ್ಟು ಮೂಡು ಮುಂದಾಗಿ ಒಬ್ಬಳೇ ಬರಾ ಬರಾ ಅಂತಾ ಬರುತಾ ಅವುಳೆ. ಬರುತಾಳೆ. ತನ್ನ ಹುಲ್ಲುಗಾವಲಲ್ಲಿ ಒಂದಲ್ಲ ಎರಡಲ್ಲ, ಏಳು ಲಕ್ಷಜುಂಜಪ್ಪನ ದನಗಳು ಲಗ್ಗೆ ಹೊಡೆಕೊಂಡು ಮೇಯ್ತುವೆ. ಅಂಗೆ ಮುಂದುಕೆ ಬರುತಾಳೆ. ಜುಂಜಪ್ಪ ಅವುನ ತಮ್ಮಗಳನ್ನು ಕೂರಿಸಿಕೊಂಡು ಅಲ್ಲೆ ಹೊಡಕೊಂಡು ನಗಾಡಿಕೊಂಡು, ಕುಂತುಬಿಟ್ಟವನೆ. ಅವನಿಗೆ ನೆಳ್ಳಾಗೆ ಬಿಳಿ ಚಾಮರ ನಿಂತುಬಿಟ್ಟೈತೆ. ಎಲೇ ಕರಡೇರ ಗೊಲ್ಲ. ನನ್ನ ಸ್ವತ್ತಿಗೆ ಬಂದು ನನ್ನ ಹೆದರಿಕೆ ಭಯವಿಲ್ಲದೆ ಅದೆಂಗೆ ಕುಂತಿದ್ದೀಯ, ಮಾಡುತೀನಿ ತಡಿ ನಿನಗೆ ಸರಿಯಾಗಿ ಮಂಗಳಾರ್ತಿ ಅಂದುಬಿಟ್ಟು ಬೊಮ್ಮಕ್ಕ ಮುಂದಕೆ ಕಾಲಿಕ್ಕಿದವಳು ಹಿಂದಕ್ಕೆ ಹೊಳ್ಳಿ ಬಡಗಡೆ ಹೊಳ್ಳುತಾಳೆ. ಅವುಳ ತಾವ ಹೆಂಡದ ಗಡಿಗೆ ತಕ್ಕೊಂಡು ಬಾಂಡಿನ ಸ್ಯಾರೆ ಇಡಕೊಂಡು ಜುಂಜಪ್ಪನ ದನ ನಾಶ ಮಾಡಿ ಉಳಿದವು ಕರ ಪರ ತಂದು ನಿನ್ನ ಕೋಟೆ ಉದಿಬಾಗಿಲಾಗೆ ಕಟ್ಟುತೀವಿ ಅಂದಿದ್ದರಲ್ಲ, ತುಂಡಾರೆ ಹುಡುಗರು, ಐದು ಜನವೂ ಕಣ್ಣ ಕಳಕೊಂಡು ದಿಕ್ಕು ಅರಿಯದೆ ಎತ್ತ ಹೋಗಬೇಕೆಂದು ತಿಳಿಯದಲೆ ಮಂಕುಹಿಡಿದು ಒಬ್ಬರಿಗೊಬ್ಬರು ತಲೆ ಆನಿಸಿಕೊಂಡು ಗುಂಪುಗೂಡಿಕೊಂಡು ಬೇರು ಅಣಬೆ ತರ ಕುಂತುಬಿಟ್ಟವರೆ. ಸರಿ ಬೊಮ್ಮಕ್ಕ ಇವುರನ

ನೋಡಿಳು. ಓಹೋ ಇವರೇ ಮಹಾ ಪೌರುಷವಂತರು. ಇವರ ಬಾಳು ಆಳಾಗ ಅಂದುಬಿಟ್ಟು ಬಡಬಡ ಹೆಜ್ಜೆ ಹಾಕಿ ಮುಂದಾದಳು.

ತನ್ನ ಕೋಟೆ ಅರಮನೆಗೆ ಬಂದ್ಲು. ಬಂದು ಬಂದವನೆ ನೆಲಮನೆ ಸಾರಿಸಿ ಮೂವರು ಅಮ್ಮಗಳನ್ನ ಕರೆದು ತನಗೆ ಬಂದಿರೋ ಸಂಕಟವನ್ನು ಅವರೊಂದಿಗೆ ಕೇಳಿಕೊಂಡಳು. ಅವನ್ಯಾರೋ ಜುಂಜಪ್ಪನಂತೆ. ಸಿರಾ ಸೀಮೆಯಿಂದ ಬಂದು ನನ್ನ ಉಜಾರತ್ತು ಇಲ್ಲದೆ ಹಂಗು ಅಧಿಕಾರವಿಲ್ಲದೆ ನನ್ನ ಕೋಟೆ ಒಳಗೆ ದನ ನುಗ್ಗಿಸುವುದಲ್ಲದೆ ನನ್ನ ಕಾವಲಾಗೆ ದನ ಬಿಟ್ಟು ಮೇಯಿಸುತಾ ಅವುನೆ. ಅವುನ ದರ್ಪನ ಇಟ್ಟಾಡಿಸಬೇಕು. ಸೊಕ್ಕ ಇಳಿಸಬೇಕೆಂದು ಬೇಡಿಕೊಂಡಳು.


ಆಗ ಮೂರು ಜನ ದೇವತೆಗಳು ಏನೇನು ಪ್ಲಾನು ಮಾಡಿಕೊಂಡವಪ್ಪಾಂದ್ರೆ ಜುಂಜಪ್ಪ ಅಸವಲ್ಲದವನು. ದೇವಾನುದೇವತೆಗಳ ಅವನತ್ರ ಬರಾಕೆ ಹೆದರುತಾರೆ. ಅಂತದರೊಳಗೆ ನಾವು ಯಾವ ಲೆಕ್ಕ ಅಂಬ್ತಾ ಅವೆ, ತಮ್ಮ ತಮ್ಮಲ್ಲೆ ಮಾತಾಡಿಕೊಂಡವು. ಅವರೂ ನಮ್ಮ ಭಕ್ತೆ ಬೊಮ್ಮಕ್ಕನಿಗೆ ನಿರಾಸೆಯಾಗಬಾರದೆಂದು ಒಂದು ಉಪಾಯ ಕಂಡುಕೊಂಡವು. ಜುಂಜಪ್ಪ ವೀರಾಧಿವೀರ, ಶೂರಾಧಿಶೂರ. ತಾಯಿಹೊಟ್ಟೆಲಿ ಹುಟ್ಟಲಿಲ್ಲ, ತಾಯಿ ಹಾಲು ಕುಡಿಲಿಲ್ಲ. ಬೆನ್ನಲಿ ಮೂಡಿದವನು ಉದ್ದಂಡರಾಯ, ಭೂಮಿ ತೂಕದವನು. ನಾಗರಹಾವಿನ ಗಂಡ, ಹಿಂಗಿದ್ದರೂನೂ ಅವುನು ಹೊಲೆ ಸೂತಕ ಮಾತ್ರ ಅವನಿಗೆ ಆಗಂಗಿಲ್ಲ. ಅಂಟು ಮುಟ್ಟು ಅಂದರೆ ಅವುನ ದೂರ ಏನಾರ ಮಾಡಿ, ಅಂತ ಪ್ಲಾನ್‌ನೇ ಮಾಡಬೇಕೆಂದು ಈ ಮೂರು ಜನ ದೇವತೆಗಳು ಸೇರಿಕೊಂಡು ಬಿಟ್ಟು, ಏನು ಮಾಡಿವಪ್ಪಾಂದ್ರೆ, ಮೂರು ದೇವತೆಗಳೂ ಹೊಲಸಿನಮ್ಮಗಳಾಗಿಬಿಟ್ರು. ತಲೆ ಮೇಲೆ ಹೆಂಡದ ಗಡಿಗೆ ಹೊತ್ತುಕೊಂಡು ಕಂಕುಳಲ್ಲಿ ಮುಟ್ಟಿನ ಸೀರೆ ಇರಕಿಕೊಂಡು, ಸೂತುವಾದರ ತರ ವೇಷ ಹಾಕಿಕೊಂಡುಬಿಟ್ಟು ಜುಂಜಪ್ಪನ ದನಗಳ ಹತ್ತಿರ ಬಂದ್ರು.

ಬಂದರು ಬಂದಾಗೆ ನೀನು ಗಂಡುಸೇ ಆಗಿದ್ರೆ, ಶೂರನೇ ಆಗಿದ್ರೆ, ನಮ್ಮ ಮೇಲೆ ಯುದ್ಧನೇ ಮಾಡಬೇಕು. ಕದನವೇ ಆಡಬೇಕು. ನಮ್ಮನ್ನು ಸೋಲಿಸಬೇಕೆಂದು ಕಾಲು ಕೆರಕೊಂಡು ಬಂದ್ರು. ಜುಂಜಪ್ಪ ನೋಡುತಾನೆ ಹೆಣ್ಣು ಹೆಂಗಸರು. ಹೆಣ್ಣು ಹೆಂಗಸರ ಮೇಲೆ, ಹಸುಮಕ್ಕಳ ಮೇಲೆ, ಗೋವುಗಳ ಮೇಲೆ ಕೈಯೆತ್ತಬಾರದು, ನಿನಗೆ ಆಯಸ್ಸು ಹದಿನಾರು ವರ್ಷ ಅಂಬ್ತಾ ಪರಮೇಶ್ವರನೇ ಹೇಳಿದ್ದನಲ್ಲ. ಅದನ್ನು ನೆನೆದು ಜುಂಜಪ್ಪ ಹಿಂಜರಿದ. ಜುಂಜಪ್ಪ ಆ ಮೂರು ಹೆಂಗಸರ ಮೇಲೆ ಬಾಣ ಬಿಡಬೇಕೆಂದುಕೊಂಡರೆ ಬಾಣ ಎತ್ತಲಾರದವಾದವು. ಏನಪ್ಪ ಶಂಕರ ಇಂತ ಕೆಲಸವಾಯ್ತು, ನಮ್ಮಪ್ಪನಿಗೂ

ಇಂತ ಇಕ್ಕಟ್ಟು ಬಂದಿರಲಿಲ್ಲ. ನನ್ನ ತಾತನಿಗೂ ಇಲ್ಲದು ನನಗೆ ಬಂದುಬಿಡ್ತು. ಹೆಣ್ಣು ಹೆಂಗಸಿನಿಂದ ನನ್ನ ಬತ ಕೆಟ್ಟೋಯಿತಲ್ಲ ಶಿವ ಶಿವ ಅಂದೋನು. ಶಿವನ ಧ್ಯಾನ ಮಾಡಿ ಬಿಟ್ಟು ಪುರಲೇಹಳ್ಳಿ ಭೂತಪ್ಪನ್ನ ಸ್ಮರಣೆ ಮಾಡಿಕೊಂಡ. ಇಂತಹ ಇಕ್ಕಟ್ಟಿನಾಗೆ ಕಾಪಾಡೋನು ಅವನೊಬ್ಬನೆ. ತಾಳೆದುರ್ಗಿನೂ ಸಂಹಾರ ಮಾಡಿದೋನು ಅಂದುಬಿಟ್ಟು ಮನಸ್ಸಿನಲ್ಲೇ ಪುರಲೇಹಳ್ಳಿ ಭೂತನನ್ನು ನೆನೆಸಿಕೊಂಡ. ಆಗ ಪುರಲೇಹಳ್ಳಿ ಭೂತ ಇದೊಳ್ಳೇ ಕತೆಯಾಯಿತಲ್ಲ, ಈ ಮುಂಡೇರದು ಅಂದುಬಿಟ್ಟು ವೇಷ ಬದಲಿಸಿಬಿಟ್ಟ.

ಮೂಡೆ ಗಾತ್ರದ ಹೊಟ್ಟೆ, ಹನ್ನೆರಡು ಅಡಿ ಎತ್ತರ ಸೀಳು ಬಾಯಿ, ದಪ್ಪ ತುಟಿ, ವಿಕಾರ ಮೂಗು, ಮೂಗಿನಾಗೆ ಸುರಿಯೋ ಗೊಣ್ಣೆ, ಕೆದರಿದ ಕೂದಲಾಗಿ ಅವುರ ಮುಂದೆ ನಿಂತುಬಿಟ್ಟು ಆಕಾಶ ಮುಟ್ಟಿಸೋನಂಗೆ ಬೆಳೆದುಬಿಡ್ತು. ಯಾವಾಗ ವಿಕಾರದ ರೂಪ ತಾಳಿನೋ ಭೂತಪ್ಪ, ಆಗ ಒಂದೇ ಏಟಿಗೆ ಹೆದರಿದ ಮೂವರು ಹೆಂಗಸರು ಇವನ್ಯಾರೋ ರಾಕ್ಷಸನೋ ಏನೋ ತಿಂದು ಗಿಂದು ಹಾಕಿಬಿಟ್ಟಾನು ಅಂತಾನೆ ಹೆದರಿಬಿಟ್ಟು ಓಟ ಕಿತ್ತರು.

ವೀರ ಜುಂಜಪ್ಪ ಗುಡಿಗ್ಹೋಗುವಾಗ
ಪಾಗು ಬಿದ್ದಾವು ಸಣ್ಣ ಮರಳಾಗೆ ।
ಕಲ್ಲಿನ ಕುಂಟೆ ಚಿತ್ತಣ್ಣದೇ ಗತಿ ಎಂದು ನಡೆದಾನು



# ಅತಿರೆಂಬೆಯ ಸಾಹಸ

ಜುಂಜಪ್ಪನು ಸೊಂಡೂರು ಕಾವಲಾಗೆ ದನ ಮೇಯಿಸ್ತಾ ಇದ್ದ. ಆ ಕಾವಲು ಸುಂಡೂರು ಬೊಮ್ಮಕ್ಕನಿಗೆ ಸೇರಿತ್ತಲ್ಲ, ಅವುಳ ಮಹಾ ಬಿನ್ನಾಣಗಾರ್ತಿ. ಮೊದಲಿಗೆ ಜುಂಜಪ್ಪನ ಹೆದರಿಸಾಕೆ ಬೊಮ್ಮ ರಾಕ್ಷಸಿ ಬಿಟ್ಟಳು. ಅದಕೂ ಏನೂ ಆಗಲಿಲ್ಲ. ಆಮೇಲೆ ತುಂಡಾರೆ ಬೇಡರನ್ನ ಬಿಟ್ಟಳು. ಅವುರೂ ಕಣ್ಣು ಕಳಕೊಂಡು ಕುರುಡರಾದರು. ಆಮೇಲೆ ಮೂವರು ಮಾರೇರನ್ನು ಕಳುಹಿಸಿ, ಜುಂಜಪ್ಪನಿಗೆ ಹೊಲೆಸೂತಕ ಹೊರಿಸಾಕೆ ನೋಡಿ ಪ್ಲಾನು ಮಾಡಿಳು. ಜುಂಜಪ್ಪನಿಗೆ ಹೊಲೆ ಸೂತಕ ಹೊರಿಸಾಕೆ ನೋಡಿರು. ಅದರಿಂದಲೂ ಏನೂ ಪ್ರಯೋಜನವಾಗಲಿಲ್ಲ. ಈಗ ಉಳಿದಿರೋದು ಒಂದೇ ಮಾರ್ಗ, ನ್ಯಾಯ ಕೇಳಾದು. ನನ್ನ ಕಾವಲಿಗೆ ಹೇಳದೆ ಕೇಳದೆ ದನ ತರುವಿರಾದು ಅಪರಾಧ. ಅದಕ್ಕೆ ದಂಡ ಹಾಕಲೇ ಬೇಕೆಂದು ಬೊಮ್ಮಕ್ಕ ಸುತ್ತೇಳಳ್ಳಿ ನ್ಯಾಯಗಾರರನ್ನು ಸೇರಿಸಿಳು. ಎಲ್ಲರಿಗೂ ಹೇಳಿ ಕಳಿಸಿದಳು. ಜುಂಜಪ್ಪನ ತನಕ ಖುದ್ದು ಆಯಮ್ಮನೇ ಹೋಗಿಬಿಟ್ಟು ಹೇಳಿ ಬಂದ್ಲು. ನೀನು ನ್ಯಾಯಗಾರನ ಮಗ, ಸತ್ಯವಂತರ ಸಂತತಿ. ಎಪ್ಪತ್ತೇಳು ಹಳ್ಳಿ ಸೀಮೆಗೆಲ್ಲ ನ್ಯಾಯ ಹೇಳಾನು. ಈಗ ನನ್ನ ಕಾವಲಿಗೆ ದನ ಬಿಟ್ಟು ಮೇಯಿಸಿದ್ದೀಯ. ತಡೆಯಾಕೆ ಬಂದಂತಹ ನನ್ನ ಕಡೆಯವರಿಗೆ ಬೆದರಿಸಿದ್ದೀಯ, ಅಂದಿದ್ದೀಯ ಆಡಿದ್ದೀಯ. ನನ್ನದು ತಪ್ಪೋ ನಿನ್ನದು ತಪ್ಪೋ ನ್ಯಾಯ ತೀರ್ಮಾನ ಏಳೂರು ಗೌಡಾಳಿಕೆ ಮುಂದೆ, ಗೌಡ ಶ್ಯಾನುಭೋಗರ ಮುಂದೇನೇ ತೀರ್ಮಾನ ಆಗಿಬಿಡಲಿ, ಎಂದು ಹೋಗಿ ಜುಂಜಪ್ಪನಿಗೆ ಸವಾಲು ಹಾಕಿಬಂದಳು.

ಜುಂಜಪ್ಪ ಸತ್ಯವಂತ. ಆಯಮ್ಮ ಕರೆದ ಮೇಲೆ ಹೋಗದೇ ಇದ್ದರೆ ಅದು ತರವಲ್ಲ ಅಂದುಬಿಟ್ಟು ಇಬ್ಬರು ತಮ್ಮಗಳನೂ ಕರಕೊಂಡು ಬಡಮೈಲನಿಗೂ, ಈರಭದ್ರ, ಅತಿರೆಂಬೆರಿಗೆ ಹೇಳಿಬಿಟ್ಟು ಸಂಡೂರು ನ್ಯಾಯಸ್ಥಾನಕ್ಕೆ ಬಂದನು. ಬಂದಿದ್ದ ನ್ಯಾಯಗಾರರ ಮುಂದೆ ಜುಂಜಪ್ಪ ನೀರು ಹುಲ್ಲಿನ ಸಂಕಟ ತೋಡಿಕೊಂಡ. ಕಾಡು, ಹುಲ್ಲು, ನೀರು ಪ್ರಾಣಿಗೆ ಸೇರಿದ್ದು. ಅದರಿಂದ ದನಗಳು ನುಗ್ಗಿ ಮೇಯ್ದವು. ಅದರಲ್ಲಿ ತಪ್ಪೇನಿಲ್ಲ ಅಂದನು. ನ್ಯಾಯಗಾರರು ಹಾಗಾದರೆ ನಿನ್ನ ದನಗಳು ಅಂತ ಶೂರ ದನಗಳೇ? ಯಾರೂ ಸಾಕಲಾರದ

ದನನ ನೀನು ಸಾಕಿದ್ದೀಯ? ಅಂದ್ರು. ಜುಂಜಪ್ಪ ವಿನಯವಾಗಿಯೇ ತನ್ನ ದನಗಳು ಸಾಮಾನ್ಯವಾದವುಗಳೇ, ಅವು ಎಂದೂ ಅನ್ಯಾಯ ಮಾಡಲ್ಲ, ಯಾರಿಗೂ ತೊಂದರೆ ತಾಪತ್ರಯ ಮಾಡಲ್ಲ, ನ್ಯಾಯಗಾರರು ನಾವು ಅಂದ.

ಅದಕ್ಕೆ ನ್ಯಾಯಗಾರರಾಗಿದ್ದರೆ ಒಂದು ಪಣ ಅದೆ, ಅದರಲ್ಲಿ ನೀನು ಗೆಲ್ಲಬೇಕು. ಅದರಲ್ಲಿ ನೀನು ಗೆದ್ದರೆ, ಬೊಮ್ಮಕ್ಕನ ಕಾವಲಿಗೆ ದನ ಬಿಟ್ಟಿದ್ದು ಸತ್ಯ ಮಾತ್ರವಲ್ಲ ಅದನ್ನು ನೀನೇ ಶಪಾಡ ಹಾಕಿಕೊಂಡು ದನ ಮೇಯಿಸಿಕೋಬಹುದು ಅಂದರು. ಜುಂಜಪ್ಪ ಆಗಬಹುದು ಸ್ವಾಮಿ, ತಮ್ಮ ಪಣಕ್ಕೆ ನಾನು ಇಲ್ಲ ಅಂಬೋದಿಲ್ಲ. ಒಪ್ಪುತೀನಿ ಅಂದನು. ಆಗ ಏಳೂರಿನ ನ್ಯಾಯಸ್ಥಾನದ ಗೌಡಾಳಿಕೆಯವರು ಹೇಳಿರು. 'ನೋಡು ಜುಂಜಪ್ಪ, ನೀನು ಏಳು ಲಕ್ಷ ದನ ಆಳಿದ್ದೀಯ. ಈಗ ಏನು ಮಾಡಬೇಕಪ್ಪಾಂದ್ರೆ, ಊರ ಮುಂದಿರುವ ಸುರಹೊನ್ನೆ ಮರ, ಅದು ಹನ್ನೆರಡಾಳುದ್ದ ಅದೆ. ನೀನು ನಿನ್ನ ದನಗಳನ್ನು ಆ ಮರದ ಮೇಲಿಂದ ಹಾರಿಸಿ ಕೆಳಗೆ ಇಳಿಸಬೇಕು. ನಿನ್ನ ದನಗಳು ಸುರಹೊನ್ನೆ ಮರದ ಮೇಲಿಂದ ಹಾರಿ ಗೂಡಿಗೆ ಸೇರಿಕೋಬೇಕು. ಹಾಗೆ ಮಾಡಿ ಗೆದ್ದರೆ, ಸೊಂಡೂರು ಬೊಮ್ಮಕ್ಕನ ಕಾವಲು ನಿನ್ನದೇ ಆಗುತ್ತೆ. ಅವುಳ ತಾವ ಇರೋ ಸಂಪತ್ತು ನಿನ್ನದಾಗುತ್ತೆ. ಸೋತರೆ ನಿನ್ನ ಏಳು ಗೂಡಿನ ದನಗಳನ್ನೆಲ್ಲಾ ಬೊಮ್ಮಕ್ಕನಿಗೆ ಒಪ್ಪಿಸಿಬಿಟ್ಟು, ಮೂಡು ಮುಂದಾಗಿ ಹೋಗಬೇಕು. ಏನಂತೀಯ?' ಅಂದರು. ಆಗ ಜುಂಜಪ್ಪ 'ಇದು ಒಳ್ಳೇ ಸತ್ವಪರೀಕ್ಷೆ. ಆಯಿತಪ್ಪ ದೇವರೆ ಚಿತ್ರಲಿಂಗ, ತಾಯಿ ಗೌರಸಂದ್ರದ ಮಾರಕ್ಕ' ಅಂದುಬಿಟ್ಟು 'ಆಗಬಹುದು ನಿನ್ನ ಮಾತಿಗೆ ನಾನು ಬದ್ಧ' ಅಂದನು.

ಗೂಡಿನ ತಾಕೆ ಬಂದ. ಬಂದವನೆ ತಮ್ಮಂದಿರಿಗೆ ಈ ಸಂಗತಿ ತಿಳಿಸಿದ. ಅವುರು ಯಾಕೋ ಅಳುಮೋರೆ ಹಾಕಿರು. ಜುಂಜಪ್ಪ ಅವರಿಗೆ ಧೈರ್ಯ ಹೇಳಿದ 'ನಮ್ಮ ಸತ್ಯ ನಮ್ಮನ್ನು ಕಾಪಾಡುತ್ತೆ' ಅಂದುಬಿಟ್ಟು 'ತಾತ ದೈಮಾರ, ತಂದೆ ಕೆಂಗರು ಮಲ್ಲೇಗೌಡರ ಕಾಲದಿಂದಲೂ ದನ ಆಳಿಕೊಂಡು ಬಂದಿರುವ ನಾನು, ಈ ಹೊತ್ತು ದನಗಳನ್ನೇ ಪಣಕ್ಕೆ ಇಡುಮಾಡಬೇಕಾಯಿತಲ್ಲ ಪರಮೇಶ್ವರ' ಅಂದು ಬೇವಿನಹಳ್ಳಿ ಕರಿಯಮ್ಮನೂ, ಸ್ವಾರೆಕುಂಟೆ ಕರಿಯಮ್ಮನೂ ಪುರಲೇಹಳ್ಳಿ ಭೂತಪ್ಪನೂ ನೆನೆದು, ತಾತ ಮುತ್ತಾತರ ಕಾಲದಿಂದ ಬಂದಿರೋ ದನಗಳನ್ನ ಉಳಿಸಿಕೊಂಡರಪ್ಪ ಅಂದು ಸ್ಮರಣೆ ಮಾಡಿಕೊಂಡ ನಂತರ ಗಣೆ ತಗೊಂಡು ಊದಿಬಿಟ್ಟು, ದನಗಳು ಅಣ್ಣ ಜುಂಜಪ್ಪಗೆ ಏನೋ ತೊಂದರೆ ತಾಪತ್ರಯವಾಗಿರ ಬೇಕೆಂದು ಅವು ಮೇಯುತ್ತಿದ್ದವು. ಹಂಗೆಹಂಗೆ ಬಾಲ ಎತ್ತಿಕೊಂಡು ಓಡಿಬಂದುಬಿಟ್ಟು. ಆಗ ಸ್ವಾಮಿ ಜುಂಜಪ್ಪ ಹೇಳಿದ 'ಈಗ ನನಗೊಂದು ಕಷ್ಟದ ಕಾಲ ಎದುರಾಗಿಬಿಟ್ಟೈತೆ. ಹನ್ನೆರಡು ಆಳುದ್ದದ ಸುರಹೊನ್ನೆ ಮರವ ನನ್ನ ದನಗಳು ಹಾರಿ, ಹಾರಿತವಯಿಂದ

ಹುಲ್ಲುಗಾವಲಿಗೆ ಬಂದು ಮೇಯಬೇಕು. ಈ ಹಂತದಲ್ಲಿ ಸೋತರೆ ನನ್ನ ದನಗಳನ್ನೆಲ್ಲಾ ಸೊಂಡೂರು ಬೊಮ್ಮಕ್ಕನಿಗೆ ಒಪ್ಪಿಸಿಬಿಟ್ಟು, ಬರಿಕೈಲಿ ಮುಖದ ಮೇಲೆ ಕಂಬಳಿ ಹಾಕಿಕೊಂಡು ಮೂಡು ಮುಂದಾಗಿ ಹೋಗಬೇಕು. ನಮ್ಮ ತಾತ ದೇವರ ದೈಮಾರನ ಕಾಲದಿಂದಲೂ ಪಾಲನೆ ಪೋಷಣೆ ಮಾಡಿಕೊಂಡು ಬಂದಿರೋ ನಿಮ್ಮಗಳನ್ನು ಆ ರಾಕ್ಷಸಿ ಕೈಗೆ ಒಪ್ಪಿಸಬೇಕಲ್ಲಪ್ಪ ದೇವರೆ' ಅಂಬ್ತಾ ಯೋಚನೆ ಮಾಡಿದನು.

ಅಣ್ಣ ಜುಂಜಪ್ಪನ ಯೋಚನೆ ಅರ್ಥ ಮಾಡಿಕೊಂಡ. ಅತಿರೆಂಬೆ ಎಂಬ ಒಂದು ಹಸು ಮುಂದೆ ಬಂತು. ಬಂದು ಹೇಳ್ತು. ಹನ್ನೆರಡು ಆಳುದ್ದ ಇರುವಂತ ಸುರಹೊನ್ನೆ ಮರವ ನಾನು ನೆಗೆಯುತ್ತೇನೆ. ನೀನೇನು ಚಿಂತೇನೇ ಮಾಡಬೇಡ, ಅಂಮ್ತಾನೇ ಹೇಳಿಬಿಡ್ತು. ಅತಿರೆಂಬೆ ಹಸ ಒಳ್ಳೆ ಜಾತಿ ಹಸು. ಹಲವಾರು ಸೂಲು ಕರ ಹಾಕಿತ್ತು. ಒಳ್ಳೆ ಜಾತಿ ಕರನೇ ಹಾಕಿತ್ತು. ಈಗಲೂ ತುಂಬಾಗಿತ್ತು. ನಾಳಿಕೋ ನಾಡಿದ್ದೋ ಈಯಂಗಿತ್ತು. ಅದು ಮರನ ಹಾರುತ್ತೇನೆಂದು ಹೇಳಿದ್ದು ಜುಂಜಪ್ಪನಿಗೆ ಸಮಾಧಾನ ಬಂದಂಗಾಯ್ತು. ಆಯ್ತು, ಪರಮೇಶ್ವರ ಕೃಪೆ ಇದ್ದಂಗೆ ಆಗಲಿ, ಶಂಕರ ಅಂದುಬಿಟ್ಟು ಜುಂಜಪ್ಪ ದನಗಳನ್ನು ಸೊಂಡೂರು ಪೇಟೆ ಕಡೀಕೆ ತರುವಲು ತಮ್ಮಂದಿರಿಗೆ ಹೇಳಿದನು. ತಾನು ಮುಂದೆ ಮುಂದಾಗಿ ಸೊಂಡೂರು ಕೋಟೆ ಬಾಗಿಲಿಗೆ ಬಂದ.

ಆ ಹೊತ್ತು ಸೋಮವಾರ. ಚಿತ್ರದೇವರ ವಾರ ಜುಂಜಪ್ಪಗೆ ಒಳ್ಳೆದಿನ. ಕೇಡೇನು ಆಗಲಾರದು ಅಂಮ್ತಾ ಸ್ವಾಮಿ ಜುಂಜಪ್ಪ ತಿಳಿದುಕೊಂಡುಬಿಟ್ಟ. ಏಳು ಊರಿನ ಗೌಡಗಳು, ಪಣೆಗಾರ, ಪಟೇಲರು ಸೇರಿಕೊಂಡರು. ವಾಡಿಕೆಯಂತೆ ಸೊಂಡೂರ ಕೋಟೆ ಬಾಗಿಲಾಗಿದ್ದ ಸುರಹೊನ್ನೆ ಮರಕ್ಕೆ ಪೂಜೆನೆ ಮಾಡಿರು, ಪುಣ್ಯನೆ ಮಾಡಿಸಿರು. ಹಣ್ಣು ಕಾಯಿ ಏರಿಸೀರು. ಅರಿಶಿನವನ್ನು ಇಟ್ಟರು. ಅಕ್ಷತೆ ಕಾಳನ್ನು ಹಾಕಿದರು. ಅಂಗುನೂಲನ್ನೆ ಕಟ್ಟಿ, ಜೂಜಿನ ಮರಕ್ಕೆ ಸ್ವಾಮಿ ಜುಂಜಪ್ಪ ಪ್ರದಕ್ಷಿಣೆನೆ ಹಾಕಿದನು.

ಜುಂಜಪ್ಪನ ದನಗಳು ಸಾಲು ಸಾಲಾಗಿ ಬಂದವು. ಪೇಟೆ ಬಾಗಿಲಾಗೆ ಹಾದು ಕೋಟೆ ಉದಿಗೆ ಬಂದು ನಿಂತುಕೊಂಡವು. ಮುಂದೆ ಮಾರಣ್ಣ ಮೈಲಣ್ಣ ನಡುವೆ ಅತಿರೆಂಬೆ. ಅತ್ತ ಕಡೆ ಬಡಮ್ಮೆಲ, ಇತ್ತಕಡೆ ಪಂಚಕಲ್ಯಾಣಿ ನಿಂತುಕೊಂಡವು. ಜುಂಜಪ್ಪ ಕಣ್ಣು ಮುಚ್ಚಿ ಹಿರೀಕರನ್ನು ನೆನೆದ. ಕಾರ್ಯ ನಡೆಸಬಹುದಾ ಅಮ್ತಾ ಒಂದು ಮಾತು ಅಪ್ಪಣೆ ಕೇಳಿದ. ನ್ಯಾಯಗಾರರು ಆಗಬಹುದು, ಆಗಬಹುದು ನಿನ್ನ ಸಾಹಸನೇ ತೋರು. ಶಕ್ತಿನೇ ತೋರು ಅಂದರು. ಆಗ ಜುಂಜಪ್ಪ ಹಿಂದಕೆ ಆರು ಹೆಜ್ಜೆ ಹೋದ. ಮುಂದಕ್ಕೆ ಮೂರು ಹೆಜ್ಜೆ ಬಂದ. ಉಕುರಿಸಿ ಹಾರಿದ ಸುರಹೊನ್ನೆ ಮರವನ್ನ. ಯಾವಾಗ ಜುಂಜಪ್ಪ ಹನ್ನೆರಡು

ಆಳು ಉದ್ದದ ಸುರಹೊನ್ನೆ ಮರನ ಒಂದೇ ಏಟಿಗೆ ಒಂದು ಅಡಿಕೆ ಕಡಿದಂಗೆ ನೆಗೆದುಬಿಟ್ಟನೋ, ಅವುನ ದನಗಳು ನೋಡ್ತಾ ಇದ್ದವಲ್ಲ, ಅವುನೂ ಗುಂಪುಗುಂಪಾಗಿ ಹಾರಿ ನೆಗೆದುಬಿಟ್ಟವು. ಅದರಲ್ಲಿ ಅತಿರೆಂಬೆ ಹಸು ಇತ್ತಲ್ಲ, ಅದು ಹಾರಿತು. ಅದು ತುಂಬಿದಂಗೆ ಈಲಾಗಿ ಕೆಚ್ಚಲು ಇಳೀಬಿಟ್ಟುತ್ತು. ಆಗಲೇ ಗಿಣ್ಣ ಆಡುತ್ತಿತ್ತು. ಯಾವಾಗ ಜುಂಜಪ್ಪ ಸುರಹೊನ್ನೆಮರ ಹಾರಿಬಿಟ್ನೋ ಅವುನ ಹಿಂದೇನೇ ಅತಿರೆಂಬೆ ಎಂಬ ಹಸುವೂ ಒಂದೇ ಸಮಕ್ಕೆ ಸುರಹೊನ್ನೆ ಮರ ಹಾರಿಬಿಡ್ತು. ಅದು ಹಾರಿದ ಜೂಜಿನ ಮರದ ನೆತ್ತಿ ಸುಳಿಗೆ ಬರುವಾಗ, ಅದರ ಹೊಟ್ಟೆಯಲ್ಲಿದ್ದ ಕರು ಹಿಂದಕ್ಕೆ ಚಿಮ್ಮಿಬಿಡ್ತು. ಆಗ ಅದನ್ನೇ ನೋಡಿಕೋತಾ ನಿಂತಿದ್ದ ಮಾರಣ್ಣ ಮೈಲಣ್ಣರು ತಾವು ಹೊದ್ದುಕೊಂಡಿದ್ದ ಕರಿ ಕಂಬಳಿ ತೆಗೆದು ಮೇಲಿಂದ ಉದುರಿದ ಕರುವನ್ನು ಆತುಕೊಂಡರು. ಜುಂಜಪ್ಪನಿಗೆ ಸಂತೋಷ ಆಯಿತು. ಒಂದರ ಹಿಂದೆ ಒಂದರಂತೆ ಎಲ್ಲಾ ದನಗಳೂ ಜೂಜಿನ ಮರನ ನಿರಾಯಾಸವಾಗಿ ಹಾರಿ, ಆ ಕಡೆ ದಡ ಸೇರಿಬಿಟ್ಟವು.

ಯಾವಾಗ ಹನ್ನೆರಡು ಆಳುದ್ದದ ಸುರಹೊನ್ನೆ ಮರ ಒಂದೇ ಬಾರಿಗೆ ಜುಂಜಪ್ಪನ ಏಳು ಲಕ್ಷದ ದನಗಳೂ ಹಾರಿ, ಒಂದು ಚೂರು ತೊಂದರೆ, ತಾಪತ್ರಯ ಆಗದಂತೆ ಹಿಂದಕೆ ಬಂದ್ವು. ಇದನ್ನು ಕಣ್ಣಾರೆ ಕಂಡ ನ್ಯಾಯಗಾರರು ಜುಂಜಪ್ಪನ ಸತ್ಯ ಕಂಡು ಆನಂದಪಟ್ಟರು. ಜುಂಜಪ್ಪನ ಸತ್ಯನೇ ಉಳೀಲಿ, ಸೊಂಡೂರು ಜುಂಜಪ್ಪನದಾಗಲಿ ಎಂದರು.

ಸೊಂಡೂರು ಜುಂಜಪ್ಪನಿಗೆ ಸೇರಿತು. ಸೊಂಡೂರು ಬೊಮ್ಮಕ್ಕನ ಅರಮನೆ, ಏಳು ಸುತ್ತಿನ ಕೋಟೆ, ಉಪ್ಪರಿಗೆ ಮನೆ, ಹಟ್ಟಿಯ ಕಲ್ಲು, ತಿಪ್ಪೆ ಗೊಬ್ಬರ, ಹಿತ್ತಲ ಹುಲ್ಲು ಜುಂಜಪ್ಪನ ಪಾಲಾಯ್ತು. ಆದರೂ ನ್ಯಾಯಗಾರ ಜುಂಜಪ್ಪ, ಈ ಯಾವ ಸ್ವತ್ತನ್ನೂ ನಾವು ಮುಟ್ಟೋನಲ್ಲ. ಆದರೆ ನಮ್ಮ ದನಗಳು ಮೇಯೋಕೆ ಅನುಕೂಲವಾಗಿ ಹುಲ್ಲುಗಾವಲು ಇರಲಿ ಅಂದನು. ಅದರಂತೆ ನ್ಯಾಯಗಾರರು ಸೊಂಡೂರು ಬೊಮ್ಮಕ್ಕನ ಹುಲ್ಲುಗಾವಲ ನ್ನು ಕಳುವಾರಹಳ್ಳಿ ಜುಂಜಪ್ಪನ ಹೆಸರಿಗೆ ಚೆಪ್ಪೋಡ ಹಾಕಿಸಿದರು. ಈ ಮೊದಲು ಬೊಮ್ಮಕ್ಕನ ಮಾತು ಕೇಳಿ ಜುಂಜಪ್ಪನ ಮೇಲೆ ಯುದ್ಧಕ್ಕೆ ಬಂದಿದ್ರಲ್ಲ, ಐದು ಜನ ತುಂಡು ಬೇಡರು ಕಣ್ಣಿ ಕಳಕೊಂಡಿದ್ರು. ಈ ಸ್ವಾಮಿ ಅವುರಿಗೂ ಕಣ್ಣು ಕಾಣುವಂಗೆ ಮಾಡಿದ. ಅವರೆಲ್ಲರೂ ಜುಂಜಪ್ಪನಿಗೆ ಶರಣಾದರು. ಮುಂದೆ ಮೂರು ತಿಂಗಳು ಜುಂಜಪ್ಪನ ದನಗಳು ಸೊಂಡೂರು ಕಾವಲಲ್ಲಿ ಮೇಯ್ದು, ಆಮೇಲೆ ಕಳುವೋರಹಳ್ಳಿ ಕಡೆಗೆ ಹೊರಟು ಬಂದವು.



ದ್ಯಾವನ ಸೀರ್ಯದೋರು ಹೋರಿಗೆ ಬಂದೈದಾರೆ
ಆವಿನೊಡೆಕಾರ ಮಲಗೈವನೆ । ಜುಂಜಪ್ಪ
ಆಲದ ಮರವೆ ತಲೆದಿಂಬು

ಅತ್ತ ಶರಣೆಂದು ಇತ್ತ ಶರಣೆಂದು
ಸುತ್ತಲ ದೇವುತರಿಗೆ ಶರಣೆಂದು । ಕಲ್ಲನಕುಂಟೆ
ಚಿತ್ರದೇವುರಿಗೆ ಶರಣೆಂದು

ಎತ್ತುಗಳ ಹೊಡೆಕೊಂಡು । ಹೂವಿನಕೋಲ ಹಿಡಕೊಂಡು
ಮುತ್ತಿನ ಕೋಲ ಹಿಡಕಂಡು ಜುಂಜಪ್ಪ
ಹೋರಿ ಜೂಜಿಗೆ ಕರೆದಾನು.

# ಮಾಮಗಳು ಮದ್ದಿಕ್ಕೀರು

ದೇವುರ ಊಟ. ಎಲ್ಲರೂ ಅಂಗಳದಲ್ಲಿ ಸಾಲಾಗಿ ಕುಂತರು. ಅವುಗಳ ಮಧ್ಯದಲ್ಲಿ ಮಾರಣ್ಣ ಮೈಲಣ್ಣನೂ ಕುಂತರು. ನಡುವೆ ಜುಂಜಪ್ಪ ಕುಂತ. ಬಂದಂತ ಜನಗಳಿಗೆಲ್ಲಾ ಊಟಾನೆ ಬಡಿಸಿದರು. ಸಾರನ್ನೆ ಬಿಡ್ತಾ ಬಂದರು. ಒಬ್ಬರು ಯಜಮಾನರು ಉಣ್ಣಾಕೆ ಇಕ್ಕಿ ಸಾರು ಬಿಡುತ್ತಿದ್ದರು. ಅರ್ಧಕ್ಕೆ ಪಂಕ್ತಿ ತುಂಬ್ತಾ ಬಂದು ಮಧ್ಯದಲ್ಲಿ ಇನ್ನೊಬ್ಬರು ಬಂದರು. ಹಿಂಗೆ ಕೈ ಬದಲಾದವು. ಆದರೆ ಜುಂಜಪ್ಪ, ಮಾರಣ್ಣ, ಮೈಲಣ್ಣರಿಗೆ ಅವುರ ತಂಗಿ ಮಾರಕ್ಕನೇ ಊಟ ಬಡಿಸಿದಳು. ಮುಂಜೆರಗು ತಲೆ ಮೇಲೆ ಇಳಿಬಿಟ್ಟುಕೊಂಡು ಅಳುತಲೇ ಅಣ್ಣಗಳಿಗೆ ಉಣ್ಣಕೆ ಇಕ್ಕಿಳು. ಮದ್ದು ಹಾಕಿ ಮಾಡಿದ್ರಲ್ಲ ಆ ಎಸರನ್ನೇ ಬಿಡುವಂತೆ ಒಳಗಡೆ ಅವುಳ ಗಂಡ, ಮೈದುನರು ತರಲೆ ತಗಿದರು. ಆಯಮ್ಮ ಇಕ್ಕದೇ ಹೋದರೆ ಉಳಿಗಾಲವಿಲ್ಲ. ಇಕ್ಕಕೂ ಮನಸ್ಸು ಬರಲಿಲ್ಲ. ಬೆನ್ನಾಗೆ ಹುಟ್ಟಿದ ಅಣ್ಣಗಳು ಇಂಥ ಇಕ್ಕಟ್ಟಿಗೆ ಮಾರಕ್ಕ ಸಿಕ್ಕಿಹಾಕಿಕೊಂಡ್ಲು. ಆದರೂ ಅವಳ ಗಂಡ ಮೈದುನರು ಬಿಡಬೇಕಲ್ಲ. ಇಂಥ ಕೆಲಸ ಮಾಡಸಲುವಾಗಿಯೇ ಹಾಲಬ್ಬ ಗೂಡಬ್ಬದ ನಾಟಕ ಆಡಿದ್ದು. ನೋಡುತಾರೆ. ಕರಡೇರ ಮುಂಡೆ ಏನು ಮಾಡುತಾಳೆ. ಅಣ್ಣಗಳ ಕಡಿಕೆ ವಾಲಿಕೊಂಡು ಬಿಡ್ತಾಳ ಅಂಬ್ತಾನ ಪಂಕ್ತಿಗೆಲ್ಲಾ ಒಬ್ಬ ಯಜಮಾನ ಅನ್ನ ಇಕ್ಕೊಂಡು ಬಂದ. ಎಸರು ಬಿಟ್ಟುಕೊಂಡು ಬಂದ. ಜುಂಜಪ್ಪನ ತಕೆ ಬರುತ್ತಿದ್ದವನು ಅಂಗೆ ಹೊಳ್ಳಿ ಹಿಂದಕೆ ಹೋದ. ಆಗ ತಂಗಿ ಮಾರಕ್ಕ ದುಗುಡದ ಮುಖದಿಂದ ಬಂದವಳೆ ಅಣ್ಣಗಳ ಹಗಲಿಗೆ ವಿಷದಡಿಗೆ ಬಡಿಸಿಬಿಟ್ಟು ಹಾಳು ದತ್ತೂರಿ ವಿಷವ ಹಾಕಿಬಿಟ್ಲು. ಜುಂಜಪ್ಪಗೆ ಗೊತ್ತಾಯಿತು. ಅವುನಿಗೂ ಬಾರಿ ಬೇಜಾರು ಆಯಿತು. ಎಲಾ ಕಂಬೇರ ತಿನ್ನ ಅನ್ನಕೆ ವಿಷ ಹಾಕುತೀರ ಅಂದಾನು. ಒಂದು ಮಿದಿಕೆ ಮಾಡಿ ಮೂಳಣ್ಣ ಅಂಬ್ತಾ ಒಂದು ನಾಯಿ ಇತ್ತು, ಜುಂಜಪ್ಪನ ತಾವ. ಅದು ಜುಂಜಪ್ಪ ಎಲ್ಲಿಗೇ ಹೋದರೂ ಬೆನ್ನಾಡಿ ಬಂದು ಬಿಡೋದು. ಈ ಸಾಲಿನೂ ಅಂಗೇ ಮಾಡ್ತು. ನಾಯಿಗೆ ಒಂದು ಮಿದಿಕೆ ಮಾಡಿ ಹಾಕಿದ. ತಿಂದುದ್ದೇ ಕೂಡಲೇ ಮಿಲಿಮಿಲಿ ಒದ್ದಾಡಿ ರಕ್ತ ಕಕ್ಕೆಂಡು ಸತ್ತುಹೋಗಿಬಿಡ್ತು ನಾಯಿ. ಜುಂಜಪ್ಪಗೆ ಶ್ಯಾನೆ ಬೇಜಾರಾತು. ಕಣ್ಣಾಗೆ ನೀರು ತುಂಬಿಕೊಂಡ. ತಮ್ಮಂದಿರಿಗೆ ಉಣ್ಣರಪ್ಪ, ದೇವರು ಕೊಟ್ಟದ್ದು.

ಪರಮೇಶ್ವರನ ಇಕ್ಕಿದಂಗೆ ಆಗಲಿ ಅಂದು ಮೂರು ಜನನೂ ಉಂಡರು. ಅಷ್ಟು ಹೊತ್ತಿಗೆ ನಾಯಿ ಸತ್ತು ಹೋಯ್ತು. ಅದನ್ನು ಕವಣೆ ತಗೊಂಡು ಹೊಡೆದ. ಆ ನಾಯಿ ಹೊಸಹಳ್ಳಿ ಕೆರೆ ಕೋಡಿಗೆ ಹೋಗಿ ಬಿತ್ತು. ಮಾರಣ್ಣ ಮೈಲಣ್ಣರನ ಕೂಡಿಕೊಂಡು ಬಂದ ಜುಂಜಪ್ಪ ಶ್ಯಾನೆ ದುಃಖ ಮಾಡುತಾನೆ. ತಮ್ಮಗಳು ಸಂಕಟನೆ ಮಾಡುತಾರೆ. ಹಾಳಾದ್ದು ದತ್ತೂರಿ ಹಾಲು ವಿಷ ಏರಿ ಹೊಟ್ಟೆಗೆ ತಿರುವುತ್ತದೆ. ಮೂವರೂ ಸೇರಿಕೊಂಡು ನಾಯಿ ಗುಡ್ಡೆ ಮಾಡಿದರು.

ಅಂಗೆ ಮುಂದಕೆ ಬಂದ್ರು. ಸಂಕಟ ತಡಕಳ್ಳಕೆ ಆಗಲಿಲ್ಲ. ಹೊನ್ನಟ್ಟಿ ಆಲೇಗೌಡನ ಆರಕದ ಬಣವೆ ಕಾಣ್ತು. ಮುಂದೆ ಕಾಲಿಕ್ಕದಂಗಾಯ್ತು. ಮೂವರೂ ಆರಕದ ಬಣವೆಗೆ ಸೇರಿಕೊಂಡರು. ದತ್ತೂರಿ ಉರಿ, ಹೊಟ್ಟೆಗೆ ಬೆಂಕಿಯಾಗಿ, ಅದು ಬಣವೆಗೆ ಹತ್ತಿಕೊಂಡು ಬಿಡ್ತು. ಮೂವರು ಅಣ್ಣ ತಮ್ಮಗಳೂ ಆ ಹುಲ್ಲು ಬಣವೆ ಬೆಂಕಿಲಿ ದಗದಗ ಅಂಬ್ತಾ ಉರಿದು ಹೋದರು.


ಸ್ವಾಮಿ ಜುಂಜಪ್ಪ ಸತ್ಯವಂತ. ಅಷ್ಟಕ್ಕೆ ಸುಮ್ಮನಾಗಲಿಲ್ಲ. ಸತ್ತು ಏಳು ದಿನಕ್ಕೆ ಮತ್ತೆ ಹುಟ್ಟಿಬಂದ. ಮತ್ತೆ ನರಮನುಸನ ರೂಪು ತಾಳಿದ. ತನ್ನ ದನ ತಬ್ಬಲಿ ಆದವಲ್ಲ ಅಂತ ನೋಡಿದ. ದನವೆಲ್ಲಾ ಮರಡಿ ಗುಡ್ಡದ ಬೈಲಾಗೆ ಹಂಡೇನಹಳ್ಳಿ, ತಾವರೆಗೆರೆ, ಚಿಕ್ಕಸಂದ್ರ ಕಾವಲು, ನಿಂಬೆಮರಹಳ್ಳಿ ಬಯಲು, ತುಪ್ಪದ ಕೊಣ, ಕೂರೇಹಳ್ಳಿ ತಗ್ಗು, ಜಾನಕಲ್ಲು ತಗ್ಗು ಇಲ್ಲೆಲ್ಲಾ ಕೆದರಿಕೊಂಡು ಮೇಯ್ತಿದ್ವು. ಬಡಮೈಲ ಮುಂದೆ, ಪಂಚಕಲ್ಯಾಣಿ ಹಿಂದೆ ನಡುವೆ ವೀರಭದ್ರ, ಅಕ್ಕರೆಂಬೆ, ಚಿಕ್ಕರೆಂಬೆ ದನಗಳನ್ನು ಜೋಪಾನ ಮಾಡುತಾವೆ. 'ಅಣ್ಣ ಮಲಗೆವನೆ' ಅಂಬ್ತಾ ಎಲ್ಲರಿಗೂ ಹೇಳುತಾವೆ.

ದನಗಳು ಹಾಯಾಗಿ ಮೇಯುತ್ತಿರುವುದನ್ನು ಕಂಡು ಜುಂಜಪ್ಪಗೆ ಮರುಜೀವ ಬಂತು. ಮರಡಿ ರಂಗಪ್ಪನ ಗುಡ್ಡದ ಮೇಲೆ ನಿಂತುಕೊಂಡು, ನೋಡುತಾನೆ ಕಂಬೇರಹಟ್ಟಿಲಿ ಮಾವುಗಳು ನಲಿತಾರೆ. ಗೆಜ್ಜೆ ಕೋಲಾಟ ಆಡುತಾರೆ. ತಂಗಿ ಇದ್ಲಲ್ಲ ಮಾರಕ್ಕ ದುಕ್ಕನೆ ಮಾಡಿಕೊಂಡು ಆರಕನೇ ಬೀಸುತಾಳೆ, ನ್ಯಾವಣೆ ಕುಟ್ಟುತಾಳೆ. ಅವುಳ ಸಂಕಟ ಬೀಸಾಕಲ್ಲಾಗಿ ಹರಿತದೆ. ನೋಡಿದ ಜುಂಜಪ್ಪ 'ಎಲಾ ಸೋದರಮಾವುಗಳ, ಇಂಥ ಕೇಡು ಬಗೆಯೋ ವಿಷ ಜಂತುಗಳು ನಿಮ್ಮಂತವರು ಈ ಭೂಲೋಕದ ಮೇಲೆ ಇರಲೇಬಾರದು' ಅಂದಾನ ಸ್ವಾಮಿ ತಂಗಿಗೆ ಸಮಾಧಾನ ಹೇಳಿಬಿಟ್ಟು ಹೊರಕೆ ಕರೆದನು. ಆಗ ಆಯಮ್ಮ ಆರು ತಿಂಗಳ ಗರ್ಭಿಣಿ. 'ನಿನ್ನಿಂದ ಕಂಬೇರ ವಂಶ ಹೊಸದಾಗಿ ಬೆಳೆಯಲಿ' ಎಂದುಬಿಟ್ಟು ಕಂಬೇರಹಟ್ಟಿಗೆ ಉಕ್ಕಿನ ಉರಿಬಾಣ ಬಿಟ್ಟ. ಕಣ್ಣು ಮುಚ್ಚಿ ಕಣ್ಣು ಬಿಡೋ ಹೊತ್ತಿಗೆ

ಕಂಬೇರಹಟ್ಟಿ ಹತ್ತಿಕೊಂಡು ಉರಿದು ಬೂದಿಯಾತು. ಆಗ ಸ್ವಾಮಿ ಮರಡಿ ರಂಗಪ್ಪನ ಗುಡ್ಡದಿಂದ ಇಳಿದುಬಂದ. ಆಮೇಲೆ ಇಚ್ಛಾಮರಣ ಪಡೆದು ಕಳುವಾರಹಳ್ಳಿ ಬಯಲಾಗೆ ಕಂಬೇರಹಟ್ಟಿ ಪಕ್ಕದಾಗೆನೆ ಕಂಬೇರ ಮೋಸ ಎಲ್ಲರಿಗೂ ತಿಳಿಲಿ ಅಂಬುತಲೇ ಸಾರಿ ಸಾರಿ ಹೇಳಬೇಕು ಅಂಮ್ತಾಲೇ ಕಾಯಬೆರಸೆ ಸಮಾಧಿಯಾದ. ಈಗಲೂ ಕಂಬೇರ ಮನೆಗಳು ಹಾಳಾಗಿರೋದು, ಹಾಳು ಮನೆ ಕಲ್ಲುಗಳು ಹಂಗಂಗೆ ನಿಂತಾವೆ. ಅದರ ನಡುವೆ ಸ್ವಾಮಿ ಜುಂಜಪ್ಪನ ಸಮಾಧಿ ಇದೆ. ಕುಂಚ ಒಕ್ಕಲಿಗರು ಗೊಲ್ಲಾಳಿಕೆನೂ ಇಬ್ಬರೂ ಪೂಜಿಸಿಕೊಂಡು ಅವ್ರೆ. ಅಳುನೋರು ಕರಡೇನರು ಅಣ್ಣತಮ್ಮಗಳನೆ ಹೆಣ್ಣು ಕೊಡಾದು ತರಾದು ಒಂದಿಲ್ಲ. ಅಟೇಯ. ಉಳಿದೆಲ್ಲಾ ಒಂದೇ ಭಾವಣಿಕೆ. ಜುಂಜಪ್ಪನ ಗುಡ್ಡೆಗೂ ಅಷ್ಟೆ ಹೊತ್ತಾರೆ ಮೊದಲ ಪೂಜೆ ಅಳುವಿನವರದೆ. ಆಮೇಲೆ ನಮ್ಮದು. ದೀಪಾವಳಿಲಿ ದೊಡ್ಡ ಜಾತ್ರೆ ಸೇರುತ್ತೆ. ಬೇವಿನಹಳ್ಳಿ ಸುತ್ತಲ ದೇವರೆಲ್ಲಾ ಜುಂಜಪ್ಪನ ಗುಡ್ಡೆತಾಕೆ ಬಂದು ಗುಡಿದುಂಬಿಸಿ ಮಂಗಳಾರತಿ ಮಾಡಿಸಿಕೊಂಡು ಮೆರವಣಿಗೇಲಿ ಅವರವರ ಗುಡಿತಾಕೆ ಹೋಗುತಾವೆ. ಯುಗಾದಿ ಹಬ್ಬದ ದಿನವೂ ಆಟೆ ಬಾಳ ಜನ ಸೇರುತಾರೆ. ಪ್ರತಿ ಸೋಮವಾರ ಜುಂಜಪ್ಪನಿಗೆ ಪೂಜೆ. ಆವೊತ್ತು ಆಟೆ. ದೂರದೂರದ ಕಡೆಯಿಂದಲೂ ಬಂದು ಪೂಜೆ ಮಾಡಿಸಿಕೊಂಡು ಹೋಗುತಾರೆ. ಈಗ ಕಳುವಾರಹಳ್ಳಿಗೆ ಬಸ್ಸು ಬರುತ್ತೆ. ಇಲ್ಲಂದ್ರೆ ಕಳುವರಹಳ್ಳಿ ಗೇಟಿಗೆ ಇಳಿದ್ರು ಒಂದು ಮೈಲಿ ನಡಕೊಂಡು ಬರಬೇಕು ಸ್ವಾಮಿ ಗುಡ್ಡೆತಾಕೆ. ಅದರ ಪಕ್ಕದಲ್ಲೆ ಜುಂಜಪ್ಪನ ನಾಯಿ ಕಲ್ಲುಗುಡ್ಡೆನೂ ಅದೆ. ಅದಕೂ ಜನ ಶರಣು ಮಾಡುತಾರೆ.

ಉಪ್ಪರಿಗೆ ಮನೆಯಾಗೆ ಉಕ್ಕುತ್ತ ಮಳ್ಳುತ್ತ
ಹತ್ತೂ ಒಲಿಗುಂಡನೆದೆಗವಚಿ
ಹತ್ತು ಒಲಿಗುಂಡನೆದೆಗವಚಿ । ಮಾವನೋರ
ಮದ್ದಿನ ಅಡಿಗೆ ಮಾಡೆವರೆ.

# ಮರಣೋತ್ತರ




ಅಪ್ಪ ಬಸವಣ್ಣ ಒಪ್ಪಗಾರ ಕಾಣೋ
ಅಪ್ಪನರಮನೆ ಅಪರಂಜಿ
ಅಪ್ಪನರಮನೆ ಅಪರಂಜಿ । ಬೆಳಕಾದೋ
ಸಿಕ್ಕರಂಗಯ್ಯಾ ಪಟವೇರೋ ॥

# ಬಡ ಚಿತ್ತಮ್ಮನ ಭಕ್ತಿ

ಜುಂಜಪ್ಪ ಸತ್ತ ಏಳು ದಿನಕ್ಕೆ ದೇವರಾದ. ಅವುನು ಮತ್ತೆ ಹುಟ್ಟಿ ಬಂದ ಅಂತಲೂ ಕರೆತಾರೆ. ಜುಂಜಪ್ಪನ ಪೂಜಬೇಕು ಅಂಬುತಾ, ಅವನ ಹಿರೇರು ಮಾತಾಡಿಕೊಂಡು, ಪೂಜಿಕೊಂಡರು. ಕಳವಾರಹಳ್ಳಿಲಿ, ಅವುನ ಮೊದಲು ಪೂಜೆ ಆತು. ಜುಂಜಪ್ಪನ ತಾತುಗಳು ಇದ್ದರಲ್ಲ ಬಕ್ಕತಲೆ ಚಿತ್ತಯ್ಯ, ಬರಿತಲೆ ಚಿತ್ತಯ್ಯ, ಮಾಪಲ್ಲಿ ಚಿತ್ತಯ್ಯ, ಘನಗುಡಿ ಚಿತ್ತಯ್ಯ, ಮೋಪಲ್ಲಿ ಚಿತ್ತಯ್ಯ ಇವರೆಲ್ಲರೂ ಸ್ವಾಮಿ ಜುಂಜಪ್ಪನನ್ನು ಪೂಜಿಸಿಕೊಂಡರು. ಹೊನ್ನಟ್ಟಿ ಆಲೇಗೌಡರ ಮಕ್ಕಳಾದ ದೊಡ್ಡಾಲ, ಚಿಕ್ಕಾಲರೂ ಜುಂಜಪ್ಪನ ಹಿರಿಯಣ್ಣ ಅಂಬ್ತಾಲೇ ಪೂಜಿಸಿಕೊಂಡರು. ಇವರಿಗೆಲ್ಲಾ ಚಿಕ್ಕೋನು ಇದ್ದನಲ್ಲ ಜುಂಜಪ್ಪನ ಸಣ್ಣತಾತ ಪೂಜಾರಿ ಚಿತ್ತಯ್ಯ, ಇವನನ್ನು ಜುಂಜಪ್ಪನ ಪೂಜಾರಿಯಾಗಿ ಪಟ್ಟಕಟ್ಟಿರು. ಚಿಕ್ಕದೇವರಹಟ್ಟಿ ಇತ್ತಲ್ಲ ಜುಂಜಪ್ಪನ ನೆಲಮನೆ, ಪೂರ್ವಿಕರ ಊರು, ಅಲ್ಲೊಂದು ಜುಂಜಪ್ಪನ ಗುಡಿ ಕಟ್ಟಿ, ಸ್ವಾಮಿ ಜುಂಜಪ್ಪನ ಪ್ರತಿಷ್ಠೆ ಮಾಡಿಸಿ, ಗದ್ದಿಗೆ ಮಾಡಿರು. ಕಳುವೊರಹಳ್ಳಿಗೂ ನಡೆದುಕೊಳ್ಳುತ್ತಿದ್ದರು. ಅಲ್ಲಿನೂ ಪೂಜಿಸಿಕೊಳ್ಳುತ್ತಿದ್ದರು.

ಹಿಂಗಿರಬೇಕಾದರೆ ಚಿಕ್ಕದೇವರಹಟ್ಟಿಗೆ ಒಂದು ಹೆಣ್ಣು ಮಗಳು ಋತುಮತಿಯಾಗಿಬಿಟ್ಟು, ಹಟ್ಟಿಗೆ ಹೊಲೆಸೂತಕ ಬೆರೆತುಹೋಗಿಬಿಡ್ತು. ಸ್ವಾಮಿ ಜುಂಜಪ್ಪಗೆ ಹೊಳೆ ತೆಗೆಸಿ, ಗಂಗಾಸ್ನಾನ ಮಾಡಬೇಕಾದ ಸ್ಥಿತಿ ಬಂತು. ದೇವರಿಗೆ ವರ್ಷಕ್ಕೊಂದು ದಪ ಹೊಳೆ ತೆಗೆಯೋದು ನಮ್ಮ ಗೊಲ್ಲರ ಸಂಪ್ರದಾಯ. ಹಿಂಗಿದ್ದಾಗ ಏನಾತಪ್ಪ ಅಂದ್ರೆ, ಗಿಡ್ಡಾರೇಗೌಡ ಅಂಬೋನು ಇದ್ದ. ಅವುನೂ ಊರಿಗೆ ಮಿಂಡಾಳು. ಅವನದೊಂದು ಮಾತಿಲ್ಲದೆ ಏನೂ ಕೆಲಸ ಮಾಡಂಗಿರಲಿಲ್ಲ. ಅವುನ ಯಾವುದೋ ಸೀಮೆಗೆ ವ್ಯಾಪಾರಕ್ಕೆ ಹೋಗಿದ್ದ. ಅವನು ಬರೋವರೆಗೂ ದೇವರನ್ನು ಹೊಳೆಗೆ ಕರೆದುಕೊಂಡು ಹೋಗಂಗಿಲ್ಲ. ಹಿಂಗೆ ಇರಬೇಕಾದ್ರೆ ಸ್ವಾಮಿ ಜುಂಜಪ್ಪನಿಗೆ ಗಿಡ್ಡಾರೆಗೌಡನ ಸೊಕ್ಕಿನಿಂದ ಹಟ್ಟಿಲಿ ದೇವುರ ಧರ್ಮಕಾರ್ಯ ನಿಲ್ಲುತಾವೆ ಅಂದುಬಿಟ್ಟು, ಏನು ಮಾಡಿದ ಅಂದ್ರೆ, ಸ್ವಾಮಿ ಜುಂಜಪ್ಪ ಮರಡಿಗುಡ್ಡಕ್ಕೆ ಬಂದುಬಿಟ್ಟ. ಬಂದನು ಬಂದಂಗೆ ಚಿಕ್ಕದೇವರಹಟ್ಟಿ ಇತ್ತಲ್ಲ, ಅವುನ



ಬೇವಿನಹಳ್ಳಿ ಕದರಯ್ಯನ ಮನೆಯಲ್ಲಿರುವ ಪಟ್ಟದ ಅರೆ



ಬೇವಿನಹಳ್ಳಿಯಲ್ಲಿರುವ ಜುಂಜಪ್ಪನ ದೇವಾಲಯ

ತಾತಗಳ ಊರು, ಅವರೆ ಧರ್ಮಕಾರ್ಯ ಮೀರುತಾ ಇದ್ದಾರೆ ಅಂದುಬಿಟ್ಟು ಉಕ್ಕಿನ ಉರಿಬಾಣ ಬಿಟ್ಟು, ಅದು ಮೂಡೆತರ ಮೂರು ಬೆಂಕಿ ಉಂಡೆಯಾಗಿಬಿಟ್ಟು ಉರುಳಿಕೊಂಡು ಉರುಳಿಕೊಂಡು ಒಂದೇ ಸಮಕೆ ಚಿಕ್ಕದೇವರಹಟ್ಟಿ ಕಡೆಕೆ ಬರುತಾವೆ. ಹಟ್ಟಿ ಜನವೆಲ್ಲಾ ದನಿನರು ದನಿಗೆ, ಕುರಿಯೋರು ಕುರಿಗೆ, ಹೊಲ ಮನೆ ಅಂಬ್ತಾ ಎಲ್ಲರೂ ಹೊರಗೆ ಹೋಗಿದ್ದರು. ಅಂತ ಕಾಲಕ್ಕೆ ಆ ಹಟ್ಟಿಲಿ ಇದ್ದವಳು ಅಂದರೆ ಬಡಚಿತ್ತಮ್ಮ. ಅವುಳು ಬಾಣಂತಿ, ಹಸುಮಗು ತೊಟ್ಟಿಲಾಗೆ ಆಡುತಿದೆ. ಜೊತೆಗೆ ಹಟ್ಟಿಯೊಳಗೆ ಮುದುಕರು, ಮಕ್ಕಳು, ಮರಿ ಅವೆ. ಆಡು, ಕುರಿ ಮರಿಗಳಿವೆ. ಯಾವಾಗ ಬಡಚಿತ್ತಮ್ಮ ಎದ್ದು ಹೊರಕ್ಕೆ ಹೋಗಾಕೆ ಆಚೆಗೆ ಬಂದ್ಲು ಹಟ್ಟಿಯಿಂದ ಹೊರಕೆ ಬಂದು ಬೇಲಿ ಮರೆಗೆ ಕುಂತು ಮೂತ್ರ ಹುಯ್ಯುತಿರುವಾಗ ಗುಡ್ಡದ ರಂಗಪ್ಪನೇ ಗುಡ್ಡದ ಕಡೆ ನೋಡಿದಳು. ನೋಡುತಾಳೆ, ನೋಡು ನೋಡುತಲೇ ಮೂರು ಮೂಡೆಗಾರದ ಬೆಂಕಿ ಉಂಡೆ ರೋಣುಗಲ್ಲಿನಂಗೆ ಉಳ್ಳುಳ್ಳಿಕೊಂಡು ಬರುತಾ ಅದೆ. ಇದೇನಪ್ಪ ಈ ಪಾಟಿ ಬೆಂಕಿ ಉಂಡೆ ಅಂದು ಹೆದರಿದಳು. ಅದು ಉಳ್ಳುಳ್ಳಿಕೊಂಡು ಬರುತಾಲೇ ಅದೆ. ಅಲಾ ಅಲಾ ಈ ಬೆಂಕಿ ಉಂಡೆ ಏನಾದರೂ ಊರಿಗೆ ಬಂದರೆ ಹಟ್ಟಿ ಉಳಿದೀತಾ? ಕಣ್ಣು ಮುಚ್ಚಿ ಕಣ್ಣು ತೆಗೆಯೋದರೊಳಗೆ ಹಟ್ಟಿ ಹಟ್ಟಿನೇ ಭಸ್ಮವಾಗಿಬಿಡುತ್ತೆ ಅಂದಳು. ಬೆಂಕಿ ಉಂಡೆಗೆ ಅಡ್ಡಲಾಗಿ ನಿಂತು ತನ್ನ ಉಟ್ಟ ಸೀರೆಯ ಮುಂಜೆರಗಿತ್ತಲ್ಲ ಅದನ್ನೇ ಹಾಸಿಬಿಟ್ಟು ಭಕ್ತಿಯಿಂದ ಸ್ವಾಮಿ ಜುಂಜಪ್ಪನಿಗೆ ಶರಣುಮಾಡಿಬಿಟ್ಟು, ಕೇಳಿಕೊಂಡ್ಲು 'ಸ್ವಾಮಿ, ಕೈಲಾಗದವರು ಅವರೆ, ಬಾಣಂತಿಯರವರೆ, ಬಸಿರಿಯರು, ಶಿಶು ಮಕ್ಕಳು ಅವೆ. ಯಾರದೋ ತಪ್ಪಿಗೆ ನೀನಿಂಗೆ ಬೆಂಕಿ ಉಂಡೆಯಾಗಿ ಬಂದು, ಹಟ್ಟಿ ಸುಟ್ಟರೆ ಏನು ಪ್ರಯೋಜನ ಸ್ವಾಮಿ? ಅದೇ ನಿನ್ನ ಹರಕೆ, ನಾನು ತೀರಿಸುತೀನಪ್ಪ, ಶಾಂತನಾಗು ತಂದೆ' ಅಂಬ್ತಾ ಸೆರಗಾಸಿ ಕೈಮುಗಿಯುತ್ತಾ ನಿಂತಳು.

ಜುಂಜಪ್ಪ ದೊಡ್ಡನು ಬಡಚಿತ್ತಮ್ಮನ ಭಕ್ತಿಗೆ, ಜನೋಪಕಾರಿ ಬುದ್ದಿಗೆ ಮೆಚ್ಚಿದ. ಬಡಗ ಮುಂದಾಗಿ ಬರುತ್ತಿದ್ದ ಬೆಂಕಿ ಉಂಡೆಯನ್ನು ತೆಂಕಣ ದಿಕ್ಕಿಗೆ ತಿರುಗಿಸಿ ಸ್ವಾಮಿ ಮರೆಯಾದನು.

ಯಾವಾಗ ಚಿತ್ತಮ್ಮನಿಗೆ ಇಂಥದೊಂದು ಪವಾಡ ಕಂಡಳೋ ಮನೆಗೆ ಬರುತಾಲೂ ಹಿರಿಯರೊಂದಿಗೆ ಈ ಸಂಗತಿನಾ ತಿಳಿಸಿದಳು. ಏನಾರ ಆಗಲಿ ಮೊದಲು ಜುಂಜಪ್ಪನನ್ನು ಹೊಳೆಗೆ ತೆಗೆದು ಹಬ್ಬ ಮಾಡಬೇಕೆಂದು ಚಿಕ್ಕದ್ಯಾವರ ಹಟ್ಟಿ ಜನ ತೀರ್ಮಾನ ಮಾಡಿದರು. ಯಾರೂ ಜುಂಜಪ್ಪ ದೇವರಿಗೆ ಗಂಗಾಸ್ನಾನ ಮಾಡಿಸಲು ಮನಸ್ಸು ಮಾಡಲಿಲ್ಲ, ಮುಂದೆ ಬರಲಿಲ್ಲ. ಎಂಟು ದಿನ ಕಳೀತು, ಹತ್ತು ದಿನ ಕಳೀತು. ಬಡಚಿತ್ತಮ್ಮಗೆ ಅದೇ ಯೋಚನೆ. ಹಿಂಗೇ ಕೆಲವು ದಿನ ಕಳೆದವು. ಒಂದು ದಿನ ಚಿತ್ತಮ್ಮ ಮಗುವನ್ನು ಗುಬ್ಬದಲ್ಲಿ ಕೂರಿಸಿ

ಬಿಟ್ಟು ಮನೆಗೆ ಕೆಲಸ ಮಾಡ್ತಾ ಇದ್ದಳು. ರವಾಟು ಹೊತ್ತಾದ ಮೇಲೆ ತಿರುಗಿ ಹೊರಕೆ ಬಂದು ನೋಡುತಾಳೆ, ಮಗು ಇತ್ತಲ್ಲ ಅದರ ತಲೆ ಮ್ಯಾಲೆ ಒಂದು ಸರ್ಪ ಸುತ್ತಾಕಿಕೊಂಡು, ಹೆಡೆ ಎತ್ತಿಕೊಂಡು ನಿಂತುಬಿಟ್ಟೈತೆ. ಬಡಚಿತ್ತಮ್ಮಗೆ ಪ್ರಾಣ ಹೋದಂಗಾಯ್ತು. ನಿಂತ ಕಡೇಲಿ ಎರಡೂ ಕೈಯನೂ ಎತ್ತಿ ಕೈ ಮುಗಿದು ಹೀಗೆ ಪ್ರಾರ್ಥಿಸಿಕೊಂಡಳು 'ಸ್ವಾಮಿ ನಾಗಪ್ಪ ನಿನ್ನ ಹರಕೆ ನನ್ನ ಮೇಲಿದೆ, ತೀರಿಸುತೀನಿ. ಅದಕೂ ಮೊದಲು ನನ್ನ ಕಂದನಿಗೆ ಏನೂ ಮಾಡಬೇಡಪ್ಪ' ಅಂದುಬಿಟ್ಟು ಕೈಮುಗಿದಳು. ಸ್ವಲ್ಪ ಹೊತ್ತಾದ ಮೇಲೆ ಸರ್ಪರಾಜ ಅವುನ ಪಾಡಿಗೆ ಇಳಿದು ಹೋಗಿಬಿಡ್ತು. ಆಮೇಲೆ ಮಗುವಿನ ಹತ್ತಿರ ಹೋಗಿ ನೋಡುತಾಳೆ, ಮಗು ನಿದ್ರೆ ಬಂದಂಗೆ ಬಂದು ಮಲಗಿಬಿಟ್ಟೈತೆ. ಮಗು ಮಲಗೈತೆ, ಆವಾಗ ಏಳುತ್ತೆ, ಈವಾಗ ಏಳುತ್ತೆ, ಅಂಬ್ತಾ ತಿಳಿದುಕೊಂಡು ಚಿತ್ತಮ್ಮ ಅವುಳ ಪಾಡಿಗೆ ಇದ್ದಳು. ಸಂಜೆ ಆತು. ಕತ್ತಲಾಯ್ತು, ಬೆಳಕೂ ಹರಿತು. ಮಗು ಏಳಲಿಲ್ಲ. ಮೂರು ಹಗಲು ಮೂರು ಇಳ್ಳು ಆದರೂ ಮಗು ಮಾತ್ರ ಜಪ್ಪೆನ್ನಲಿಲ್ಲ. ಇದೇನಪ್ಪ ಅಂದು ಎಲ್ಲರೂ ಸೇರಿ ನೋಡಲಾಗಿ ಮಗು ಸತ್ತು ಹೋಗಿರುವುದು ತಿಳಿಯಿತು.

ಕುಳವಾಡಿಗಳು, ಬಂಧು-ಬಳಗ ಎಲ್ಲಾ ಸೇರಿರು. ಮಗು ಸತ್ತು ಹೋತು ಅಂಬ್ತಾ ವಿಪರೀತ ಅತ್ತರು. ಎಲ್ಲರೂ ಸಮಾಧಾನ ಮಾಡಿರು. ಇನ್ನೇನು ಮಾಡಾದು, ಆ ಮಗುವಿನ ಋಣ ಅಷ್ಟೇನೆ, ಅದು ಪಡೆದುಕೊಂಡು ಬಂದದ್ದು ಅಷ್ಟೇನೆ. ಯಾರು ಏನು ಮಾಡಾಕಾಗುತ್ತೆ ಅಂಬ್ತಾ ಒಬ್ಬರಿಗೊಬ್ಬರು ಸಮಾಧಾನ ಮಾಡಿದರು.

ಸರಿ, ಸತ್ತ ಸೂತಕ ಒಳ್ಳೇದಲ್ಲ ಅಂದುಬಿಟ್ಟು ಮಗುವನ್ನು ಮಣ್ಣು ಮಾಡಿ ಹಾಲು-ತುಪ್ಪ ಬಿಡಬೇಕೆಂದು ತೀರ್ಮಾನಿಸಿದರು. ಬಂಧು-ಬಳಗಕ್ಕೆಲ್ಲ ಹೇಳಿಕಳಿಸಿರು. ಆಗ ಏನಾತಪ್ಪಾಂದ್ರೆ ಮೂಡು ಮುಂದಾಗಿ ಹೋಗಿ ಅವುರ ತಾತುಗಳ ಸಮಾಧಿ ಇರೋ ಜಾಗದಲ್ಲೆ ಗುಡ್ಡೆ ಮಾಡಬೇಕೆಂದು ಗುಡ್ಡೆ ತೆಗೆಯಲು ಮೂರು ಆಳುಗಳನ್ನು ಕರೆಸಿ ತೆಗೆಸಿದರು. ಹಿರಿಯರನ್ನು, ಅಪ್ಪ ಅಮ್ಮಗಳ ಕರಕೊಂಡು ಬಂದು ಮಗುವನ್ನು ಮೊಖ ತೊಳೆಸಿ, ವಿಭೂತಿ ಕುಂಕುಮವಿಟ್ಟು ಧೂಪ-ದೀಪ ಹಾಕಿರು. ಮಗುವನ್ನು ಎತ್ತಿಕೊಂಡು ಸಮಾಧಿಹತ್ತಿರ ಬಂದರು. ಬಂಧು-ಬಳಗ ಕೂಡಿಕೊಂಡು ಕೊನೆ ಸಲ ಮಗುವಿನ ಮೊಕ ನೋಡಿ ಮಣ್ಣು ಹಾಕಿಬಿಡಿರಿ ಅಂದರು. ಬಡಚಿತ್ತಮ್ಮ ದುಃಖನೇ ಮಾಡ್ತಾಳೆ. ಪರಮೇಶ್ವರನ ನೆನೆದು ಒಂದು ಬೊಗಸೆ ಮಣ್ಣು ಕೈಗೆ ಎತ್ತಿಕೊಂಡಳು. ದುಃಖ ಹೆಚ್ಚಾಗಿ ತಟ್ಟಾಡಿದಳು. ಎಲ್ಲಾರು ಹಿಡಕೊಂಡರು. ಆಗ ನೋಡುರೆ ಗುಂಡಿಯೊಳಗೆ ಮಲಗಿದ್ದ ಮಗ ಪಿಳಪಿಳನೆ ಕಣ್ಣು ಬಿಡ್ತು. ಎಲ್ಲರೂ ಮಗು ಕಣ್ಣುಬಿಡ್ತು, ಬದುಕೈತೆ ಎತ್ತಿಕೊಳ್ಳಿರಿ, ಎತ್ತಿಕೊಳ್ಳಿರಿ ಅಂಬ್ತಾ ಕೂಗಾಡಿದರು.

ಮಗನ ಮೇಲಕ್ಕೆ ಎತ್ತಿಕೊಂಡು ಬಂದರು. ತಾಯಿ ಕೈಗೆ ಮಗನ ಕೊಟ್ಟರು. ಅದಕ್ಕೆ ಆಯಮ್ಮ ಎದೆ ಕೊಟ್ಟಳು. ಮಗು ಆನಂದವಾಗಿ ಹಾಲು ಕುಡೀತು. ಬಂದುದರೆಲ್ಲ ಜುಂಜಪ್ಪನ ಮಹಿಮೆ ಅಂತಾ ಹೇಳಿಬಿಟ್ಟು ಮಗುವುನ ಸಮಾಧಿಮಾಡಾಕೆ ತೆಗೆದಿದ್ದರಲ್ಲ ಗುಂಡಿ, ಅದಕ್ಕೆ ಒಂದು ಕೋಳಿಯನ್ನು ತಂದು ಅದನ್ನು ಜೀವ ಬೆರಸೆ ಸಮಾಧಿ ಒಳಕೆ ಹಾಕಿ ಮಣ್ಣು ಮುಚ್ಚಿ ಊರೊಳಕೆ ಬಂದರು. ಹೊರಗಲ ಬಾವಿ ಹತ್ತಿರ ನೀರು ಮುಟ್ಟಿ, ಕೈಕಾಲು ಮುಖ ತೊಳಕೊಂಡು ಜುಂಜಪ್ಪನ ಗುಡಿಗೆ ಶರಣೆಂದು ಮನೆ ಸೇರಿಕೊಂಡರು.

ಮುಂದೆ ಅವರ ಅಣ್ಣಗಳು ಬಂದು ಮಗುವಿನ ಸೂತಕ ಅದೇ ಹುಟ್ಟು ಸೂತಕ ಕಳೆದರು. ತಾಯಿಗೂ ಮಗುರಿಗೂ ಚೆನ್ನಿಗೆ ಹಾಕಿ, ಮೂರು ಹುದಿ ತಾವ ಕೂರಿಸಿ, ಏಳಿಸಿ, ಬಡಚಿತ್ತಮ್ಮನ ಒಪ್ಪ ಮಾಡಿಕೊಂಡುರು. ದೇವರಿಗೆ ತಪ್ಪು ಕಾಣಿಕೆ ಕೊಟ್ಟು ಚಿತ್ತಮ್ಮನ ಒಳಕೆ ಕರಕೊಂಡರು.

ಶುಕ್ರವಾರದ ಪೂಜೆ ಹೊತ್ತು ಮೀರ್‍ಯಾವೆಂದು
ಕೆಟ್ಟ ಕುಲದೋನೆ ಬರಲಿಲ್ಲ। ಕಂಬೇರು
ಒಡಾಡುತಾರೆ ಉದಿಯಾಗೆ ।



# ಜುಂಜಪ್ಪನಿಗೆ ಶುದ್ಧಿ

ಜುಂಜಪ್ಪನ ಸತ್ಯ ಎಲ್ಲರಿಗೂ ತಿಳಿದಿತ್ತು. ಆದರೂ ಕೆಲವರು ಉದಾಸೀನ ಮಾಡಿರು. ಈಗ ಬಡಚಿತ್ತಮ್ಮನ ಸತ್ತ ಮಗನ ಬದುಕಿಸಿದ ಮೇಲಂತೂ ದೇವರ ಬಗ್ಗೆ ಭಯ-ಭಕ್ತಿ ಹೆಚ್ಚಾತು. ಈಗ ಒಂದು ಕ್ಷಣನೂ ತಡಮಾಡದೆ ಜುಂಜಪ್ಪನ ದೇವರಿಗೆ ಹೊಳೆ ತೆಗೆದು ಸೂತಕ ಕರ್ಮ ಮಾಡಬೇಕೆಂದು ಬಡಚಿತ್ತಮ್ಮ ತೀರ್ಮಾನ ಮಾಡಿಳು. ಅದರಂತೆ ಸಿರಾ ಪೇಟೆಗೆ ಆಳು ಕಳುಹಿಸಿ ಹಣ್ಣು, ಕಾಯಿ ದೀಪ ಧೂಪ ತರಿಸಿದಳು. ದವಸ ಧಾನ್ಯ ಸಿದ್ಧ ಮಾಡಿ ಇಟ್ಟುಕೊಂಡಳು. ದೇವರನ್ನು ಪರಸಮ್ಮನ ಕೆರೆಗೆ ಹೊಳೆ ತೆಗೆಯಾಕೆ ತಗೊಂಡು ಹೋಗಬೇಕು. ಅಡ್ಡಪಲ್ಲಕ್ಕಿ ರಡಿ ಮಾಡಲು ಹೇಳಿಕಳುಹಿಸಿದಳು. ವಾಲಗದವರು, ಪತ್ತಿನವರು, ನಡೆಮಡಿ ಹಾಸೋರನ್ನೆಲ್ಲಾ ಬರ ಹೇಳಿದಳು. ಇದರಲ್ಲಿ ವೇಣುಕಲ್ಲು ಗುಡ್ಡದಮಲ್ಲ ಅಂಬೋ ಅರೇ ಬಡಿಯೋನು ಒಬ್ಬಿದ್ದ. ಬಲು ದಿಮಾಕುಗಾರ. ಅವುನ ಕರಕೊಂಡು ಬರಾಕೆ ಆಳು ಕಳುಹಿಸಿದರು. ಅವನ ಏನು ಮಾಡಿನಪ್ಪಾಂದ್ರೆ 'ಹೋಗು ಹೋಗರಯ್ಯ, ನಾನು ಯಾಕೆ ಬರಬೇಕು? ವರ್ಷಕ್ಕೊಂದು ಬಡ ಕುರಿ ಕೊಡುತಾರೆ. ಅವರೇಳಿದಾಗೆಲ್ಲಾ ರಾತ್ರೆಲ್ಲಾ ಅನ್ನ ನೀರಿಲ್ಲದೆ ಬಾಯಿ ಕಟ್ಟಿಕೊಂಡು ವಾದ್ಯ ಮಾಡದ? ಬರಲ್ಲ' ಅಂದ. ಇದನ್ನು ಕೇಳಿದ ಆಳುಗಳು ಬಂದೇ ಬರುವಂತೆ ಬಲವಂತ ಮಾಡಿದರು. ಆಗ ಗುಡ್ಡದಮಲ್ಲ ಏನು ಮಾಡಿನಪ್ಪ ಅಂದರೆ ಕರೆಯಾಕೆ ಬಂದಿದ್ರಲ್ಲ ಚಿಕ್ಕದೇವರಹಟ್ಟಿ ಗೊಲ್ಲರ ಅವರ ಇಬ್ಬರು ಹುಡುಗರನ್ನ ಕತ್ತೆ ಗೂಟಕ್ಕೆ ಕಟ್ಟಿಬಿಟ್ಟ. ಸರಿ ಪೂಜಾರಿ ಚಿತ್ತಯ್ಯ ಕಳುಹಿಸಿದನಲ್ಲ ಆಳುಗಳು ಮೂರು ದಿನವಾದರೂ ಬರಲಿಲ್ಲ. ಏನು ಸಮಾಚಾರ ಅಂಬ್ತಾ ಗಾಬರಿ ಬಿದ್ದ ಚಿತ್ತಯ್ಯ ತಾನೇ ಹೋಗಿ ನೋಡಿಕೊಂಡು ಬರಬೇಕೆಂದು ಹೊರಟ. ಸ್ವಲ್ಪ ದೂರ ಹೋದ. ಆಗ ಸ್ವಾಮಿ ಜುಂಜಪ್ಪನೇ ಪಂಜಿನ ದಾಸಯ್ಯನ ವೇಷದಲ್ಲಿ ಪ್ರತ್ಯಕ್ಷನಾಗಿ ಪೂಜಾರಿ ಚಿತ್ತಯ್ಯನ ಮಾತಾಡಿಸಿದ. ಆಗ ಪೂಜಾರಿ ಚಿತ್ತಯ್ಯ 'ಜುಂಜಪ್ಪನ ಜಾತ್ರೆಗೆ ಅರೇ ಬಡಿಯೋ ಮಲ್ಲನ ಕರೆಯಾಕೆ ಅಂಮ್ತಾ ಆಳು ಬಂದ್ರು, ಆದರೆ ಅವರ್‍ಯಾರೂನೂ ವಾಪಸ್ಸು ಬಂದೇ ಇಲ್ಲ. ಆದರೆ ಅವರುರನ್ನ ಕರಕೊಂಡು ನಾಳೆ ಸೋಮಾರ ದಿನ ಹೊತ್ತಿಗೆ ಮುಂಚೆ ಅರೇ ತಗೊಂಡು ಬಾ ಅಂಮ್ತಾ ಹೇಳಿಬಿಟ್ಟು ಬರಾಕೆ ಹೋಗ್ತಾ ಇದ್ದೀನಿ' ಅಂದನು. ಆಗ

ಪಂಜಿನ ದಾಸಯ್ಯ ಅಂದ. 'ಸ್ವಾಮಿ ನೀವು ಪೂಜಾರಪ್ಪ. ಜುಂಜಪ್ಪನ ತಲೆ ಮೇಲೆ ಹೂವಿಕ್ಕರು. ಅರೆ ಬಡಿಯೋರ ಕೇರಿಗೆ ಹೋಗಬಾರದು. ಬತ ಕೆಡುತ್ತೆ. ನಾನು ಹೋಗಿ ಅವುನ ಕರಕೊಂಡನು ಬರುತೀನಿ ನೀವು ಹೋಗಿ' ಅಂದ. ಆದರೂನೂ ಪೂಜಾರಿ ಚಿತ್ತಯ್ಯ 'ಹೋಗಯ್ಯೋ, ಅರೆಮಲ್ಲ ಸಾಮಾನ್ಯ ಆಸಾಮಿ ಅಲ್ಲ. ಹಿಂದೆ ಒಂದು ಸಾರಿ ಜುಂಜಪ್ಪನಿಗೆ ಮಾತು ಕೇಳದೆ, ಕೊನೆಗೆ ಅವುನ ಒಕ್ಕರಿಸಿಕೊಂಡ ಮೇಲೆ ಬಂದು ವಾದ್ಯ ಮಾಡಿದ. ಅವನ ಸವಾಸ ಕಷ್ಟ ಕಣಪ್ಪ, ನಾನೇ ಹೋಗುತೀನಿ' ಅಂದ. ಸ್ವಲ್ಪ ದೂರ ಮುಂದಕ್ಕೆ ಹೋದ. ಹೋದರೆ ಒಬ್ಬ ಸಾಬಿ ತರ ವೇಷ ಹಾಕಿಕೊಂಡು ಜುಂಜಪ್ಪನೇ ನಿಂತುಬಿಟ್ಟವನೆ. 'ಇದೇನಪ್ಪ ಸಾಬಿ' ಅಂದ್ರೆ ಅವುನ ಹೇಳುತಾನೆ 'ನಾನೂನೆ ಜುಂಜಪ್ಪನ ಭಕ್ತನೆ. ಅವುನ ಸೇವೆಗೆ ನನ್ನದೂ ಒಂದೀಟು ಕಾಣಿಕೆ ಇರಲಿ. ನೀವು ಪೂಜಾರಿಗಳು ದೇವುರ ತಲೆ ಮ್ಯಾಲೆ ಹೂವಿಕ್ಕರೊ. ಆದರಿಂದ ಅಸವಲ್ಲದ ಕೇರಿಗೆ ಹೋಗಬಾರದು. ಮತ್ತೆ ಸೂತಕ ತಗಲಿಕೊಂಡು ಬಿಡುತ್ತೆ. ದೇವರಿಗೆ ಸೂತಕ ಆದ್ರೆ ತೆಗಿಯಬಹುದು. ನಿಮಗ್ಯಾರು ತಗೀತಾರೆ? ಬೇಡ ಹೋಗಿ. ನಾನೇ ಹೋಗಿಬಿಟ್ಟು ಅರೇ ಬಡಿಯೋರನ್ನ ಕರಕೊಂಡು ಬರುತೀನಿ' ಅಂದ. ಯಾಕೋ ಪೂಜಾರಿ ಚಿತ್ತಯ್ಯನಿಗೆ ಅನುಮಾನ. ಇದೆಲ್ಲಾ ಅದೇ ಕಂಬೇರೇನಾದ್ರ ಮಾಡುವ ಆಟನಾ ಅಂಬುತಾ ಒಂದು ಸಾರಿ ನೋಡಿದ. ಮುಂದಕ್ಕೆ ಮೂರು ಹೆಜ್ಜೆ ಹಾಕಿದ. ಆ ಸಾಬಣ್ಣ ಹೇಳುತಾನೆ 'ಅಣ್ಣಾ ಗುಡ್ಡದಮಲ್ಲ ಅವುನು ಸಾಮಾನ್ಯದವನಲ್ಲ. ಅವುನ ಕರಕೊಂಡು ಬರೋದು ನಿನ್ನಿಂದ ಅಸಾಧ್ಯ. ನಾನು ಸ್ವಾಮಿ ಜುಂಜಪ್ಪನ ಕೃಪೆಯಿಂದ ಅವುನ್ನ ಮಾತಾಡಿಸಿಬಿಟ್ಟು ಕರಕೊಂಡು ಬರುತೀನಿ. ನಡಿ ನೀನು' ಅಂತ ದಾರಿಗೆ ಅಡ್ಡ ನಿಂತುಬಿಟ್ಟ. ಪೂಜಾರಿ ಚಿತ್ತಯ್ಯನಿಗೆ ಸ್ಯಾನೆ ಬೇಜಾರ ಆತು. 'ಎಲಾ ಸಾಬಿ ಇದರಲ್ಲಿ ನಿನ್ನದೇನು, ನೀನು ಅಸವಲ್ಲದವನು. ಬೆಂದದ್ದು-ಬೇಯದ್ದು, ದೊಡ್ಡದು-ಚಿಕ್ಕದು ಎಲ್ಲಾ ತಿಂಬಾನು. ನಿನ್ನ ಯಂಗೆ ನಂಬಾದು? ತುಪ್ಪದಂಗೆ ಮಾತಾಡಿರೂ ತುರುಕರನ್ನ ನಂಬಬಾರದು ಅಂಬ್ತಾರೆ. ಬೇಡಪ್ಪ ನೀನು ಹೋಗು ನನ್ನ ಮುಟ್ಟುಬ್ಯಾಡ. ನಾನೇ ಹೋಗಿ ನನ್ನ ಕೆಲಸ ಮಾಡಿಕೊಂಡು ಬರುತೀನಿ. ನನ್ನ ಆಳುಗಳ ಗತಿ ಏನಾಯಿತು ಅಂಬ್ತಾ ವಿಚಾರಣೆ ಮಾಡಬೇಕು' ಅಂದ.

ಆದರೂನೂ ಬಳ್ಳಾರಿ ಸಾಬಿ ದಾರಿ ಬಿಡಲಿಲ್ಲ. ಅಡ್ಡಲಾಗಿ ನಿಂತುಬಿಟ್ಟ. ಪೂಜಾರಿ ಚಿತ್ತಯ್ಯನಿಗೆ ಕೆಟ್ಟ ಕೋಪ ಬಂದುಬಿಡ್ತು. ಅವುನು ಏನು ಮಾಡಿನಪ್ಪ ಅಂದರೆ, ಅಲ್ಲೇ ಇದ್ದ ಒಂದು ಗುಂಡು ತಕ್ಕೊಂಡು ಸಾಬಿಗೆ ಬಿಟ್ಟ ನೋಡು, ಸಾಬಿಗೆ ಕಲ್ಲು ತಾಗದೆ, ಅದು ಅವುನ ಮಗ್ಗುಲಿಗೆ ಹೋಗಿ ಬೀಳ್ತು. ಆಗ ಜುಂಜಪ್ಪ ಹೇಳುತಾನೆ 'ಅಜ್ಜ ನಾನು ಜುಂಜಪ್ಪನೆ. ಆ ಅರೆ ಬಡಿಯೋ ಗುಡ್ಡಮಲ್ಲ ಬಲು ಅಸಾಧ್ಯ. ನೀನು ಮೊನ್ನೆ ಕಳುಹಿಸಿದ್ದ ಆಳುಗಳನ್ನ ಅವುನ ಕತ್ತೆಗೂಟಕ್ಕೆ ಕಟ್ಟಿಹಾಕಿಬಿಟ್ಟವನೆ. ಅವುನಿಗೆ ಗೊಲ್ಲರು ಅಂದ್ರೆ ಅವುನ ಶೆಪ್ಪಕ್ಕೆ

ಸಮಾನ. ಅಹಂಕಾರ ಬಂದುಬಿಟ್ಟೈತೆ. ಅವುನ ಸೊಕ್ಕ ಅಡಗಿಸಬೇಕು. ಹೋಗು, ನಾನು ಅವುನ ಸೊಕ್ಕು ಅಡಗಿಸಿಕೊಂಡು ತಪ್ಪುದಂಡ ಕಟ್ಟಿಸಿ, ತಪ್ಪು ಅಂತ ಅನ್ನಿಸಿ ಕರಕೊಂಡು ಬರುತೀನಿ' ಅಂದನು. ಆಗ ಪೂಜಾರಿ ಚಿತ್ತಯ್ಯನಿಗೆ ತಿಳೀತು ಜುಂಜಪ್ಪನ ಪವಾಡ. 'ನೀನು ಬಲು ಅಸಾಧ್ಯದವನು ಸ್ವಾಮಿ' ಅಂದುಬಿಟ್ಟು ಉದ್ದಕ್ಕೆ ಅಡ್ಡಬಿದ್ದು ಹಿಂತಿರುಗಿ ತನ್ನ ಊರಾದ ಚಿಕ್ಕದ್ಯಾವರಹಟ್ಟಿ ಸೇರಿಕೊಂಡುಬಿಟ್ಟನು.

ಇತ್ತ ಜುಂಜಪ್ಪ ಗುಡ್ಡದಮಲ್ಲನ ಮನೆ ತಕೆ ಹೋದನು. ಅವುನ ಜಂಬ ಏನು ಹೇಳುತೀರದು, ದರ್ಬಾರ ಏನು ಕೇಳುತೀಯ? ಅವುನ ಹಟ್ಟಿ ಅಂಗಳದಾಗೆ ಕಾಲ ಮೇಲೆ ಕಾಲು ಹಾಕಿಕೊಂಡು ಗಚ್ಚಿನ ಗಾರೆ ಮೇಲೆ ಕೂತುಕೊಂಡು ಏನು ದರ್ಬಾರ ಮಾಡುತಾನೆ. ಕಟ್ಟಿಹಾಕಿದಲ್ಲನ್ನ ಕತ್ತೆ ಕಂಬಕ್ಕೆ ಚಿತ್ತಯ್ಯನ ಆಳುಗಳು ಅವು ದೂರದಲ್ಲೇ ಕೂತು ಇವುನು ಹೇಳಿದ ಮಾತಿಗೆಲ್ಲಾ ತಲೆ ಆಡಿಸುತಾ ಆ ಊಂ ಅಮುತಾವೆ. ಆಗ ಜುಂಜಪ್ಪ ದೂರದಿಂದಲೇ ಅವುನ ಮೇಲೆ ದೃಷ್ಟಿ ಹರಿಸಿದ. ಸ್ವಾಮಿ ಕಣ್ಣು ಯಾವಾಗ ಗುಡ್ಡದ ಮಲ್ಲಪ್ಪನ ಮೇಲೆ ಬೀಳ್ತೋ ಕೂಡಲೇ ಕುಂತು ಕುಂತುದ್ದಂಗೆ ಕಪ್ಪೆಯಾಗಿ ಕುಪ್ಪಳಿಸುತ್ತಾ ಬಯಲಾಗೆಲ್ಲಾ ಸುತ್ತಾಡಿಬಿಟ್ಟ. ವಂಡರಕಪ್ಪೆ ತರ ಚಿತ್ತಯ್ಯ ಕಾಟಯ್ಯ, ಚಿತ್ತಯ್ಯ ಕಾಟಯ್ಯ ಅಂಬ್ತಾ ವಟವಟಗುಟುತ್ತಾ ಮುಂಗಾರಿನಾಗ ಮೊದಲು ಮಳೆಗೆ ಹೊಸ ನೀರಿಗೆ ಕಪ್ಪೆ ಅರುಚುತಾವಲ್ಲ ಅದೇ ತರ ಅರೆಮಲ್ಲನೂ ಕೂಗಿಬಿಟ್ಟ. ಕೈಕಾಲು ಬಿದ್ದು ಹೋಗಿ ಬಿಡ್ತು. ಸೊಂಟ ನಿಲ್ಲಕಾಗಲಿಲ್ಲ. ಅವುನ ಹೆಂಡತಿ ಓಡಿಬಂದು ಗಂಡನ ಹಿಡಕೊಂಡಳು. ಕತ್ತೆ ಗೂಟಕ್ಕೆ ಕಟ್ಟಿದ್ದರಲ್ಲ ಪೂಜಾರಿ ಚಿತ್ತಯ್ಯನ ಆಳುಗಳ ಕಮ್ಮಟಿಗೆ ತಾವೆ ಕಳಚಿಕೊಂಡರು. ಗುಡ್ಡಮಲ್ಲನಿಗೆ ಅರ್ಥವಾಗಿಬಿಡ್ತು. ಇನ್ನೆಂದೂ ಜುಂಜಪ್ಪನ ವಿಚಾರದಲ್ಲಿ ತಪ್ಪು ಮಾಡಬಾರದೆಂದು ಅಂದುಕೊಂಡ. ತಕ್ಷಣ ಸ್ವಾಮಿ ಜುಂಜಪ್ಪನ ಗ್ಯಾನ ಮಾಡಿಬಿಟ್ಟ. ಸ್ವಾಮಿ ಜುಂಜಪ್ಪನ ಪೂಜೆ ವ್ಯಾಳ್ಯಕ್ಕೆ ತಪ್ಪದೆ ಅರೆವಾದ್ಯ ಸೇವೆ ಮಾಡುತೀನಪ್ಪ, ದೇವರ ಸೇವೆ ಯಾರೇ ಮಾಡಲಿ ಅವುರ ದಾಸನಾಗೆ ಕೆಲಸ ಮಾಡುತೀನಿ ಸ್ವಾಮಿಗೆ ನಿಂದನೆ ಮಾಡಿದ್ದು ತಪ್ಪು ಅಂದುಬಿಟ್ಟು ತಪ್ಪುಕಾಣಿಕೆ ಕಟ್ಟಿದ.

ಜುಂಜಪ್ಪನಿಗೆ ಅಪಚಾರ ಮಾಡಿದ ತಪ್ಪಿಗೆ ಅರೇಮಲ್ಲ ಮೂರು ದಿನ ಉಪವಾಸವಿದ್ದ. ಕೊನೇ ದಿನ ಮೂರು ಏಲಕ್ಕಿ ಕಾಳಾಗೆ ಉಪವಾಸ ಮುರಿದ. ಸ್ನಾನಮಾಡಿಕೊಂಡು ಅರೇ ಬಡಿಕೊಂಡು ಸ್ವಾಮಿ ಜಾತ್ರೆ ಸುದ್ದಿನ ಲೋಕಕೆಲ್ಲಾ ಸಾರಿಕೊಂಡು, ಅರೇಮಲ್ಲಪ್ಪ ದೇವರ ಹಟ್ಟಿಗೆ ಬಂದ. ಇತ್ತ ಭಕ್ತೆ ಬಡಚಿತ್ತಮ್ಮ ಅವುಳೂನು ಒಂದೊತ್ತು ಇದ್ದು ಏಲಕ್ಕಿ ಕಾಯಾಗೆ ಜೀವ್ನವರೆದಳು. ದೊಡ್ಡಸೀರ್ಯ ಪಟ್ಣಕ್ಕೆ ಗಂಡನನ್ನ ಕಳುಹಿಸಿ ಸ್ವಾಮಿಗೆ ಹೊಳೆ ತೆಗೆಸುವುದಕೆ ಬೇಕಾಗುವ ಪೂಜಾ ಸಾಮಾನು ತರಿಸಿದಳು.



ಮೂರು ಪಲ್ಲ ಅಕ್ಕಿ ರಡಿ ಮಾಡಿಕೊಂಡಳು. ಖಂಡುಗ ಬೆಲ್ಲ ತರಿಸಿಕೊಂಡಳು. ಬೇಳೆ, ಕಾರಾ ಸಾಂಬಾರನು ರಡಿಮಾಡಿಕೊಂಡು ಸಕಲ ಸಜ್ಜಿತಳಾಗಿ ಸ್ವಾಮಿ ಜುಂಜಪ್ಪನ ಹೊಳೆ ತೆಗೆಯಾಕೆ ಪರಸವ್ವನ ಕೆರೆಗೆ ಕರಕೊಂಡು ಬಂದ್ರು. ಬೇಸಿಗೆ ಕಾಲವಾಗಿತ್ತು. ಕೆರೆಗೆ ನೀರು ಇರಲಿಲ್ಲ. ಆಗ ಕೆರೆ ಮುಂದೆ ಮೂಡಲಕ್ಕೆ ಬೈಲಾಗೆ ಮೂರು ಚಿಲುಮೆ ತೆಗೆದರು. ಹೊಸ ಗಡಿಗೆಯಿಂದ ನೀರು ತುಂಬಿಸಿಕೊಂಡು ಸ್ವಾಮಿ ಜುಂಜಪ್ಪನ ಬೆಳಗಿದರು. ಆರತಿ ಉತ್ಸವಗಳು ನಡೆದವು. ಮಡಿವಾಳಣ್ಣ ಮಡಿ ಹಾಸಿದನು. ಕೋಲುಕಾರ ಕೋಲು ಹಿಡಿದು ಮುನ್ನಡೆಸಿದ. ಕುರುಬರು ಜುಂಜಪ್ಪನಿಗೆ ಕುರಿಗಳನ್ನು ಕರೆದು ಮೆರೆಸಿದರು. ಗೊಲ್ಲರು ಕೊರವಂಜಿ ಕೋಲು ಆಡಿದರು. ಗೋಪಿಕಾ ಹೆಂಗಸರು ಮಂಗಳಾರತಿ ಹಿಡಿದು ಬಂದಂತಹ ಗಣ್ಯಮಾನ್ಯರಿಗೆ ಆರತಿ ಮಾಡಿದರು. ಹೀಗೆ ಬಡವೆ ಚಿತ್ತಮ್ಮ ಒಬ್ಬಂಟಿಯಾಗಿ ಸ್ವಾಮಿ ಜುಂಜಪ್ಪ ಸೂತಕ ತೆಗೆದು ಮಹಾಭಕ್ತೆಯಾದಳು.

ಕಾರೆಮುಳ್ಳು ಕಡಿದು ಕರುವಿನ ಗೂಡು ಹಾಕಿದೀವಿ
ತುಗ್ಗಲಿ ಕಳ್ಳಿ ಕಡಿದು ಬಗ್ಗಿಸಿ ಗೂಡು ಬಡಿದು
ಜಾವದಾರಿ ಗಿಡ ಕಡಿದು ಬೇರುವಾ ಕಿರುಬಿದುರು
ಇಡುವಾಗ ರಾಯ ಕಳುವೇರಹಳ್ಳಿ ಎತ್ತಣಕೋ
ಭಗವಂತ ಸುರಹೊನ್ನೆ ಮರದ ನೆರಳಾಗೋ

# ಗಿಡ್ಡಾರೇಗೌಡನ ಮಸಲತ್ತು

ಗಿಡ್ಡಾರೇಗೌಡ ಅಂಬ್ತಾ ಒಬ್ಬಿದ್ದ. ಮಹಾ ಮೋಸಗಾರ ಚಿತ್ರದೇವರ ಭಕ್ತರನ್ನು ಕಂಡರೆ ಕೆಂಡಕಾರನು. ಅವುನ ಏನಾರ ಮಾಡಿ ಚಿತ್ರದೇವರ ಪೂಜಾರಿಗಳ ಸಾಯಿಸಿ ಬಿಡಬೇಕು. ಅವುರ ದೇವರ ತಗೊಂಡು ಹೋಗಿ ಸಿರಾ ಪೇಟೆಗೆ ಮಾರಿಕೊಂಡು ಬಿಡಬೇಕು ಅಂಬೋದು ಅವುನ ಪ್ಲಾನು. ಮಾತು ಮಾತಿಗೂ ಚಿತ್ರದೇವರ ಪೂಜಾರಿಗಳ ಮೇಲೆ ಜಗಳಕ್ಕೆ ಬರುತ್ತಿದ್ದನು. ಚಿತ್ರದೇವರ ಪೂಜಾರಿಗಳ ಪೈಕಿ ಬಾಳೇಗೌಡ ಅಂಬ್ತಾ ಒಬ್ಬಿದ್ದ. ಒಳ್ಳೆಯವರು, ತರಲೆ ತಾಟಕೆ ತಿಳಿದವನಲ್ಲ. ನಾಲ್ಕು ಜನಕ್ಕೆ ನ್ಯಾಯ ಬುದ್ದಿ ಹೇಳಾದು. ಇವನ ಮೇಲೂ ಈ ಗಿಡ್ಡಾರೇಗೌಡ ಜಗಳ ತೆಗೆದು ಹೊಡೆಯುವುದಕ್ಕೆ ಹೋಗುತ್ತಿದ್ದ.

ಆಗ ಚಿತ್ರದೇವರ ಪೂಜಾರಿಗಳು ಏನು ಮಾಡಿರಪ್ಪ ಅಂದ್ರೆ ಸ್ವಾಮಿ ಜುಂಜಪ್ಪನ ತಕೆ ಬಂದ್ರು. ಗಿಡ್ಡಾರೇಗೌಡನ ಕಾಟ ಅವುನ ತರಲೆ ಎಲ್ಲಾ ಹೇಳಿಕೊಂಡರು. ಎಲ್ಲಾ ಗಿಡ್ಡಾರ ನಮ್ಮ ಅಣ್ಣ ತಮ್ಮಗಳ ಮೇಲೆ ಕ್ಯಾತೆ ತೆಗಿಯುತೀಯ ಇರಲಿ ನಿನಗೆ ತಕ್ಕ ಶಿಕ್ಷೆ ಆ ಪರಮಾತ್ಮ ಕೊಡುತಾನೆ ಅಂದುಕೊಂಡು, ಅವುರ ಅಣ್ಣ ತಮ್ಮಗಳಿದ್ದರಲ್ಲ ಚಿತ್ರದೇವುರ ಪೂಜಾರಿಗಳು ಅವುರಿಗೆ ಜುಂಜಪ್ಪ ಹೇಳಿದ ಗಿಡ್ಡಾರೇಗೌಡ ತರಲೆ, ಅವುನ ಕಂಬೇರ ಮಾತು ಕೇಳಿಕೊಂಡು ಹಿಂಗೆಲ್ಲಾ ತೊಂದರೆ ಕೊಡುತಾನೆ. ಆದರೂ ಹುಷಾರಾಗಿರೋಣ ಅಂದುಬಿಟ್ಟು ಒಂದು ಸಲಹೆ ಕೊಟ್ಟ. ಆ ಸಲಹೆ ಏನಪ್ಪಾಂದ್ರೆ ಅವುನ ಗುಂಗರಿಗೆ (ಸೊಳ್ಳೆ) ಹೆದರುತಾನೆ. ನೀವು ಅವನಿಂದ ಪಾರಾಗಲು, ಗುಂಗರುಮೆಳೆಗೆ ಸೇರಿಕೊಳ್ಳಿ. ಗ್ರಹಗತಿ ಕ್ರೂರತ್ವ ಕಡಿಮೆ ಆಗುತ್ತೆ. ಆಮೇಲೆ ಈಚೆಗೆ ಬರುತೀರ ಅಂದನು. ಜುಂಜಪ್ಪನ ಸಲಹೆ ಸ್ವೀಕಾರ ಮಾಡಿದ ಚಿತ್ರದೇವರ ಪೂಜಾರಿಗಳು ಗುಂಗರುಪೆಂಟೆ ಅಂಬ್ತಾ ಒಂದು ಕಾಡಾಗೆ ಸೇರಿಕೊಂಡರು. ಗುಂಗಾರಿಪೀಡೆಯಿಂದ ಗಿಡ್ಡಾರೇಗೌಡ ಆ ಕಡೆಗೆ ಹೋಗಲಿಲ್ಲ.

ಆಮೇಲೂ ಗಿಡ್ಡಾರೇಗೌಡನ ಉಪಟಳ ನಿಲ್ಲಲಿಲ್ಲ. ಹೆಂಗಾರ ಮಾಡಿ ಚಿತ್ರದೇವರ ಪೂಜಾರಿಗಳಿಗೆ ಕಾಟ ಕೊಡಬೇಕೆಂಬುದು ಆತನ ಬಯಕೆ. ಒಂದು ದಿನ ಅವುನೂ ಅವುನ ಅಳಿಯ ಅಜ್ಜಿಯೋರ ಕಾಟನೂ ಸೇರಿಕೊಂಡು, ಶ್ಯಾಗದಡು ಹತ್ತರ ಹಿರಿಯರ ಹಟ್ಟಿಗೆ

ಬಂದ್ರು. ಆ ಹಟ್ಟಿಲಿದ್ದ ಕರಡೆರೆಲ್ಲ ಊರು ಬಿಟ್ಟು ಗುಂಗುರಪೆಂಟೆ ಸೇರಿಕೊಂಡು ಬಿಟ್ಟಿದ್ದರಲ್ಲ. ಆಗ ಇವರಿಗೆ ಚಿತ್ರದೇವರ ಗೂಡು ಕಾಣಿಸ್ತು. ದುರಾಸೆ ನನ್ಮಕ್ಳು ಕಂಬೇರು. ಏನಾರಾ ಮಾಡಿ, ಈ ದೇವುರ ಲಪಟಾಯಿಸಿಬಿಡಬೇಕೆಂದು ಮನಸ್ಸು ಮಾಡಿದರು. ಆಗ ಏನು ಮಾಡಿರಪ್ಪ ಅಂದ್ರೆ, ಆ ಚಿತ್ರದೇವರು ಪೆಟ್ಟಿಗೆ ತಗೊಂಡು ಸಿರಾ ಪೇಟೆಗೆ ಮಾರಬೇಕೆಂದು ಮನಸ್ಸು ಮಾಡಿ, ಚಿತ್ರದೇವುರ ಪೆಟ್ಟಿಗೆ ತಗೊಂಡು ತಲೆಮ್ಯಾಲೆ ಇಟ್ಟುಕೊಂಡು, ಗಿಡದ ರಂಗನಹಳ್ಳಿ ಹಾದು ಅಂತಪುರ ದಾಟಿ ಮ್ಯಾಕೆರಹಳ್ಳಿ ತಾವಾಸಿ ಸಿರಾ ಪೇಟೆಗೆ ಬಂದ್ರು. ಬಂದು ಬಂದಾರೆ ಆ ಪೆಟ್ಟಿಗೆನ ಸಿರಾ ರಂಗಪ್ಪದೊರೆ ಹೂವಿನ ತೋಟದಾಗೆ ಇಟ್ಟು ಯಾವಾರ ಕುದುರಿಸಿಕೊಂಡು ಬರೋಕೆ ಅಂಬ್ತಾ ಗಿಡ್ಡಾರೇಗೌಡ ಊರೊಳಿಕೆ ಹೋದ. ಪಾಪ ಈ ಕಾಟ ಹುಡುಗ ಇತ್ತಲ್ಲ. ಅದೇ ದೇವುರ ಗೂಡೆ ನೋಡಿಕೊಂಡಿತ್ತು. ಗಿಡ್ಡಾರಗೌಡ ಪೆಟ್ಟಿಗೆ ಮಾರಾಕೆ ಒಬ್ಬ ಗಿರಾಕಿನೂ ನೋಡಿಕೊಂಡು ಪೆಟ್ಟಿಗೆ ಅವನಿಗೆ ಕೊಡಾಕೆ ಅಂಬ್ತಾ ಹೂವಿನ ತೋಟಕ್ಕೆ ಕಾಲಿಕ್ಕುತಿದ್ದಂಗೆ ಹೂವಿನ ತ್ವಾಟಕ್ಕೆ ಬೆಂಕಿಬಿದ್ದು ಎಲ್ಲಾನೂ ಉರುದು ಹೋತು.

ಇತ್ತ ಬಾಳೇಗೌಡ ಅಂಬೋನು ಚಿತ್ರದೇವುರ ಪೂಜಾರಿ ಪಿರುಕದವನು. ಚಿತ್ರದೇವರು ಕಳುವಾಗಿದೆ. ಅದು ಗಿಡ್ಡಾರೇಗೌಡನದ್ದೆ ಕರಾಮತ್ತು ಅಂಬ್ತಾ ಹೇಳಿಕೊಂಡು ಬಂದ. ಅದಕೆ ಗಿಡ್ಡಾರೇಗೌಡನೂ ಕಾಲು ಕೆರೆಕೊಂಡು ಅವುನ ಮೇಲೆ ಜಗಳಕ್ಕೆ ಹೋದ. ಈ ನ್ಯಾಯ ಜುಂಜಪ್ಪನ ತಕೆ ಹೋತು. ಗೊಲ್ಲಗೌಡರೆಲ್ಲ ಸೇರಿಕೊಂಡರು. ಮುಂದಿನ ಸೋಮವಾರ ಚಿತ್ರದೇವರ ಪೂಜೆ ದಿನ ಎಲ್ಲರೂ ಸೇರಿಕೊಳ್ಳೋಣ ಅಂದು ತೀರ್ಮಾನ ಮಾಡಿದರು.

ಆ ಸೋಮಾರ ಬಂತು. ಜುಂಜಪ್ಪ ಬಂದ. ಚಿಕ್ಕಸಂದ್ರದ ಕಾವಲಾಗೆ ಜನಾದಿ ಜನವೆಲ್ಲಾ ಕಲೆತರು. ಚಿತ್ರದೇವರ ಗೂಡೆ ಕದ್ದವರು ಯಾರು ಅಂಮ್ತಾ ನ್ಯಾಯ ತೀರ್ಮಾನ ಆಗಬೇಕು. ಗಿಡ್ಡಾರಗೌಡ ಬಾಯಿ ಮಾಡಿದ. ಬಿಲ್‌ಕುಲ್ ನನಗೂ ಆ ಪೆಟ್ಟಿಗ್ಯೂ ಸಂಬಂಧ ಇಲ್ಲ. ಈ ಕರಡೇರು ಬೇಕು ಬೇಕು ಅಂಮ್ತಾಲೇ ನನ್ನ ಮ್ಯಾಲೆ ಗೂಬೆ ಕೂರಿಸವರೆ ಅಂದ. ನ್ಯಾಯ ಅರಿಲಿಲ್ಲ. ಕೊನೆಗೆ ಜುಂಜಪ್ಪ ಒಂದು ಮಾತು ಹೇಳಿದ. ಅದಕ್ಕೆ ಎಲ್ಲರೂ ಒಪ್ಪಿಕೊಂಡರು.

ಇಕ್ಕಿದರೆ ಇಕ್ಕಲೇಳೆ ದಕ್ಕೋರ ಮಗನಲ್ಲ  
ಇಕ್ಕಿದೇಳು ದಿನಕೆ ಉಳ್ಳಿ ಉರಿದಂಗೆ ನನ್ನವ್ವ  
ಉರಿದೆದ್ದು ನಾನು ಬರುತೀನಿ

## ಕುರುಬರ ಕೇರಿಯಲ್ಲಿ ಜುಂಜಪ್ಪ

ಜುಂಜಪ್ಪ ಸತ್ತ ದೇವರಾದರೂ ಅವುನ ದೇವರ ಪೆಟ್ಟಿಗೆ ಕದಿಯೋದು, ಅಪಮಾನ ಮಾಡಾದು, ಅವುನ ಒಕ್ಕಲುಗಳ ಮೇಲೆ ಗಲಭೆ ಮಾಡದು, ಕಾಟ ಕೊಡ ಕೆಲಸ ನಡೀತಾ ಬಂತು. ಚಿಕ್ಕದೇವರಹಟ್ಟಿಯಲ್ಲಿದ್ದ ಜುಂಜಪ್ಪ ದೇವರ ಪೆಟ್ಟಿಗೆಯನ್ನು ಅವುನ ಭಕ್ತರುಗಳು ಕಂಬೇರ ಕಾಟದಿಂದ ತಕ್ಕೊಂಡೋಗಿ ಗುಂಗುರು ಪೇಟೆಯಲ್ಲಿ ಇರಿಸಿಕೊಂಡರು. ಇದರಿಂದ ಗುಂಗರಿ ಸೊಳ್ಳೆಗೆ ಹೆದರಿಕೊಂಡು ಕಂಬೇರು, ಅತ್ತ ಕಡೆ ಬರುವುದಿಲ್ಲ ಅಂಬೋದು ಅವುರ ಬುದ್ದಿಯಾಗಿತ್ತು. ಅಲ್ಲಿಗೆ ಹೋಗಿಬಿಟ್ಟು ದಿನಾಲೂ ಪೂಜಾರಿ ಚಿತ್ತಯ್ಯ ಪೂಜೆ ಮಾಡಿಕೊಂಡು ಬರುತಾ ಇದ್ದನು. ಈ ಗಿಡ್ಡೀರಾಗೌಡ ಅಂಮುತಾ ಒಬ್ಬನಿದ್ದ. ಮಹಾ ಹೊಮ್ಮುಗಾರ, ದುರಹಂಕಾರಿ, ಕೇಡು ಬುದ್ದಿಯವನು. ಅವುನು ತುರುಕರ ಸವಾಸ ಮಾಡಿ ಜುಂಜಪ್ಪನ ಬತ ಕೆಡಿಸಬೇಕು ಅಂಮ್ತಾ ಪ್ಲಾನ್ ಮಾಡ್ತಾ ಇದ್ದ. ಅದಕ್ಕೆನೆ ಜುಂಜಪ್ಪನ ದೇವುರ ಪೆಟ್ಟಿಗೆಯನ್ನು ಗುಂಗುರ ಪೆಂಟೆಗೆ ಇಟ್ಟುಕೊಂಡಿದ್ದರು. ದೇವುರು ಜುಂಜಪ್ಪ ಯಾವಾಗ ಗುಂಗರಿ ಸೊಳ್ಳೆಗಳಿಂದ ಕಡಿಸಿಕೊಂಡು ಸಾಕಾಗಿತ್ತು. ಆಗ ಏನು ಮಾಡಿನಪ್ಪ ಅಂದರೆ ನಾನಿಲ್ಲಿ ಇರೋದು ಬ್ಯಾಡ, ಎಲ್ಲರ ಬೇರೆ ಕಡೆಗೆ ಹೋಗಬೇಕೆಂದು ಯೋಚನೆ ಮಾಡಿಬಿಟ್ಟ. ಸಿರಾ ಪಟ್ಟಣ, ಅಲ್ಲಿ ಕುರುಬರ ಕೇರಿ, ಕುಂಬರಾರರ ಕೇರಿ. ನಮ್ಮವನೆ. ಆವುರ ಕೇರಿಗೆ ಒಂದು ಮೂರು ದಿನ ಸುಖವಾಗಿ ಮಲಗಬೇಕು ಮೂರು ತಿಂಗಳಾತು ನಿದ್ದೆ ಮಾಡಿ ಅಂದುಬಿಟ್ಟು, ಜುಂಜಪ್ಪ ಗುಂಗಾರಿ ಪೇಟೆಯಿಂದ ಹೊರಬಂದ. ಯಂಗ ಊರಿಗ ನುಗ್ಗದು, ಅಂದುಬಿಟ್ಟು ಸಿರಾದ ದುರ್ಗಮ್ಮನ ತವಕೆ ಬಂದ. ಶರಣು ಮಾಡಿದ ಸ್ವಾಮಿ ಜುಂಜಪ್ಪ. ದೇವಿ ದುರ್ಗಮ್ಮ ಕಾರಣ ಕೇಳಿದಳು. 'ನಾನು ಸತ್ತ ಮೇಲೂ ಈ ಕಂಬೇರು ಸುಮ್ಮಕೆ ಬಿಡಲಿಲ್ಲ. ನನ್ನ ಬತ ಕೆಡಿಸುತಾರೆ. ಇವರ ಸಹವಾಸನೇ ಬೇಡ ಅಂಮ್ತಾ ಗುಂಗಾರಿ ಪೇಟೆ ಒಳಗೆ ಇಟ್ಟರು. ಅಲ್ಲಿ ಗುಂಗರಿಹುಳು ಕಡಿದು ಮೂರು ತಿಂಗಳಿಂದ ನಿದ್ದೆ ಮಾಡಲಿಲ್ಲ. ಈಗ ನಿನ್ನ ಊರಾಗೆ ಮೂರು ದಿನ ತಂಗಿದ್ದು ಮೂರು ನಿದ್ದೆ ಮಾಡಿ ಹೊರಟುಹೋಗುತೀನಿ' ಅಂದನು. ಸಿರಾ ದುರ್ಗಮ್ಮ ರವಾಟು ಹಿಂದೆ-ಮುಂದೆ ನೋಡಿದಳು. ಯಾಕಪ್ಪಂದ್ರೆ ಜುಂಜಪ್ಪ ಮಹಾನುಭಾವ. ಅವನು ಉರಿಗಣ್ಣಿನೋನು.

ಬರಿಕಣ್ಣು ಬಿಟ್ಟು, ಸಿರಾ ಪೇಟೆನೆ ಸುಟ್ಟು ಹಾಕಬಹುದು ಎಂದು ಅನುಮಾನಪಟ್ಟಳು. ಯಾವಾಗ ತಾನು ಜುಂಜಪ್ಪನಿಗೆ ಮಲಗಲು ಜಾಗ ಕೊಡುವುದಕ್ಕೆ ಹಿಂದುಮುಂದು ನೋಡಿದಳೋ, ಜುಂಜಪ್ಪ ಸುಮ್ಮನಾಗಲಿಲ್ಲ. ತನ್ನ ನೆಲೆದೇವರಾದ ಗೌರಸಂದ್ರದ ಮಾರಮ್ಮನ ಸ್ಮರಿಸಿದ. ಗೌರಸಂದ್ರ ಮಾರಮ್ಮ ಜುಂಜಪ್ಪಗೆ ಬಂದಿರೋ ಈ ಕಷ್ಟನ ಪಾರುಮಾಡಬೇಕೆಂದು ತೀರ್ಮಾನ ಮಾಡಿಳು. ನೇರವಾಗಿ ಸಿರಾದ ಮಾರವ್ವನ ಸಹಾಯದಿಂದ ಸಿರಾದ ದುರ್ಗಮ್ಮ ಕೂಡಿದಳು. ಮಾತುಕತೆ ಆಡಿರು. ಜುಂಜಪ್ಪನ ವಿಚಾರ ತೆಗೆದಳು. ಅವುನು ಶಿವನ ವರಪುತ್ರ, ಅವನಿಂದ ಕೇಡೇನೂ ಆಗೋದಿಲ್ಲ ಅಂತ ಹೇಳಿಬಿಟ್ಟಳು. ಸಿರಾದ ನಾಯ್ಕಮಗ ರಂಗಣ್ಣ ಜುಂಜಪ್ಪನಿಂದ ಹಿಂದೆ ಒದೆ ತಿಂದಿದ್ದ. ಆಮೇಲೆ ದೇವರು ಅಂಬ್ತಾ ಪೂಜಿಸಿಕೊಂಡರೂನು ಒಳಒಳಗೆ ದ್ವೇಷ ಕಾರುತಿದ್ದ. ಇದರ ಜೊತೆಗೆ ಚಿಕ್ಕದೇವರ ಹಟ್ಟಿಯವನೇ ಆದ ಗಿಡ್ಡಾರೇಗೌಡ ಅಂಬ್ತಾ ಒಬ್ಬಿದ್ದ. ಬಲು ಮೋಸಗಾರ. ಅವುನು ಯಾವಾಗಲೂ ರಂಗಣ್ಣನ ಗೆಳೆತನ ಮಾಡಿಬಿಟ್ಟು ಕೆಟ್ಟೋಗಿಬಿಟ್ಟಿದ್ದ. ಗೊಲ್ಲರ ರೀತಿ-ನೀತಿ, ಧರ್ಮ ನೀತಿ ಬಿಟ್ಟು ಅನಿಷ್ಟ ಮಾರ್ಗ ಹಿಡಿದುಬಿಟ್ಟಿದ್ದ. ಅಂತೋನಿರುವುದರಿಂದ ಜುಂಜಪ್ಪನಿಗೆ ಸಿರಾ ಪಟ್ಟಣದಲ್ಲಿ ಜಾಗ ಕೊಟ್ಟರೆ ಏನಾದರೂ ಹೆಚ್ಚು ಕಮ್ಮಿಯಾಗಿ ಸಿರಾ ಪಟ್ಟಣ ಸುಟ್ಟುಗಿಟ್ಟು ಹಾಕಿರೇನು ಮಾಡಾದು ಅಂಬೋದು ದುರ್ಗಮ್ಮನ ವ್ಯಸನ.

ಸರಿ ಯಾವಾಗ ಗೌರಸಂದ್ರದ ಮಾರಮ್ಮ ಬಂದು, ಸಿರಾ ದುರ್ಗಮ್ಮನ ಕೂಟೆ ಮಾತುಕತೆ ಆಡಿದಳು. ಜೊತೆಗೆ ಜುಂಜಪ್ಪನ ದೇವರುಗಳ ಪೆಟ್ಟಿಗೆನ ತಂದು ಸಿರಾ ರಂಗಣ್ಣನ ಕುದುರೆ ಕಟ್ಟೋ ಜಾಗದಲ್ಲಿ ಇರಿಸಿದ್ದ ಗಿಡ್ಡಾರೇಗೌಡ. ಅವುನಿಗೆ ಸೊಕ್ಕು ಇಳಿಸಬೇಕಾಗಿತ್ತು. ಇದೇ ಸಂದರ್ಭವನ್ನು ಜುಂಜಪ್ಪ ಕಾಯ್ತಾ ಇದ್ದನು. ಈಗ ಅದನ್ನು ಸೇಡು ತೀರಿಸಿಕೊಳ್ಳಬೇಕು. ಸಿರಾ ರಂಗಣ್ಣನ ಗರ್ವನೂ ಮುರಿಬೇಕು ಅಂಮ್ತಾನೆ ಯೋಚಿಸಿದ. ಅದಕ್ಕೆ ಸಹಕರಿಸುವಂತೆ ಬೇವಿನಹಳ್ಳಿ ಕರಿಯಮ್ಮ, ಸೋರೆಕುಂಟೆ ಕರಿಯಮ್ಮ ದೇವತೆಗಳನ್ನು ಕೇಳಿಕೊಂಡ. ದುರ್ಗಮ್ಮ ಜುಂಜಪ್ಪ ಸಿರಾದ ಕುರುಬ ಕೇರಿಯಲ್ಲಿ ರೇವಣ್ಣಪ್ಪನರ ಮಠದ ತಾವ ಮಲಗಾಕೆ ಜಾರ ತೋರಿಸಿದಳು. ಅದರಂತೆ ಸ್ವಾಮಿ ಅಲ್ಲಿ ಮೂರುದಿನದೊತ್ತು ಮಲಗಿದ. ಮಲಗುತ್ತಿದ್ದಂತೆ ಸಿರಾದ ಕೋಟೆ ಕಡೆಗೆ ವಾಂತಿರೋಗ ಬೇದಿ ಬಂದುಬಿಟ್ಟು ದಿನಕ್ಕೆ ಸಾವಿರ ಜನರಂತೆ ಸಾಯಕೆ ಸುರುವಾಯಿತು. ಸಿರ‍್ಯಾದ ರಂಗಣ್ಣ ದುರ್ಗಮ್ಮನ ಕೇಳಿಕೊಂಡ. ಪರಿಹಾರ ಮಾಡಬೇಕು ಅಂಮ್ತಾನು. ಆದರೆ ದುರ್ಗಮ್ಮನಿಗೆ ಜುಂಜಪ್ಪ ಮೂರು ದಿನಗಳ ಕಾಲ ಕಣ್ಣು ಕಾಣದಂಗೆ ಮಾಡಿಬಿಟ್ಟಿದ್ದ. ಅದರಂತೆ ದೇವತೆಗೆ ಮೂರು ಗಬ್ಬದ ಕುರಿ, ಮೂರು ಖಂಡುಗ ಅನ್ನ, ಮುನ್ನೂರು ರೂಪಾಯಿ ದುಡ್ಡಿನ ಸೀರ‍್ಯಾದ ಸೀರೆನೂ ದುರ್ಗಮ್ಮನಿಗೆ ಮೊದಲೇ ಕೊಟ್ಟುಬಿಟ್ಟಿದ್ದ.

ಯಾವಾಗ ದುರ್ಗಮ್ಮ ಕುರುಡಾಗಿ ತಿರುಗಾಡದಂಗೆ ಕುಂತುಬಿಟ್ಟಳೋ ಜುಂಜಪ್ಪ ಜಬ್ಬರ ಬಡಿದು ವಾಂತಿ-ಬೇದಿ ತಂದಾಕಿಬಿಟ್ಟ. ರೋಗ, ವಾಂತಿಯಿಂದ ದಿನಾಲೂ ಜನ ಸಾಯುತಾ ಅವರೆ. ಒಬ್ಬರ ಗುಂಡಿ ತೆಗೆದು ಮುಚ್ಚಿ ಬಂದರೆ ಇನ್ನೊಬ್ಬರು ಸತ್ತು ಹೋಗುತಾ ಇದ್ರು. ಹಿಂಗಾಗಿ ಸಾಲಾಗಿ ಗುಂಡಿ ತೆಗೆಸಿ ಒಂದೇ ಸಾರಿ ಹೂಳಿಬಿಡುತ್ತಿದ್ದರು. ಕೊನೆಗೆ ಸೀರ್ಯಾದ ರಂಗಣ್ಣ ಇದ್ದನಲ್ಲ. ಅವುನಿಗೆ ಒಂದು ಹುಡುಗ ಇದ್ದ. ಅವುನೂನ ರೋಗ ಜಾಸ್ತಿಯಾಗಿ ಸತ್ತುಬಿಡ್ತು. ಆಗ ಓಡೋಡಿ ಬಂದ ಸೀರ್ಯಾದ ರಂಗಣ್ಣ, ದುರ್ಗಾದೇವಿನ ಪ್ರಾರ್ಥಿಸಿಕೊಂಡ. ಆಯಮ್ಮ 'ಇದರಲ್ಲಿ ನಂದೇನಿಲ್ಲಪ್ಪ, ನೀನು ಜುಂಜಪ್ಪನ ಮೇಲೆ ದ್ವೇಷ ಸಾಧಿಸುತೀಯ, ಅವುನ ದೇವರ ಗೂಡುಗಳನ್ನು ತಂದು ನಿನ್ನ ವಶದಲ್ಲಿ ಮಡಗಿಕೊಂಡು ಅವಮಾನ ಮಾಡುತೀಯ. ಅವುಕೆ ಪೂಜೆಯಿಲ್ಲ, ಅವುನ್ನ ಅಸವಲ್ಲದವರು ಮುಟ್ಟಿ ಬತ ಕೆಡಿಸೆವರೆ. ಅದರಿಂದಲೇ ಅಸವಲ್ಲದವನು ಜುಂಜಪ್ಪ ಹಿಂಗೆಲ್ಲಾ ಮಾಡ್ತಾ ಇರೋದು' ಅಂದುಬಿಟ್ಟಳು. 'ನೋಡಪ್ಪ ನನ್ನನ್ನೂ ಕಣ್ಣು ಕಾಣಿಸದಂಗೆ ಮಾಡಿಬಿಟ್ಟವನೆ. ಅದರಿಂದ ನನಗೇನೂ ತಿಳೀವಲ್ದು. ಅವುನ್ನೇ ಕೇಳಿಕೋ ನಿನಗೆ ಒಳ್ಳೆಯದಾದರೂ ಆಗಲಿ' ಎಂದಳು.

ಸರಿ ಮೂರು ದಿನದ ಹೊತ್ತಾತು. ಸತ್ತ ಮಗುವನ್ನು ಸಮಾಧಿ ಮಾಡಾಕೆ ಅವುರ ಬಂಧು ಬಳಗವನ್ನು ಚಿತ್ರದುರ್ಗ, ಹಿರಿಯೂರು, ರಾಯದುರ್ಗದಿಂದಲೂ ಕರೆಸಿಕೊಂಡರು. ಹರ್ತಿಕೋಟೆಯಿಂದಲೂ ಜನ ಬಂದರು. ಎಲ್ಲಾರು ಬಂದು ಸೇರಿದ ಮೇಲೆ ಮಗುವನ್ನು ಸಮಾಧಿ ಮಾಡಾಕೆ ಗುಂಡಿತೋಡಿಬಿಟ್ಟರು. ಆಮೇಲೆ ಸೀರ್ಯಾದ ಕೋಟೆಗುಂಟ ದೊಡ್ಡಕೆರೆ-ಚಿಕ್ಕಕೆರೆ ನಡುವೆ ಶವನ ಮೆರವಣಿಗೆ ತಂದರು. ಸಮಾಧಿ ಬಳಿಗೆ ತಂದ್ರು. ಅಲ್ಲಿಗೆ ಮಾಯದಂಗೆ ಏಳು ಹೆಂಗಸರು ಬಂದ್ರು. ಅವರೆಲ್ಲರೂ ಏಳು ಜನ ಮಾರಿಯರು. ಗೌರಸಂದ್ರದಮ್ಮ, ಕೋಡಳ್ಳಮ್ಮ, ಬೇವಿನಳ್ಳಮ್ಮ, ಸೋರೆಕುಂಟೆಯಮ್ಮ, ಸಾಕ್ಷಿಹಳ್ಳಿ ಅಮ್ಮ ಎಲ್ಲಾರು ಬಂದುಬಿಟ್ರು. ಬಂದವರು ಗಿಲಕೆ ಮಾರವರಂಗೆ, ಗೊಂಬೆ ಮಾರುವರಂಗೆ ಬಂದ್ರು. ಹಾಗೆ ಬಂದವರು ಜನ ಸೇರಿದ್ದ ಸಂಗತಿನ ತಿಳಿದುಕೊಂಡರು. ಅಲ್ಲಿಗೆ ಅವುರು ಬಂದರು. ಇನ್ನೇನು ಬರಬೇಕಾದವರೆಲ್ಲ ಬಂದಾಯ್ತು, ಮಣ್ಣ ಹಾಕನಾ ಅಂಬ್ತಾ ಒಂದು ಮಾತು ಕೇಳಿರು. ಆಗಬಹುದು ಅಂದರು. ಸಿರ‍್ಯಾದ ರಂಗಣ್ಣನ ದುಃಖನ ನೋಡಂಗಿಲ್ಲ. ತಾಯಿ ತಿಮ್ಮೋಜಮ್ಮನೂ ಅವುನ ಹೆಂಡತಿ ಒಂದೇ ಸಮನೆ ಬಡಕೊಂಡರು. ಕೊನೆಗೆ ಜನಗಳನ್ನು ಅಕ್ಕಪಕ್ಕಕೆ ಸರಿಸಿ ಒಳಬಂದ ಈ ಏಳು ಜನ ಅಮ್ಮಗಳು 'ಆ ಮಗು ಸತ್ತಿಲ್ಲ, ಮಣ್ಣು ಹಾಕಬೇಡಿ' ಅಂದ್ರು. ಇದೇನಪ್ಪ ಹೊಸ ಸಂಗತಿ ಅಂದುಬಿಟ್ಟು ಎಲ್ಲರೂ ತಮಾಸೆ ಮಾಡಿರು. ಆಗ ಆ ಕೊರಮಿಯರು ಹೇಳಿದರು 'ಮಗ ಸತ್ತಿಲ್ಲ. ಅದನ್ನು ಮೇಲಕ್ಕೆ

ಎತ್ತಿಕೊಳ್ಳಿ' ಅಂದರು. ಬಿಳಿಬಟ್ಟೆ ಹೊದಿಸಿ, ಬಾಳೆಎಲೆ ಮುಚ್ಚಿದರು. ಆಗ ಬಾಳೆ ಎಲೆ ಎತ್ತಿ ನೋಡುತಾರೆ! ಅಮಗ ಆಯಮ್ಮ ಹೇಳಿದಂಗೆ ಪಿಳಿಪಿಳಿ ಕಣ್ಣುಬಿಟ್ಟಿತ್ತು.

ಜನಾದಿ ಜನಗಳಿಗೆಲ್ಲ ಆಶ್ಚರ್ಯ. ಇದೇನಪ್ಪ ಕೇಡು ಅಂದುಬಿಟ್ಟು ಮಗುನ ಆಚೆಗೆ ಎತ್ತಿಕೊಂಡು ಬಂದ್ರು. ಆ ಹುಡುಗ ಸಲೀಸಾಗಿ ಅವರ ಅಮ್ಮನ ತಕೆ ಹೋಗಿ ನಿಂತುಕೊಂಡು ಬಿಡ್ತು. ಅಪ್ಪನ ಮಾತಾಡಿಸ್ತು. ಆಗ ಇದೆಲ್ಲಾ ಜುಂಜಪ್ಪನ ಅವಕೃಪೆ ಅಂದುಬಿಟ್ಟು, ತೆಗೆದಿರುವ ಗುಂಡಿಗೆ ಒಂದು ಕೋಳಿತರಿಸಿ ಮುಚ್ಚಿಸಿ, ಎಲ್ಲರೂ ಹಿಂತಿರುಗಿದರು. ಕೋಟೆ ಬಾಗಿಲ ಆಂಜಿನಯ್ಯನಿಗೆ ಪೂಜೆ ಮಾಡಿಸಿ, ಅಡಕೆ ಎಲೆ ತಿದ್ದಿ, ಪ್ರಜೆಯಾದ ಪ್ರಜೆಗಳೆಲ್ಲರೂ ಅವರವರ ಮನೆಗೆ ಅವುರು ಹೋದರು.

ಇತ್ತ ಕಣ್ಣು ಕಾಣದಂಗೆ ಕುರುಡಿಯಾಗಿ ಕುಂತಿದ್ದಳಲ್ಲ, ಸಿರ‍್ಯಾದ ದುರ್ಗಮ್ಮ ಅವುಳಿಗೆ ಖಂಡಗ ದೂಪ ದೀಪ ಹಾಕಿ, ಕಡ್ಡಿ ಕರ್ಪೂರ ಹಾಕಿ, ಹಣ್ಣು ಕಾಯಿ ಒಡೆಸಿದರು. ಒಂದು ಸಾವಿರ ಕೋಣ, ಸಾವಿರ ಕುರಿ, ಸಾವಿರ ಕೋಳಿ ಬಲಿಕೊಟ್ಟರು. ಮುನ್ನೂರು ಖಂಡುಗದ ಅಕ್ಕಿ ಅನ್ನ ಮಾಡಿ, ಊರಿಗೆ ಅನ್ನಶಾಂತಿ ಮಾಡಿಸಿದರು. ಆಗ ನಿಧಾನವಾಗಿ ದುರ್ಗಮ್ಮ ಕಣ್ಣು ತೆರೆದಳು. ಸತ್ತು ಹೋಗುತ್ತಿದ್ದ ಜನಗಳ ಸಾವು, ವಾಂತಿ-ಬೇದಿ ನಿಂತುಹೋತು.

ಇತ್ತ ಕುರುಬರ ಕೇರೇಗೆ, ರೇವಣ್ಣರ ಮಠದಲ್ಲಿ ಮಲಗಿದ್ದನಲ್ಲ ಸ್ವಾಮಿ ಜುಂಜಪ್ಪನಿಗೆ ಮಾಯದ ನಿದ್ದೆ ಹರೀತು. ಇಷ್ಟು ಹೊತ್ತಿಗೆ ಎಲ್ಲಾ ದೇವರುಗಳಿಗೆ ಬಲಿ ಹರಕೆ ಪೂರೈಸಲಾಗಿತ್ತು. ಎದ್ದಂತೆ ಸ್ವಾಮಿ ಜುಂಜಪ್ಪ ನೇರವಾಗಿ ಗುಂಗರುಪೇಟೆಗೆ ಕಣ್ಣು ಬಿಟ್ಟ. ಕ್ಷಣಾರ್ಧದಲ್ಲಿ ಗುಂಗುರಿಪೇಟೆ ಹತ್ತಿಕೊಂಡು ಉರಿದು ಅದರಾಗಿದ್ದ ಗುಂಗುರಿಗಳೆಲ್ಲಾ ಸತ್ತು ಹೋಗಿಬಿಟ್ವು. ಸ್ವಾಮಿ ಜುಂಜಪ್ಪ ಹೊತ್ತುಕೊಂಡು ಬಂದು ಮಡಗಿಕೊಂಡಿದ್ದರಲ್ಲ ದೇವರಗೂಡು, ರಂಗಣ್ಣನ ಕುದುರೆ ಲಾಯ, ಹೂವಿನ ತೋಟಕ್ಕೂ ಬೆಂಕಿ ಹತ್ತಿಕೊಂಡು ಉರುದು ಹೋಯಿತು. ಅದರಲ್ಲಿ ಮಡಗಿಕೊಂಡಿದ್ದ ದೇವರ ಪೆಟ್ಟಿಗೆ ಪೂಜಾರಿ ಚಿತ್ತಯ್ಯ, ಅವುನ ಕಡೇರು ಬಂದುಬಿಟ್ಟು ಎತ್ತಿಕೊಂಡು ಪರಸಮ್ಮನ ಕೆರೆಗೆ ಹೊಳೆ ತೆಗೆದು, ಹೊಲೆ ಸೂತಕ ತೆಗೆದರು. ಮುಂದೆ ದೇವರ ಸವಾಸ ಯಾರು ಬರದಂಗೆ ಆಗಲಿ ಅಂತ ಸಾರುಕೊಟ್ಟರು. ಆಮೇಲೆ ದೇವರು ಚಿಕ್ಕದೇವರಹಟ್ಟಿಲಿ ಸ್ಥಿರವಾಗಿ ನೆಲೆಸಿತು.

ಗಂಗೆಯ ದಡದಲ್ಲಿ ಗಂಧದ ಮರಹುಟ್ಟಿ
ತಂದೆಯ ಹೊಟ್ಟೇಲಿ ಮಗನ್ಹುಟ್ಟಿ । ಜುಂಜಪ್ಪ
ಎಪ್ಪತ್ತು ರಾಜ್ಯಕ್ಕೂ ಹೆಸರಾದ


# ಜುಂಜಪ್ಪನ ನ್ಯಾಯ

ಜುಂಜಪ್ಪನ ನ್ಯಾಯ ಏನು ಅಂದ್ರೆ ಈಗ ಚಿತ್ರದೇವುರ ಗೂಡೆ ಕಳುವಾಗಿದೆ. ಹಿಂದೆಲ್ಲ ಕರಡೇರಿಗೆ ಕಾಟ ಕೊಟ್ಟಂತ ಗಿಡ್ಡಾರೇಗೌಡ ಚಿತ್ರದೇವುರ ಪೂಜಾರಿಗಳನೆಲ್ಲಾ ಊರು ಬಿಡಿಸೆವನೆ. ಆ ಪೂಜಾರಿಗಳೆಲ್ಲಾ ಮೆಳೆಪೆಂಟೆ ಸೇರಿಕೊಂಡವರೆ. ಈಗ ದೇವುರ ಗೂಡೆ ಕಳುವಾಗಿದೆ ಅದನ್ನು ಗಿಡ್ಡಾರೇಗೌಡ ಕದ್ದವನೆ ಅಂಬಾದು ಬಾಳೇಗೌಡನ ಕಡೆಯರ ವಾದ. ಬಾಳೇಗೌಡ ಚಿತ್ರದೇವರ ಪೂಜಾರಿ. ಇಲ್ಲ, ಬಾಳೇಗೌಡನೇ ಯಾರೂ ಇಲ್ಲದ ಸಮಯ ನೋಡಿ ಚಿತ್ರದೇವರು ಪೆಟ್ಟಿಗೆ ಸಿರಾ ಪೇಟೆಗೆ ಮಾರಿಕೊಂಡು ತಿಂದಾನೆ, ಅಂಬಾದು ಗಿಡ್ಡಾರೇಗೌಡನ ವಾದ. ಈ ಇಬ್ಬರೂ ಈಗ ಪರೀಕ್ಷೆಗೆ ಒಳಗಾಗಬೇಕೆಂದು ಜುಂಜಪ್ಪ ಹೇಳಿದ. ಆಗ ಸೇರಿದ್ದ ಪ್ರಜೆಪಾಲಕರೆಲ್ಲರೂ ಗೌಡಗಳು, ಕಟ್ಟೆಮನೆ ಯಜಮಾನರೆಲ್ಲರೂ ಆಗಬಹುದು ಆಗಬಹುದು ಎಂದರು. ಏನಪ್ಪ ನನ್ನ ಸತ್ವಪರೀಕ್ಷೆ ಅಂದ್ರೆ ಈ ಇದೇ ಬಯಲಾಗೆ ಕುಲಸ್ತರ ಮುಂದೆ ಏಳು ಬಂಡಿ ಗಾಡಿ ಸೌದೆ ತರಬೇಕು. ಒಂದು ಅರವಿ ಹುಚ್ಚೆಳ್ಳೆಣ್ಣೆ ತರಬೇಕು. ಅದನ್ನು ಒಂದು ಗುಂಡೂಡಿ ಒಂದು ಬಾಂಡ್ಲಿಗೆ ಹಾಕಿ ಕಾಯಿಸಬೇಕು. ಕಾಯುತ್ತಿರುವ ಎಣ್ಣೆಯೊಳಕೆ ಒಂದು ಬಂಗಾರದ ಉಂಗುರವನ್ನು ಮೌರು ಮಾಡಿ ಹಾಕಬೇಕು. ಕುದಾ ಕುದಾ ಕುದಿಯೋ ಎಣ್ಣೆಯೊಳಗೇ ಕೈಹಾಕಿ, ಆ ಉಂಗುರ ಎತ್ತಿಕೋಬೇಕು. ಇಬ್ಬರೂ ಆ ಕೆಲಸ ಮಾಡಲಿ. ದೇವುರ ಸತ್ಯ ತೋರಲಿ ಎಂದನು ಸ್ವಾಮಿ ಜುಂಜಪ್ಪ.


ಸೇರಿದ್ದ ಪ್ರಜೆಪಾಲರೆಲ್ಲಾ ಆಗಬಹುದು, ಆಗಬಹುದು, ಸತ್ಯ ತೀರ್ಮಾನವಾಗಲಿ ಅಂದ್ರು. ಅದರಂತೆ ಏಳು ಬಂಡಿಗಾಡಿ ತುಂಬಾ ಹುಣಸೆ ಸೌದೆ ತಂದು ಬೆಂಕಿ ಹಚ್ಚಿರು. ಬಾಂಡಲಿ ಇಟ್ಟು, ಹುಚ್ಚೆಳ್ಳೆಣ್ಣೆ ಬಿಟ್ಟರು. ಚೆನ್ನಾಗಿ ಕಾಯಿಸಿರು. ಉಕ್ಕಾ ಮಳ್ಳಾ ಎಣ್ಣೆಗೆ ಬಂಗಾರದ ಉಂಗುರ ಹಾಕಿರು. ಚಿತ್ರದೇವುರ, ನರಸಿಂಹದೇವುರ ಎಲ್ಲ ದೇವರಿಗೂ ಪೂಜೆ ಮಾಡಿದರು. ಹರಹರ ಮಹಾದೇವ ಅಂದ್ರು. ಬರ್ರಪ್ಪ ಇಬ್ಬರಲ್ಲಿ ಯಾರಾದರೂ ಕೈಹಾಕಿ ಉಂಗುರ ತಗೀರಿ ಅಂದ್ರು. ಅದಕೆ ಗಿಡ್ಡಾರೇಗೌಡ ಮೊದಲು ಬಾಳೇಗೌಡನೇ ತೆಗೆಲಿ ಅಂದನು. ಜನಗಳು ಅದಕೂ ಆಗಲಿ ಅಂದರು. ಬಾಳೇಗೌಡ, ಎಲ್ಲ ದೇವುತರುಗಳಿಗೂ



ಕೈಮುಗಿದು ಮನೆದೇವರ ಚಿತ್ರದೇವರ ಸ್ಮರಣೆ ಮಾಡಿ ಕುಲಸ್ಥರಿಗೆ ಶರಣಾರ್ಥಿ ಹೇಳಿ ಕೈಹಾಕಿ ಬಂಗಾರ ತೆಗೆದು ಗದ್ದಿಗೆ ಮೇಲಿಕ್ಕಿದ. ಜನ ಮೆಚ್ಚಿರು. ತಿರುಗ ಅದೇ ಉಂಗುರ ಅದೇ ಕುದಿಯೇ ಎಣ್ಣೆ ಬಾಂಡ್ಲಿಗೆ ಹಾಕಿ, ಈಗ ನೀನು ಕೈಹಾಕಿ ತೆಗೆಯಪ್ಪ ಅಂತ ಜುಂಜಪ್ಪ ಗಿಡ್ಡಾರೇಗೌಡನಿಗೆ ಹೇಳಿದರು. ಗಿಡ್ಡಾರೇಗೌಡ ಹಮ್ಮಿನಿಂದ ತಲೆಗೆ ಪೇಟ ಕಟ್ಟಿಕೊಂಡು ಕುದಿಯೋ ಎಣ್ಣೆಗೆ ಕೈಹಾಕಿದ. ಕೈ ಇನ್ನೂ ಪೂರಾ ಬಾಂಡಿಗೆ ಹೋಗಿರಲಿಲ್ಲ. ಮೊಣಕೈ ಕುಸುಬಿ, ಬಿಸಿಗೆ ಉದುರಿಹೋಗಿಬಿಡ್ತು. ಕೋಪದಿಂದ ಗಿಡ್ಡಾರೆಗೌಡ ಅಲ್ಲಿಂದ ಹೊರಡಲು ಕುದುರೆ ಹತ್ತಿದ. ಆಗ ಸ್ವಾಮಿ ಜುಂಜಪ್ಪ ಹೆಚ್ಚಿದವರಿಗೆ ಉಳಿಗಾಲ ಇಲ್ಲ ಅಂಬ್ತಾ ಜುಂಜಪ್ಪ ಉಕ್ಕಿನ ಉರಿಬಾಣ ಬಿಟ್ಟ. ಉರಿದು ಬೂದಿಯಾದ ಅಂತಾಲೂ ಹೇಳ್ತಾರೆ. ಜುಂಜಪ್ಪ ಮಣೇಗಾರರ ಕೂಟೆ ತಲೆ ಹೊಡೆಸಿದ ಅಂತಲೂ ಹೇಳುತಾರೆ. ಒಂದಂತೂ ಸತ್ಯ. ಕೇಡಿಗೆ ಉಳಿಗಾಲವಿಲ್ಲ. ಜುಂಜಪ್ಪ ಹೆಚ್ಚಿ ಮೆರೆದವರ ಮೀಸೆ ಬೋಳಿಸಿ ನಾಲ್ಕು ಸೀಮೆ ಬಾಗಿಲಿಗೂ ಹೆಸರಾದ.



ಕಳುವಾರಹಳ್ಳಿಯಲ್ಲಿರುವ ಜುಂಜಪ್ಪನ ಸಮಾಧಿ



ಕಳುವಾರಹಳ್ಳಿಯಲ್ಲಿರುವ ಜುಂಜಪ್ಪನ ಜೂಲುನಾಯಿ ಗುಡ್ಡೆ

## ಮರಡಿ ರಂಗಪ್ಪನೊಂದಿಗೆ ಪಗಡೆ

ಜುಂಜಪ್ಪ ತೀರಿಕೊಂಡ ಅವುನ್ನ ಸಮಾಧಿನೂ ಕಳುವಾರಹಳ್ಳಿ ಬೈಲಾಗೆ ಮಾಡಿದರು. ಪುಂಡರು, ಕಾಕರ ಕಾಟ ಜಾಸ್ತಿಯಾಯ್ತು. ಜುಂಜಪ್ಪನ ಮುಟ್ಟಿ ವ್ರತ ಕೆಡಿಸಿಬಿಡುತಾರೆ ಇನ್ನು ಅಂತ ಚಿತ್ರದೇವುರ ಪೂಜಾರಿ ಚಿಕ್ಕಯ್ಯ ಜುಂಜಪ್ಪನ ದೇವರನ್ನು ಒಂದು ಪೆಟ್ಟಿಗೆಗೆ ಹಾಕಿ ಬಿಟ್ಟು ಪರಸಮ್ಮನ ಕೆರೆ ಮುಂದೆ ಮಳ್ಳಾಗೆ ಹೂತಾಕಿಬಿಟ್ಟ.

ಜುಂಜಪ್ಪ ಸತ್ತ ಸಂಪಿಗೆ ಮರವಾದರೂ ಗುಡ್ಡದ ರಂಗಪ್ಪನ ಗೆಳೆತನ ಬಿಟ್ಟಿರಲಿಲ್ಲ. ಅವುನ ಜೊತೆಗೆ ಮಾತಾಡುತ್ತಿದ್ದ. ಮರಡಿ ಗುಡ್ಡದಾಗೆ ಬಂದು ಕುಂತುಕೋತಾ ಇದ್ದ ಸ್ವಾಮಿ. ಒಂದು ದಿನ ಬೇಸಿಗೆಯ ಕಾಲ ತಡಕಣಾಕಾಗದಷ್ಟು ಬಿಸಿಲು. ನರಮನುಷ್ಯರೂ ತತ್ತರಿಸಿದರು. ಹಸು ಪ್ರಾಣಿಗಳು ಗುಡ್ಡೆ ಹೊಡೆದುಕೊಂಡು ನಿಂತುಕೊಂಡವು. ತಲೆ ನೆಲಕ್ಕೆ ಇಕ್ಕಿದವು. ಅತ್ತಿತ್ತ ಹೊಳ್ಳುತ್ತಿರಲಿಲ್ಲ. ಇಂತ ಘೋರೆಂಬ ಬೇಸಿಗೆ ಕಾಲ ಜುಂಜಪ್ಪ, ಮರಡಿ ರಂಗಪ್ಪ ಇಬ್ಬರೂ ಮಾತಾಡುತ್ತಾ ಕುಂತಿದ್ರು. ಜುಂಜಪ್ಪ ಹೇಳಿದ 'ಇವತ್ತು ಮಳೆ ಬರುತ್ತೆ' ಅಂಬ್ತಾ. ರಂಗಪ್ಪ ಹೇಳಿದ 'ಹೋಗಯ್ಯ ಜುಂಜಪ್ಪ ಏನು ಮಾತು ಅಂತ ಆಡುತೀಯ? ಇಂಥ ನಡುಬೇಸಿಗೇಲಿ ಮಳೆ ಎಲ್ಲಿಂದ ಬಂದಾತು? ಸುಮ್ಮಕಿರಪ್ಪ. ಹೇಳಿದರೂ ನಂಬಂಗಿರಬೇಕು' ಅಂದ. ಜುಂಜಪ್ಪ 'ಇಲ್ಲ ಇವತ್ತು ಮಳೆ ಬರುತ್ತೆ ನೋಡು' ಅಂದನು. ಮರಡಿ ರಂಗಪ್ಪ ಹೇಳಿದ 'ನೋಡು ಜುಂಜಪ್ಪ ಇವತ್ತು ಮಳೆ ಏನಾರ ಬಂದ್ರೆ ನಾನು ಕೂರೋ ಮಂಚಾನ ನಿನಗೆ ಬಿಟ್ಟುಕೊಡುತೀನಿ. ನಾನು ಹಿಡಿದಿರೋ ಬಾಣ ನಿನಗೆ ಕೊಡುತೀನಿ' ಅಂದ. ಜುಂಜಪ್ಪ 'ಆಯಿತಪ್ಪ, ಈ ಹೊತ್ತು ಬೈಗು ಆಗುವುದರ ಒಳಗಾಗಿ ಮಳೆ ಬರಲಿಲ್ಲ ಅಂದ್ರೆ ನಾನು, ನಿನ್ನ ಕೋಲು ಹಿಡಕೊಂಡು ನಿನ್ನ ಮೆರವಣಿಗೆಯ ಕಾಲದಲ್ಲಿ ಕೋಲುಕಾರನಾಗಿ ನಿನ್ನ ಸೇವೆ ಮಾಡುತೀನಿ ಆಗಬಹುದೇ' ಅಂದನು. ಇಬ್ಬರೂ ಗೆಳೆಕಾರರು ಪಂಥ ಕಟ್ಟಿದರು. ರಣಬಿಸಿಲು. ಒಂದಂಗೈಯಗಲ ಮೋಡವಿಲ್ಲ, ಮಿಂಚಿಲ್ಲ. ಮಳೆ ಎಲ್ಲಿಂದ ಬರುತ್ತದೆ? ಅದೂ ಹೊತ್ತಲ್ಲದ ಹೊತ್ತು. ಬೇಸಿಗೆ ಕಾಲ, ಮಳೆ ಬರಲ್ಲ ಅಂಬೋದು ಮರಡಿ ರಂಗಪ್ಪನ ನಂಬಿಕೆ.

ಸರಿ ಮಧ್ಯಾಹ್ನವಾಯಿತು. ಜುಂಜಪ್ಪ ಕೈಲಾಸಕ್ಕೆ ಹೋದ. ಪಾರ್ವತಿ ಪರಮೇಶ್ವರರು

ಪಟ್ಟೆ ಮಂಚದ ಮೇಲೆ ಕೂತು ವಿನೋದವಾಡುತ್ತಿದ್ದಾರೆ. ಜುಂಜಪ್ಪ ಹೋದ. ಹೋದವನೆ ಪರಮೇಶ್ವರನ ಕಾಲಿಡಿದುಕೊಂಡುಬಿಟ್ಟ. ಆಗ ಶಿವ 'ಏನಪ್ಪ ಮಗನೆ ಸತ್ತು ದೇವರಾಗಿ ಕೈಲಾಸ ಸೇರಿರೂ ನಿನ್ನ ಭಂಗ ಹರೀಲಿಲ್ವ, ಬಡತನ ಹರೀಲಿಲ್ಲ? ಅದೇನಪ್ಪ ನಿನ್ನ ಸಂಕಟ?' ಅಂದನು. ಆಗ ಜುಂಜಪ್ಪ ಹೇಳಿದನು 'ಅಸವಲ್ಲದವರು ಮುಟ್ಟಿ ಬತ ಕೆಡಿಸುತ್ತಾರೆ ಅಂಬ್ತಾ ಪೂಜಾರಿ ಚಿತ್ತಯ್ಯ ನನ್ನನ್ನು ಪೆಟ್ಟಿಗೆ ಒಳಗೆ ಇಟ್ಟು ಪರಸವ್ವನ ಕೆರೆ ತಾವ ಕಾದ ಮರಳಾಗೆ ಹಾಕಿ ಮುಚ್ಚಿಬಿಟ್ಟವನೆ. ಆ ಕಾದ ಮರಳಾಗೆ, ಬೇಸಿಗೆ ದಗೆಗೆ ನನಗೆ ಪೆಟ್ಟಿಗೇಲಿ ಇರಕಾಗುವುದಿಲ್ಲ ಸ್ವಾಮಿ. ಈಗ ತಾವು ಮಾಯದ ಮಳೆ ತಂದು, ನನ್ನ ರಕ್ಷಿಸಬೇಕು. ನನ್ನ ದನಗಳನ್ನು ಕಾಪಾಡಬೇಕು ಸ್ವಾಮಿ' ಅಂಬ್ತಾ ಕೇಳುತಾನೆ ಸ್ವಾಮಿ. ಪರಮೇಶ್ವರ ಸಂತೃಪ್ತವಾಗಿದ್ದ. 'ಆಗಲಿ ಮಗನೆ, ಪ್ರಜೆಪಾಲಕರಿಗೆ, ನಂದಿಗಳಿಗೆ ಅನಾನುಕೂಲ ತಪ್ಪಿಸಬೇಕಾಗಿರೋದು ನನ್ನ ಕರ್ತವ್ಯ. ಮಳೆ ಬರಂಗೆ ಮಾಡ್ತೀನಪ್ಪ' ಅಂದನು. ಜುಂಜಪ್ಪ ಕೈಲಾಸದಿಂದ ಹಿಂತಿರುಗಿಲ್ಲ ಮರಡಿಗುಡ್ಡದ ಮೇಲೆ ಮೋಡ ಕ್ವಾಟೆ ಮುಗಿಲೊಡೆಯಿತು. ಫಳಾರಂತೆ ಕೋಲು ಮಿಂಚು ಬಂತು. ಅದೆಲ್ಲಿತ್ತೋ ಶಿವನೆ ಆಕಾಶ-ಭೂಮಿ ನೀರು ಮಾಡುವಂಗೆ ಮಳೆ ಹೊಡೀತು ಹೊಡೀತು ಅಂದ್ರೆ ಯಾಕೆ ಹೇಳಬೇಕು. ಕೆರೆ ಕಟ್ಟೆಲ್ಲ ಅರೆ ಘಳಿಗೇಲಿ ತುಂಬಿ ತೇಲಾಡಿಬಿಟ್ಟ. ಜುಂಜಪ್ಪ ದೇವುರ ಪೆಟ್ಟಿಗೆ ಹೂತಿದ್ದ ಕಾದ ಮರಳಿನ ಜಾಗ ಮಳೆನೀರಿಗೆ ಕೊಚ್ಚಿಕೊಂಡು ಹೋಗಿ, ಜುಂಜಪ್ಪನ ಪೆಟ್ಟಿಗೆ ಪರಸಮ್ಮನ ಕೆರೆಗೆ ತೇಲಾಡುತ್ತಿತ್ತು. ನಾಲ್ಕು ಕಡೆ ನೀರು ಹರಿದು ಬಂದು, ಪರಸಕ್ಕನ ಕೆರೆ ತುಂಬಿ ಕೋಡಿಗೆ ನೀರು ಹಿಡಿಸಲಾರದೆ ಕೆರೆ ಏರಿ ಮೇಲೆ ಹೋಗುತಾವೆ. ಜುಂಜಪ್ಪನ ಪೆಟ್ಟಿಗೆ ನೀರಿನಲ್ಲಿ ಆಚೆಗೆ ಹೋಗಿಬಿಟ್ತಾತು! ಅಂಬ್ತಾ ಪುರಲೇಹಳ್ಳಿ ಭೂತಪ್ಪ ಆಕಾಶದುದ್ದ ಬೆಳೆದುಬಿಟ್ಟು ಪರಸವ್ವನ ಕೆರೆ ಏರಿ ಮೇಲೆ ನೀರುಹೋಗದ ಹಾಗೆ ಮಳೆ ನಿಲ್ಲತನಕ ಅಡ್ಡ ಮಲಗಿಬಿಟ್ಟ. ಆಗ ಮಳೆ ನಿಂತಿತು. ಪೂಜಾರಿ ಚಿತ್ತಯ್ಯ, ಭಕ್ತರೆಲ್ಲಾ ಸೇರಿಕೊಂಡು ಪರಸವ್ವನ ಕೆರೆ ಬಳಿ ಜುಂಜಪ್ಪನ ಪೆಟ್ಟಿಗೆ ಪ್ರತಿಷ್ಠಾಪಿಸಿ ಪೂಜೆ ಮಾಡಿದರು. ಇತ್ತ ಜುಂಜಪ್ಪನ ಪೆಟ್ಟಿಗೆ ಪ್ರತಿಷ್ಠಾಪನೆ ಆಗೈತೆ, ಜಾತ್ರೆನೆ ಮಾಡಬೇಕು, ಉತ್ಸವನೇ ಮಾಡಬೇಕೆಂದು ಉದ್ದನಚಿಕ್ಕಣ್ಣ ಅಂಬೋನು ಹೇಳಿದ. ಅದರಂತೆ ಚಿತ್ರದೇವುರ ಪೂಜಾರಿಗಳು, ಒಕ್ಕಲುಗಳೆಲ್ಲಾ ಬಂದು ಸೇರಿದರು. ಅರೆ ಬಡಿಯೋ ಗುಡ್ಡದ ಮಲ್ಲನಿಗೆ ಹೇಳಿ ಕಳುಹಿಸಿದ ಉದ್ದನುಚಿಕ್ಕಣ್ಣ. ಆಗ ಗುಡ್ಡಮಲ್ಲ ಕೂಳು ನೀರಿಲ್ದ ರಾತ್ರೆಲ್ಲಾ ಪೂಜೆ ಮಾಡುತೀರ. ನಿಮ್ಮ ದೇವುರಿಗೆ ನಾನು ಅರೆ ಬಡಿಯಲ್ಲ ಅಂದ. ಇತ್ತ ಆವನು ವಾಪಸ್ ಬರುತ್ತಿದ್ದಂಗೆನೇ ಗುಡ್ಡಮಲ್ಲಣ್ಣನ ಹೆಂಡತಿ ಗುಡ್ಡ ಬಂಗಿಸಿದಂಗೆ ಬಸುರಿ, ರಕ್ತನೆ ಕಕ್ಕತಾಳೆ, ವಾಂತಿನೆ ಮಾಡಿಕೊಂತಾಳೆ. ಮೈಮೇಲೆ ಹಾವು-ಚೇಳು ಹರಿದಾಡುತವೆ ಅಂಬ್ತಾ ಬಾಯಿ ಬಾಯಿ ಬಡುಕಾತಾಳೆ. ಗುಡ್ಡಮಲ್ಲಯ್ಯನಿಗೆ ಗೊತ್ತಾಯಿತು. ಸ್ವಾಮಿ ಜುಂಜಪ್ಪನಿಗೆ ಅರೆ ಬಡಿಯೋಲ್ಲ, ಊಟವಿಲ್ಲ, ತಿಂಡಿಲ್ಲ,

ರಾತ್ರಿಯೆಲ್ಲಾ ಸಾಯಿಸುತಾರೆ, ಗೊಲ್ಲರಿಗೆ ದೇವರ ಪೂಜೆ ಜಾಸ್ತಿ ಅಂಬ್ತಾ ನಾನು ಉದಾಸೀನ ಮಾಡಿದ್ದು ತಪ್ಪು ಅಂದುಬಿಟ್ಟು ಹದಿನಾಲ್ಕು ಅರೆನ ತಗಲಾಕಿಕೊಂಡು ಉಜ್ಜರೆ ಬಡಿಕೊಂಡು ಗುಡ್ಡದಮಲ್ಲ ಬಂದ. ಜಾತ್ರೆ ನಡೆಯಿತು. ಆಗ ಜುಂಜಪ್ಪ ಹೇಳಿದ ನಿನ್ನಂತಹ ಪೂಜಾರಿ ಹುಟ್ಟಲ್ಲ (ಪೂಜಾರಿ ಚಿತ್ರಯ್ಯ) ಜುಂಜಪ್ಪನಂತ ಸಾದು ಮನುಷ ಹುಟ್ಟಲ್ಲ. ಉದ್ದನ ಚಿಕ್ಕಣ್ಣನಂತ ವಿವೇಕಿ ಹುಟ್ಟಲ್ಲ ಅಂದುಬಿಟ್ಟು ಜುಂಜಪ್ಪ ಆಕಾಶವಾರ್ಗವಾಗಿ ಹೊರಟುಹೋಗಿಬಿಟ್ಟ.

ಜುಂಜಪ್ಪ ಅಲ್ಲಿಂದ ಮರಡಿ ಗುಡ್ಡದ ಮೇಲಕ್ಕೆ ಬಂದ. ಜುಂಜಪ್ಪ ಮಾಯದ ಮಳೆ ಸುರಿಸಿದ್ದನಲ್ಲ ಮರಡಿ ರಂಗಪ್ಪನಿಗೆ ಗಾಬರಿಯಾಗಿಬಿಡ್ತು. ಇನ್ನು ಜುಂಜಪ್ಪ ಬಂದೇ ಬರುತಾನೆ, ಅವನಿಗೆ ನನ್ನ ಮಂಚನ ಬಿಟ್ಟು ಕೊಡಬೇಕಲ್ಲ ಅಂಬ್ತಾ ಒಂದು ಪ್ಲಾನ ಮಾಡಿದ. ಮರಡಿ ರಂಗಪ್ಪ ಕೈ ಕಾಲಿಗೆಲ್ಲಾ ಕಟ್ಟುಹಾಕಿಕೊಂಡು ಬಿಟ್ಟ. ಮಂಚ ಬಿಟ್ಟ ಏಳಲಾರದ, ತಿರುಗಾಡಲಾರದವನಂಗೆ ಆಕ್ಟ್ ಮಾಡುತಾನೆ. ಸರಿ ಜುಂಜಪ್ಪ ಬಂದ. ಬಂದು ನೋಡುತಾನೆ. ಬರಿ ಗಾಯದ ಕಟ್ಟು. ಏನಿದು ಅಂಬ್ತಾ ಜುಂಜಪ್ಪ ಕೇಳಿದರೆ. ಗುಡ್ಡದ ರಂಗಪ್ಪ ಹೇಳುತಾನೆ. ಅದೆಂತವೋ ಕುರ ಅಂಬ್ತಾ ಆಗಿ, ಒಡೆಕೊಂಡು ಮೈಮೇಲೆಲ್ಲಾ ಹರಡಿಕೊಂಡು ತಿರುಗಾಡದಂಗೆ ಕೂತುಕೊಳ್ಳದಂಗೆ ಆಗಿಬಿಟ್ಟೈತೆ ಅಂತ ಹೇಳಿಬಿಟ್ಟ. ಜುಂಜಪ್ಪ ಮುಟ್ಟಿದರೂ ಮುಟ್ಟಿಸಿಕೊಳ್ಳಕೆ ಹೆದರಿಕೊಂಡು ನೋವು ನೋವು ಅಂಬ್ತಾ ನರಳಿದ. ಜುಂಜಪ್ಪನಿಗೆ ಇವುನ ಉಪಾಯ ತಿಳಿದುಹೋಯಿತು. ಎಲಾ ರಂಗ, ಮಾಡುತೀನಿ ನೋಡು ನಿನಗೆ ಭಂಗ ಅಂದನು. ಏನೂ ಇಲ್ಲದೆ ಅವುಟ್ ಮಾಡ್ತಾ ಇದ್ದೀಯ. ನಿನ್ನ ಪೂಜೆ ಆಗವಾಗ ಭಕ್ತರು, ಪೂಜಾರಿಗಳು ಕೈಕಾಲಿಗೆ ಕಟ್ಟು ಹಾಕಿಕೊಂಡೇ ಪೂಜೆ ಮಾಡಲಿ. ಗಾಯದ ರಂಗ ಅಂತಲೇ ಹೆಸರು ನಿಲ್ಲಲಿ, ಎಂದು ಹೇಳಿಬಿಟ್ಟು ಜುಂಜಪ್ಪ ಅಲ್ಲಿಂದ ಕೈಲಾಸಕ್ಕೆ ಹೊರಟುಬಿಟ್ಟ.

ಇಂಥ ಜುಂಜಪ್ಪ ಸ್ವಾಮಿಯನ್ನು ದೇವರು ಅಂಮ್ತಾ, ಹಾವು-ಚೇಳು ಮುಂತಾದ ವಿಷ ಜಂತುಗಳು ಮುಟ್ಟದಂತೆ ಕಾಪಾಡುತ್ತಾನೆಂದು ನಂಬುತ್ತೇವೆ. ಸಿರಾ ತಾಲ್ಲೂಕಿನ ಕಳುವರಹಳ್ಳಿ ಜುಂಜಪ್ಪನ ನಿಜವಾದ ಸಮಾಧಿ. ಆದರೂ ಹಾಗಲವಾಡಿ, ಚೇಳೂರು, ಜರಿಮಲೆ, ಸಾಣೆಕೆರೆ, ಬಂಕನಕಟ್ಟೆ, ಹರಪನಹಳ್ಳಿ, ಸತ್ತೂರು, ಕೂಡ್ಲಿಗಿ, ತೋರಣಘಟ್ಟ ಇಲ್ಲೆಲ್ಲ ಜುಂಜಪ್ಪನ ದೇವಾಲಯಗಳಿದ್ದು ಇಲ್ಲೆಲ್ಲ ಜಾತ್ರೆ, ಉತ್ಸವಗಳು ವಿಜೃಂಭಣೆಯಿಂದ ನಡೆಯುತ್ತವೆ.

****

## ಜುಂಜಪ್ಪನ ಕಥೆಯಲ್ಲಿ ಪ್ರಸ್ತಾಪವಾಗುವ ಪ್ರಮುಖ ಸ್ಥಳವಿವರ

1. **ಆಲ್ದೂರು** ಇದು ಸಿರಾ ನಗರಕ್ಕೆ ಉತ್ತರಮುಖವಾಗಿ, ಮಧುಗಿರಿ ರಸ್ತೆಯಲ್ಲಿ 3 ಕಿ.ಮೀ. ದೂರದಲ್ಲಿದೆ. ಜುಂಜಪ್ಪನ ದನಗಳು ಹಾಲು ಕರೆಯುವ ಸ್ಥಳ ಎಂಬ ನಂಬಿಕೆ ಇದೆ.
2. **ಕೊಂಕಿ ಜರಿಮಲೆ:** ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಒಂದು ಗ್ರಾಮ. ಜುಂಜಪ್ಪನ ಪೂರ್ವಿಕರ ಸ್ಥಳ. ಇಲ್ಲಿನ ಜುಂಜಪ್ಪನ ದೇವಾಲಯವಿದೆ.
3. **ಕಳುವರಹಳ್ಳಿ** ಸಿರಾ ತಾಲ್ಲೂಕು ಕೇಂದ್ರದಿಂದ 15 ಕಿ.ಮೀ. ದೂರದ ತಾವರೇಕೆರೆ - ಹೊಸೂರು ರಸ್ತೆಯಲ್ಲಿ ಕೆ.ರಂಗನಹಳ್ಳಿ ಯಿಂದ 1.5 ಕಿ.ಮೀ. ದೂರದಲ್ಲಿದೆ.
4. **ಕರಿಯಾಲ, ಜವಗೊಂಡನಹಳ್ಳಿ**: ಇವು ಹಿರಿಯೂರು ತಾಲ್ಲೂಕಿನ ಗ್ರಾಮಗಳು. ಜುಂಜಪ್ಪ ದನ ಮೇಯಿಸಿದ ಸ್ಥಳ.
5. **ಪುರಲೇಹಳ್ಳಿ** ಜುಂಜಪ್ಪನ ಭಕ್ತ ಭೂತಪ್ಪನ ಪವಿತ್ರನೆಲೆ. ತಾವರೇಕೆರೆ ಯಿಂದ ಪಶ್ಚಿಮಕ್ಕೆ 8 ಕಿ.ಮೀ. ದೂರದಲ್ಲಿದೆ. ಇದರ ಪಕ್ಕದಲ್ಲಿ ಮೊಸರುಕುಂಟೆ, ಮದ್ದನಹಳ್ಳಿ ಬರುತ್ತವೆ.
6. **ಚಿಕ್ಕದೇವರಹಟ್ಟಿ** ಇದು ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ಕಾಡುಗೊಲ್ಲರ ಪುರಾತನ ಸ್ಥಳ. ಇಲ್ಲಿ ಜುಂಜಪ್ಪನ ಪೂರ್ವಿಕರು ಇದ್ದರು.
7. **ಚೇಳೂರು** ಗುಬ್ಬಿ ತಾಲ್ಲೂಕಿನ ಹೋಬಳಿ ಕೇಂದ್ರ. ಜುಂಜಪ್ಪನ ದನಗಳು ಚೇಳೂರು ರಂಗಣ್ಣನ ಹುಲ್ಲುಗಾವಲಿಗೆ ಪ್ರವೇಶ ಮಾಡಿದ್ದರಿಂದ ಚೇಳೂರು ಪಾಳ್ಯಗಾರ ರಂಗಪ್ಪನಾಯಕ ನೊಂದಿಗೆ ಕಾದಾಡಬೇಕಾಯಿತು.
8. **ಪರಸವ್ವನ ಕೆರೆ** ಸಿರಾದಿಂದ ದಕ್ಷಿಣಕ್ಕೆ 12 ಕಿ.ಮೀ. ದೂರದ ಮರಡಿಗುಡ್ಡಕ್ಕೆ ಹೊಂದಿಕೊಂಡಿದೆ. ಕಾಡುಗೊಲ್ಲರ ಪವಿತ್ರ ತೀರ್ಥಸ್ಥಳ. ದೇವರುಗಳನ್ನು ಇಲ್ಲಿಯೇ ಪುಣ್ಯ ಸ್ನಾನ ಮಾಡಿಸುವುದು.
9. **ಮರಡಿಗುಡ್ಡ** ಜುಂಜಪ್ಪನ ದನಗಳ ಹುಲ್ಲುಗಾವಲಿನ ಪ್ರದೇಶ. ಇದು ಸಿರಾದಿಂದ ದಕ್ಷಿಣಕ್ಕೆ ಸಿರಾ-ಬುಕ್ಕಾಪಟ್ಟಣ ರಸ್ತೆಯ ಕಂಬದಹಳ್ಳಿ ತಿರುವಿನಲ್ಲಿ ರಂಗನಾಥಪುರಕ್ಕೆ ಹೊಂದಿ ಕೊಂಡಿದೆ. ಮರಡಿರಂಗನಾಥನ ದೇವಾಲಯವಿದೆ. ಜಾತ್ರೆಯೂ ನಡೆಯುತ್ತದೆ.
10. **ಬಿಜ್ಜನಬೆಳ್ಳ** ಸಿರಾ ತಾಲ್ಲೂಕಿನ ಕಳ್ಳಂಬೆಳ್ಳಕ್ಕೆ ಸಮೀಪದಲ್ಲಿದೆ. ಜುಂಜಪ್ಪನ

ಬಸವನ ಸಮಾಧಿ ಇದ್ದು, ವರ್ಷಕ್ಕೊಮ್ಮೆ ಜುಂಜಪ್ಪನ ಬೃಹತ್ ಜಾತ್ರೆ ನಡೆಯುತ್ತದೆ.

11. **ಮದಗದ ಗುಡ್ಡ** ಮಂಚಲದೊರೆಯ ಗುಡ್ಡ. ಗುಬ್ಬಿ ತಾಲ್ಲೂಕಿನ ಮಂಚಲದೊರೆ ಗ್ರಾಮ. ಚೇಳೂರಿಗೆ 15 ಕಿ.ಮೀ. ದೂರದಲ್ಲಿದೆ.

12. **ತಾಳಿದುರ್ಗಿ ಕಾಡು** ಹೊಳಲ್ಕೆರೆ ತಾಲ್ಲೂಕಿನ ತಾಟ್ಯ ತಾಳಿದುರ್ಗಿಯ ನೆಲೆ. ಜುಂಜಪ್ಪನ ಹುಲ್ಲುಗಾವಲು. ತಾಳಿದುರ್ಗಿಯ ಸಂಹಾರದ ಸ್ಥಳ.

13. **ವೇಣುಕಲ್‌ಗುಡ್ಡ** ಸಿರಾ ಚಳ್ಳಕೆರೆ ತಾಲ್ಲೂಕಿನ ಗಡಿ ಗ್ರಾಮ. ಇಲ್ಲಿ ಎತ್ತಪ್ಪನ ದೇವಾಲಯವಿದೆ. ಜುಂಜಪ್ಪನು ದನ ಮೇಯಿಸಿದ ಉಲ್ಲೇಖವಿದೆ. ಗುಡ್ಡದಮಲ್ಲ ಎಂಬ ಅರೆವಾದ್ಯಗಾರನ ತಳಮನೆ ಎಂಬ ನಂಬಿಕೆ ಇದೆ.

14. **ಸಾಣೆಕೆರೆ** ಸಾಣೆಕೆರೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಗ್ರಾಮ. ಪುಟ್ಟಾಚಾರಿ ಎಂಬ ಮಾಟಗಾರನ ನೆಲೆ.

15. **ಸಣಬನಹಳ್ಳಿ** ಚೇಳೂರಿಗೆ ಪಶ್ಚಿಮಕ್ಕೆ ಮೂರು ಕಿ.ಮೀ. ದೂರದಲ್ಲಿದೆ. ಜುಂಜಪ್ಪನ ಬಡಮ್ಯೆಲ ಹೋರಿ ಇಲ್ಲಿ ಪಾದ ಊರಿದ್ದನೆಂಬ ಐತಿಹ್ಯ. ಪ್ರತಿವರ್ಷ ಜಾತ್ರೆ ನಡೆಯುತ್ತದೆ. ಜುಂಜಪ್ಪನ ದೇವಾಲಯವಿದೆ.

16. **ಹುಲಿಕುಂಟೆ** ಸಿರಾದಿಂದ 27 ಕಿ.ಮೀ. ದೂರದಲ್ಲಿದೆ. ಹೋಬಳಿ ಕೇಂದ್ರ. ದೊಡ್ಡ ಕೆರೆ ಇದೆ. ಜುಂಜಪ್ಪನಿಗೆ ಮಾಟ ಮಾಡಿದ ಸ್ಥಳ. ಸಮೀಪದಲ್ಲೇ ಚಂಗಾವರವಿದೆ. ಇದು ಹುಲ್ಲುಗಾವಲು ಪ್ರದೇಶ.

17. **ಸೊಂಡೂರು** ಬಳ್ಳಾರಿ ಜಿಲ್ಲೆಯ ಇಂದಿನ ತಾಲ್ಲೂಕು ಕೇಂದ್ರಭಾಗ. ಜುಂಜಪ್ಪನ ಹುಲ್ಲುಗಾವಲಿನ ಪ್ರದೇಶ.

18. **ಮತ್ತೋಡು** ಹೊಸದುರ್ಗ ತಾಲ್ಲೂಕಿನ ಗ್ರಾಮ. ಶ್ರೀರಾಮಪುರಕ್ಕೆ ಸಮೀಪದಲ್ಲಿದೆ. ಜುಂಜಪ್ಪನ ಹುಲ್ಲುಗಾವಲು.

19. **ಹಾಲೇನಹಳ್ಳಿ** ಇದು ಸಿರಾ ತಾಲ್ಲೂಕಿನ ಚಿಕ್ಕನಹಳ್ಳಿಗೆ 3 ಕಿ.ಮೀ. ದೂರದಲ್ಲಿದೆ. ಇಲ್ಲಿ ಜುಂಜಪ್ಪನ ದೇವಾಲಯವಿದ್ದು ಪ್ರತಿ ವರ್ಷ ಯುಗಾದಿ ಹಬ್ಬದ ಮರುದಿನ ಬೃಹತ್ ಜಾತ್ರೆ ನಡೆಯುತ್ತದೆ. ಜುಂಜಪ್ಪ ಈ ಭಾಗದಲ್ಲಿ ದನಗಳನ್ನು ತಡೆದಿದ್ದನೆಂಬ ನಂಬಿಕೆಯಿದೆ.

## ಜುಂಜಪ್ಪನ ಕಥೆ - ಓದು - ಅನುಭವ - ಅನಿಸಿಕೆ

ಜುಂಜಪ್ಪ ಕಾಡುಗೊಲ್ಲರ ನಂಬಿಕೆ, ಆಚರಣೆ, ಸಂಪ್ರದಾಯಗಳ ಜೀವನ ಕ್ರಮದ ಮೂರ್ತರೂಪ. ತಮ್ಮ ಒಟ್ಟು ಬದುಕನ್ನು ಜುಂಜಪ್ಪನ ರೂಪದಲ್ಲಿ ಕಾಣುವುದು ವಾಡಿಕೆ. ಸತ್ಯ, ನ್ಯಾಯ, ನೀತಿಗೆ ಮಾದರಿಯಾದ ಜುಂಜಪ್ಪ ಮಹಾಮಾನವತಾವಾದಿ. ಶಿವನ ಅವತಾರದ ಒಂದು ರೂಪವೂ ಹೌದು. ಕಾಡುಗೊಲ್ಲರ ಸಾಂಸ್ಕೃತಿಕ ಮಹಾವೀರ ಜುಂಜಪ್ಪನ ಮೇಲೆ, ಗಣೆ ಊದಿಕೊಂಡು ಆರೇಳು ರಾತ್ರಿಗಳ ಕಾಲ ನಿರಂತರವಾಗಿ ಪದ ಹೇಳಲಾಗುತ್ತದೆ. ಇದು ಮಹಾಭಾರತ, ರಾಮಾಯಣ ಕಥೆಗೆ ಸರಿಸಮಾನವಾಗಿ ಬೆಳೆಯುತ್ತಾ ಹೋಗುತ್ತದೆ. ಜುಂಜಪ್ಪ ಮಹಾಕಾವ್ಯವನ್ನು ವಿದ್ವಾಂಸರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಸಂಶೋಧನಾ ಪ್ರಬಂಧಗಳೂ ಪ್ರಕಟವಾಗಿವೆ.

ಪದ್ಯಗಂಧಿಯಾದ ಜುಂಜಪ್ಪನ ಕಾವ್ಯ. ಜುಂಜಪ್ಪನ ಸಂಸ್ಕಾರವಿಲ್ಲದವರಿಗೆ ಅರ್ಥವಾಗುವುದು ತುಸು ಕಷ್ಟ. ಇದನ್ನು ಅರಿಯಲು ಶ್ರಮ, ತಾಳ್ಮೆ ಎರಡೂ ಅಪೇಕ್ಷಣೀಯ. ಇಂಥ ಸಂದರ್ಭದ ಒಳಗೆ ಗೆಳೆಯ ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ ಜುಂಜಪ್ಪನ ಸಮಗ್ರ ಕಥಾವಳಿಯನ್ನು ಆತನ ಮೂರು ತಲೆಮಾರಿನ ವಿವರಗಳೊಂದಿಗೆ ಸೊಗಸಾಗಿ ತಂದಿದ್ದಾರೆ. ಇದೇ ಕೃತಿಯ ವಿಶೇಷ. ಮಾತ್ರವಲ್ಲ, ಅಲೆಮಾರಿ ಬುಡಕಟ್ಟು ಸಂಸ್ಕೃತಿ ಅಧ್ಯಯನಕ್ಕೆ ಹೊಸ ಆಕರವೂ ಆಗಿದೆ.

ಜುಂಜಪ್ಪನ ತಲೆಮಾರಿನ ಕಥೆ ಪ್ರಕಟವಾಗುವುದು ಸಿರಾ ಸೀಮೆಯ ಕಳುವೋರಹಳ್ಳಿ ಆ ಸುತ್ತಮುತ್ತ. ಅನುಸಂಗಿಕವಾಗಿ ಹುಲ್ಲು-ನೀರಿನ, ಅಲೆಮಾರಿತನದ ಕಾರಣ ಉಳಿದ ಕ್ಷೇತ್ರಗಳ ಉಲ್ಲೇಖ ಬರುತ್ತದೆ. ಲೇಖಕರು ಈ ಭಾಗಗಳ ಒಡನಾಡಿಯಾಗಿ ಬೆಳೆದ ಕಾರಣದಿಂದಾಗಿ ಜುಂಜಪ್ಪನ ಕಥೆಯನ್ನು ಹೆಚ್ಚು ವಾಸ್ತವವಾಗಿ ಸಂಪ್ರದಾಯಕ್ಕೆ ಚ್ಯುತಿ ಇಲ್ಲದೆ, ಮೂಲ ಕಥೆಗಾರರಿಂದ ಸಂಗ್ರಹಿಸಿದ್ದಾರೆ. ಹಾಗಾಗಿ ಕಾಡುಗೊಲ್ಲರ ಸಂಸ್ಕೃತಿ, ಭಾಷಾಶೈಲಿ, ಬದುಕಿನ ಕ್ರಮ ಯಥಾವತ್ತಾಗಿ ದಾಖಲಾಗಿದೆ. ಸಾತ್ವಿಕ ರೂಪದ ಜುಂಜಪ್ಪನ ಮೇಲೆ ಸಲ್ಲದ ಕಾರಣಕ್ಕೆ ಯುದ್ಧ ಮಾಡಿದ, ಪಗಡೆಯಾಡಿದ ಘಟನೆ, ಅದರಲ್ಲಿ ಚೇಳೂರು ರಂಗಣ್ಣನಾಯಕನ ಅಹಂ ಮುರಿದು, ಚೇಳೂರನ್ನು ಆಳ್ವಿಕೆ ಮಾಡಿದ ಘಟನೆಗಳನ್ನು ನಿರ್ಲಕ್ಷಿಸಿರುವ, ಬುಡಕಟ್ಟು ವಿರೋಧಿಗಳಿಗೆ ಹೊರತಾಗಿಯೂ, ಜುಂಜಪ್ಪ ಚೇಳೂರನ್ನು ಆಳ್ವಿಕೆ ಮಾಡಿರುವ ಮಹತ್ವದ ಸಂಗತಿಯನ್ನು ನೈಜವಾಗಿ ದಾಖಲಿಸಿರುವ ಲೇಖಕರು, ನಿರ್ಲಕ್ಷಿಸಿದ ಸಂಸ್ಕೃತಿಗೆ ನೈಜ ನ್ಯಾಯ ಒದಗಿಸಿರುವುದು ಹೆಮ್ಮೆಯ ಸಂಗತಿ. ಈ ಬಗೆಯ ಸಂಗತಿಗಳನ್ನು ತುಂಬಾ ಸ್ಫುಟವಾಗಿ, ಕಥಾಹಂದರ ಜಾರದಂತೆ ದಾಖಲಿಸಿರುವುದು ಈ ಗ್ರಂಥದ ಮಹತ್ವದ ಸಂಗತಿ.

ಇದೊಂದು ಜನಪದ ಕಥಾಸಂಗ್ರಹ. ಹಲವರು ಕಥೆ ಹೇಳಿದ್ದಾರೆ. ಪ್ರಾದೇಶಿಕತೆಯ ವ್ಯತ್ಯಾಸವೂ ಇದೆ. ಹೀಗಾಗಿ ಕೆಲವು ಸ್ಥಳ, ಘಟನೆ, ಹೆಸರುಗಳಲ್ಲಿ ಸಣ್ಣ ಪುಟ್ಟ ಬದಲಾವಣೆ ಇದ್ದಾಗ್ಯೂ ಜುಂಜಪ್ಪನ ಕಥೆಗೆ ಧಕ್ಕೆಯಾಗದಂತೆ ಆತನ ವ್ಯಕ್ತಿತ್ವ ಭವ್ಯವಾಗಿ ಮೂಡಿಬಂದಿದೆ. ನಾನು ಜುಂಜಪ್ಪನ ಕಥೆ ಹಾಡುವ ಪರಂಪರೆಯಲ್ಲಿ ಬಂದವನು. ನಾನು, ನನ್ನಂತೆ ಹಲವು ಹಾಡುಗಾರರು ಸೋಜಿಗ ಪಡುವಂತೆ ಜುಂಜಪ್ಪ ಕಥಾವಳಿ ಹೊರಬಂದಿದೆ. ಇದು ಜುಂಜಪ್ಪನ ಪರಂಪರೆ, ಬುಡಕಟ್ಟು ಸಂಸ್ಕೃತಿ ಯಾವತ್ತಿಗೂ ಮರೆಯಬಾರದ ಸಾಂಸ್ಕೃತಿಕ ದಾಖಲೆಯಾಗಿದೆ.

**- ಚಂಗಾವರದ ಕರಿಯಪ್ಪ,**

ಗೌ|| ಅಧ್ಯಕ್ಷರನು, ಜಿಲ್ಲಾ ಕಾಡುಗೊಲ್ಲರ ಸಂಘ, ತುಮಕೂರು

ವೀರಜುಂಜಪ್ಪ ಜಾತ್ಯಾತೀತವಾಗಿ ಜನಸಾಮಾನ್ಯರಿಗೂ ಪ್ರಿಯವಾಗುವಂತೆ, ಕಾಡುಗೊಲ್ಲರ ಸಾಂಸ್ಕೃತಿಕ ನಾಯಕ. ವೀರಜುಂಜಪ್ಪನ ಬಗ್ಗೆ ಹಾಡುಗಳು, ಕತೆಗಳು, ಕಾವ್ಯಗಳು, ಪುರಾಣಗಳ ಬಗ್ಗೆ ಸಾಕಷ್ಟು ಪುಸ್ತಕಗಳು ಪ್ರಕಟವಾಗಿದ್ದರೂ ಸಹ ಈ ಕಥಾ ಪುಸ್ತಕ ಜುಂಜಪ್ಪನ ಇತಿಹಾಸದ ಹುಟ್ಟಿನ ಮೊದಲು ಹಾಗೂ ಹುಟ್ಟಿನ ನಂತರ ಕಥೆಯನ್ನು ತಿಳಿಸಿಕೊಡುವ ಅಪರೂಪದ ಕಥಾವಳಿ. ಡಾ|| ಚಿಕ್ಕಣ್ಣ ಯಣ್ಣೆಕಟ್ಟೆರವರು ಇಲ್ಲಿ ತಮ್ಮ ಬರವಣಿಗೆಯ ಮೂಲಕ ನಿಜಕ್ಕೂ ಆತ್ಮೀಯವಾಗಿ, ಸ್ಪಷ್ಟವಾಗಿ, ಅದ್ಭುತವಾಗಿ ಮೂಡಿಬರುವಂತೆ ನೋಡಿಕೊಂಡು ಜುಂಜಪ್ಪನಿಗೆ ಚಾರಿತ್ರಿಕವಾಗಿ ಕಥಾ ಪರಂಪರೆ ನಿರ್ಮಿಸಿ ಜನಸಾಮಾನ್ಯರಿಗೂ ಅರ್ಥ ಮಾಡಿಸಿದ್ದಾರೆ.

ಇದರಿಂದ ಸಮಸ್ತ ಕನ್ನಡ ನಾಡಿನ ಓದುಗರಿಗೆ, ಜನಪದ ವಿದ್ವಾಂಸರಿಗೆ, ಸಂಶೋಧನಾ ವಿದ್ಯಾರ್ಥಿಗಳಿಗೆ, ಬುಡಕಟ್ಟು ಸಂಸ್ಕೃತಿಯನ್ನು ಅಧ್ಯಯನ ಮಾಡುವವರಿಗೆ ಅನುಕೂಲವಾಗುವ ಜುಂಜಪ್ಪನ ಕಥಾ ಪರಂಪರೆಯ ಮೊದಲ ಪುಸ್ತಕ ಇದಾಗಿದೆ.

**- ಹೊನ್ನಗೊಂಡನಹಳ್ಳಿ ಕೆ.ಚಿಕ್ಕಣ್ಣ** ಎಂ.ಆರ್.ಡಿ

ಸಮಾಜೋ-ಸಾಂಸ್ಕೃತಿಕ ಸಂಘಟಕ, ಸಿರಾ

ಜುಂಜಪ್ಪನ ಕಾವ್ಯ - ಕತೆ ಹೆಚ್ಚು ಜನಜನಿತವಾಗಿರುವುದು ಸಿರಾ, ಗುಬ್ಬಿ ಈ ಭಾಗದಲ್ಲಿಯೇ. ಈ ಸಂಬಂಧಿ ಕಥೆಯನ್ನು ಕಾಡುಗೊಲ್ಲರಂತೆಯೇ ಕುಂಚಿಟಿಗರು, ಕುರುಬರು, ಬೇಡನಾಯ್ಕರು, ಮಣೆಗಾರರೂ ಹಾಡುತ್ತಾರೆ. ಸಿರಾ ಸೀಮೆಯ ಬಹುದಿನಗಳ ಒಡನಾಡಿ ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ ಜುಂಜಪ್ಪನ ಸಮಗ್ರ ಕಥೆಯನ್ನು ಅದರ ಮೂಲಚೂಲದೊಂದಿಗೆ ಸಮರ್ಥವಾಗಿ ಸಂಗ್ರಹಿಸಿದ್ದಾರೆ. ಕಸುಬುದಾರಿ ಕ್ಷೇತ್ರಕಾರ್ಯ ತಜ್ಞತೆ, ಕಲಾವಿದರ

ಒಡನಾಡಿಯಾಗಿರುವ ಮೇಷ್ಟ್ರು ಪದ್ಯ ಮಾದರಿಯ ಜುಂಜಪ್ಪನ ಪರಿಶ್ರಮದ ಕಾವ್ಯವನ್ನು, ಕಥಾ ರೂಪದಲ್ಲೂ ಸಂಗ್ರಹಿಸಿರುವುದು ಜುಂಜಪ್ಪನ ಬಗೆಗಿನ ಅರಿವಿಗೆ ಸರಳ ಮಾರ್ಗವೊಂದನ್ನು ನಿರ್ಮಿಸಿದ್ದಾರೆ. ಜುಂಜಪ್ಪನ ಜಾತ್ಯಾತೀತ ನಿಲುವನ್ನು ಭಾವುಕತೆಯ ಹೊರಗೆ ನಿಂತು ವೈಚಾರಿಕತೆಗೆ ಹತ್ತಿರವಾಗಿ ರೂಪಿಸಿರುವುದು ಎಲ್ಲರೂ ಇಷ್ಟಪಡುವ ಕೆಲಸ. ಮಾತ್ರವಲ್ಲ ಸಿರಾ ಸೀಮೆ ಎಂದೂ ಮರೆಯಬಾರದ ಸಾಂಸ್ಕೃತಿಕ ಸಂಪತ್ತನ್ನು, ಈ ಪುಸ್ತಕದ ಮೂಲಕ ಸಾಕ್ಷಾತ್ಕಾರಗೊಳಿಸಿದ್ದಾರೆ. ಈ ಹಿಂದಿನ ಎಲ್ಲ ಪಠ್ಯಗಳಿಗಿಂತ ಸರಳ, ನೇರ, ಅತ್ಯುಪಯುಕ್ತ ಗ್ರಂಥ ಇದಾಗಿದೆ. ಈ ಮಹತ್ವದ ತನಕ್ಕೆ ಮೇಷ್ಟ್ರನ್ನು ನಾವೆಲ್ಲರೂ ಅಭಿನಂದಿಸಲೇಬೇಕು.

**- ಗೋವರ್ಧನಹಳ್ಳಿ ಪಿ.ಮಂಜುನಾಥ್**
ಸಂಚಾಲಕರು, ಸಿರಾ ಸೀಮೆ ಸಾಂಸ್ಕೃತಿಕ ವೇದಿಕೆ, ಸಿರಾ

ಕಾಡುಗೊಲ್ಲರ ಸಂಸ್ಕೃತಿಯ ಮೂಲ ಸ್ವರೂಪವನ್ನು ಸಾಮಾನ್ಯ ಜನರಿಂದ ಹಿಡಿದು ಸಂಶೋಧಕ ವರ್ಗದವರೆಗೂ ಅರ್ಥ ಮಾಡಿಕೊಳ್ಳಲು ಜುಂಜಪ್ಪನ ಕಾವ್ಯ ಸಾಧನವಾಗಿದೆ. ಕಾಡುಗೊಲ್ಲರು ಗಣೆಯನ್ನು ವಾದ್ಯವನ್ನಾಗಿ ಬಳಸಿಕೊಂಡು ಆಡುಮಾತಿನ ರೂಪದಲ್ಲಿ ಇಡೀ ಕಾವ್ಯವನ್ನು ಹಾಡುವುದರಿಂದ ಆ ಸಮುದಾಯಕ್ಕೆ ಮಾತ್ರ ಅರ್ಥಮಾಡಿಕೊಳ್ಳಲು ಸಾಧ್ಯ ಮತ್ತು ಹಾಡುವವರು ಕಾವ್ಯವನ್ನು ತಮಗೆ ಇಷ್ಟವಾದ ಭಾಗಗಳನ್ನು ಆಯ್ದುಕೊಂಡು ಹಾಡುತ್ತಾರೆ. ಉದಾ. ಜುಂಜಪ್ಪನಿಗೆ ಕಂಬೇರ ಗೊಲ್ಲರು ಮದ್ದಿಕ್ಕಿದ ಭಾಗ ಹಾಡಿದರೆ ಇನ್ನೊಂದು ಬಾರಿ ಚೋಳೂರ ಕಲ್ಲುಕಂಭ ಮುರಿದ ಭಾಗವನ್ನು ಹಾಡುತ್ತಾರೆ. ಹೀಗೆ ಬಿಡಿಬಿಡಿಯಾಗಿ ಕಾವ್ಯವನ್ನು ಹಾಡುವುದರಿಂದ ಇತರರಿಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಇಂಥ ಜುಂಜಪ್ಪನ ಕಥೆಯನ್ನು ಅಧ್ಯಯನಕಾರರಾದಂತಹ ಡಾ|| ಚಿಕ್ಕಣ್ಣ ಯಣ್ಣೆಕಟ್ಟೆಯವರು ತುಂಬಾ ಸಮರ್ಥವಾಗಿ, ಕಥಾ ಕ್ಷೇತ್ರಕ್ಕೆ ಮೊದಲಿಗರಾಗಿ ಸಂಗ್ರಹಿಸಿ, ಮೂಲ ಧಾಟಿಯಲ್ಲಿಯೇ ಕೊಟ್ಟಿರುವುದರಿಂದ ಕಾವ್ಯಸತ್ವ ಮೀರದೆ, ಕಥೆಯ ಕೊಂಡಿ ಕಳಚದೆ, ಜುಂಜಪ್ಪನ ಪೂರ್ವದ ಎರಡು ತಲೆಮಾರು, ಜುಂಜಪ್ಪನ ಬದುಕು ಸಾಧನೆಯ ಜೊತೆಗೆ ಜುಂಜಪ್ಪನ ಮರಣೋತ್ತರ ಪ್ರಸಂಗವನ್ನು ತುಂಬಾ ಅರ್ಥಪೂರ್ಣವಾಗಿ ಕೊಡುವುದರ ಮೂಲಕ ಜುಂಜಪ್ಪನ ಸಮಗ್ರ ಚಿತ್ರಣ ಕೊಡುವ ಅಪೂರ್ವ ಕೆಲಸ ಮಾಡಿದ್ದಾರೆ.

**- ಮೋಹನ್‌ಕುಮಾರ್ ಎನ್.,** ಜಾನಪದ ಹಾಡುಗಾರ, ಜಾನಪದ ವಿಶ್ವವಿದ್ಯಾನಿಲಯ, ಬೆಂಗಳೂರು

ಜುಂಜಪ್ಪನ ಸಂಸ್ಕೃತಿ, ಸ್ಥಳ, ಸಮಾಧಿಯನ್ನು ಜೋಪಾನವಾಗಿ ಕಾಪಾಡಿಕೊಂಡು ಬಂದ ನಾವು ನಮಗೆ ಅವಕಾಶವಾದಾಗಲೆಲ್ಲಾ ಸಣ್ಣಪುಟ್ಟ ಸೇವೆ ಮಾಡಿದ್ದೇವೆ. ನಮ್ಮ ಹಿರಿಯರು ಹೇಳುತ್ತಿದ್ದ ಜುಂಜಪ್ಪನ ಎಲ್ಲ ಕತೆಯನ್ನು ನಮ್ಮ ಮಕ್ಕಳಿಗೆ ಹೇಳಲು ನಮ್ಮಿಂದ ಹೇಳಲು ಆಗುವುದಿಲ್ಲ. ಸಮಗ್ರವಾಗಿ ಕಥೆ ಮಾಡುವವರೂ ಸಿಕ್ಕುವುದಿಲ್ಲ. ಇಂಥ ಕಾಲಕ್ಕೆ ಡಾ|| ಚಿಕ್ಕಣ್ಣ ಹತ್ತಾರು ಮೂಲಗಳಿಂದ ಎಲ್ಲಾ ಸೀಮೆಯ ಜುಂಜಪ್ಪನ ಕಥೆಯನ್ನು ಸಂಗ್ರಹಿಸಿ ನಮ್ಮ ಕಾಡುಗೊಲ್ಲ ಪರಂಪರೆ ಬಹುದೊಡ್ಡ ಉಪಕಾರ ಮಾಡಿದ್ದಾರೆ. ಈ ಪುಸ್ತಕ ನಮಗೆ ನಿಜಕ್ಕೂ ಒಂದು ವರವಾಗಿದೆ ಎಂಬುದರಲ್ಲಿ ಸಂದೇಹವೇ ಇಲ್ಲ.

- **ಸುಧಾಕರ ಬೇವಿನಹಳ್ಳಿ,** ತಾ.ಪಂ ಸದಸ್ಯ

ಗೆಳೆಯ ಯಣ್ಣೆಕಟ್ಟೆ ಚಿಕ್ಕಣ್ಣ ಜನಪದ ಲೋಕಕ್ಕೆ ಸಂಪೂರ್ಣವಾಗಿ ತನ್ನನ್ನು ಅರ್ಪಿಸಿಕೊಂಡವರು. ಒಂದಿಲ್ಲೊಂದು ಕೆಲಸದಲ್ಲಿ ತೊಡಗಿಕೊಳ್ಳುತ್ತ ಸದಾ ಕ್ರಿಯಾಶೀಲರಾಗಿರುವುದು ಅವರ ವೈಶಿಷ್ಟ್ಯ. ಕಳೆದ ಹದಿನೈದು ವರ್ಷಗಳಿಂದ ಸಿರಾ ನಗರದಲ್ಲಿ ಕನ್ನಡ ಪ್ರವಾಚಕರಾಗಿ ಸೇವೆ ಸಲ್ಲಿಸುತ್ತಿರುವ ಇವರು ಸಿರಾ ಭಾಗದ ಜನಪದ ಶೋಧದಲ್ಲಿ ತೊಡಗಿ ಮೌಲಿಕ ಕೃತಿಗಳನ್ನು ಹೊರತಂದಿದ್ದಾರೆ. ಕಾಡುಗೊಲ್ಲರ ಸಾಂಸ್ಕೃತಿಕ ವೀರನಾದ ಜುಂಜಪ್ಪನನ್ನು ಕುರಿತಂತೆ ನಾಡಿನ ಶ್ರೇಷ್ಠ ಜನಪದ ವಿದ್ವಾಂಸರು ಸಂಗ್ರಹ ಮತ್ತು ಸಂಶೋಧನೆಯಲ್ಲಿ ತೊಡಗಿ ಒಳ್ಳೆಯ ಕೃತಿಗಳನ್ನು ಪ್ರಕಟಿಸಿದ್ದಾರೆ. ಅಲ್ಲದೆ ಒಂದು ಜುಂಜಪ್ಪನ ಮಹಾಕಾವ್ಯವೂ ಹೊರಬಂದಿದೆ. ಇಷ್ಟಾದರೂ ಅಧ್ಯಯನಕ್ಕೆ ಒಳಪಡದ ಕೆಲವು ವಿಷಯಗಳು ಹಾಗೆಯೇ ಉಳಿದಿದ್ದವು. ಆ ಓರೆಕೋರೆಗಳನ್ನು ತುಂಬಿಕೊಡುವ ಕೆಲಸವನ್ನು ಈಗ ಚಿಕ್ಕಣ್ಣನವರು ಮಾಡಿದ್ದಾರೆ. ಜನಸಾಮಾನ್ಯರಿಗೂ ಅರ್ಥವಾಗುವಂತೆ ಸರಳ ಗದ್ಯದಲ್ಲಿ ಜುಂಜಪ್ಪನ ಮೂರು ತಲೆಮಾರಿನ ಕಥೆಯನ್ನು, ಪಶುಪಾಲನೆಗಾಗಿ ಪಟ್ಟ ಪಾಡನ್ನು, ಅವನ ಮಾವಂದಿರ ದ್ವೇಷಾಸೂಯೆಗಳನ್ನು, ಸಹಿಷ್ಣುತೆಯನ್ನು, ಜುಂಜಪ್ಪನ ಸಾವಿನ ನಂತರದ ಘಟನೆಗಳನ್ನು ಕಥೆಯ ಹಂದರ ಹದಗೆಡದಂತೆ ಸ್ವಚ್ಛಂದವಾಗಿ ನಿರೂಪಿಸಿರುವ ಶೈಲಿ ಮೆಚ್ಚುವಂಥದ್ದು.

- **ಪ್ರೊ|| ಹೊನ್ನಗಾನಹಳ್ಳಿ ಕರಿಯಣ್ಣ,**
ಪ್ರಾಧ್ಯಾಪಕ, ತುಮಕೂರು ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು

ನಮ್ಮ ಮೇಷ್ಟ್ರು ಜುಂಜಪ್ಪನ ಬಗೆಗೆ ಉತ್ತಮ ಕೆಲಸ ಮಾಡಿದ್ದಾರೆ. ನಾನು ಈ ಪ್ರತಿಯನ್ನು ಕುತೂಹಲದಿಂದಲೇ ಓದಿದೆ. ನಮ್ಮ ಕನ್ನಡ ವಿಭಾಗದ ಎಲ್ಲ ಅಧ್ಯಾಪಕರು ಸ್ಪರ್ಧಾತ್ಮಕವಾಗಿಯೇ ಓದಿದೆವು. ಬೆಟ್ಟವನ್ನು ಅಗೆದು ಇಲಿ ಹಿಡಿಯುವಂತೇ ಕಾವ್ಯದ

ಓದು ಸುಲಭವಾಗಿ ದಕ್ಕದಿದ್ದ ಕಾಲಕ್ಕೆ ಈ ಗದ್ಯ ಕಥನ ಸಾರ್ಥಕ ಕೆಲಸ. ಮೂಲ ಜನಪದ ಸೊಗಡಲ್ಲೇ ಡಾ|| ಚಿಕ್ಕಣ್ಣನವರು ಸೊಗಸಾಗಿ ನಿರೂಪಿಸಿದ್ದಾರೆ.

**- ಡಾ|| ಅಂಕನಹಳ್ಳಿ ಪಾರ್ಥ,** ರಾಮನಗರ

ವೀರ ಜುಂಜಪ್ಪನ ಕಥಾವಳಿ, ಜನಪದ ಕಥಾ ಮಾಲಿಕೆಯನ್ನು ಡಾ|| ಚಿಕ್ಕಣ್ಣ ಯಣ್ಣೆಕಟ್ಟೆಯವರು ಜನಸಾಮಾನ್ಯರಿಗೂ ಮನಮುಟ್ಟುವಂತೆ ಹೇಳಿದ್ದಾರೆ. ನಾವು ಜುಂಜಪ್ಪನ ಪಟ್ಟದ ಅರೆಯವರು. ನಮ್ಮ ಮನೆತನ ಜುಂಜಪ್ಪನ ಸೇವೆಯನ್ನು ಶ್ರದ್ಧಾ ಭಕ್ತಿಯಿಂದ ಮಾಡಿಕೊಂಡು ಬರುತ್ತಿದ್ದೇವೆ. ನಮಗೆ ಅಷ್ಟೇ ಅಲ್ಲ ಜುಂಜಪ್ಪನನ್ನು ಪೂಜೆ ಮಾಡುವವರಿಗೂ ಜುಂಜಪ್ಪ ಪೂರಾ ಕಥೆ ತಿಳಿದಿಲ್ಲ. ಒಂದೆರಡು ಸಂದು ನಮಗೆಲ್ಲಾ ಗೊತ್ತಿತ್ತು. ಇವರ ಈ ಪುಸ್ತಕದ ಡಿಟಿಪಿ ಪ್ರತಿಯನ್ನು ಕುತೂಹಲವಾಗಿ ಕೈಗೆತ್ತಿಕೊಂಡು ಒಂದೇ ಒಂದು ದಿನದಲ್ಲಿ ಓದಿ ಮುಗಿಸಿದೆ. ಓದುವುದನ್ನು ನಿಲ್ಲಿಸಲು ಖಂಡಿತ ಸಾಧ್ಯವಾಗಲಿಲ್ಲ. ಸ್ವಾಮಿಯ ಕಥೆಯನ್ನು ಇಷ್ಟೊಂದು ಸರಾಗವಾಗಿ, ಸ್ಪಷ್ಟವಾಗಿ ಎಲ್ಲವನ್ನು ಹೇಳಿರುವುದು ನಮಗೆಲ್ಲಾ ಈ ಪುಸ್ತಕ ಬಯಸಿ ಬಯಸಿ ಬಂದ ಭಾಗ್ಯವಾಗಿದೆ. ಪುಸ್ತಕವನ್ನು ನಮ್ಮ ಮನೆಯವರು, ನಮ್ಮೂರಿನ ಯೋಗಾನಂದ ಮೊದಲಾದ ಹಲವು ಗೆಳೆಯರು ಓದಿ ಖುಷಿಪಟ್ಟೆವು. ಸ್ವಾಮಿ ಜುಂಜಪ್ಪನನ್ನು ನಮ್ಮ ಜನಕ್ಕೆ ಸಮಗ್ರವಾಗಿ ಪರಿಚಯಿಸಿ ಬಹುದೊಡ್ಡ ಉಪಕಾರ ಮಾಡಿದ್ದಾರೆ.

**- ಬಿ.ಕೆ.ನರಸಿಂಹರಾಜು,** ಬಿ.ಎ., ಬಿ.ಇಡಿ,
ಜುಂಜಪ್ಪನ ಪಟ್ಟ ಅರೆ ವಂಶಸ್ಥರು, ಬೇವಿನಹಳ್ಳಿ

ಜುಂಜಪ್ಪನ ಮೇಲೆ ಸಂಶೋಧನೆ ನಡೆದಿದ್ದು ಹಲವಾರು ಪುಸ್ತಕವನ್ನು ದೊಡ್ಡ ದೊಡ್ಡ ವಿದ್ವಾಂಸರು ಬರೆದಿರಬಹುದು. ಆದರೆ ಅದರಿಂದ ನಮ್ಮಂಥವರಿಗೇನು ಪ್ರಯೋಜನ? ಸರಳವಾಗಿ ಜುಂಜಪ್ಪನ ಕಥೆಯ ಪರಿಚಯ ನಮಗೆ ನಮ್ಮಂತೆ ಗೊಲ್ಲ ಜನಾಂಗಕ್ಕೂ ಬೇಕಿತ್ತು. ಅಂಥ ಉಪಕಾರ ವೀರ ಜುಂಜಪ್ಪ ಪುಸ್ತಕದಿಂದ ಆಗಿದೆ. ಈ ಪುಸ್ತಕ ಜುಂಜಪ್ಪನ ಸಮಗ್ರ ಬದುಕನ್ನು ಕಣ್ಣ ಮುಂದೆ ತಂದಿರಿಸಿತು. ಪುಸ್ತಕದ ಪೂರ್ಣ ಮುದ್ರಣವನ್ನು ನಾವೆಲ್ಲ ಕಾಯುತ್ತಿದ್ದೇವೆ.

**- ಬೇವಿನಹಳ್ಳಿ ಯೋಗಾನಂದ**

ಈಗ ಗಣೆ ಊದುವವರೂ ಇಲ್ಲ, ಪದ ಹೇಳುವವರೂ ಇಲ್ಲ. ಹೇಳಿದರೂ ಕೇಳುವ ತಾಳ್ಮೆ ಈಗಿನ ಜನಕ್ಕಿಲ್ಲ. ಜುಂಜಪ್ಪ ಮರೆತೇ ಹೋಗಿಬಿಡುತ್ತಿದ್ದಾನೇನೋ ಎನ್ನುವ ಕಾಲಕ್ಕೆ ಈ ಕಥಾ ಪುಸ್ತಕ ಹುಡುಗರಿಂದ ಹಿಡಿದು ದೊಡ್ಡವರ ತನಕ ಎಲ್ಲರಿಗೂ ಅರ್ಥವಾಗುವ

ಹಾಗೆ ಬರೆಯುತ್ತ ಒಳ್ಳೆಯ ಪುಸ್ತಕವನ್ನು ಚಿಕ್ಕಣ್ಣನವರು ಮಾಡಿದ್ದಾರೆ.

- **ಬಿ.ಎನ್.ನಾಗಣ್ಣ,** ಮುಖ್ಯ ಶಿಕ್ಷಕರು, ಸಿರಾ

ನಮಗೆ ಜುಂಜಪ್ಪ ಗೊತ್ತಿತ್ತು, ದೇವರು ಎಂಬುದರಿಂದ. ಆದರೆ ಈ ಜುಂಜಪ್ಪನ ಕಥಾವಳಿ ಜುಂಜಪ್ಪ ಇಷ್ಟೊಂದು ಮಹಾಪುರುಷನೇ, ಹೀಗೆಲ್ಲ ಪವಾಡ ಮಾಡಿದ್ದಾನೆಯೇ ಅನ್ನುವ ಬಗೆಗೂ ತಿಳಿಯಿತು. ಮಾತ್ರವಲ್ಲ, ನಮ್ಮ ಪ್ರತಿಯೊಬ್ಬ ಯುವ ಜನಾಂಗವೂ ಈ ಪುಸ್ತಕವನ್ನು ಓದಿ ತಿಳಿಯುವುದಲ್ಲ, ಮಕ್ಕಳಿಗೂ ಕಥೆ ಹೇಳಬೇಕು. ಹಾಗೆ ಕಥೆ ಹೇಳುವ ಹಾಗೆ ಈ ಪುಸ್ತಕವನ್ನು ಬರೆಯಲಾಗಿದೆ.

- **ಕೆ.ಮಾರಯ್ಯ,** ಎಂ.ಎ., ಬಿ.ಇಡಿ, ಬೇಡರಕಟ್ಟೆ

ನಾವೆಲ್ಲರೂ ಚಿಕ್ಕಣ್ಣನವರನ್ನು ಜುಂಜಪ್ಪ ಸ್ವಾಮಿ ಎಂತಲೇ ಕರೆಯುತ್ತೇವೆ. ಈ ಮನುಷ್ಯ ಯಾವಾಗಲೂ ಜನಪದ ಅಂತ ಗೊಲ್ಲರು, ನಾಯಕರು, ಕುಂಚಿಟಿಗರ ಊರು ಕೇರಿಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಾನೆ. ಹೆಚ್ಚಾಗಿ ತಿರುಗುತ್ತಿರುತ್ತಾರೆ. ಜುಂಜಪ್ಪನ ಮೇಲೆ ನಮಗೆ ಹೆಚ್ಚು ತಿಳುವಳಿಕೆ ಇರಲಿಲ್ಲ. ಜುಂಜಪ್ಪನ ಕಾಣಿಕೆ ಎಂದು ಮನೆಯ ಮುಂದಕ್ಕೆ ಗಣೆ ಊದಿಕೊಂಡು ಬರುತ್ತಿದ್ದ ವ್ಯಕ್ತಿಯಿಂದ ಜುಂಜಪ್ಪನ ಬಗೆಗೆ ಆತನ ಹೆಸರು ಮಾತ್ರ ಗೊತ್ತಿತ್ತು. ಆದರೆ ಈ ಜುಂಜಪ್ಪನ ಕಥಾವಳಿ ಜುಂಜಪ್ಪ ನಮ್ಮ ಪರಿಸರದಲ್ಲೇ ಇದ್ದ ಒಬ್ಬ ಮಹಾವೀರ, ಆತನು ರಾಮ, ಶ್ರೀಕೃಷ್ಣನಿಗಿಂತಲೂ ಮೀರಿದ ನಮ್ಮ ನಡುವಿನ ಒಬ್ಬ ಸಾಂಸ್ಕೃತಿಕ ವೀರ ಎಂಬುದು ಅರಿವಾಯಿತು.

- **ಕೆ.ಬೊಮ್ಮಲಿಂಗಯ್ಯ,** ಇಂಜಿನಿಯರ್, ಸಿರಾ

## ಜುಂಜಪ್ಪ ಕಥಾವಳಿ - ಒಂದು ಓದು, ಸಹೃದಯ ಸ್ಪಂದನ

ಜಾನಪದ ಸಂಶೋಧನೆ, ಕವಿತೆ, ನಾಟಕ, ವಿಮರ್ಶೆ, ಅಧ್ಯಾಪನ ಇತ್ಯಾದಿ ಹಲವು ಕ್ಷೇತ್ರಗಳಲ್ಲಿ ತಮ್ಮ ಬುದ್ಧಿ, ಮೈಮನಸ್ಸುಗಳನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿರುವ ಜಾನಪದ ವಿದ್ವಾಂಸ ಡಾ. ಯಣ್ಣೆಕಟ್ಟೆ ಚಿಕ್ಕಣ್ಣ ಅಪ್ಪಟ ಗ್ರಾಮೀಣ ಪ್ರತಿಭೆ.

ಗ್ರಾಮೀಣ ಪರಿಸರದ ಗಾಳಿ, ನೀರು, ಬೆಳಕು, ಪರಿಸರ ಎಲ್ಲವನ್ನೂ ಮೈಗೂಡಿಸಿಕೊಂಡು ಜಾನಪದ ಸಂಗ್ರಹ ಮತ್ತು ಅಧ್ಯಯನದಲ್ಲಿ ಗಂಭೀರವಾಗಿ ತೊಡಗಿಕೊಂಡವರು. ಕೇವಲ ತೆವಲಿಗಾಗಿ ಅಥವಾ ಯಾವ, ಯಾವುದೋ ಪ್ರಶಸ್ತಿ, ಪದಕ ಪಡೆಯಲು ಅವರು ಕೆಲಸ ಮಾಡುತ್ತಿಲ್ಲ. ಶಿರಾ ತಾಲ್ಲೂಕನ್ನು ತಮ್ಮ ಜಾನಪದ ಕರ್ಮಭೂಮಿಯನ್ನಾಗಿ ರೂಪಿಸಿಕೊಂಡು

ಕ್ಷೇತ್ರಕಾರ್ಯದ ತಾಜಾತನದಿಂದ, ವಿಶ್ಲೇಷಣೆಯ ಸೂಕ್ಷ್ಮತೆ, ಅಭಿವ್ಯಕ್ತಿಯಲ್ಲಿ ಸರಳತೆ ರೂಪಿಸಿಕೊಂಡ ಅವರು ಬಹುಮುಖ ಪ್ರತಿಭೆ.

ಜುಂಜಪ್ಪ ಕಾವ್ಯಕುರಿತು ಸಾಕಷ್ಟು ಅಧ್ಯಯನ, ಅಧ್ಯಾಪನಗಳು ನಡೆದಿವೆ. ಹಂಪಿ ವಿಶ್ವವಿದ್ಯಾಲಯ ಸೇರಿದಂತೆ ಬೇರೆ, ಬೇರೆ ವಿಶ್ವವಿದ್ಯಾಲಯಗಳು ಗೊಲ್ಲರ ಸಾಂಸ್ಕೃತಿಕ ವೀರ ಜುಂಜಪ್ಪನನ್ನು ಕುರಿತು ಇರುವ ಕಾವ್ಯಗಳನ್ನು ಸಮಗ್ರವಾಗಿ ಹಿಡಿದಿಟ್ಟಿವೆ. ಆದರೆ ಜುಂಜಪ್ಪನನ್ನು ಕುರಿತ ಸಮಗ್ರ ಕಥನ ಈವರೆಗೆ ರೂಪುಗೊಂಡಿಲ್ಲ. ಯಾವತ್ತೂ ಹತ್ತರಲ್ಲಿ ತಾವೂ ಒಬ್ಬರು ಎಂದು ತೋರಿಸಿಕೊಳ್ಳದೆ ವಿಭಿನ್ನ ನೆಲೆಗಟ್ಟಿನಲ್ಲಿ ನಂತುಕೊಳ್ಳುವ ಡಾ. ಯಣ್ಣೆಕಟ್ಟೆ ಚಿಕ್ಕಣ್ಣ ಸಾಂಸ್ಕೃತಿಕ ವೀರ ಜುಂಜಪ್ಪನ ಕಥೆಯನ್ನು ಸರಳ ಮತ್ತು ಸುಲಲಿತವಾಗಿ ಓದುವ ರೀತಿಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಒಂದೊಂದು ಪ್ರದೇಶದಲ್ಲಿ ಒಂದೊಂದು ತೆರನಾಗಿ ಜುಂಜಪ್ಪನ ಕಾವ್ಯ ಕಟ್ಟುವ ಜನರಿದ್ದಾರೆ. ಶಿರಾ ತಾಲ್ಲೂಕಿನಲ್ಲೇ ಜುಂಜಪ್ಪನ ಕಾವ್ಯವನ್ನು ಕಟ್ಟಿಕೊಡುವ ಮೌಖಿಕ ಪರಂಪರೆ ವ್ಯಕ್ತಿಗಳು ಹಲವಾರು ವೈವಿಧ್ಯತೆ ಮತ್ತು ಭಿನ್ನತೆಗಳಿಗೆ ಕಾರಣವಾಗಿದ್ದಾರೆ. ಗುಬ್ಬಿ, ಚಿಕ್ಕನಾಯಕನಹಳ್ಳಿ, ಶಿರಾ, ಪಾವಗಡ, ಹಿರಿಯೂರು, ಹೊಸದುರ್ಗ ತಾಲ್ಲೂಕುಗಳಲ್ಲಿ ಜುಂಜಪ್ಪನ ಕಾವ್ಯ ಹಲವಾರು ಸ್ಥಿತ್ಯಂತರ ರೂಪಗಳನ್ನು ಜಾಗತೀಕ ಸಂದರ್ಭದಲ್ಲಿ ಪಡೆದುಕೊಂಡಿದೆ. ಜುಂಜಪ್ಪನಕಾವ್ಯದ ಬಗ್ಗೆ ಅಸಲೀತನದ ಪ್ರಜ್ಞೆ ಇರುವ ಡಾ. ಯಣ್ಣೆಕಟ್ಟೆ ಚಿಕ್ಕಣ್ಣ ಸಮಗ್ರವಾಗಿ ಕಾವ್ಯ, ಕಥನವನ್ನು ಸಂಗ್ರಹಿಸಿ, ವಿಶ್ಲೇಷಿಸಿ ವೈಜ್ಞಾನಿಕ ಮತ್ತು ವೈಚಾರಿಕ ಸ್ವರೂಪವನ್ನು ನೀಡಿದ್ದಾರೆ. ಹೀಗಾಗಿ ಸಾಂಸ್ಕೃತಿಕ ವೀರ ಜುಂಜಪ್ಪನ ಸಮಗ್ರ ಕಥೆಯನ್ನು ಈ ಪುಸ್ತಕ ಕಟ್ಟಿಕೊಡುತ್ತದೆ.

ಶಿರಾ ತಾಲ್ಲೂಕಿನ ಕಳುವೋರಹಳ್ಳಿಯಲ್ಲಿ ಜನಿಸಿ, ಸಮಾಧಿಯಾದ ಜುಂಜಪ್ಪನನ್ನು ಕುರಿತು ವಿಶ್ಲೇಷಣೆ ಮಾಡುವಾಗ ಯಾವುದೇ ವಿದ್ವಾಂಸ ಶಿರಾ ಅಥವಾ ಸಿರ್ಯಾ ಪ್ರದೇಶಕ್ಕೆ ಮಹತ್ವ ಕೊಡಲೇಬೇಕು. ಸಾಂಸ್ಕೃತಿಕ ವೀರಜುಂಜಪ್ಪನ ಕಥನ ಶಿಲ್ಪ ಶಿಥಿಲಗೊಳ್ಳದಂತೆ ಎಚ್ಚರಿಕೆ ವಹಿಸಿದ್ದಾರೆ. ಜಾನಪದ ವೈವಿಧ್ಯತೆಯ ವಿವಿಧ ಮಗ್ಗುಲುಗಳನ್ನು ಪ್ರಾದೇಶಿಕವಾಗಿ ಸಂಗ್ರಹಿಸುವ ಮತ್ತು ವಿಶ್ಲೇಷಿಸುವ ಕಾರ್ಯದಲ್ಲಿ ಅವರೊಬ್ಬ ಪರಿಣತ ತಜ್ಞ, ಸೂಕ್ಷ್ಮ ಕಲೆಗಳ ಪ್ರಜ್ಞೆ ಇರುವ ಕಲಾಕಾರ.

ಜಾನಪದ ಯಾವತ್ತಿಗೂ ಸಾಯುವುದಿಲ್ಲ. ಆದರೆ ಹಲವಾರು ಸ್ಥಿತ್ಯಂತರ ರೂಪಗಳಲ್ಲಿ ಉಳಿಯುತ್ತಿದೆ. ಹೀಗಾಗಿ ಅಂತಹ ಪ್ರಜ್ಞೆಯೊಂದಿಗೆ ಜಾನಪದ ಸಂಸ್ಕೃತಿಯ ಸೊಲ್ಲು ಏನೆಂಬುದನ್ನು ಕರಗತ ಮಾಡಿಕೊಂಡಿರುವ ಅವರು, ಗಡಿನಾಡ ಜಾನಪದ ಸಂಪರ್ಕ ಕೇಂದ್ರದ ಮೂಲಕ ತಾವೊಬ್ಬ ವಿದ್ವಾಂಸ, ಜಾನಪದ ತಜ್ಞ ಎಂಬ ಇತ್ಯಾದಿ ಲೇಬಲ್‌ಗಳ ಮೂಲಕ ಗರ್ವಿಯಾಗದೆ ಎಲೆಮರೆಯ ಕಾಯಿಯಾಗಿದ್ದಾರೆ. ಸರಳ, ಸಜ್ಜನಿಕೆ,

ನಿಗರ್ವಿಯಾಗಿರುವ ಅವರು, ಜುಂಜಪ್ಪನ ಕಥೆಯನ್ನು ನಿರ್ಭಾವುಕವಾಗಿ ಕಟ್ಟಿಕೊಟ್ಟಿದ್ದಾರೆ. ಈ ಕಥೆಯಲ್ಲಿ ಜನಪದ ಭಾಷಾ ಸ್ವರೂಪ, ಜೀವನ ಸಂಗೀತದ ಸೆಲೆ, ದೈವ, ಧರ್ಮಗಳನ್ನು ಕುರಿತ ನಂಬಿಕೆಗಳ ವೈವಿಧ್ಯತೆ, ಮೂಢನಂಬಿಕೆ ಮತ್ತು ವೈಜ್ಞಾನಿಕ ನಿಲುವುಗಳ ದ್ವಂದ್ವ ಇತ್ಯಾದಿಗಳನ್ನು ಏಕಾಗ್ರತೆ ಮತ್ತು ಅನ್ವೇಷಣಾ ಪ್ರಜ್ಞೆಯಿಂದ ಆಧುನಿಕ ಮನೋಭಾವಕ್ಕೆ ಸರಳವಾಗಿ ತಲುಪುವಂತೆ ನಿರೂಪಿಸಿದ್ದಾರೆ.

ಅಜ್ಞಾತ ಕಲಾವಿದರನ್ನು ಬೆಳಕಿಗೆ ತರುವ, ಜಾನಪದ ಕಾವ್ಯಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಹಿನ್ನೆಲೆಯಲ್ಲಿ ಯಾವುದೇ ಗಡಿಬಿಡಿ, ದ್ವಂದ್ವ ನಿಲುವು ತಾಳದೆ ವೈಜ್ಞಾನಿಕ ದೃಷ್ಟಿಕೋನದೊಂದಿಗೆ ಜುಂಜಪ್ಪನ ಹುಟ್ಟು, ಸಾವು, ಬದುಕು ಕುರಿತಂತೆ ಬಹಳ ಎಚ್ಚರಿಕೆಯಿಂದ ಕಥೆಯನ್ನು ಕಟ್ಟಿಕೊಟ್ಟಿದ್ದಾರೆ. ಅವರಿಗಿರುವ ಜಾನಪದ ನಿಷ್ಠೆ, ಗ್ರಾಮಸಂಸ್ಕೃತಿ ಬಗ್ಗೆ ಇರುವ ಅಭಿಮಾನ, ಪ್ರಾಮಾಣಿಕ ಅನಿಸಿಕೆಗಳನ್ನು ಅಭಿವ್ಯಕ್ತಿಸಿದ್ದಾರೆ. ಈ ಕಥೆಯ ಎಲ್ಲಾ ಜಾನಪದ ಅಂಶಗಳ ಬಗೆಗೆ ವೈವಿಧ್ಯಮಯ ಮತ್ತು ಅನ್ಯಶಿಸ್ತೀಯ ಜ್ಞಾನದ ಕೀಲಿಕೈಗಳನ್ನು ಹೇಗೆ ಬಳಸಿಕೊಂಡಿದ್ದಾರೆ ಎಂಬುದಕ್ಕೆ ಹಲವಾರುಕಾವ್ಯಗಳ ಸಾಲುಗಳು ಉದಾಹರಣೆಯಾಗಿವೆ.

ಜಾನಪದರಿಗೆ ಹೆಸರು, ಊರು, ಜಾತಿ, ಧರ್ಮ ಇತ್ಯಾದಿ ಮುಖ್ಯವಲ್ಲ. ಸಮುದಾಯದ ಹಿತವೇ ಮುಖ್ಯ. ಹೀಗಾಗಿ ಜನಪದ ದೃಷ್ಟಿಯಲ್ಲಿ ಉತ್ಸಾಹವೇ ಬದುಕು. ಜೀವನೋತ್ಸವ ಸಂಭ್ರಮವೇ ಸಮಸ್ತ ಬದುಕಿನ ಆಶಯ. ಇಂತಹ ಸಂಸ್ಕೃತಿಯ ಪ್ರಜ್ಞೆ ಇರುವ ಅವರು, ಒಂದು ವಿಶ್ವವಿದ್ಯಾಲಯ ಮಾಡಬೇಕಾದಂತಹ ಕಾರ್ಯವನ್ನು ಸಾಂಸ್ಕೃತಿಕ ವೀರಜುಂಜಪ್ಪನ ಕಥೆಯ ಮೂಲಕ ನಿರ್ವಹಿಸಿದ್ದಾರೆ.

**ಜಿ. ಇಂದ್ರಕುಮಾರ್,** ಲೇಖಕ ಮತ್ತು ಪತ್ರಕರ್ತ